ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : 1996-97ನೇ ಸಾಲಿಗೆ ಸಂಬಂಧಿಸಿದ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ ಕ್ಷೇತ್ರ) : ಮಾನ್ಯ ಸಭಾಧ್ಯಕ್ಷರೆ, ಈ ಸರ್ಕಾರ ರಾಜ್ಯ ಮಟ್ಟದ ಒಂದು ಗಂಭೀರವಾದಂತಹ ಸಮಸ್ಯೆಯು ಬಂದರೆ, ಸಂಖ್ಯೆಯ ಬಲದ ಮೇಲೆ ಕೆಲವರನ್ನೇ ವಿರೋಧ ಪಕ್ಷವೆಂದು ತೀರ್ಮಾನವನ್ನು ಮಾಡುತ್ತಿರಾ ಹೇಗೇ? ಏತಕ್ಕೆಂದರೆ ಇಲ್ಲಿರತಕ್ಕಂತಹ ಬೇರೆ ಬೇರೆ ಪಕ್ಷಗಳನ್ನು ಸಹ ವಿರೋಧ ಪಕ್ಷವೆಂದು ತಾವು ತೀರ್ಮಾನವನ್ನು ಮಾಡಿದ್ದೀರಿ. ಈ ರಾಜ್ಯದ ಹಿತ ಬಂದಾಗ ಎಲ್ಲಾ ವಿರೋಧ ಪಕ್ಷಗಳು ಆಡಳಿತ ಪಕ್ಷಕ್ಕೆ ಸೇರಿದಂತಹ ಸಂಬಂಧದ ವಿಷಯದಲ್ಲಿ, ಆಲಮಟ್ಟಿಯ ವಿಷಯದಲ್ಲಿ ಸರ್ಕಾರ ಈ ತರಹ ಶಿಷ್ಟಚಾರ ಇಲ್ಲದ ಕಾರ್ಯಕ್ರಮ, ನಾವು ಸಭೆಗೆ ಬರುತ್ತಿದ್ದೆವೋ ಬಿಡುತ್ತಿದ್ದೆವೋ ಅದು ಎರಡನೇ ವಿಷಯ. ಬೇರೆ ವಿರೋಧ ಪಕ್ಷಗಳನ್ನು ಏನು ಎಂದು ಸರ್ಕಾರದವರು ತಿಳಿದಿದ್ದಾರೆ? ಅದು ಸದನದಲ್ಲಿ ತೀರ್ಮಾನವಾಗಬೇಕು. ಸಂಖ್ಯೆ ಬಲದಿಂದ ವಿರೋಧ ಪಕ್ಷಗಳು, ಬೇರೆಯವು ವಿರೋಧ ಪಕ್ಷ ಅಲ್ಲ ಎಂದರೆ, ಅವರ ಯಾವುದೇ ಸಭೆಗಳಿಗೆ ನಾವುಗಳು ಹೋಗದೇ ಇರತಕ್ಕಂಥದ್ದನ್ನು ನಾವು ಬೆಳೆಸಿಕೊಳ್ಳುವುದು ಒಳ್ಳೆಯದು. ಅದರ ಬಗ್ಗೆ ಸರ್ಕಾರ ಉತ್ತರವನ್ನು ಕೊಡಬೇಕು.

ಶ್ರೀ ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಅವರು ಊಟವನ್ನು ಮಾಡಿದರೆ, ನಾವು ಊಟವನ್ನು ಮಾಡಿದ ಹಾಗೆ ಆಗುತ್ತದೆಯೇ? ಇವರೆಲ್ಲರೂ ಊಟವನ್ನು ಮಾಡಲಿ, ನಾವು ಸಹ ಊಟವನ್ನು ಮಾಡಿದ್ದೇವೆಂದು ತಿಳಿದುಕೊಳ್ಳುತ್ತೇವೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ.ಎಸ್‌ಯ ಪುಟ್ಟಣ್ಣಯ್ಯನವರೇ, ಒಂದು ಮಾತು ಹೇಳುತ್ತೇನೆ. ಪ್ರಧಾನಿಗಳು ಕರೆದಿರತಕ್ಕಂತಹ ಸಭೆಯಲ್ಲಿ, ನಿಮ್ಮನ್ನು ಕರೆದುಕೊಂಡು ಹೋಗಬಾರದು ಎನ್ನುವ ದುರುದ್ದೇಶ ಖಂಡಿತವಾಗಿಯೂ ನಮಗೆ ಇಲ್ಲ. ನಾವು ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ನಿಮ್ಮೆಲ್ಲರನ್ನು ಕರೆದು ಕೂರಿಸಿ ಕೊಂಡೇ ಚರ್ಚೆಯನ್ನು ಮಾಡಿಯೇ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದರೆ ಈ ಒಂದು ಸಭೆಯನ್ನು ತುರ್ತಾಗಿ ಕರೆದಿರತಕ್ಕೂತಹ ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರನ್ನು ಮತ್ತು ಶ್ರೀಮಾನ್ ಎಂ. ಮಲ್ಲಿಕಾರ್ಜುನ ಖರ್ಗೆಯವರನ್ನು ಇದಕ್ಕೆ ಸಂಬಂಧಪಟ್ಟ ಹಾಗೆ ಬನ್ನಿ ಎಂದು ಆಹ್ವಾನಿಸಿದ್ದಾರೆ. ನಿಮ್ಮನ್ನು ಕರೆದಿಲ್ಲ ಎಂದರೆ ನಿಮ್ಮನ್ನು ಬಿಟ್ಟು ಏನಾದರೂ ಮಾಡಬೇಕು ಎಂದು ಏನೂ ಇಲ್ಲ, ದಯವಿಟ್ಟು ತಾವು ಅನ್ಯಥಾ ಭಾವಿಸಬೇಡಿ ಎನ್ನುವಂತಹ ಮಾತನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಯನ್ನು ಪಡುತ್ತೇನೆ.

10.50 ಎ.ಎಂ

(ಆ) 1996-97ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಈಗಾಗಲೇ 19 ಬೇಡಿಕೆಗಳಿಗೆ ಹೇಗೋ, ಏನೋ ಅನುಮತಿಯನ್ನು ಪಡೆದುಕೊಂಡಿದ್ದಾಯಿತು. ಉಳಿದಿರತಕ್ಕ ಸುಮಾರು 41 ಬೇಡಿಕೆಗಳನ್ನು ಮತಕ್ಕೆ ಹಾಕತಕ್ಕದ್ದು, ಆ ಬಗ್ಗೆ ಚರ್ಚೆ ಪ್ರಾರಂಭ ಆಗಬೇಕಾಗಿದೆ ನಾನು ಅನಿವಾರ್ಯವಾಗಿ ಈ ಬೇಡಿಕೆಗಳಿಗೆ ಅನುಮೋದನೆಯನ್ನು

ಕೊಡುವುದಕ್ಕೆ ಸಾಧ್ಯವಿಲ್ಲ ಎಂಬ ಹಿನ್ನೆಲೆಯಲ್ಲಿ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ, ನನ್ನ ಮಾತನ್ನು ಪ್ರಾರಂಭಮಾಡುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ 19 ಬೇಡಿಕೆಗಳ ಸಂಬಂಧಪಟ್ಟಂತೆ ಉತ್ತರವನ್ನು ಕೊಡುವ ಸಂದರ್ಭದಲ್ಲಿ ಒಂದು ರೀತಿಯಲ್ಲಿ ದೊಡ್ಡ ಆದರ್ಶದ, ಸಂದೇಶದ ಮಾತುಗಳನ್ನಾಡಿದರು. ರಾಜ್ಯದ ಒಬ್ಬ ಮುಖ್ಯಮಂತ್ರಿಯಾಗಿ, ಬಹುದಿನಗಳ ಅವರ ಕೊನೆಯ ಆಸೆ ಈಡೇರಿದಂಥ ಕಾಲದಲ್ಲಿ ನಾಡಿನ ಜನರು ತಾವು ಬದುಕುವುದಕ್ಕೆ ಬೇಕಾದ ಕನಿಷ್ಠ ಸೌಲಭ್ಯಗಳು ಸಿಕ್ಕದೆ ಕಣ್ಣೀರಿನಲ್ಲಿ ಕೈ ತೊಳೆಯುವ ಈ ಸಂದರ್ಭದಲ್ಲಿ, ಬಹಳಷ್ಟು ಹೋರಾಟ ಮಾಡಿದಂಥ ಮಾನ್ಯ ಮುಖ್ಯ ಮಂತ್ರಿಗಳು ಏನು ಉತ್ತರವನ್ನು ಕೊಡಬಹುದೆಂದು ನಾನು ಬಹಳಷ್ಟು ಕಾತುರದಿಂದ ಕಾದು ಕುಳಿತಿದ್ದೆ. ಈ ಹಿಂದೆ ಬಹಳಷ್ಟು ಜನರು ಸಾಕಷ್ಟು ಉಪದೇಶವನ್ನು ಮಾಡಿ ಹೋಗಿದ್ದಾರೆ. ಉಪದೇಶ ಮಾಡುವುದು ಸುಲಭ. ಆದರೆ ತಪ್ಪುಗಳನ್ನು ಕೊರತೆಗಳನ್ನು ಅವರು ಹೇಳಿದಂಥ ಅವ್ಯವಸ್ಥೆಯನ್ನು ಸರಿಪಡಿಸುವಂಥ ದೊಡ್ಡ ಅವಕಾಶ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಿಕ್ಕಿದಂಥ ಕಾಲದಲ್ಲಿ ಉಪದೇಶವನ್ನು ಕೊಡಬಾರದು. ಇಂಥ ಸಮಸ್ಯೆಗಳಿವೆ, ಈ ರೀತಿಯ ಪರಿಹಾರವನ್ನು ಅದಕ್ಕೆ ಮಾಡಬೇಕೆಂದು ಹೊರಟಿದ್ದೇನೆ, ಇದಕ್ಕೆ ಪ್ರತಿ ಪಕ್ಷಗಳ ಸಹಕಾರ ಬೇಕೆಂದು ಕೇಳಿದ್ದಿದ್ದರೆ, ನಾವು ಸಹಕಾರ ನೀಡುತ್ತಿದ್ದೆವು. ಅವರು ಏನು ಹೇಳಿದ್ದಾರೆಂದರೆ "ರಾಜಕೀಯ ವ್ಯವಸ್ಥೆ ಕೆಟ್ಟಿರುವ ಪರಿಣಾಮ ಆಡಳಿತ ವ್ಯವಸ್ಥೆಯ ಮೇಲೂ ಆಗಿದೆ. ಈ ಸದನವೇ ದೇವರೆಂದು ತಿಳಿದುಕೊಂಡಿದ್ದೇವೆ, ಜಾತಿ, ಹಣ ಬಲವಿಲ್ಲದೆ ಜನ ಪ್ರಾತಿನಿಧ್ಯ ಕಾಯಿದೆಯನ್ನು ಚಾಚೂ ತಪ್ಪದೆ ಪಾಲಿಸಿ ಆರಿಸಿ ಬಂದಿದ್ದೇವೆಂದು ಯಾವ ಸದಸ್ಯರಾದರೂ ಎದೆ ತಟ್ಟಿ ಹೇಳಿ ನೋಡುವಾ" ಎಂದು ಮುಖ್ಯಮಂತ್ರಿಗಳಾದ ಮಾನ್ಯ ಜೆ.ಹೆಚ್. ಪಟೇಲರು ಬುಧವಾರ ವಿಧಾನ ಸಭೆಯಲ್ಲಿ ಹೇಳಿದರು. ಎಂದು ಬಂದಿದೆ. ನಾನಾದರೂ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಹಣದ ಬಲದಿಂದ, ಹೆಂಡದ ಬಲದಿಂದ, ತೋಳ್ಬಲದಿಂದ, ಅಧಿಕಾರದ ಬಲದಿಂದ ನೀವು ಚುನಾವಣೆಯಲ್ಲಿ ಗೆದ್ದಿರಬಹುದು. ಆದರೆ ಪ್ರತಿಪಕ್ಷದಲ್ಲಿ ಕುಳಿತಿರುವಂಥ ನಾವುಗಳು ಇವತ್ತೂ ಕೂಡ ....

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ...

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡುವುದಕ್ಕೆ ಇವರು ಬಿಡುವುದಿಲ್ಲ. ನಾನು ಈಲ್ಡ್ ಆಗಿಲ್ಲ. ನಾನು ಈಲ್ಡ್ ಆಗಿಲ್ಲ....

ಶ್ರೀ ಎಂ.ಸಿ. ನಾಣಯ್ಯ : ಹಣದ ಬಲದಿಂದ, ಹೆಂಡದ ಬಲದಿಂದ, ತೋಳ್ಬಲದಿಂದ ಎಂದು ನೀವು ಹೇಳುವುದಾದರೆ, ಇದು ಮತದಾರರಿಗೆ ಅಪಮಾನ ಮಾಡಿದಂತಾಗುತ್ತದೆ. ಹೆಂಡದ ಬಲ, ತೋಳ್ಬಲದ, ತೋಳ್ಬಲ, ಎಂದು ಹೇಳುವುದಾದರೆ ಅದು ನಿಮ್ಮ ಹತ್ತಿರ ಇರುವಂಥಾದ್ದು. ಅದು ನಮ್ಮ ಹತ್ತಿರ ಅಲ್ಲ, ನಿಮ್ಮ ತೋಳ್ಬಲ ರಾಷ್ಟ್ರದ ಉದ್ದಗಲಕ್ಕೂ ಬೆಂಕಿಯನ್ನು ಹಚ್ಚಿರತಕ್ಕದ್ದು. ನಿಮಗೆ ಆ ತೋಳ್ಬಲ ಇರುವಂಥಾದ್ದು. ನಮಗೆ ಅದು ಇಲ್ಲ. ತೋಳ್ಬಲ ಎಲ್ಲವೂ ನಿಮ್ಮದೇ, ನಮ್ಮದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇವರು ದಾರಿತಪ್ಪಿ ಹೋಗುತ್ತಿದ್ದಾರೆ

ಶ್ರೀ ವೈ. ರಾಮಕೃಷ್ಣ : ಪಾರ್ಲಿಮೆಂಟರಿ ಮಂತ್ರಿಗಳ ಬಾಯಿಯಿಂದ ಬರುವಂಥ ಮಾತುಗಳು ಇವಲ್ಲ.

ಶ್ರೀ ಎಂ.ಸಿ. ನಾಣಯ್ಯ : ಹಾಗಾದರೆ ನೀವು ಮಾತ್ರ ಆ ಮಾತನ್ನು ಬಳಸಬಹುದೇ? ನೀವು ಬಳಸಿದ ಭಾಷೆ ಯಾವುದು? ಅವವು ಬಳಸಿದ ಭಾಷೆ ಯಾವುದು? ತೋಳ್ಬಲ, ಹೆಂಡದ ಬಲ ಹಣದ ಬಲ, ಅಂದರೆ ನಿಮ್ಮದೂ ಕೂಡ ಅದೇ ಬಲ. ತೋಳ್ಬಲ ತೋರಿಸಿಕೊಂಡು ಇಡೀ ರಾಷ್ಟ್ರದ ಉದ್ದಗಲಕ್ಕೂ ಬೆಂಕಿ ಹಚ್ಚಿದಿರಲ್ಲಾ, ಅದು ಯಾವ ಬಲ? ಬೆಂಕಿ ಹಚ್ಚಿದ ಬಲ ಯಾವುದು ಹೇಳಿ?

ಶ್ರೀ ವೈ. ರಾಮಕೃಷ್ಣ : ಇದ್ದದ್ದು ಇದ್ದಹಾಗೆ ಹೇಳಿದರೆ ಎದ್ದುಬಂದು ಎದೆಗೆ ಒದ್ದಹಾಗೆ ಆಗುತ್ತಂತೆ. ಇದು ಅವರಿಗೆ ಸಿಟ್ಟು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ನನ್ನ ಭಾಷಣದ ಧಾಟಿಯೂ ಕೂಡ ಬೇರೆ ರೀತಿಯಲ್ಲಿರುತ್ತದೆ. ಬಹಳ ಸಾರಿ ನೀವು ಮೇಲೆ ಏಳಬೇಕಾಗುತ್ತದೆ, ಬಹಳ ಸಾರಿ ನೀವು ನೀರನ್ನು ಕುಡಿಯಬೇಕಾಗುತ್ತದೆ. ಅದನ್ನು ಹೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ನೀವು ನೀರನ್ನು ನಮಗೆ ಕುಡಿಸುವಾಗ ಆ ನೀರನ್ನು ನಿಮಗೇ ಕುಡಿಸುವ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೋಡೋಣ. ತಡೆಯಿರಿ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಪಾರ್ಲಿಮೆಂಟರಿ ಸಚಿವರಿಗೆ ಕುಸ್ತಿ ಮಾಡುವ ಮನೋಭಾವ ಬಂದಿದೆಯೇ ಹೊರತು, ಬೇರೆ ಮನೋಭಾವ ಬರಲಿಲ್ಲವಲ್ಲಾ. ಇದಕ್ಕೆ ನೀವು ಏನಾದರೂ ಒಂದು ಸುಂಕ ಹಾಕಬೇಕಲ್ಲಾ. ಏಕೆಂದರೆ ಮೀಸೆ ತಿರುಗಿಸುವುದು, ಕೈಯನ್ನು ಹೀಗೆ ಅನ್ನುವುದು, ಎದ್ದೇಳುವುದು, ಹೀಗೆ. ಎಲ್ಲವೂ ಕುಸ್ತಿಮಾಡುವ ಮನೋಭಾವವೇ. ರಾಜೀ ಮಾಡುವ ಮನೋಭಾವವನ್ನು ಇವರು ಯಾವಾಗ ಕಲಿಯುತ್ತಾರೆ? ಇದನ್ನು ಅವರು ಕಲಿಯಬೇಕು. ಪಾರ್ಲಿಮೆಂಟ್ ಸಚಿವರಾದವರು ಎಲ್ಲಾ ಸದಸ್ಯರನ್ನೂ ಒಂದೇ ಸಮದೃಷ್ಟಿಯಿಂದ ಕಾಣಬೇಕು. ಇವರು ನಡೆದುಕೊಳ್ಳುತ್ತಿರುವ ನಡತೆ ನಿಜವಾಗಿಯೂ ಅವರ ಸ್ಥಾನಕ್ಕೆ ಗೌರವ ತರುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ನಾನು ನನ್ನ ಸ್ಥಾನದ ಗೌರವವನ್ನು ಕಾಪಾಡಿಕೊಳ್ಳುತ್ತೇನೆ, ನೀವು ನಿಮ್ಮ ಸ್ಥಾನದ ಗೌರವವನ್ನು ಕಾಪಾಡಿಕೊಳ್ಳಿ. ನಿಮ್ಮಿಂದ ನಾನು ಪಾಠವನ್ನು ಕಲಿಯಬೇಕಾಗಿಲ್ಲ. ನಿಮ್ಮ ಇತಿಹಾಸ ಗೊತ್ತಿದೆ. ನೀವು ಏನೂ ಹೇಳಬೇಡಿ. ಮಾನ್ಯ ಅಧ್ಯಕ್ಷರೆ, ದಯವಿಟ್ಟು ಕ್ಷಮಿಸಿ. ಕೆಲವುಸಾರಿ ಈ ರೀತಿ ವ್ಯಂಗ್ಯ, ಹಾಸ್ಯ ಬಂದುಬಿಡುತ್ತದೆ. ಅಧ್ಯಕ್ಷರನ್ನು ಡಿಸ್ಟರ್ಬ ಮಾಡಬೇಕೆಂದು ನಮಗೆ ಇಷ್ಟವಿಲ್ಲ.

ಅಧ್ಯಕ್ಷರು : ಆದಷ್ಟೂ ನನಗೆ ಸ್ವಲ್ಪ ರಿಲೀಫ್ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರೇ, ನಾನು ಯಾವ ಹಿನ್ನೆಲೆಯಲ್ಲಿ ಹೇಳಿದೆ? ಮಾನ್ಯ ಮುಖ್ಯ ಮಂತ್ರಿಗಳ ಉತ್ತರವನ್ನು ಚಾಚೂ ತಪ್ಪದಂತೆ ಕುಳಿತು ಕೇಳಿದ್ದೇನೆ. ಆ ಸಂದರ್ಭದಲ್ಲಿ ಒಂದೇ ಒಂದು ಶಬ್ದವನ್ನೂ ನಾನು ಮಾತನಾಡಲಿಲ್ಲ. ಅವರು ಏನು ಹೇಳಿದ್ದಾರೆ, "ರಾಜಕೀಯ ವ್ಯವಸ್ಥೆ ಕೆಟ್ಟಿರುವ ಪರಿಣಾಮ ಆಡಳಿತ ವ್ಯವಸ್ಥೆಯ ಮೇಲೂ ಆಗಿದೆ, ಈ ಸದನವೇ ದೇವರು ಎಂದು ತಿಳಿದುಕೊಂಡಿದ್ದೇವೆ, ಜಾತಿ, ಹಣಬಲವಿಲ್ಲದೆ, ಜನ ಪ್ರಾತಿನಿಧ್ಯ ಕಾಯಿದೆಯನ್ನು ಚಾಚೂ ತಪ್ಪದೆ ಪಾಲಿಸಿ ಆರಿಸಿ ಬಂದಿದ್ದೇವೆಂದು ಯಾವ ಸದಸ್ಯರಾದರೂ ಎದೆ ತಟ್ಟಿ ಹೇಳಿ ನೋಡುವಾ ಎಂದು ಮುಖ್ಯಮಂತ್ರಿಗಳು ಪ್ರಶ್ನೆ ಮಾಡಿದರು. ಎಂದು ಪತ್ರಿಕೆಗಳಲ್ಲಿ ಬಂದಿದೆ ಆದ್ದರಿಂದ ನಾನು ಹೇಳುತ್ತಿದ್ದೇನೆ, ಅದು

ನಿಮಗೆ ಅನ್ವಯವಾಗಬಹುದು, ನಾನು ಅದನ್ನು ಅಡ್ಡಿಮಾಡುವುದಿಲ್ಲ, ಅದನ್ನು ಪ್ರಶ್ನೆ ಮಾಡುವುದಿಲ್ಲ, ನಮ್ಮನ್ನು ಆ ಪ್ರಶ್ನೆ ಕೇಳಬೇಡಿ. ಆ ಹಿನ್ನೆಲೆಯಲ್ಲಿ ಬೆಳೆದವರು ನಾವಲ್ಲ ಎಂಬುದಕ್ಕೆ ನಾನು ಇದನ್ನು ಹೇಳಿದ್ದೇನೆ. ಅಲ್ಲ ಎಂದು ಹೇಳುವುದಾದರೆ ಇದನ್ನು ರಿಜೆಕ್ಟ್ ಮಾಡಿ. ನೀವು ಉತ್ತರ ಕೊಡಿ. ಇದರಲ್ಲಿ ಏನು ಕಷ್ಟ ಇದೆ?

ಅಧ್ಯಕ್ಷರು : ನಾನು ಯಾರ ಪರವಾಗಿ ಆಗಲಿ ವಾದ ಮಾಡುತ್ತಿಲ್ಲ. ಈ ಚರ್ಚೆಯಾವ ಮಟ್ಟದಲ್ಲಿತ್ತು ಎಂದರೆ ರಾಜಕೀಯ ವ್ಯವಸ್ಥೆ ಭ್ರಷ್ಠಗೊಂಡಿದೆ, ಈಗ ಎಲ್ಲ ರಾಜಕೀಯ ಪಕ್ಷಗಳವರೂ ಡೊನೇಷನ್ಸ್‌ನ್ನು ತೆಗೆದುಕೊಳ್ಳುತ್ತಾರೆ, ಯಾವ ರಾಜಕೀಯ ಪಕ್ಷಗಳಲ್ಲೂ ಅಕೌಂಟ್ಸ್‌ನ್ನು ಮೇನ್‌ಟೇನ್ ಮಾಡುವುದಿಲ್ಲ. ಅಕೌಂಟ್ಸ್‌ನ್ನು ಆಡಿಟ್ ಮಾಡಿಸುವುದಿಲ್ಲ, ರೆಗ್ಯುಲರ್ ಆಗಿ ಪಾರ್ಟಿ ಎಲೆಕ್ಷನ್ಸ್‌ನ್ನು ಮಾಡಿ, ಪಾರ್ಟಿ ಮೀಟಿಂಗ್ಸ್‌ನಲೀ ಕಲೆಕ್ಟ್ ಮಾಡಿದಂಥ ಫಂಡ್‌ನ್ನು ಒಂದುಕಡೆ ಹಾಕಿ, 2-3 ತಿಂಗಳಿಗೊಮ್ಮೆ ಇಂತಿಷ್ಟು ಹಣ ಖರ್ಚಾಗಿದೆ ಎಂದು ಖಜಾಂಚಿ ಆದವರು ಬಂದು ತೋರಿಸುವ ವ್ಯವಸ್ಥೆ ಇಲ್ಲ. ನಾನು ಪ್ರಾಮಾಣಿಕವಾಗಿರಬಹುದು, ನನ್ನ ಪಕ್ಷದವರು ನನಗೆ 2-3 ಲಕ್ಷ ರೂ.ಗಳನ್ನು ಕೊಡುತ್ತಾರೆ, ಚುನಾವಣೆ ಸಂದರ್ಭದಲ್ಲಿ ಇದನ್ನು ಎಲ್ಲಿಂದ ತಂದಿದ್ದೀರಿ ಎಂದು ಕೇಳುವುದಿಲ್ಲ, ಬೇರೆ ಸಂದರ್ಭದಲ್ಲಿ ಅವರೇನಾದರೂ ತಪ್ಪು ಮಾಡಿದಾಗ ಅದನ್ನು ಕೇಳುವಂಥ ಹಕ್ಕನ್ನು ನಾವು ಕಳೆದುಕೊಳ್ಳುತ್ತೇವೆ. ಪರೋಕ್ಷವಾದ ಭ್ರಷ್ಟಾಚಾರಕ್ಕೆ ನಾವೆಲ್ಲರೂ ಒಳಗಾಗಿರುತ್ತೇವೆ ಎನ್ನತಕ್ಕ ಮಾತನ್ನು ಬಹುಶಃ ಅವರು ಆಡಿದ್ದಾರೆಂದು ಕಾಣುತ್ತದೆ. ಬಹುಶಃ ಆ ಅರ್ಥ ಇರಬಹುದೆಂದು ಕಾಣಿಸುತ್ತದೆ. ನನಗೆ ಅನಿಸಿದ್ದು ಹೀಗೆ.

ಶ್ರೀ ಆರ್. ನಾರಾಯಣ್ : ಚುನಾವಣೆ ವಿಚಾರದಲ್ಲಿ ಹೇಳುವುದಾದರೆ ಎಲ್ಲರೂ ಒಂದೇ ದೋಣಿಯಲ್ಲಿ ಸಾಗುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ : ಅದು ಸರಿ. ಎಲ್ಲರೂ ಒಂದೇ ದೋಣಿಯಲ್ಲಿ ಸಾಗುತ್ತಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಅದನ್ನು ಒಪ್ಪುವುದಿಲ್ಲ.

ಶ್ರೀ ಆರ್. ನಾರಾಯಣ್ : ಹಾಗಾದರೆ ಆಗಬಹುದು.

ಶ್ರೀ ಬಿ.ಎ. ಮೊಹಿಯುದ್ದೀನ್ : ಹಣ ತೆಗೆದುಕೊಳ್ಳುವುದು ಮಾಮೂಲಾಗಿ ಬಂದಿದೆ. ಆದರೆ ಬುದ್ಧಿವಂತ ಜನರು ಪಕ್ಷದ ಹೆಸರಿನಲ್ಲಿ ಹಣವನ್ನು ತೆಗೆದುಕೊಂಡು ಜೇಬಿಗೆ ಸೇರಿಸಿಕೊಳ್ಳುತ್ತಾರಲ್ಲಾ ಅದರ ಬಗ್ಗೆ ಏನು ಹೇಳುತ್ತೀರಿ

ಅಧ್ಯಕ್ಷರು : ಒಂದು ಮಾತನ್ನು ಹೇಳುವುದಾದರೆ, ಸಾಮಾನ್ಯವಾಗಿ ಕೆಲವು ಮುಗ್ಧರು ನಮ್ಮ ಹತ್ತಿರ ಯಾವುದಾದರೂ ಕೆಲಸಕ್ಕೆ ಬರುತ್ತಾರೆ, ಅವರಿಗೆ ಗೊತ್ತಿರುವುದಿಲ್ಲ. ನಮಗೆ ಪಿ.ಎಸ್.ಸಿ.ಯಲ್ಲಿ ಅಪಾಯಿಂಟ್‌ಮೆಂಟನ್ನು ಕೊಡಿಸಿ ಎಂದು ಕೇಳುತ್ತಾರೆ, ಟ್ರಾನ್ಸ್‌ಫರ್ ಮಾಡಿಸಿಕೊಡಿ ಎಂದು ಬರುತ್ತಾರೆ, ಹೀಗೆ ಬೇರೆ ಬೇರೆಕೆಲಸಕ್ಕೆ ಬರುತ್ತಾರೆ. ಅವರು ಏನು ಹೇಳುತ್ತಾರೆ ಗೊತ್ತೇ? ನಿಮ್ಮ ಪಾರ್ಟಿ ಫಂಡ್ಗೆ ಏನಾದರೂ ಕೊಡುತ್ತೇವೆ ಎಂದು ಹೇಳುತ್ತಾರೆ. ಹಣ ತೆಗೆದುಕೊಳ್ಳುವುದಕ್ಕೆ ಅನ್ವರ್ಥ ನಾವು ಇರುವುದೇ ಪಾರ್ಟಿ ಫಂಡ್ ಎಂದು. ಈಗ ಅದು ಬೇಡ. ತಾವು ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯ ಮಂತ್ರಿಯವರು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಾ ಈ ರೀತಿ ಎಲ್ಲ ಕಡೆಯಲ್ಲೂ

ಹೊಲಸು ನಾರುತ್ತಿದೆ, ರಾಜಕೀಯ ವ್ಯವಸ್ಥೆ ಕುಲಗೆಟ್ಟಿದೆ. ನಾನು ಮುಖ್ಯಮಂತ್ರಿಯಾದ ಮೇಲೆ ಈ ಕಾರ್ಯಕ್ರಮಗಳನ್ನೆಲ್ಲಾ ಹಾಕಿಕೊಂಡಿದ್ದೇನೆಂದು ಹೇಳಿದರು. ಯಾವ ಮುಖ್ಯಮಂತ್ರಿಗಳು ಈ ರಾಜ್ಯದಲ್ಲಿ ಇಂಥ ಅವ್ಯವಸ್ಥೆ ಇದೆ ಎಂದು ಒಪ್ಪಿಕೊಂಡಿದ್ದಾರೋ ಅವರೇ, ಇದನ್ನು ಸರಿಪಡಿಸುವುದಕ್ಕೆ, ನನ್ನ ಕಾಲದಲ್ಲಿ ಎಷ್ಟು ದಿವಸ ಅಧಿಕಾರದಲ್ಲಿರುತ್ತೇನೆಂದು ಹೇಳುವುದು ಮುಖ್ಯವಲ್ಲ, ಇದು ಸುಧಾರಣೆ ಆಗಬೇಕು. ಅದಕ್ಕಾಗಿ ನಾನು ಈ ಕಾರ್ಯಕ್ರಮಗಳನ್ನು ರೂಪಿಸಿದ್ದೇನೆ. ಇದಕ್ಕೆ ಪ್ರತಿಪಕ್ಷಗಳು ತಮ್ಮ ಸಹಕಾರವನ್ನು ಕೊಡಿ ಎಂದು ಕೇಳಿದ್ದಿದ್ದರೆ, ನಾನು ಈ ಸಭೆಯಲ್ಲಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೆ. ಅವರು ಅದನ್ನು ಮಾಡಲಿಲ್ಲ. ಅದನ್ನು ಮಾಡುವಂಥ ಸಂಕಲ್ಪ, ರಾಜಕೀಯ ಇಚ್ಛಾ ಶಕ್ತಿ ಅವರಲ್ಲಿ ನನಗೆ ಕಾಣಲಿಲ್ಲ. 1983ರಿಂದ ಇಲ್ಲಿ ನಾನು ಕೂತು ಮುಖ್ಯಮಂತ್ರಿಗಳ ಉತ್ತರಗಳನ್ನು ಕೇಳುತ್ತಿದ್ದೇನೆ. ಕೆಲವು ಪ್ರಮುಖ ವಿಷಯಗಳಿಗೆ ತಾವು ಕ್ಲಾರಿಫಿಕೇಷನ್ನನ್ನು ಕೊಡಲಿಲ್ಲವೆಂದು ನಾನು ಕೇಳಿದ್ದಕ್ಕೆ ಅವರು ಏನು ಹೇಳಿದರು? ಗುಮಾಸ್ತನಂತೆ ಒಂದೊಂದಕ್ಕೂ ನಾನು ಉತ್ತರ ಕೊಡಲೇ ಎಂದು ಹೇಳಿದರು. ಆದ್ದರಿಂದ, ಇವತ್ತು ನನ್ನ ಭಾಷಣದ ಧಾಟಿಯನ್ನು ಸ್ವಲ್ಪ ಬದಲಾವಣೆ ಮಾಡಿಕೊಂಡು ಮಾತನಾಡಬೇಕೆಂದಿದ್ದೇನೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರಕ್ಕೆ ಬಂದಮೇಲೆ, ಅಧಿಕಾರದ ಚುಕ್ಕಾಣಿಯನ್ನು ಹಿಡಿದ ಮೇಲೆರಾಜಕಾರಣದಲ್ಲಿ ಯಾವ ಹೊಲಸು ನಾರುತ್ತಿದೆ, ನಾವು ನಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎನ್ನತಕ್ಕ ಭಾವನೆ ಈ ರಾಜ್ಯದ ಮುಖ್ಯ ಮಂತ್ರಿಗಳಿಗೆ ಬಂದಮೇಲೆ ಅವರ ಆಡಳಿತ ವೈಖರಿಯಲ್ಲಿ ಬದಲಾವಣೆಯಾದರೂ ಕಾಣಬೇಕಲ್ಲಾ. ಇವರು ಅಧಿಕಾರಕ್ಕೆ ಬಂದು ಒಂದೂಮುಕ್ಕಾಲು ವರ್ಷವಾಯಿತು. ಮುಖ್ಯ ಮಂತ್ರಿಗಳ ಬದಲಾವಣೆ ಆದತಕ್ಷಣ ಬೇರೆ ಸರ್ಕಾರ ಏನೂ ಬಂದಿಲ್ಲ. ನಿಮ್ಮ ಸರ್ಕಾರವೇ ಇದೆಯಲ್ಲವೇ? ಆಡಳಿತದಲ್ಲಿ ನೀವು ಏನು ಬದಲಾವಣೆಯನ್ನು ತಂದಿರಿ?

ಏನು ಆಡಳಿತದಲ್ಲಿ ಬದಲಾವಣೆ ತಂದಿರಿ? ಮಾನ್ಯ ನಂಜೇಗೌಡರು ಆಡಳಿತ ಸುಧಾರಣೆ ಬಗ್ಗೆ ಪ್ರಮುಖವಾದ ಸಲಹೆ ಕೊಟ್ಟಾಗ ಏನು ಸರಿ ಮಾಡುವಂಥ ಪ್ರಯತ್ನ ಮಾಡಿದಿರಿ? ಮುಂದೆ ಬರುವಂಥ ದಿನಗಳಲ್ಲಿ ಇಂಥದ್ದು ಮಾಡುತ್ತೇವೆಂದು ದಿಟ್ಟವಾದ ನಿಲುವು ಯಾವುದನ್ನು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಪ್ರಕಟ ಮಾಡಿದರು? ಈ ವೇದಾಂತ ಉಪದೇಶ ಯಾರಿಗೆ ಬೇಕಾಗಿದೆ ಸ್ವಾಮಿ? ವೇದಾಂತ, ಉಪದೇಶ ಮಾಡುವುದಕ್ಕಲ್ಲ ಸ್ವಾಮಿ ಇಲ್ಲಿರುವಂಥದ್ದು, ಅಧಿಕಾರ ಸರಿಯಾಗಿ ಉಪಯೋಗ ಮಾಡಿಕೊಂಡು ಮಾತು ಕಡಿಮೆ ಮಾಡಿ ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ ಸ್ವಚ್ಛ ದಕ್ಷ ಆಡಳಿತ ಕೊಡುತ್ತೇವೆಂದು ಪ್ರಕಟ ಮಾಡಿದ್ದರೆ ಆ ರೀತಿ ನಡೆದುಕೊಂಡಿದ್ದರೆ ಒಪ್ಪಬಹುದಿತ್ತು.

ಆದರೆ ಆ ರೀತಿ ನಡೆದುಕೊಂಡಿಲ್ಲ. ಆ ರೀತಿ ನಡೆಸುವುದನ್ನು ಕಳೆದ ಒಂದೂಮುಕ್ಕಾಲು ವರ್ಷದಲ್ಲಿ ನೋಡಿದ್ದರೆ ನಾನು ಶಭಾಶ್ಗಿರಿ ಕೊಡುತ್ತಿದ್ದೆ. ಅದು ಆಗಲಿಲ್ಲ. ಅದು ನಮಗೆ ದುಃಖ. ಅದಕ್ಕಾಗಿ ನಾನು ಹೇಳುವುದು, ಅನೇಕ ಸರ್ಕಾರಗಳು ಬಂದವು ಹೋದವು, ಅನೇಕರು ಮುಖ್ಯ-ಮಂತ್ರಿಗಳು ಆಗಿಹೋದರು, ಅನೇಕರು ಮಂತ್ರಿಗಳು ಆಗಿಹೋದರು. ಅನೇಕ ಪಕ್ಷಗಳು ಹುಟ್ಟಿದವು, ಸತ್ತವು, ಬೆಳೆದವು. ನಾಡಿನ ಜನರ ಆಶೀರ್ವಾದದಿಂದ ನಾವೆಲ್ಲಾ ನಮ್ಮ ಸ್ಥಾನಮಾನಗಳನ್ನು ಗಟ್ಟಿ ಮಾಡಿಕೊಂಡೆವು. ನಮ್ಮ ಜೀವನದಲ್ಲಿ ಬದಲಾವಣೆಯಾಯಿತು. ನಾವು ನೆಮ್ಮದಿಯಿಂದ ಊಟ ಮಾಡುವ ವ್ಯವಸ್ಥೆ ಆಯಿತು. ಆಸ್ತಿಪಾಸ್ತಿಗಳು ಆಯಿತು, ಸ್ಥಾನಮಾನಗಳು ಆಯಿತು. ಚುನಾಯಿತ ಪ್ರತಿನಿಧಿಗಳಿಗೆ ಗೌರವ ಸಿಕ್ಕಿತು. ನಮ್ಮನ್ನು

ಆಯ್ಕೆ ಮಾಡಿದ ಜನರ ಪರಿಸ್ಥಿತಿ ಏನಾಗಿದೆ? ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಏನು ಸ್ವಾಮಿ? ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಏನು? ಭಿಕ್ಷೆ ಬೇಡುವ ಧಾರುಣ ಸ್ಥಿತಿ ಏಕೆ? ಭಗವಂತ ಏನು ಕಡಿಮೆ ಮಾಡಿದ್ದಾನೆ ಸ್ವಾಮಿ? ಸಂಪನ್ಮೂಲಗಳ ಕೊರತೆ ಬೇರೆ ರಾಜ್ಯಕ್ಕೆ ಹೋಲಿಸಿದರೆ ಕಡಿಮೆ ಇದೆಯೇ? ಈ ರಾಜ್ಯದಲ್ಲಿ ಚಿನ್ನದ ಆದಿರಿಗೆ ಕೊರತೆ ಇದೆಯೇ? ಕಬ್ಬಿಣದ ಅದಿರಿಗೆ ಕೊರತೆ ಇದೆಯೇ? ಶ್ರೀಗಂಧದ ನಾಡು ಎಂದು ಹೇಳುತ್ತೀರಿ ತಾನೇ; ರೇಷ್ಮೆ ಬೀಡು ಎಂದು ಎಂದು ಹೇಳುತ್ತೀರಿ ತಾನೇ? ಭಗವಂತ ಎಲ್ಲವನ್ನು ಕೊಟ್ಟಿದ್ದರೂ ಸಹ ಅದನ್ನು ಉಪಯೋಗ ಮಾಡಿಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡುವಂಥ ಪ್ರಾಮಾಣಿಕ ಕೈಗಳು ಆಡಳಿತ ಪಕ್ಷದಲ್ಲಿ ಬರಲಿಲ್ಲ. ಇದರ ದುಷ್ಪರಿಣಾಮ ಈ ನಾಡಿನ ಜನ ಇವತ್ತು ಅನುಭವಿಸುವಂಥ ಒಂದು ಧಾರುಣ ಸ್ಥಿತಿ ನಾವು ಕಾಣುತ್ತಿದ್ದೇವೆ.

ನಾನು ಏನು ಹೇಳುವುದಕ್ಕೆ ಹೊರಟೆ ಸ್ವಾಮಿ? ನಾವು ಯಾರ ಪರವಾಗಿ ಕೆಲಸಮಾಡುತ್ತಿದ್ದೇವೆ? ನಮ್ಮ ಮಾಲೀಕರು ಯಾರು? ನಾಲ್ಕೂ ಮುಕ್ಕಾಲು ಕೋಟಿ ಜನರೇ? ಅಲ್ಲ, ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಓಟು ಕೊಟ್ಟ ಹೆಂಡದ ದೊರೆಗಳೇ? ಗ್ರಾನೈಟ್ ಕಲ್ಲನ್ನು ಲೂಟಿ ಮಾಡಿ ಅವರು ಕೊಟ್ಟ ಕೋಟ್ಯಾಂತರ ರೂಪಾಯಿಗಳಿಂದ ಚುನಾವಣೆಯಲ್ಲಿ ಗೆಲ್ಲುವಂಥ ತಂತ್ರ ಮಾಡಿಕೊಂಡು ಅವರ ಬೆಂಬಲಕ್ಕೆ ನಿಂತವರು ನಾವು, ಅವರಿಗೆ ಅನುಕೂಲ ಮಾಡಿಕೊಡುವಂಥದ್ದು. ಹೆಂಡದ ದೊರೆಗಳು, ನೆಲಗಳ್ಳರು, ಕಾಡುಗಳ್ಳರು ಮತ್ತು ಸರ್ಕಾರದ ಖಜಾನೆ ಲೂಟಿ ಮಾಡುವುದಕ್ಕೆ ನಿಗಮ ಸಹಕಾರ ಕೊಟ್ಟ ಭ್ರಷ್ಟ ಅಧಿಕಾರಿಗಳು.

ಇಂಥವರ ಜೊತೆ ಶಾಮೀಲಾಗಿ ಆಡಳಿತ ವ್ಯವಸ್ಥೆ ಕುಲಗೆಟ್ಟುಹೋಗಿರುವ ಪರಿಸ್ಥಿತಿಯನ್ನು ಇವತ್ತು ಕರ್ನಾಟಕ ರಾಜ್ಯದಲ್ಲಿ ನಾವು ಕಾಣುತ್ತಿದ್ದೇವೆ. ಏತಕ್ಕೆ ಸ್ವಾಮಿ ನಿಮಗೆ ಸಿಓಡಿ? ಏತಕ್ಕೆ ನಿಮಗೆ ಸಿಬಿಐ ತನಿಖೆ? ಏತಕ್ಕೆ ಲೋಕಾಯುಕ್ತ ಸಿ.ಎಂ.ಕಂಟ್ರೋಲ್‌ನಲ್ಲಿ ಒಂದು ಜಾಗೃತ ದಳ ಏತಕ್ಕೆ? ಏನು ಮಾಡಿದಿರಿ ಸ್ವಾಮಿ, ಹೇಳಿ. ಅವತ್ತಿನಿಂದ ಇವತ್ತಿನವರೆಗೆ ಇಂತಿಂಥ ಸಾಧನೆ ಮಾಡಿದ್ದೇವೆಂದು ಹೇಳುತ್ತೀರೋ? ವರ್ಗಗಳ ಆಧಾರದ ಮೇಲೆ ನಾವು ಇಷ್ಟು ಜನರನ್ನು ಬಂಧಿಸಿದ್ದೇವೆ, ಇಷ್ಟು ಜನರನ್ನು ಜೈಲಿಗೆ ಕಳುಹಿಸಿದ್ದೇವೆ, ಇಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುತ್ತೀರಾ? ಅದರ ಬದಲು ಏನು ಮಾಡಿದ್ದೀರಿ ಅಂದರೆ ಲೂಟಿ ಮಾಡಿದವರ, ಭ್ರಷ್ಟಾಚಾರ ಮಾಡಿದವರ ವಿರುದ್ಧ ಅವರು ಕೊಟ್ಟಂಥ ವರದಿಗಳು ಏನಿವೆ, ಅನೇಕ ಸಮಿತಿಯವರು, ಸಿಓಡಿ, ಸಿಬಿಐ, ಲೋಕಾಯುಕ್ತ ಇವರೆಲ್ಲಾ ಏನು ಕೊಟ್ಟರು, ಆ ವರದಿಗಳನ್ನು ಮುಚ್ಚಿಡುವಂಥದ್ದು. ಆಡಳಿತ ವ್ಯವಸ್ಥೆ ಮುಖ್ಯ. ಎಲ್ಲಾ ಇಲಾಖೆಯ ಅಂಕಿಅಂಶ ತೆಗೆದುಕೊಂಡು ನಾನೇನು ಗುಮಾಸ್ತಗಿರಿ ಮಾಡುತ್ತೇನೋ ಎಂದು ಕೇಳಿದರು. ಪ್ರಧಾನಿಗಳು, ಎಂದು ಮುಖ್ಯಮಂತ್ರಿಗಳು ಆ ಮಾತು ಹೇಳಿದ್ದರಿಂದ..

ಶ್ರೀ ಸಿದ್ಧರಾಮಯ್ಯ : ಅದಕ್ಕೆ ಉತ್ತರ ಕೊಟ್ಟಾಯಿತಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉತ್ತರ ಕೊಟ್ಟಿಲ್ಲ. ಯಾವ ಒಂದು ಶಬ್ದಕ್ಕೂ ಉತ್ತರ ಕೊಡಲಿಲ್ಲ. ಇಂಥವರಿಂದ ವಿರೋಧ ಪಕ್ಷಕ್ಕೆ ಉಪದೇಶದ ಮಾತು. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಹೇಳಿದರು, ಶಾಸಕರು ಆಡಳಿತದಲ್ಲಿ ಹಠ ಮಾಡುತ್ತಾರೆ ಎಂದು. ಯಾರು ಮಾಡುತ್ತಿದ್ದಾರೆ. ಪಟ್ಟಿಮಾಡಿ, ಬಹಿರಂಗ ಮಾಡಿ, ಸಾರಾಸಗಟಾಗಿ ಏತಕ್ಕೆ ಹೇಳುತ್ತೀರಿ? ಯಡಿಯೂರಪ್ಪನವರೆ, ಪ್ರತಿಪಕ್ಷದ ನಾಯಕರಾಗಿ ಈ ಕೆಲಸ ಮಾಡುತ್ತಿದ್ದೀರಿ. ಇದು ಸರಿಯಲ್ಲ ಅಂದರೆ ರಹಸ್ಯವಾಗಿ ನಮ್ಮ ರಾಜ್ಯ

ಘಟಕದ ಅಧ್ಯಕ್ಷರನ್ನು, ಅಖಿಲ ಭಾರತದ ಅಧ್ಯಕ್ಷರನ್ನು ಕರೆಯಿರಿ, ಅಥವಾ ಕರೆದು ಹೇಳಿ ನಮಗೆ, ನೀವು ಪ್ರತಿಪಕ್ಷದ ನಾಯಕರಾಗಿ ಈ ಕೆಲಸ ಮಾಡುತ್ತಿದ್ದೀರಿ. ಶಾಸಕರಾಗಿ ಈ ಕೆಲಸಮಾಡುತ್ತಿದ್ದೀರಿ, ನಾನು ಆಡಳಿತ ನಡೆಸುವುದು ಕಷ್ಟವಾಗಿದೆ ಎಂದು ಹೇಳಿ. ತಪ್ಪು ಮಾಡಿದ್ದರೆ ನಾವು ತಿದ್ದಿಕೊಳ್ಳುತ್ತೇವೆ. ಯಾವುದನ್ನೂ ಮಾಡದೆ ಯಾರ ಮೇಲೋ ಆರೋಪ ಮಾಡಿಕೊಂಡು, ಯಾವುದೇ ಒಂದು ಆಡಳಿತದಲ್ಲಿ ಬದಲಾವಣೆ ತರದೆ ಇವತ್ತು ಈ ರೀತಿ ಆಡಳಿತ ನಡೆಸುತ್ತಿರುವಂಥ ಒಂದು ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಪ್ರಾಮಾಣಿಕವಾಗಿ ಕೆಲಸ ಮಾಡಿದ ಶ್ರೀ ಮದನಗೋಪಾಲರಿಗೆ ಏನಾಯಿತು? ಶ್ರೀ ರವೀಂದ್ರ ಅವರಿಗೆ ಏನಾಯಿತೆಂಬುದು ಗೊತ್ತಿದೆ. ಯಾರು ಬಹಿರಂಗವಾಗಿ ತಪ್ಪು ಎಂದು ಹೇಳಿದರೋ, ನ್ಯಾಯವಾಗಿ ಆಡಳಿತ ನಡೆಸುವ ಪ್ರಯತ್ನ ಮಾಡಿದರೋ ಅಂಥ ಆ ಅಧಿಕಾರಿಗಳ ಎತ್ತಂಗಡಿ ಆಯಿತು. ಯಾರು ಹಿಂದೆಮುಂದೆ ಹೋದರೋ ಅವರಿಗೆ ಸಹಕಾರ ಕೊಡುವುದು ಪ್ರಾರಂಭವಾಯಿತು ನಿಮ್ಮ ಆಡಳಿತ ಅವಧಿಯಲ್ಲಿ.

ಶ್ರೀ ಹೆಚ್.ಡಿ. ರೇವಣ್ಣ : ಕೇಂದ್ರದಿಂದ ಅಧಿಕಾರಿಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೇಡ, ಅವರನ್ನು ಸೇರಿಸುವುದಿಲ್ಲವೆಂದು ಹೇಳಿ, ಅವರಿಗೆ ಅವಕಾಶ ಕೊಡುವುದಿಲ್ಲ, ನಾವು ಬದಲಾವಣೆ ಮಾಡುತ್ತೇವೆಂದು ಹೇಳಿ. ನಾವು ನಿಮಗೆ ಸಹಕಾರ ಕೊಡುತ್ತೇವೆ. ಇವತ್ತು ನೆಲಗಳ್ಳರಿಗೆ, ಕಾಡುಗಳ್ಳರಿಗೆ ಸಹಕಾರ ಕೊಟ್ಟುಕೊಂಡು ಒಂದು ರೀತಿ ರಾಜ್ಯದ ಜನತೆಗೆ ಜನಜೀವನಕ್ಕೆ ನಿಮ್ಮ ಸರ್ಕಾರದ ಆಡಳಿತ ವೈಖರಿಯಿಂದ ಗ್ರಹಣ ಹಿಡಿದಂತಾಗಿದೆ. ವಿದ್ಯುತ್ತು, ನೀರು, ಅಭಿವೃದ್ಧಿ ಕಾರ್ಯಗಳಿಗೆ ಬರ ಬಂದಿದೆ. ನಮ್ಮ ಸರ್ಕಾರಿ ಪಾರದರ್ಶಕ ಸರ್ಕಾರ ಅಂದರೆ, ಎಲ್ಲವೂ ಗುಟ್ಟು ಸನ್ಯಾನ್ಯ ಅಧ್ಯಕ್ಷರೆ. ಯಾವುದೇ ವಿವರ ಸಿಗುವುದಿಲ್ಲ. ಆದ ಘಟನೆಗಳ ಬಗ್ಗೆ, ಕೊಟ್ಟ ವರದಿಗಳ ಬಗ್ಗೆ ಪತ್ರ ಬರೆದರೆ ಸಂಬಂಧಪಟ್ಟ ಅಧಿಕಾರಿ ಮಂತ್ರಿಗಳಿಗೆ ಕಳುಹಿಸಿಕೊಡುತ್ತಾನೆ. ಎಂಥ ಪ್ರಜಾತಂತ್ರ ವ್ಯವಸ್ಥೆ? ಕ್ರೀಡಾಂಗಣದ ಬಗ್ಗೆ ನಾನು ಪ್ರಸ್ತಾಪ ಮಾಡಿದಾಗ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಯಿತು. ಏನಾಯಿತು ಸ್ವಾಮಿ? ನಿನ್ನೆ ಡಿಮ್ಯಾಂಡ್‌ನಲ್ಲಿತ್ತು, ನಾನು ಮಾತನಾಡಲಿಲ್ಲ. ಇವತ್ತು ನಿಮ್ಮ ಆಡಳಿತ ಶೈಲಿ ಪಕ್ಷಪಾತದಿಂದ ಕೂಡಿದ್ದು,

ಶಾಸಕರ ವ್ಯಾಪ್ತಿಗೆ ಕಡಿವಾಣ ಹಾಕಿ ನೂರಕ್ಕೂ ಹೆಚ್ಚು ಜನ ವಿರೋಧ ಪಕ್ಷದಲ್ಲಿರುವಂತವರು ಎಲ್ಲಿ ಬೆಳೆಯುತ್ತಾರೆಂದು ಹೆಜ್ಜೆ ಹೆಜ್ಜೆಗೆ ಅವರನ್ನು ತುಳಿಯುವಂಥ ಒಂದು ಪ್ರಯತ್ನ ಮಾಡಿ ಇವತ್ತು ಈ ರೀತಿ ಆಡಳಿತ ನಡೆಸುತ್ತಿದ್ದೀರಿ. ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆ, ಅಧಿಕಾರ ವಿಕೇಂದ್ರಿಕರಣದ ಬಗ್ಗೆ ವಿಶ್ವಾಸ ಇರುವ ಜನ ನೀವು. ನೀವೇ ತಾನೆ ಹೇಳಿದುದ್ದು. ಇಡೀ ದೇಶದಲ್ಲಿ ಗ್ರಾಮ ಪಂಚಾಯತಿ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಮಾಡಿದ್ದು ನಾವು ಎಂದು ಹೇಳಿದವರು ನೀವು ತಾನೆ? ಎಲ್ಲಿ ಗ್ರಾಮೀಣ ಪ್ರದೇಶದ ಹರಿಜನಗಿರಿಜನ ಹೆಣ್ಣು ಮಕ್ಕಳು ಆಯ್ಕೆಯಾದರೂ ಗ್ರಾಮ ಪಂಚಾಯಿತಿಯಲ್ಲಿ ಆ ಸದಸ್ಯರಿಗೆ, ಯಾವ ಲೋಕಲ್ ಬಾಡಿ ಎಲೆಕ್ಷನ್‌ನಿಂದ ಎಂ.ಎಲ್.ಸಿ. ಆಗುವಂಥ ಸಂದರ್ಭದಲ್ಲಿ ಆಯ್ಕೆ ಮಾಡುವಂಥ ಅಧಿಕಾರ, ಆ ಪ್ರತಿನಿಧಿಗಳಿಗೆ ಓಟು ಹಾಕುವಂಥ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ದೆಹಲಿಗೆ ಕೇಂದ್ರ ಸರ್ಕಾರಕ್ಕೆ ರೆಕಮಂಡ್ ಮಾಡಿ ಕಳುಹಿಸಿದವರು ನೀವೇ ತಾನೇ? ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತೀರಿ? ಅವರ ಬೆಂಬಲದಿಂದ ಎಂ.ಎಲ್.ಎ. ಆಗುತ್ತೀರಿ, ಎಂ.ಪಿ. ಆಗುತ್ತೀರಿ. ಅದೇ ಪಕ್ಷಾತೀತವಾಗಿ ಆಯ್ಕೆಯಾಗಿ ಬಂದಿರುವಂಥ ಚುನಾಯಿತ ಪ್ರತಿನಿಧಿಗಳು ಓಟು ಮಾಡದಂತೆ ನೀವೇ

ಷಡ್ಂತರ ನಡೆಸುತ್ತೀರಿ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುತ್ತೀರಿ. ಸ್ವಾಮಿ, ಇವತ್ತು ಒಂದು ಮಾತು ಹೇಳುತ್ತೇನೆ, ಆಗಸ್ಟ್ 14ಕ್ಕೆ ವಿಧಾನ ಮಂಡಲದ ಅಧಿವೇಶನ ಮುಗಿಯುತ್ತದೆ. ನನಗನ್ನಿಸುತ್ತದೆ ಕಳೆದ ಎರಡು ತಿಂಗಳಿಂದ ಇವರ ಕಚ್ಚಾಟ ಬಡಿದಾಟ, ಆಡಳಿತ ವೈಖರಿ ನೋಡಿದ ಮೇಲೆ ಬಹುಶಃ ಮತ್ತೊಮ್ಮೆ ಅಧಿವೇಶನ ಸೇರುತ್ತದೆಯೋ ಇಲ್ಲವೋ ಗೊತ್ತಿಲ್ಲ, ಸೇರಿದರೆ ಆಡಳಿತ ವ್ಯವಸ್ಥೆ ಮುಗಿದು ಹೋಗಿರುತ್ತದೆ.

ಶ್ರೀ ಎನ್. ರಾಜಣ್ಣ : ಎಲ್ಲಿ ನೋಡಿದ್ದಾರೆ ಇವರು ಏನೋ ಹೇಳಬೇಕು ಹೇಳುತ್ತಿರುತ್ತಾರೆ. ಅಷ್ಟೆ.

ಅಧ್ಯಕ್ಷರು : ನೀವು ಏನೋ ಮಾಡುವುದಕ್ಕೆ ಹೋಗಿ ಅವರೆಲ್ಲಾ ಯುನೈಟ್ ಆಗಿದ್ದಾರಲ್ಲಾ, ಸ್ವಲ್ಪ ನಿಮ್ಮ ಸ್ಟ್ಯಾಂಡ್ ನೀವು ಚೇಂಜ್ ಮಾಡಿಕೊಳ್ಳಿ.

ಶ್ರೀ ಜಿ.ಬಿ. ಶಿವಕುಮಾರ್ :ಹೆಚ್ಚಾಗಿ ನಿಮ್ಮಲ್ಲಿ ಒಗ್ಗಟ್ಟು ಬರಲಿ ಎಂದು ಬಹಳ ಸಹಕಾರಿಯಾಗುತ್ತಿದ್ದಾರೆ.

ಶ್ರೀ ಎನ್. ರಾಜಣ್ಣ : ಅವರು ಕನಸು ಕಾಣುತ್ತಿದ್ದಾರೆ ಸ್ವಾಮಿ. ನಾವು 5 ವರ್ಷ ಗ್ಯಾರಂಟಿ ಇದ್ದೇ ಇರುತ್ತೇವೆ.

ಅಧ್ಯಕ್ಷರು : ಏನು ನೀವಷ್ಟೇ ಜನ ಮಾತನಾಡುತ್ತೀರಿ. ಲಕ್ಷ್ಮಯ್ಯನವರು ಮಾತನಾಡಲೇ ಇಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಅಧ್ಯಕ್ಷರೇ, ದಯವಿಟ್ಟು ತಾವು ಅರ್ಧ ಗಂಟೆ ಅಥವಾ ಒಂದು ಗಂಟೆ ಲಕ್ಷ್ಮಯ್ಯನವರಿಗೆ ಕೊಡಬೇಕು.

ಅಧ್ಯಕ್ಷರು : ಮುಂದೆ ಏನಾದರೂ ಸಂದರ್ಭ ಬಂದರೆ ನೀವೆಲ್ಲಾ ಸುಮ್ಮನಿರಬೇಕು. ಲಕ್ಷ್ಮಯ್ಯನವರು ಮಾತನಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಅಂದರೆ ನಿಮಗೆ ಅನುಕೂಲ ಮಾಡಿಕೊಡುತ್ತಿದ್ದೇನೆ.

ಶ್ರೀ ಎನ್.ಎಮ್ . ನಬಿ : ಮಾನ್ಯ ವಿರೋಧಪಕ್ಷದ ನಾಯಕರು ಈ ಸಭೆಯಲ್ಲಿ ರೂಲಿಂಗ್ ಪಾರ್ಟಿಯವರು ಸರಿಯಾಗಿದ್ದಾರೋ ಇಲ್ಲವೋ ಎಂದು 15-20 ನಿಮಿಷಕ್ಕೆ ಒಂದು ಸಾರಿ ಟೆಸ್ಟ್ ಮಾಡುತ್ತಾರೆ ಎಂದು ಕಾಣಿಸುತ್ತದೆ. ಆ ತರಹ ಏನೂ ಇಲ್ಲ, ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ಇನ್ನು ಮುಂದೆ ಕೂಡ ಸದನ ಬಹಳ ಚೆನ್ನಾಗಿ ನಡೆಯುತ್ತದೆ. ಇನ್ನೂ ಮೂರೂವರೆ ವರ್ಷಗಳು ಸರ್ಕಾರ ನಡೆಯುತ್ತದೆ ಎಂದು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತೇನೆ.

ಶ್ರೀ ಎನ್. ರಾಜಣ್ಣ : ಅಧ್ಯಕ್ಷರೆ, ಅವರು ತಿಳಿದುಕೊಳ್ಳಬೇಕು ನಾವು ಕುರ್ಚಿಗೋಸ್ಕರ ಬಂದಿಲ್ಲ. ಜನಸೇವೆ ಮನೋಭಾವ ಇಟ್ಟುಕೊಂಡು ವಿಧಾನಸೌಧದಲ್ಲಿ ಕುಳಿತು ಕೊಳ್ಳುವುದಕ್ಕೆ ಬಂದಿದ್ದೇವೆ.

ಶ್ರೀ ಬಿ.ಎ. ಮೊಹಿದ್ದೀನ್ : ಯಡಿಯೂರಪ್ಪನವರಿಗೂ ಯಾವ ರೀತಿ ತೊಂದರೆಯೂ ಆಗುವುದಿಲ್ಲ. ನೀವು ಇರುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೇನೆಂದರೆ ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಿಮ್ಮಲ್ಲಿ ಒಗ್ಗಟ್ಟಿದ್ದರೆ, ಅನೇಕ ಪಕ್ಷಗಳು ಒಂದಾಗಿ ಸನ್ಮಾನ್ಯ ದೇವೇಗೌಡರು

ಪ್ರಧಾಮಿಯಾಗಿದ್ದರೆ ಅದಕ್ಕೆ ಬಿ.ಜೆ.ಪಿ. ಕಾರಣ. ನಮ್ಮ ನಾಯಕರ ಫೋಟೋ ತೆಗೆದುಕೊಂಡು ನೀವು ಪೂಜೆ ಮಾಡಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾಕೆ ಎಂದರೆ? ಹೇಳುತ್ತೇನೆ ಕೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ ಅಂದರೆ ಅಲ್ಲ ಎಂದು ಹೇಳಿ. ನನ್ನದೇನಿಲ್ಲ. ಇವತ್ತು ನಾನು ಏತಕ್ಕೆ ಇದನ್ನು ಮಾತನಾಡುತ್ತಿದ್ದೇನೆ? ನನ್ನ ಅಂತರಾಳದಲ್ಲಿರುವಂಥ ಅಪೇಕ್ಷೆ ಮತ್ತೆ ಮತ್ತೆ ಚುನಾವಣೆ ಮಾಡುವಂಥ ಸ್ಥಿತಿಯಲ್ಲಿ ಈ ದೇಶದ ಜನ, ರಾಜ್ಯದ ಜನ ಇಲ್ಲ. ಬಿ.ಜೆ.ಪಿ. ಕಾರಣಕ್ಕಾಗಿಯಾದರೂ ನೀವೆಲ್ಲಾ ಒಂದಾಗಿ ಆಡಳಿತ ಪೂರ್ತಿ ಮಾಡಿ. ಆದರೂ ನೀವು ಮಾಡುವುದಿಲ್ಲ. ನಾನೇನು ಮಾಡಲಿ? ಇಲ್ಲ. ನಾವು ಬೆಂಕಿಗೆ ಹಾರಿಕೊಳ್ಳುತ್ತೇವೆ ನಾವು ಅಧಿಕಾರ ಕಳೆದುಕೊಳ್ಳುತ್ತೇವೆ ಬಡಿದಾಡಿ ಅಂದರೆ ನಾನೇನೂ ಮಾಡುವುದಕ್ಕೆ ಬರುವುದಿಲ್ಲ. ನಾನು ಹೇಳುತ್ತಿರುವಂಥ ಹಿನ್ನೆಲೆ ಈ ಭಾವನೆ ಜನರಲ್ಲಿ ಮೂಡಿದೆ. ಲೋಕಸಭಾ ಚುನಾವಣೆ ಯಾವಾಗ ಬಂದುಬಿಡುತ್ತದೋ ಅಂತ ಸುದ್ದಿ ಇದೆ. ಅದು ಬಂದಮೇಲೆ ವಿಧಾನಸಭಾ ಚುನಾವಣೆ ಒಟ್ಟಿಗೆ ಆಗಿಬಿಡುತ್ತದೇನೋ ಎನ್ನುವ ಭಯ ಜನರನ್ನು ಕಾಡುತ್ತಾ ಇದೆ. ನಿಮಗಿಲ್ಲ. ನಮಗಿಲ್ಲ.

ಇವತ್ತು ಪತ್ರಿಕೆಯ ಮುಖಪುಟದಲ್ಲಿ ನೋಡಿ. ಯಾರು ಈ ದೇಶದ ಪ್ರಧಾನಿ ಮಾಡುವುದಕ್ಕೆ ಮೂಲ ಕಾರಣಕರ್ತರೋ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಇನ್ನೂ ಅಧಿಕಾರಕ್ಕೆ ಬಂದು ಎರಡು ತಿಂಗಳಾಯಿತು. ನೀವು ಹೇಳಬಹುದು ಯಡಿಯೂರಪ್ಪನವರೇ ನೀವು 11 ದಿನ ಇದ್ದಿರಿ ಎಂದು ಸತ್ಯ. ಅದು ಹೇಳುವುದರ ಅಗತ್ಯ ಇಲ್ಲ. ನಾನು ಹೇಳುವುದು 9 ತಿಂಗಳಾಗುತ್ತದೋ ಇಲ್ಲವೋ, ಗಂಡು ಹುಟ್ಟುತ್ತದೋ, ಹೆಣ್ಣು ಹುಟ್ಟುತ್ತದೋ, ಅಬಾರ್ಷನ್ ಆಗುತ್ತದೋ ಎಂದು ನಾನು ಕಾಯುತ್ತಾ ಇದ್ದರೆ ಮೂರೇ ತಿಂಗಳಿಗೆ ನಮ್ಮ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ನಮ್ಮ ಬೆಂಬಲವನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಈ ಪರಿಸ್ಥಿತ ಇರುವುದರಿಂದ ಮುಂದೆ ಬರುವ ಚುನಾವಣೆಯಲ್ಲಿ ನಾವೆಲ್ಲಾ ಬರುತ್ತೇವೋ ಇಲ್ಲವೋ ಬದಲಾವಣೆಗಳಾಗುತ್ತದೋ ಆ ರೀತಿಯ ಒಂದು ರಾಜಕೀಯ ಗೊಂದಲವನ್ನು ಇವತ್ತು ನಿರ್ಮಾಣ ಮಾಡಿಕೊಂಡಿದ್ದೀರಿ ಬಡಿದಾಡಿ ಕಚ್ಚಾಡಿ. ಅಭಿವೃದ್ಧಿ ಕಾರ್ಯದ ಕಡೆ ತಾವು ಚಿಂತೆ ಮಾಡುತ್ತಿಲ್ಲ ಎನ್ನುವ ಹಿನ್ನೆಲೆಯಲ್ಲಿ ಹೇಳಿದೆನೇ ಹೊರತು, ತಾವು ಒಗ್ಗಟ್ಟಾಗಿದ್ದರೆ ನನಗೇನು ಸ್ವಾಮಿ ದುಃಖ? ಖಂಡಿತ ನನಗೇನೂ ಇಲ್ಲ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ರಾಜಕೀಯ ಪರಿವರ್ತನೆ ಬಹಳ ಆಗಿದೆ ಸಾರ್. ಈಗ ಮುಂದೆ ಬರುವ ಕಾಲ ಏನಿದೆ ಅದು ಬಹುಜನ ಸಮಾಜವಾದಿ ಕಾಲ ಇದೆ ಸಾರ್. ಕಾಂಗ್ರೆಸ್, ಜನತಾದಪರೆಲ್ಲಾ ಕಾನ್ಶಿರಾಂ ಹಿಂದೆ ಬಿದ್ದಿದ್ದಾರೆ ಸಾರ್.

ಒಬ್ಬ ಮಾನ್ಯ ಸದಸ್ಯರು : ಅವರು ಹೇಳುವುದು ಬಹುಜನರ ಕಾಲ ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಜನರ ಹಿತದೃಷ್ಟಿಯಿಂದ ಒಂದು ಮಾತುಹೇಳುತ್ತೇನೆ. ಎಷ್ಟು ದಿವಸ ಇರುತ್ತೀರೋ ಇರಿ,

ಅದು ತಮಗೆ ಬಿಟ್ಟಿದ್ದು. ನಿಮ್ಮಲ್ಲಿ ಎಷ್ಟು ದಿನ ಒಗ್ಗಟ್ಟಿರುತ್ತದೋ ಅಷ್ಟು ದಿನ ಇರಿ. ನನ್ನದೇನೂ ಅಭ್ಯಂತರ ಇಲ್ಲ. ನಾವು ಇರುವುದು 38 ಜನ. ಅಲ್ಲಿಗೆ ಬರುವುದಕ್ಕಾಗುವುದಿಲ್ಲ ಎಂದು ನನಗೂ ಗೊತ್ತು. ಪ್ರಶ್ನೆ ಅದಲ್ಲ. ಪ್ರಶ್ನೆ ಏನೆಂದರೆ 44 ಜನರ ಸಚಿವ ಸಂಪುಟ ಆದಮೇಲೂ ಸಹ ಬಡಿದಾಟ. ಸ್ವಾಮಿ, ಲೋಕಸಭಾ ಚುನಾವಣೆಗೆ ಮುಂಚೆ ಮೂರು ತಿಂಗಳು ನಂತರ ಮೂರು ತಿಂಗಳು ರಾಜಕೀಯ ಗೊಂದಲ. ಅದರಲ್ಲೇ ತಲ್ಲೀನರಾದಿರಿ. ರಾಜ್ಯದ ಹಿತವನ್ನು ಸಂಪೂರ್ಣವಾಗಿ ಬಲಿ ಕೊಟ್ಟಿರಿ. ಈಗಲಾದರೂ ಬಡಿದಾಟ ಕಚ್ಚಾಟ ನಿಲ್ಲಿಸಿ. ಆ ಜನರ ಸ್ಥಿತಿಗತಿಗಳ ಕಡೆ ಗಮನ ಕೊಡಿ ಎನ್ನುವುದಕ್ಕೋಸ್ಕರ ವಿರೋಧಪಕ್ಷದ ನಾಯಕನಾಗಿ ನಿಮ್ಮನ್ನು ಚುಚ್ಚಿ, ಎಚ್ಚಿಸಿ ನೀವು ಜಾಗೃತರಾಗಿ ಜನಹಿತದ ಕಡೆ ಗಮನ ಕೊಟ್ಟರೆ ಸಾರ್ಥಕವಾದೀತು ಎಂದು ತಿಳಿದುಕೊಂಡು ನಾನು ಈ ಮಾತನ್ನು ಆಡುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ : ನಮಗೆ ನೀವು ಬುದ್ಧಿವಾದ ಹೇಳಿದಿರಿ. ಇದೇ ಬುದ್ಧಿವಾದವನ್ನು ಗುಜರಾತ್ ಮತ್ತು ಡೆಲ್ಲಿಯವರಿಗೂ ಹೇಳಿ. ನಿಮ್ಮ ನಾಯಕತ್ವ ಬೇಕು. ನಿಮ್ಮ ನಾಯಕತ್ವ ಡೆಲ್ಲಿಗೋ ಗುಜರಾತಿಗೋ ಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಖಂಡಿತ. ಯಾರೇ ಇರಲಿ. ಅಲ್ಲಿ ಏನಾಗಿದೆ ಸ್ವಾಮಿ? ಅವರು ಡೆಲ್ಲಿ ಗುಜರಾತ್‌ಗೂ ಹೇಳಿ ಅಂದರು. ನಿಜ ಇದೆ. ನೀವು ಹೇಳುವುದು ಸರಿ. ಈ ನಿಮ್ಮ ರಾಜಕೀಯ ಸಂಸ್ಕೃತಿ, ಈ ಕೆಟ್ಟ ರಾಜಕೀಯ ಸಂಸ್ಕೃತಿ ನಮ್ಮಲ್ಲೂ ಪ್ರಾರಂಭವಾಗಿದೆ. ಅದನ್ನು ಕಿತ್ತುಹಾಕುವಂಥ ಪ್ರಯತ್ನ ಮಾಡುತ್ತೇವೆ. ನಾನು ಒಂದು ಮಾತನ್ನು ಹೇಳುತ್ತೇನೆ. ಅಗತ್ಯ ಬಂದರೆ ಅಧಿಕಾರ ಬಿಟ್ಟೇವು. ಈ ತರಹ ವಿಷಯದಲ್ಲಿ ನಿಮ್ಮ ಹಾಗೆ ಕಾಂಪ್ರಮೈಸ್ ಮಾಡಿಕೊಳ್ಳುವುದಿಲ್ಲ. ನಾವು ಹೊಸ ಸಂಸ್ಕೃತಿಯನ್ನು ಬೆಳೆಸೋಣ. ಈ ದೇಶದ ಜನ ನೋಡುತ್ತಿರುವುದು ಬಿ.ಜೆ.ಪಿ. ಕಡೆ. ನಿಮ್ಮ ಕಲ್ಚರನ್ನು ನಾವು ಇಲ್ಲಿ ಬೆಳೆಸಿಕೊಂಡರೆ ಅದನ್ನು ಸಹಿಸುವುದಿಲ್ಲ. ಕರ್ನಾಟಕ ಇರಬಹುದು, ಆಂಧ್ರ ಇರಬಹುದು, ಡೆಲ್ಲಿ ಇರಬಹುದು. ನೋಡಿದ್ದೀರಲ್ಲ ನಾವು ಯಾವ ತರಹ ತೀರ್ಮಾನ...

ಶ್ರೀ ಎಂ. ನಾರಾಯಣ ಸ್ವಾಮಿ : ನಮ್ಮ ದಯೆಯಿಂದ ನೀವು ಕೇಂದ್ರದಲ್ಲಿ ಸರ್ಕಾರ ಮಾಡುತ್ತಾ ಇರುವುದು ಎಂದು ಹೇಳುತ್ತಿದ್ದಾರೆ. ಆದರೆ ಅವರು ಮರೆಯಬಾರದು. ವಿ.ಪಿ.ಸಿಂಗ್ ಹೆಸರು ಹೇಳಿಕೊಂಡು ಬಿ.ಜೆ.ಪಿ.ಯವರು 86 ಸೀಟನ್ನು ಗೆದ್ದಿದ್ದು. 1989ರಲ್ಲಿ ವಿ.ಪಿ.ಸಿಂಗ್ ಹೆಸರು ಹೇಳಿಕೊಂಡು ಅವರು ಗೆದ್ದಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಿಂದಿನ ಕೇಂದ್ರದ ಹಣಕಾಸು ಸಚಿವರಾದ ಚಂದ್ರಶೇಖರ ಮೂರ್ತಿಯವರು ಒಂದು ಮಾತನ್ನು ಕರ್ನಾಟಕವನ್ನು ಕುರಿತು. ಹೇಳಿದ್ದರು ಈ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಕರ್ನಾಟಕದಲ್ಲ ಕಂಪ್ಲೀಟ್ ಕೊಲ್ಯಾಪ್ಸ್ ಆಗಿದೆ ಎನ್ನುವ ಮಾತನ್ನು ಅವರು ಹೇಳಿದ್ದರು.

ಶ್ರೀ ಸಿದ್ಧರಾಮಯ್ಯ : ಯಾವಾಗ ಹೇಳಿದ್ದರು?

ಶ್ರೀ ಬಿ.ಎಸ್. ಯಡಿಯೂರಪ್ಪ : ಮೊನ್ನೆ ಈ ಹಣವನ್ನು 23 ಪರ್ಸೆಂಟ್ ಮಾತ್ರ ಕರ್ನಾಟಕ ರಾಜ್ಯದ ಆಯವ್ಯಯದಲ್ಲಿ ತೆಗೆದಿಟ್ಟು ಖರ್ಚು ಮಾಡಲಿಲ್ಲ ಎಂಬ ಹಿನ್ನೆಲೆಯಲ್ಲಿ ಅವರು ಹೇಳಿದ್ದು. ನಿಮಗೊಂದೇ ಮಾತು. ಇವತ್ತು ಸ್ಟೇಟ್ ಪ್ಲಾನಿಂಗ್ ಬೋರ್ಡ್ ಇದೆ. ರಾಜ್ಯದ ಮುಖ್ಯಮಂತ್ರಿಗಳೇ ಅದಕ್ಕೆ ಅಧ್ಯಕ್ಷರು ತಾನೆ? ನೀವು ಇದುವರೆಗೆ ಅದೆಷ್ಟು ಬಾರಿ ಸಭೆ ಸೇರಿದ್ದೀರಿ? ಯಾವ ಇಲಾಖೆಗೆ ಎಷ್ಟೆಷ್ಟು

ಹಣವನ್ನು ತೆಗೆದಿಡಬೇಕು ಎಂದು ಯಾವ ಮಾನದಂಡವನ್ನು ಉಪಯೋಗ ಮಾಡಿದ್ದೀರಿ? ಪ್ಲಾನ್ ಮತ್ತು ನಾನ್ ಪ್ಲಾನ್ ಅಲೋಕೇಷನ್ ಹೇಗೆ ಮಾಡಿದ್ದೀರಿ? ನೀವು ಸರಿಯಾಗಿ ಮಾಡಿದ್ದರೆ ಇವತ್ತು ಆಯಾ ಇಲಾಖೆಯಲ್ಲಿ ಹಣ ಖರ್ಚಾಗುವಂತೆ ನೋಡಿಕೊಳ್ಳಬೇಕಲ್ಲ? ಎಸ್.ಸಿ., ಎಸ್.ಟಿ. ಜನಾಂಗದ ಓಟು ಬೇಕು.

ಅವರ ಕಡೆಯಿಂದ ಬಂದವರು ಮಂತ್ರಿಗಳಾಗಬೇಕು, ಶಾಸಕರಾಗಬೇಕು. ಆದರೆ ಅವರು ಅಭಿವೃದ್ಧಿಯಾಗಬಾರದು. ಬರುತ್ತೇನೆ ಅಂಕಿಅಂಶಕ್ಕೆ. ಫೈಲುಗಳನ್ನು ನಾನು ಕಳುಹಿಸಿಕೊಡುತ್ತೇನೆ. ನಾನು ಏನು ಛಾರ್ಜ್ ಮಾಡಿದ್ದೇನೆ ಅದಕ್ಕೆ ಒಂದೆರಡೆರಡು ಸ್ಯಾಂಪಲ್ ನಾನು ಕೊಡುವವನಿದ್ದೇನೆ. ಅಭಿವೃದ್ಧಿ ಕಾರ್ಯದ ಬಗ್ಗೆ ಸಂಪೂರ್ಣ ಕೈಕಟ್ಟಿಕೊಂಡು ಕುಳಿತಿದ್ದೀರಿ. ನೀವು ಹಣಕಾಸಿನ ಸಚಿವರು. ಸನ್ಮಾನ್ಯ ಅಧ್ಯಕ್ಷರೇ ಒಂದು, ಸನ್ಮಾನ್ಯ ಬಣಕಾರ್ ಅವರು ಅಲ್ಲಿದ್ದಾಗ ಅಧ್ಯಕ್ಷರಾಗಿ ಒಂದು ಕೆಲಸ ಮಾಡುತ್ತಿದ್ದರು. ಹೊಸ ಶಾಸಕರು ಮತ್ತು ವಿರೋಧಪಕ್ಷದವರು ಜಾಗ್ರತರಾಗಬೇಕು ಎನ್ನುವ ಹಿನ್ನೆಲೆಯಲ್ಲಿ ಪ್ರತಿ ತಿಂಗಳ ಆಯವ್ಯಯದ ಪಟ್ಟಿಯನ್ನು ಅವರು ಕೊಡುವಂಥ ಪ್ರಯತ್ನ ಮಾಡುತ್ತಿದ್ದರು. ಶಾಸಕರು ಸ್ವಲ್ಪ ಎಫೆಕ್ಟೀವಾಗಿ ಕೆಲಸ ಮಾಡುತ್ತಿದ್ದರು. ದಯಮಾಡಿ ಅದು ಸಾಧ್ಯವಾದರೆ ತಮ್ಮ ಕಾಲದಲ್ಲೂ ಮಾಡಿ. ಆದರ ನಾನು ಹಣಕಾಸಿನ ಸಚಿವರನ್ನು ಕೇಳುತ್ತೇನೆ.

MR. SPEAKER : I will do it from the next month itself. It is a very good suggestion.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಬಜೆಟ್ಟನ್ನು ಪಾಸ್ ಮಾಡಿಕೊಟ್ಟಿದ್ದೆವು. ಈಗ ಮತ್ತೆ ಮಾಡುತ್ತಿದ್ದೇವೆ. ಸ್ವಾಮಿ, ನಾಲ್ಕು ತಿಂಗಳಾಯಿತಲ್ಲಾ, ಪ್ರತಿಯೊಂದು ಇಲಾಖೆಯಲ್ಲಿ ಎಷ್ಟು ಹಣವನ್ನು ಅಲೋಕೇಟ್ ಮಾಡಿದ್ದೆವು, ಎಷ್ಟು ಖರ್ಚು ಮಾಡಿದ್ದೀರಿ ಎಂದು ಅಂಕಿಅಂಶ ಕೊಡಿ. ದಯಮಾಡಿ ಕೊಡಿ. ದಯವಿಟ್ಟು ಶ್ವೇತಪತ್ರ ಕೊಡಿ ಇದರ ಬಗ್ಗೆ ಆಗ ಯಾವ ರೀತಿ ನಿಮ್ಮ ಮಂತ್ರಿಗಳು ನಿದ್ರಾವಸ್ಥೆಯಲ್ಲಿದ್ದಾರೆ, ಕುಂಭಕರ್ಣನ ರೀತಿ ನಿದ್ದೆ ಮಾಡುತ್ತಿದ್ದಾರೆ, ಇಲಾಖೆ ಅಭಿವೃದ್ಧಿಯ ಕಡೆ ಗಮನ ಕೊಡುತ್ತಾ ಇಲ್ಲ ಎನ್ನುವುದು ಅರ್ಥವಾಗುತ್ತದೆ. ಯೋಜನೆ ಯಾವ ರೀತಿ ಕುಂಠಿತವಾಗುತ್ತಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಮಾರ್ಚಿ ಕೊನೆಯಲ್ಲಿ ಅವ್ಯವಹಾರಕ್ಕೆ ಆಸ್ಪದ ಕೊಡುವುದಕ್ಕೋಸ್ಕರ. ಹಣ ಬಿಡುಗಡೆ ಮಾಡುವುದಕ್ಕೆ ಪ್ರಾರಂಭವಾಗುತ್ತದೆ ಖರ್ಚಾಗುವುದಿಲ್ಲ. ಈ ಪದ್ಧತಿ ಇದೆ ಇದಕ್ಕೆ ಬದಲಾವಣೆ ತನ್ನಿ. ಮುಖ್ಯಮಂತ್ರಿಗಳು ಆ ಮಾತನ್ನು ಹೇಳಿದ್ದರೆ ನಾನು ಶಹಭಾಸ್ ಹೇಳುತ್ತಿದ್ದೆ. ಹಣಕಾಸಿನ ಸಚಿವರು ಆ ಮಾತನ್ನು ಹೇಳಿದ್ದರೆ, ಯಡಿಯೂರಪ್ಪನವರೇ ಒಂದು ವರ್ಷದಲ್ಲಿ ಅಲೋಕೇಷನ್‌ನಲ್ಲಿ ಆಯಾ ತಿಂಗಳು ಎಷ್ಟು ಬೇಕೋ ಅಷ್ಟು ಖರ್ಚು ಮಾಡುತ್ತೇವೆ. ಡೆವಲಪ್ಮೆಂಟ್ ಆಗುವ ಕಡೆ ನೋಡುತ್ತೇವೆ, ಪ್ರತಿಯೊಂದು ಇಲಾಖೆಯಲ್ಲಿ ಮಾಡಿದ್ದೇವೆ, ಮಾಡುತ್ತೇವೆ ಎಂದು ನೀವು ಉತ್ತರ ಕೊಟ್ಟರೆ, ಖಂಡಿತ ನನ್ನ ಛಾರ್ಜಸ್ಸನ್ನು ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ರಾಜ್ಯದ ಜನರ ಮುಂದೆ ಹೋಗಿ ಹೇಳುತ್ತೇನೆ, ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಅವರು ಕಚ್ಚಾಟ ಮಾಡುತ್ತಿದ್ದರೂ ಪರ್ವಾಗಿಲ್ಲ ಅವರನ್ನು ಕ್ಷಮಿಸಿ ಎಂದು ಜನರಿಗೆ ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಪ್ರತಿ ತಿಂಗಳು ಹನ್ನೆರಡನೇ ಒಂದು ಭಾಗ ಅಮೌಂಟ್ ಬಜೆಟ್‌ನಲ್ಲಿರುವುದು ತಪ್ಪದೆ ಬಿಡುಗಡೆ ಮಾಡುತ್ತಿದ್ದೇವೆ. ರೂರಲ್ ಡೆವಲಪ್ಮೆಂಟ್ ಇರಬಹುದು ಬೇರೆ ಯಾವುದೇ ಇಲಾಖೆ ಇರಬಹುದು. ಮತ್ತೆ

ಮೂರು ತಿಂಗಳು ಯಾವಯಾವುದು ಹೆಚ್.ಕೆ.ಡಿ.ಬಿ. ಇರಬಹುದು, ಮಲೆನಾಡು ಡೆವಲಪ್ಮೆಂಟ್ ಬೋರ್ಡ್ ಇರಬಹುದು, ಬಾರ್ಡರ್ ಏರಿಯಾ ಇರಬಹುದು ಮೊದಲನೇ ಕ್ವಾರ್ಟರ್ಲಿ ಅಮೌಂಟ್ ಬಿಡುಗಡೆ ಮಾಡಿದ್ದೇನೆ. ಆದ್ದರಿಂದ ಅದೆಲ್ಲಾ ಅಂಕಿಅಂಶ ಕೊಡುತ್ತೇನೆ ಎಷ್ಟು ಬಿಡುಗಡೆ ಮಾಡಿದ್ದೇರೆ, ಎಷ್ಟು ಖರ್ಚಾಗಿದೆ, ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಕೊಟ್ಟಿದ್ದೇವೆ ಎಲ್ಲಾ ಪೂರ್ಣ ವಿವರ ಕೊಡುತ್ತೇವೆ. ಆದ್ದರಿಂದ ಯಾವ ಇಲಾಖೆಯೂ ಹಣದ ಕೊರತೆ ಇದೆ ಎಂದು ದುಡ್ಡು ಬಿಡುಗಡೆ ಮಾಡಿಲ್ಲ ಎಂಬ ಪ್ರಶ್ನೆಯೇ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ : ಇದು ಸತ್ಯಕ್ಕೆ ದೂರವಾದಂಥ ಹೇಳಿಕೆ. ಖಂಡಿತ ಆ ರೀತಿ ಬಿಡುಗಡೆ ಮಾಡಿಲ್ಲ. ಮಾನ್ಯ ಹಣಕಾಸಿನ ಸಚಿವರು ಇನ್ನೊಮ್ಮೆ ಅಧಿಕಾರಿಗಳನ್ನು ಕೇಳಿ ಸಭೆಗೆ ವರದಿಯನ್ನು ಕೊಡಲಿ.

11.20 ಎ.ಎಂ.

ಶ್ರೀ ಎಂ. ಶ್ರೀನಿವಾಸ್ : ಮಹಾನಗರ ಪಾಲಿಕೆಯವರು 2ಕೋಟಿ ರೂಪಾಯಿಗಳನ್ನು ಬೋರ್‌ವೆಲ್‌ಗೆ ಕೊಡುತ್ತೇನೆಂದು ಹೇಳಿ, 50 ಲಕ್ಷ ರೂಗಳನ್ನು ಮಾತ್ರ ಬಿಡುಗಡೆ ಮಾಡಿರುವುದರಿಂದ ಬೋರ್‌ವೆಲ್ ತೆಗೆಯುವುದನ್ನು ನಿಲ್ಲಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದ್ದೀರಲ್ಲಾ ಹಣಕಾಸಿನ ಸಚಿವರಾಗಿ, ಷೆಡ್ಯೂಲ್ಡ್‌ಕಾಸ್ಟ್ ಷೆಡ್ಯೂಲ್ಡ್‌ಟ್ರೈಬ್ ಕಾರ್ಪೋರೇಷನ್ ಇದೆ. ಅಲ್ಲಿ 9 ಇಲಾಖೆಗಳು ಇದ್ದಾವೆ. ಸೆಲ್ಫ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್ ಇ.ಡಿ.ಪಿ. ಲ್ಯಾಂಡ್ ಓನಿಂಗ್ ಸ್ಕೀಮ್, ಇಂಡಿವಿಜಿಯಲ್ ಇರಿಗೇಷನ್ ಬೋರ್‌ವೆಲ್ ಪ್ರೋಗ್ರಾಮ್, ಹಿಲ್ ಡೆವಲಪ್‌ಮೆಂಟ್ ಪ್ರೋಗ್ರಾಮ್, ದೇವದಾಸಿ ರಿಹ್ಯಾಬಿಲಿಟೇಷನ್ ಪ್ರೋಗ್ರಾಮ್ ರಿಹ್ಯಾಬಿಲಿಟೇಷನ್ ಆಫ್ ಸ್ವೀಪರ್ಸ್ ಅಂಡ್ ಸ್ಕ್ಯಾವೆಂಜರ್ಸ್‌ರ ಪ್ರೋಗ್ರಾಮ್ ಅಸಿಸ್ಟೆಂಟ್ ಟು ಸ್ಟ್ರೀಟ್ ವೆಂಡರ್, ಅಸಿಸ್ಟೆಂಟ್ ಟು ಸ್ಮಾಲ್ ಆರ್ಟಿಸ್‌ನ್ಸ್ ಇವೆಲ್ಲಾ ಇದೆ. ಸ್ವಾಮಿ ಸೆಲ್ಫ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್‌ನಲ್ಲಿ, am amount of Rs. 476 lakhs was released on 22.3.95 Hence we could not spend the entire amount. ಷೆಡ್ಯೂಲ್ಡ್‌ಕಾಸ್ಟ್ ಷೆಡ್ಯೂಲ್ಡ್‌ಟ್ರೈಬ್ ಕಾರ್ಪೋರೇಷನ್ಸ್‌ನಲ್ಲಿ ಎಂಟರ್‌ಪ್ರಿನರ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಇಡಿಪಿಯಲ್ಲಿ Rs. 300 lakhs was released on 26.3.95, out of Special component plan funds. But we could not spend. Land owning scheme: Rs. 366 lakhs was released on 22.3.95. Hence we could not spend the entire amount. Individual Irrigation Programme - The amount was released in the last week of March 1995 under 'No water No money condition'. Drilling agencies have not come forward to take up the work. ನಾನು ಏಕೆ ಹೇಳುವುದಕ್ಕೆ ಹೊರಟಿದ್ದೇನೆಂದರೆ ಇವತ್ತು ಅತ್ಯಂತ ಪ್ರಮುಖವಾಗಿರತಕ್ಕ ಎಸ್‌ಸಿ ಎಸ್‌ಟಿ ಇಲಾಖೆಯಲ್ಲಿ ಈ ರೀತಿಯ ಒಂದು ವಾತಾವರಣ ಇರಬೇಕಾದರೆ ಆ ಜನ ಕಣ್ಣೀರು ಹಾಕುತ್ತಿರಬೇಕಾದರೆ, ಅಭಿವೃದ್ಧಿ ಕಾರ್ಯ ಸ್ಥಗಿತವಾಗಿರಬೇಕಾದರೆ,

ಅವರಿಗೆ ಯಾವುದೇ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಇಲ್ಲದಿರುವಂತಹ ಕಾಲದಲ್ಲಿ ಬಜೆಟ್‌ನಲ್ಲಿ ಅಲೋಕೇಷನ್ ಮಾಡಿದ್ದೇವೆಂದು ಹೇಳಿ ಹಣವನ್ನು ಖರ್ಚುಮಾಡುವುದಕ್ಕೆ ತಾವು ಸಿದ್ಧರಿಲ್ಲ. ಹೋದ ವರ್ಷ ವಿಧಾನಸಭೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದೆ. ನನ್ನದೆ ಪ್ರಶ್ನೆ, ಅದಕ್ಕೆ ಏನು ಉತ್ತರ ಕೊಟ್ಟಿರಿ? ಮುಂದಿನ ಜೂನ್‌ವರೆಗೆ ಈ

ಹಣವನ್ನು ಖರ್ಚು ಮಾಡುವುದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆಂದು ನನ್ನ ಪ್ರಶ್ನೆಗೆ ತಾವು ಉತ್ತರವನ್ನು ಕೊಟ್ಟಿರಿ. ಷೆಡ್ಯುಲ್ಡ್‌ಕಾಸ್ಟ್ ಮತ್ತು ಷೆಡ್ಯೂಲ್ಡ್‌ಟ್ರೈಬ್‌ಗೆ ಸಂಬಂಧಪಟ್ಟಹಾಗೆ, ಆ ಹಣವನ್ನು ಖರ್ಚು ಮಾಡಲಿಲ್ಲ. ಲಾಸ್ಟ್ ಇಯರ್ ಮಲೆನಾಡು ಪ್ರದೇಶಾಭಿವೃದ್ಧಿಗೆ ಖರ್ಚಾದ ಹಣ 5 ಕೋಟಿ 82 ಲಕ್ಷ. ಖರ್ಚಾಗದೆ ಉಳಿದಂತಹ ಹಣ 304 ಲಕ್ಷ 18 ಸಾವಿರ. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಖರ್ಚಾದ ಹಣ 527 ಕೋಟಿ. ಖರ್ಚಾಗದೆ ಉಳಿದಿರುವ ಹಣ 172 ಕೋಟಿ. ಗಡಿ ಪ್ರದೇಶಾಭಿವೃದ್ಧಿಗೆ 50 ಕೋಟಿ ರೂ.ಗಳ ಹಣವನ್ನು ಇಡಲಾಗಿತ್ತು.

ಶ್ರೀ ಸಿದ್ಧರಾಮಯ್ಯ ; ಹಣದ ಕೊರತೆಯಿಂದ ಆಗಿರುವುದಲ್ಲ ಅದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ಮಾಡಿ ಮುಗಿಸಬೇಕೆನ್ನತಕ್ಕ ಪೊಲಿಟಿಕಲ್ ವಿಲ್‌ನ್ನು ತೋರಿಸಬೇಕು. ಎಸ್‌ಸಿ, ಎಸ್‌ಟಿ ಜನಾಂಗದ ಅವರ ಅಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗಿತ್ತು ಎಂಬ ನಾನು ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ತಾವು ಕೇಳುತ್ತಿರುವ ಕ್ಲಾರಿಫಿಕೇಷನ್‌ಗೆ ಉತ್ತರ ಏನೆಂದರೆ ಹೆಚ್‌ಕೆಡಿಬಿ, ಮಲೆನಾಡು ಅಭಿವೃದ್ಧಿ ಮಂಡಳಿ, ಮತ್ತು ಬಾರ್ಡರ್ ಏರಿಯಾ ಇಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಏನಾಗಿದೆ ಅಂದರೆ ಅಲ್ಲಿ ಇಟ್ಟಿದ್ದಂತಹ ಹಣವನ್ನು ಪೂರ್ತಿಯಾಗಿ ಅವರು ಖರ್ಚುಮಾಡುವುದಕ್ಕಾಗಿಲ್ಲ. ಒಂದೆರಡು ವರ್ಷ ಮಾಡಿದರು. 1991-92, 1992-93 ಅವರಿಗೆ ಇಟ್ಟಿರತಕ್ಕ ಹಣವನ್ನು ಪಿಡಿ ಅಕೌಂಟ್‌ನಲ್ಲಿಟ್ಟು ಕೊಂಡಿರುತ್ತಾರೆ. ಆ ಹಣ ಮತ್ತು ಹಿಂದೆ ಉಳಿದಂತಹ ಹಣವನ್ನು ಅವರು ಖರ್ಚು ಮಾಡಿದ್ದಾರೆ. ಹಾಗಾಗಿ ಹೋದ ವರ್ಷ ನಾವು ಕೊನೆಯಲ್ಲಿ ಬಿಡುಗಡೆ ಮಾಡಿದ ಹಣವನ್ನು ಪೂರ್ಣ ಖರ್ಚುಮಾಡುವುದಕ್ಕಾಗಿಲ್ಲ. ಹಾಗೆ ಆಗಿದೆ. ಟೋಟಲಿ ಎಷ್ಟು ಖರ್ಚಾಗಿದೆ ಅಂತ ತೆಗೆದುಕೊಂಡರೆ ಇಟ್ಟಿದ್ದ ಹಣಕ್ಕಿಂತ ಹೆಚ್ಚು ಖರ್ಚಾಗುತ್ತದೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅರ್ಥಮಂತ್ರಿಗಳು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದೇ ಪುಸ್ತಕದಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್‌ದು ಇದೆ. ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಮತ್ತು ಮೈನಾರಿಟಿ ಕಮಿಷನ್‌ಗೂ ಹಣವನ್ನು ಕೊಟ್ಟಿದ್ದಾರೆ. ಷೆಡ್ಯೂಲ್ಡ್‌ಕಾಸ್ಟ್ ಷೆಡ್ಯೂಲ್ಡ್‌ಟ್ರೈಬ್ಸ್‌ಗೂ ಹಣ ಕೊಟ್ಟಿದ್ದಾರೆ. ಅವರೆಡಕ್ಕೂ ಬೆನಿಫಿಷರೀಸ್‌ಗೆ ಪೂರ್ಣ ಹಣ ಖರ್ಚಾಗಿದೆ. ಎಷ್ಟು ಹಣವನ್ನು ನಿಗದಿಪಡಿಸಲಾಗಿತ್ತೋ ಅದಕ್ಕಿಂತ ಜಾಸ್ತಿ ಖರ್ಚು ಮಾಡಿದ್ದಾರೆ. ಇದರಲ್ಲಿ ಒಂದು ಕಾಸೂ ಖರ್ಚಾಗಿಲ್ಲ. ಇದಕ್ಕೆ ಯಾರು ಹೊಣೆ? ಇದನ್ನು ತಾವು ಯೋಚನೆ ಮಾಡಿ ನೋಡಿ. ಇದಕ್ಕೆ ಮಾತ್ರ 7ದಿವಸ ಟೈಮ್ ಕೊಟ್ಟು ಹಣವನ್ನು ರಿಲೀಸ್ ಮಾಡಿದ್ದೀರಿ. ಅವೆರಡಕ್ಕೂ ಮಾತ್ರ ಮುಂಚೆ ಪೂರ್ತಿ ಹಣ ಕೊಟ್ಟು ಅದನ್ನು ಕಾರ್ಯಗತ ಮಾಡಿದ್ದೀರಿ. ಇದಕ್ಕೆ ಕಾರಣವೇನು? ದಯವಿಟ್ಟು ಹೇಳಬೇಕು.

ಅಧ್ಯಕ್ಷರು : ನಾನು before you could proceed ಟ್ರೆಷರಿ ಬೆಂಚಸ್‌ಗೆ ಒಂದು ಅಪೀಲ್ ಮಾಡಿ ಕೊಳ್ಳುತ್ತೇನೆ, ಅಪೋಸಿಷನ್ ಲೀಡರ್ ಡಿಮಾಂಡ್ಸ್ ಮೇಲೆ ಡಿಸ್‌ಕಷನ್ ಇನ್‌ಷಿಯೇಟ್ ಮಾಡತಕ್ಕದ್ದು It is a rare event in the House. ಅವರಿಗೆ ಯಾವ ಅಡೆತಡೆಯೊಡ್ಡದೆ ಪೂರ್ಣ ತಮ್ಮ ಅಭಿಪ್ರಾಯ ಏನಿರುತ್ತದೆ ಅದನ್ನು ವ್ಯಕ್ತಮಾಡುವುದಕ್ಕೆ ಅವಕಾಶ ಕೊಡಬೇಕು. ಅವೆಲ್ಲಾ ಪಾಯಿಂಟ್ಸ್ ನೋಟ್‌ಡೌನ್ ಮಾಡಿಕೊಂಡು, ತಮ್ಮ ಉತ್ತರವನ್ನೆಲ್ಲಾ ತಮಗೆ ಅವಕಾಶ ಬಂದಾಗ ಕೊಡಿ. ಮೆಂಬರ್ಸ್‌ಗೆ ಕೂಡ ಅಷ್ಟೆ, ದಯಮಾಡಿ ಸಾಧ್ಯವಾದಷ್ಟು ಮಟ್ಟಿಗೆ ಡಿಸ್ಟರ್ಬ್

ಮಾಡಬಾರದು. ಅಪೋಸಿಷನ್ ಲೀಡರ್ ಇನ್‌ಷಿಯೇಟ್ ಮಾಡತಕ್ಕದ್ದು it is a very rare event in the House. ದಯಮಾಡಿ ಎಲ್ಲರೂ ಸಹಕರಿಸಬೇಕು. ಅವರಿಗೆ ಅದನ್ನು ಹೇಳುತ್ತೇನೆ his flow of thought should not get disturbed. Please have your say.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಚುನಾವಣೆಯ ಸಮಯದಲ್ಲಿ ಇವರು ಹೇಳಿದರು ಅದರ ನಂತರ ನಾವು ನುಡಿದಂತೆ ನಡೆಯುವ ವಚನಬದ್ಧರು ಎಂದು. ಸ್ವಾಮಿ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಎಲ್ಲಿಂದಲ್ಲಾದರೂ ತಂದು ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತೇನೆ, ಎಂದು ಹೇಳಿ ಕಲ್ಬುರ್ಗಿಗೆ ಹಿಂದೆ ನಿಮ್ಮ ಮಂತ್ರಿಗಳ ಒಂದು ದಂಡು ಹೋಗಿತ್ತು. ಹಿಂದಿನ ಮುಖ್ಯಮಂತ್ರಿಗಳು ಇದ್ದಾಗ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸಲು ರಾಜ್ಯಸರ್ಕಾರದ ಮುಂದಿರುವ ಸವಾಲು. ಅದರಂತೆ ಪ್ರಸ್ತುತ ಸಾಲಿನಲ್ಲಿ ಈ ಯೋಜನೆಗೆ ಒಂದು ಸಾವಿರ ಕೋಟಿ ರೂಪಾಯಿ ವಿನಿಯೋಗಿಸಲಾಗುವುದನ್ನು ಒಂದು ಸವಾಲಾಗಿ ಸ್ವೀಕರಿಸುತ್ತೇನೆ. ಕೆಲಸ ಮಾಡಿ ತೋರಿಸುವ ಮೂಲಕ ಟೀಕಾಕಾರರಿಗೆ ಉತ್ತರಿಸಲಾಗುವುದೆಂದು ಹಿಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ದೇವೇಗೌಡರು ಹೇಳಿದ್ದರು.

ಸ್ವಾಮಿ ನಾನು ನಿಮ್ಮನ್ನು ಕೇಳುತ್ತೇನೆ, ಒಂದೂಮುಕ್ಕಾಲು ವರ್ಷವಾಯಿತು ಪ್ರತಿ ವರ್ಷ ಸಾವಿರ ಕೋಟಿ ರೂಪಾಯಿ ಖರ್ಚುಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಇದುವರೆಗೆ ಒಂದು ಸಾವಿರ ಕೋಟಿ ರೂಪಾಯಿ ಖರ್ಚಾಗಿದೆಯೇ ನಾನು ಕೇಳುವುದು ಈ ರಾಜ್ಯದ ಜನರಿಗೆ ಒಂದು ಭರವಸೆಯನ್ನು ಕೊಟ್ಟಮೇಲೆ ಒಂದು ಹೇಳಿಕೆಯನ್ನು ಕೊಟ್ಟಮೇಲೆ ನಿಮ್ಮ ಚುನಾವಣೆಯ ಪ್ರಣಾಳಿಕೆಯಲ್ಲಿ ಹೇಳಿದ ಮೇಲೆ ಸಾರ್ವಜನಿಕವಾಗಿ ಕಮಿಟ್‌ಮೆಂಟ್ ಮಾಡಿಕೊಂಡ ಮೇಲೆ ಅದನ್ನು ಕಾರ್ಯರೂಪಕ್ಕೆ ತರುವಂತಹ ಯಾವುದಾದರೂ ಒಂದು ಪ್ರಾಮಾಣಿಕ ಪ್ರಯತ್ನ ಇವತ್ತು ನಿಮ್ಮ ಕಡೆಯಿಂದ ಆಗಿದೆಯೇನು? ಬಹುರಾಷ್ಟ್ರೀಯ ಕಂಪನಿಗಳಿಗೆ ಶರಣುಹೋಗಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವಂತಹ ಹೇರಳ ಖನಿಜ ಸಂಪತ್ತು ಇರುವಂತಹ ಬಹಳಷ್ಟು ಎಕರೆ ಜಮೀನುಗಳನ್ನು ಕೋಟ್ಯಾಂತರ ರೂಪಾಯಿಗಳಿಗೆ ಪರಭಾರೆ ಮಾಡುವುದು ಪ್ರಾರಂಭವಾಗಿದೆ. ನಾವು ಚರ್ಚೆ ಮಾಡುತ್ತಿದ್ದೆವು, ಕೃಷ್ಣಾ ಜಲಾನಯನ ಪ್ರದೇಶಕ್ಕೆ ದುಡ್ಡಿಲ್ಲ ಕೇಂದ್ರದಿಂದ ಸಾಲ ತರಬೇಕು. ಎಂದು ಕೃಷ್ಣಾ ಜಲಭಾಗ್ಯ ನಿಗಮದಿಂದ 500 ಕೋಟಿ ರೂಪಾಯಿ ಸಾಲ ಮಾಡುತ್ತಿದ್ದೀರಿ. ಸ್ವಾಮಿ ಇಲ್ಲೆ ಸದನದಲ್ಲಿ ಗ್ರಾನೈಟ್ ಹಗರಣದ ಬಗ್ಗೆ.

ಅಂದಿನ ಮುಖ್ಯಮಂತ್ರಿಗಳು ಸನ್ಮಾನ್ಯ ದೇವೇಗೌಡರು, ಇಂದಿನ ಹಾಲಿ ಪ್ರಧಾನಿಯವರು ಹೇಳಿದರು. ಜಮ್ ಗ್ರಾನೈಟ್‌ನವರಿಂದ ಆ ಗ್ರಾನೈಟ್ ಹಗರಣದಲ್ಲಿ ಕರ್ನಾಟಕ ರಾಜ್ಯಕ್ಕೆ ಇದು ರೆಕಾರ್ಡ್‌ನಿಲ್ಲಿದೆ ಅದನ್ನು ಹೇಳುತ್ತೇನೆ. ಒಂದು ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣ ಸರ್ಕಾರದ ಖಜಾನೆಗೆ ಬರುವುದು ಲೂಟಿಯಾಯಿತೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

ನಾನು ನಿಮ್ಮನ್ನು ಕೇಳುತ್ತೇನೆ, ಹೇಗೆ ಆಡಳಿತವನ್ನು ಹಿಂದೆ ಇದ್ದವರು ಇಂದಿನವರು ನಡೆಸಿಕೊಂಡು ಬಂದಿರಿ ಎನ್ನುವುದಕ್ಕೆ ಇದಕ್ಕಿಂತ ತಾಜಾ ಉದಾಹರಣೆ ಬೇಕಾ ಸ್ವಾಮಿ ನಿಮಗೆ? ಇವತ್ತು ಕನ್ನಡ ಪ್ರಭ ದಿನಪತ್ರಿಕೆಯ ಮುಖಪುಟದಲ್ಲಿ ಬಂದಿದೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಜಮ್ ಗ್ರಾನೈಟ್ ಜಮೀನು ಅಕ್ವೈರ್‌ಗೆ ಸಂಬಂಧಪಟ್ಟ ಹಾಗೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಯಾವ ಜಮೀನಿನಲ್ಲಿ ಕ್ವಾರಿ ಮಾಡುತ್ತಿದ್ದರು ಅದು ಸರ್ಕಾರಿ ಜಮೀನು ಎಂದು ಹೇಳಿ ನಾವು ಅದನ್ನು ಎತ್ತಿಕೊಂಡು, ಕಡೆಗೆ ಅದರ ಬಗ್ಗೆ ದೊಡ್ಡ ವಾದ ವಿವಾದಗಳು ನಡೆದು ನಮ್ಮ ಹೈಕೋರ್ಟ್‌ನಲ್ಲಿ ಜಮ್ ಗ್ರಾನೈಟ್‌ನ ಜಾಗ ಸರ್ಕಾರಕ್ಕೆ ಸೇರಿದ್ದು ಎಂದು ಹೇಳಿ ಈಗ ನಮ್ಮ ಪರವಾಗಿ ತೀರ್ಮಾನವಾಗಿದೆ. It ahas come into our possession. This is the decision we hava taken.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇವರು 1983ರಲ್ಲಿ ಅಧಿಕಾರದಲ್ಲಿದ್ದರು. ಕಳೆದ 20 ವರ್ಷಗಳಿಂದ ಒಂದು ಸಾವಿರ ಕೋಟಿ ರೂಪಾಯಿಗಳ ಗ್ರಾನೈಟ್ ಕಲ್ಲಿನ ಹಗರಣ ನಡೆದಿದೆ. ಅಲ್ಲಿ ಲೂಟಿ ಮಾಡಿದ್ದಾರೆ. ಸ್ವಾಮಿ ಪುಣ್ಯಕ್ಕೆ ಹೈಕೋರ್ಟ್ ಸುಪ್ರೀಂಕೋರ್ಟ್ ತೀರ್ಮಾನಗಳು ರಾಜ್ಯದ ಜನಹಿತದೃಷ್ಟಿಯಿಂದ ದೇಶದ ಜನರ ಹಿತದೃಷ್ಟಿಯಿಂದ ಬರುತ್ತಿರುವುದರಿಂದ ಸ್ವಾಮಿ ನಮಗೆ ಭಯವಾಗುತ್ತೆ, ಎಲ್ಲಿ ಕರ್ನಾಟಕ ರಾಜ್ಯವನ್ನೆ ಮಾರಿಕೊಂಡು ಹೋಗಿಬಿಡುತ್ತಿದ್ರೊ ಅಧಿಕಾರ ಸಿಕ್ಕಾಗ ಆ ಕೋರ್ಟ್ ಎನ್ನುವಂತಹ ಭಯವಿಲ್ಲದಿದ್ದರೆ, ನಾನು ಕೇಳುತ್ತೇನೆ, ಸ್ವಾಮಿ ನಿಮ್ಮನ್ನು, ಇವತ್ತು ಆಡಳಿತ ನಡೆಸುತ್ತಿರುವ ಪಕ್ಷ ಒಂದು ಸರ್ಕಾರಕ್ಕೆ ಸರ್ಕಾರದ ಜಮೀನು ಯಾವುದು ಯಾವುದಲ್ಲ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ವರ್ಷಗಟ್ಟಲೆ ಬೇಕೇನು? ಇಲ್ಲಿ ಹೇಳುತ್ತೇನೆ, ಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಬಿಜಾಪುರ ಜಿಲ್ಲೆಯ ಬಲಗುಂದಿ ಗ್ರಾಮದಲ್ಲಿರುವ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಮೌಲ್ಯದ ಗ್ರಾನೈಟ್ ಜಮೀನು ಹಣವಿಲ್ಲದೆ ಕುಂಟುತ್ತಿರುವ ಕೃಷ್ಣಾ ಯೋಜನೆಗೆ ಅನುಕೂಲವಾಗಬಹುದು. ಬಲಗುಂದಿ ಗ್ರಾಮದಲ್ಲಿರುವ 814 ಎಕರೆ ಅಮೂಲ್ಯ ಜಮೀನು ರಾಜ್ಯಸರ್ಕಾರದ ಆಸ್ತಿಯೆಂದು ಸುಪ್ರೀಂಕೋರ್ಟ್ ತೀರ್ಪು ನೀಡಿದ ನಂತರ ಅಲ್ಲಿ ಗಣಿಗಾರಿಕೆ ನಡೆಸುತ್ತಿದ್ದ ವೀರಮಣಿ ಮಾಲೀಕತ್ವದ ಜೆಮ್ಸ್ ಹಾಗೂ ಇತರೆ ಕಂಪನಿಗಳಿಂದ 100 ಕೋಟಿ ರೂಪಾಯಿ ಹಳೆಯ ಬಾಕಿ ಒಂದು ವರ್ಷದ್ದು ಮಾತ್ರ ಬರಬೇಕಾಗಿದೆ. ಮತ್ತೆ ಇದನ್ನು ವಸೂಲಿ ಮಾಡುತ್ತಿರುವಂತಹ ಹಿನ್ನೆಲೆಯಲ್ಲಿ ಕ್ರಮ ತೆಗೆದುಕೊಂಡಿರುವ ಕಂದಾಯ ಇಲಾಖೆಯ ಅಧಿಕಾರಿಗಳನ್ನು ಕಾಡುತ್ತಿರುವ ಪ್ರಶ್ನೆ ಬಲಗುಂದಿ ಗ್ರಾಮದಲ್ಲಿರುವ 814 ಎಕರೆ ಜಮೀನು ಪರಿಣಿತರ ಪ್ರಕಾರವೇ ಇಂದು ಕನಿಷ್ಟವೆಂದರೂ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಬೆಲೆ ಬಾಳುತ್ತದೆ.

..ಕಳೆದ ಎರಡು ದಶಕಗಳಿಂದ ಈ ಜಮೀನನ್ನು ಖಾಸಗಿ ಆಸ್ತಿಯೆಂದು ಅಲ್ಲಿ ಗಣಿಗಾರಿಕೆ ನಡೆಸುತ್ತಿದ್ದ ಜೆಮ್ ಕಂಪನಿಯ ಪಿ. ವೀರಮಣಿ ಮತ್ತಿತರು ಸರ್ಕಾರಿ ದಾಖಲೆಗಳ ಪ್ರಕಾರವೇ ಇಲ್ಲಿಯವರೆಗೆ ಸುಮಾರು ಸಾವಿರ ಕೋಟಿ ರೂಪಾಯಿ ಮೌಲ್ಯದ ಅಮೂಲ್ಯ ಗ್ರಾನೈಟ್ ತಗೆದು ರಫ್ತು ಮಾಡಿದ್ದಾರೆ....

ಸ್ವಾಮಿ, ನಾನು ಖಿಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಪ್ರಾರಂಭದಲ್ಲಿ ನಾನು ಮಾತನಾಡುತ್ತಾ ಏನು ಹೇಳಿದೆ, ಇವತ್ತಿನ ಡಿಮ್ಯಾಂಡಿಗೆ ಸಂಬಂಧ ಇದೆಯೋ ಇಲ್ಲವೋ ಅದು ಬೇರೆ ವಿಷಯ. ಇವತ್ತಿನ ಡಿಮ್ಯಾಂಡಿಗ್ ಸಂಬಂಧಪಟ್ಟಂತೆ ಬರುತ್ತಾ ಇದ್ದೇನೆ. ಯಾವ ರೀತಿ ವಜ್ರವೈಡೂರ್ಯಗಳು ಸಿಗುವಂಥ, ಖನಿಜ ಸಂಪತ್ತು ಸಿಗುವಂಥ, ಚಿನ್ನದ ಅದಿರು ಸಿಗುವಂಥ, ಸಾವಿರಾರು, ಲಕ್ಷಾಂತರ ಎಕರೆ ಜಮೀನುಗಳನ್ನು ವ್ಯವಸ್ಥಿತವಾಗಿ ಪರಭಾರೆ ಮಾಡುತ್ತಿದ್ದೀರಿ. ಹಿಂದಿನ ಸರ್ಕಾರ ಮಾಡಿರಲಿಲ್ಲವೇ ಎಂದು

ಹೇಳಬಹುದು ಯಾವುದೇ ಸರ್ಕಾರ ಇರಬಹುದು. ಪಕ್ಷದ ಹೆಸರು ಹೇಳುವುದಕ್ಕೆ ನಾನು ಇಚ್ಛಿಪಡುವುದಿಲ್ಲ. ಇವರನ್ನು ಉಳಿಸಿದಿರಿ. ನಾನು ಪ್ರಾರಂಭದಲ್ಲೇ ಮಾತನಾಡುತ್ತಾ ಏನು ಹೇಳಿದೆ? ನಿಮಗೆ ಸಿಟ್ಟು ಬಂತು.

ಇವತ್ತು ಚುನಾಯಿತ ಸರ್ಕಾರ ಜನಹಿತವನ್ನು ಮರೆತು, ನಮ್ಮ ಮಾಲೀಕರು ಜನ ಎನ್ನುವುದನ್ನು ಮರೆತು ನಮಗೆ ಬೆಂಬಲವಾಗಿ ಚುನಾವಣೆಯಲ್ಲಿ ನಿಂತಂಥ ಈ ಗ್ರಾನೈಟ್ ಲೂಟಿ ಮಾಡುವಂಥವರು, ಹೆಂಡದ ದೊರೆಗಳು, ನೆಲಗಳ್ಳರು, ಕಾಡುಗಳ್ಳರು, ಇವರುಗಳಿಗೆ ಸಹಕಾರ ಕೊಡುವಂಥ ನೂರು ಉದಾಹರಣೆಗಳನ್ನು ನಿಮಗೆ ನಾನು ಕೊಡುತ್ತೇನೆ. ನಿಮ್ಮ ಸರ್ಕಾರ ಬಂದಮೇಲೆ ಏನು ತೀರ್ಮಾನಗಳನ್ನು ತೆಗೆದುಕೊಂಡಿರಿ ಎಂದು ನಾನು ಕೊಡುತ್ತೇನೆ. ಎಕ್ಸೈಸ್‌ಗೂ ನಾನು ಬರುತ್ತೇನೆ. ಅಲ್ಲೇ ಜಾಸ್ತಿಯಾಗಿರುವುದು. ಶಾಣಪ್ಪನವರು ಅಲ್ಲಿಹೋಗಿ ಸಿಕ್ಕಿಹಾಕಿಕೊಂಡಿದ್ದಾರೆ, ನನಗೆ ದುಃಖವಾಗುತ್ತದೆ. ನಿಮ್ಮ ಮನೆಗೆ ಬಂದು ನಾನು ಮಾತನಾಡುತ್ತೇನೆ. ಏಕೆಂದರೆ, ಒಂದು ನಡೆದುಕೊಂಡು ಬಂದಿದೆ. ಎಕ್ಸೈಸ್ ಮಿನಿಸ್ಟರು ಅಂದರೆ ಇಂತಹವರನ್ನೇ, ಪಾಪ ಏನೂ ಗೊತ್ತಿಲ್ಲದಂಥ ಪ್ರಾಮಾಣಿಕ ವ್ಯಕ್ತಿಗಳನ್ನು ಅಲ್ಲಿಗೆ ಹಾಕಿ, ಅವರ ಹೆಸರಿನಲ್ಲಿ ಯಾರ್ಯಾರೋ ತಿಂದು ಬಿಡುವುದು. ನಾನು ಹೇಳುತ್ತೇನೆ, ನಿಮ್ಮ ಬಗ್ಗೆ ನನಗೆ ಸಂಪೂರ್ಣ ವಿಶ್ವಾಸ ಇದೆ. ಆದರೆ ನಿಜವಾಗಿಯೂ ಶಾಣಪ್ಪನವರೇ ನನಗೆ ವಿಶ್ವಾಸ ಇದೆ, ಇನ್ನು ಎರಡೂ ಮೂರು ತಿಂಗಳಲ್ಲಿ ನೀವು ಈ ಇಲಾಖೆಯೇ ಬೇಡ ಎಂದು ರಾಜೀನಾಮೆ ಕೊಟ್ಟು ಬೇರೆ ಇಲಾಖೆಯನ್ನು ಕೇಳುತ್ತೀರಿ, ಇಲ್ಲದಿದ್ದರೆ ಬರೀ ಎಂ.ಎಲ್.ಎ. ಆಗಿ ಇರುತ್ತೇನೆ, ಈ ಇಲಾಖೆ ಬೇಡ ಎಂದು ಹೇಳುತ್ತೀರಿ. ಏಕೆಂದರೆ ನಿಮಗೆ ಅಲ್ಲಿ ಕೆಲಸ ಮಾಡುವುದಕ್ಕೆ ಬಿಡುತ್ತಾರೋ ಅದು ಸಾಧ್ಯವಿದೆಯೇ?

ಅಧ್ಯಕ್ಷರು : ನೀವು ಅಷ್ಟು ಹೇಳಿದವರು ಯಾರಿಗೆ ಆ ಪೋರ್ಟ್‌ಫೋಲಿಯೋ ಕೊಡಬೇಕು ಎಂಬ ಒಂದು ಸಜೆಷನ್ ಆದರೂ ಕೊಡಬೇಕಲ್ಲಾ, ಆದರಿಂದ ಮುಖ್ಯಮಂತ್ರಿಗಳಿಗೂ ಸಹಾಯವಾಗುತ್ತದೆ.

ಶ್ರೀ ವೈ. ರಾಮಕೃಷ್ಣ : ನಾಣಯ್ಯನವರಿಗೇ ಕೊಡಬೇಕು.

ಅಧ್ಯಕ್ಷರು : ಅಂದರೆ ಅವರು ಅಪ್ರಮಾಣಿಕರು ಎಂದೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಅಕ್ರಮ, ಸಕ್ರಮ ಮಾಡಿದಿರಲ್ಲಾ, ಬೆಂಗಳೂರು ಸುತ್ತಮುತ್ತ ಈ ಬಿಲ್ಡಿಂಗ್ ಕಟ್ಟುವರನ್ನೆಲ್ಲಾ. ಅದೊಂದು ದೊಡ್ಡ ಕಥೆ, ಮಾಡಿದಿರಿ. ಸ್ವಾಮಿ, ತಾವು ಉತ್ತರ ಕೊಡಬೇಕಾದರೆ ಯಾವುದಾದರೂ ಸಮಯದಲ್ಲಿ ಹೇಳಿ. ಇವತ್ತು ಬೆಂಗಳೂರು ಸುತ್ತಮುತ್ತ ಅಕ್ರಮ ಬಿಲ್ಡಿಂಗ್‌ಗಳನ್ನು ಸಕ್ರಮ ಮಾಡಿದಿರಲ್ಲಾ, ಎಷ್ಟು ಕೋಟಿ ರೂಪಾಯಿ ತಮಗೆ ಆದಾಯ ಬಂದಿದೆಯೆಂಬುದನ್ನು ತಾವು ಹೇಳಬೇಕು. ಬೆಂಗಳೂರು ಸುತ್ತಮುತ್ತ ಒಂದು ಎಕರೆ ಜಮೀನನ್ನು ಕನ್ವರ್ಷನ್ ಮಾಡುವುದಕ್ಕೆ ಫೀಸು ಒಂದು ಲಕ್ಷ ರೂಪಾಯಿ. ನಿಮ್ಮ ರಿಜಿಸ್ಟ್ರೇಷನ್ ಫೀ ಬಗ್ಗೆ ನನ್ನ ಹತ್ತಿರ ವಿವರ ಇದೆ. ಆದರೆ ಇವತ್ತು ಕನ್ವರ್ಷನ್ ಫೀ ಎಂದು ಒಂದೊಂದು ಲಕ್ಷ ರೂಪಾಯಿ ಏನು ಹಾಕಿಕೊಂಡು ಬಂದಿದ್ದಾರೆ, ಅಂಕಿ ಅಂಶ ನನಗೆ ಎಲ್ಲೂ ಸಿಗುತ್ತಿಲ್ಲ. ತಾವು ಹುಡುಕಿಕೊಡಿ. ಎಷ್ಟು ಕೋಟಿ ಆ ಬಾಬಿನಲ್ಲಿ ಬಂದಿದೆ? ಎಲ್ಲೆಲ್ಲಿ ಸೋರಿಹೋಗಿದೆ, ಏನೇನು ಇಲ್ಲಿ ನಡೆದಿದೆ, ಎಷ್ಟು ಎಕರೆ ಈ ತರಹ ಕನ್ವರ್ಷನ್ ಮಾಡಿದ್ದೀರಿ, ಅದರ ವಿವರವನ್ನು ತಾವು ದಯಮಾಡಿ ಕೊಡಿ ಸ್ವಾಮಿ, ಸಿಟ್ಟುಮಾಡಬೇಡಿ. ನಾನು ಇಲ್ಲಿ ನಿಂತು ಅನಿವಾರ್ಯವಾಗಿ ಹೇಳಬೇಕಾಗಿದೆ. ನಮ್ಮ

ಹಿಂದಿನ ಮುಖ್ಯಮಂತ್ರಿಗಳು ರಾಜೀನಾಮೆ ಕೊಡುವ ಹಿಂದಿನ ದಿವಸ ಕ್ಯಾಬಿನೆಟ್ ಮೀಟಿಂಗ್ ಬೆಳಗಿನ ಜಾವ ಮೂರು-ನಾಲ್ಕು ಗಂಟೆವರೆಗೂ ಮಾಡಿದರು. ನಾನು ಸುಮ್ಮನೆ ಆಪಾದನೆ ಮಾಡುವುದಿಲ್ಲ, ಕೆಲವು ವಿಷಯಗಳನ್ನು ನಾನು ಹೇಳುತ್ತೇನೆ, ಕೆಲವು ಗೊತ್ತಿಲ್ಲದಿರುವುದನ್ನು ನಿಮ್ಮಲ್ಲಿ ವಿವರ ಕೇಳುತ್ತೇನೆ. ಆ ದಿನ ಸಾವಿರಾರು ಎಕರೆ ಡಿನೋಟಿಫೈ ಮಾಡುವಂಥ ಒಂದು ತೀರ್ಮಾನವನ್ನು ಬೆಳಗಿನ ಜಾವ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡರು ಎಂಬ ಒಂದು ಸುದ್ದಿ ಇದೆ. ನಾನು ನಿಮಗೆ ಕೆಲವು ದಾಖಲೆಗಳನ್ನು ಕೊಡುತ್ತೇನೆ. ಕೆಲವು ಸುದ್ದಿ ಹೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ. ನಾವೆಲ್ಲರೂ ಕ್ಯಾಬಿನೆಟ್‌ನ ಸದಸ್ಯರು. ಅದು ರಾಜೀನಾಮೆ ಕೊಡುವುದಕ್ಕೆ ಒಂದು ದಿವಸಕ್ಕೆ ಮುಂಚೆ ನಾವು ಮಾಡಿದೆವು, ಸಾವಿರಾರು ಎಕರೆ ಜಮೀನನ್ನು ಡಿನೋಟಿಫೈ ಮಾಡುತ್ತಾ ಇರತಕ್ಕಂಥ ಮಾತನ್ನು ಆಡಿದರು. ದಯವಿಟ್ಟು ತಾವು ಜವಾಬ್ದಾರಿ ಸ್ಥಾನದಿಂದ ಮಾತನಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ಬಹುಶಃ ಈ ಮಾತನ್ನು ಆಡಿದಾಗ ನಾವು ಏನು ಹೇಳಬೇಕಾಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ವಿವರಗಳನ್ನು ನಾನು ಕೊಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ದಯವಿಟ್ಟು ಹೇಳುತ್ತೇನೆ. ಬೆಳಗಿನ ಜಾವ ಎರಡು-ಮೂರು ಗಂಟೆವರೆಗೆ ಎಂದು ಹೇಳುತ್ತಾ ಇರತಕ್ಕಂಥ ಸಚಿವ ಸಂಪುಟ ಸಭೆ ಯಾವಾಗಲೂ ನಡೆದಿಲ್ಲ. ಇದು ಒಂದು. ನಿಜ ನಾವು ಸುಮಾರು ಹತ್ತು ಗಂಟೆಯವರೆಗೆ ಸಚಿವಸಂಪುಟ ಸಭೆಯನ್ನು ಒಂದೆರಡು ಸಾರಿ ಮಾಡಿರತಕ್ಕಂಥಾದ್ದು ಉಂಟು. ಬಹುಶಃ ಬೆಳಗಿನ ಜಾವ ಮೂರು-ನಾಲ್ಕು ಗಂಟೆವರೆಗೆ ಎಂದು ಹೇಳಿದಿರಿ, ಅದು Midnight operation ಎಂದು ಹೇಳುತ್ತಾ ಇರತಕ್ಕಂಥ ಭಾವನೆ ನಿಮ್ಮಲ್ಲಿ ಬಂತೋ ಏನೋ. ನಾನು ಏನೂ ಹೇಳುವುದಿಲ್ಲ. ನೀವು ಆಡುತ್ತಾ ಇರತಕ್ಕಂಥ ಮಾತು ನಮಗೆ ಮಾರ್ಗದರ್ಶನ ಆಗಬೇಕಾಗುತ್ತದೆ. ಆ ನಿಟ್ಟಿನಲ್ಲಿ ಆಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಇಲ್ಲಿ ಅವರು ಹೇಳುತ್ತಾರೆ, ರಾತ್ರಿ ಹನ್ನೆರಡು ಗಂಟೆ ಇರಬಹುದು, ಬೆಳಗಿನ ಜಾವದ ವರೆಗೆ ಬೇರೆ ಏನಾದರೂ ಮಾತನಾಡುತ್ತಾ ಕುಳಿತಿರಬಹುದು ಅಥವಾ ನಡೆಯದೇನೆ ಇರಬಹುದು. ನನಗೆ ಬಂದಿರತಕ್ಕಂಥ ಮಾಹಿತಿ ತಪ್ಪಿರಬಹುದು. ಆದರೆ ಒಂದಂತೂ ನಾನು ನಿಮಗೆ ಹೇಳುತ್ತೇನೆ. ಸಾವಿರಾರು ಎಕರೆಯಲ್ಲ, ನೂರಾರು ಎಕರೆ ಎಂದು ಇಟ್ಟುಕೊಳ್ಳಿ. ಸ್ವಾಮಿ, ನಾನು ನಿಮಗೆ ಹೇಳುತ್ತೇನೆ, ಪದ್ಮನಾಭನಗರದಲ್ಲಿ, ಕೆಂಗೇರಿ ಹತ್ತಿರ, ಅನೇಕ ಏರಿಯಾಗಳಲ್ಲಿ ತಾವು ಈ ಒಂದು ಡಿನೋಟಿಫೈ ಮಾಡಿದ್ದೀರಿ. ಯಾವುದೋ ಒಂದು ಉದ್ದೇಶಕ್ಕೋಸ್ಕರ ಈ ಜಮೀನನ್ನು ತೆಗೆದುಕೊಂಡು ಹೋಗಿದ್ದನ್ನು ಜಮೀನುದಾರರಿಗೆ ವಾಪಸ್ಸು ಕೊಟ್ಟಂತೆ ಮಾಡಿ, ಪ್ರಭಾವ ಇರುವಂಥ ಪ್ರಮುಖರಿಗೆ ಆ ಜಮೀನನ್ನು ಕೊಂಡು ಕೊಳ್ಳುವಂತೆ ವ್ಯವಸ್ಥೆಯನ್ನು ಮಾಡಿದ್ದೀರಿ. ಪದ್ಮನಾಭನಗರ, ನೆಲಮಂಗಲದಿಂದ ಕೆಂಗೇರಿ ಈ ಬೈಪಾಸ್ ರೋಡ್ ಮಾಡುತ್ತಿದ್ದೀರಲ್ಲ, ಯಾಕೆ ಸ್ವಾಮಿ ಇದು? ಯಾರನ್ನು ಉದ್ಧಾರ ಮಾಡುವುದಕ್ಕೆ? ಯಾವುದು ಅಲ್ಲಿ ಡಿನೋಟಿಫೈಡ್ ಆಯಿತು? ಯಾರು ಅಷ್ಟೊಂದು ಜಮೀನು ತೆಗೆದುಕೊಂಡಿದ್ದಾರೆ? ಅದರ ವಿವರ ಕೊಡುತ್ತೀರೋ? ಇಲ್ಲೊಂದು ಪತ್ರ ಇದೆ. ನಿಮಗೆ ಓದುತ್ತೇನೆ...

"ಸಿದ್ಧರಾಮಯ್ಯನವರು, ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು ದಿನಾಂಕ 5.6.1996 ... ಪತ್ರದ ಸಂಖ್ಯೆ. ಉನಾಇ, 907, ಎಂ.ಎನ್.ಎ. 94 ಮಾನ್ಯರೇ, ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರ ಹಳ್ಳಿ ಹೋಬಳಿ ಯಡಿಯೂರು ನಾಗಸಂದ್ರ ಗ್ರಾಮದ ಸರ್ವೆನೆಂಬರ್ 24(1)ಎ, 23, 24(1)ಬಿ, 24(2)ಎ, 24(2)ಬಿ, 24(3), ಮತ್ತು 21 ರಲ್ಲಿ ಖಾಲಿ ಇರುವ ಎರಡು ಎಕರೆ ಜಮೀನನ್ನು ಭೂಸ್ವಾಧೀನದಿಂದ ಕೈಬಿಡುವ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ 12.6.95ರ ಸಭೆಯ ನಡವಳಿಕೆಗಳಂತೆ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ದಿನಾಂಕ 14.8.95ರಲ್ಲಿ ತಮ್ಮನ್ನು ಕೋರಿ ಅನೇಕ ನೆನಪೋಲೆಗಳ ಮೂಲಕ ನೆನಪಿಸಲಾಗುತ್ತಿದ್ದರೂ, ಈವರೆಗೂ ತಮ್ಮಿಂದ ವರದಿಯು ಬಂದಿರುವುದಿಲ್ಲ.

ಮಾನ್ಯ ಮುಖ್ಯಮಂತ್ರಿಯವರ ಸಚಿವಾಲಯದಿಂದ ಕಡತವನ್ನು ಸಲ್ಲಿಸುವಂತೆ ನೆನಪೋಲೆಗಳು ಬರುತ್ತಿರುವುದರಿಂದ ತಮ್ಮ ವೈಯಕ್ತಿಕ ಗಮನ ಹರಿಸಿ ಸಂಬಂಧಿಸಿದ ವರದಿಯನ್ನು ಈ ಕೂಡಲೇ ಸರ್ಕಾರಕ್ಕೆ ಕಳುಹಿಸಿಕೊಡಬೇಕಾಗಿ ಕೋರುತ್ತೇನೆ. ಇದು ದಿನಾಂಕ 5.6.1996..

ಸ್ವಾಮಿ, ನೂರು ಎಕರೆಯದ್ದೂ ಕೊಡುತ್ತೇನೆ. ಇದು ಎರಡು ಎಕರೆಯದ್ದು ಹೇಳುತ್ತಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ : ಯಾವುದನ್ನು ಹೇಳುತ್ತೀರಿ, ಅದನ್ನು ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏತಕ್ಕೆ ಅವಸರ ಮಾಡುತ್ತೀರಿ? ಕೊಡಲೇಬೇಕೆಂದರೆ ನನಗೇನಿದೆ? ಇಲ್ಲ ನಾನು ಕೊಡುವುದಿಲ್ಲ. ನಾನು ಕೊಡುವುದಿಲ್ಲ ಸನ್ಮಾನ್ಯ ಅಧ್ಯಕ್ಷರೇ....

ಶ್ರೀ ಎಂ.ಸಿ. ನಾಣಯ್ಯ : ನೂರಾರು ಎಕರೆ, ಸಾವಿರಾರು ಎಕರೆ ಎಂದು ಹೇಳುತ್ತೀರಲ್ಲಾ ದಯವಿಟ್ಟು ವಿಷಯಕ್ಕೆ ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಬರುತ್ತೇನೆ ಎಂದೆ.

ಶ್ರೀ ಎಂ.ಸಿ. ನಾಣಯ್ಯ : ಅವರು ಹೇಳಲಿ ಸ್ವಾಮಿ, ನಾನು ಬೇಡ ಎಂದು ಹೇಳುವುದಿಲ್ಲ, ಎರಡು ಎಕರೆ ಇದ್ದಂಥ ವಿಚಾರ ಹೇಳಿ ನೂರಾರು ಎಕರೆ ಎಂದು ಹೇಳುತ್ತಿದ್ದಾರೆ. ಸ್ಪಷ್ಟವಾಗಿ ಹೇಳಿಬಿಡಿ. ನಾವು ಉತ್ತರ ಹೇಳುತ್ತೇವೆ.

ಅಧ್ಯಕ್ಷರು : ಒಂದು ನಿಮಿಷ ನಾಣಯ್ಯನವರೇ, you are a seasoned parliamentarian. He is on his legs. Let him have his say. you can demolish all this during your defence.

SRI M.C. NANAIAH : My point is that when he is making any allegation against the government, I hope that he has got records. If he has got the records, he can speak on the basis of the records.

MR. SPEAKER : You are aware that any allegation averred, either by the Leader of the Opposition or any other Member failing to get substantiated

with supporting documents, where it meets. You are aware. You are at liberty. You have all the time in the world.

ಶ್ರೀ ಎಂ. ಶ್ರೀನಿವಾಸ್ : ಒಂದು ಸೆಕೆಂಡ್. 19 ಎಕರೆಯದ್ದು ಕೊಡುತ್ತೇನೆ. ಮಾನ್ಯ ಕಾನೂನು ಮಂತ್ರಿಗಳು ಯಾವುದೇ ಸರ್ಕಾರಿ ಜಮೀನು ಒತ್ತುವರಿಯಾಗಿಲ್ಲ. ಮತ್ತೊಂದು ಆಗಿಲ್ಲ ಎಂದು ಹೇಳುತ್ತಿದ್ದರು, ನಗರಾಭಿವೃದ್ಧಿ ಮಂತ್ರಿಗಳು ಆಗಿದ್ದಂಥ, ರೋಷನ್ ಬೇಗ್ ಅವರು, ಆಗಿನ ಮುಖ್ಯಮಂತ್ರಿಗಳಾಗಿದ್ದಂಥ ದೇವೇಗೌಡರು, ರಿಂಗ್‌ರೋಡ್‌ನಲ್ಲಿ ಕರೆದುಕೊಂಡುಹೋಗಿ, 19 ಎಕರೆ ಸರ್ಕಾರಿ ಜಮೀನನ್ನು ವಿಶ್ವಭಾರತಿಯವರು ಒತ್ತುವರಿ ಮಾಡುತ್ತಿರುವುದನ್ನು ನಿಲ್ಲಿಸಿ ಎಂದು ಹೇಳಿ ಬಂದೆ. ಆದರೂ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ? ಹತ್ತೊಂಭತ್ತು ಎಕರೆ ಸರ್ಕಾರದ ಜಮೀನು.

ಅಧ್ಯಕ್ಷರು : ಇದು ಬೇರೆ ಇಶ್ಯು ಆಯಿತು.

ಶ್ರೀ ಎಂ. ನಾರಾಯಣಸ್ವಾಮಿ : ಡಿಮ್ಯಾಂಡ್ ಮೇಲೆ ಮಾತನಾಡುವಾಗ ಇದರ ಬಗ್ಗೆ ಮಾತನಾಡಬಹುದಲ್ಲಾ?

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಶ್ರೀನಿವಾಸ್ : ಸಭಾಧ್ಯಕ್ಷರಿಗೆ ಇಲ್ಲಿ ನಾನು ಬರೆದುಕೊಡುತ್ತಿದ್ದೇನೆ. ಅವರ ಪರ್ಮಿಷನ್ ಅನ್ನು ತೆಗೆದುಕೊಳ್ಳುತ್ತಿದ್ದೇನೆ. ನಮ್ಮ ನಾಯಕರು ಹೇಳಿದ್ದಕ್ಕೆ ನಾಣಯ್ಯನವರು ಹೇಳಿದರಲ್ಲಾ, ಅದರ ಬಗ್ಗೆ ನಾನು ಹೇಳಿದ್ದುದು.

ಅಧ್ಯಕ್ಷರು : ಪ್ರತಿ ಪಕ್ಷದ ನಾಯಕರು ಮುಂದುವರೆಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್, ಸರ್ವೆ ನಂಬರ್ 24(2)ಎ, ವಿಸ್ತೀರ್ಣ ಯಡಿಯೂರು ನಾಗಸಂದ್ರ ಗ್ರಾಮದ ಭೂಸ್ವಾಧೀನತೆಯನ್ನು ಕೈಬಿಡುವ ಸಂಬಂಧವಾಗಿ ಎರಡನೇಯದ್ದು ವಸತಿ ಮತ್ತು ನಗರಾಭಿವೃದ್ಧಿ ಕಚೇರಿ ಪತ್ರ ಸಂಖ್ಯೆ 902, ಎಂ..ಎನ್.ಎಕ್ಸ್, 94 ತಾರೀಕು 20-10-95...

"ಈ ವಿಷಯದಲ್ಲಿ ನಮೂದಿಸಿರುವ ಸರ್ವೆ ನಂಬರ್ 24(2)ಎ, ಯಡಿಯೂರು ನಾಗಸಂದ್ರ. ಗ್ರಾಮದ ಭೂಸ್ವಾಧೀನತೆಯ ವಿವರಗಳು ಈ ಕಚೇರಿ ದಾಖಲೆಗಳ ರೀತ್ಯಾ ಕೆಳಕಂಡಂತೆ ಇರುತ್ತದೆ. ಗ್ರಾಮ : ಯಡಿಯೂರು ನಾಗಸಂದ್ರ ಗ್ರಾಮ ಸರ್ವೆ ನಂಬರ್ 24(2)ಎ, ವಿಸ್ತೀರ್ಮ 3ಎಕರೆ 20ಗುಂಟೆ. ಖಾತೆದಾರರು ನರಸಿಂಹಯ್ಯ ಬಿನ್ ಬೋರಯ್ಯ. ಸ್ವಾಧೀನ ಪಡಿಸಿಕೊಳ್ಳಲು ಯೋಚಿಸಿದ ಉದ್ದೇಶ : ಬನಶಂಕರಿ - ಮೈಸೂರು ರಸ್ತೆ ಎರಡನೇ ಹಂತಕ್ಕಾಗಿ. ಪ್ರಾರಂಭದ ಪ್ರಕಟಣೆ :

'ಈ ಮೇಲೆ ವಿವರಿಸಿದ ಪ್ರಾಧಿಕಾರವು ಭೂಸ್ವಾಧೀನ ಕಾಯದೆಯಂತೆ ಸದರಿ ಭೂಮಿಯನ್ನು ಪೂರ್ಣವಾಗಿ ದಿನಾಂಕ 28.6.67ರಲ್ಲಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು ಈಗ • ಸದರಿ ಭೂಮಿಯನ್ನು ಮನವಿದಾರರಾದ ಶ್ರೀ ಎನ್. ನರಸಪ್ಪ• ರವರ ಮನವಿಯ ಅನುಸಾರವಾಗಿ ಭೂಸ್ವಾಧೀನತೆಯನ್ನು ಕೈಬಿಡುವ ಪ್ರಶ್ನೆ ಭೂಸ್ವಾಧೀನ ಕಾಯಿದೆ 48(6)ರ ರೀತಿಯಲ್ಲಿ ಉದ್ಭವಿಸುವುದಿಲ್ಲ. ಅದು 28 ವರ್ಷಗಳ [illegible] ಪ್ರಕರಣಕ್ಕೆ ಜೀವ ನೀಡುತ್ತಿರುವುದು ಪ್ರಾಧಿಕಾರದ ಉದ್ದೇಶಿತ ಯೋಜ[illegible] ಕೈಗೊಳ್ಳುವುದನ್ನು ತಡೆಹಿಡಿಯುವ ಪ್ರಯತ್ನಗಳಾಗಿದೆಯಲ್ಲದೆ ಇದರಿಂದ ಪ್ರಾ[illegible]ಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ. ಇದರ ಜೊತೆಗೆ ಇಲ್ಲಿ ಮು[illegible]ವಾಗಿ

ನಮೂದಿಸಬೇಕಾದ ಅಂಶವೆಂದರೆ ಮನವಿದಾರ ಎಂ. ನರಸಪ್ಪನವರಿಗೂ ಈ ಸರ್ವೆ ನಂಬರ್ 24(2)ಎ ವರೆಗೂ ಇದರ ಭಾಗಾಂಶದ ಯಾವ ವಿಸ್ತೀರ್ಣದವರಿಗೂ ಇವರು ಮಾಹಿತಿದಾರರಾಗಿರುವುದಿಲ್ಲ. ಅಲ್ಲದೆ ಯಾವ ಕಾರಣದಿಂದಲೂ ಇವರಿಗೆ ಜಮೀನಿನ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕಾನೂನು ಬದ್ಧವಾದ ವ್ಯಕ್ತಿಯಾಗಿರುವುದಿಲ್ಲ.....

ಅಂದರೆ ಸರ್ವೆ ನಂ. 24-3ರ ಮೂಲ ಖಾತೆದಾರರಾದ ನರಸಿಂಹಯ್ಯ ಬಿನ್,. ಕದಾರಿ ಎಂಬುವರು ವಂಶಸ್ಥರಾಗಿ ಸದರಿ ನರಸಪ್ಪನವರು ಇಲ್ಲಿ ಪ್ರತಿನಿಧಿಸಿರುವುದು ಇದೇ ಸಮಯದಲ್ಲಿ. ಆದರೆ, ಸರ್ವೆ ನಂ. 24-2ಎ ಮೂಲಕ ಖಾತೆದಾರರಾದ ನರಸಿಂಹಯ್ಯ ಬಿನ್ ಬೋರಯ್ಯ ಎಂಬುವರ ವಂಶಸ್ಥರಾಗಿಯೂ ಇದೇ ಸಿ.ಎನ್. ನರಸಪ್ಪನವರು ಪ್ರತಿನಿಧಿಸುತ್ತಿರುವುದು ಇಲ್ಲಿ ನಿರ್ವಿವಾದವಾಗಿ ಇವರು ತಮ್ಮದಲ್ಲದ ಜಾಗವನ್ನು ತಮ್ಮದೆಂದು ಹೇಳಿಕೊಂಡು ಮೋಸ, ವಂಚನೆ ಹಾಗೂ ನಕಲಿ ದಾಖಲೆಗಳ ಸಹಾಯದಿಂದ ಪ್ರಾಧಿಕಾರದ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಜಾಗವನ್ನು ಲಪಟಾಯಿಸಲು ಸಂಚು ಮಾಡಿ, ಸರ್ಕಾರಕ್ಕೆ ಈ ಸುಳ್ಳು ಮಾಹಿತಿಯ ಮನವಿ ನೀಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಎಂದು ಈ ಮಾತನ್ನು ವಿಶೇಷ ಭೂಸ್ವಾಧೀನಧಿಕಾರಿ ಹೇಳುತ್ತಾನೆ. ಆದರೆ, ಈ ಜಮೀನನ್ನು ಅವನಿಗೆ ಕೊಡುವಂಥ ವ್ಯವಸ್ಥೆ ಮಾಡಿದಿರಿ.

ಈ ವಿವರಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಸರ್ವೆ ನಂ. 48 ನಾಗರಬಾವಿ ಗ್ರಾಮದ ಭೂಸ್ವಾಧೀನ ಪರಿಹಾರದ ಹಣ ಪಡೆಯುವಲ್ಲಿ ಸುಳ್ಳು ದಾಖಲೆ ಮತ್ತು ಮೋಸ ವಂಚನೆಯಿಂದ ಹಣ ಪಡೆದಿರುವ [illegible] ಕೆ.ಎಂ. ಲಿಂಗಯ್ಯ ಮತ್ತಿತರ 7 ಜನರ ಬಗ್ಗೆ ಮಾಹಿತಿ ಸಂಗ್ರಹಿಸುವ ಬಗ್ಗೆ [illegible] ಬೆಂಗಳೂರು ಪ್ರಾಧಿಕಾರದಿಂದ ಪತ್ರಬಂದಿದೆ. ಅದರ ವಿವರ ತಮಗೆ ಕಳುಹಿಸಿಕೊಡುತ್ತೇನೆ. ಸ್ವಾಮಿ ತಮಗೆ ಇಂತಹ ನೂರು ಪ್ರಕರಣಗಳನ್ನು ಕೊಡುತ್ತೇನೆ. ನನಗೆ ಒಂದೇ ಒಂದು ನಿಮ್ಮಿಂದ ಪ್ರಾಮಾಣಿಕವಾಗಿ ತಾವುಹೇಳುವುದಾದರೆ, ಒಂದೇ ಒಂದು ದಾಖಲೆ ಬೇಕು. ಇಲ್ಲಿ ನಾಗರೀಕ ಸೌಲಭ್ಯ ನಿವೇಶನ, ವಸಂತನಗರ ಪಾಪ್ಯುಲರ್ ಆಟೋ ಗ್ಯಾರೇಜಿಗೆ 30 ವರ್ಷಗಳ ಗುತ್ತಿಗೆಯನ್ನು ಕಾನೂನು ಜಾಹಿರವಾಗಿ ಪರಭಾರೆ ಮಾಡಿರುವ ಬಗ್ಗೆ. 28.2.1959ರಲ್ಲಿ, ಅಂದಿನ ಸಿ.ಐ.ಟಿ.ಬಿ, 80 ಫ್ಲಸ್ 120, 95 x 70 ಇಷ್ಟು ದೊಡ್ಡ ನೈಟನ್ನು ವರ್ಷಕ್ಕೆ 48 ರೂ.ಗಳಂತೆ ವಾಹನಗಳ ದುರಸ್ತಿ ಉದ್ದೇಶಕ್ಕೆ 30 ವರ್ಷಗಳ ಕಾಲ ಗುತ್ತಿಗೆ ಮಾಡಲಾಗಿದೆ. ಗುತ್ತಿಗೆ ಅವಧಿ 28.2.89ಕ್ಕೆ ಮುಗಿದುಹೋಯಿತು. 21.9.96ರಂದು ಮುಖ್ಯಮಂತ್ರಿಗಳಿಗೆ ಲೋಕನಾಥರವರು ಮನವಿ ನೀಡಿ,

ಸದರಿ ನಿವೇಶನವನ್ನು ತಮ್ಮ ಹೆಸರಿಗೆ ಮಾಡಿಕೊಡಬೇಕೆಂದು ಅರ್ಜಿಯನ್ನು ಕೊಡುತ್ತಾರೆ. 20.10.76ರ ಆದೇಶದಲ್ಲಿ ಬಿಡಿ ನಿವೇಶನವೆಂದು ಪರಿಗಣಿಸಿ, ಚದರ ಗಜಕ್ಕೆ 12 ರೂಪಾಯಿಗಳಂತೆ ಮಂಜೂರ್ಮಾಡಿ ಆದೇಶ ನೀಡಿದರು. ಸ್ವಾಮಿ, ಈ ಸಿ.ಎ. ನಿವೇಶನಗಳನ್ನು ಕೇವಲ ಧಾರ್ಮಿಕ ಸಾಮಾಜಿಕ ಸಂಸ್ಥೆಗಳಿಗೆ ಮತ್ತು ಶಾಲಾ ಕಟ್ಟಡ ಮೈದಾನಗಳಿಗೆ ಕೊಡಬೇಕು.• ಅಕ್ಟೋಬರ್ 1995ರಲ್ಲಿ ಪತ್ರಿಕೆಯಲ್ಲಿ ಬಂದನಂತರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಸ್.ಪಿ.ಯವರು ದಾಖಲೆಗಳ ನೈಜತೆಯನ್ನು ಪರೀಕ್ಷಿಸುವುದರಿಂದ, ಈ ಸಂದೇಹಗಳನ್ನು ಪರಿಹರಿಸುವವರೆಗೆ ನಕ್ಷೆಯನ್ನು ಅಮಾನತ್ತಿನಲ್ಲಿಡಬೇಕೆಂದು ಹೇಳಿದರು. ಈ ಬಗ್ಗೆ ಈ ತನಿಖೆಯನ್ನು ನಿಧಾನ ಮಾಡುತ್ತಿದ್ದಾರೆ. ಇವರು ಈಗಲೇ 5ನೇ ಅಂತಸ್ತನ್ನು ಕಟ್ಟಿ ಮುಗಿಸುವಂತಾದ್ದು. ನೀವು ಈ ಬಿಲ್ಡಿಂಗನ್ನು ಲೀಸ್‌ಗೆ ಕೊಟ್ಟಿದ್ದಿರಿ. ಅವನ ಲೀಸ್ ಅವಧಿ ಮುಗಿಯಿತು. ನಿಮ್ಮ

ವಶಕ್ಕೆ ತೆಗೆದುಕೊಳ್ಳಬೇಕು. ಆದರೆ, ಅವನಿಗೇ ಕೊಟ್ಟಿಬಿಟ್ಟಿದ್ದೀರಿ. ಇವತ್ತು ಅದು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಂಥಾದ್ದು. ನಾನು ಏತಕ್ಕೆ ಈ ವಿವರಗಳನ್ನು ಕೊಡುತ್ತಿದ್ದೇನೆಂದರೆ, ಯಾವ ರೀತಿ ರಾಜ್ಯದ ಹಿತವನ್ನು ಬಿಟ್ಟು ಈ ಒಂದು ಲೂಟಿ ಮಾಡುವಂಥ ಹಗಲು ದರೋಡೆಗೆ ಪರೋಕ್ಷವಾಗಿ ಬೆಂಬಲವನ್ನು ಕೊಡುತ್ತಿದ್ದೀರಿ ಎನ್ನುವುದಕ್ಕೆ ಕೆಲವು ದಾಖಲೆಗಳನ್ನು ಕೊಟ್ಟಿದ್ದೇನೆ. ಎಷ್ಟು ಎಕರೆ ಎಂದು ನೀವು ಹೇಳಿ, 100 ಎಕರೆ ಅಲ್ಲದಿದ್ದರೆ, 50-70 ಎಕರೆ ಇರಬಹುದು, ಎಲ್ಲವನ್ನೂ ನಾನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಂ.ಸಿ. ನಾಣಯ್ಯ : ವಿರೋಧಪಕ್ಷದ ನಾಯಕರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಸ್ಥಾನಕ್ಕೆ ರಾಜೀನಾಮೆ ಕೊಡುವುದಕ್ಕೆ ಒಂದು ದಿವಸಕ್ಕೆ ಮುಂಚೆ ಬೆಳಗಿನ ಜಾವ ಸುಮಾರು 2-3 ಗಂಟೆ, ಅಪರರಾತ್ರಿಯಲ್ಲಿ ಸಾವಿರಾರು ಎಕರೆ ಜಮೀನುಗಳನ್ನು ಡಿನೋಟಿಫೈ ಮಾಡಿ ಕೊಟ್ಟಿದ್ದಾರೆ. ಸಾವಿರಾರು ಎಂಬುದನ್ನು ನೂರಾರು ಎಂದು ತಾವು ತಿದ್ದಿಕೊಂಡಿರಿ. ಆಯಿತು, ನೂರಾರು ಆದರೆ, ನೂರಾರು, ನೂರಾರು ಎಂದರೆ, ನೂರಕ್ಕಿಂತ ಜಾಸ್ತಿ ತಾನೇ ತಾವು ದಯವಿಟ್ಟೆ ಈ ಒಂದು ಗಂಭೀರವಾದಂಥ ಆಪಾದನೆ ಮಾಡಿದ್ದೀರಿ. ತಾವು ಇದನ್ನು ಸಾಬೀತು ಮಾಡಬೇಕು. ಸಾಬೀತು ಮಾಡುವುದಕ್ಕಾಗಲಿಲ್ಲವೆಂದರೆ, ತಾವು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಬೇಕು. ಬಹುಶಃ ಈ ತರಹದ ಸಾಬೀತು ಮಾಡುವುದಕ್ಕಾಗದೇ ಇರತಕ್ಕ ಆರೋಪಗಳನ್ನು ಮಾಡಿ, ಎಲ್ಲೋ ಒಂದು ಕಡೆ ರಾಜಕೀಯ ಮಾಡಲಿಕ್ಕ ಇರತಕ್ಕ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದೀರಿ. ಏಕೆಂದರೆ ನೀವು ಜವಾಬ್ದಾರಿಸ್ಥಾನದಿಂದ ಮಾತನಾಡುತ್ತೀರಿ. ನೀವು ಖಂಡಿತವಾಗಿಯೂ ಜವಾಬ್ದಾರಿ ಸ್ಥಾನದಿಂದ ಮಾತನಾಡುತ್ತೀರಿ. ನೀವು ಎತ್ತಿರತಕ್ಕಂಥಾದ್ದರಲ್ಲಿ ಯಾವುದೋ ಎರಡು ಎಕರೆ ಜಮೀನಿಗೆ ಸಂಬಂಧಪಟ್ಟ ಹಾಗೆ ಹೇಳಿದಿರಿ. ಅದಕ್ಕೆ ದಾಖಲೆಗಳೂ ಇರಬಹುದು. ಬಾಕಿ ಇರತಕ್ಕ ಎಲ್ಲವೂ ಕೂಡ,

ನೂರಾರು ಎಕರೆಯನ್ನು ಡಿ-ನೋಟಿಫೈ ಮಾಡಿದ್ದಾರೆ. ಎಂದು ತಾವು ಹೇಳುವುದಾದರೆ ಸಭಾಧ್ಯಕ್ಷರೇ, ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸರ್ಕಾರ ನೂರಾರು ಎಕರೆಯನ್ನು ಡಿ-ನೋಟಿಫೈ ಮಾಡಿದ್ದಾರೆಂದು ಹೇಳತಕ್ಕಂತಾದ್ದನ್ನು ಸರ್ಕಾರದ ವತಿಯಿಂದ ಸ್ಪಷ್ಟವಾಗಿ ನಿರಾಕರಣೆ ಮಾಡುತ್ತೇವೆ. ಡಿ-ನೋಟಿಫೈ ಮಾಡಿರುವುದು ನೂರಾರು ಎಕರೆ ಎಂದು ಅವರು ಹೇಳಿದ್ದಾರೆ. ಇದನ್ನು ಅವರು ಸಾಬೀತು ಮಾಡಬೇಕಾಗಿರತಕ್ಕ ಜವಾಬ್ದಾರಿಯನ್ನು ವಿರೋಧಪಕ್ಷದ ನಾಯಕರು ತೆಗೆದುಕೊಳ್ಳಬೇಕಾಗುತ್ತದೆ. ಕಾರಣ, ಅವರು ಮಾಡಲಿ. ಅವಕಾಶ ಇಲ್ಲ, ಆದರೂ ಈಗ ಹೇಳಬೇಕಾಗುತ್ತದೆ.

(ಗೊಂದಲ)

SRI M.C. NANAIAH : We deny it in total terms. That is for the Leader of the Opposition to prove it.

ಶ್ರೀನಿವಾಸ್‌ಅವರೇ ನನಗೆ ಗೊತ್ತಿದೆ ನೀವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿದ್ದಿರಿ. ನೀವು, ನಮ್ಮ ಜೊತೆಯಲ್ಲಿದ್ದಿರಿ.

ಶ್ರೀ ಎಂ. ಶ್ರೀನಿವಾಸ್ : ನೀವು ಕ್ರಮ ತೆಗೆದುಕೊಳ್ಳುತ್ತೀರೋ? ನೀವು ಕ್ರಮ ತೆಗೆದು ಕೊಳ್ಳಲಿಲ್ಲವೆಂದರೆ, ನಿಮಗೂ, ನಮಗೂ ಸವಾಲು ಹಾಕುತ್ತಾರೆಂದು, ವಿಧಾನ ಸೌಧದಲ್ಲಿ .....

ಶ್ರೀ ಎಂ.ಸಿ. ನಾಣಯ್ಯ : ನಾನೂ ಕೂಡ ವಿರೋಧಪಕ್ಷದಲ್ಲಿದ್ದಾಗ ಬೇಕಾದಷ್ಟು ಮಾಡಿದ್ದೇನೆ. ಹೇಳುತ್ತೇನೆ ಕೇಳಿ.

ಶ್ರೀ ಎಂ. ಶ್ರೀನಿವಾಸ್ : ಆ ಕಾಲದಲ್ಲಿ, ರಾಮಕೃಷ್ಣ ಹೆಗಡೆ ಕಾಲದಲ್ಲಿ ಡಿ-ನೋಟಿಫಿಕೇಷನ್ ಮಾಡಿದ್ದು, ಇಲ್ಲ ಎಂದು ಹೇಳುತ್ತಾ ಇಲ್ಲ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ನಿಮಗೆ ಗೊತ್ತಿದೆ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ಒಂದು ಐವತ್ತು ಕೊಡಲೇ...

ಶ್ರೀ ಸಿ. ಭೈರೇಗೌಡ : ನಿಮ್ಮ ಕಾಲದಲ್ಲಿ ಏನೇನು ಮಾಡಿದ್ದೀರಿ, ಅದನ್ನು ಜ್ಞಾಪಕದಲ್ಲಿಟ್ಟು ಕೊಂಡಿರಿ.

ಶ್ರೀ ಎಂ. ಶ್ರೀನಿವಾಸ್ : ನಮ್ಮ ಕಾಲದಲ್ಲಿ ಏನಾದರೂ ಒಂದು ಮಾಡಿದ್ದರೆ, ಆ ತಪ್ಪನ್ನು ನೀವು ಈ ವಿಧಾನ ಸೌಧದಲ್ಲಿ ತೋರಿಸಿದರೆ ಈಗಲೇ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಹಾಗೆಯೇ ನೀವು ಹೋಗುತ್ತೀರಾ?

ಶ್ರೀ ಎಂ.ಸಿ. ನಾಣಯ್ಯ : ಬಿ.ಡಿ.ಎ. ಬಗ್ಗೆ ಅವರಿಗೆ ತುಂಬಾ ಮಾಹಿತಿ ಇದೆ. ಏಕೆಂದರೆ ಹಿಂದೆ ಅವರು ಬಿ ಡಿ ಎ ಸದಸ್ಯರಾಗಿದ್ದರು. ಬಿ.ಡಿ.ಎ. ಜಮೀನುಗಳ ಡಿ-ನೋಟಿಫೈ ಆಗತಕ್ಕಂತಾದ್ದರ ಬಗ್ಗೆ ಶ್ರೀನಿವಾಸ್‌ರವರಿಗೆ ತುಂಬಾ ಮಾಹಿತಿ ಇದೆ. ಆ ಮಾಹಿತಿಗಳನ್ನೆಲ್ಲಾ ಈ ಸದನದಲ್ಲಿ ಇಡಲಿ.

ಶ್ರೀ ಎಂ. ಶ್ರೀನಿವಾಸ್ : ಬಿ ಡಿ ಎ ಪಾಪರ್ ಆಗಿತ್ತು. ಯಾವತ್ತು 1983 ರಿಂದ .....

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ನಾನು ಹೇಳುವುದನ್ನು ಕೇಳಿ. ಶ್ರೀಮಾನ್ ಶ್ರೀನಿವಾಸ್‌ರವರು ಬಿ ಡಿ ಎ ಸದಸ್ಯರಾಗಿದ್ದರು. ನಮ್ಮ ಪಕ್ಷದಲ್ಲೇ ಇದ್ದರು. ನಾನು ವಿರೋಧಪಕ್ಷದಲ್ಲಿದ್ದಾಗಲೂ ಕೂಡ ನನ್ನ ಜೊತೆಯಲ್ಲಿ ಬಂದು ಹಲವಾರು ವಿಚಾರಗಳನ್ನು ಎತ್ತಿರತಕ್ಕಂತಾದ್ದು ಬಹುಶಃ ಅವರ ಗಮನಕ್ಕೆ ಬಂದಿರಬಹುದೆಂದು ಕಾಣುತ್ತದೆ. ಬಿ ಡಿ ಎ ಜಮೀನುಗಳು ಅಕ್ವೈರ್ ಆಗುವುದು.

ಡಿ-ನೋಟೀ ಫೈ ಆಗುವುದು, ಡಿ-ನೋಟಿಫೈ ಆದ ಮೇಲೆ, ಯಾರಿಗೆ ಹೋಗಬೇಕು, ಯಾರಿಗೆ ಬರಬೇಕು ಎನ್ನುವುದರ ಬಗ್ಗೆ ಶ್ರೀನಿವಾಸ್‌ರವರ ಹತ್ತಿರ ತುಂಬಾ ಮಾಹಿತಿ ಇದೆ. ಅದನ್ನು ನಾನು• ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆ ಮಾಹಿತಿಗಳೆಲ್ಲವನ್ನೂ ಈ ಸದನದ ಮುಂದೆ ಇಟ್ಟರೆ, ನೀವು ಬಿಡಿಎ ಜಮೀನುಗಳ ರಕ್ಷಣೆಗೋಸ್ಕರ ಯಾವ ಹೋರಾಟ ಮಾಡಿಕೊಂಡು ಬಂದಿದ್ದೀರಿ, ಹಲವಾರು ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದೀರಲ್ಲಾ, ಎಲ್ಲವನ್ನೂ ಈ ಸದನದಲ್ಲಿಟ್ಟರೆ, ಈ ಬಿ ಡಿ ಎ ಗೂ ಮತ್ತು ಬೆಂಗಳೂರು ನಗರಕ್ಕೂ ಬಹಳ ಕೆಲಸ ಮಾಡಿದ ಹಾಗೆ ಆಗುತ್ತದೆ.

ಶ್ರೀ ಎಂ. ಶ್ರೀನಿವಾಸ್ : ನಾನು ಈ ಸದನದಲ್ಲಿ ಯಾವಾಗಲೂ ಇಲ್ಲದೇ ಇರುವುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಬಿ ಡಿ ಎ ಬಗ್ಗೆ ನೀವು ಹೇಳಿದಿರಿ. 1983 ರಲ್ಲಿ ನಾನು ಜನತಾ ಸರ್ಕಾರದಲ್ಲಿದ್ದೆ. 1982 ರಲ್ಲಿ ಬಿ.ಡಿ.ಎ. ಲಾಸ್ ಆಗಿತ್ತು. 1983 ರಿಂದ 1989ರ ವರೆಗೆ ನಾನು ಬಿ.ಡಿ.ಎ. ಸದಸ್ಯನಾಗಿದ್ದೆ. ಇಡೀ ಭಾರತ ದೇಶದಲ್ಲಿ ರೈತರ ಬಗ್ಗೆ ಬಹಳ ಹೇಳಿದರು. ಯಾರೂ ಮಾಡಿಲ್ಲ. ಅವತ್ತಿನದಿವಸ ರಾಮಕೃಷ್ಣ ಹೆಗಡೆಯವರ ಹತ್ತಿರ ರೈತರಿಗೆ ಒಂದು ಎಕರೆಗೆ ಒಂದು ಸೈಟು ಕೊಡಬೇಕೆಂದು, ಇನ್‌ಸೆಂಟೀವ್ ಆಗಿ ತೆಗೆದುಕೊಂಡು ಮಾಡಿದವನು ನಾನು. ಅವತ್ತು 75 ಸಾವಿರ ಸೈಟನ್ನು ತೆಗೆದುಕೊಂಡೆವು, ಮಾಡಿದೆವು. ಬಿ ಡಿ ಗೆ ನೂರು ಕೋಟಿ ರೂಪಾಯಿ ಲಾಭ ಬಂತು. ಅಲ್ಲಿ ಕೃಷ್ಣಪ್ಪನವರೇ ಇರಬಹುದು. ಇನ್ನೂ ಬಹಳ ಜನ ಇದ್ದಾರೆ. ನೀವು 18 ತಿಂಗಳಿಂದ ನೂರು ಸೈಟುಮಾಡಿದ್ದೀರಾ? ನಾವು 1983 ರಿಂದ 1989ರೊಳಗೆ 75 ಸಾವಿರ ಸೈಟು ಮಾಡಿದೆವು. ನೀವು ಬಂದು 18 ತಿಂಗಳಾಯಿತು. ಒಂದು ನೂರು ಸೈಟು ಮಾಡಿದ್ದೀರಾ ತೋರಿಸಿ. ಆಗ ಡಿ-ನೋಟಿಫಿಕೇಷನ್ ಮಾಡಿದೆವು. ಮುಖ್ಯಮಂತ್ರಿಗಳ ಒತ್ತಡ ಬಂದಾಗ, ಬಿ.ಡಿ.ಎ. ಅಕ್ವಿಸಿಷನ್ ಬಂದಾಗ, ಮುಖ್ಯಮಂತ್ರಿಗಳು ಹೇಳಿದ ಮೇಲೆ, ಡಿ-ನೋಟಿಫಿಕೇಷನ್ ಮಾಡಿದ್ದೇವೆ, ಇಲ್ಲವೆಂದು ನಾನು ಹೇಳುವುದಿಲ್ಲ. ನಾನು ಅದನ್ನು ಮುಚ್ಚಿಡುತ್ತಾ ಇಲ್ಲವಲ್ಲಾ.

11.50 ಎ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಸರ್ ಸಿ ವಿ ರಾಮನ್ ನಗರದಲ್ಲಿ ಡಿಫೆನ್ಸ್ ಇಲಾಖೆಯವರಿಗೆ 94 ಎಕರೆ ಜಮೀನನ್ನು ಕೊಟ್ಟಿದ್ದೀರಿ. ಅದರಲ್ಲಿ ಡೀನೋಟಿಫೈ ಮಾಡಿಲ್ಲವೇ? ಡಿ-ನೋಟಿಫೈ ಮಾಡುವುದಕ್ಕೆ ಪ್ರೊಪೋಸಲ್ ಕಳುಹಿಸಿಲ್ಲವೇ? 23 ಎಕರೆ ಜಮೀನು ಡಿ-ನೋಟಿಫೈ ಆಗಿಲ್ಲ? ಸ್ವಾಮಿ, ಒಂದು ಕೆಲಸ ಮಾಡಿ. ನಾನು ಇವತ್ತು ಈ ಎರಡು ಮತ್ರ ಸ್ಯಾಂಪಲ್ ಆಗಿ ಕೊಡುತ್ತಿದ್ದೇನೆ. ಜವಾಬ್ದಾರಿ ಸ್ಥಾನದಲ್ಲಿ ನಿಂತು ಮಾತನಾಡಿದ್ದೇನೆ. ಸರ್.ಸಿ.ವಿ. ರಾಮನ್ ನಗರದ ಡಿಫೆನ್ಸ್ ಇಲಾಖೆಗೆ ಸೇರಿದ 94 ಎಕರೆ ಜಮೀನಿನಲ್ಲಿ 23 ಎಕರೆ ಡಿ-ನೋಟಿಫೈ ಆಗಿದೆ ಇನ್ನು ಉಳಿದಿರುವಂತಾದ್ದನ್ನು ಮಾಡುವುದಕ್ಕೆ ಹೊರಟಿದ್ದೀರಿ?

ಇಲ್ಲ ಅಂದರೆ ಇಲ್ಲ ಎಂದು ಹೇಳಿ. ಅಥವಾ ನೀವು ಉತ್ತರ ಕೊಡಬೇಕಾದರೆ ದಾಖಲೆಗಳನ್ನು ತೆಗೆಸಿ ನೋಡಿ. ನಿಮಗೆ ನೂರು ಎಕರೆ ಬೇಕಲ್ಲಾ. ನಾನು ನಿಮಗೆ ವಿವರ ಕಳುಹಿಸಿಕೊಡುತ್ತೇನೆ. ಆದರೆ ಇವತ್ತು ಇರುವ ಪ್ರಶ್ನೆ ಏನೆಂದರೆ ಒಬ್ಬ ಪ್ರತಿಪಕ್ಷದ ನಾಯಕನಾಗಿ ಡಿ-ನೋಟಿಫೈ ಅನ್ನು ತಾವು ಅಧಿಕಾರಕ್ಕೆ ಬಂದ ಮೇಲೆ ಯಾವ್ಯಾವುದು ಮಾಡಿದ್ದೀರಿ ಎಂದು ನಾನು ವಿವರ ಕೇಳಿದರೆ 1-8-96ರಂದು ನಿಮ್ಮ ಬಿ.ಡಿ.ಎ. ಕಮೀಷನರ್ ನನಗೆ ಪತ್ರ ಬರೆಯುತ್ತಾರೆ ಮಂತ್ರಿಗಳಿಗೆ ಕಳುಹಿಸಿ ಕೊಟ್ಟಿದ್ದೇನೆ ದಾಖಲೆಗಳನ್ನು ಕಳುಹಿಸಿಕೊಡುವುದಕ್ಕೋಸ್ಕರ ಎಂದು ಏಕೆ ನಿಮ್ಮ ಮಂತ್ರಿಗಳು ಕಳುಹಿಸಿ ಕೊಡುವುದಿಲ್ಲ? ಏಕೆ ಮುಚ್ಚಿಟ್ಟಿದ್ದೀರಿ? ನಿನ್ನೆ ಪ್ರಶ್ನೆ ಕೇಳಬೇಕಾದರೆ ನಾನು ನಿಮ್ಮ ಮಂತ್ರಿಗಳನ್ನು ಕೇಳಿದೆ. ನನಗೆ ಬಂದಿರುವ ಕೆಲವು ಮಾಹಿತಿಗಳಿಗೆ ನಾನು ಅಧಿಕೃತವಾದ ದಾಖಲೆಗಳನ್ನು ಇಟ್ಟುಕೊಂಡು ನೀವು ಅಧಿಕಾರಕ್ಕೆ ಬಂದ ಮೇಲೆ ಈ ರೀತಿ ನೂರಾರು ಎಕರೆಯೋ ಅಥವಾ ಸಾವಿರಾರು ಎಕರೆಯೋ ಯಾವುದನ್ನು ಡಿ-ನೋಟಿಫೈ ಮಾಡಿದ್ದೀವೋ ಯಾವುದಾದರೊಂದು ಪರ್ಟಿಕ್ಯುಲರ್ ಪರ್ಸನ್‌ಗೆ ಅಕ್ವೈರ್ ಮಾಡಿಕೊಂಡ ಮೇಲೆ ಅದನ್ನು ಡಿ-ನೋಟಿಫೈ ಮಾಡಿದಂತೆ ಮಾಡಿ ಯಾರೋ ಒಬ್ಬ ಪ್ರಭಾವಿ ವ್ಯಕ್ತಿಗಳು ಶಾಮೀಲಾಗಿ ನೋಟಿಫೈ ಮಾಡುವುದಕ್ಕೆ ಮುಂದೆಯೇ ಪರಸ್ಪರ ಅಗ್ರಿಮೆಂಟ್

ಮಾಡಿಕೊಂಡು ಒಂದೊಂದು ಎಕರೆ ಜಮೀನು ಕೋಟಿ ಗಟ್ಟಲೆ ಬೆಲೆ ಬಾಳುವಂತಹ ಜಮೀನುಗಳನ್ನು ಲೂಟಿ ಮಾಡುವಂತಹ ಹಗಲು ದರೋಡೆ ಇವತ್ತು ನಡೆಯುತ್ತಿದೆ. ನನ್ನ ಅಂಕಿಅಂಶಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು ನೀವು ಸರಿಯಾದ ಮಾಹಿತಿ ಕೊಡಿ. ಯಡಿಯೂರಪ್ಪನವರೇ,

ನಾವು ಅಧಿಕಾರಕ್ಕೆ ಬಂದ ಮೇಲೆ ಇಂಥಿಂಥಾದ್ದು ಡಿ-ನೋಟಿಫೈ ಮಾಡಿದ್ದೇವೆ. ಈ ಉದ್ದೇಶದಿಂದ ಮಾಡಿದ್ದೇವೆ. ಎಂದು ನೀವು ಅಡ್ರೆಸ್ ಕೊಟ್ಟಾಗ ಯಾರು, ಯಾರಿಂದ, ಯಾರಿಗೋಸ್ಕರ ಮಾಡಿದ್ದೀರಾ ಎಂಬುದೆಲ್ಲಾ ಬಣ್ಣ ಬಯಲಾಗುತ್ತದೆ. ಯಾವ ಬಿ.ಡಿ.ಎ. ದಿಂದ ಯಾರು ಸುಮಾರು 85 ರಿಂದ 90 ಸಾವಿರ ಜನ ಬಡವರು ಅರ್ಜಿಯನ್ನು ಹಾಕಿದ್ದಾರೋ ಅವರಿಗೆ ನಿವೇಶನ ಕೊಡುವುದಕ್ಕೆ ತಾವು ಸಿದ್ಧರಿಲ್ಲ. ಆದರೆ ಅದೇ ಯಾವುದೋ ಒಂದು ಉದ್ದೇಶಕೋಸ್ಕರ ಅಕ್ವೈರ್ ಮಾಡಿಕೊಂಡಿದ್ದನ್ನು ಡಿ-ನೋಟಿಫೈ ಮಾಡಿ ಕೋಟ್ಯಾಂತರ ರೂಪಾಯಿಗಳು ಲೂಟಿಯಾಗುವಂತಾದ್ದು ಏನು ಇದೆ.

ಅದನ್ನು ಮುಂದುವರಿಸಿಕೊಂಡು ಹೋಗುವಂಥಾದ್ದು ಆದರೆ ಅದು ಯಾರಿಗೆ ಶೋಭೆಯನ್ನು ತರುವಂತಹ ಸಂಗತಿ. ಸ್ವಾಮಿ ಇವತ್ತು ಕಂಪನಿಗಳಿಗೆ 31 ಲಕ್ಷ ಎಕರೆ ಅರಣ್ಯ ನೀಡಿಕೆ ವಿರುದ್ಧ ರಿಟ್. ಹಲವು ರಾಷ್ಟ್ರೀಯ ಮತ್ತು ಬಹು ರಾಷ್ಟ್ರೀಯ ಕಂಪನಿಗಳಿಗೆ ಸರ್ಕಾರದ ಸಂಪತ್ತು ಭರಿತ 32.21 ಲಕ್ಷ ಎಕರೆ ಅರಣ್ಯ ಪ್ರದೇಶವನ್ನು ಗಣಿಗಾರಿಕೆಗೆ ನೀಡಲಿರುವುದರ ಕ್ರಮ ಬದ್ಧತೆಯನ್ನು ಪ್ರಶ್ನಿಸಿ ಹೈಕೋರ್ಟಿನಲ್ಲಿ ಇವತ್ತು ರಿಟ್ ಫೈಲ್ ಮಾಡಿದ್ದಾರೆ. ಕೃಷ್ಣ ಭಟ್ ಎನ್ನುವಂತಹವರು. ಹಲವು ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಸರ್ಕಾರ ರಾಜ್ಯದ 60 ಲಕ್ಷ ಹೆಕ್ಟೇರ್ ಜಮೀನುಗಳನ್ನು ಅಂದರೆ 1.56 ಲಕ್ಷ ಎಕರೆ ಜಮೀನು. ಇದರ ಪೈಕಿ 32.21 ಲಕ್ಷ ಎಕರೆ ಜಮೀನು ಅರಣ್ಯ ಪ್ರದೇಶಕ್ಕೆ ಸೇರಿದ ಜಮೀನು. ಗಣಿ ಉದ್ಯಮವನ್ನು ಖಾಸಗೀಕರಣಗೊಳಿಸಿ ಬಹುರಾಷ್ಟ್ರೀಯ ಕಂಪನಿಗಳಿಗೆ ಈ ಉದ್ಯಮದಲ್ಲಿ ಭಾಗವಹಿಸಲು ಅವಕಾಶ ಕೊಡುವಂತೆ ತಜ್ಞರ ಸಮಿತಿ ಸೂಚಿಸಿರುವ ಹಿನ್ನೆಲೆಯಲ್ಲಿ ಸರ್ಕಾರ 1.56 ಎಕರೆ ಜಮೀನಿನಲ್ಲಿ 31.21 ಲಕ್ಷ ಎಕರೆ ಅರಣ್ಯ ಪ್ರದೇಶವನ್ನು 277 ಬಹುರಾಷ್ಟ್ರೀಯ ಮತ್ತು ಹಲವು ರಾಷ್ಟ್ರೀಯ ಕಂಪನಿಗಳಿಗೆ ಗುತ್ತಿಗೆಗೆ ನೀಡಲು ತಿಳಿದು ಬಂದಿದೆ. ಇದು ಹೌದೋ ಅಲ್ಲವೋ ಹೇಳಿ.

ವಿದೇಶಿ ಕಂಪನಿಗಳಾದ ಆಸ್ಟೇಲಿಯಾದ ಸಿ ಆರ್ ವಿ ಗ್ರೋಪ್ ಆಸ್ಟೇಲಿಯಾದ ಬಿ.ಎಚ್.ಪಿ. ಸಂಸ್ಥೆಗಳು ಈ ಅರ್ಜಿಗಳನ್ನು ಹಾಕಿರುವಂತಹವರು. ಈ ಮೂರು ಜನರು ಸುಮಾರು 5ಸಾವಿರ ಕಿರೋಮಿಟರ್‌ಗಳಿಗಿಂತ ಹೆಚ್ಚಿನ ಸುತ್ತಳತೆಯ ಭೂಮಿಯನ್ನು ಅವರು ಕೇಳಿದ್ದಾರೆ. 14 ಜನ 500 ಕಿಲೋಮಿಟರ್‌ಗಳಿಂದ 1500 ಕಿಲೋಮಿಟರ್ ಸುತ್ತಳತೆಯ ಜಮೀನನ್ನು ಕೇಳಿದ್ದಾರೆ. ಇದು ಯಾವ ಪ್ರದೇಶ ಅಂದರೆ ಸ್ವಾಮಿ ಕೊಟ್ಟ ಮೇಲೂ ಕೊಡುತ್ತೇನೆ ಸ್ವಾಮಿ. ಕೊಡುವುದಕ್ಕಿಂತ ಮುಂಚೆ ಹೈಕೋರ್ಟಿನಲ್ಲಿ ರಿಟ್ ಆಗಿದೆ. ಸರ್ಕಾರ ಏನೇನು ಮಾಡುವುದಕ್ಕೆ ಹೊರಟಿದೆ ಎನ್ನುವ ವಿವರ ನಾನು ಕೊಡುತ್ತೇನೆ., ಮೈಸೂರು ಸರ್ವೀಸಸ್ ಸಂಸ್ಥೆ, ಉತ್ತರ ಕನ್ನಡ ಜಿಲ್ಲೆ ಅರೆ ಬಯಲು ಪ್ರದೇಶ. ಚಿಕ್ಕಮಂಗಳೂರು ಜಿಲ್ಲೆ ಕುರಪುರಸ ಬುಕ್ಕಂಬುಡಿ ಮತ್ತು ನಂದಿ ಪ್ರದೇಶ. ಬಳ್ಳಾರಿ ಜಿಲ್ಲೆ ಲಿಂಗನಹಳ್ಳಿ ಮತ್ತು ಹರಪನಹಳ್ಳಿ ಬಯಲು, ಶಿವಮೊಗ್ಗ ಜಿಲ್ಲೆಜಮ್ಮನಹಳ್ಳಿ, ಕೆರೆ ಕುದರೆಕೊಂಡ, ಹಾರನಕುಪ್ಪ ಕುಮಡಿ ಹಳ್ಳಿ ಮತ್ತು ಸೊರಬ ಪ್ರದೇಶ. ಕೋಲಾರ ಜಿಲ್ಲೆ ಕೆ.ಜಿ.ಎಫ್. ಮತ್ತು ಬೆಟ್ಟರಾಯನ ಬೆಟ್ಟ, ಚಿತ್ರದುರ್ಗ

ರಾಯಚೂರು ಮಂಡ್ಯ ಮತ್ತು ಹಾಸನ ಜಿಲ್ಲೆ ಮತ್ತು ತುಮಕೂರು ಜಿಲ್ಲೆ ಈ ಭಾಗದಲ್ಲಿ ಜಮೀನು ಇರುವಂತಾದ್ದು, ಈ ಬಗ್ಗೆ ನಾನು ಮಾನ್ಯ ಗಣಿ ಸಚಿವರಲ್ಲಿ ಕೆಲವು ಮಾಹಿತಿಗಳನ್ನು ಕೇಳಿದ್ದೆ ನಿನ್ನೆ ಯಾರ‍್ಯಾರು ಅರ್ಜಿಗಳನ್ನು ಹಾಕಿದ್ದಾರೆ ಎನ್ನುವಂತಹ ಮಾಹಿತಿಯನ್ನು ಕೊಟ್ಟಿದ್ದಾರೆ. ಸ್ವಾಮಿ ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ ಇಲ್ಲಿ ಅಮೂಲ್ಯವಾದ ಖನಿಜ ಸಂಪತ್ತು ಇದೆ. ಬಹುರಾಷ್ಟ್ರೀಯ ಕಂಪನಿಗಳು ಈ ಖನಿಜ ಸಂಪತ್ತನ್ನು ಕಬಳಿಸಲು ಸನ್ನಾಹ ಮಾಡುತ್ತಿದ್ದಾರೆ. ಅದನ್ನು ಮಂಜೂರು ಮಾಡುವಂತಹ ಒಂದು ಹಂತದಲ್ಲಿದೆ ಎನ್ನುವಂತಹ ಒಂದು ಸುದ್ದಿ ನಮಗೆ ಬಂದಿದೆ. ತಾವು ಉತ್ತರ ಕೊಡುವಂತಹ ಕಾಲದಲ್ಲಿ ಯಡಿಯೂರಪ್ಪನವರೇ ಈ ತರಹ ಅರ್ಜಿಗಳು ಬಂದಿರುವುದು ನಿಜ. ನಾವು ಕೊಡುವುದಿಲ್ಲ. ಏಕೆಂದರೆ ಜೈನ್ಸ್ ಕಂಪನಿಯವರದ್ದು ಇವತ್ತು ಕೋರ್ಟ್ ಮುಂದೆ ಇದೆ. ಒಂದು ಸಾವಿರ ಕೋಟಿ ರೂಪಾಯಿ ಲೂಟಿ ಆಯಿತು.

ಅದರ ರಕ್ಷಣೆ ಅಲ್ಲ ಅದನ್ನು 24 ಗಂಟೆಗಳಲ್ಲಿ ವಾಪಸ್ಸು ತೆಗೆದುಕೊಳ್ಳಿ ಹಣ ವಸೂಲಿ ಮಾಡಿ. ಈ ಸುದ್ದಿ ಇದೆ ಇದನ್ನು ಮೊದಲು ನಿಲ್ಲಿಸಿ ಅಮೇಲೆ ಉತ್ತರಕೊಡಿ. ಕೋರ್ಟಿಗೆ ಅವರು ಹೋಗಿದ್ದಾರೆ. ಅದನ್ನು ತಡೆಯುವಂತಹ ಪ್ರಯತ್ನ ಮಾಡಿ. ಸ್ವಾಮಿ, 1952ನೇ ಇಸವಿಯಲ್ಲಿ ನಾಗಪ್ಪ ಅಂಡ್ ಸನ್ಸ್ ಬಳ್ಳಾರಿ ಇವರಿಗೆ ಹೊಸಪೇಟೆ ತಾಲ್ಲೂಕು ಕಲ್ಲಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರು 169ರಲ್ಲಿ 500 ಎಕರೆ ಜಮೀನನ್ನು ಕಬ್ಬಿಣದ ಅದಿರನ್ನು ತೆಗೆಯುವುದಕೋಸ್ಕರ 20 ವರ್ಷಗಳಿಗೆ ಗುತ್ತಿಗೆಗೆ ಕೊಟ್ಟಿದ್ದರು. ಈ ಗುತ್ತಿಗೆಯನ್ನು 1972 ರಿಂದ 20 ವರ್ಷಗಳ ಕಾಲ ಮುಂದುವರಿಸಲಾಯಿತು. 1992ರವರೆಗೆ. ಈ ಜಮೀನಿನ ಹತ್ತಿರ ಶ್ರೀ ನಾಗಪ್ಪ ಅಂಡ್ ಸನ್ಸ್ ಮಾಜಿ ಶಾಸಕರು ಈ ಎರಡು ಸಂಸ್ಥೆಗಳಿಗೆ ಗುತ್ತಿಗೆಗೆ ಕೊಟ್ಟಿದ್ದ ಜಾಗದ ದಕ್ಷಿಣದಲ್ಲಿ ಮತ್ತೊಂದು ಸಂಸ್ಥೆಗೆ ಅಂದರೆ ಮಿನರಲ್ ಸೇಲ್ಸ್‌ಪ್ರೈವೇಟ್ ಲಿಮಿಟೆಡ್ ಬಾಲಟೋಟ ಬಾಂಬೆ. ನರೇಂದ್ರ ಕುಮಾರ್ ಬಾಲಟೋಟ ಬಾಂಬೆ, ಇವರಿಗೆ ಹಗರಿಬೊಮ್ಮನಹಳ್ಳಿ ತಾಲ್ಲೂಕು ವ್ಯಾಸನ ಕೆರೆ ಗ್ರಾಮದ ಸರ್ವೆ ನಂಬರು 1ರಲ್ಲಿ ಒಂದರಿಂದ 6ರವರೆಗೆ 898 ಎಕರೆ ಜಮಿನನ್ನು ಗುತ್ತಿಗೆಗೆ ಕೊಟ್ಟಿದ್ದರು. ಅಲ್ಲಿ ಒಂದು ರಸ್ತೆ ಮಾಡಬೇಕೆಂದು ಅವನು ಕೇಳಿದ. ನೀವು ಪರವಾನಿಗೆಯನ್ನು ಕೊಟ್ಟಿರಿ.

ತಾವು ಪರವಾನಿಗೆಯನ್ನು ಕೊಟ್ಟ ಪರಿಣಾಮ ಇವತ್ತು ಹಗಲು ರಾತ್ರಿ ಪ್ರತಿನಿತ್ಯೆ ಬಾಲಟೋಟ ಅವರು ಉತ್ಕೃಷ್ಟವಾಗಿರುವಂತಹ ಕಬ್ಬಿಣದ ಅದಿರು ಪ್ರದೇಶಗಳಲ್ಲಿ ಕಬ್ಬಿಣದ ಅದಿರು ತೆಗೆಯುತ್ತಿದ್ದು ಒಂದು ದಿನಕ್ಕೆ ಸುಮಾರು 200 ಲಾರಿ ಲೋಡು ಅದಿರು ತೆಗೆದು ಸಾಗಾಣಿಕೆಯನ್ನು ಮಾಡುತ್ತಿದ್ದಾರೆ. ರಸ್ತೆ ಮಾಡುವುದಕ್ಕೆ ಅಂತ ಪರ್ಮಿಶನ್ ತೆಗೆದುಕೊಂಡಿದ್ದು ಅದರ ಸುತ್ತಮುತ್ತ ಕಾನೂನು ಬಾಹಿರವಾಗಿ ಪ್ರತಿನಿತ್ಯೆ 200 ಲೋಡು ಪ್ರತಿ ಲೋಡಿಗೆ 10 ಟನ್‌ನಂತೆ ಒಂದು ದಿನದಲ್ಲಿ ಎರಡು ಸಾವಿರ ಟನ್ ಲೋಡು ಹೋಗುತ್ತಿದೆ. ಒಂದು ತಿಂಗಳಲ್ಲಿ 30 ದಿವಸಕ್ಕೆ 60 ಸಾವಿರ ಟನ್ ಕಬ್ಬಿಣದ ಅದಿರನ್ನು ಸಾಗಿಸುತ್ತಿದ್ದಾನೆ.

20 ರೂಪಾಯಿಗಳಂತೆ ಸುಮಾರು 12 ಲಕ್ಷರೂಪಾಯಿಗಳು ಆಗುತ್ತದೆ. ಒಂದು ವರ್ಷಕ್ಕೆ ಸುಮಾರು ಒಂದು ಕೋಟಿ 94 ಲಕ್ಷದ 40 ಸಾವಿರ ರೂಪಾಯಿಗಳ ಮೊತ್ತದ ಕಬ್ಬಿಣದ ಅದಿರನ್ನು ಕಾನೂನು ಬಾಹಿರವಾಗಿ ಸಾಗಾಣಿಕೆ ಮಾಡುತ್ತಿದ್ದಾನೆ ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ ದಾಖಲೆಗಳನ್ನು ನಾನು ನಿಮಗೆ ಕೊಡುತ್ತೇನೆ. ಅದು ಸರಿ ಅಂತ ಕಂಡರೆ ಹೌದು ಅಂತ ಕಂಡರೆ ಅದನ್ನು

ಸರಿಪಡಿಸುವಂತಹ ಕ್ರಮ ತೆಗೆದುಕೊಳ್ಳಿ ಅವನ ಮೇಲೆ ಆಕ್ಷನ್ ತೆಗೆದುಕೊಳ್ಳಿ. ಮಾನ್ಯ ಅಬಕಾರಿ ಸಚಿವರಲ್ಲಿ ನಾನು ಒಂದೇ ಒಂದು ವಿನಂತಿ ಮಾಡುವಂತಾದ್ದು, ಸನ್ಮಾನ್ಯ ಹಣಕಾಸಿನ ಸಚಿವರ ಅಧ್ಯಕ್ಷತೆಯಲ್ಲಿ ಈ ಪಾನನಿಷೇಧ ಜಾರಿಗೊಳಿಸಲು ಒಂದು ಸಮಿತಿಯನ್ನು ಮಾಡಿದಿರಿ. ಆ ಹಿನ್ನೆಲೆಯಲ್ಲಿ ತಾವು ಅದನ್ನು 1.7.96 ರಿಂದ 4 ತಿಂಗಳ ಕಾಲ ಸಾರಾಯಿ ಮಾರಾಟ 4 ತಿಂಗಳ ಅವಧಿಗೆ ಅದೇ ಹಳೆಯ ಕಂಟ್ರಾಕ್ಟರ್‌ಗೆ ವಿಸ್ತರಣೆ ಮಾಡುವಂತಹ ಪ್ರಯತ್ನ ಮಾಡಿದಿರಿ. 8 ಪರ್ಸೆಂಟ್ ಏರಿಕೆ ಎಂದು ಹೇಳಿದಿರಿ. ಅವನು ಒಪ್ಪಲಿಲ್ಲ ಅದೇ ಹಳೆಯದರಕ್ಕೆ ಕೊಟ್ಟಿರಿ. ಇನ್ನು ಕೆಲವು ಕಡೆ ನಾವೇ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ನಾನು ಇಷ್ಟೇ ನಿಮ್ಮನ್ನು ಕೇಳುವುದು. ಒಂದು ತಿಂಗಳಲ್ಲಿ ಈ ಜುಲೈ ತಿಂಗಳಲ್ಲಿ ಆಗಸ್ಟ್ ಫಸ್ಟ್‌ವೀಕ್‌ನಲ್ಲಿ ನಾವು ಇದ್ದೇವೆ.

ಮಾನ್ಯ ಸಂಸದೀಯ ಸಚಿವರೇ, ಸರ್ಕಾರದ ಬೊಕ್ಕಸಕ್ಕೆ ನೀವು ಎಷ್ಟು ನಿರೀಕ್ಷೆ ಮಾಡಿದ್ದಿರಿ ಹರಾಜು ಆಗಿ 8 ಪರ್ಸೆಂಟ್ ಗುತ್ತಿಗೆಗೆ ಹೋಗಿದ್ದರೆ 15 ಪರ್ಸೆಂಟ್ ಬೇಡ 20 ಪರ್ಸೆಂಟ್ ಬೇಡ. 8 ಪರ್ಸೆಂಟ್‌ಗೆ ನೀರು ಹರಾಜು ಮಾಡಿದಿದ್ದರೆ ಕಾನೂನು ಪ್ರಕಾರ ನಮ್ಮ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣ ಬರುತ್ತಿತ್ತು. ಒಂದು ತಿಂಗಳಲ್ಲ 8 ಪರ್ಸೆಂಟ್‌ಗೆ ಏರಿಕೆ ಕೆಲವರಿಗೆ ಅದೇ ದರ, ಇನ್ನು ಕೆಲವನ್ನು ನೀವೇ ನಡೆಸುತ್ತಿದ್ದೀರಿ. ಒಂದು ತಿಂಗಳಲ್ಲಿ ಎಷ್ಟು ಆದಾಯ ಬಂದಿದೆ ಎನ್ನುವಂತಹ ಅಂಕಿಅಂಶವನ್ನು ಕೊಡಿ. ನಿಮ್ಮ ಅಂದಾಜಿನ ಪ್ರಕಾರ ಏನು ಬೊಕ್ಕಸಕ್ಕೆ ಹಣ ಬರಬಹುದು ಎಂದು ಅಂದುಕೊಂಡಿದ್ದೀರೋ ಇವತ್ತಿನ ದಿನ ಮುಂದಿನ ಜೂನ್‌ಗೆ ಬಂದಾಗ ನಿಮಗೆ ಅರ್ಥವಾಗುತ್ತದೆ ಸುಮಾರು 200 ಕೋಟಿ ರೂಪಾಯಿಗಳು ಕನಿಷ್ಟ ಈ ಅಬಕಾರಿ ಬಾಬಿನಲ್ಲಿ ನಮ್ಮ ಸರ್ಕಾರದ ಬೊಕ್ಕಸಕ್ಕೆ ಬರುವಂಥಹ ಲೂಟಿ ಆಗಿದೆ ಎಂದು ನಾನು ಹೇಳುತ್ತೇನೆ ಪಾನನಿಷೇಧವನ್ನು ಜಾರಿಗೆ ತರಬೇಕೆಂದರೆ ತಾವು ಕಟ್ಟುನಿಟ್ಟಿನಕ್ರಮ ತೆಗೆದುಕೊಳ್ಳಬೇಕಾಗುತ್ತು. ಈ ರೀತಿ ಅವರ ಜೊತೆ ವ್ಯವಹಾರ ಮಾಡಿ ಅವರಿಗೆ ಈ ವ್ಯವಹಾರವನ್ನು ವಹಿಸಿಕೊಟ್ಟು ನೀವು ಕೆಲವು ವ್ಯವಹಾರವನ್ನು ನಡೆಸಿ ಅದು ಲಾಸ್‌ನಲ್ಲಿ ನಡೆಯುತ್ತಿದೆ ಎಂದು ರಾಜ್ಯದ ಜನರಿಗೆ ತೋರಿಸಿ ಮತ್ತೆ ಯಾರಿಗೋ ಉಪಕಾರ ಮಾಡುವಂತಹ ಒಂದು ಸಂಚು ನಡೆಯುತ್ತಿದೆ ಎನ್ನುವಂತಹ ಭಾವನೆ ನನ್ನ ಸ್ಪಷ್ಟ ಅಭಿಪ್ರಾಯ. ಇದು ಯಾರಿಗೆ ಉಪಕಾರ ಮಾಡುವುದಕೋಸ್ಕರ ಈ ಕೆಲಸವನ್ನು ಮಾಡುತ್ತಿದ್ದೀರಿ ಎನ್ನುವಂಥಾದ್ದು ಸಹ ತಾವು ಹೇಳಬೇಕಾಗಿದೆ. ಮತ್ತು ಅದರ ಆದಾಯದ ಅಂಕಿಅಂಶಗಳನ್ನು ತಾವು ಕೊಡಿ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಇದು ಅಕ್ಯಾಡೆಮಿಕ್ ಇಂಟ್ರೆಸ್ಟ. ಮಾನ್ಯ. ಯಡಿಯೂರಪ್ಪನವರು ಪಾನಪ್ರೇಮಿಯೋ ಅಥವಾ ಪಾನವಿರೋಧಿಯೋ.

ಶ್ರೀ ಬಿ.ಎಸ್. ಯಡಿಯೂರಪ್ಪ : ಚುನಾವಣೆಗಳು ಆಗಾಗ ಆಗುವುದು ಬೇಡ ಎಂದು ನಾನು ಏಕೆ ಹೇಳುತ್ತೇನೆಂದರೆ ಇದೆಲ್ಲಾ ದುಷ್ಪರಿಣಾಮ ನಮ್ಮ ರಾಜ್ಯದ ಮೇಲೆ ಆಗುತ್ತದೆ, ನಮ್ಮ ಹಣಕಾಸಿನ ಮೇಲೆ ಆಗುತ್ತದೆ ಎನ್ನುವುದಕೋಸ್ಕರ ನಾನು ಇದನ್ನು ಹೇಳುತ್ತಿದ್ದೇನೆ.

ಸ್ವಾಮಿ, ಸಾರಾಯಿ ಬಾಟ್ಲಿಂಗ್ ಘಟಕಕ್ಕೆ ಪೂರೈಸಿದ ಮಧ್ಯಸಾರಕ್ಕೆ ಹೆಚ್ಚುವರಿಯಾಗಿ ಸಂಚಿತ ನಿಧಿಯಿಂದ 8 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದುದರ ಸಂಬಂಧವಾಗಿ ರಾವ್ ಕಮಿಟಿಯನ್ನು ನೇಮಕ ಮಾಡಿದ್ದು ಅದರ ವರದಿ ಸರ್ಕಾರಕ್ಕೆ ಬಂದಿದೆ. 1992 ರಲ್ಲಿ ಈ ಹಗರಣ ನಡೆದಿದ್ದು ಅದರಲ್ಲಿ ಯಾರು ಯಾರು ಭಾಗಿಯಾಗಿದ್ದರೋ

ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಕೇಳುತ್ತೇನೆ. ಆ ಪ್ರಕರಣದಲ್ಲಿ ಭಾಗಿಯಾಗಿದ್ದವರನ್ನು ಮತ್ತೆ ರೀ-ಇನ್‌ಸ್ಟೇಟ್ ಮಾಡಿಕೊಂಡು ಅವರಿಗೆ ಉನ್ನತ ಸ್ಥಾನವನ್ನು ಕೊಡಲಾಗಿದೆ.

ಶ್ರೀ ಸಿ. ಬೈರೇಗೌಡ : ಇದರ ಬಗ್ಗೆ ತನಿಖೆಯಾಗಿರುವುದು ನಿಜ. ರೆಟ್ರಾಸ್ಪೆಕ್ಟೀವ್ ಆಗಿ ಜಾರಿಗೆ ಕೊಡಬೇಕೆಂದು ಮಾಡಿದ್ದರೋ ಅವರಿಂದ 8 ಕೋಟಿ ರೂಪಾಯಿ ವಸೂಲಿ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿರತಕ್ಕಂಥಾದ್ದು ನಿಜ. ಇದರಲ್ಲಿ ಭಾಗಿಯಾಗಿದ್ದ ಸಂಬಂಧಪಟ್ಟಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿರುವುದೂ ನಿಜ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಅಮೌಂಟ್‌ನ್ನು ರಿಕವರಿ ಮಾಡಲಾಗಿದೆಯೇ ಮತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆಯೇ? ಪ್ರತಿ ಪಕ್ಷದ ನಾಯಕನಾದ ನಾನು ಕೆಲವು ಪ್ರಶ್ನೆಗಳನ್ನು ಕೇಳಿಗದಾಗ ಅದಕ್ಕೆ ಉತ್ತರ ಕೊಡುವಂಥ ಔದಾರ್ಯವನ್ನಾದರೂ ಸರ್ಕಾರ ತೋರಿಸಬೇಕಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ : 1991-92 ರಲ್ಲಿ ರೆಕ್ಟಿಫೈಡ್ ಸ್ಪಿರಿಟ್ ಸಪ್ಲೈ ಮಾಡತಕ್ಕಂಥವರು ಇದರ ಬೆಲೆಯನ್ನು ಜಾಸ್ತಿ ಮಾಡಬೇಕೆಂದು ಒಂದು ರೆಪ್ರೆಸೆಂಟೇಷನ್ ಕೊಟ್ಟಿದ್ದರು. ಬೆಲೆಯನ್ನು ಏರಿಸಬೇಕೆಂದು ರೆಪ್ರೆಸೆಂಟೇಷನ್ ಕೊಟ್ಟಿರುವುದರಿಂದ ಇದರ ಬಗ್ಗೆ ವರ್ಕ್ ಔಟ್ ಮಾಡಿ ಒಂದು ವರದಿ ಕೊಡಬೇಕೆಂದು ರಾವ್ ಎನ್ನುವ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಲಾಗಿತ್ತು. ಆ ರಾವ್ ಅವರು ಎಲ್ಲಾ ಡಿಸ್ಟಿಲರಿಗಳಿಗೆ ಭೇಟಿ ಕೊಟ್ಟು ವಿಷಯವನ್ನು ಸಂಗ್ರಹಣೆ ಮಾಡಿದ ನಂತರ ವಿಚಾರ ಮಾಡಿ ಒಂದು ಲೀಟರ್ ಮಧ್ಯಸಾರದ ಬೆಲೆಯನ್ನು 4 ರೂಪಾಯಿಗಳಿಂದ 6 ರೂಪಾಯಿಗಳಿಗೆ ಏರಿಸಬೇಕೆಂದು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟರು. ಆದ್ದರಿಂದ, ಇವರಲ್ಲಿ ಹಣವಸೂಲಿ ಮಾಡುವ ವಿಚಾರ ಏನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ವಿಷಯದ ಬಗ್ಗೆ ಮಾನ್ಯ ಭೈರೇಗೌಡರಿಗೆ ಚೆನ್ನಾಗಿ ಗೊತ್ತಿದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೂರ್‍ನಾಲ್ಕು ಜನ ಉನ್ನತ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದರು. ಆ ಶಾಮೀಲಾಗಿದ್ದ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಳ್ಳಲಾಗಿದೆಯೇ ಮತ್ತು ವಸೂಲಿ ಮಾಡಬೇಕಾಗಿದ್ದ ಹಣವನ್ನು ವಸೂಲಿ ಮಾಡಲಾಗಿದೆಯೇ ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡುವಾಗ ಹೇಳಬೇಕು. ಇದರ ಜೊತೆಗೆ 1994ರ ವಿಧಾನ ಸಭೆ ಚುನಾವಣೆ ಸಂದರ್ಭದಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಮದ್ಯ ಮತ್ತು ಬೀರುವನ್ನು ಸಪ್ಲೈ ಮಾಡುತ್ತಿದ್ದಾಗ ಒಬ್ಬ ಪ್ರಾಮಾಣಿಕ ಅಧಿಕಾರಿ ಅದನ್ನು ಸೀಜ್ ಮಾಡಿ ಕೇಸ್ ದಾಖಲು ಮಾಡಿದ್ದ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಯಿತು? ವಶಪಡಿಸಿಕೊಂಡಿದ್ದ ಮದ್ಯವನ್ನು ಸಂಬಂಧಪಟ್ಟವರಿಗೇ ವಾಪಸ್ ಮಾಡಲಾಯಿತೇ ಎಂಬ ಬಗ್ಗೆಯೂ ಸಹ ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಬೇಕು. ಇನ್ನು ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಾದರೆ, ನೀರಾವರಿ ಯೋಜನೆಗಳಿಗೆ ಅಗತ್ಯವಾಗಿ ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿಲ್ಲವೆಂದು ನಾನು ಹೇಳಬೇಕಾಗುತ್ತದೆ. 1995-96ರಲ್ಲಿ ರಾಜ್ಯದ ಯಾವ ಯಾವ ನೀರಾವರಿ ಯೋಜನೆಗಳಿಗೆ ವಾರ್ಷಿಕ ಗುರಿಯನ್ನು ನಿಗದಿ ಮಾಡಲಾಗಿತ್ತೋ ಅದನ್ನು ಸಾಧಿಸಿಲ್ಲ ಎನ್ನುವುದರ ಬಗ್ಗೆ ನಾನು ಕೆಲವು ವಿವರಗಳನ್ನು ಕೊಡುತ್ತೇನೆ.

ತುಂಗ ಭದ್ರ ಯೋಜನೆಗೆ 1995 -96ರಲ್ಲಿ 556.25 ಲಕ್ಷ ರೂಪಾಯಿಗಳ ಗುರಿ ಇದ್ದರೆ, 389.90ಲಕ್ಷ ಮಾತ್ರ ಖರ್ಚಾಗಿದೆ. ಮಲಪ್ರಭಾ - ಘಟಪ್ರಭಾ ಯೋಜನೆಗಳಿಗೆ 841 ಲಕ್ಷ ತೆಗೆದಿಟ್ಟಿದ್ದರೆ ಅದರಲ್ಲಿ 392.40 ಲಕ್ಷ ಮಾತ್ರ ಖರ್ಚಾಗಿದೆ. ಕಾವೇರಿ ಯೋಜನೆಯಲ್ಲಿ 978 ಲಕ್ಷವನ್ನು ತೆಗೆದಿರಿಸಿದ್ದರೆ ಅದರಲ್ಲಿ 410.90 ಲಕ್ಷ ಮಾತ್ರ ಖರ್ಚಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ 1636 ಲಕ್ಷ ತೆಗೆದಿರಿಸಿದ್ದರೆ ಅದರಲ್ಲಿ ಕೇವಲ 703.16 ಲಕ್ಷ ಮಾತ್ರ ಖರ್ಚಾಗಿದೆ. ಭದ್ರ ಯೋಜನೆಗೆ 386 ಲಕ್ಷ ಕಾದಿರಿಸಿದ್ದರೆ ಕೇವಲ 343 ಲಕ್ಷ ಮಾತ್ರ ಖರ್ಚಾಗಿದೆ. ಇದರ ಒಟ್ಟಾಗೆ ಸಾಧನೆಯನ್ನು ನೋಡಿದಾಗ ನಿಗದಿ ಮಾಡಿದ ಒಟ್ಟು ಹಣದಲ್ಲಿ ಶೇಕಡಾ 50 ರಷ್ಟನ್ನು ಮಾತ್ರ ಸರ್ಕಾರ ಖರ್ಚು ಮಾಡಿದೆ. ಅಂದರೆ ಹಣವನ್ನು ಸರ್ಕಾರ ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡಲಿಲ್ಲವೋ? ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಕೆಲಸ ಮಾಡಲಿಲ್ಲವೋ ಅಥವಾ ಗುತ್ತಿಗೆದಾರರ ತಪ್ಪಿನಿಂದ ಏನು ಸಾಧನೆಯಾಗಬೇಕಾಗಿತ್ತೋ ಅದು ಆಗಲಿಲ್ಲವೊ ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡುವಾಗ ವಿವರಗಳನ್ನು ಹೇಳಬೇಕಾಗುತ್ತದೆ.

ಕೃಷ್ಣ ಕಣಿವೆ ಯೋಜನೆಯಲ್ಲಿ 729 ಟಿ ಎಂ ಸಿ ಯಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕಾದರೆ ಎಂದು ಸಾವಿರ ಇಸವಿಯೊಳಗೆ ಆ ಯೋಜನೆಯ ಕೆಲಸವನ್ನು ಮುಗಿಸಬೇಕಾಗುತ್ತದೆ. 1996ರವರೆಗೆ ಈ ಕೃಷ್ಣಾ ಕಣಿವೆಯಿಂದ ಉಪಯೋಗಿಸಿರುವುದು ಕೇವಲ 450 ಟಿ ಎಂ ಸಿ ಎಫ್ ಟಿ ಯಷ್ಟು ನೀರನ್ನು ಮಾತ್ರ. ಉಳಿದಂಥ ನೀರನ್ನು ಉಪಯೋಗ ಮಾಡಿಕೊಳ್ಳಲು ಉಳಿದಿರುವ ಇನ್ನು ಮೂರು ವರ್ಷಗಳಲ್ಲಿ ಈ ಕೆಲಸವನ್ನು ಮುಗಿಸಬೇಕಾಗಿದೆ. ಈಗ ನಡೆಯುತ್ತಿರುವ ಎಲ್ಲಾ ಯೋಜನೆಗಳನ್ನು ಮುಗಿಸಬೇಕಾದರೆ ಒಂದು ಅಂದಾಜಿನ ಪ್ರಕಾರ 8 ಸಾವಿರದಿಂದ 9 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತವೆ.

ಬರೀ ಕೃಷ್ಣಾ ಮೇಲ್ದಂಡೆ ಯೋಜನೆಗೆ ಇನ್ನು ಮೂರು ವರ್ಷಗಳಲ್ಲಿ 2200 ಕೋಟಿ ಅಥವಾ 2300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಆ ಕೆಲಸವನ್ನು ಪೂರ್ಣ ಮಾಡಬಹುದಾಗಿದೆ. ಪ್ರತಿ ವರ್ಷವೂ ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ ಸರ್ಕಾರದ ಆ ಬಗ್ಗೆ ಏನೂ ಕಾರ್ಯಕ್ರಮ ಹಾಕಿಕೊಂಡಿಲ್ಲ. 1996-97ನೇ ಸಾಲಿಗೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ಕೇವಲ 356 ಕೋಟಿ 50 ಲಕ್ಷ ರೂಪಾಯಿಗಳನ್ನು ಮಾತ್ರ ನಿಗದಿ ಮಾಡಲಾಗಿದೆ ಇದನ್ನು ಬಿಟ್ಟು ಕೃಷ್ಣಾ ಭಾಗ್ಯ ಜಲ ನಿಗಮದಿಂದ 500 ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡಲಾಗಿದೆ. ಅಂದರೆ, ಒಟ್ಟು 856 ಕೋಟಿ ರೂಪಾಯಿಗಳಾಯಿತು. ಇಷ್ಟು ಹಣವನ್ನು ಸಂಗ್ರಹ ಮಾಡಿದರೂ ಸರ್ಕಾರ ಕೊಟ್ಟ ಆಶ್ವಾಸನೆಯಂತೆ ಕೆಲಸ ಪ್ರಗತಿಯಾಗಿಲ್ಲ. ಆದುದರಿಂದ, ಇನ್ನು ಉಳಿದಿರುವ ಮೂರು ವರ್ಷಗಳಲ್ಲಿ ಈ ಕೃಷ್ಣಾ ಮೇಲ್ದಂಡೆ ಯೋಜನೆ ಕೆಲಸ ಮುಗಿಸಲು ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತದೆಂದು ಸರ್ಕಾರ ಸ್ಪಷ್ಟಪಡಿಸಬೇಕು.

ಈ ಕೆಲಸಗಳು ಬೇಗ ಆಗುವುದಕ್ಕಾಗಿ ಲ್ಯಾಂಡ್ ಅಕ್ವಿಸಿಷನ್ ಮಾಡತಕ್ಕಂಥ ಸಂದರ್ಭದಲ್ಲಿ ಸರ್ಕಾರವು ರೈತರ ಜೊತೆಯಲ್ಲಿ ನೇರ ಸಂಪರ್ಕ ಇಟ್ಟುಕೊಂಡು ಅಕ್ವೈರ್ ಮಾಡಿಕೊಳ್ಳುವ ಜಮೀನಿಗೆ ಮಾರ್ಕೆಟ್ ಬೆಲೆಯನ್ನು ಕೊಡುವುದರ ಮೂಲಕ

ವಿಳಂಬವಾಗದ ರೀತಿಯಲ್ಲಿ ಕೆಲಸಗಳನ್ನು ಸಮರೋಪಾದಿಯಲ್ಲಿ ಮಾಡಬೇಕು ಹಾಗೂ ಕೃಷ್ಣಾ ಕಣಿವೆ ಕೆಲಸಕ್ಕೆ ಸಂಬಂಧಪಟ್ಟಂತೆ ಒಪ್ಪಿಗೆಯನ್ನು ಪಡೆಯುವುದಕ್ಕಾಗಿ ಬೆಂಗಳೂರಿಗೆ ಬರುವ ಬದಲು ಒಬ್ಬ ಮಂತ್ರಿಯರನ್ನು ತಿಂಗಳಲ್ಲಿ 20 ದಿವಸಗಳ ಕಾಲ ಅಲ್ಲೇ ಇರುವ ಹಾಗೆ ಮಾಡಿ ಎಲ್ಲಾ ಕೆಲಸಗಳು ತ್ವರಿತವಾಗಿ ಆಗುವ ಹಾಗೆ ವಿಶೇಷ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕೆಲಸ ಮಾಡಲು ಹಾಲಿ ಇರುವ ಇಂಜಿನೀಯರ್‌ಗಳು ಹೋಗುವುದಿಲ್ಲವೆಂದು 1977ರ ಲೋಕಸೇವಾ ಆಯೋಗದ ನಿಯಮಗಳ ಪ್ರಕಾರವೇ 440 ಜನ ಜೂನಿಯರ್ ಇಂಜಿನಿಯರ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ಸರ್ಕಾರ ನೇಮಕ ಮಾಡಿಕೊಂಡಿತ್ತು.

ಕೆಲವರು ಈ ನೇಮಕಾತಿಯನ್ನು ಪ್ರಶ್ನಿಸಿ ಆಡಳಿತ ನ್ಯಾಯಮಂಡಳಿಗೆ ಹೋಗಿರುವುದರಿಂದ ಅವರು ಗೊಂದಲದಲ್ಲಿದ್ದಾರೆ ಎನ್ನುವಂಥ ವಿಚಾರವು ನನ್ನ ಗಮನಕ್ಕೂ ಬಂದಿದೆ. ಕರ್ನಾಟಕ ಸೇವಾ ನಿಯಮಾವಳಿ 1992, ನಿಯಮ 15ರ ಅನ್ವಯ ಈ 440 ಜನ ಇಂಜಿನಿಯರ್‌ಗಳನ್ನು ತಾವು ನೇಮಕ ಮಾಡಿಕೊಂಡಿರುವುದರಿಂದ ರಿಟೈರ್ಡ್ ಆಗುವ ಅಧಿಕಾರಿಗಳನ್ನು 6-3 ತಿಂಗಳಿಗೆ ಹಾಕುತ್ತಾ ಇದ್ದೀರಿ. ಇವೊತ್ತು ಅವರೂ ಕೂಡ ಗೊಂದಲದಲ್ಲಿ ಸಿಕ್ಕಿಕೊಂಡು ಕೆಲಸ ಮಾಡಲು ಆಗದೇ ಇರುವಂಥ ಒಂದು ಸ್ಥಿತಿಯಲ್ಲಿದ್ದಾರೆ. ಅದಕ್ಕಾಗಿ ಆ 440 ಜನರೂ ಸಹ ಅಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾ ಇರುವುದರಿಂದ ಅವರು ಅಲ್ಲಿಯೇ ಉಳಿಯುವುದಕ್ಕೆ ಅಡ್ಡಿಆತಂಕಗಳು ಬಾರದ ಹಾಗೆ ವಿಶೇಷವಾದಂಥ ಕ್ರಮವನ್ನು ತಾವುಗಳು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾ ಇದ್ದೇನೆ. ಇವೊತ್ತು ಕರ್ನಾಟಕ ರಾಜ್ಯದಲ್ಲಿ ಒಂದು ವಿಚಿತ್ರವಾದಂಥ ಪರಿಸ್ಥಿತಿಯಲ್ಲಿ ನಾವುಗಳು ಇದ್ದೇವೆ. ಆಗಸ್ಟ್ ಮಧ್ಯಭಾಗಕ್ಕೆ ಬಂದರೂ ಕೂಡ ನಮ್ಮಲ್ಲಿ ಭೀಕರ ಬರಗಾಲದ ಒಂದು ವಾತಾವರಣ ನಿರ್ಮಾಣವಾಗಿದೆ.

ಇತ್ತಿಚಿನ ದಿನಗಳಲ್ಲಿ ಎಲ್ಲಿಯೂ ಸಹ ಸರಿಯಾಗಿ ಮಳೆಯಾಗದೇ ಇರುವಂಥ ಪರಿಸ್ಥಿತಿಯು ಇದೆ. ತಾವುಗಳು ವಾರದ ಮಳೆ ಪರಿಸ್ಥಿತಿ ಮತ್ತು ಹವಾಮಾನದ ಪರಿಸ್ಥಿತಿಯ ಬಗ್ಗೆ ವರದಿಯನ್ನೇನು ಕೊಟ್ಟಿದ್ದೀರಿ 1996ರ ಜುಲೈ 30 ರಿಂದ ಆಗಸ್ಟ್ 5ರ ವರೆಗೆ ಆದ ಮಳೆಯ ಮಾಹಿತಿಗಳು ಹಾಗೂ ವಿವರ ಪ್ರಸ್ತುತ ನಿಗದಿತ ವಾರದ ಸಂಖ್ಯೆ : 31ರಲ್ಲಿ ರಾಜ್ಯಾದ್ಯಂತ ಮುಂಗಾರು ದುರ್ಬಲವಾಗಿದೆ. ದಕ್ಷಿಣ ಕನ್ನಡ, ಬಳ್ಳಾರಿ, ಬಿಜಾಪುರ, ಮತ್ತು ಬೆಳಗಾವಿ ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಮುಂಗಾರು ಮಳೆಯು ಮಾಮೂರು ಪ್ರಮಾಣದ್ದಾಗಿದ್ದರೆ, ಉಳಿದಂಥ ಕಡೆಗಳಲ್ಲಿ ಅದು ಕ್ಷೀಣಿಸಿರುವ ಬಗ್ಗೆ ವರದಿ ಬಂದಿದೆ. ಪ್ರಸ್ತುತ ಜುಲೈ 30 ರಿಂದ ಆಗಸ್ಟ್ 5ರ ವರೆಗೆ ವರದಿಯಾದ ಒಟ್ಟು 158 ತಾಲ್ಲೂಕುಗಳ ಪೈಕಿ ಯಾವೊಂದೂ ತಾಲ್ಲೂಕಿನಲ್ಲಿಯೂ ಉತ್ತಮ ಮಳೆಯಾದ ಬಗ್ಗೆ ವರದಿಯಾಗಿಲ್ಲ. ಕೇವಲ 13 ತಾಲ್ಲೂಕುಗಳಲ್ಲಿ ಮಾತ್ರ ಮಾಮೂಲಿನಂತೆ ಮಳೆಯಾಗಿದೆ. ಉಳಿದ 145 ತಾಲ್ಲೂಕುಗಳು ಮಳೆಯ ಕೊರತೆಯನ್ನು ಎದುರಿಸುತ್ತಿದ್ದು ಅವುಗಳಲ್ಲಿ 84 ತಾಲ್ಲೂಕುಗಳು ತೀವ್ರ ಹಾಗೂ, 31 ತಾಲ್ಲೂಕುಗಳ ಸಾಧಾರಣ ಮಳೆಯ ಕೊರತೆಯನ್ನು ಎದುರಿಸುತ್ತಿವೆ. ಅಂದರೆ ರಾಜ್ಯದಲ್ಲಿ ಒಂದು ರೀತಿಯಲ್ಲಿ ಭೀಕರ ಬರಗಾಲದ ವಾತಾವರಣ ಇರುವಂಥ ಈ ಸಂದರ್ಭದಲ್ಲಿ ಸರಕಾರವು ಬರಗಾಲ ಕಾಮಗಾರಿಯನ್ನು ತೆಗೆದುಕೊಳ್ಳುವುದರ ಬಗ್ಗೆ ಯಾವುದೇ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಇದುವರೆಗೆ ಮಾಡಿಲ್ಲ.

ಜನರು ಕೆಲಸ ಇಲ್ಲದೆ ವಲಸೆ ಹೋಗುವ ಒಂದು ಪರಿಸ್ಥಿತಿಯು ಬರುತ್ತಾ ಇದೆ. ನಾನೂ ಕೂಡ ಮಲೆನಾಡು ಜಿಲ್ಲೆಯಿಂದ ಬಂದಂಥವನು. ಇವೊತ್ತು ಶಿಕಾರಿಪುರದಂಥ ತಾಲ್ಲೂಕಿನಲ್ಲಿಯೂ ಸಹ ಬಹುತೇಕ ಭಾಗಗಳ ಕೆರೆಗಳಲ್ಲಿ ಒಂದು ಹನಿ ನೀರು ಕೂಡ ಇಲ್ಲದೆ, ಜಾನುವಾರುಗಳಿಗೂ ಕೂಡ ನೀರಿನ ಅಭಾವದಿಂದಾಗಿ ಹೊರಗೆ ಹೋಗುವ ಪರಿಸ್ಥಿತಿ ಬಂದಿದೆ. ಬೋರ್‌ವೆಲ್‌ಗಳ ಮೂಲಕ ಅವುಗಳಿಗೂ ನೀರು ಒದಗಿಸುವ ಒಂದು ಧಾರುಣ ಪರಿಸ್ಥಿತಿಯು ಬಂದಿದೆ. ಅಂಥ ವಾತಾವರಣವನ್ನು ರಾಜ್ಯದ ಅನೇಕ ಕಡೆಗಳಲ್ಲಿ ನಾವು ಕಾಣುತ್ತಾ ಇದ್ದೇವೆ. ಆಗಸ್ಟ್ ಮಧ್ಯಭಾಗದಲ್ಲಿ ಕಂಡು ಬಂದ ಈ ಭೀಕರ ಬರಗಾಲದ ವಾತಾವರಣವನ್ನು ಒಂದು ವಿಶೇಷ ಪ್ರಯತ್ನದ ಮೂಲಕ ಅದನ್ನು ಸರಿಪಡಿಸಲು ಕಾರ್ಯಕ್ರಮ ಹಾಕಿಕೊಳ್ಳಬೇಕು. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರತಿವಿಧಾನಸಭಾ ಕ್ಷೇತ್ರದಲ್ಲಿ ಎಪಿಎಂಸಿ ಏನಿದೆ, ಅದರ ವ್ಯಾಪ್ತಿಯಲ್ಲಿ ಸುಮಾರು 50 ಕಿ.ಮಿ. ರಸ್ತೆಯನ್ನು ಸರ್ವಋತು ಗ್ರಾಮೀಣ ರಸ್ತೆಯಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು. 1995-96ನೇ ಸಾಲಿನಲ್ಲಿ ಅನೇಕ 15 ಲಕ್ಷ ರೂ.ಗಳನ್ನು ಮಾತ್ರ ಕೊಟ್ಟಿದ್ದೀರಿ. ಆದರೆ 1996-97ನೇ ಸಾಲಿನಲ್ಲಿ ಏನು ಮಾಡುತ್ತೀರಿ ಎಂಬ ಬಗ್ಗೆ ನಮಗೆ ಇದುವರೆಗೂ ಗೊತ್ತಾಗಿಲ್ಲ. ಹಣವೂ ಬಿಡುಗಡೆಯಾಗಿಲ್ಲ ಇನ್ನೊಂದು ಸಮಸ್ಯೆಯನ್ನು ಹೇಳುವುದಾದರೆ ಎಪಿಎಂಸಿ ಯಲ್ಲಿ 50 ಕಿ.ಮಿ. ರಸ್ತೆಯನ್ನು ಕೊಟ್ಟುಬಿಟ್ಟಿದ್ದೀರಿ. ಪ್ರತಿವಿಧಾನಸಭಾ ಕ್ಷೇತ್ರದಲ್ಲಿ ಜಿಲ್ಲಾಪರಿಷತ್‌ಗೆ ಸಂಬಂಧಪಟ್ಟ ಈ ರಸ್ತೆಯನ್ನು ಅವರು ಮಾಡಬೇಕೆಂದು ಹೇಳಿದ್ದೀರಿ.

ಇವೊತ್ತು ಆ 15 ಲಕ್ಷಗಳನ್ನು ಕೊಟ್ಟು ಕೆಲವು ಕಡೆಗಳಲ್ಲಿ ಕೆಲಸ ಆಗಿದ್ದರೆ ಕೆಲವು ಕಡೆಗಳಲ್ಲಿ ಕೆಲಸವೇ ಆಗಿಲ್ಲ. ಇದರ ಪರಿಣಾಮವಾಗಿ ಎಪಿಎಂಸಿ ಯವರೂ ಆ ರಸ್ತೆಯನ್ನೂ ಮೇಂಟೇನ್ ಮಾಡುತ್ತಾ ಇಲ್ಲ, ಜಿಲ್ಲಾಪಂಚಾಯತ್‌ನವರೂ ಅಲ್ಲಿನ ಗುಂಡಿ ಮುಚ್ಚುವಂಥ ಕೆಲಸವನ್ನು ಮಾಡುತ್ತಾ ಇಲ್ಲ. ಇದರಲ್ಲಿ ನನ್ನ ಸಲಹೆ ಏನೆಂದರೆ ಎಷ್ಟು ಹಣವನ್ನು ತಾವು ಬಿಡುಗಡೆ ಮಾಡುತ್ತೀರೋ ಅಷ್ಟೇ ಕಿ.ಮಿ. ರಸ್ತೆಯನ್ನು ತಾವುಗಳು ತೆಗೆದುಕೊಳ್ಳಬೇಕು. ಅದನ್ನು ಮಾಡಿದ ತಕ್ಷಣ ಜಿಲ್ಲಾಪರಿಷತ್‌ಗೆ ವರ್ಗಾವಣೆಯಾದರೂ ಮಾಡಿ ಇಲ್ಲವಾದರೆ ಎಪಿಎಂಸಿ ಯವರೇ ಮೇಂಟೇನ್ ಮಾಡಲಿ. 50 ಕಿ.ಮಿ. ಒಟ್ಟಿಗೆ ತೆಗೆದುಕೊಳ್ಳುತ್ತೀರಿ. ಆದರೆ ಆ ಕೆಲಸವು ಪೂರ್ಣವಾಗುವುದಿಲ್ಲ, ಗುಂಡಿ ಮುಚ್ಚುವವರೂ ಇಲ್ಲದೇ ವಾಹನಗಳ ಓಡಾಟಕ್ಕೂ ತೊಂದರೆಯಾಗುತ್ತಾ ಜನರಿಗೆ ಅನಾನುಕೂಲವಾಗುವ ಪರಿಸ್ಥಿತಿಯು ಇವೊತ್ತು ರಾಜ್ಯದಲ್ಲಿ ಮೂಡಿದೆ. ಅದಕ್ಕೋಸ್ಕರ ಎಪಿಎಂಸಿ ಮೂಲಕ ತೆಗೆದುಕೊಂಡ ಈ ಯೋಜನೆಯನ್ನು ಏನು ತೆಗೆದುಕೊಂಡಿದ್ದೀರಿ ಇದು ಒಳ್ಳೆಯ ಕಾರ್ಯಕ್ರಮವೇ ಆಗಿರುತ್ತದೆ. ಅದನ್ನು ಪೂರ್ಣ ಮಾಡುವ ಬಗ್ಗೆ ವಿಶೇಷವಾದಂಥ ಕಾರ್ಯವನ್ನು ಸರಕಾರವು ಮಾಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಈ ವರ್ಷ ರಾಜ್ಯದಲ್ಲಿ ಸುಮಾರು 50 ಲಕ್ಷ ಟನ್‌ಗಳಷ್ಟು ಕಬ್ಬನ್ನು ಬೆಂಕಿ ಹಚ್ಚಿ ಸುಟ್ಟು ಹಾಕುವಂಥ ಪರಿಸ್ಥಿತಿಯು ಬೆಳೆಗಾರರಿಗೆ ಬಂದಿದೆ. ಮಾನ್ಯ ಮುಖ್ಯ ಮಂತ್ರಿಯವರು ರಾಜ್ಯದ ಎಲ್ಲಾ ಭಾಗಗಳ ಕಬ್ಬು ಬೆಳೆಗಾರರ ಒಂದು ಸಭೆಯನ್ನು ಕರೆದಿದ್ದರು. ಅದರಲ್ಲಿ ಯಾವುದೇ ಸಮಸ್ಯೆಗೆ ಪರಿಹಾರ ಆಗಿಲ್ಲ. ನಾನು ಇವೊತ್ತು ಸರಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ನಿಜವಾಗಿಯೂ ರೈತರ ಮಕ್ಕಳ ಸರಕಾರ, ಮಣ್ಣಿನ ಮಕ್ಕಳ ಸರಕಾರ ಎಂದು ಹೇಳುವ ತಾವುಗಳು, ತಮಗೇನಾದರೂ ಕಳಕಳಿ ಇದ್ದರೆ, ಸಕ್ಕರೆ ಕಾರ್ಖಾನೆಗಳು ಸಮಯಕ್ಕೆ ಸರಿಯಾಗಿ ಪ್ರಾರಂಭವಾಗದೇ ಇರುವಂಥ

ಈ ಸಂದರ್ಭದಲ್ಲಿ ನಿಮ್ಮ ಸರಕಾರದ ನಿಲುವಿನಿಂದಾಗಿ ಈ ಕಬ್ಬು ಒಣಗುವುದಕ್ಕೆ ನೀವೇ ಕಾರಣರಾಗಿದ್ದೀರಿ. ರಾಜ್ಯದ ರೈತರ ಹಿತದೃಷ್ಟಿಯಿಂದ ಬರಗಾಲವನ್ನು ಎದುರಿಸುತ್ತಿರುವ ಈ ಕಷ್ಟಕಾಲದಲ್ಲಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಕಬ್ಬನ್ನು ಬೆಳೆದಂಥ ರೈತರುಗಳಿಗೆ, ಸರಕಾರದ ನಿಲುವಿನಿಂದಾಗಿ ಕಬ್ಬು ಒಣಗಿಹೋಗುವ ಸ್ಥಿತಿ ಬಂದಿದೆ. ಆದಕಾರಣ ಟನ್‌ಗೆ 500ರೂ.ಗಳ ಪರಿಹಾರವನ್ನಾದರೂ ಕೊಟ್ಟು ರೈತರನ್ನು ಉಳಿಸಬೇಕೆಂಬುದು ನನ್ನ ಒತ್ತಾಯವಾಗಿದೆ.

ಮಹಾರಾಷ್ಟ್ರ ಸರಕಾರದವರು ಹೋದ ವರ್ಷದಲ್ಲಿ ಅಲ್ಲಿನ ರೈತರಿಗೆ 400 ರೂ. ಗಳನ್ನು ಪರಿಹಾರವಾಗಿ ಕೊಟ್ಟಿದ್ದಾರೆ. ನೀವು ಎಷ್ಟು ಕೊಡುತ್ತೀರಿ ಎಂಬುದನ್ನು ಪ್ರಕಟಿಸಬೇಕು. ನಿಮಗೆ ಎಷ್ಟು ಕೊಡಲು ಸಾಧ್ಯವೆಂಬುದನ್ನು ಹೇಳಿ. ರೈತರನ್ನು ಉಳಿಸಲು ಏನಾದರೂ ಕಾರ್ಯಕ್ರಮವನ್ನು ಮಾಡುತ್ತೀರೋ ಎಂದು ಹೇಳಬೇಕು. ತಮಗೆ ಗೊತ್ತಿರಬಹುದು ರಾಜ್ಯದಲ್ಲಿ ಸುಮಾರು 80-90ಕೋಟಿ ರೂ. ಅಂದಾಜು ಬೆಲೆಯ ಕಬ್ಬನ್ನು ರೈತರೇನು ಕೊಟ್ಟಿದ್ದಾರೆ ಅವರಿಗೆ ಇನ್ನೂ ಹಣಸಂದಾಯವಾಗಿಲ್ಲ. ಹೀಗಾದಲ್ಲಿ ರೈತರು ಬದುಕುವುದಾದರೂ ಹೇಗೆ? ಒಂದು ಸರಕಾರ ಬದುಕಿದೆ ಎನ್ನುವುದಾದರೆ, ರೈತರ ಬಗ್ಗೆ ತನಗೆ ಕಳಕಳಿ ಇದೆಯೆನ್ನುವುದಾದರೆ ಆ ಕಾರ್ಖಾನೆಯ ಮಾಲೀಕರನ್ನು ಕರೆದು ಅವರಿಗೆ ಛೀಮಾರಿ ಹಾಕಿ, ಅವರ ಸಮಸ್ಯೆಗಳೇನೆಂದು ಕೇಳಿ, ಕಬ್ಬುಕೊಟ್ಟಂಥ ರೈತರಿಗೆ ಹಣವನ್ನು ಕೊಡಿಸುವಂಥ ಕೆಲಸವನ್ನಾದರೂ ನಿಮ್ಮ ನೈತಿಕ ಹೊಣೆ ಎಂದು ತಿಳಿದುಕೊಳ್ಳಬೇಕಲ್ಲವೇ? ಆ ದಿಸೆಯಲ್ಲಿಯೂ ಕೂಡ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸರಕಾರವು ಮಾಡಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಕೂಡ ಕಾಣುತ್ತಾ ಇಲ್ಲ. ಜಿಲ್ಲಾಪಂಚಾಯತ್ಗಳ ಅನುದಾನದ ಕ್ರಿಯಾಯೋಜನೆ ಕಳೆದ ವರ್ಷ ಡಿಸೆಂಬರ್‌ನ ನಂತರ ಮಾಡಿದರು.

ಎಲ್ಲಾ ಕಾಮಗಾರಿಗಳೂ, ಇವೊತ್ತು ಮುಂದುವರಿದ ಕಾಮಗಾರಿಗಳಿಗೂ ಇದುವರೆಗೂ ಕೂಡ ಆಕ್ಷನ್‌ಪ್ಲಾನ್ ಕೂಡ ಅಪ್ರೂವ್ ಆಗಿಲ್ಲ. ಹೀಗಾಗಿ ಕಳೆದ ನಾಲ್ಕು ತಿಂಗಳುಗಳಿಂದ ಜಿಲ್ಲಾ ಪಂಚಾಯತ್ಗಳಲ್ಲಿ ಏನು ಅಭಿವೃದ್ಧಿ ಕಾರ್ಯಗಳು ನಡೆಯಬೇಕಾಗಿತ್ತು ಅದು ತಟಸ್ಥವಾಗಿದೆ. ಹೋದ ವರ್ಷ ಆಕ್ಷನ್‌ಪ್ಲಾನ್ನು ಡಿಸೆಂಬರ್ ಕೊನೆಯಲ್ಲಿ ಮಾಡಿದುದರಿಂದ,

ಆ ಕಾರ್ಯಕ್ರಮಗಳೆಲ್ಲವೂ ಮುಂದುವರಿದು ಯಾವುದೇ ಕಾಮಗಾರಿಗಳನ್ನು ಮಾಡದೇ ಇರುವಂಥ ಪರಿಸ್ಥಿತಿಯು ಕಂಡುಬರುತ್ತಿದೆ. ಇವೊತ್ತು ತಾಲ್ಲೂಕು ಪಂಚಾಯತಿಗೂ ಕೂಡ ಬೇರೆ ಅನುದಾನವನ್ನು ನಾವು ಕೊಡುತ್ತಾ ಇದ್ದೇವೆ. ತಾಲ್ಲೂಕು ಪಂಚಾಯತಿಗೂ ಅನುದಾನವನ್ನು ನಾವು ಕೊಟ್ಟ ಮೇಲೆ, ಜಿಲ್ಲಾ ಪಂಚಾಯತ್ನವರು ಅದಕ್ಕೆ ಒಪ್ಪಿಗೆ ಕೊಡುವ ಅಗತ್ಯವಾದರೂ ಏನಿದೆ? ಹಣವನ್ನು ತಾಲ್ಲೂಕು ಪಂಚಾಯತಿಗೆ ಕೊಟ್ಟ ಮೇಲೆ ಅವರೇ ಅದನ್ನು ಖರ್ಚು ಮಾಡುವ ಸ್ವಾತಂತ್ರವನ್ನು ಹೊಂದಿರಬೇಕು. ಆಕ್ಷನ್‌ಪ್ಲಾನ್ ಕೂಡ ಜಿಲ್ಲಾ ಪಂಚಾಯತಿಗೆ ಬರುವ ಅಗತ್ಯವಿಲ್ಲ. ತಮಗೆ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಿಜವಾಗಿಯೂ ನಂಬಿಕೆ ಇದ್ದಲ್ಲಿ, ಇದನ್ನು ಕಾರ್ಯಗತ ಮಾಡಬೇಕು. ತತ್‌ಕ್ಷಣ ಸರಕಾರ ಒಂದು ಆದೇಶವನ್ನು ಕೊಟ್ಟು, ಮಳೆಗಾಲ ಮುಗಿಯುತ್ತಾ ಬರುತ್ತಾ ಇದೆ, ಸೂಕ್ತ ಕೆಲಸಗಳನ್ನು ಮಾಡಲು ಆಗದಿರುರಂಥ, ಉಸಿರುಕಟ್ಟುವಂಥ ಪರಿಸ್ಥಿತಿಯು ಇದೆ. ಅದಕ್ಕೋಸ್ಕರ ಈ ಆಕ್ಷನ್‌ಪ್ಲಾನ್ಗಳಿಗೆ ಅಪ್ರೂವಲ್ ಕೊಟ್ಟು ಅವರು ಕೆಲಸ ಮಾಡಲು ವಿಶೇಷವಾದ ಕೆಲಸವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಹೀಗೆ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯನ್ನು ಮಾಡಿದ ಮೇಲೆ ಈ 20 ಅಂಶಗಳ ಪ್ರಗತಿಯನ್ನು ಪರಿಶೀಲನೆ ಮಾಡಲು ಪ್ರತಿ ತಿಂಗಳು 5ನೇ ತಾರೀಖಿಗೆ ಸೇರುವ ಸಭೆಗೆ ಶಾಸಕರನ್ನು ಭಾಗವಹಿಸುವಂತೆ ಮಾಡುವ ಅವಕಾಶವಿಲ್ಲವಾಗಿದೆ. ಮತ್ತು ಮೂರು ತಿಂಗಳಿಗೊಮ್ಮೆ ನಡೆಯುವ ಶಾಸಕರ ಅಧ್ಯಕ್ಷತೆಯ ಸಭೆಗೆ ಅವರು ಬರುವುದಕ್ಕೆ ಅವಕಾಶ ಮಾಡಿದ್ದೀರಾ? ತುಂಬಾ ಒಳ್ಳೆಯದೇ, ಅವರು ಬರದಿದ್ದರೆ ಶಾಸಕರು ಸಭೆಯನ್ನು ಮಾಡುವುದಕ್ಕಾಗುವುದಿಲ್ಲ. ಆದರೆ 20 ಅಂಶಗಳ ಪರಿಶೀಲನೆ ಸಭೆಯಲ್ಲಿ ಶಾಸಕರು ಇದ್ದರೆ ಅಲ್ಲಿನ ಆಗುಹೋಗುಗಳು ಗೊತ್ತಾಗುತ್ತವೆ. ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಆ ತಾಲ್ಲೂಕಿನ ಅಭಿವೃದ್ಧಿಗೋಸ್ಕರ ಕೆಲಸ ಮಾಡಲು ಅನುಕೂಲವಾಗುತ್ತದೆ. ಚುನಾಯಿತ ಪ್ರತಿನಿಧಿಗಳು ಇದ್ದರೂ ಕೂಡ ನಿಮ್ಮ ರಾಜಕೀಯ ಅನುಕೂಲಕ್ಕೋಸ್ಕರ ಇವೊತ್ತು ಆರು ಜನ ಸದಸ್ಯರನ್ನು ನೇಮಕ ಮಾಡುವಂಥ ಒಂದು ಅವಕಾಶವನ್ನು, ನಾಮಿನೇಶನ್ ಮಾಡುವಂಥ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಇದು ಒಂದು ಯಾವುದೋ ಹೊಸ ರೋಗ ಪುರಸಭೆ ನಗರಸಭೆ, ಮಹಾನಗರ ಸಭೆಗಳಿಗೂ ಕೂಡ ನಾಮಿನೇಶನ್ ಮಾಡುವಂಥಾದ್ದು, ಚುನಾಯಿತ ಪ್ರತಿನಿಧಿಗಳಿದ್ದರೂ ಕೂಡ ನಿಮಗೆ ಬೇಕಾದಂಥ ವ್ಯಕ್ತಿಗಳನ್ನು ಅಲ್ಲಿ ನಾಮಿನೇಶನ್ ಮಾಡಿ ಪ್ರಗತಿ ಕೆಲಸಗಳು ಇಲ್ಲಿ ಆಗದಿರಲು ಅಡ್ಡಿ ಆತಂಕಗಳನ್ನು ಮಾಡಿಕೊಟ್ಟಿದ್ದೀರಿ. ದಯಮಾಡಿ ಇದನ್ನು ಕೈಬಿಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶಾಸಕರ ಅಧ್ಯಕ್ಷತೆಯಲ್ಲಿ ಮೂರು ತಿಂಗಳಿಗೊಮ್ಮೆ ನಮಗೆ ಉಪಕಾರ ಮಾಡುವುದಕ್ಕೋಸ್ಕರವಾಗಿ 20 ಅಂಶಗಳ ಸಭೆಯಲ್ಲಿ ಮಾಡಬಹುದೆಂದು ಅಧಿಕಾರವನ್ನೇನು ಕೊಟ್ಟಿದ್ದೀರಿ ಅದನ್ನು ಪ್ರತಿ ತಿಂಗಳೂ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ಮಾಡಲು ಅವಕಾಶ ಮಾಡಿಕೊಟ್ಟರೆ, ಅಲ್ಲಿ ಕಾಮಗಾರಿಗಳನ್ನು ಪರಿಶೀಲನೆ ಮಾಡಲು ಕೆಲಸ ಮಾಡಲು ಅನುಕೂಲವಾಗುತ್ತದೆ. ಆ ಬಗ್ಗೆ ಸರಕಾರವು ಒಂದು ಬದಲಾವಣೆಯನ್ನು ತರಬೇಕು, ಆ ರೀತಿಯ ಒಂದು ಆದೇಶವನ್ನು ಹೊರಡಿಸಬೇಕೆಂದು ಹೇಳಿ ಒತ್ತಾಯ ಮಾಡುತ್ತೇನೆ.

ಇನ್ನು ಕೃಷಿ ಇಲಾಖೆಯ ಬಗ್ಗೆ ಮಾನ್ಯ ಬೈರೇಗೌಡರು ತುಂಬಾ ಕಳಕಳಿಯನ್ನು ಇಟ್ಟುಕೊಂಡಿದ್ದಾರೆ. ವಿಶೇಷ ಘಟಕ ಯೋಜನೆಯಲ್ಲಿ ಹಳ್ಳಿಗಾಡಿನ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ಬೋರ್‌ವೆಲ್ಲಗಳನ್ನು ತೆಗೆಯುವುದಕ್ಕೋಸ್ಕರವಾಗಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ರವರಿಗೆ ನೀವು ಪರವಾನಿಗೆಯನ್ನು ಕೊಟ್ಟಿದ್ದೀರಿ.

12.20 ಪಿ.ಎಂ.

ಒಂದು ವಾರದ ಹಿಂದೆ ನನ್ನ ಗದ್ದೆಯಲ್ಲಿ ಒಂದು ಬೋರ್‌ವೆಲ್ ಹಾಕಿಸಿದೆ ಒಂದಡಿಗೆ 32 ರೂ ತೆಗೆದುಕೊಂಡರು. ಇವತ್ತು ರಾಜ್ಯದಲ್ಲಿ ತಾವು ವಿಚಾರ ಮಾಡಿ, ಪ್ರೈವೇಟ್‌ನವನು ಒಂದಡಿ ಬೋರ್ ತೆಗೆಯುವುದಕ್ಕೆ 35ರೂ ವರೆಗೂ ತೆಗೆದುಕೊಳ್ಳುತ್ತಾರೆ, ಆದರೆ ಆಗ್ರೋ ಇಂಡಸ್ಟ್ರಿಸ್‌ನಲ್ಲಿ ಒಂದಡಿಗೆ 70ರೂಗಳಂತೆ ವಸೂಲುಮಾಡುತ್ತಿದ್ದೀರಿ. ಇನ್ನೊಂದು ಆದೇಶ ಹೊರಡಿಸಿದ್ದೀರಿ, ಯಾವುದೇ ಕೃಷಿ ಕಾರ್ಮಿಕನಿಗೆ ಯಾವುದೇ ಸ್ಕೀಮಿನಡಿಯಲ್ಲೂ ಅದು ಆಗ್ರೋ ಇಂಡಸ್ಟ್ರೀಸ್ ಮೂಲಕವೇ ಆಗಬೇಕೆಂದು ಜನರನ್ನು ಶೋಷಿಸುವ ಹಗಲುದರೋಡೆ ಇದಲ್ಲವೇ ಸ್ವಾಮಿ? ಒಬ್ಬ ಖಾಸಗಿಯವನು 35 ರೂ ಗೆ ಸಿದ್ಧವಿದ್ದರೆ, 70ರೂ ನಿಮಗೆ ಏತಕ್ಕೆ ಕೊಡಬೇಕು? ಇದರಿಂದ ಅರ್ಥವಾಗುವುದಿಲ್ಲವೇ ಒಳವ್ಯವಹಾರ ನಡೆಯುತ್ತದೆ ಎಂದು. ಒಂದು ಬೋರ್‌ವೆಲ್ ತೆಗೆದರೆ ಇಷ್ಟು ಎಂದು ಜನ ಮಾತನಾಡುವುದಿಲ್ಲವೇ? ವಿಶೇಷ ಘಟಕ ಯೋಜನೆಯಲ್ಲಿ ಹರಿಜನಗಿರಿಜನರ

ಉದ್ಧಾರವೆಂದು ಹೇಳಿಕೊಂಡು ಬರುವಂತಹ ಸಬ್ಸಿಡಿ ಹಣವನ್ನು ಈ ರೀತಿ ರಿಗ್ ಹೊಂದಿರುವ ರಾಜಕಾರಣ ಪುಢಾರಿ ಸರ್ಕಾರಿ ಏಜೆಂಟ್‌ಗಳು ಲೂಟಿ ಹೊಡೆಯುವಂತಹ ಹಗಲುದರೋಡೆ ನಿಮ್ಮ ಕಾಲದಲ್ಲಿ ನಡೆಯುತ್ತದೆನ್ನುವುದಾದರೆ ಅದಕ್ಕೆ ನೀವು ಬೆಂಬಲ ಕೊಡುತ್ತೀರಿ ಎನ್ನುವುದಾದರೆ, ಅಥವಾ ಆಗ್ರೋ ಇಂಡಸ್ಟ್ರೀಸ್ ಈ ತರಹ ಸುಲಿಗೆ ಮಾಡುತ್ತಿದ್ದರೂ ಅವರಿಗೆ ಅಧಿಕಾರ ಕೊಡುತ್ತೀರಿ ಎನ್ನುವುದಾದರೆ ಭೈರೇಗೌಡರು ಸಚಿವರಾಗುವಂತಹ ಅಗತ್ಯ ಇತ್ತೇ?

ಶ್ರೀ ಸಿ. ಭೈರೇಗೌಡ : ಉಪಾಧ್ಯಕ್ಷರೇ, ಪರಿಶಿಷ್ಟ ಜಾತಿ ಮತ್ತು ವರ್ಗದ ನಿಗಮವು ವಿಶೇಷ ಘಟಕ ಯೋಜನೆಯಡಿ ಕೊಳವೆಬಾವಿಗಳನ್ನು ಕ್ರಾಷ್‌ಪ್ರೋಗ್ರಾಂನಲ್ಲಿ ತೆಗೆದುಕೊಂಡಿರುವುದು ನಿಜ. ನಮ್ಮ ಸರ್ಕಾರ ಬಂದ ಮೇಲೆ ಅದರಲ್ಲಿ ಸುಮಾರು 20 ಕೋಟಿ ತೊಡಗಿಸಿರುವುದೂ ನಿಜ. ಅಂಕಿಅಂಶಗಳು ಬೇಕಾದರೆ ಕೊಡುತ್ತೇನೆ. ಪಿಡಬ್ಲ್ಯೂಡಿ ಅಥವಾ ಪಿಎಚ್‌ಇ ಇಲಾಖೆಯ ಶೆಡ್ಯೂಲ್ ಆಫ್ ರೇಟ್ಸ್‌ಗೂ, ಆಗ್ರೋ ಇಂಡಸ್ಟ್ರೀಸ್‌ನವರು ಕೊರೆಯುವ ದರಕ್ಕೂ ಸಾಕಷ್ಟು ವ್ಯತ್ಯಾಸ ಇದೆ. ಪಿಎಚ್‌ಇ ಇಲಾಖೆಯ ದರಕ್ಕಿಂತ ಆಗ್ರೋ ಇಂಡಸ್ಟ್ರೀಸ್‌ನವರ ದರ ಕಡಿಮೆ ಇದೆ. ಅದರಲ್ಲಿ ಅವ್ಯವಹಾರ ಆಗುತ್ತಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ, ಖಂಡಿತವಾಗಿಯೂ ಯಾರ ಮುಲಾಜೂ ಇಲ್ಲದೆ ಕ್ರಮ ಜರುಗಿಸಲು ನಾನಂತೂ ತಯಾರಾಗಿದ್ದೇನೆ. ಆದರೆ ಒಳವ್ಯವಹಾರ ನಡೆದಿರುವುದೆಂಬುದು ಖಂಡಿತವಾಗಿ ಇಲ್ಲ. ಒಳವ್ಯವಹಾರ ತಪ್ಪಿಸಬೇಕೆಂಬ ದೃಷ್ಟಿಯಿಂದಲೇ ಇದನ್ನು ನಾವು ಮಾಡಿರುವುದು ಮತ್ತು ಕೃಷಿ ಸಾಮಗ್ರಿಗಳನ್ನು ಆಗ್ರೋಇಂಡಸ್ಟ್ರೀಸ್ ಮೂಲಕವೇ ಕೊಡಿಸಬೇಕೆಂದು ಮಾಡಿರುವುದೂ ನಿಜ. ಏತಕ್ಕೆಂದರೆ ನಾನು ಎಲ್ಲವನ್ನೂ ನೋಡಿದ್ದೇನೆ. ಇವತ್ತು ರಾಜ್ಯಮಟ್ಟದಲ್ಲಿ ಕೊಟೇಷನ್ ಕರೆಯುತ್ತಾರೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಎಲ್ಲಾ ಬಾವಿಗಳನ್ನು ಆಗ್ರೋದವರಿಗೆ ಕೊಟ್ಟಿಲ್ಲ 5 ಕೋಟಿ ಮಾತ್ರ ಅದಕ್ಕಾಗಿ ಇಡಲಾಗಿದೆ. ತಾವು ಹೇಳಿದಂತೆ 35ರೂಗೇನಾದರೂ ಮಾರ್ಕೆಟ್ ಬೆಲೆ ಇದ್ದರೆ ಅದಕ್ಕೆ ಬೇರೆ ರೀತಿ ವ್ಯವಸ್ಥೆ ಮಾಡೋಣ.

ಶ್ರೀ ಆರ್. ಶ್ರೀನಿವಾಸ್: ಉಪಾಧ್ಯಕ್ಷರೇ, ಒಂದು ವಿನಂತಿ. ವಿರೋಧಪಕ್ಷದ ನಾಯಕರು ಎತ್ತಿರುವುದಕ್ಕೆ ನನ್ನ ಸ್ವಾಗತ ಇದೆ, ಶಿವಮೊಗ್ಗದ ಕಡೆಯೆಲ್ಲಾ ಮರಳುಭೂಮಿ ಇರುವುದರಿಂದ 32, 35ಕ್ಕೆ ಕೊರೆಯಬಹುದು. ಆದರೆ ಕೋಲಾರ ಜಿಲ್ಲೆ ಕಡೆ ಹಾರ್ಡ್‌ಸಾಯಿಲ್ ಇರುವುದರಿಂದ ಖಾಸಗಿಯವರೂ 60 ರೂ.ಗೆ ಬೋರ್ ಹಾಕುವ ಪರಿಸ್ಥಿತಿ ಇದೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ನೊ ವಾಟರ್ ನೊ ಮನಿ ಎಂಬ ಸ್ಕೀಮಿದೆ, ಅದರಡಿ ಉತ್ತರ ಕರ್ನಾಟಕದಲ್ಲಿ ಕೆಲವು ಜನ ಮುಂದೆ ಬರುತ್ತಾರೆ ಆದರೆ ಹಳೇಮೈಸೂರು ಕಡೆ ಯಾರೂ ಬರುತ್ತಾ ಇಲ್ಲ. ಆಗ ಹೆಚ್ಚಿನ ಬೆಲೆ ಕೊಡಬೇಕಾಗುತ್ತದೆ. ಆಗ್ರೋಗೆ ಕೇವಲ 5 ಕೋಟಿ ಮಾತ್ರ ನಾವು ಕೊಟ್ಟಿದ್ದೇವೆ.

ಶ್ರೀ ವೈ. ರಾಮಕೃಷ್ಣ : "No Water no Money" ಎಂಬ ಸ್ಕೀಮನ್ನು ಗೊತ್ತಿದ್ದು ಏತಕ್ಕೆ ಇಟ್ಟಿರಿ? ಇಲಾಖೆಯಿಂದ ಒಂದು ಕಾಸೂ ಖರ್ಚುಮಾಡಿಲ್ಲ, ಏತಕ್ಕೆ ಯಾರೂ ಮುಂದೆ ಬರುವುದಿಲ್ಲ? ಅಂತಹ ಸ್ಕೀಂಗಳನ್ನು ಹರಿಜನರ ಪ್ರಗತಿಗೆ ಅಡ್ಡಿ ಮಾಡಲು ಇಟ್ಟಿದ್ದೀರೇ ಹೊರತು ಪ್ರಗತಿಹೊಂದಿ ಮುಂದೆಹೋಗಲು ಇಟ್ಟಿಲ್ಲ, ಅದನ್ನು ದಯವಿಟ್ಟು ಕಿತ್ತು ಹಾಕಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಯಾರಿಗೂ ಅರ್ಥವಾಗದ ವಿಷಯವೇ ಸ್ವಾಮಿ? ಕೋಲಾರ ಒಂದು ವಿಶಿಷ್ಟ ಸ್ಥಳವೆಂದೂ ಅಲ್ಲಿ ಕಲ್ಲುಬಂಡೆಗಳಿವೆ ಜಾಸ್ತಿ ಇದ್ದು, ಅಲ್ಲಿ ಬೇಕಾಗುತ್ತದೆ ಎಂದು ಹೇಳಿದರು. ನಾನು ನಿಮ್ಮನ್ನು ಕೇಳುತ್ತೇನೆ. ಯಾರಿಂದಲಾದರೂ ವರದಿ ತರಿಸಿಕೊಳ್ಳಿ, ಕರ್ನಾಟಕದಲ್ಲಿ ಶೇಕಡ 90 ಭಾಗದಲ್ಲಿ ಪ್ರೈವೇಟ್‌ನವರು ಇವತ್ತು 35ರೂವರೆಗೆ ಬೋರ್ ಕೊರೆಯುತ್ತಿದ್ದಾರೆ. ಒಳ್ಳೆಯ ಪೈಪ್ ಹಾಕುತ್ತಾರೆ, ಇವರ ತರಹ ಕಳಪೆಯಲ್ಲ, ನಾನು ಕೇಳುವುದು ಆಗ್ರೋ ಇಂಡಸ್ಟ್ರಿಸ್ ಯಾರದ್ದು? ಯಾವ ಉದ್ದೇಶಕ್ಕಾಗಿ ಅದು ಪ್ರಾರಂಭವಾಯಿತು? ರೈತರ ಹಿತದೃಷ್ಟಿಯಿಂದ ತಾನೇ ಮಾವಿನಹಣ್ಣಿನ ರಸ ಮಾಡಲು ಅಲ್ಲ, ಆಗ್ರೋ ಇಂಡಸ್ಟ್ರೀ ಎಂಬ ಏಜೆನ್ಸಿಯನ್ನು ನೀವು ಫಿಕ್ಸ್ ಮಾಡಿ ಎಸ್‌ಸಿಎಸ್‌ಟಿಗೆ ಸಬ್ಸಿಡಿ ಕೊಡುತ್ತೇವೆಂಬ ನೆಪದಲ್ಲಿ 32-35 ರೂ ಒಂದಡಿಗೆ ಇರುವಾಗ, 70 ರೂ ನೀವು ಫಿಕ್ಸ್ ಮಾಡಿದ್ದೀರಿ ಅಂದರೆ ಇದರರ್ಥವೇನು? ಆಗ್ರೋ ಇಂಡಸ್ಟ್ರಿಸ್‌ನವರನ್ನು ನಾನು ಕೇಳಿದ್ದೇನೆ, ಯಡಿಯೂರಪ್ಪನವರೇ, ಇಲ್ಲಿಂದ ಅಲ್ಲಿವರೆಗೆ ನಾವು ಕಮಿಷನ್ ಕೊಡಬೇಕು ಎಂದು ಹೇಳುತ್ತಾರೆ.

ಶ್ರೀ ಸಿ. ಭೈರೇಗೌಡ : ಈ ಮಾತನ್ನು ಮಾತ್ರ ನಾನು ಖಡಾಖಂಡಿತವಾಗಿ ನಿರಾಕರಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಸತ್ಯಸಂಗತಿ ಒಪ್ಪಿಕೊಳ್ಳಿ, ಸಬ್ಸಿಡಿ ಮೂಲಕ ಔಷಧಿ ಇರಬಹುದು ಬೇರೆ ಇಂಪ್ಲಿಮೆಂಟ್ಸಿರಬಹುದು ಬೋರ್‌ವೆಲ್ ತೆಗೆಯುವುದಿರಬಹುದು ಮಾರ್ಕೆಟ್‌ರೇಟಿಗಿಂತ 40 ಪಟ್ಟು ಜಾಸ್ತಿ ಮಾಡಿ, ಲೂಟಿ ನಡೆದಿದೆ. ಕೊಟೇಶನ್ ಟೆಂಡರ್ ಇವೆಲ್ಲಾ ಅಡ್ಜಸ್ಟ್ ಮೆಂಟ್. ರಾಮಣ್ಣ, ತಿಮ್ಮಣ್ಣ ಬೋರಣ್ಣ ಎಂಬ ನಾಲ್ಕು ಜನರ ಹೆಸರನ್ನು ಹಾಕಿಕೊಂಡು 10 ರೂಪಾಯಿದನ್ನು 20ರೂಗೆ ಮಾರುವುದು, ಹೀಗಾಗಿ ಬಡವನಿಗೆ ಆ ಸೌಲಭ್ಯ ಸಿಗುತ್ತಿಲ್ಲ. ಹಾಡುಹಗಲಿನಲ್ಲೇ ದರೋಡೆ ನಡೆದಿದೆ. ಭೈರೇಗೌಡರು ತೆಗೆದುಕೊಳ್ಳುತ್ತಾರೆಂದು ನಾನು ಹೇಳಲಿಲ್ಲ, ಆದರೆ ಭೈರೇಗೌಡರು ಇದನ್ನು ತಡೆಯುವುದಕ್ಕೆ ವಿಫಲರಾಗಿದ್ದಾರೆಂದು ನಾನು ಹೇಳಿದೆ.

ಶ್ರೀ ಸಿ. ಭೈರೇಗೌಡ : ನೀವು ಹೇಳುತ್ತಿರತಕ್ಕಂಥಾದ್ದು ಇಲ್ಲಿ ನಡೆಯುತ್ತಿಲ್ಲವೆಂದು ನಾನು ಒಪ್ಪುತ್ತಿಲ್ಲ. ಇದನ್ನು ತಡೆಗಟ್ಟುವುದಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆಂದು ವಿಚಾರ ಮಾಡಬೇಕಾಗುತ್ತದೆ. ನಾನೇ ನನ್ನ ಕಣ್ಣಾರೆ ನೋಡಿದ್ದೇನೆ. ಅಲ್ಲಿ ಸರಬರಾಜಾಗಿರತಕ್ಕಂತಹ ಮರ ಮುಟ್ಟುಗಳು ಇರಬಹುದು, ಉಪಕರಣಗಳು ಇರಬಹುದು, ಅದು ಯಾವ ರೀತಿ ಇತ್ತು ಎಂಬುದನ್ನು ನಾನು ನನ್ನ ಸ್ವಂತ ಅನುಭವದಿಂದ ನೋಡಿದ್ದೇನೆ. ಇದರ ಗುಣಮಟ್ಟವನ್ನು ನಾವು ನೋಡಬೇಕಾಗುತ್ತದೆ. ಜೊತೆಗೆ ಬೆಲೆ ಕೂಡ ದುಬಾರಿಯಾಗಬಾರದೆಂದು ನಾವು ಬಹಳ ಎಚ್ಚರಿಕೆಯಿಂದ ಕೆಲಸ ಮಾಡುತ್ತಿದ್ದೇನೆ. ಇಲ್ಲಿ ಎಲ್ಲರೂ ಮೇಲಿನಿಂದ ಕೆಳಗಿನವರೆಗೆ ಸತ್ಯ ಹರಿಶ್ಚಂದ್ರರು ಎಂದು ಅವರ ಪರವಾಗಿ ನಾನು ವಾದ ಮಾಡುವುದಕ್ಕೆ ನಿಂತಿಲ್ಲ. ರೈತರಿಗೆ ಕೊಳವೆ ಬಾವಿಗಳ ಅವಶ್ಯಕತೆ ಇದೆ. ಆ ಕಡೆ ಕೊಳವೆ •ಬಾವಿಗಳನ್ನು ಯಾರೂ ಬಾರದೇ ಇರುವ ಕಾರಣದಿಂದ ನಾವು ವಿಚಾರ ಮಾಡಬೇಕಾಗಿದೆ. ಬಜಾರಿನಲ್ಲಿ ಹೋದರೆ 5 ಹೆಚ್.ಪಿ. ಸಬ್‌ಮರ್ಸಿಬಲ್ ಪಂಪ್‌ಸೆಟ್ 25,000 ಆಗುತ್ತದೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಿಂದ 17,500 ರೂಪಾಯಿಗೆ ಸರಬರಾಜು ಮಾಡುತ್ತಿದ್ದೇವೆ. ಅಲ್ಲಿ ಉಪಯೋಗಿಸತಕ್ಕಂತಹ ಪೈಪು, ಮೊದಲು ಎಲೆ ಮಂದ ಇರತಕ್ಕಂತಹ ಕೇಸಿಂಗ್ ಉಪಯೋಗಿಸುತ್ತಿದ್ದರು. ನಾವು ಐ.ಎಸ್.ಓ. 9000-2 ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್

ಅನ್ನು ಉಪಯೋಗಿಸುತ್ತಿದ್ದೇವೆ. ಅಲ್ಲಿ ಉಪಯೋಗಿಸತಕ್ಕಂತಹ ಪ್ಯಾನಲ್ ಬೋರ್ಡ್ ಕೇಬಲ್ ಎಲ್ಲವೂ ಸಹ ಇಡೀ ದೇಶದಲ್ಲೇ ಅತ್ಯುತ್ತಮವಾದ ಕ್ವಾಲಿಟಿ ಯಾವುದು ಇದೆ ಅದನ್ನು ನಾವು ಉಪಯೋಗಿಸುವಂತಹ ವ್ಯವಸ್ಥೆ ಮಾಡಿದ್ದೇವೆ.

ನಮ್ಮ ಕೋಲಾರ ಜಿಲ್ಲಾ ಪಂಚಾಯತಿಯಲ್ಲಿ ಸುಮಾರು 5 ವರ್ಷಗಳ ಹಿಂದೆ ಏನು ನಡೆಯಿತು ಎನ್ನುವುದನ್ನು ಗಮನಿಸಬೇಕಾಗಿದೆ. ಕೊಳವೆ ಬಾವಿಗಳಲ್ಲಿ ನೀರೇ ಇಲ್ಲ, ಕೆಲವು ಕಡೆಯಲ್ಲಿ ಇವತ್ತಿಗೂ ಪೈಪ್ ಕೊಟ್ಟಿಲ್ಲ ಇವತ್ತಿಗೂ ಪಂಪ್‌ಸೆಟ್ ಸರಬರಾಜಾಗಿಲ್ಲ ಆದರೆ ಹಣ ಮಾತ್ರ ಪಾವತಿಯಾಗಿದೆ ಇದೆಲ್ಲವನ್ನೂ ತಪ್ಪಿಸಬೇಕೆಂಬ ದೃಷ್ಟಿಯಿಂದ ಒಂದು ವ್ಯವಸ್ಥಿತವಾದಂತಹ ರೀತಿಯಲ್ಲಿ ಇದನ್ನು ಮಾಡಬೇಕೆಂದು ಪ್ರಯತ್ನಪಟ್ಟಿದ್ದೇನೆ. ಲೋಪದೋಷವಿದ್ದರೆ ನೀವೇ ಅಲ್ಲ ಬೇರೆ ಯಾರು ಬೇಕಾದರೂ ಯಾವ ಘಳಿಗೆಯಲ್ಲಿ ನನ್ನ ಗಮನಕ್ಕೆ ತಂದರೂ ಅದನ್ನು ಖಂಡಿತವಾಗಿ ಸರಿ ಮಾಡುತ್ತೇನೆ. ಅಂತಹದ ಮೇಲೆ ಉಗ್ರವಾಗಿ ಕ್ರಮ ತೆಗೆದುಕೊಳ್ಳುವುದಲ್ಲ, ಅಂತಹ ಪರಿಸ್ಥಿತಿಯನ್ನು ಮುಂದುವರಿಸುವುದಕ್ಕೆ ಅವಕಾಶ ಕೊಡುವುದಿಲ್ಲವೆಂಬ ಭರವಸೆಯನ್ನು ತಮಗೆ ಕೊಡುತ್ತದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಬೈರೇಗೌಡರೇ, ಇಷ್ಟೇ ಹೇಳಬಯಸುತ್ತೇನೆ. ಕಾರಣಗಳನ್ನು ಹೇಳ ಬೇಕಾದರೆ ಏನು ಬೇಕಾದರೂ ಹೇಳಬಹುದು. ಇವತ್ತು ಸಹ 250 ಅಡಿ ಆಳಕ ಇಳಿಸಿದ್ದೇವೆಂದು ಹೇಳಿ 150 ಇಳಿಸಿರುವಂಥಾದ್ದು ಪೈಪನ್ನು ಹಾಕದೇ ಇರುವಂಥಾದ್ದು ನಡೆಯುತ್ತಿದೆ. ಎಸ್.ಸಿ, ಎಸ್.ಟಿ. ರೈತರಿಗೆ ಸಬ್ಸಿಡಿಯ ಉಪಯೋಗವಾಗಬೇಕೆಂದು ಇದ್ದರೆ ......

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಸಂಪೂರ್ಣ ಗುತ್ತಿಗೆಗೆ ಕೊಟ್ಟಿಲ್ಲ ಹತ್ತು ಸಾವಿರ ಬೋರ್‌ವೆಲ್ ಹಾಕಬೇಕೆಂದು ನಮ್ಮ ಉದ್ದೇಶ ಇದೆ. ಕೇವಲ 5 ಕೋಟಿಗೆ ಮಾತ್ರ ಕೊಟ್ಟಿದ್ದೇವೆ. ತಾವು ಹೇಳಿದಂತೆ 35-40 ಅಡಿಗೆ ಇದ್ದರೆ ಇದರ ಬಗ್ಗೆ ವ್ಯಾಪಕವಾದ ಜಾಹೀರಾತು ಮಾಡಿ ಕಡಿಮೆ ಬೆಲೆಯಲ್ಲಿ ಯಾರು ಕೊಡುತ್ತಾರೆ ಅಲ್ಲಿಂದ ತೆಗೆದುಕೊಳ್ಳಬಹುದು. ಖಾಸಗಿಯವರಿಗೆ ಕೊಡಬಾರದೆಂದೇನೂ ಇಲ್ಲ. ಅದು ನನ್ನ ಇಲಾಖೆಗೆ ಸಂಬಂಧಪಟ್ಟಿದ್ದರಿಂದ .....

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ತಾವು ಒಪ್ಪುತ್ತೀರಲ್ಲವೇ, ಪ್ರೈವೇಟ್‌ನವರು 35 ರೂಪಾಯಿ ಪರ್ ಫೀಟ್ ಹೊಡೆಯುತ್ತಿದ್ದಾರೆ ಅಂಥ ನೂರು ಉದಾಹರಣೆ ಕೊಡುತ್ತೇನೆ ಬನ್ನಿ. ಈ ವ್ಯವಸ್ಥೆಯನ್ನು ಏನು ಮಾಡಬೇಕು ಅದನ್ನು ನೀವು ಮಾಡಿ. ನಮ್ಮ ಭಾಗದಲ್ಲೆಲ್ಲಾ 35 ಇದೆ.

ಒಬ್ಬ ಮಾನ್ಯ ಸದಸ್ಯರು : 45-50 ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 50 ಎಂದೇ ಒಪ್ಪಿಕೊಳ್ಳುತ್ತೇನೆ. ಈಗ 70 ರೂ ಇದೆ. ನಿಮ್ಮನ್ನು ಟೀಕೆ ಮಾಡಬೇಕೆಂದು ಹೇಳುತ್ತಿಲ್ಲ. ಮಾನ್ಯ ಬೈರೇಗೌಡರು, ಹಾಗ್ಯೂ ಮಾನ್ಯ ಕೃಷ್ಣಾರೆಡ್ಡಿಯವರು ಇರುವಂತಹ ಕಾಲದಲ್ಲಾದರೂ ಇದನ್ನು ಸುಧಾರಣೆ ಮಾಡುವುದಕ್ಕಾದರೆ ಮಾಡಿ. ಆಗ್ರೋ ಇಂಡಸ್ಟ್ರೀಸ್ ಒಂದು ದೊಡ್ಡ ಬಿಳಿ ಆನೆಯಾಗಿದೆ. ಅಲ್ಲಿ ಲೂಟಿಯಾಗುತ್ತಿದೆ. ಹಿಂದಿನ ವರದಿಗಳನ್ನು ತೆಗೆದುನೋಡಿ. ಅವರಿಗ್ಯಾಕೆ ಇಂತಹ ಕೆಲಸಗಳನ್ನು ಕೊಡುತ್ತೀರಿ.?

ಶ್ರೀ ಸಿ. ಭೈರೇಗೌಡ : ಅದು ಆಗುತ್ತಿದ್ದದ್ದು ನಿಜ. ಅದನ್ನು ಇವತ್ತು ಸಾಕಷ್ಟು ಕಡಿಮೆ ಮಾಡುವುದಕ್ಕೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜಿಲ್ಲಾ ಪರಿಷತ್ ಅಧ್ಯಕ್ಷರು ಬಹುತೇಕ ನಿಮ್ಮವರೇ ಇದ್ದಾರೆ. ಅವರನ್ನು ವರದಿ ಕೇಳಿ. ಪ್ರತಿ ತಾಲ್ಲೂಕಿನಲ್ಲಿ ಎಸ್.ಸಿ, ಎಸ್.ಟಿ. ಯವರಿಗೆ ಈ ಸ್ಕೀಮಿನಲ್ಲಿ ಶೋಷಣೆಯಾಗುತ್ತಿದೆ, ಅವರು ಶಾಪ ಹಾಕುತ್ತಿದ್ದಾರೆ. ಸರಿಪಡಿಸುವುದಕ್ಕೇನು ಕ್ರಮ ತೆಗೆದುಕೊಳ್ಳುತ್ತೀರೋ ಅದು ನಿಮಗೆ ಬಿಟ್ಟಿದ್ದುದು. ನಾನು 12 ಗಂಟೆಗೆ ಮುಗಿಸಬೇಕಾಗಿತ್ತು. ಬೇಗನೆ ಮುಗಿಸುತ್ತೇನೆ ಇನ್ನು ಅನೇಕ ಸದಸ್ಯರು ಮಾತನಾಡುವವರಿದ್ದಾರೆ. ಮೈನರ್ ಇರಿಗೇಷನ್ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಶಿಕಾರಿಪುರ ತಾಲ್ಲೂಕಿನಲ್ಲಿ ಕಲ್ಲು ಒಡ್ಡು ಯೋಜನೆ ಒಂದು ವಿಶ್ವ ಬ್ಯಾಂಕ್ ಏಡ್ ಪ್ರೋಗ್ರಾಂನಲ್ಲಿ 1980 ರಲ್ಲೇ ಮಂಜೂರಾಗಿದೆ. ಇದು ಕೃಷ್ಣಾ ಬೇಸಿನ್‌ನಲ್ಲಿ ಬರುವಂಥಾದ್ದು. 3000 ಹೆಕ್ಟೇರ್ ಜಮೀನಿಗೆ ಅದು ನೀರಾವರಿ ಆಗುವಂಥಾದ್ದು. ಈ ಪ್ರಾಜೆಕ್ಟ್ ಅನ್ನು 11.11.91ರಲ್ಲಿ ಕ್ಲಿಯರ್ ಮಾಡಿ, ಆಡಳಿತಾತ್ಮಕ ಮಂಜೂರಾತಿ ಸಹ ಆಗಿತ್ತು. ಯಾವುದೋ ಕಾರಣಕೋಸ್ಕರ ಆ ಕೆಲಸ ಪ್ರಾರಂಭವಾಗಲಿಲ್ಲ. ಅಲ್ಲಿ ಅರಣ್ಯವಿಲ್ಲದಿದ್ದರೂ ಸಹ ವರದಿಯನ್ನು ಸರಿಯಾಗಿ ಕೊಡದೇ ಇದ್ದ ಪರಿಣಾಮವಾಗಿ, ಆ ಸಬ್ ಡಿವಿಜನ್ ಮಾನ್ಯ ಬಸವಣ್ಣಪ್ಪನವರು ಸಚಿವರಾಗಿದ್ದಂತಹ ಕಾಲದಲ್ಲಿ ಕೆಲಸ ಪ್ರಾರಂಭವಾಗಿದ್ದು ನಿಂತು ಹೋಯಿತು. ಇದನ್ನು ಮೇಜರ್ ಇರಿಗೇಷನ್‌ಗೆ ಟ್ರಾನ್ಸ್‌ಫರ್ ಮಾಡಿದರೆ ಕೃಷ್ಣಾ ಬೇಸಿನ್‌ಗೆ ಸ್ವಲ್ಪ ಹಣ ಬರುತ್ತದೆ. ಅದು ಆಗುವುದರಿಂದ ಸುಮಾರು 4500 ಹೆಕ್ಟೇರ್ ಜಮೀನಿಗೆ ನೀರಾವರಿಯಾಗುತ್ತದೆ. ಆ ದಿಕ್ಕಿನಲ್ಲಿ ವಿಶೇಷವಾದ ಪ್ರಯತ್ನ ಮಾಡಿ ಇದನ್ನು ಮಂಜೂರು ಮಾಡಿಸಬೇಕೆಂದು ಹೇಳುತ್ತಿದ್ದೇನೆ. ಅಂಜನಾಪುರ, ಅಂಬಡಿಗೋಡ ಜಲಾಶಯ ಇದೆ ಮಾನ್ಯ ಸಚಿವರಾದ ಬಸವಣ್ಣೆಪ್ಪನವರಿಗೆ ಗೊತ್ತಿದೆ. ಅಲ್ಲಿ 3 ಅಡಿಗೆ ಏರಿಸುವುದರ ಬಗ್ಗೆ 79-80 ರಲ್ಲೇ ಅಂದಾಜು ಆಗಿತ್ತು. ಅದರಿಂದ ಸುಮಾರು 1000ಹೆಕ್ಟೇರಿಗೂ ಹೆಚ್ಚು ನೀರಾವರಿಯಾಗುತ್ತಿತ್ತು, ಈ ಯೋಜನೆಗೂ ಕೂಡ ಮಂಜೂರಾತಿಯನ್ನು ಕೊಡಬೇಕು. ಅಲ್ಲಿ ಒಂದು ಸನ್ಯಾಸಿಕೊಪ್ಪ ಲಿಫ್ಟ್ ಇರಿಗೇಷನ್ ಬಡ್ಜೆಟ್ಟಿನಲ್ಲಿ ಸೇರಿ ಕೈ ಬಿಟ್ಟು ಹೋಗುತ್ತಿದೆ. ಅವರು ಕೊಟ್ಟಂತಹ ವರದಿ ಸರಿ ಇಲ್ಲದೆ ತೊಂದರೆಯಾಗಿದೆ. ಅಲ್ಲಿ ಈ ಯೋಜನೆಯನ್ನು ಈ ವರ್ಷ ಸೇರಿಸಿ ಇದಕ್ಕೆ ವಿಶೇಷ ಗಮನ ಕೊಡಬೇಕೆಂದು ಒತ್ತಾಯ ಮಾಡಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ಹಾಲಿ ಪ್ರಧಾನ ಮಂತ್ರಿಗಳಾದ ದೇವೇಗೌಡರು ಇಲ್ಲಿ ಮುಖ್ಯ ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಕೊನೆ ಸಚಿವ ಸಂಪುಟದ ಸಭೆಯಲ್ಲೋ ಅಥವಾ ಕೊನೆಯಲ್ಲೋ ರಾತ್ರಿ ಎಷ್ಟೋ ಹೊತ್ತಿನವರೆಗೆ ಸಭೆ ನಡೆದು ಸಾವಿರಾರು ಎಕರೆ ಜಮೀನನ್ನು ಡಿನೋಟಿಫೈ ಮಾಡಿದರು ಎಂದು ಹೇಳಿದರು. ಮಾನ್ಯ ಯಡಿಯೂರಪ್ಪನವರ ಹತ್ತಿರ ಆ ರೀತಿಯ ವಿವರಗಳೇನಾದರೂ ಇದ್ದರೆ ದಯವಿಟ್ಟು ಹೇಳಬೇಕು. ಏಕೆಂದರೆ ಒಬ್ಬ ಜವಾಬ್ದಾರಿಯ ಸ್ಥಾನದಲ್ಲಿರತಕ್ಕಂಥವರ ಮೇಲೆ ಈ ರೀತಿಯಾಗಿ ಸಾವಿರಾರು ಎಕರೆ ಜಮೀನನ್ನು ಡೀ-ನೋಟಿಫೈ ಆಯಿತು ಎಂದು ಇಡೀದೇಶದ ಪತ್ರಿಕೆಗಳಲ್ಲಿ ದಪ್ಪ ದಪ್ಪ ಅಕ್ಷರದಲ್ಲಿ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾವಿರಾರು ಎಕರೆಯನ್ನು ನೂರಾರು ಎಕರೆ ಎಂದು ಬದಲಾವಣೆ ಮಾಡಿಕೊಳ್ಳುವುದಕ್ಕೆ ಸಂಬಂಧ ಪಟ್ಟಿದ್ದನ್ನು ಹೇಳುತ್ತೇನೆ. ಆ ನೂರಾರು ಎಕರೆಯ ವಿವರವನ್ನು ನಾನು ಕೊಡುತ್ತೇನೆ. ನಾನು ಜವಾಬ್ದಾರಿ ತೆಗೆದುಕೊಳ್ಳುತ್ತಿದ್ದೇನಲ್ಲಾ.....

ಶ್ರೀ ಸಿ. ಬೈರೇಗೌಡ : ನೂರಾರು ಎಕರೆಯೇ ಇರಬಹುದು, ಅವರ ಪ್ರಕಾರ ಸಾವಿರಾರು ಎಕರೆ ಇದ್ದರೂ ಇರಬಹುದು. ಅದರ ವಿವರಗಳನ್ನು ಕೊಡದೇ ಇದ್ದರೆ ಅದು, ನಿಜವೆಂದಾಗಿ ನಾಳೆ ಇದೊಂದು ಅವರ ಮುಖಕ್ಕೆ ಕಪ್ಪು ಬಳಿಯತಕ್ಕಂತಹ ಪ್ರಯತ್ನ ನಡೆಯುತ್ತದೆ. ಅವರು ಇದರ ಬಗ್ಗೆ ಕರಾರುವಕ್ಕಾಗಿ ಹೇಳುವವರೆಗೆ ನಾವು ಕಡತದಿಂದ ತೆಗೆಯೇಬೇಕೆಂಬ ಮನವಿಯನ್ನು ನಾನು ತಮ್ಮಲ್ಲಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಳೆದ ಒಂದೂಮುಕ್ಕಾಲು ವರ್ಷದಲ್ಲಿ ಜನತಾದಳ ಅಧಿಕಾರಕ್ಕೆ ಬಂದ ಮೇಲೆ ಯಾವುದೋ ಒಂದು ಉದ್ದೇಶಕ್ಕೆ ಯಾವ ಜಮೀನನ್ನು ತೆಗೆದುಕೊಂಡಿದ್ದಿರಿ ಅದನ್ನು ಡೀ-ನೋಟಿಫೈ ಮಾಡಿದಂಥಾದ್ದು ನೂರು ಎಕರೆಯಲ್ಲ ದನ್ನು ದಾಟಿ ಹೋಗುತ್ತದೆ. ಇತ್ತೀಚಿನ ದಿವಸಗಳಲ್ಲಿ ನೀವು ಮಾಡಿದ್ದೀರಿ. ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಚಿವರಿಗೆ ವಿವರಗಳನ್ನು ಕೇಳಿದ್ದೇನೆ. ನೀವು ಹೇಳಿದಿರಲ್ಲಾ ನೂರಾರು ಎಕರೆಯಲ್ಲ ಯಡಿಯೂರಪ್ಪನವರೇ ಎಂದು. ಎಷ್ಟು ಎಕರೆ ಮಾಡಿದ್ದೀರಿ ಅದರ ವಿವರವನ್ನು ಕೊಡಿ. ನನ್ನ ಹತ್ತಿರವಿರುವ ಎಲ್ಲಾ ಸರ್ವೆ ನಂಬರ್ಸ್ ವಿವರಗಳನ್ನು ನಾನು ನಿಮಗೆ ಕಳುಹಿಸುತ್ತೇನೆ. ನಾನು ಚಾರ್ಜ್ ಮಾಡುತ್ತಿದ್ದೇನೆ.

ಶ್ರೀ ಸಿ. ಬೈರೈಗೌಡ : ನನ್ನ ಮನವಿಯೇನೆಂದರೆ ಅಲ್ಲಿಯವರೆಗೆ ಅದು ದಾಖಲೆಯಲ್ಲಿ ಇರಕೂಡದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಆಗುವುದಿಲ್ಲ ನಾನು ಚಾರ್ಜ್ ಮಾಡುತ್ತಿದ್ದೇನೆ. ನೂರಾರು ಎಕರೆ ಜಮೀನನ್ನು ಜನತಾ ದಳ ಸರಕಾರ ವ್ಯವಸ್ಥಿತವಾಗಿ ಡೀ-ನೋಟಿಫೈ ಮಾಡಿ, ಆ ಡೀನೋಟಿಫೈ ಮಾಡುವುದಕ್ಕಿಂತ ಮುಂಚೆಯೇ ಒಂದು ಒಪ್ಪಂದಕ್ಕೆ ಬಂದು ಆ ಜಮೀನನ್ನು ಪ್ರಭಾವಿಗಳು ಹೊಡೆದುಕೊಳ್ಳುವ ಸಂಚು ನೆಡೆದಿದೆ. ಕೆಲವು ಉದಾಹರಣೆಗಳನ್ನು ನಾನು ಕೊಟ್ಟಿದ್ದೇನೆ. ಅದಕ್ಕೆ ನಾನು ಬದ್ಧನಾಗಿದ್ದೇನೆ. ಅದು ಪತ್ರಿಕೆಯಲ್ಲಿ ಬರಬೇಕು ಅದು ರೆಕಾರ್ಡಿನಲ್ಲಿರಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಜನತಾ ದಳ ಅಧಿಕಾರಕ್ಕೆ ಬಂದ ಮೇಲೆ ಜಮೀನನ್ನು ಡೀ-ನೋಟಿಫೈ ಮಾಡತಕ್ಕಂತಹ ವಿಚಾರದಲ್ಲಿ ಅನೇಕ ಸಂದರ್ಭಗಳಲ್ಲಿ ಸರಕಾರ ಸಾರ್ವಜನಿಕರ ಹಿತದೃಷ್ಟಿಯಿಂದ ಡೀನೋಟಿಫೈ ಮಾಡತಕ್ಕಂತಹ ಸನ್ನಿವೇಶಗಳು ಇರುತ್ತದೆ. ಅದರಿಂದಾಗಿ ಡೀ ನೋಟಿಫೈ ಮಾಡತಕ್ಕಂಥಾದ್ದೇ ಒಂದು ದೊಡ್ಡ ಮಹಾಪರಾಧವೆಂದೂ ಸಹ ಹೇಳಬಾರದು ಇದು ಅವರಿಗೂ ಗೊತ್ತಿದೆ. ನಾವು ವಿರೋಧ ಪಕ್ಷದಲ್ಲಿ ಕೆಲಸ ಮಾಡಿದ್ದೇವೆ. ಇದರ ಸನ್ನಿವೇಶವೇನು ಇದೆ, ಮಾನ್ಯ ಬೈರೇಗೌಡರು ಹೇಳುತ್ತಿರತಕ್ಕಂಥದ್ದು ಮಾನ್ಯ ನಾಣಯ್ಯನವರು ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ ಹೇಳಿರತಕ್ಕಂಥಾದ್ದು ತಾವೇನು ಹಿನ್ನೆಲೆಯಲ್ಲಿ ಹೇಳಿದ್ದೀರಿ ಬೆಳಗಿನ ಜಾವ 4 ಗಂಟೆಯವರೆಗೂ ಹಿಂದಿನ ಮುಖ್ಯ ಮಂತ್ರಿಗಳು ಕುಳಿತಿದ್ದರು. ಆದೇ ಕೊನೇ ಸಚಿವ ಸಂಪುಟದ ಸಭೆ, ಆ ಸಭೆಯಲ್ಲಿ ಯಾವುದೋ ದುರುದ್ದೇಶವಿಟ್ಟುಕೊಂಡು ಇದನ್ನು ಮಾಡಿರಬಹುದು ಇಂತಹ ಸುದ್ದಿ ಇದೆ ಎನ್ನತಕ್ಕಂತಹ ಮಾತನ್ನು ಹೇಳಿದರು. ಅದರ ಹಿನ್ನೆಲೆಯಲ್ಲಿ ಸರಕಾರದ ದೃಷ್ಟಿಯಿಂದಾಗಿ ಈ ಮನೆಯ ಸಧಸ್ಯರಾಗಿ ಮಾನ್ಯ ದೇವೇಗೌಡರು ನಮ್ಮ ನೆಚ್ಚಿನ ಪ್ರಧಾನಿಗಳು ಇಲ್ಲಿಯವರೆಗೆ ಇದ್ದರೂ ಸಹ ಇಲ್ಲಿಗೆ ಬಂದು ವಿವರಣೆಯನ್ನು ಕೊಡತಕ್ಕಂತಹ ಸಂದರ್ಭದಲ್ಲಿ ಇಲ್ಲ.

ಆದರೆ ನಮ್ಮದ್ದೇ ಸರಕಾರವಿದೆ. ಆದ್ದರಿಂದ ನಾವು ಖಚಿತವಾಗಿ ಹೇಳುತ್ತಿದ್ದೇವೆ. ಯಾವುದೇ ಕಾರಣದಿಂದಲೂ ಸಾವಿರಾರು ಅಲ್ಲ ನೂರಾರು ಎಕರೆ ಜಮೀನನ್ನು ಸಾರ್ವಜನಿಕ ಹಿತಾಸಕ್ತಿಯನ್ನು ಬಿಟ್ಟು ಬೇರೆ ಯಾವುದೇ ದೃಷ್ಟಿಯಿಂದ ಸಹ ಯಾವುದೇ

ಉದ್ದೇಶಗಳಿಗೂ ಸಹ ನಾವು ಡೀನೋಟಿಫೈ ಮಾಡಲಿಲ್ಲ. ಮಾನ್ಯ ಯಡಿಯೂರಪ್ಪನವರು ಮಾಡಿರತಕ್ಕಂತಹ ಅಪಾದನೆ ಏನು ಇದೆ ಇದರಲ್ಲಿ ತಿರುಳಿಲ್ಲ. ಅವರು ಕೊಟ್ಟಿರತಕ್ಕಂತಹ ಕೆಲವು ವಿಚಾರಗಳೇನು ಇವೆ ಇದರ ಬಗ್ಗೆ ಸ್ಪಷ್ಟವಾಗಿ ವಿವರಣೆಯನ್ನು ಈ ಸದನದಲ್ಲೇ ಈ ಅಧಿವೇಶನದ ಸಂದರ್ಭದಲ್ಲೇ ನಾವು ಕೊಡುತ್ತೇವೆ. ಸರಕಾರವೇನಾದರೂ ಡೀನೋಟಿಫೈ ಮಾಡಿದ್ದರೆ, ಮತ್ತೊಂದು ಮಾಡಿದ್ದರೆ, ಸಾರ್ವಜನಿಕ ಹಿತದೃಷ್ಟಿ ಬಿಟ್ಟು ಬೇರೆ ಯಾವುದೂ ಸಹ ಇಲ್ಲವೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟೇ ನನ್ನ ಡಿಮ್ಯಾಂಡ್. ತಾವು ಅಧಿಕಾರಕ್ಕೆ ಬಂದ ಮೇಲೆ ಇವತ್ತಿನವರೆಗೆ ಮಾನ್ಯ ಸಿಂಧ್ಯರವರು ಹೇಳಿದಂತೆ ಸಾರ್ವಜನಿಕರ ಹಿತದೃಷ್ಟಿಯಿಂದ ಯಾವ್ಯಾವುದನ್ನು ಡೀನೋಟಿಫೈ ಮಾಡಿದ್ದೀರಿ ಎಂಬ ವಿವರಗಳನ್ನು ಕೊಡಿ. ವಿವರವನ್ನು ಕೊಟ್ಟ ತಕ್ಷಣ ಅವರ ಹಿಂದೆ ಮುಂದೆ ಯಾರು, ಇವತ್ತು ಅಲ್ಲಿ ಯಾರು ಇದ್ದಾರೆ ಎಲ್ಲಾ ಗೊತ್ತಾಗುತ್ತದೆ. ಸದನದ ಸಮಿತಿ ಮಾಡಿ. ನಿಮ್ಮನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಯಾವ ರೀತಿ ಹಗಲು ದರೋಡೆ ನಡೆದಿದೆ ಎಂಬುದನ್ನು ನಾನು ಸಾಬೀತು ಮಾಡುತ್ತೇನೆ. ವಿವರಗಳನ್ನು ತಾವು ಕೊಡಿ.

12.50 ಪಿ.ಎಂ.

+ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಸುಮಾರು 41 ಬೇಡಿಕೆಗಳ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ. ಸುಮಾರು 25ಕ್ಕೂ ಕೂಡ ಹೆಚ್ಚು ಮಂತ್ರಿ ಮಹೋದಯರು ಈ ಇಲಾಖೆಯ ಜವಾಬ್ದಾರಿಕೆಯನ್ನು ಹೊತ್ತಿದ್ದಾರೆ. ಈ ಎಲ್ಲಾ ಇಲಾಖೆಯ ಕಾರ್ಯಕ್ರಮದ ಅನುಷ್ಠಾನ ಆಗುತ್ತಾ ಇಲ್ಲ ಎನ್ನತಕ್ಕದ್ದು ನನ್ನ ಸ್ಪಷ್ಟ ಅಭಿಪ್ರಾಯ. ಈ ಎಲ್ಲಾ ಇಲಾಖೆಯ ಕಾರ್ಯಕ್ರಮಗಳೂ ಅನುಷ್ಠಾನ ಸರಿಯಾಗಿ ಆಗದೇ ಇರುವುದಕ್ಕೆ ಬಹು ಮುಖ್ಯ ಕಾರಣ. ಎಂದರೆ ತಳದಿಂದಲೂ ಕೂಡಿ ಅತಿ ಎತ್ತರದ ಸ್ಥಾನದವರೆಗೆ ನಮ್ಮ ವ್ಯವಸ್ಥೆಯಲ್ಲಿತಕ್ಕಂಥ ಶೋಷಣೆ ಏನು ಇದೆ. ಅನ್ಯಾಯ ಏನು ಇದೆ, ಅದಕ್ಷತೆ ಏನು ಇದೆ. ಅದಕ್ಕೆ ಬಹು ಮುಖ್ಯವಾದ ಕಾರಣ ಭ್ರಷ್ಟಾಚಾರ. ಬಹುತೇಕ ಜನ ಹಣಕ್ಕೆ ಗುಲಾಮರಾಗಿ ಎಲ್ಲಿಯವರೆಗೆ ಕೆಲಸ ಮಾಡಿಕೊಂಡು ಹೋಗುತ್ತೇವೆ ನಮ್ಮ ಯಾವುದೇ ಫಿಲಾಸಫಿಯ ಮಾತುಗಳು ಸಮಾಜವನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಎಚ್ಚರಿಸಲು ಇಚ್ಛಿಸುತ್ತೇನೆ. ಈ ಸರ್ಕಾರ ಆಡಳಿತಕ್ಕೆ ಬಂದು ಒಂದೂ ಮುಕ್ಕಾಲು ವರ್ಷ ಆಯಿತಿ. ಅಧಿಕಾರಕ್ಕೆ ಬಂದಾಗ ಹೇಳಿದರು ನಮಗೆ ಆರು ತಿಂಗಳ ಅವಕಾಶ ಕೊಡಿ, ಕೆಟ್ಟಿರತಕ್ಕ ಅಡಳಿತವನ್ನು ಸರಿ ದಾರಿಗೆ ತರುವಂತಹ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದ್ದರು.

ಈಗಾಗಲೇ ಈ ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು ಒಂದೂ ಮುಕ್ಕಾಲು ವರ್ಷ ಆಗಿದೆ. ಈ ಒಂದು ಮುಕ್ಕಾಲು ವರ್ಷದಲ್ಲಿ ಈ ಸರ್ಕಾರ ಹೊಣೆ ಆದೀತು ಕೆಲಸ ಮಾಡಿದ್ದಾರೆಯೇ ಅಥವಾ ಹೊಣೆಗೇಡಿಯಾಗಿ ಕೆಲಸ ಮಾಡಿದ್ದಾರೋ? ವಚನ ಬದ್ಧವಾಗಿ ಕೆಲಸ ಮಾಡಿದೆಯೋ ಅಥವಾ ವಚನ ಭ್ರಷ್ಟವಾಗಿ ಕೆಲಸ ಮಾಡಿದೆಯೋ? ಜವಾಬ್ದಾರಿಕಿಯಿಂದ ಕೆಲಸ ಮಾಡಿದೆಯೋ ಅಥವಾ ಬೇಜವಾಬ್ದಾರಿಯಿಂದ ಕೆಲಸ ಮಾಡಿದೆಯೋ ಎನ್ನತಕ್ಕ ವಿವರಗಳನ್ನು ಒಂದು ಮೂರು ನಾಲ್ಕು ಇಲಾಖೆಗಳ ವಿಚಾರದಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ. ನೀರಾವರಿ ಇಲಾಖೆ ಬಗ್ಗೆ, ಅಬಕಾರಿ ಇಲಾಖೆ ಬಗ್ಗೆ, ತೋಟಗಾರಿಕೆ ಮತ್ತು ಪಶುಸಂಗೋಪನಾ ಇಲಾಖೆ ಬಗ್ಗೆ ನಾನು

ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಅದಕ್ಕೆ ಸಂಬಂಧಿಸಿದ ಮಂತ್ರಿಗಳನ್ನು ಕರೆಸಬೇಕು. ಬರೆದುಕೊಳ್ಳುವುದಕ್ಕೆ ಬೇರೆ ಮಂತ್ರಿಗಳು ಇದ್ದಾರೆ, ನಾನು ಇಲ್ಲವೆಂದು ಹೇಳಲಿಲ್ಲ. ಕೊನೆ ಪಕ್ಷ ಸಂಬಂಧಪಟ್ಟ ಮಂತ್ರಿಗಳು ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಆಗತಕ್ಕ ಸಮಯದಲ್ಲಿ ಹಾಜರು ಇರಬೇಕಾಗುತ್ತದೆ. ಈಗ ಒಂದು ಒಳ್ಳೆಯ ಸರ್ಕಾರ ಎಂದರೆ ಸರ್ಕಾರದ ಆಡಳಿತದಲ್ಲಿ ಸ್ವಚ್ಛತೆ ಇರಬೇಕು. ಸರ್ಕಾರದಲ್ಲಿ ಪ್ರಾಮಾಣಿಕತೆ ಇರಬೇಕು. ಸರ್ಕಾರದಲ್ಲಿ ವಿಶ್ವಾಸ ಇರಬೇಕು. ಸರ್ಕಾರದಲ್ಲಿ ಆನೆಸ್ಟಿ ಇರಬೇಕು. ಆದರೆ ಈ ಸರ್ಕಾರದಲ್ಲಿ ನಾನು ತಿಳಿದಹಾಗೆ ಈ ಅಂಶಗಳು ಯಾವುವು ಕಾಣಿಸುತ್ತಾ ಇಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಗಿಡವನ್ನು ಕಾವಲು ಕಾಯುವವನು ಕಾಯಬೇಕು. ಆದರೆ ಕಾವಲುಗಾರನೇ ಕಳ್ಳನಾದರೆ ಅವನನ್ನು ಯಾರು ಹಿಡಿಯುವುದಕ್ಕೆ ಸಾಧ್ಯ ಇದೆ. ಸಮಾಜದ ಹಣ, ಸಾರ್ವಜನಿಕರ ಹಣ ಸದುಪಯೋಗ ಮಾಡಬೇಕು. ಆ ದೃಷ್ಟಿಯಿಂದ ಸರ್ಕಾರ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತದೆ. ಅವರೇ ಖದೀಮರು ಆಗಿ ಬಿಟ್ಟರೆ ಸಾರ್ವಜನಿಕರ ಹಣ ಸದುಪಯೋಗ ಹೇಗೆ ಆಗುತ್ತದೆ? ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಮಾಡುವ ಅಧಿಕಾರಿಗಳೇ ಅಪ್ರಾಮಾಣಿಕರು ಆದರೆ ಈ ದೇಶವನ್ನು ಸಮಾಜವನ್ನು ಕಾಯುವರು ಯಾರು? ಸನ್ಮಾನ್ಯ ಮುಖ್ಯಮಂತ್ರಿಗಳು ಕಳೆದ ವಾರ ಬೇಡಿಕೆ ಮೇಲೆ ಮಾತನಾಡುವಾಗ ಒಳ್ಳೆಯ ಫಿಲಾಸಫಿ ಹೇಳಿದರು. ನಮಗೆ ಫಿಲಾಸಫಿ ಹೇಳುವ ಸರ್ಕಾರ ಬೇಕಾಗಿಲ್ಲ. ನಮಗೆ ಬೇಕಾಗಿರತಕ್ಕದ್ದು ಕಾರ್ಯ ಮಾಡತಕ್ಕ. ಕೆಲಸ ಮಾಡತಕ್ಕ ಸರ್ಕಾರ ಬೇಕು. ಹೊಳೆಯೆಲ್ಲಾ ಹೆಂಡವಾಗಿದೆ. ಒಂದು ಲೋಟ ಒಳ್ಳೆಯ ನೀರನ್ನು ಎಲ್ಲಿ ತಂದು ಕೊಡೋಣ ಎಂದು ಹೇಳಿದರು. ಏನು ನಾವು ಮಾಡಿದ್ದೆವು, ನಾವು ಬಹಳ ಸತ್ಯ ಹರಿಶ್ಚಂದ್ರರು ಎಂದು ನಾವು ಹೇಳುವುದಿಲ್ಲ. ಆದರೆ ರಾಕ್ಷಸರು ಆಗಿರಲಿಲ್ಲ. ಅದಕ್ಕೆ ನಾವು ಇಲ್ಲಿ ಬಂದು ಕುಳಿತುಕೊಂಡೆವು ನೀವು ಅಲ್ಲಿ ಕುಳಿತಿದ್ದೀರಿ. ನೀವು ಇಲ್ಲಿಗೇ ಬರಬೇಕೆಂದು ಇಚ್ಛೆಪಡುತ್ತೀರೇನು?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : ನೀವು ಎಷ್ಟು ಮಾಡಿದ್ದೀರಿ, ಈ ವಿಚಾರದಲ್ಲಿ.

ಶ್ರೀ ಎ.ಟಿ. ರಾಮಸ್ವಾಮಿ : ನಾವು ಸ್ವಲ್ಪ ತಪ್ಪು ಮಾಡುವ ಹೊತ್ತಿಗೆ ಇಲ್ಲಿ ಬಂದು ಕುಳಿತಿದ್ದೇವೆ. ನಾನೇನೂ ನಮ್ಮಲ್ಲಿ ಸತ್ಯ ಹರಿಶ್ಚಂದ್ರರು ಇದ್ದರು ಎಂದು ಹೇಳುತ್ತಿಲ್ಲ. ನಮ್ಮಲ್ಲಿ ರಾಕ್ಷಸರು ಇರಲಿಲ್ಲ ಎನ್ನತಕ್ಕದ್ದನ್ನು ತಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಅದನ್ನು ತಾವು ನೆನಪು ಇಟ್ಟುಕೊಳ್ಳಿ. ಹಿಂದೆ ನಾನು ಕಂಡ ಹಾಗೆ ಗ್ಲಾಸ್‌ನಲ್ಲಿ ಸಾರಾಯಿಯನ್ನು ಕೊಡುತ್ತಿದ್ದರು. ಈಗ ಗ್ಲಾಸ್‌ನಲ್ಲಿ ಕೊಡುವುದು ಹೋಯಿತು. ಈ ಸರ್ಕಾರ ಬಂದ ಮೇಲೆ ಕೊಳಗದಲ್ಲಿ ಕೊಡುವುದಕ್ಕೆ ಶುರು ಮಾಡಿದರು. ನಾಚಿಕೆ ಆಗುತ್ತದೆ ನಗೆ. ಈ ರಾಜ್ಯದ ಅತ್ಯುನ್ನತ ಸ್ಥಾನದಲ್ಲಿದ್ದಂತಹ ಒಬ್ಬ ವ್ಯಕ್ತಿ ಇಡೀ ಇತಿಹಾಸದಲ್ಲಿಯೇ ಇಲ್ಲವೇನೋ? ನೀವು ಬೇಕಾದರೆ ವಿಷಯ ಸಂಗ್ರಹಣೆ ಮಾಡಿಸಿ ತನಿಖೆ ಮಾಡಿಸಿ. ಮೌಖಿಕವಾಗಿ ಆದೇಶ ಕೊಡುತ್ತಾರೆ ನಮ್ಮ ಪಕ್ಷದವರು ಏನು ಮದ್ಯವನ್ನು ಹಂಚುತ್ತಾರೆ, ಮದ್ಯವನ್ನು ಹಿಡಿಯಬೇಡಿ ಎಂದು ಹೇಳಿ ಇಂತಹ ಸರ್ಕಾರದಿಂದ ನಾವು ನ್ಯಾಯವನ್ನು ನಿರೀಕ್ಷಣೆ ಮಾಡಲಿಕ್ಕೆ, ಸಮಾಜವನ್ನು ಸುಧಾರಣೆ ಮಾಡಸಲಿಕ್ಕೆ ಸಾಧ್ಯ ಇದೆಯೇನು? ಮೌಖಿಕವಾಗಿ ರಾಜ್ಯದ ಅತ್ಯುನ್ನತ ಸ್ಥಾನವನ್ನು ಹೊಂದಿದಂತಹ ಒಬ್ಬ ವ್ಯಕ್ತಿ ಜಿಲ್ಲಾ ಮುಖ್ಯಾಧಿಕಾರಿಗಳಿಗೆ, ಪೋಲೀಸ್ ಮುಖ್ಯ ಅಧಿಕಾರಿಗಳಿಗೆ ಆದೇಶ ಕೊಡುತ್ತಾರೆ. ನೀವು ಹೆಂಡ ಸಾರಾಯಿಗಳನ್ನು

ಹಿಡಿಯಬೇಡಿ ಎಂದು ಹೇಳಿ. ಯಾರು ಎಂದು ಪ್ರಶ್ನೆ ಹಾಕಿಕೊಳ್ಳಿ. ಆತ್ಮ ಶೋಧನೆ ಮಾಡಿಕೊಳ್ಳಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಇದಕ್ಕೆ ಆಧಾರ ಏನು ಇದೆ ಸ್ವಾಮಿ? ರಾಮಸ್ವಾಮಿಯವರು ಆದೇಶ ಕೊಡುತ್ತಾರೆಂದು ಹೇಳುತ್ತಾರಲ್ಲಾ ಅದಕ್ಕೆ ಆಧಾರ ಏನು ಇದೆ?

ಉಪಾಧ್ಯಕ್ಷರು : ಅವರು ಮಾತನಾಡುವುದಕ್ಕೆ ಬಿಟ್ಟು ಬಿಡಿ, ಆನಂತರ ನೀವು ಹೇಳಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಅದು ನಡೆಯುತ್ತಿತ್ತಂತೆ, ಎಂದು ಹೇಳಿದರೆ ಅದು ಸದನಕ್ಕೆ ಕೊಟ್ಟಂತಹ ಗಂಭೀರವಾದಂತಹ ಅಂಕಿ ಅಂಶ ಆಗುವುದಿಲ್ಲ. ಹೇಳುತ್ತಿದ್ದರಂತೆ ಮಾಡುತ್ತಿದ್ದರಂತೆ ಅದಕ್ಕೆ ಏನು ಆಧಾರ ಇದೆ ಎಂದು ದಯಮಾಡಿ ಮಾನ್ಯ ರಾಮಸ್ವಾಮಿಯವರು ಹೇಳಬೇಕು.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಏನು ಆಧಾರ ಎಂದರೆ ನೀವು ಹೇಳುವುದೇ ಆಧಾರ.

ಶ್ರೀ ಸಿ.ಎಸ್. ಪುಟ್ಟೇಗೌಡ : ಈ ದೇಶದಲ್ಲಿ ಬಡವರಿಗೆ ಸಾರಾಯಿ ಹಂಚುವುದನ್ನು ಕಲಿಸಿದವರೇ ನೀವು.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ : "ಕುಂಬಳಕಾಯಿ ಕಳ್ಳ, ಎಂದರೆ ಹೆಗಲು ಮುಟ್ಟಿ ನೋಡಿಕೊಂಡ" ನಂತೆ ಆಧಾರದ ಅವಶ್ಯಕತೆ ಇಲ್ಲ.

ಶ್ರೀ ಸಿ.ಎಸ್. ಪುಟ್ಟೇಗೌಡ : ಈ ರಾಜ್ಯದ ಮುಖ್ಯ ಅಧಿಕಾರ ಇದ್ದವರು ನೋಡಿಕೊಳ್ಳಬೇಕು. ಕುಂಬಳಕಾಯಿಯನ್ನು ಮುಟ್ಟಿ ನೋಡಿ ಕೊಳ್ಳುವ ಅಭ್ಯಾಸ ನಿಮಗೆ ಆಗಿರಬೇಕಲ್ಲಾ. ಪಾಪ ಕುಂಬಳಕಾಯಿ ನೋಡಿಕೊಂಡು ನಿಮಗೆ ಅಭ್ಯಾಸ ಆಗಿ ಹೋಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಈ ರಾಜ್ಯದಲ್ಲಿ ಆ ಹೆಂಡದ ಗುರುತು ಯಾರಿಗೂ ಗೊತ್ತಿರಲಿಲ್ಲ. ಅದರ ಹೆಸರೇನು ಎಂದರೆ ಹೇಳಿದರೆ ರಾಕೆಟ್ ಎಂದು. ಕುಡಿದವರು ಸೀದಾ ಸ್ವರ್ಗಕ್ಕೆ ಹೋಗುತ್ತಾರೆ. ಈ ರಾಜ್ಯದಲ್ಲಿ ಹೋಗಿದ್ದಾರೆ. ಅನೇಕ ಕಡೆ ಚುನಾವಣೆ ನಡೆಯುವಂತಹ ಸಂದರ್ಭದಲ್ಲಿ ಅನೇಕ ಜನ ಮತದಾರರು ರಾಕೆಟ್ ತೆಗೆದುಕೊಂಡು ಚಂದ್ರಲೋಕಕ್ಕೆ ಹೋಗಿರುವಂತಹ ನಿದರ್ಶನಗಳು ಇವತ್ತು ಸರ್ಕಾರದಲ್ಲಿದೆ.

ಉಪಾಧ್ಯಕ್ಷರು : ನೀವು ಹೋಗಲು ಪ್ರಯತ್ನ ಮಾಡಬೇಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಿಮ್ಮ ಕ್ಷೇತ್ರದಲ್ಲೂ ಹೋಗಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ನಿಮ್ಮಲ್ಲೂ ಯಾರಾದರೂ ಚಂದ್ರಲೋಕಕ್ಕೆ ಹೋಗಿರಬೇಕಲ್ಲ.

ಉಪಾಧ್ಯಕ್ಷರು : ತಾವು ಮುಂದುವರಿಸಿ ರಾಮಸ್ವಾಮಿಯವರೇ,

ಶ್ರೀ ಎ.ಟಿ. ರಾಮಸ್ವಾಮಿ : ಈ ಮಾತನ್ನು ನಾನು ಬಹಳ ಜವಾಬ್ದಾರಿಕೆಯಿಂದ ನನ್ನ ಹೊಣೆಗಾರಿಕೆಯನ್ನು ಕೂಡ ಅರಿತುಕೊಂಡು ಹೇಳುತ್ತಿದ್ದೇನೆ. ನಾನು ಲಘುವಾಗಿ ಏನೂ ಹೇಳುತ್ತಿಲ್ಲ. ಇಲ್ಲ, ಒಂದು ಸವಾಲನ್ನು ನಿಮ್ಮ ಸರ್ಕಾರ ಸ್ವೀಕಾರ ಮಾಡಲಿಕ್ಕೆ

ಸಿದ್ಧ ಇದೆಯಾ ಹೇಳಿ. ಬರೀ ಮಾತಿನಿಂದ ಸಮಾಜ ಸುಧಾರಣೆ ಮಾಡುವುದು ಬೇಡ. ಮುಂದೆ ಬರತಕ್ಕ ಯಾವುದೇ ಚುನಾವಣೆಯಲ್ಲಿ ನಾವು ಈ ಸಮಾಜವನ್ನು ಸುಧಾರಣೆ ಮಾಡಬೇಕು ಎನ್ನತಕ್ಕ ಸದಿಚ್ಛೆ. ರಾಜಕೀಯ ಇಚ್ಛಾಶಕ್ತಿ ನಿಮಗೆ ನಮಗೆ ಎಲ್ಲರಿಗೂ ಕೂಡ ಇದೆ ಎನ್ನುವುದಾದರೆ ಮುಂದಿನ ಚುನಾವಣೆಯಲ್ಲಿ ನಾವ್ಯಾರೂ ಸಾರಾಯಿಯನ್ನು ಹಂಚುವುದಿಲ್ಲ, ನಮ್ಮ ಪಕ್ಷದ ವತಿಯಿಂದ ಹಂಚುವುದಿಲ್ಲ ಎಂದು ಘೋಷಣೆ ಮಾಡಿ. ಈ ಸವಾಲು ಸ್ವೀಕಾರ ಮಾಡಿ. ಬರೀ ಮಾತಿನಿಂದ ಹೇಳುವುದು ಬೇಡ. ನಿಮ್ಮ ಸರ್ಕಾರದ ಮಂತ್ರಿಗಳು ಹೇಳಲಿ. ಸರ್ಕಾರದ ಮಂತ್ರಿಗಳು ಈ ಮಾತನ್ನು ಹೇಳಲಿ. ಸಮಾಜದಲ್ಲಿ ನಾವು ಸದ್ಗುಣಗಳನ್ನು ಸೃಷ್ಟಿ ಮಾಡಬೇಕು. ಪ್ರಜಾಪ್ರಭುತ್ವದ ಅತ್ಯಂತ ಎತ್ತರದ ಸ್ಥಾನದಲ್ಲಿ ನಾವು ಇದ್ದೇವೆ. ಅದಕ್ಕೆ ಬರೀ ಮಾತಿನಲ್ಲಿ ಆಗುವುದಿಲ್ಲ. ಆತ್ಮಸಾಕ್ಷಿಯಾಗಿ ಇವತ್ತು ಏನು ಸರ್ಕಾರ ಇದೆ ಮಂತ್ರಿಗಳು ಇದ್ದಾರೆ ಅವರು ಮೊದಲು ಹೇಳಲಿ. ಅವರಿಂದ ಪ್ರಾರಂಭ ಆಗಲಿ. ನಮ್ಮ ನಮ್ಮ ಕ್ಷೇತ್ರದಲ್ಲಿ ನಾನಂತೂ ಆ ಸವಾಲನ್ನು ಸ್ವೀಕಾರ ಮಾಡುತ್ತೇನೆ. ಕಳೆದ ಚುನಾವಣೆಯಲ್ಲಿ ವೆಂಕಟೇಶ್ ಅವರೇ, ನಾನು ಹೇಳಿ ಬಿಡುತ್ತೇನೆ

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಉಪಾಧ್ಯಕ್ಷರೆ, ತಾವು ದಯವಿಟ್ಟು ಗಮನ ಕೊಡಬೇಕು. ನಾವು ಈ ಬಜೆಟ್‌ನ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಪದೇ ಪದೇ ಸದಸ್ಯರು ಏಳುವಂಥದ್ದು ಸರಿಯಲ್ಲ. ಆದರೆ ನಮಗೆ ನೀವು ಹೇಳುತ್ತೀರಿ. ನೀವು ಕೂಡಿರಿ ಎಂದು. ನಾನು ಹೇಳುವುದು.

ಉಪಾಧ್ಯಕ್ಷರು : ಪದೇ ಪದೇ ಏಳುವುದು ಬೇಡ ಎಂದು ನಾನು ಹೇಳಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ತಮ್ಮ ಗಮನಕ್ಕೆ ತರುವಂತಹ ವಿಚಾರ ಎಂದರೆ ಎಷ್ಟೋ ಪ್ರಕರಣಗಳಲ್ಲಿ ಅಧಿಕಾರಿಗಳು ನ್ಯಾಯಯುತವಾಗಿ ಹೆಂಡ ಹಿಡಿದಿರುವಂತಹ ಸಂದರ್ಭಗಳಲ್ಲಿ ಮೂರು ತಿಂಗಳಲ್ಲಿ ಮೂರು ಜಿಲ್ಲಾಧಿಕಾರಿಗಳನ್ನು ವರ್ಗಾವಣೆ ಮಾಡುವಂತಹ ಆದೇಶಗಳು, ಈ ಸರ್ಕಾರ ಹೊರಡಿಸಿರಿವಂತಹ ದಾಖಲಾತಿ ಇವತ್ತು ಈ ಸದನದಲ್ಲಿ ತಮ್ಮ ಮುಂದೆ ಮಂಡಿಸುವಂತಹ ಶಕ್ತಿ ವಿರೋಧ ಪಕ್ಷದವರಿಗೆ ಇದೆ. ಅವರು ಒಪ್ಪುತ್ತಾರೆಯೇ ಹೇಳಿ. ಉದಾಹರಣೆಗೆ ನನ್ನ ಚಿಕ್ಕಮಗಳೂರು ಜಿಲ್ಲೆ ವಿಚಾರ ಹೇಳುವುದಾದರೆ ಮೂರು ಜಿಲ್ಲಾಧಿಕಾರಿಗಳನ್ನು ಕೇವಲ ನಾಲ್ಕು ತಿಂಗಳೊಳಗೆ ಬದಲಾವಣೆ ಮಾಡಿದ್ದಾರೆ. ನನ್ನ ಹತ್ತಿರ ಮಾಹಿತಿ ಇದೆ.

ಉಪಾಧ್ಯಕ್ಷರು : ರಾಮಸ್ವಾಮಿಯವರೆ, ತಾವು ಮುಂದುವರಿಸಿ, ಈಗ ಅವರು ಮಾತನಾಡುವಾಗ ದಯಮಾಡಿ ಯಾರೂ ಏಳಬಾರದು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಎಷ್ಟರಮಟ್ಟಿಗೆ ಕಳೆದ ಲೋಕ ಸಭಾ ಚುನಾವಣೆಯಲ್ಲಿ ಅಭ್ಯಾಸ ಮಾಡಿಸಿದ್ದಾರೆಂದರೆ ಪ್ರತಿ ನಿತ್ಯಾ ಎಂಟು ಗಂಟೆಗೆ ಸರಬರಾಜು ಮಾಡುತ್ತಿದ್ದರು. ಒಂದು ದಿವಸ ಬರಧೇ ಇದ್ದುದ್ದಕ್ಕೆ ಆಳುವ ಪಕ್ಷದ ಕಾರ್ಯಕರ್ತರನ್ನು ಜನ ಹಿಡಿದುಕೊಂಡು ಹೊಡೆದರು ಇವತ್ತು ಏಕೆ ನಮಗೆ ಕುಡಿಯಲಿಕ್ಕೆ ಕೊಡಲಿಲ್ಲ ಎಂದು.

ಉಪಾಧ್ಯಕ್ಷರು : ಪುಟ್ಟಣ್ಣಯ್ಯನವರೇ, ಅವರು ಈಗ ಒಂದು ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿರುತ್ತಾರೆ. ತಾವು ನಡುವೆ ಎದ್ದರೆ ಮತ್ತೆ ಗಂಭೀರತೆ ಹೋಗಿ ಬಿಡುತ್ತದೆ. ಆದ್ದರಿಂದ ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅವರು ಬಹಳ ಒಳ್ಳೆಯ ವಿಚಾರ ಹೇಳುತ್ತಿದ್ದರು.

ಉಪಾಧ್ಯಕ್ಷರು : ಒಳ್ಳೆಯ ವಿಚಾರ ಹೇಳುವಾಗ ತಾವು ನಡುವೆ ಹೇಳಬಾರದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇದು ಎಲ್ಲಾ ಪಕ್ಷಕ್ಕೆ ಸಂಬಂಧಪಟ್ಟಿದ್ದುದು. ನಾನೂ ಒಂದು ಪಕ್ಷದ ಸದಸ್ಯನಾಗಿರುವುದರಿಂದ ನನಗೂ ಆ ಮಾತು ಅನ್ವಯಿಸುವುದಿಲ್ಲವೇ ತಾವೇ ಹೇಳಿ ಹೆಂಡ ಸಾರಾಯಿ ತಿರಸ್ಕಾರ ಮಾಡಬೇಕು ಎನ್ನುವ ವಿಚಾರದಲ್ಲಿ ನಾವೂ ಒಪ್ಪಿಕೊಳ್ಳುತ್ತೇವೆ. ಆದರೆ ಒಂದು ಮಾತನ್ನು ಮಾತನಾಡುತ್ತಾ ಹೇಳಿದರು. ನಿಮ್ಮದು ತಪ್ಪಲ್ಲ, ನಮ್ಮದು ತಪ್ಪಲ್ಲ. ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎಂದು ಹೇಳಿ. ಅಂದರೆ ನಾವು ಮಾಡುತ್ತಿದ್ದೇವೆ ಎಂದು ಒಪ್ಪಿಕೊಂಡ ಹಾಗೆ ಆಯಿತು.

ಉಪಾಧ್ಯಕ್ಷರು : ರಾಮಸ್ವಾಮಿಯವರೇ, ತಾವು ಮುಂದುವರಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದರ ಬಗ್ಗೆ ವಾದ ಮಾಡುವುದು ಪ್ರಯೋಜನ ಇಲ್ಲ, ಇದರ ಬಗ್ಗೆ ಸುಮ್ಮನೇ ಇದ್ದರೆ ಒಳ್ಳೆಯದು.

ಉಪಾಧ್ಯಕ್ಷರು : ರಾಮಸ್ವಾಮಿಯವರೇ, ತಾವು ಮುಂದುವರೆಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಷ್ಟು ಕಡಿಮೆ ಮಾತನಾಡಿದರೆ ಇದರ ಬಗ್ಗೆ ಅಷ್ಟು ಒಳ್ಳೆಯದಾಗುತ್ತದೆ. ಎಲ್ಲರಿಗೂ ಕ್ಷೇಮ ಆಗುತ್ತದೆ,

ಉಪಾಧ್ಯಕ್ಷರು : ರಾಮಸ್ವಾಮಿಯವರೇ ತಾವು ಮುಂದುವರಿಸಿ ದಯಮಾಡಿ ಅವರ ಭಾಷಣ ಮುಗಿಯುವವರೆಗೆ ಯಾರೂ ಅಡ್ಡಿ ಮಾಡಬಾರದು.

ಶ್ರೀ ಎ.ಟಿ. ರಾಮಸ್ವಾಮಿ : ಈಗ ನಾನು ಮೊದಲೇ ಹೇಳಿದೆ. ಬರೀ ನಾವು ಫಿಲಾಸಫಿ ಹೇಳಿಕೊಂಡು ಹೋಗುವುದು ಬೇಡ, ಕಾರ್ಯರೂಪದಲ್ಲಿ ಅದನ್ನು ಮಾಡೋಣ ಎಂದು ಹೇಳಿ. ಈಗ ನಾವು ಸಮಾಜದ ಸುಧಾರಣೆ ಮಾಡಲಿಕ್ಕೆ ಬಂದಿರತಕ್ಕದ್ದು. ಸವಾಲನ್ನು ಎಲ್ಲರೂ ಕೂಡ ಸ್ವೀಕಾರ ಮಾಡೋಣ. ಮೊದಲು ಸರ್ಕಾರದವರು ಹೇಳಲಿ. ಆಡಳಿತದಲ್ಲಿರತಕ್ಕವರು ಹೇಳಲಿ. ಇಲ್ಲ, ನಾವು ಮುಂದೆ ಬರತಕ್ಕ ಯಾವುದೇ ಚುನಾವಣೆಯಲ್ಲಿ ಮದ್ಯವನ್ನು ಹಂಚಿ ಮತ ಯಾಚನೆಯನ್ನು ಮಾಡುವುದಿಲ್ಲ. ಮಾಡುವುದಿಲ್ಲ ಎಂದು ಹೇಳಲಿ, ಧ್ವನಿನೇ ಇಲ್ಲ. ಇದನ್ನು ಹೇಳಲಿಕ್ಕೆ ಆಗುವುದಿಲ್ಲವೇ? ಆ ಇಚ್ಛಾಶಕ್ತಿ ಈ ಸರ್ಕಾರಕ್ಕೆ ಇಲ್ಲ ಎಂದ ಮೇಲೆ ಇದು ವಚನ ಭ್ರಷ್ಟ ಸರ್ಕಾರ ಎಂದು ಹೇಳಬಾರದೇನು? ಇದನ್ನು ಹೊಣೆಗಾರಿಕೆ ಸರ್ಕಾರ ಎಂದು ಹೇಳಬೇಕೇ, ಅಥವಾ ಹೊಣೆಗೇಡಿ ಸರ್ಕಾರ ಎಂದು ಹೇಳಬೇಕೇ?

ಶ್ರೀ ಹೆಚ್.ಕೆ. ಕುಮಾರ ಸ್ವಾಮಿ : ಆ ಇಚ್ಛಾಶಕ್ತಿ ಏನು ಇದೆ, ಅವರಿಗೂ ಇರಬೇಕು. ದಯಮಾಡಿ ನಿಮ್ಮ ಜೊತೆಗೆ ನಿಮ್ಮವರಿಗೂ ಕೂಡ ನೀವು ಇಚ್ಛಾಶಕ್ತಿ ತೋರಿಸಿ ನೀವು ಸ್ಟಾರ್ಟ್‌ಮಾಡಿ, ನಾವು ಒಪ್ಪುತ್ತೇವೆ. ಹಾಗೇನಿಲ್ಲ, ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಈಗ ಆ ಇಚ್ಛಾಶಕ್ತಿ ನಿಮಗೆ ಇಲ್ಲ ಎಂದು ನನಗೆ ಗೊತ್ತಿದೆ, ಅದು ಇಲ್ಲ, ಮತ್ತೆ ಮಾತಿನಲ್ಲಿ ನಾವು ಸಾರಾಯಿ ನಿಷೇಧ ತರುತ್ತೇವೆ ಎಂದು ಏಕೆ ಹೇಳುತ್ತೀರಿ? ಆ ಕಮಿಟ್‌ಮೆಂಟ್ ನಿಮಗೆ ಇಲ್ಲ, ಆ ದೃಷ್ಟಿಯಿಂದ ಇವತ್ತು ನಾನು ಹೇಳುತ್ತೇನೆ. ಎಷ್ಟು ಸಾರಿ ನಾನು ಕುಳಿತುಕೊಳ್ಳುವುದು.

ಉಪಾಧ್ಯಕ್ಷರು : ಪುಟ್ಟೇಗೌಡರೇ, ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ,

ಶ್ರೀ ಸಿ.ಎಸ್. ಪುಟ್ಟೇಗೌಡ : ಹಾಗಲ್ಲ ಸಾರ್. ಅವರು ನಮ್ಮ ಜೊತೆಗೆ ಇದ್ದವರು. ಪಾಪ ನಮ್ಮ ಜೊತೆ ಬಹಳ ದಿವಸ ಇದ್ದು ಅಲ್ಲಿ ಹೋದವರು. ಅಲ್ಲೇನು ಎಂದು ಅವರಿಗೆ ಗೊತ್ತಿದೆ. ಇಲ್ಲೇನು ಎಂದು ಅವರಿಗೆ ಗೊತ್ತಿದೆ. ದಯಮಾಡಿ ಸರ್ಕಾರವನ್ನು ರಾಮಸ್ವಾಮಿಯವರು ಪ್ರಶ್ನೆ ಮಾಡುತ್ತಾರೆ, ನಿಮಗೆ ಆ ಇಚ್ಛಾಶಕ್ತಿ ಇದ್ದರೆ ಹೇಳಿ ಎಂದು ಇಷ್ಟು ದಿನ ತಾವು ಶಾಸಕರಾಗಿ ಬಂದಿದ್ದೀರಲ್ಲಾ, ತಾವು ಅರಕಲುಗೂಡಿನಲ್ಲಿ ಹಂಚಿಲ್ಲ ಎಂದು ಈ ಸದನಕ್ಕೆ ತಾವು ಎದೆ ಮುಟ್ಟಿ ಹೇಳಿ.

ಶ್ರೀ ಎ.ಟಿ. ರಾಮಸ್ವಾಮಿ : ಅದನ್ನು ಒಪ್ಪಿಕೊಳ್ಳುತ್ತೇನೆ ನಾನು. ನಾವು ನುಡಿದಂತೆ ನಡೆಯಬೇಕು. ಇಲ್ಲದಿದ್ದರೆ ನಾವು ಈ ಸ್ಥಾನದಲ್ಲಿ ಇರಲಿಕ್ಕೆ ಅರ್ಹರಲ್ಲ. ಕಳೆದ ಚುನಾವಣೆಯಲ್ಲಿ ನಾನು ಬಹಿರಂಗವಾಗಿ ಸವಾಲು ಹಾಕಿದ್ದೇನೆ. ನಾನು ಹಂಚುವುದಿಲ್ಲ ನೀವೂ ಕೂಡ ಹಂಚಬೇಡಿ. ಈ ನಮ್ಮ ತಾಲ್ಲೂಕು ಮಟ್ಟಿಗಾದರೂ ಕೂಡ ಒಂದು ಒಳ್ಳೆಯ ವಾತಾವರಣ ನಿರ್ಮಾಣ ಮಾಡೋಣ ಎಂದು ಹೇಳಿದ್ದೆ. ತನಿಖೆ ಮಾಡಸಿ. ಬೇಕಾದರೆ ಸದನದ ಸಮಿತಿ ಮಾಡಿ ತನಿಖೆ ಮಾಡಿಸಿ. ನಾನು ಸಾರಾಯಿ ಹಂಚಿದ್ದರೆ..

ಶ್ರೀ ಸಿ.ಎಸ್. ಪುಟ್ಟೇಗೌಡ : ದಯವಿಟ್ಟು ತನಿಖೆ ಆಗಲಿ.

ಶ್ರೀ ಎ.ಟಿ. ರಾಮಸ್ವಾಮಿ : ನಾನೇ ಹೇಳುತ್ತಿದ್ದೇನೆ, ತನಿಖೆ ಮಾಡಿ ನಿಮ್ಮ ಪಕ್ಷದವರನ್ನೇ ಅಲ್ಲಿ ಕೇಳಿ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ತನಿಖೆ ಮಾಡಿ ಏನಾಗುತ್ತದೆ ಸ್ವಾಮಿ ಕುಡಿದವರಿಗೆ ಅಜೀರ್ಣ ಆಗಿ ಬಿಟ್ಟಿರುತ್ತದೆ. ಜೀರ್ಣ ಮಾಡಿಕೊಂಡಿರುತ್ತಾರೆ, ಈಗ ಕುಡಿದವರದ್ದು ಗುರುತು ಎಲ್ಲಿ ಸಿಗುತ್ತದೆ?

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಉಪಾಧ್ಯಕ್ಷರೆ, ಈ ಹೆಂಡ ಹಂಚುವ ಬಗ್ಗೆ ಹಾಸನ ಜಿಲ್ಲೆಗೆ ಪುಟ್ಟೇಗೌಡರೇ ಇನ್‌ಛಾರ್ಜ್ ಇದ್ದವರು.

ಉಪಾಧ್ಯಕ್ಷರು : ರಾಮಸ್ವಾಮಿಯವರೇ, ತಾವು ಬಜೆಟ್ ಮೇಲೆ ಮಾತನಾಡಿ. ಈ ಸವಾಲು ಸ್ವೀಕರಿಸುವುದು ಬೇಡ. ಯಾರೂ ಸವಾಲು ಸ್ವೀಕರಿಸುವುದು ಬೇಡ. ಭಾಷಣ ಮಾಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ರಾಕೆಟ್ ಬ್ರಾಂಡ್ ಕೊಟ್ಟಿದ್ದು ಕುಡಿದು ಸಾಯೋಕೆ ಎಂದು ಹೇಳುತ್ತೀರೋ ನೀವು? ಅದನ್ನು ಕೊಡುವುದು ಬೇಡ ನಿಲ್ಲಿಸಿ ಎಂದು ನಮ್ಮ ಸ್ನೇಹಿತರು ಮಾತನಾಡುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷರೆ, ರಾಮಸ್ವಾಮಿಯವರು ಹೇಳುವುದು ನಿಜ. ಯಾರೂ ಇಲ್ಲಿರತಕ್ಕವರು ಸ್ವತಃ ತೆಗೆದುಕೊಂಡು ಹೋಗಿ ರಾಮಸ್ವಾಮಿಯವರೂ ಸೇರಿ ಹಂಚಿಲ್ಲ, ಇದಂತೂ ಸತ್ಯ. ಆದರೆ ಹಂಚುವವರು ಬೇರೆ ಇದ್ದಾರೆಲ್ಲಾ, ಇದಕ್ಕೆ ಎಲ್ಲಾ ವ್ಯವಸ್ಥೆ ಮಾಡುವವರು ಎಲ್ಲರೂ ಇಲ್ಲೇ ಇದ್ದಾರೆ. ಯಾರು ಹಂಚಿದ್ದಾರೆ. ಸ್ವತಃ ಇಲ್ಲಿರುವವರು ಯಾರೂ ತೆಗೆದುಕೊಂಡು ಹೋಗಿ ಹಂಚಿಲ್ಲ, ಇದು ಸತ್ಯ. ಹಂಚಿದ್ದಾರೆ. ಯಾರು ಹಂಚಿದ್ದಾರೆ ಎಂದರೆ ಅದಕ್ಕೇ ಕೆಲವು ವ್ಯವಸ್ಥೆ ಇದೆ. ಇಲ್ಲಿ,

ಉಪಾಧ್ಯಕ್ಷರು : ಶ್ರೀರಾಮ ರೆಡ್ಡಿಯವರೇ, ಎಲ್ಲರ ಮನೆಯ ದೋಸೆ ತೂತು. ಅದು ಏಕೆ, ಅದನ್ನು ಮುಂದುವರಿಸುವುದು ಬೇಡ. ತಾವು ಭಾಷಣ ಮುಂದುವರಿಸಿ ರಾಮಸ್ವಾಮಿಯವರೇ.

ಶ್ರೀ ವಾಟಾಳ್ ನಾಗರಾಜ್ : ಈಗ ರಾಮಸ್ವಾಮಿಯವರು ಇದರ ಬಗ್ಗೆ ಒಂದು ತನಿಖೆ ನಡೆಸೋಣ ಎಂದು ಹೇಳುತ್ತಾರೆ.

(ಗೊಂದಲ)

ಶ್ರೀಮತಿ ಪ್ರಮೀಳಾನೇಸರ್ಗಿ : ಬಹಳ ಚೆನ್ನಾಗಿದೆ ಅವರು ಹೇಳುವುದು. ಅವರು ಅಪಾಲಜಿ ಮಾಡಬೇಕು.

ಉಪಾಧ್ಯಕ್ಷರು : ವಿಷಯಾಂತರ ಮಾಡಬೇಡಿ. ರಾಮಸ್ವಾಮಿಯವರೇ, ತಾವು ಮುಂದುವರಿಸಿ.

ಶ್ರೀ ಎ.ಟಿ. ರಾಮಸ್ವಾಮಿ : ನಾನು ಏಕೆ ಮಾತುಗಳನ್ನು ಹೇಳಲಿಕ್ಕೆ ಹೊರಟೆ ಎಂದರೆ ನಮ್ಮ ಸಮಾಜದಲ್ಲಿರತಕ್ಕಂಥ ಶೋಷಣೆ ಏನು ಇದೆ..

ಶ್ರೀ ಐ.ಎಂ. ಜಯರಾಮ್ ಶೆಟ್ಟಿ : ವಾಟಾಳ್ ಅವರು ಏನು ಹೇಳಿದರು ಅದನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎ.ಟಿ. ರಾಮಸ್ವಾಮಿ : ನಮ್ಮ ಸಮಾಜದಲ್ಲಿರತಕ್ಕ ಶೋಷಣೆ ಏನು ಇದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಿದ ಮಾತು ಸತ್ಯ. ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಉಪಾಧ್ಯಕ್ಷರೆ, ಇಲ್ಲಿ ಹೆಣ್ಣು ಮಕ್ಕಳು ಇದ್ದೇವೆ ನೋಡೋಣ ಈ ಸಭೆ ನಡೆಯಲಿಕ್ಕೆ ಬಿಡುವುದಿಲ್ಲ. ನೀವು ಹೇಗೆ ತೆಗೆದುಕೊಳ್ಳುವುದಿಲ್ಲವೋ ನೋಡೋಣ. ಇದೇನಿದು, ಟೂ ಮಚ್. ನೀವು ಹೇಳುವುದರಲ್ಲಿ ಏನಾದರೂ ಅರ್ಥ ಇರಬೇಕು. ಅದನ್ನು ಹೇಗೆ ಹೇಳಿದಿರಿ ನೀವಿಬ್ಬರು ಬಿಟ್ಟು ಎಲ್ಲಾ ಕುಡಿಯುತ್ತಾರೆ. ಎಂದರೆ ಇದು ಫ್ರೂವ್ ಆಗಬೇಕು.

(ಗೊಂದಲ)

ಶ್ರೀಮತಿ ಎನ್. ಜ್ಯೋತಿ ರೆಡ್ಡಿ : ಈ ರೀತಿ ಹೇಳುವುದಕ್ಕೆ ನಾವು ಬಿಡುವುದಿಲ್ಲ.

ಉಪಾಧ್ಯಕ್ಷರು : ಅವರು ಹೆಣ್ಣು ಮಕ್ಕಳ ಬಗ್ಗೆ ಮಾತನಾಡಿಲ್ಲ.

ಶ್ರೀಮತಿ ಎನ್ ಜ್ಯೋಟಿ ರೆಡ್ಡಿ : ಅಧ್ಯಕ್ಷರೆ, ಅವರು ಈ ಸಭೆ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು : ನಾಗರಾಜ್ ಅವರೇ, ಹೆಣ್ಮು ಮಕ್ಕಳ ಬಗ್ಗೆ ಮಾತನಾಡಿದರೇನು?

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ವಾಪಸ್ ತೆಗುದುಕೊಳ್ಳಬೇಕು.

(ಗೊಂದಲ)

ಶ್ರೀಮತಿ ಎನ್. ಜ್ಯೋತಿ ರೆಡ್ಡಿ : ಎಲ್ಲರೂ ಎಂದು ಹೇಳಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ರೆಕಾರ್ಡ್‌ನಿಂದ ತೆಗೆಸೋಣ : ಆಯಿತು ತಾವು ಮುಂದುವರಿಸಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ವಾಟಾಳ್ ನಾಗರಾಜ್ ಅವರು ಶ್ರೀರಾಮಿ ರೆಡ್ಡಿಯವರು ನಾವು ಕುಡಿಯುವವರು ಅಲ್ಲ ಎಂದು ಹೇಳಿದರೆ.

ಉಪಾಧ್ಯಕ್ಷರು : ಸಗೀರ್ ಅಹಮದ್‌ರವರೇ, ತಾವು ಪದೇ ಪದೇ ಎದ್ದು ನಿಂತು ಈ ಸಮಯವನ್ನು ಈ ರೀತಿ ವ್ಯಯ ಮಾಡಿದರೆ ಹೇಗೆ?

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಈ ಸದನದಲ್ಲಿ ಇಬ್ಬರು ಎಂದಾಗ ಏನು ಅರ್ಥ ಬರುತ್ತದೆ? ಆದ್ದರಿಂದ ದಯವಿಟ್ಟು ಅದನ್ನು ಕಡತದಿಂದ ತೆಗೆಸಬೇಕು.

ಶ್ರೀಮತಿ ಎನ್. ಜ್ಯೋತಿ ರೆಡ್ಡಿ : ಅವರು ಮಾತನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷರೆ, ತಾವು ಕಡತದಿಂದ ತೆಗೆದು ಹಾಕಿದ್ದೇವೆ ಎನ್ನತಕ್ಕ ತೀರ್ಪನ್ನು ಕೊಟ್ಟಿದ್ದೀರಿ. ಅದು ಸಂಸದೀಯ ಪದವೋ ಅಲ್ಲವೋ? ನಾನು ಹೇಳಿರುವ ಬಗ್ಗೆ ಬೇಕಾದರೆ ಚರ್ಚೆ ಆಗಲಿ. ಸಮಗ್ರ ಚರ್ಚೆ ಆಗಲಿ.

ಶ್ರೀ ವೈ ರಾಮಕೃಷ್ಣ : ನಾನು ಕುಡಿಯುವುದಿಲ್ಲ ಎಂದು ಹೇಳುವಾಗ ಬೇರೆಯವರು ಕುಡಿಯುತ್ತಾರೆಂದು ಏಕೆ ಹೇಳಬೇಕು?

ಉಪಾಧ್ಯಕ್ಷರು : ಮಹಿಳೆಯರ ಬಗ್ಗೆ ಏಕೆ ನೀವು ಪ್ರಸ್ತಾಪ ಮಾಡಿದಿರಿ?

ಶ್ರೀ ವಾಟಾಳ್ ನಾಗರಾಜ್ : ಅದು ಚರ್ಚೆ ಆಗಲಿ. ಅದು ಚರ್ಚೆಯ ವಸ್ತು. ಸಮಗ್ರವಾಗಿ ಚರ್ಚೆ ಆಗಲಿ. ಈ ಚರ್ಚೆಯಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಭಾಗವಹಿಸಲಿ, ಎಲ್ಲರೂ ಭಾಗವಹಿಸಲಿ. ಚರ್ಚೆ ಆಗಲಿ ಪ್ರಮೀಳಾ ಅವರೆ. ನಾನು ಒಪ್ಪುತ್ತೇನೆ. ಅದನ್ನು

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಚರ್ಚೆ ಆಗಲಿ ಎಂದರೆ ಕುಡಿದೇ ಚರ್ಚೆ ಮಾಡಬೇಕು ಎಂದರೆ ಬಹಳ ಕಷ್ಟ. ಈಗ ನೀವು ಚರ್ಚೆ ಶುರು ಮಾಡಿದಾಗ ಕುಡಿದು ಕೊಂಡೇ ಚರ್ಚೆ ಮಾಡಬೇಕು ಎನ್ನುವ ಪೈಕಿ.

(ಗೊಂದಲ)

ಶ್ರೀವಾಟಾಳ್ ನಾಗರಾಜ್ : ನೀವು ಚರ್ಚೆ ಮಾಡಿ. ನನ್ನ ಬಗ್ಗೆನೇ ಮಾಡಿ. ಚರ್ಚೆ ಆಗಲಿ ಎಂದು ಹೇಳುತ್ತಿದ್ದೇನೆ. ಇಲ್ಲಿ ಯಾರೂ ಚರ್ಚೆಗೆ ತಯಾರೇ ಇಲ್ಲವಲ್ಲಾ.

ಉಪಾಧ್ಯಕ್ಷರು : ಆ ವಿಷಯ ಮುಗಿಯಿತು. ತಾವು ಕೂಡಿ. ರಾಮಸ್ವಾಮಿಯವರೇ, ತಾವು ಚರ್ಚೆ ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಅಂದಿದ್ದೇನೆ ಅದರಲ್ಲಿ ನಾನು ಸ್ಪಷ್ಟವಾಗಿದ್ದೇನೆ ಅದರಲ್ಲಿ ಹಿಂದೆ ಮುಂದೆ ಏನೂ ಇಲ್ಲ,

ಮಾನ್ಯ ಉಪಾಧ್ಯಕ್ಷರೆ, ನಮಗೆ ರಕ್ಷಣೆ ಕೊಡಬೇಕು. ಈ ಸದನದಲ್ಲಿ ನಾಲ್ಕು ಜನ ಮಹಿಳಾ ಸದಸ್ಯರುಗಳಿದ್ದು, ಅವರುಗಳು ಒಟ್ಟಾಗಿ ನಮ್ಮ ಮೇಲೆ ವಾಗ್ದಾಳಿ ನಡೆಸಿದರೆ ನಮ್ಮ ಗತಿ ಏನು?

ಇದು ಸರಿಹೋಗುವುದಿಲ್ಲ, ಇದು ಹುಡುಗಾಟವೇ? ಮಾನ್ಯ ಮಹಿಳಾ ಸದಸ್ಯರಾದ ಪ್ರಮೀಳಾ ನೇಸರ್ಗಿಯವರು ನಮ್ಮ ಬೆಂಬಲಕ್ಕೆ ಯಾವಾಗಲೂ ನಿಲ್ಲುತ್ತಾರೆಂದರೆ ಇವೊತ್ತು ತಾವು ಎದ್ದು ನಿಂತು ಅವರನ್ನು ಎತ್ತಿಕಟ್ಟುತ್ತಿದ್ದೀರಿ? ಇದು ಹುಡುಗಾಟವೇ? ಯಡಿಯೂರಪ್ಪನವರೇ, ನೀವೇ ಹೇಳಿ. ತಾವು ವಿರೋಧ ಪಕ್ಷದ ನಾಯಕರಾಗಿದ್ದು ಈ ಸದನದಲ್ಲಿ ಪುರುಷರ ಗತಿ ಏನು? ಇಲ್ಲಿ ನಾಲ್ಕು ಜನ ಮಹಿಳಾ ಸದಸ್ಯರುಗಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ಆಗಲೇ ಕಡತದಿಂದ ತೆಗೆಸಿ ಹಾಕಿದ್ದೇವೆ. ಆದುದರಿಂದ, ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇರುವ 224 ಜನ ಶಾಸಕರುಗಳಲ್ಲಿ ನಾಲ್ಕು ಜನ ಮಹಿಳಾ ಸದಸ್ಯರುಗಳು ಎದ್ದು ಭದ್ರವಾಗಿ ನಿಂತು ಈ ರೀತಿ ಮಾತನಾಡುತ್ತಿದ್ದಾಗ ಪುರುಷರಾದ ನಮ್ಮ ಗತಿ ಏನು? ನಮಗೆ ಸ್ವಾತಂತ್ರ್ಯ ಬೇಡವೇ? ಬರೀ ಮಹಿಳೆಯರಿಗಷ್ಟೆ ಸ್ವಾತಂತ್ರ್ಯವೆಂದರೆ ಏನರ್ಥ?

ಉಪಾಧ್ಯಕ್ಷರು : ಅವರೂ ಕೂಡ ಶೇಕಡ ಐವತ್ತರಷ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಮಗೂ ಸ್ವಾತಂತ್ರ್ಯ ಬೇಕು, ಅವರಿಗೂ ಸ್ವಾತಂತ್ರ್ಯ ಬೇಕು. ನಾನು ಅವರ ಪರವಾಗಿಯೇ ಇದ್ದೇನೆ, ನಾನು ಮಹಿಳೆಯರ ವಿರುದ್ಧವಿಲ್ಲ. ಪ್ರಮೀಳಾ ನೇಸರ್ಗಿಯವರೆ, ನಿಮಗೆ ಗೊತ್ತಿದೆ: ನಾನು ನಿಮಗೆ ಯಾವಾಗಲೂ ಸಹಾಯ ಮಾಡಿಲ್ಲವೇ? ಹೇಳಿ, ನಿಮ್ಮ ಆತ್ಮ ಮುಟ್ಟಿಕೊಂಡು ಹೇಳಿ. ಲಲಿತಾನಾಯಕ್‌ರವರೇ, ನಿಮಗೆ ನಾನು ಬೆಂಬಲ ಕೊಟ್ಟಿಲ್ಲವೇ? ಜ್ಯೋತಿರೆಡ್ಡಿಯವರೇ, ನಿಮಗೆ ನಾನು ಬೆಂಬಲ ಕೊಟ್ಟಿಲ್ಲವೇ? ನೀವೆಲ್ಲರೂ ಏಕ್ ದಂ ನಮ್ಮ ಮೇಲೆ ಬೀಳುತ್ತೀರಿ?

(ಸಭಾಧ್ಯಕ್ಷ ಶ್ರೀ ರಮೇಶ್ ಕುಮಾರ್‌ರವರು ಪೀಠವನ್ನಲಂಕರಿಸಿದರು)

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಅವರಿಗೆ ನಾನು ಏನು ಹೇಳುತ್ತಿದ್ದೇನೆಂದರೆ, ಸರ್ವಜ್ಞನ ಒಂದು ವಚನವಿದೆ. ಏನೆಂದರೆ "ಒಳ್ಳಿಗರ ಒದನಾಡಿ ಕಳ್ಳ ಒಳ್ಳಿಗನಕ್ಕು, ಒಳ್ಳಿಗ ಕಳ್ಳನೊಡನಾಡಿ ಅವ ಶುದ್ಧ ಕಳ್ಳನೇಯಕ್ಕು ಸರ್ವಜ್ಞ" ಅಂದರೆ, ಕೆಲವರು ಕುಡಿಯುತ್ತಾರೆ, ಕೆಲವರು ಕುಡಿಯುವುದಿಲ್ಲವೆಂದರೆ ಕುಡುಕರ ಜೊತೆ ಸೇರಿದರೆ ಕುಡಿಯಲಾರದವರೂ ಕುಡಿಯುತ್ತಾರೆಂದು ಅರ್ಥ. ಅದಕ್ಕೋಸ್ಕರ ನಾವು ಏನು ಹೇಳುತ್ತಿದ್ದೇನೆಂದರೆ, ಯಾರೂ ಕೂಡ ಕುಡಿಯಲಾರದಂಥ ವ್ಯವಸ್ಥೆ ತನ್ನಿ. ಹೋಟೆಲ್‌ನಲ್ಲಿ ನಾವು ಏನೋ ಕುಡಿಯುತ್ತಿದ್ದೆವು, ಅದು ಬ್ರಾಂದಿಯೂ ಅಲ್ಲ, ಬೀರೂ ಅಲ್ಲ. ಅದೆಂತಹುದೋ ಬೇರೆ ಪಾನೀಯ. ನಾವು ಕುಡಿಯುತ್ತಿದ್ದಾಗ ನಮ್ಮನ್ನು ಎಲ್ಲರೂ ಕೇಳಿದರು.

ಶ್ರೀ ವಾಟಾಳ್ ನಾಗರಾಜ್ : ನೀವು ಯಾವ ಹೋಟೆಲ್ಲಿಗೆ ಹೋಗಿದ್ದೀರಿ? ಮೊದಲು ಇದು ರುಜುವಾತಾಗಬೇಕು, ತೀರ್ಮಾನವಾಗಲಿ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಪೆಪ್ಸಿಯಂತಹ ಒಂದು ತರಹದ ಪಾನೀಯ ಕುಡಿದರೂ ಕೂಡ, ಕುಡಿಯುವವರು ಇರುವ ಜೊತೆ ನಾವು ಕುಡಿದಾಗ ನಮ್ಮನ್ನು ಎಲ್ಲರೂ ಗುಮಾನಿಯಿಂದ ನೋಡುತ್ತಾರೆ. ಆದುದರಿಂದ, ನಾನು ತಮ್ಮಲ್ಲಿ ಕೇಳಿಕೊಳ್ಳುವುದಿಷ್ಟೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ..... ಪೆಪ್ಸಿಯಲ್ಲಿ ಹಾಕಿಕೊಂಡು ಕುಡಿಯುತ್ತಾರೆ.

ಅಧ್ಯಕ್ಷರು : ಈಗ ವಾಟಾಳ್ ನಾಗರಾಜ್ ಅವರು ಮತ್ತೆ ಈ ವಿಚಾರಕ್ಕೆ ಏಕೆ ಬಂದಿರಿ?

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಾವು ಈಗ ಬಂದಿದ್ದು ಒಳ್ಳೆಯದೇ ಆಯಿತು. ನಮಗೆ ಇಲ್ಲಿ ರಕ್ಷಣೆಯೇ ಇಲ್ಲ. ಇತ್ತ ಕಡೆಯಿಂದ ಪ್ರಮೀಳಾ ನೇಸರ್ಗಿಯವರು ಅತ್ತ ಕಡೆಯಿಂದ ನಾಲ್ಕು ಜನ ಮಹಿಳಾ ಸದಸ್ಯರು ಒಟ್ಟಾಗಿ ನಮ್ಮ ಮೇಲೆ ವಾಗ್ದಾಳಿ ನಡೆಸಿದರೆ ನಮ್ಮ ಪರಿಸ್ಥಿತಿ ಏನು? ನಮಗೆ ಸದನದಲ್ಲಿ ರಕ್ಷಣೆ ಬೇಕಲ್ಲ! ತಾವು ಬಹಳ ಸಮಯೋಚಿತ ಸಂದರ್ಭದಲ್ಲೇ ಸದನಕ್ಕೆ ಬಂದಿದ್ದೀರಿ. ಮಾನ್ಯ ಮಹಿಳಾ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಯಾವುದಾದರೂ ಸಮಸ್ಯೆಗಳ ಕುರಿತು ಪ್ರಸ್ತಾಪಿಸಲು ಎದ್ದು ನಿಂತಾಗಲೆಲ್ಲಾ ಅವರಿಗೆ ನಾನು ಬೆಂಬಲ ಕೊಟ್ಟಿದ್ದೇನೆ. ಆದುದರಿಂದ, ನಾನು ಏನು ಹೇಳುತ್ತಿದ್ದೇನೆಂದರೆ, ಕುಡಿಯುವುದನ್ನು ನಿಲ್ಲಿಸುವುದಲ್ಲ, ಬಹುತೇಕ ಜನರೆಲ್ಲರೂ ಕುಡಿಯುವವರೇ ಇದ್ದಾರೆ. ಆದರೆ, ನಾನು ಹಾಗೂ ಶ್ರೀರಾಮರೆಡ್ಡಿಯವರು ಕುಡುಕರಲ್ಲವೆಂದು ಹೇಳಿದೆ. ಈ ರೀತಿ ಹೇಳಿದಾಗ ಇವರೇಕೆ ಭುಜ ಮುಟ್ಟಿ ನೋಡಿಕೊಳ್ಳಬೇಕು? ಕಾರಣವೇನು? ನನಗರ್ಥವಾಗುವುದಿಲ್ಲ. ನನಗೆ ಎಲ್ಲಾ ಮಹಿಳಾ ಸದಸ್ಯರುಗಳ ಬಗ್ಗೆ ಅಪಾರವಾದ ಗೌರವವಿದೆ.

ತಾವು ಕಡತವನ್ನು ಬೇಕಾದರೆ ತರಿಸಿ ನೋಡಿ. ನಾನು ಹೇಳಿದ್ದು ಏನೆಂದರೆ, ಎಲ್ಲರೂ ಕುಡುಕರು ನಾವಿಬ್ಬರು ಮಾತ್ರ ಕುಡುಕರಲ್ಲವೆಂದು ಹೇಳಿದೆ. ಅಂದರೆ, ಈ ಸದನದಲ್ಲಿ ಎಂದು ಹೇಳಿದೆನೆ? ನಾನು ಆ ರೀತಿ ಪತ್ರಕರ್ತರ ಗ್ಯಾಲರಿಯನ್ನು ಉದ್ದೇಶಿಸಿಯೂ ಹೇಳಿಲ್ಲ, ಅಧಿಕಾರಿಗಳ ಗ್ಯಾಲರಿ ಉದ್ದೇಶಿಸಿಯೂ ಹೇಳಲಿಲ್ಲ ಅಲ್ಲದೆ, ಇತ್ತ ಕಡೆ ನಮಗೂ ಹೇಳಲಿಲ್ಲ. ನನಗೆ ಮದ್ಯಪಾನ ಮಾಡತಕ್ಕಂಥ ಸ್ನೇಹಿತರುಗಳೇ ಜಾಸ್ತಿ ಸಂಖ್ಯೆಯಲ್ಲಿದ್ದಾರೆ. ಅದು ಬೇರೆ ಪ್ರಶ್ನೆ. ಆದರೆ, ನಾನು ಕುಡಿದೆ ಎಂದು ಅರ್ಥವೇ? ಅಧ್ಯಕ್ಷರೆ, ಇದು ತಮಗೂ ಗೊತ್ತಿದೆ, ತಾವು ಇದರ ಬಗ್ಗೆ ಹೇಳಬೇಕು.

ಅಧ್ಯಕ್ಷರು: ನಮ್ಮ ಅನುಭವವೇನೆಂದರೆ, ಕುಡಿಯುವವರ ಕಡೆಯಿಂದ ನಮಗೆ ತೊಂದರೆ ಬಹಳ ಕಡಿಮೆ. ಆದರೆ, ಕುಡುಕರಲ್ಲದವರು ಯಾರಿದ್ದಾರೋ, ಅವರದೇ ಕಾಟ ಜಾಸ್ತಿ. ಅಂದರೆ, ನಾನು. ತಮ್ಮ ವಿಚಾರವಾಗಿ ಹೇಳಲಿಲ್ಲ, ನಾನು ಸಾಮಾನ್ಯವಾದ ನನ್ನ ಅನುಭವ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಭಾವನೆ ಏನಿದೆಯೆಂಬುದು ನಮಗರ್ಥವಾಯಿತು. ನನ್ನ ಮೇಲೆ ಹಾಗೂ ಶ್ರೀರಾಮರೆಡ್ಡಿಯವರ ಮೇಲೆ ನಿಮಗೆ ಎಷ್ಟು ವಿರೋಧವಿದೆಯೆಂಬುದನ್ನು ಬಹಿರಂಗವಾಗಿ ವ್ಯಕ್ತಪಡಿಸಿಬಿಟ್ಟಿರಿ.

ಅಧ್ಯಕ್ಷರು : ನನ್ನ ಅನುಭವದ ಪ್ರಕಾರ ಪ್ರಪಂಚದ ಸ್ಥಿತಿ ಹೇಳಿದೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಜೊತೆಯಲ್ಲಿ ನಾವು ಇಷ್ಟು ಒಡನಾಡಿಯಾಗಿದ್ದೇವೆ. ತಾವು ಈ ರೀತಿ ಹೇಳಿದರೆ ನಮ್ಮ ಪರಿಸ್ಥಿತಿ ಏನು?

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನಾನು ಇಲಾಖಾ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ ಏನು ವಿಷಯವನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನವಾಗುತ್ತಿಲ್ಲ. ಕಾರಣ ವ್ಯವಸ್ಥೆಯಲ್ಲಿ ಲೋಪ-ದೋಷಗಳಿವೆ. ಅಲ್ಲದೆ, ಹಣಕ್ಕೆ ಗುಲಾಮನಾಗಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಅನುಷ್ಠಾನ

ಕೂಡ ಸರಿಹೋಗುವುದಿಲ್ಲ. ನಾವೇ ಈ ಸದನದ ಸದಸ್ಯರಾಗಿ ಒಂದು ಉತ್ತಮವಾದ ಸಂಪ್ರದಾಯಗಳನ್ನು ಹಾಕೋಣ, ಆ ದಿಕ್ಕಿನಲ್ಲಿ ಮುಂದಿನ ದಿವಸಗಳಲ್ಲಿ ನಾವು ಯಾರೂ ಕೂಡ ಆಸೆ-ಆಮಿಷಗಳನ್ನು ಒಡ್ಡದ ರೀತಿಯಲ್ಲಿ ಸವಾಲನ್ನು ಸ್ವೀಕರಿಸಿ ಒಂದು ದೀಕ್ಷೆ ತೊಟ್ಟು ಹೋಗೋಣವೆನ್ನುವ ಮಾತನ್ನು ಹೇಳಿದೆ. ಇದಕ್ಕೆ ಆಡಳಿತ ಪಕ್ಷದ ಕಡೆಯಿಂದ ಮೆಚ್ಚುಗೆ ಮಾತುಗಳು ಬರುತ್ತದೆಂದು ನಾನು ತಿಳಿದುಕೊಂಡಿದ್ದೆ. ಏಕೆಂದರೆ, ಸಮಾಜವನ್ನು ಸುಧಾರಣೆ ಮಾಡಲು ಬಂದಿರತಕ್ಕವರು ನಾವು. ನೀವು ಬೆನ್ನು ತಟ್ಟುತ್ತೀರೆಂದು ತಿಳಿದುಕೊಂಡಿದ್ದೆ. ಆದರೆ, ಅದರ ಬಗ್ಗೆ ನೋಡಿದರೆ ನಿಮ್ಮಲ್ಲಿ ಸ್ವಲ್ಪ ನಿರಾಶೆಯಿದೆ. ಇದಕ್ಕಾಗಿ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಈಗಾಗಲೇ ನಾನು ಮೊದಲೇ ಹೇಳಿರುವಂತೆ ಕಾಂಗ್ರೆಸ್ ಪಕ್ಷದವರು ರಾಜ್ಯದಲ್ಲಿ ಈ ಹಿಂದೆ ಐದು ವರ್ಷಗಳ ಕಾಲ ಸಂಪೂರ್ಣವಾಗಿ ಅಧಿಕಾರ ನಡೆಸಿದ್ದೇವೆ.

ನೀವು 1983 ರಿಂದ 1985ರ ವರೆಗೆ ಮತ್ತು 1985 ರಿಂದ 1988ರ ವರೆವಿಗೂ ಎರಡು ಸಲ ಅಧಿಕಾರದಲ್ಲಿದ್ದರೂ ಸಹ ಸಂಪೂರ್ಣವಾಗಿ ಐದು ವರ್ಷಗಳ ಕಾಲ ಅಧಿಕಾರ ನಡೆಸುವುದಕ್ಕಾಗಲಿಲ್ಲ. ಕಳೆದ ಚುನಾವಣೆಯಲ್ಲೂ ಸಹ 'ನಾವು ಏನು ವಚನ ಕೊಟ್ಟಿದ್ದೇವೆ, ಅದಕ್ಕೆ ಬದ್ಧರಾಗುತ್ತೇವೆ' ಎಂದು ಜನರಿಗೆ ವಚನ ಕೊಟ್ಟು ಬಂದಿದ್ದೀರಿ. ತಾವು ವಚನಭ್ರಷ್ಟರಾಗುತ್ತೀರಾ? ಇಲ್ಲವೇ ಏನಾಗುತ್ತೀರೆಂದು ಅವಕಾಶ ಸಿಕ್ಕಿದರೆ ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕಳೆದ ಸಾರಿ ಬೇಡಿಕೆಗಳ ಮೇಲೆ ಉತ್ತರಿಸುತ್ತಾ, 'ಹೊಳೆಯೆಲ್ಲಾ ಹೆಂಡವಾಗಿ ಹೋಗಿದೆ, ರಿಪೇರಿ ಮಾಡುವುದಕ್ಕಾಗುವುದಿಲ್ಲ' ವೆಂಬ ನಿಸ್ಸಹಾಯಕವಾದ ಮಾತನ್ನಾಡಿದರು. ನನಗಂತೂ ಅದನ್ನು ಕೇಳಿ ಬಹಳ ಬೇಸರವಾಯಿತು. ಕನಿಷ್ಟ ಪಕ್ಷ ಭ್ರಷ್ಟಾಚಾರವನ್ನು ಕಡಿಮೆ ಮಾಡುವುದಕ್ಕಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆಂಬ ಸಂದೇಶವನ್ನು ಈ ಸದನದ ನಾಯಕರಾದ ಮುಖ್ಯಮಂತ್ರಿಗಳು ಆಡಳಿತ ವರ್ಗಕ್ಕೆ ಮತ್ತು ರಾಜ್ಯದ ಜನತೆಗೆ ಕೊಡುತ್ತಾರೆಂಬ ಅಭಿಲಾಶೆ ನನ್ನದಾಗಿತ್ತು.

ತಾವು ಭ್ರಷ್ಟಾಚಾರ ಕಡಿಮೆ ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿರಿ? ಸದನದಲ್ಲಿ ಆಡಳಿದ ಪಕ್ಷದಲ್ಲಿ ಮೊದಲನೆಯ ಸಾಲಿನಲ್ಲಿ ಕುಳಿತಿರುವ ನಾಯಕರುಗಳೇನಿದ್ದಾರೆ, ಅವರಿಂದ ಈ ಕೆಲಸ ಆಗುವುದಿಲ್ಲ. ಸ್ವಲ್ಪ ಬಿಸಿ ರಕ್ತ ಇರುವ ಯುವಕರಿಗೆ ಅಧಿಕಾರ ಕೊಡಬೇಕೆಂದು ನನಗನ್ನಿಸುತ್ತದೆ. ಬಿಸಿ ರಕ್ತವಿರುವ ಯುವಕರೇನಾದರೂ ಇದರ ಮುಂಚೂಣಿ ವಹಿಸಿಕೊಂಡರೆ ಈ ಕೆಲಸ ಸಾಧ್ಯವಾಗಬಹುದು. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸರ್ಕಾರದಲ್ಲಿ ನನ್ನ ಅಪೇಕ್ಷೆ ಇಷ್ಟೆ. ಹಿಂದೆ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿ ನಂಜಪ್ಪನವರಿದ್ದರು. ಆಗ ಹಿಂದಿದ್ದ ಮುಖ್ಯಮಂತ್ರಿಗಳು ನಮ್ಮ ತಾಲ್ಲೂಕಿಗೆ ಬಂದಿದ್ದಾಗ ಅವರಲ್ಲಿ ನಾನು ವಿನಂತಿಸಿಕೊಂಡಿದ್ದು ಒಂದೇ: ಏನೆಂದರೆ, 'ನೋಡಿ, ನೀವು ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿದ್ದೀರಿ, ನಿಮ್ಮ ಕಾಲದಲ್ಲಿ ಭ್ರಷ್ಟಾಚಾರ ಕಡಿಮೆಯಾಯಿತೆಂದು ಹೇಳಿಸಿ ಸಾಕು' ಎಂದಾಗ ಎದೆ ಮುಂಟಿಕೊಂಡರು. ಈ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಭ್ರಷ್ಟಾಚಾರ ಮುಗಿಲು ಮುಟ್ಟಿದೆ, ರಾಕ್ಷಸರ ಜಾತಿಯವರಾಗಿದ್ದೀರಿ' ಎಂದಿರಿ. ನಾವೆಲ್ಲರೂ ಕೂಡ ಆತ್ಮಶೋಧನೆ ಮಾಡಿಕೊಳ್ಳೋಣ. ದಿನೇ ದಿನೇ ಆ ದಿಕ್ಕಿನಲ್ಲಿ ಭ್ರಷ್ಟಾಚಾರ ಜಾಸ್ತಿಯಾಗುತ್ತಿದೆಯೇ? ಕಡಿಮೆಯಾಗುತ್ತಿದೆಯೇ? ಎಂಬುದನ್ನು ನೀವೇ ಹೇಳಿ. ನಾನು ಮೊದಲೇ ಹೇಳಿದಂತೆ, ನಮ್ಮ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಭ್ರಷ್ಟಾಚಾರ ಇರಲಿಲ್ಲವೆಂದು ನಾನು ಹೇಳುವುದಿಲ್ಲ, ಅವೊತ್ತು ಕೂಡ ಭ್ರಷ್ಟಾಚಾರವಿತ್ತು. ಆದರೆ, ನೀವು ಅಧಿಕಾರಕ್ಕೆ ಬಂದು ಏನು ಮಾಡಿದಿರಿ? ಭ್ರಷ್ಟಾಚಾರ ಇನ್ನೂ ಕೂಡ ಮುಂದುವರೆಯುತ್ತಾ

ಹೆಚ್ಚಾಗುತ್ತಲೇ ಹೋಗುತ್ತಿದೆ. ಈ ಪುರುಷಾರ್ಥಕ್ಕೆ ನೀವು ಅಧಿಕಾರಕ್ಕೆ ಬರಬೇಕಾಗಿತ್ತೇ? ಜನರು ಅದಕ್ಕೋಸ್ಕರ ನಿಮ್ಮನ್ನು ಆಯ್ಕೆ ಮಾಡಿದರಾ ನೀವೇ ಹೇಳಿ.

ಯಾವುದು ದುಷ್ಟ ಪದ್ಧತಿ, ಯಾವುದು ಶೋಷಣೆಯೆಂದು ಹೇಳಿದ್ದೀರಿ ಅದನ್ನೇ ತಾವು ಇನ್ನೂ ಹೆಚ್ಚು ಮಾಡಿದ್ದೀರಿ. ಇದು ವಚನಬದ್ಧ ಸರ್ಕಾರವೇ? ವಚನಭ್ರಷ್ಟ ಸರ್ಕಾರವೆಂದು ಹೇಳಬಹುದಲ್ಲಾ? ಅದಕ್ಕಾಗಿ ಈ ಮಾತನ್ನು ಅಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಆ ದಿಕ್ಕಿನಲ್ಲಿ ಮುಂದಿನ ದಿವಸಗಳಲ್ಲಾದರೂ ದಯಮಾಡಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ. ಯಾರು ಭ್ರಷ್ಟಾಚಾರಕ್ಕೆ ಒಳಗಾಗುತ್ತಾರೆ ಅವರಿಗೆ ಉಗ್ರವಾದಂಥ ಶಿಕ್ಷೆಯಾಗುತ್ತದೆ ಎನ್ನತಕ್ಕ ಸಂದೇಶವನ್ನು ನೀಡುವ ದಿಕ್ಕಿನಲ್ಲಿ ಕಾರ್ಯಕ್ರಮವನ್ನಿಟ್ಟುಕೊಂಡರೆ ಭ್ರಷ್ಟಾಚಾರವನ್ನು ಮಾಡುವವರಲ್ಲಿ ಭೀತಿ ಬರಲು ಸಾಧ್ಯವಾಗುತ್ತದೆ ಎನ್ನತಕ್ಕದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪಿ.ಡಬ್ಲ್ಯೂ.ಡಿ. ಇಲಾಖೆಯ ಬಗ್ಗೆ ಹೇಳುವುದಾದರೆ ಆ ಇಲಾಖೆಯನ್ನು ಮೈನರ್ ಇರಿಗೇಷನ್ ಮತ್ತು ಪಿ.ಡಬ್ಲ್ಯೂ.ಡಿ. ಇಲಾಖೆಯೆಂದು ಬೇರ್ಪಡಿಸಿದರು. ಸುಮಾರು ಎರಡೂವರೆ ತಿಂಗಳ ಹಿಂದೆ ನಾನೇ ಚುಕ್ಕೆ ಗುರುತಿನ ಪ್ರಶ್ನೆಯನ್ನು ಹಾಕಿದ್ದೆ. ಅದರ ಬಗ್ಗೆ ಸದನದಲ್ಲಿಯೇ ಚರ್ಚೆಯಾಯಿತು. ಆ ಇಲಾಖೆಯನ್ನು ವರ್ಗೀಕರಣ ಮಾಡಬೇಕೆಂದು ಸುಮಾರು ಎರಡೂವರೆ ತಿಂಗಳುಗಳ ಹಿಂದೆ ಆದೇಶ ಹೋಯಿತು. ಆ ಆದೇಶ ಹೋದ ಮೇಲೆ ಎನ್.ಎಂ.ಆರ್.ಗಳ ಚಾರ್ಜ್‌ನ್ನು ಮೈನರ್ ಇರಿಗೇಷನ್ ಇರಿಗೇಷನ್ ಸಬ್ ಡಿವಿಜನ್ಗೆ ಕೊಟ್ಟುಬಿಟ್ಟರು. ಅನಂತರ ಅದಕ್ಕೆ ಸ್ಟೇ ತಂದರು. ಮೈನರ್ ಇರಿಗೇಷನ್ ನವರನ್ನು ಕೇಳಿದರೆ ಸ್ಟೇ ಬಂದಿದೆ, ನಾವು ಕೆಲಸವನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ, ಪಿ.ಡಬ್ಲ್ಯೂ.ಡಿ. ಸಬ್ ಡಿವಿಜನ್‌ರವರು ನಾವು ಮೈನರ್ ಇರಿಗೇಷನ್ ನವರಿಗೆ ಚಾರ್ಜ್ ಕೊಟ್ಟುಬಿಟ್ಟಿದ್ದೇವೆ, ನಾವು ಕೆಲಸ ಮಾಡಲು ಬರುವುದಿಲ್ಲವೆಂದು ಹೇಳುತ್ತಾರೆ. ಈ ರೀತಿಯಾಗಿ ಎರಡೂವರೆ ತಿಂಗಳುಗಳಾಗಿದೆ, ತಮಗೆಲ್ಲರಿಗೂ ಇದು ಗೊತ್ತಿರಬೇಕು. ಅಷ್ಟು ಸಮಯವಾದರೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ರಸ್ತೆಗಳು ಗುಂಡಿ ಬಿದ್ದರೆ ಅದನ್ನು ದುರಸ್ತಿ ಮಾಡಲು ಯಾರೂ ಇಲ್ಲ, ಹೇಳುವವರು ಕೇಳುವವರು ಗತಿಯಿಲ್ಲ. ಇಂಥ ಸ್ಥಿತಿ ಸರ್ಕಾರಕ್ಕೆ ಬಂದಿದೆಯೆಂದು ನನಗೆ ಮರುಕವಾಗುತ್ತಿದೆ. ಇಂಥದನ್ನು ಸರ್ಕಾರವೆಂದೂ ಹೇಳಬಹುದೆ? ಕಳೆದ ಎರಡೂವರೆ ತಿಂಗಳಿನಿಂದ ಪಿ.ಡಬ್ಲ್ಯೂ.ಡಿ. ಸಬ್ ಡಿವಿಜನ್ ನಲ್ಲಿ- ಹೇಳುವವರು ಕೇಳುವವರು ಇಲ್ಲ ತಾನೆ? ಇದ್ದರೆ ಮಂತ್ರಿಗಳು ಹೇಳಲಿ. ಎರಡೂವರೆ ತಿಂಗಳಿನಿಂದ ಅವರಿಗೆ ಸಂಬಳವಾಗಿಲ್ಲ, ನಾವೇನು ಇದರ ಬಗ್ಗೆ ಭಾವಿಸಿಕೊಂಡು ಹೇಳುತ್ತಿಲ್ಲ, ಇದು ಸ್ಪಷ್ಟತೆಯುಳ್ಳದ್ದಾಗಿದೆ.

ಇದನ್ನು ಸರ್ಕಾರವೆಂದು ಕರೆಯಬೇಕೆ? ಹೊಣೆಗಾರಿಕೆ ಇರತಕ್ಕ ಸರ್ಕಾರವೆಂದು ಕರೆಯಬೇಕೆ? ಅಥವಾ ಹೊಣೆಗೇಡಿ ಸರ್ಕಾರವೆಂದು ಕರೆಯಬೇಕೆ? ಇವತ್ತಿನವರೆಗೂ ಅದರ ಬಗ್ಗೆ ತೀರ್ಮಾನವಾಗಿಲ್ಲ, ಜನರ ಹಿತದೃಷ್ಟಿಯಿಂದ, ರಸ್ತೆಗಳಾಗಬೇಕು ಎನ್ನತಕ್ಕ ಉದ್ದೇಶದಿಂದ ಈ ಇಲಾಖೆಯನ್ನು ವರ್ಗೀಕರಣ ಮಾಡಿಲ್ಲ, ಯಾರೂ ಅಪಾರ್ಥ ಮಾಡಿಕೊಳ್ಳಬಾರದು; ಆ ಮಂತ್ರಿಗಳ ಹಿಡಿತದಲ್ಲಿ ಸ್ವಲ್ಪ ಅಧಿಕಾರಿಗಳು ಬರಬೇಕು, ಮುಖ್ಯಅಭಿಯಂತರು, ಅಭಿಯಂತರು, ಶಾಖಾಧಿಕಾರಿಗಳು ಮಂತ್ರಿಗಳ ನಿಯಂತ್ರಣದಲ್ಲಿರಬೇಕೆಂದು ಈ ರೀತಿ ಪಿ.ಡಬ್ಲ್ಯೂ.ಡಿ. ಇಲಾಖೆಯನ್ನು ವಿಭಾಗ ಮಾಡಿದ್ದಾರೆ. ಮಂತ್ರಿಗಳ ಅನುಕೂಲಕ್ಕಾಗಿ ಇಲಾಖೆಗಳನ್ನು ಬೇರ್ಪಡಿಸಲು ಹೋದರೆ ಸಮಾಜದ ಸುಧಾರಣೆ ಈ ಸರ್ಕಾರದಿಂದಾಗುತ್ತದೆಯೇ ಎನ್ನತಕ್ಕ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಇಲ್ಲೇನು ಅಸ್ಪಷ್ಟತೆ ಇದೆ ಅದನ್ನು ನಿವಾರಣೆ ಮಾಡಲು ತುರ್ತಾಗಿ ಸರ್ಕಾರ ಕ್ರಮತೆಗೆದುಕೊಂಡು

ಸಂಬಂಧಪಟ್ಟ ಉಪ ವಿಭಾಗಗಳು ಕೆಲಸ ಮಾಡಲು ತುರ್ತಾಗಿ ಸೂಚನೆ ನೀಡಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದೇನೆ. ಮತ್ತೊಂದು ವಿಚಾರವನ್ನು ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಒಂದು ರಸ್ತೆಯ ಕಾಮಗಾರಿ ಕಳಪೆ ಕಾಮಗಾರಿಯಾಗಿ, ಕೆಲಸ ಸರಿಯಾಗಿ ಆಗದಿರುವ ಬಗ್ಗೆ ನಾನೇ ಖುದ್ದಾಗಿ ಲೋಕಾಯುಕ್ತಕ್ಕೆ ಅಫಿಡವಿಟ್‌ನ್ನು ಸಲ್ಲಿಸಿದೆ. ಪಿ.ಡಬ್ಲ್ಯೂ.ಡಿ. ರಸ್ತೆಯೊಂದಕ್ಕೆ ಸರಿಯಾಗಿ ಡಾಂಬರ್‌ನ್ನು ಹಾಕದೆ ಮೇಲು ಮೇಲೆ ಸ್ವಲ್ಪ ಮರಳನ್ನು ಹಾಗೂ ಡಾಂಬಾರನ್ನು ಹಾಕುತ್ತಿದ್ದಾರೆ. ಗುಣಮಟ್ಟವನ್ನು ಪಾಲಿಸುತ್ತಿಲ್ಲವೆಂದು ಇಲಾಖೆಯ ಅಧಿಕಾರಿಗಳಿಗೆ ಹೇಳಿದೆ, ಅವರು ಅದರ ಬಗ್ಗೆ ಗಮನ ಹರಿಸಲಿಲ್ಲ, ಅನಂತರ ನಾನೇ ಖುದ್ದಾಗಿ ಲೋಕಾಯುಕ್ತಕ್ಕೆ ಅಫಿಡವಿಟ್ ಸಲ್ಲಿಸಿದೆ.

ಅಲ್ಲಿಗೆ 50 ಸಾವಿರ ಕೆ.ಜಿ. ಡಾಂಬರನ್ನು ಬಿಡುಗಡೆ ಮಾಡಬೇಕಾಗಿತ್ತು, ಆದರೆ ಬಿಡುಗಡೆ ಮಾಡಿದ್ದು 25 ಸಾವಿರ ಕೆ.ಜಿ. ಮಾತ್ರ. ಅದರಲ್ಲಿಯೇ ರಸ್ತೆಯ ಕೆಲಸವನ್ನು ಮುಗಿಸಿ ಬಿಟ್ಟಿದ್ದಾರೆ, ಇದು ಟೆಂಡರ್ ಕೆಲಸ, ಅದರ ಪ್ರಕಾರ ಇಲಾಖೆಯವರೇ ಡಾಂಬರನ್ನು ಕೊಡಬೇಕಾಗಿತ್ತು, ಇಲಾಖೆಯವರು ಡಾಂಬರನ್ನು ಕೊಟ್ಟೇ ಇಲ್ಲ ಆದರೆ ರಸ್ತೆಯ ಕೆಲಸವಾಗಿಬಿಟ್ಟಿದೆ. ಅದರ ಬಗ್ಗೆ ಲೋಕಾಯುಕ್ತಕ್ಕೆ ಅಫಿಡವಿಟ್ ಸಲ್ಲಿಸಿದೆ, ಅದು ಟೆಕ್ನಿಕಲ್ ಸೆಲ್‌ಗೆ ಹೋಯಿತು. ಅನಂತಹ ಲೋಕಾಯುಕ್ತದ ಮುಂದೆ ಬಂತು, ಇದರ ಬಗ್ಗೆ ವಿಚಾರಣೆ ನಡೆಯುತ್ತಿದೆ, ಆದರೆ ಮಾಡಿದ್ದ ರಸ್ತೆ ಕಿತ್ತುಹೋಗಿದೆ. ಈ ಮಧ್ಯದಲ್ಲಿ ಕೆಲಸವನ್ನು ಮಾಡಿದ್ದ ಗುತ್ತಿಗೆದಾರರಿಗೆ ಪೇಮೆಂಟ್ ಮಾಡಿಬಿಟ್ಟಿದ್ದಾರೆ. ಇಲಾಖೆಯವರನ್ನು ಕೇಳಿದರೆ ಪೇಮೆಂಟ್‌ನ್ನು ನಿಲ್ಲಿಸಬೇಡಿಯೆಂದು ಯಾರೂ ಹೇಳಿಲ್ಲ, ಆದ್ದರಿಂದ ಹಣವನ್ನು ಕೊಟ್ಟೆವು ಎಂದು ಹೇಳುತ್ತಾರೆ. ಲೋಕಾಯುಕ್ತಕ್ಕೆ ಹೋಗಿ ಏಕೆ ಹೀಗಾಗಿದೆಯೆಂದು ಕೇಳಿದೆ, ಅದಕ್ಕವರು ಪೇಮೆಂಟ್ ನಿಲ್ಲಿಸಿಯೆಂದು ಹೇಳಲು ಎಲ್ಲೂ ಕಾನೂನು ಇಲ್ಲ, ಅದಕ್ಕಾಗಿ ನಾವು ಅದರ ಬಗ್ಗೆ ಸೂಚನೆ ಕೊಟ್ಟಿಲ್ಲವೆಂದು ಹೇಳಿದರು. ಪೇಮೆಂಟ್ ಮಾಡುವುದು ಇಲಾಖೆಯವರಿಗೆ ಬಿಟ್ಟ ವಿಷಯವೆಂದು ಹೇಳುತ್ತಾರೆ. ಇಂಥ ಅವ್ಯವಸ್ಥೆಯಲ್ಲಿ ನಾವಿದ್ದೇವೆ. ಇಂಥ ಲೋಪದೋಷವೇನಿದೆ ಅದನ್ನು ಸರಿಪಡಿಸುವ ದಿಕ್ಕಿನಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಪಶುಸಂಗೋಪನಾ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ದೇಶ ಮತ್ತು ರಾಜ್ಯದಲ್ಲಿ ಅಬ್ಕಾರಿ ಲಾಬಿಯು ಬಹಳ ಪ್ರಬಲವಾಗಿದೆಯೆಂದು ನಾನು ತಿಳಿದುಕೊಂಡಿದ್ದೆ. ಆದರೆ ಹಾಲಿನ ಲಾಬಿಯು ಅದಕ್ಕಿಂತ ಪ್ರಬಲವಾದ ಲಾಬಿಯೆಂದು ಇತ್ತೀಚೆಗೆ ನನಗೆ ಅರ್ಥವಾಗುತ್ತಿದೆ. ಹಾಲಿನ ಲಾಬಿಯು ಈ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡುತ್ತಿದೆಯೆಂಬುದು ನನ್ನ ಗಮನಕ್ಕೆ ಬಂದಿದೆ. ತಾವು ಇದರ ಸತ್ಯಾಸತ್ಯತೆಗಳ ಬಗ್ಗೆ ಬೇಕಾದರೆ ಪರಿಶೀಲನೆ ಮಾಡಬಹುದು. ಮೌಲ್ಯಗಳ ಬಗ್ಗೆ ಬಹಳಷ್ಟು ಹೇಳಿಕೊಂಡು ಅಧಿಕಾರಕ್ಕೆ ಬಂದಂಥ ಜನರು ತಾವು, ಈ ಇಲಾಖೆಯ ನೇತೃತ್ವವನ್ನು ಹೊತ್ತಿರತಕ್ಕವರು ರಾಜ್ಯ ಮಂತ್ರಿಗಳಾಗಿದ್ದಾರೆ, ಆದರೆ ಕೆ.ಎಂ.ಎಫ್.ನ ಅಧ್ಯಕ್ಷರಾಗಿರುವವರು ಕ್ಯಾಬಿನೆಟ್ ದರ್ಜೆಯ ಸ್ಥಾನಮಾನವನ್ನು ಹೊಂದಿದ್ದಾರೆ. ತಮಗೆ ಕಾನೂನುಗಳಿರಬಹುದು, ಆದರೆ ನೈತಿಕ ಮೌಲ್ಯಗಳಿವೆಯಲ್ಲಾ ರಾಜ್ಯ ಮಂತ್ರಿಗಳ ಸ್ಥಾನಮಾನವನ್ನು ಹೊಂದಿರುವವರ ಕೈಕೆಳಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನವನ್ನು ಹೊಂದಿರತಕ್ಕವರು ಕೆಲಸ ಮಾಡುವುದು. ಇದು ಸಾಧ್ಯವಿದೆಯೇ? ತಮಗೆ ನೈತಿಕತೆಯಿದಿದ್ದರೆ, ಕ್ಯಾಬಿನೆಟ್ ಮಂತ್ರಿಯಾಗಿ ಅಧಿಕಾರವನ್ನು ಸ್ವೀಕಾರ ಮಾಡಿದ ಘಳಿಗೆಯಲ್ಲಿಯೇ ರಾಜೀನಾಮೆಯನ್ನು ಕೊಡಬೇಕಾಗಿತ್ತು. ತಮಗೆಲ್ಲಿದೆ ನೈತಿಕ ಮೌಲ್ಯಗಳು? ಇದೊಂದೇ ಕಡೆಯಲ್ಲ, ಬೇರೆ ಕಡೆಗಳಲ್ಲೂ

ಹಾಗೆಯೇ ಆಗಿದೆ, ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲೂ ಹಾಗೆಯೇ ಆಗಿದೆ. ರಾಜ್ಯ ಸಚಿವರು ಆ ಖಾತೆಯನ್ನು ನಿರ್ವಹಣೆ ಮಾಡುವವರು, ಅವರ ಕೈಕೆಳಗೆ ಆ ಮಂಡಳಿಯ ಅಧ್ಯಕ್ಷರು ಕ್ಯಾಬಿನೆಟ್ ಸ್ಥಾನಮಾನಮ್ನು ಹೊಂದಿರುವವರು. ತಮಗೆ ನೈತಿಕತೆ ಇದೆಯೇ? ನನಗೆ ಗೊತ್ತಿರುವ ಮಟ್ಟಿಗೆ ಕೆ.ಎಂ.ಎಫ್.ನಲ್ಲಿ ಒಂದು ದಿನಕ್ಕೆ ಹನ್ನೊಂದರಿಂದ ಹದಿನಾಲ್ಕು ಲಕ್ಷ ಲೀಟರ್‌ವರೆಗೆ ಹಾಲು ಸಂಗ್ರಹವಾಗುತ್ತದೆ. ಆ ಹಾಲಿನಲ್ಲಿ ಮೂರು ಪರಸೆಂಟ್ ವೇಸ್ಟೇಜ್ ಎಂದು ತೆಗೆಯುತ್ತಾರೆ. ಹಾಗಿದ್ದ ಮೇಲೆ ಹದಿನಾಲ್ಕು ಲೀಟರ್ ಹಾಲಿನಲ್ಲಿ ನಲವತ್ತೆರಡು ಸಾವಿರ ಲೀಟರ್ ಹಾಲನ್ನು ವೇಸ್ಟೇಜ್ ಎಂದು ಪರಿಗಣಿಸುತ್ತಾರೆ. ಒಂದು ದಿನಕ್ಕೆ ಇಷ್ಟು ನಷ್ಟವಾಗುತ್ತದೆಂದರೆ ಒಂದು ಲೀಟರ್ ಹಾಲಿಗೆ ಹತ್ತು ರೂಪಾಯಿಗಳಂತೆ ದಿನಕ್ಕೆ ನಾಲ್ಕೂವರೆ ಲಕ್ಷ ರೂಪಾಯಿಗಳು ದುರುಪಯೋಗವಾಗುತ್ತಿದೆ. ಅಷ್ಟು ಪ್ರಮಾಣದಲ್ಲಿ ಹಾಲಿನ ಲಾಬಿ ನಡೆಯುತ್ತಿದೆ. ಭ್ರಷ್ಟಾಚಾರ ನಡೆಯುತ್ತಿದೆ. ಅದಕ್ಕಾಗಿಯೇ ರಾಜ್ಯ ಸಚಿವರ ಕೈಕೆಳಗೆ ಕ್ಯಾಬಿನೇಟ್ ದರ್ಜೆಯುವನಾಗಿ ಇದ್ದರೂ ಚಿಂತೆಯಿಲ್ಲವೆಂದು ಅವರು ಇರಬಹುದೆಂದು ನನಗೆ ಸಂಶಯ ಬರುತ್ತಿದೆ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ, ಮಾನ್ಯ ಸದಸ್ಯರು ಹಾಲಿನಲ್ಲಾಗುವ ನಷ್ಟದ ಬಗ್ಗೆ ಪರಿಣಿತರು ನೀಡುವ ರೀತಿಯಲ್ಲಿ ಲೆಕ್ಕ ಮಾಡಿ ಹೇಳಿದ್ದಾರೆ. ಹಾಲಿನಲ್ಲೆಷ್ಟು ನಷ್ಟವಾಗುತ್ತದೆ ಎನ್ನತಕ್ಕದ್ದು ನಮ್ಮ ರಾಜ್ಯದಲ್ಲಿರುವ ಹಾಲು ಮಹಾಮಂಡಳಿಯಲ್ಲಿ ಮಾತ್ರವಲ್ಲ ಇಡೀ ದೇಶದಲ್ಲೇ ಈ ವ್ಯವಸ್ಥೆ ಇದೆ. ಪ್ರತಿಯೊಂದಕ್ಕೂ ಕನ್ ವರ್ಷನ್ ಚಾರ್ಜ್ಸ್ ಎಷ್ಟಾಗುತ್ತದೆ ವೇಸ್ಟೇಜ್ ಎಷ್ಟಾಗುತ್ತದೆ ಎನ್ನತಕ್ಕದ್ದು ಎಲ್ಲಾ ಕಡೆ ಇರುತ್ತದೆ. ಆ ಮಿತಿಯನ್ನೇನಾದರೂ ಮೀರಿ ನಷ್ಟವಾಗುತ್ತಿದ್ದರೆ ಅವರು ಹೇಳುವಲ್ಲಿ ಅರ್ಥವಿದೆ, ಹಾಲನ್ನು ಪ್ರೋಸೆಸ್ ಮಾಡತಕ್ಕ ಸಂದರ್ಭದಲ್ಲಿ ನಷ್ಟವಾಗುವುದು ಸಹಜ. ಮತ್ತು ಮಾನ್ಯ ಸದಸ್ಯರು ಬಹಳ ಮೌಲ್ಯಗಳ ಬಗ್ಗೆ ಹೇಳುತ್ತಿದ್ದಾರೆ. ಆದರೆ ಅವರುಗಳ ಮೌಲ್ಯವೇನಿತ್ತು ಎಂಬ ಬಗ್ಗೆ ನಾವು ಹಿಂದಿನ ದಿವಸಗಳನ್ನು ನೋಡಬೇಕಾಗುತ್ತದೆ. ಆ ದಿವಸಗಳ ಬಗ್ಗೆ ಹೇಳಲು ನಾನು ಹೋಗುವುದಿಲ್ಲ, ಅವರ ಆಡಳಿತಾವಧಿಯ ಬಗ್ಗೆ ಕೆದಕಲು ನನಗಿಷ್ಟವಿಲ್ಲ, ಹಿಂದೆ ಏನೇನು ನಡೆಯಿತು, ಯಾವ್ಯಾವ ಸಂದರ್ಭದಲ್ಲಿ ಏನೇನಾಗಿದೆ ಎಂಬ ಬಗ್ಗೆ ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದ ಇದೇ ಸದನದಲ್ಲಿ ನಾನು ನೋಡಿದ್ದೇನೆ. ಹಾಲು ಮಹಾಮಂಡಳಿಯಲ್ಲಿರುವುದು ಸಹಕಾರ ಸಂಘದ ವ್ಯವಸ್ಥೆ. ಅದು ಚುನಾಯಿತ ಮಂಡಳಿ. It is a duly elected body. How is he disqualified from holding the post?

ಯಾವ ಕಾನೂನಿನ ಉಲ್ಲಂಘನೆ ಇಲ್ಲಾಗಿಲ್ಲ. ಕೆ.ಎಂ.ಎಫ್.ನ ಅಧ್ಯಕ್ಷರಾಗಿರತಕ್ಕದ್ದು ಯಾವ ಕಾನೂನನ್ನು ಉಲ್ಲಂಘನೆ ಮಾಡಿದೆ ಎಂಬ ಬಗ್ಗೆ ತಾವು ಹೇಳಬೇಕು.

1.20 ಪಿ.ಎಂ.

ಮಾನ್ಯ ಅಧ್ಯಕ್ಷರೇ, ನೈತಿಕತೆ ಬಗ್ಗೆ ಮಾತನಾಡುವುದಕ್ಕೆ ಮಾನ್ಯ ರಾಮಸ್ವಾಮಿಯವರಿಗೆ ಎಷ್ಟರಮಟ್ಟಿಗೆ ಹಕ್ಕಿದೆ ಎಂದು ನನಗಂತೂ ಕೂಡ ಅನುಮಾನ ಇದೆ. ಅದನ್ನು ಬಿಟ್ಟು, ಇಂತಹ ಕಡೆ ಏನೋ 3 ಲಕ್ಷ ಇತ್ಯಾದಿ ಎಂದರೆ ಹೇಗೆ. ಮಾನ್ಯ ರಾಮಸ್ವಾಮಿಯವರಿಗೆ ಬೆನಿಫಿಟ್ ಆಫ್ ಡೌಟ್ ಆದರೂ ಕೊಡೋಣ. ಅವರು ಬಹಳ ಉದ್ದಕ್ಕೆ ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಯಾವ ಕಾನೂನಿನ ಉಲ್ಲಂಘನೆಯಾಗಿದೆ? ಓಥ್ ಆಫ್ ಸೀಕ್ರೆಸಿ ಏನಾದರೂ ಉಲ್ಲಂಘನೆ ಆಗಿದೆಯೇ? ಪೀಪಲ್ ರೆಪ್ರಿನೆಂಟೇಷನ್ ಆಕ್ಟ್ ಏನಾದರೂ ಉಲ್ಲಂಘನೆಯಾಗಿದೆಯೇ? ಸೆಕ್ರೆಟೇರಿಯಲ್

ಪ್ರೊಸೀಜರ್ ಏನಾದರೂ ಉಲ್ಲಂಘನೆಯಾಗಿದೆಯೇ? ಯಾವುದು ಉಲ್ಲಂಘನೆಯಾಗಿದೆ ಎನ್ನತಕ್ಕದ್ದನ್ನು ಮಾನ್ಯ ಸದಸ್ಯರು ಹೇಳಬೇಕು. ಸದಾಶಿವನಿಗೆ ಅದೇ ಚಿಂತೆ ಎನ್ನುವಂತೆ ಇವರಿಗೆ ಯಾವತ್ತೂ ಕೂಡ ಅವರ ಮೇಲೆಯೇ ಕಣ್ಣು. ಬೇರೆ ಯಾರ ಮೇಲೂ ಕೂಡ ಇವರ ಕಣ್ಣು ಇಲ್ಲ; ಅವರ ಮೇಲೆಯೇ ಕಣ್ಣು. ಇವರ ಕಣ್ಣಿಗೆ ಅವರು ಯಾರೂ ಕೂಡ ಇರಬಾರದು. ಅವರ ಹೆಸರುಗಳನ್ನು ನಾನಿಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅವರಿಗೂ ಕೂಡ ಗೊತ್ತಿದೆ. ಅವರ ಕಣ್ಣಿಗೆ ಮಾನ್ಯ ದೇವೇಗೌಡರು ಇರಬಾರದು, ಅವರ ಮಕ್ಕಳಾಗಿರತಕ್ಕವರು ಕೂಡ ಇರಬಾರದು, ಅದು ಅವರ ಗುರಿ ಇರತಕ್ಕದ್ದು. ಆದ್ದರಿಂದಲೇ ಅವರು ಈ ರೀತಿ ಹೇಳುತ್ತಿದ್ದಾರೆ. ಅನಾವಶ್ಯಕವಾಗಿ ಈ ರೀತಿಯ ಅಪಾದನೆಗಳನ್ನು ಮಾಡತಕ್ಕದ್ದನ್ನು ಅವರು ನಿಲ್ಲಿಸಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಸದಸ್ಯರು ಹೇಳುವಾಗ ಮಧ್ಯದಲ್ಲಿ ಏಕೆ ಮಾತನಾಡುತ್ತೀರಿ. ತಾವು ಹೇಳಬೇಕೆನಿಸಿದ್ದನ್ನು ಉತ್ತರ ಕೊಡುವಾಗ ಹೇಳಿ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಮಸ್ವಾಮಿಯವರು ಮಾತನಾಡುತ್ತಿರತಕ್ಕ ಸಂದರ್ಭದಲ್ಲಿ ಕ್ಯಾಬಿನೆಟ್ ಸಚಿವರಾಗಿರುವ ಮಾನ್ಯ ರೇವಣ್ಣನವರು ಕೆ.ಎಂ.ಎಫ್.ನ ಅಧ್ಯಕ್ಷರಾಗಿದ್ದಾರೆ, ಕೆ.ಎಂ.ಎಫ್. ಪಶು ಸಂಗೋಪನಾ ಖಾತೆಯ ಅಡಿಯಲ್ಲಿದ್ದು ರಾಜ್ಯ ಸಚಿವರೊಬ್ಬರು ಆ ಖಾತೆಯ ಮಂತ್ರಿಗಳಾಗಿದ್ದಾರೆ, ಆದರೂ ಮಾನ್ಯ ರೇವಣ್ಣನವರು ಇನ್ನೂ ಕೆ.ಎಂ.ಎಫ್.ನ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ ಎಂಬ ಮಾತನ್ನು ಹೇಳಿದರು. ಮಾನ್ಯ ರೇವಣ್ಣನವರು ಕ್ಯಾಬಿನೆಟ್ ಸಚಿವರಾಗಿರುವುದು ನಿಜ. ಆದರೆ ಅವರು ಕೆ.ಎಂ.ಎಫ್.ನ ಎಲೆಕ್ಟೆಡ್ ಪ್ರೆಸಿಡೆಂಟ್ ಆಗಿದ್ದಾರೆ. ಅವರನ್ನೇನೂ ನಾಮಿನೇಟ್ ಮಾಡಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಮಾತನಾಡುತ್ತಾ ಹೇಳಿದೆ, ಕಾನೂನು ಪ್ರಕಾರ ಅದು ಸರಿ ಇರಬಹುದು ಎಂದು. ಅದು ತಮ್ಮ ಗಮನಕ್ಕೆ ಬಂದಿರಬಹುದು. ಆದರೆ ನೈತಿಕ ದೃಷ್ಟಿಯಿಂದ ಅದು ಎಷ್ಟರಮಟ್ಟಿಗೆ ಸರಿ ಎನ್ನತಕ್ಕಂತಹ ಪ್ರಶ್ನೆಯನ್ನೂ ಕೂಡ ನಾನು ಕೇಳಿದೆ, ಇಲ್ಲ ಎಂದು ನಾನು ಹೇಳಲಿಲ್ಲ. ಅದರ ಜೊತೆಗೆ ನಾನು ಮಲೆನಾಡು ಅಭಿವೃದ್ಧಿ ಮಂಡಳಿಯ ಬಗ್ಗೆಯೂ ಸಹ ಉಲ್ಲೇಖಿಸಿದೆ.

ನಾನು ಅದೊಂದನ್ನೇ ಹೇಳಲಿಲ್ಲ. ನನ್ನ ನೈತಿಕತೆ ಎಷ್ಟಿದೆ ಎಂದು ಮಾನ್ಯ ಸಚಿವರು ಕೇಳಿದರು. ನನ್ನ ನೈತಿಕತೆ ಬಗ್ಗೆ ನನಗೆ ವಿಶ್ವಾಸ ಸಂಪೂರ್ಣವಾಗಿ ಇದೆ. ಅದನ್ನೇನೂ ನೀವು ಕೆದಕಬೇಕಾದ ಪ್ರಶ್ನೆ ಇಲ್ಲ, ಅದರ ಬಗ್ಗೆ ಅನುಮಾನವನ್ನೂ ಕೂಡ ಪಟ್ಟುಕೊಳ್ಳಬೇಡಿ. ಯಾರದೋ ಮೇಲೆ ಸಂಶಯ ಮಾಡಿಕೊಂಡು ಮಾತನಾಡತಕ್ಕ ದೃಷ್ಟಿಯಿಂದ ನಾನು ಆ ಮಾತು ಹೇಳಲಿಲ್ಲ. ನಾನು ಒಂದು ನೀತಿಯ ಪ್ರಶ್ನೆ ಬಗ್ಗೆ ಹೇಳಿದೆ. ಕೆ.ಎಂ.ಎಫ್. ಎಲೆಕ್ಟೆಡ್ ಬಾಡಿ; ಅದು ಸರಿ. ನಾನು ಮೊದಲೇ ಮಾತನಾಡುತ್ತಾ ಹೇಳಿದೆ; ಅವರು ಚುನಾವಣೆಯ ಮುಖಾಂತರ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು. ಆದಲೆ ವ್ಯವಸ್ಥೆ ಈ ರೀತಿ ಇದೆಯಲ್ಲಾ, ಅದು ಸರಿಯೇ ಎಂಬುದನ್ನು ನಾನು ಕೇಳಿದೆ. ಮಲೆನಾಡು ಅಭಿವೃದ್ಧಿ ಮಂಡಳಿ ಕೂಡ ಅದೇ ರೀತಿ ಇದೆ ಎನ್ನತಕ್ಕಂತಹ ಮಾತನ್ನೂ ಕೂಡ ನಾನು ಹೇಳಿದೆ. ಮಾನ್ಯ ಸಚಿವರು ಶೇಕಡ 3ರಷ್ಟು ವೇಸ್ಟೇಜ್ ಎಲ್ಲಾ ಕಡೆ ಆಗುತ್ತಿದೆ ಎನ್ನುವ ಮಾತನ್ನು ಹೇಳಿದರು. ವೇಸ್ಟೇಜ್ ಆಗಲೀ, ಆಗದಿರಲಿ, ಶೇಕಡ 3ರಷ್ಟು ವೇಸ್ಟೇಜ್ ಎಂದು ಗಣನೆಗೆ ತೆಗೆದುಕೊಳ್ಳಬೇಕೆಂದು ನಿಗದಿ ಮಾಡಿದ್ದೀರಾ ಎಂಬುದನ್ನು ಹೇಳಿ.

ಶೇಕಡ 1ರಷ್ಟು ವೇಸ್ಟೇಜ್ ಆಗಿರಬಹುದು, ಶೇಕಡ $1\frac{1}{2}$ ವೇಸ್ಟೇಜ್ ಆಗಿರಬಹುದು ಅಥವಾ ಶೇಕಡ 2ರಷ್ಟು ವೇಸ್ಟೇಜ್ ಆಗಿರಬಹುದು, ಎಷ್ಟೇ ವೇಸ್ಟೇಜ್ ಆದರೂ ಕರೆಕ್ಟಾಗಿ ಶೇಕಡ 3ರಷ್ಟು ವೇಸ್ಟೇಜ್ ತೆಗೆಯುವುದು ಸರಿಯೇನು? 10 ಲಕ್ಷ ಲೀಟರ್ ಹಾಲಿಗೆ 30 ಸಾವಿರ ಲೀಟರ್ ವೇಸ್ಟೇಜ್ ಎಂದು ತೆಗೆದರೆ, ಅದರಲ್ಲಿ ಎಷ್ಟು ದುಡ್ಡು ಹೋಯಿತು? ಮಂತ್ರಿಗಳು ಯಾರೋ ಇದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ನಾನು ಹೇಳುತ್ತಿಲ್ಲ. ಈ ರೀತಿ ಇವತ್ತು ಆಗುತ್ತಿರುವುದಲ್ಲ. ನಿಮ್ಮ ಸರ್ಕಾರ ಬಂದ ಮೇಲೆಯೇ ಈ ರೀತಿಯಾಗುತ್ತಿಲ್ಲ. ಹಿಂದಿನಿಂದಲೂ ಕೂಡ ಇದು ಹೀಗೆಯೇ ನಡೆದುಕೊಂಡು ಬಂದಿದೆ. ಅದನ್ನು ತಡೆಗಟ್ಟುವ ಸಲುವಾಗಿ, ನಿಮ್ಮ ಗಮನಕ್ಕೆ ತರಲಿಕ್ಕೆ ನಾನು ಹೇಳಬಾರದೇ? ನಾನು ಸುಮ್ಮನೆ ಬಾಯಿ ಮುಚ್ಚಿಕೊಂಡು ಕುಳಿತುಕೊಂಡು ಬಿಡಬೇಕೇ? ನಾನು ಹೇಳುತ್ತಿರುವುದು ಆರೋಪ ಅಲ್ಲ, ಇರತಕ್ಕ ಲೋಪದೋಷಗಳನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಅದಕ್ಕೇನು ಬಹಳ ಆಗಬಾರದ್ದು ಆಗುತ್ತಿದೆ...

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಆ ದೃಷ್ಟಿಯಿಂದ ಹೇಳುವುದಾದರೆ, ಅದಕ್ಕೆ ನನ್ನದೇನೂ ವಿರೋಧ ಇಲ್ಲ. ಆದರೆ ಅವರು ಹೇಳಿದ್ದು, ಇನ್ನೂ ಮುಂದೆ ಹೋಗಿ ಹೇಳಿದ್ದಾರೆ....

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಮಂತ್ರಿಗಳು ಸ್ವಲ್ಪ ತಡವಾಗಿ ಬಂದರು. ನಾನು ಮೊದಲೂ ಕೂಡ ಹೇಳಿದೆ, ನಮ್ಮಲ್ಲಿದ್ದವರು ಸತ್ಯ ಹರಿಶ್ಚಂದ್ರರು ಎಂದು ನಾನು ಹೇಳುವುದಿಲ್ಲ ಎಂತಲೂ ನಾನು ಹೇಳಿದೆ...

ಅಧ್ಯಕ್ಷರು : ಮಾನ್ಯ ರಾಮಸ್ವಾಮಿಯವರೇ, ತಾವು ಮಾನ್ಯ ಮಂತ್ರಿಗಳ ಕಡೆಗೆ ನೋಡದೇ, ನನ್ನ ಕಡೆ ನೋಡಿ ಮಾತನಾಡಿ. ನನಗೆ ನಿಮ್ಮ ಮುಖ ನೋಡಬೇಕೆಂದು ಆಸೆ. ನೀವು ಆ ಕಡೆ ತಿರುಗಿಕೊಂಡರೆ ಹೇಗೆ?

ಶ್ರೀ ಎ.ಟಿ. ರಾಮಸ್ವಾಮಿ : ನಿಮ್ಮಲ್ಲಿ ಕೆ.ಎಂ.ಎಫ್.ನ ಎಷ್ಟು ಹಾಲಿನ ಡೈರಿಗಳಿವೆಯೋ ಅಲ್ಲೆಲ್ಲಾ ಶೇಕಡ 3ರಷ್ಟು ವೇಸ್ಟೇಜ್ ಆಗುತ್ತಿದೆಯೇ? ಎಲ್ಲಾ ಕಡೆ ಶೇಕಡ 3ರಷ್ಟು ವೇಸ್ಟೇಜ್ ತೆಗೆಯುತ್ತಿದ್ದಾರೆಂದು ಹೇಳಿ, ಇಲ್ಲೂ ಕೂಡ ಅಷ್ಟೇ ವೇಸ್ಟೇಜ್ ತೆಗೆಯುತ್ತಿದ್ದೀರೋ? ಪ್ರತಿದಿನ ಕರೆಕ್ಟಾಗಿ ಶೇಕಡ 3ರಷ್ಟೇ ವೇಸ್ಟೇಜ್ ಆಗುತ್ತಿದೆಯೇ? ಅದಕ್ಕಿಂತ ಕಡಿಮೆ ವೇಸ್ಟೇಜ್ ಆಗುವುದಿಲ್ಲವೇ? ಶೇಕಡ 2ರ ವೇಸ್ಟೇಜ್ ಬದಲು ಶೇಕಡ 3ರಷ್ಟು ವೇಸ್ಟೇಜ್ ಎಂದು ತೋರಿಸಿದರೆ, ಅದರಲ್ಲಿ ಎಷ್ಟು ದುಡ್ಡು ಹೋಯಿತು?

ಒಂದು ವರ್ಷಕ್ಕೆ ಎಷ್ಟು ಕೋಟಿ ಹಣ ಅದರಿಂದ ದುರುಪಯೋಗವಾಯಿತು? ಈ ರೀತಿ ಎಲ್ಲೋ ಒಂದು ಡೈರಿಯಲ್ಲಿ ಆಗುತ್ತಿಲ್ಲ, ಇಡೀ ರಾಜ್ಯಾದ್ಯಂತ ಈ ರೀತಿಯಾಗುತ್ತಿದೆ. ಇದನ್ನು ನಿಯಂತ್ರಣ ಮಾಡಲಿಕ್ಕೆ ತಾವು ಕ್ರಮ ಕೈಗೊಳ್ಳಬೇಕು. ಅದಕ್ಕೇ ನಾನು ಹೇಳಿದ್ದುದು, ಲಿಕ್ಕರ್ ಲಾಬಿಯಂತೆ ಮಿಲ್ಕ್ ಲಾಬಿ ಎಂಬುದೂ ಕೂಡ ಈಗ ಶುರುವಾಗಿದೆ. ಮಿಲ್ಕ್ ಲಾಬಿಯಲ್ಲಿ ಎಷ್ಟೊಂದು ಹಣ ದುರುಪಯೋಗವಾಗುತ್ತಿದೆ? ನಾನು ಏತಕ್ಕಾಗಿ ಇಷ್ಟೊಂದು ಕಠಿಣವಾಗಿ ಹೇಳುತ್ತಿದ್ದೇನೆ ಎಂದರೆ, ಹಾಲು ರಕ್ತಕ್ಕೆ ಸಮಾನವಾದುದು. ನಾನೂ ಕೂಡ ಒಂದು ಚಿಕ್ಕ ಹಳ್ಳಿಯಿಂದ ಬಂದಿರತಕ್ಕವನು. ನಮ್ಮ ಹಳ್ಳಿಯಲ್ಲಿ ಕೇವಲ 60 ಮನೆಗಳಿವೆ. ಹಾಲಿನ ಸಂಘ ನಮ್ಮಲ್ಲಿ ಪ್ರಾರಂಭ ಮಾಡಿದಾಗಿನಿಂದ ನಾನೂ ಕೂಡ ಸುಮಾರು 7-8

ವರ್ಷಗಳು ಅದರ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ರೈತರು 200 ಮಿ.ಲೀ. ನಷ್ಟು ಕೂಡ ಹಾಲನ್ನು ಡೈರಿಗೆ ತಂದು ಹಾಕುತ್ತಿದ್ದರು, ಅವರ ಮಕ್ಕಳ ಬಾಯಿಗೆ ಕುಕ್ಕೆ ಕಟ್ಟಿ ಈ ರೀತಿ ಮಾಡುತ್ತಿದ್ದರು. ಏನೋ ವಾರಕ್ಕೆ ಇದರಿಂದಾಗಿ 15-20 ರೂ. ಬರುತ್ತದೆ, ನಮ್ಮ ಉಪ್ಪು ಸೊಪ್ಪಿನ ಭಂಗ ನೀಗುತ್ತದೆಂದು ಅವರು ಡೈರಿಗೆ ಹಾಲು ಹಾಕುತ್ತಿದ್ದರು. ಆದರೆ ಇದೇ ಹಾಲನ್ನು ರೈತರೇ ಕುಡಿದಿದ್ದರೆ, ಅವರ ಮಕ್ಕಳು ಕುಡಿದಿದ್ದರೆ, ಹಾಲು ರಕ್ತವಾಗಿ ಪರಿವರ್ತನೆಯಾಗುತ್ತಿತ್ತು. ಅಂತಹ ರಕ್ತಕ್ಕೆ ಸಮಾನವಾದ ಹಾಲನ್ನು ಹಣಕ್ಕೋಸ್ಕರ ಮಾರಾಟ ಮಾಡುತ್ತಾರೆ, ಅದರಲ್ಲಿ ಲೋಪ ದೋಷಗಳು ಆಗಬಾರದು, ಅದರಲ್ಲಿ ಅನ್ಯಾಯ ಆಗಬಾರದು, ಅದರಲ್ಲಿ ಮೋಸ ಆಗಬಾರದು ಎನ್ನತಕ್ಕಂತಹ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆಯೇ ಹೊರತು, ಬರೇ ನೀವೇ ಎಲ್ಲವನ್ನೂ ಮಾರಿ ಬಿಟ್ಟಿದ್ದೀರಿ, ನುಂಗಿ ಹಾಕಿ ಬಿಟ್ಟಿದ್ದೀರಿ ಎನ್ನತಕ್ಕ ಮಾತನ್ನು ನಾನು ಹೇಳುತ್ತಿಲ್ಲ. ಮೌಲ್ಯಗಳನ್ನು ಏನು ಹೇಳಿಕೊಂಡು ಬಂದಿದ್ದೀರಿ, ... ನಿಮ್ಮ ಕಾಲದಲ್ಲಿ ಅದು ಹೆಚ್ಚಾಗಿ ಹೋಗಬಾರದು, ಅದಕ್ಕೆ ತಡೆ ಹಾಕಿ, ನಿಲ್ಲಿಸಲಿಕ್ಕೆ ಪ್ರಯತ್ನ ಮಾಡಿ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ತಮಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಕೆ.ಎಂ.ಎಫ್. ಫೆಡರೇಷನ್ ಎನ್ನುವುದು ಸರಿ, ಆದರೆ ಅದಕ್ಕೆ ಸರ್ಕಾರ ಕೋಟಿಗಟ್ಟಲೆ ಅನುದಾನ ಕೊಡುತ್ತಿಲ್ಲವೇ?

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೇ, ಸರ್ಕಾರವು ಕೆ.ಎಂ.ಎಫ್.ಗೆ 3 ಕೋಟಿ 36 ಲಕ್ಷ ರೂ.ಗಳನ್ನು ಅನುದಾನ ಕೊಡುತ್ತಿದೆ.

ಶ್ರೀ ಎ.ಟಿ. ರಾಮಸ್ವಾಮಿ : ಸರ್ಕಾರದಿಂದ ಕೆ.ಎಂ.ಎಫ್.ಗೆ ಅನುದಾನ ಕೊಡಲಾಗುತ್ತಿದೆ. ಆದರೆ ಅಲ್ಲಿ ಸರ್ಕಾರದ ವತಿಯಿಂದ ಆಡಿಟ್ ಆಗುತ್ತಿಲ್ಲ. ಇವತ್ತು ಎಂದಲ್ಲ, ಮೊದಲಿನಿಂದಲೂ ಈ ಕೆಲಸ ಆಗುತ್ತಿಲ್ಲ. ಯಾರೋ ಚಾರ್ಟೆಡ್ ಅಕೌಂಟೆಂಟ್ ಒಬ್ಬನನ್ನು ದುಡ್ಡು ಕೊಟ್ಟು ಕರೆದುಕೊಂಡು ಬಂದು, ಅವನ ಕೈಯ್ಯಲ್ಲಿ ಅಕೌಂಟ್ಸ್ ಅನ್ನು ಆಡಿಟ್ ಮಾಡಿಸಿಕೊಂಡು ಬಿಡುತ್ತಾರೆ. ಬಿಸಿನೆಸ್ ಮೆನ್ ಯಾರಿದ್ದಾರೆ, ಅವರೆಲ್ಲಾ ಹೀಗೇ ತಾನೇ ಮಾಡುವುದು? ಅವರು ಮಾಡಿದ್ದನ್ನೇ ಇವರು ಒಪ್ಪಿಕೊಂಡು ಬಿಡುತ್ತಾರೆ. ಸರ್ಕಾರ ದುಡ್ಡು ಕೊಟ್ಟಮೇಲೆ, ಸರ್ಕಾರದ ಏಜೆನ್ಸಿ ಹೋಗಿ ಅಲ್ಲಿ ಆಡಿಟ್ ಮಾಡಬಾರದೇ? ಸರ್ಕಾರದ ವತಿಯಿಂದ ಅಲ್ಲಿ ತಪಾಸಣೆ ಆಗಿದೆಯೇ ಎಂಬುದನ್ನು ಹೇಳಿ. ಸರ್ಕಾರ ಕೆ.ಎಂ.ಎಫ್.ಗೆ ಅನುದಾನ ಕೊಟ್ಟಮೇಲೆ, ಅದು ಸರಿಯಾಗಿ ಸದುಪಯೋಗವಾಗುತ್ತಿದೆಯೇ, ಇಲ್ಲವೇ ಎಂಬ ಬಗ್ಗೆ ಸರ್ಕಾರದ ವತಿಯಿಂದ ತಪಾಸಣೆ ಮಾಡಿಸುವುದು ಬೇಡವೇ? ಸರ್ಕಾರದ ಹಣ ಸಾರ್ವಜನಿಕರ ಹಣ. ಆ ಸಾರ್ವಜನಿಕರ ಹಣವನ್ನು ನೀವು ಕೆ.ಎಂ.ಎಫ್.ಗೆ. ಕೊಟ್ಟಮೇಲೆ ಅದು ಸದುಪಯೋಗವಾಗುತ್ತಿದೆಯೇ? ಇಲ್ಲವೇ ಎಂಬುದನ್ನು ನೋಡಿಕೊಳ್ಳುವ ಜವಾಬ್ದಾರಿ ನಿಮಗಿದೆ. ನೀವು ಏಕೆ ಅದನ್ನು ಮಾಡಿಸುತ್ತಿಲ್ಲ? ಏಕೆ ಕೈ ಕಟ್ಟಿ ಕುಳಿತಿದ್ದೀರಿ? ನೀವ್ಯಾರು ಅದರಲ್ಲಿ ಪಾಲುದಾರರಲ್ಲ, ಶಾಮೀಲಾಗಿಲ್ಲ ಎಂದ ಮೇಲೆ ಏಕೆ ತನಿಖೆ ಮಾಡಿಸುತ್ತಿಲ್ಲ? ಆ ದಿಕ್ಕಿನಲ್ಲಿ ಮುಂದೆಯಾದರೂ ಸರ್ಕಾರದ ವತಿಯಿಂದ ನೀವು ತನಿಖೆ ಮಾಡಿಸಿ, ಏನು ಲೋಪದೋಷಗಳಾಗುತ್ತಿವೆ, ಅದನ್ನು ನಿವಾರಣೆ ಮಾಡಲಿಕ್ಕೆ, ತಡೆಗಟ್ಟಲಿಕ್ಕೆ ದಯಮಾಡಿ ತಾವು ಕ್ರಮ ಕೈಗೊಳ್ಳಬೇಕೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಮಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಸೂರ್ಯನ ಉದಯವಾಗುವುದಕ್ಕಿಂತ ಮುಂಚಿತವಾಗಿ ಹಾಲಿನ ವ್ಯಾಪಾರ ಆಗಿ ಹೋಗುತ್ತದೆ. ಸೂರ್ಯ ಮುಳುಗಿದ ಮೇಲೆ ಮದ್ಯದ ವ್ಯಾಪಾರ ಜಾಸ್ತಿಯಾಗುವುದಕ್ಕೆ

ಶುರುವಾಗುತ್ತದೆ. ಅದಕ್ಕೆ ಮೊದಲು ವ್ಯಾಪಾರ ಶುರುವಾಗುವುದಿಲ್ಲ ಎಂದು ಅಲ್ಲ. ಸೂರ್ಯ ಮುಳುಗಿದ ನಂತರ ಮದ್ಯದ ವ್ಯಾಪಾರ ಜಾಸ್ತಿಯಾದರೆ, ಸೂರ್ಯ ಮೂಡುವುದಕ್ಕೆ ಮುಂಚಿತವಾಗಿ ಹಾಲಿನ ವ್ಯಾಪಾರ ಆಗುತ್ತದೆ. ಅದು ಅಮೃತಕ್ಕೆ ಸಮನಾದುದು. ಅವರ ವ್ಯವಹಾರದಲ್ಲಿ ಅನ್ಯಾಯ ಆಗದ ರೀತಿಯಲ್ಲಿ, ಉತ್ಪಾದಕರಿಗೆ ಸರಿಯಾದ ಬೆಲೆ ಸಿಗುವ ರೀತಿಯಲ್ಲಿ, ಹಾಲನ್ನು ಯಾರು ಕೊಂಡುಕೊಳ್ಳುತ್ತಾರೆ, ಆ ಗ್ರಾಹಕರಿಗೂ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಿ. ಈಗ ನೀವೇನು ಹಾಲು ಸರಬರಾಜು ಮಾಡುತ್ತೀರಿ, ಅದರಲ್ಲಿ ಶೇಕಡ 3ರಷ್ಟು ಫ್ಯಾಟ್ ಇರಬೇಕು, ಮತ್ತು ಶೇಕಡ 8.5 ರಷ್ಟು ಎಸೆನ್ಸ್ ಇರಬೇಕೆಂದು ಹೇಳುತ್ತೀರಿ.

ಈ ಬಗ್ಗೆ ಸರ್ಕಾರದವರು ಎಷ್ಟು ದಿವಸ ಟೆಸ್ಟ್ ಮಾಡಿದ್ದಾರೆ? ಈ ಪ್ರಮಾಣ ಎಲ್ಲಾ ದಿವಸ ಕರೆಕ್ಟಾಗಿ ಇದೆಯೇ? ಎಂದು ನೋಡುವುದು ಸರ್ಕಾರದ ಜವಾಬ್ದಾರಿಕೆ ಅಲ್ಲವೇ? ಸರ್ಕಾರ ಈ ಕೆಲಸ ಏಕೆ ಮಾಡಬಾರದು? ಸೂರ್ಯ ಮೂಡುವುದಕ್ಕೆ ಮುಂಚಿತವಾಗಿ ಆಗುವ ವ್ಯವಹಾರದಲ್ಲೂ ಕೂಡ ಅವ್ಯವಹಾರ ಆಗುತ್ತದೆ ಅಂದರೆ, ಇಲಾಖೆ ಆ ಕಡೆಗೆ ಗಮನ ಹರಿಸುತ್ತಿಲ್ಲ ಅಂದರೆ, ಕೈ ಕಟ್ಟಿ ಕುಳಿತುಕೊಂಡಿದೆ ಅಂದರೆ, ಸರ್ಕಾರಕ್ಕೆ ನಾವು ಭೇಷ್ ಎಂದು ಹೇಳಬೇಕೇ? ಅಥವಾ ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಬೇಕೇ? ಎಂಬುದನ್ನು ನೀವೇ ಹೇಳಿ. ಆ ದಿಕ್ಕಿನಲ್ಲಿ ದಯಮಾಡಿ ತಾವು ಕ್ರಮ ಕೈಗೊಳ್ಳಬೇಕು ಎನ್ನತಕ್ಕಂತಹ ಮಾತನ್ನು ಹೇಳಿ, ಇನ್ನು ಹೆಚ್ಚು ಲಂಬಿಸಿ ಮಾತನಾಡದೇ ಸೂಕ್ಷ್ಮವಾಗಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಮಿಲ್ಕ್ ಪೌಡರ್ ಬಗ್ಗೆ ಹೇಳುವುದಾದರೆ, ಕಳೆದ ವರ್ಷ, ಅದರ ಹಿಂದಿನ ವರ್ಷಗಳಲ್ಲಿ ಎಷ್ಟು ಮಿಲ್ಕ್ ಪೌಡರ್ ಉತ್ಪಾದನೆಯಾಯಿತು? ಅದನ್ನು ಯಾವ ಧಾರಣೆಗೆ ತಾವು ಮಾರಾಟ ಮಾಡಿದಿರಿ ಎಂದರೆ, ನನಗೆ ಬಂದ ಮಾಹಿತಿ ಪ್ರಕಾರ, ಕ್ವಾಲಿಟಿ ಸರಿಯಾಗಿಲ್ಲ ಎಂದು ಹೇಳಿ ಅಂಡರ್ ರೇಟಿಗೆ ಸೇಲ್ ಮಾಡಿದ್ದಾರೆ. ಒಂದು ಕೆ.ಜಿ.ಗೆ 60-65 ರೂ.ಗಳಷ್ಟು ರೇಟ್ ಇದ್ದರೆ, ನೀವು ಮಿಲ್ಕ್ ಪೌಡರ್ ಅನ್ನು ಕೆ.ಜಿ.ಗೆ 24-25 ರೂ.ಗಳಂತೆ ಮಾರಾಟ ಮಾಡಿದ್ದೀರಿ.

ಕ್ವಾಲಿಟಿ ಏನೂ ಇಲ್ಲ ಎಂದರೆ ಅದಕ್ಕೆ ಜವಾಬ್ದಾರರು ಯಾರು? ಇವರು ರೆಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡಬೇಕು. ಕ್ವಾಲಿಟಿ ಸರಿ ಇಲ್ಲ ಎಂದು 65 ರೂಪಾಯಿ ಲೀಟರ್ ಇರತಕ್ಕಂತಹ ಮಿಲ್ಕ್ ಪೌಡರ್ 25 ರೂಪಾಯಿಗೆ 40 ರೂಪಾಯಿ ಕಡಿಮೆ ಬೆಲೆಗೆ ಮಾರಾಟ ಮಾಡಿ ಹಣ ಗುಳುಂ ಮಾಡಿದರೂ ನಾವು ಸುಮ್ಮನೆ ಕುತುಕೊಳ್ಳಬೇಕಾ? ನೀವು ನಿಮ್ಮ ಉತ್ತರದಲ್ಲಿ ಮೂರು - ನಾಲ್ಕು ವರ್ಷದ್ದು ಹೇಳಿ ಸಾಕು, ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಮಿಲ್ಕ್ ಪೌಡರ್ ಉತ್ಪಾದನೆ ಆಯಿತು, ಯಾವ ರೇಟ್ ಗೆ ನೀವು ಮಾರಾಟ ಮಾಡಿದ್ದೀರಿ, ಲೋಕಲ್ ರೇಟ್ ಏನು ಇದೆ, ಎಷ್ಟು ವ್ಯತ್ಯಾಸ ಆಯಿತು, ಕಡಿಮೆ ಮಾರಾಟ ಮಾಡುವುದಕ್ಕೆ ಕಾರಣ ಏನು, ಪೂರ್ ಕ್ವಾಲಿಟಿ ಆಗುವುದಕ್ಕೆ ಕಾರಣ ಏನು, ಯಾರು ಜವಾಬ್ದಾರರು ಅವರ ಮೇಲೆ ಕ್ರಮ ಕೈಗೊಳ್ಳುತ್ತೀರೋ? ಕ್ರಮ ಕೈಕೊಳ್ಳಬೇಕಲ್ಲ! ರೈತನಿಂದ ಅಮೃತವನ್ನು ಕೊಂಡು ಕೊಂಡು ಈ ತರಹ ದುರುಪಯೋಗ ಆದರೆ, ನಾವು ಯಾರೂ ಕೂಡ ಕೈ ಕಟ್ಟಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ನಿಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಹಾರ್ಟಿಕಲ್ಚರ್ ಮಿನಿಸ್ಟರ್ ಕರೆಯಿಸಿ ಅವರ ಇಲಾಖೆ ಬಗ್ಗೆ ಸ್ವಲ್ಪ ಹೇಳಬೇಕಾಗಿತ್ತು. ಮೊದಲನೆಯದಾಗಿ ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿ ಹೇಳಿದೆ, ಇದಕ್ಕೆ ಸಂಬಂಧ ಪಟ್ಟ ಮಂತ್ರಿಗಳು ಇರಬೇಕು ಎಂದು. ಮೂರು ನಾಲ್ಕು ಇಲಾಖೆಗಳ ಬೇಡಿಕೆಗಳ ಬಗ್ಗೆ ನಾನು

ಮಾತನಾಡುತ್ತೇನೆ ಕರೆಸಿ ಎಂದು ಹೇಳಿದ್ದೆ. ಇವರು ಕೇಳುವುದಕ್ಕೂ ಸಂಬಂಧಪಟ್ಟ ಇಲಾಖೆ ಮಂತ್ರಿಗಳು ಕೇಳುವುದಕ್ಕೆ ವ್ಯತ್ಯಾಸ ಇಲ್ಲವೇ?

ಅಧ್ಯಕ್ಷರು : ಅವರು ಪರ್ಮಿಷನ್ ತೆಗೆದುಕೊಂಡು ಗುಲ್ಬರ್ಗಾಕ್ಕೆ ಹೋಗಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೇರೆ ಬೇರೆ ಇಲಾಖೆ ನೋಡಿಕೊಳ್ಳತಕ್ಕಂತಹ ಸಚಿವರಿಗೆ ಮನದಟ್ಟಾಗಿದೆ. ರಿಪ್ಲೈ ಆದ ಮೇಲೆ ತಾವು ವಿವರವಾಗಿ ಉತ್ತರ ಕೊಡುವ ಅಗತ್ಯವಿಲ್ಲ. ಒಟ್ಟಾರೆ ನಾವು ಪರಿಶೀಲಿಸುತ್ತೇನೆ, ನೋಡುತ್ತೇನೆ, ಸರಿ ಮಾಡುತ್ತೇವೆಂದು ಉತ್ತರ ಕೊಡುವುದು ತಮಗೆ ಮನವರಿಕೆಯಾಗಿರುವುದರಿಂದ ಯಾರೂ ನೋಟ್ ಮಾಡಿಕೊಳ್ಳುವ ಪ್ರಶ್ನೆ ಇಲ್ಲ, ಉತ್ತರ ಕೊಡುವಂತೆ ನಿರೀಕ್ಷೆ ಮಾಡುವುದೂ ಬೇಕಾಗಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನೀರಾವರಿ ಮಂತ್ರಿಗಳು ಇವತ್ತು ಸದನಕ್ಕೆ ಬರುವುದಕ್ಕೆ ಆಗಿಲ್ಲ, ಅವರು ಡೆಲ್ಲಿಗೆ ಹೋಗಿದ್ದಾರೆ. ಹಾರ್ಟಿಕಲ್ಚರ್ ಮಿನಿಸ್ಟರ್ ಬಂದರೆ ಅವರ ಇಲಾಖೆ ಬಗ್ಗೆ ಮಾತನಾಡುತ್ತೇನೆ. ತೋಟಗಾರಿಕೆ ಇಲಾಖೆ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಎಲ್ಲಾ ಇಲಾಖೆಗಳಲ್ಲೂ ಕೂಡ ಅಶಿಸ್ತು ಇದೆ, ಅಪ್ರಮಾಣಿಕತೆ ಇದೆ ಬರೀ ಒಂದೆರಡು ಇಲಾಖೆಗಳಲ್ಲಿ ಎಂದು ಇಲ್ಲ, ತೋಟಗಾರಿಕೆ ಇಲಾಖೆ ಇದೆ ಅದರಲ್ಲಿರತಕ್ಕಂತಹ Most of the farms, most of the horticultural farms, even agricultural farms are running under loss due to mismanagement or indiscipline ಮಿಸ್ ಮ್ಯಾನೇಜ್‌ಮೆಂಟ್ ಇರಬಹುದು, ಇನ್‌ಡಿಸಿಪ್ಲೀನ್ ಇರಬಹುದು, ಅದಕ್ಕೆ ಕೆಲವು ಉದಾಹರಣೆಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಕೆಮ್ಮಣ್ಣುಗುಂಡಿಯಲ್ಲಿ ಒಂದು ಹಿಲ್ ಸ್ಟೇಷನ್ ಇದೆ,

ಅಲ್ಲಿ ಒಬ್ಬರು ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್, ಹಾರ್ಟಿಕಲ್ಚರ್, ಇದ್ದಾರೆ ಎಷ್ಟರ ಮಟ್ಟಿಗೆ ದುರುಪಯೋಗ ಆಗಿದೆ ಎಂದರೆ ಟ್ರೆಷರಿಗೆ ಹಣ ರೆಮಿಟ್ ಮಾಡುವುದಕ್ಕೆ ಕಳುಹಿಸುತ್ತಾರೆ. ಇವರೇ ಸೀಲ್ ಮಾಡಿಕೊಂಡು ಸುಮಾರು 70,000 ರೂಪಾಯಿಗಳನ್ನು ರೆಮಿಟ್ ಮಾಡಿದ್ದೇವೆಂದು ಸೀಲ್ ಹೊಡೆದುಕೊಂಡು ಒಂದು ಜೋಟ ಫೋರ್ಜರಿ ಸಿಗ್ನೇಚರ್ ಮಾಡಿಕೊಂಡು ತಂದು ಕೊಟ್ಟಿದ್ದಾರೆ. 70,000 ರೂಪಾಯಿಗಳನ್ನು ಟ್ರೆಷರಿ ರೆಮಿಟೆನ್ಸ್ ಬುಕ್ ಇರುತ್ತದೆ, ಅಲ್ಲಿ ಕೊಟ್ಟು ಅಲ್ಲಿ ರೆಮಿಟ್ ಮಾಡಿದ್ದೇವೆಂದು ರಸೀದಿ ತರಬೇಕು. ಅವರೇ ಒಂದು ಸೀಲ್ ಮಾಡಿಕೊಂಡು ಸೀಲ್ ಹೊಡೆದರು, ರೆಮಿಟ್ ಮಾಡಿದ್ದೇವೆಂದು ಯಾವುದೋ ಫೋರ್ಜರಿ ಸಿಗ್ನೇಚರ್ ಮಾಡಿಕೊಂಡು ತಂದರು. 70,000 ರೂಪಾಯಿ ಅಲ್ಲಿ ಈ ರೀತಿ ದುರುಪಯೋಗ ಆಗಿದೆ. ರೆಮಿಟೆನ್ಸ್ ಆಗಿಲ್ಲ, ಇದೇ ತರಹ ಬೇರೆ ಬೇರೆ ಇಲಾಖೆಗಳಲ್ಲಿ ಕೂಡ ಟ್ರೆಷರಿ ಸೀಲನ್ನು ಫೋರ್ಜರಿ ಮಾಡಿಕೊಂಡು ಪಾಪ ಆಫೀಸರ್ ತರುತ್ತಾರೆ, ಕ್ಲರ್ಕ್ ರೆಮಿಟೆನ್ಸ್ ತೆಗೆದುಕೊಂಡು ಹೋದರು. ನೋಡಿ ಮಾಡಿದ್ದೇವೆಂದು ತೋರಿಸುತ್ತಾರೆ. ಅಲ್ಲಿ ಸೀಲ್ ಇರುತ್ತದೆ. ಯಾವುದೋ ಒಂದು ಸಿಗ್ನೇಚರ್ ಇರುತ್ತದೆ ಒಪ್ಪಿಕೊಳ್ಳುತ್ತಾರೆ. ಲಕ್ಷಾಂತರ ರೂಪಾಯಿಗಳ ಹಣ ಈ ರೀತಿ ಟ್ರೆಷರಿಯಲ್ಲಿ ಕಟ್ಟದೆ ದುರುಪಯೋಗ ಆಗಿದೆ.

ಅದರ ಬಗ್ಗೆ ತಾವು ಉತ್ತರ ಕೊಡುವಾಗ ತಿಳಿಸಬೇಕೆಂದು ಈ ಸಂದರ್ಭದಲ್ಲಿ ತಮಗೆ ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ಅದೇ ರೀತಿ ಶಿಡ್ಲಘಟ್ಟ ತಾಲ್ಲೂಕಿನ ಚಿಕ್ಕದಾಸರ ಹಳ್ಳಿ ತೋಟಗಾರಿಕಾ ಕ್ಷೇತ್ರದಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಅಸಿಸ್ಟೆಂಟ್ ಡೈರೆಕ್ಟರ್

ಮತ್ತು ಸ್ಟಾಫ್ ಸೇರಿಕೊಂಡು ಇಲ್ಲೀಗಲ್ಲಾಗಿ ಟ್ರೆಷರಿಯಿಂದ ಡ್ರಾ ಮಾಡಿಕೊಂಡು ಮಿಸ್ ಯೂಸ್ ಮಾಡಿಕೊಂಡಿದ್ದಾರೆ. ಇವತ್ತಿನವರೆಗೂ ಸರ್ಕಾರದಿಂದ ಏನೂ ಕ್ರಮ ತೆಗೆದುಕೊಂಡಿಲ್ಲ. ಆ ಬಗ್ಗೆ ತಾವು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಬೇಕು. ಕೊರಟಗೆರೆ ತಾಲ್ಲೂಕು ದೊಡ್ಡ ಸಾಗರದ ಫಾರಂನಲ್ಲಿ ಗುಮಾಸ್ತರು ಫೋರ್ಜರಿ ಸೈನ್ ಮಾಡಿಕೊಂಡು ಫಾಲ್ಸ್ ಬಿಲ್ ಮಾಡಿ ಐದು ಲಕ್ಷ ರೂಪಾಯಿ ಡ್ರಾ ಮಾಡಿದ್ದಾರೆ. ಹಾಡು ಹಗಲೇ ದರೋಡೆ ಆಗುತ್ತಿದೆ. ಕಾಣದ ಹಾಗೆ ರಾತ್ರಿ ಹೊತ್ತು ದರೋಡೆ ಆಗುತ್ತದೆ, ಇಲ್ಲಿ ಹಾಡು ಹಗಲೇ ದರೋಡೆ ಆಗುತ್ತಿದೆ. ಅಲ್ಲಿಯೂ ಕೂಡ ಮಿಸ್ ಯೂಸ್ ಆಗಿದೆ. ನಾಗಮಂಗಲ ತಾಲ್ಲೂಕಿನ ಮಲ್ಲಸಂದ್ರದ ತೋಟಗಾರಿಕಾ ಕ್ಷೇತ್ರದಲ್ಲಿ ಇಲಾಖಾಧಿಕಾರಿಗಳ ಫಾರಂನಲ್ಲಿ ಅಧಿಕಾರಿಗಳೇ ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿದ್ದಾರೆ. ಆ ಕಡೆ ತಾವು ಗಮನ ಹರಿಸಬೇಕು. ಎಲ್ಲದಕ್ಕಿಂತ ಹೆಚ್ಚಿಗೆ ಸ್ಕಾಂಡಲ್ ಆಗುತ್ತಿದೆ, ಡ್ರಿಪ್ ಇರಿಗೇಷನ್, ಗ್ರೀನ್ ಹೌಸ್ ಎಂದು ಕೊಡುತ್ತಾರೆ, 1995-96ನೇ ಸಾಲಿನಲ್ಲಿ 15-16 ಕೋಟಿ ರೂಪಾಯಿ ಕೊಟ್ಟಿರಬಹುದು. ಪ್ರೋತ್ಸಾಹ ಮಾಡಬೇಕೆಂದು ಇದೇ ಇದು ಒಳ್ಳೆಯ ಯೋಜನೆ.

ನೀರಿನ ಸದ್ಬಳಕೆ ಆಗಲಿ ಎಂದು ಇದನ್ನು ಕೊಡತಕ್ಕಂತಹ ಸಂದರ್ಭದಲ್ಲಿ ಡೀಲರ್ಸ್‌ನಿಂದ ಇರಬಹುದು, ಅಥವಾ ರೈತರಿಂದ ಇರಬಹುದು 20 ಪರ್ಸೆಂಟ್ ಕಮಿಷನ್. ಇದು ಯಾರ ಮೇಲೆ ಬೀಳುತ್ತದೆ, ಕೆಟ್ಟ ಪರಿಣಾಮ ಯಾರ ಮೇಲೆ ಆಗುತ್ತದೆ? ರೈತನ ಮೇಲೆ ಆಗುತ್ತದೆ. ಇದನ್ನು ಏನಾದರೂ ಮಾಡಿ ತಪ್ಪಿಸಲಿಕ್ಕೆ ನೀವು ಬೇರೆ ತರಹ ಕಾರ್ಯಕ್ರಮ ರೂಪಿಸಿಕೊಳ್ಳಬೇಕು. 20 ಪರ್ಸೆಂಟ್ ದುರುಪಯೋಗ ಆಗುತ್ತಿದೆ ಎನ್ನತಕ್ಕಂತಹ ಮಾತನ್ನು ಹೇಳಿ ಹಾಪ್‌ಕಾಮ್ಸ್‌ಬಹಳ ಒಳ್ಳೆಯ ಉದ್ದೇಶದಿಂದ ಪ್ರಾರಂಭ ಮಾಡಿರುವುದು. ಉತ್ಪಾದಕರಿಗೂ ಒಳ್ಳೆಯದಾಗಲಿ, ಗ್ರಾಹಕರಿಗೂ ಒಳ್ಳೆಯದಾಗಲಿ ನ್ಯಾಯವಾದ ಬೆಲೆಯಲ್ಲಿ ಸಿಗಲಿ ಮಧ್ಯವರ್ತಿಗಳಿಂದ ಶೋಷಣೆ ತಪ್ಪಲಿ ಎಂದು ಹಾಪ್‌ಕಾಮ್ಸ್ ಮಾಡಿದ್ದುದು. ಇವತ್ತು ಅಲ್ಲಿ ಏನಾಗಿದೆ ಎಲ್ಲೋ ಹೋಗಿ ಮಾರ್ವಡಿಗಳ ಹತ್ತಿರ ತಂದು ಬಿಡುತ್ತಾರೆ. ಈಗ ಇವರೂ ಕೂಡ ಮಾರ್ವಾಡಿಗಳ ಹತ್ತಿರ ತರುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದು ದಿವಸ ತಮ್ಮ ಛೇಂಬರ್‌ನಲ್ಲಿ ತಮ್ಮ ಗಮನಕ್ಕೆ ತಂದೆ, ಟೊಮಾಟೊ ಹಣ್ಣು ಹೊರಗಡೆ ಮಾರುಕಟ್ಟೆಯಲ್ಲಿ 13 ರೂಪಾಯಿ ಇದ್ದರೆ ಅವರ ಹತ್ತಿರ 21 ರೂಪಾಯಿ ಒಂದು ಕೇಜಿ ಟೋಮಾಟೋ. ಅದು ಯಾವ ಪುರುಷಾರ್ಥಕ್ಕಾಗಿ ಹಾಪ್‌ಕಾಮ್ಸ್ ಮಾಡಬೇಕಾಗಿತ್ತು, ಪ್ರಾರಂಭ ಮಾಡುವಾಗ ಈ ಉದ್ದೇಶ ಇತ್ತೇ? ಆ ದಿಕ್ಕಿನಲ್ಲಿ ಹಾಪ್‌ಕಾಮ್ಸ್ ಏನು ಇದೆ, ಇದೇ ರೀತಿಯಲ್ಲಿ ನಡೆದುಕೊಂಡು ಹೋದರೆ ಇನ್ನು ಆರು ತಿಂಗಳಲ್ಲಿ ಮುಚ್ಚತಕ್ಕಂತಹ ಸಂದರ್ಭ ಇದೆ. ಆ ಕಡೆ ಸರ್ಕಾರ ಗಮನ ಹರಿಸಬೇಕು. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಲೋಯರ್ ಟೆಕ್ನಿಕಲ್ ಸ್ಟಾಫ್ ಇಲ್ಲ, ಸರಿಯಾದ ಟೆಕ್ನಿಕಲ್ ನಾಲೆಡ್ಜ್ ಇರುವವರು ಇಲ್ಲ. ಇವತ್ತಿನ ಹೈಟೆಕ್ ಎರಾ(Era) ಏನು ಇದೆ, ಅದಕ್ಕೆ ಸ್ಪಂದಿಸತಕ್ಕಂತಹ ತಾಂತ್ರಿಕ ತಜ್ಞರು ಆ ಇಲಾಖೆಯಲ್ಲಿ ಇಲ್ಲದಿದ್ದರೆ ಆ ಇಲಾಖೆ ಅಭಿವೃದ್ಧಿ ಹೇಗೆ ಆಗುವುದಕ್ಕೆ ಸಾಧ್ಯ ಇದೆ, ಇ ಟೆಕ್ನಿಕಲ್ ಸ್ಟಾಫ್ ಕೊಡುವುದಕ್ಕೆ ಗಮನ ಎಂದು ಹರಿಸಬೇಕು. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ನೀವು ಬಿ.ಎಸ್.ಸಿ. ಅಗ್ರಿಕಲ್ಚರ್ ಗ್ರ್ಯಾಜುಯೇಟ್ ಅಲ್ಲವೇ ಅದಕ್ಕೋಸ್ಕರ Who is whoಕೂಡ ತರಿಸಿ ಕನ್‌ಫರ್ಮ್ ಮಾಡಿಕೊಂಡೆ. ನಿಮ್ಮಂತಹವರು ಸದನದಲ್ಲಿ ಮಾತನಾಡುವಾಗ ಈ ಹಾರ್ಟಿಕಲ್ಚರ್ ಬಗ್ಗೆ ಮಾತನಾಡಿದಿರಿ. ಅನಿಮಲ್

ಹಸ್ಬೆಂಡರಿ ಬಗ್ಗೆ ಮಾತನಾಡಿರಿ, I would expect you to go down to the basic problems of Animal Husbandry ಪಿಗರಿ ಯೂನಿಟ್ಸ್ ಏನಾಗಿದೆ, ಶೀಪ್ ರೇರಿಂಗ್ ಯೂನಿಟ್ಸ್ ಏನಾಗಿವೆ, ಹೊಸ ತಳಿ ಎಲ್ಲಿಂದ ಬಂದಿದೆ, ಆರ್ಟಿಫಿಷಿಯಲಿ ಇನ್‌ಸೆಮಿನೇಷನ್ ಸೆಂಟರ್ಸ್ ಏಕೆ ಫೇಲಾಗುತ್ತವೆ, ಫಾರ್ಮರ್ಸ್‌ಗೆ ರಿಪೀಟ್ ಆಗುವುದರಲ್ಲಿ ಯಾವ ತರಹದ ಲಾಸ್ ಆಗುತ್ತದೆ, ಯಾವುದೋ 70,000, 60,000 ಇರುತ್ತದೆ. They are serious things. But as a farmer, as an agriculture graduate, you should lay emphasis on those matters.

ದಾಳಿಂಬೆ ಎಲ್ಲಿ ಬೆಳೆಯಬಹುದು, ಮಾತಿನ ತಳಿಯಲ್ಲಿ ಹೊಸ ತಳಿ ಯಾವುದು ಬಂದಿದೆ, ನಮಗೆ ಆಲುಗಡ್ಡೆಗೆ ಹಾರ್ಟಿಕಲ್ಚರ್‌ನಲ್ಲಿ ಯಾವ ತರಹದ ತಳಿ ಬಂದಿದೆ, ಇವತ್ತು ಈರುಳ್ಳಿ ಸ್ಟೋರೇಜ್ ಮಾಡುವುದಕ್ಕೆ ನಮಗೆ ಏನು ಸಮಸ್ಯೆ ಬಂದಿದೆ, ಈರುಳ್ಳಿಗೆ ಏನು ಪ್ರೈಸ್ ಸಿಗುತ್ತಿದೆ, ಈರುಳ್ಳಿಗೆ ಡಿಮಾಂಡ್ ಎಷ್ಟು ಇದೆ, ನಾವು ಇದನ್ನು ಬೇರೆ ದೇಶಗಳಿಗೆ ಎಲ್ಲಿ ಕಳುಹಿಸಿಬಹುದು, I want you to go on those lines. It would educate the House. It would be beneficial to the House. I know you have the talent. ನಿಮಗೆ ಆಶಕ್ತಿ ಇದೆ ಎನ್ನುವುದು ನನಗೆ ಗೊತ್ತಿದೆ.

ಶ್ರೀ ಎ.ಟಿ. ರಾಮಸ್ವಾಮಿ : ಒಂದೊಂದು ಇಲಾಖೆ ಬಗ್ಗೆ ಒಂದು ಬೆಳೆ ಬಗ್ಗೆ ಹೇಳುತ್ತಾ ಹೋದರೆ

MR. SPEAKER : I know him. He is capable of that. ನನಗೆ ತಮ್ಮಲ್ಲಿ ಪೂರ್ಣ ವಿಶ್ವಾಸ ಇದೆ. ನಿಮ್ಮ ಪರಿಚಯವಿರುವುದರಿಂದ ನಾನು ನಿಮಗೆ ಹೇಳುತ್ತೇನೆ. ಸದನಕ್ಕೆ ಬೆನಿಫಿಟ್ ಆಗಲಿ ಎಂದು ಅಷ್ಟೆ.

ಶ್ರೀ ಎ.ಟಿ. ರಾಮಸ್ವಾಮಿ : ಶಿವಮೊಗ್ಗ ಟಿ.ಎಲ್.ಟಿ.ಬಿ.ಯಲ್ಲಿ ಮಂತ್ರಿಗಳ ಗಮನಕ್ಕೆ ಬಂದಿರಬಹುದು, ಇನ್‌ಪುಡ್ಸ್‌ನಲ್ಲಿ ಫಾಲ್ಸ್ ಪರ್ಚೇಸ್ ಮತ್ತು ಫಾಲ್ಸ್ ಡಿಸ್ಟ್ರಿಬ್ಯೂಷನ್ ಎಂದು ತೋರಿಸಿ, ಸುಮಾರು 25ಲಕ್ಷಕ್ಕೂ ಹೆಚ್ಚು ಹಣ ದುರುಪಯೋಗ ಆಗಿದೆ.

1993-94 ರಬಹುದು ಅಥವಾ 1995 ಇರಬಹುದು ನೀವು ಮಾಡಿದ್ದೀರಿ, ನಿಮ್ಮ ಕಾಲದಲ್ಲಿ ಆಗಿದೆ ಎಂದು ನಾನು ಹೇಳುತ್ತಿಲ್ಲ. ಯಾರ ಕಾಲದಲ್ಲಾದರೂ ಆಗಲಿ The Government is continuous one... ಒಂದೇ ಕಡೆ ಅಷ್ಟು ಹೆಚ್ಚು ಮೊತ್ತದ ಹಣ ದುರುಪಯೋಗ ಮಾಡಿಕೊಂಡು ಎನ್.ಎಂ.ಆರ್. ಬುಕ್‌ಗಳನ್ನು ಒಂದೇ ದಿವಸ ಬರೆದುಕೊಂಡು, ಒಂದೇ ಹ್ಯಾಂಡ್‌ರೈಟಿಂಗ್‌ನಲ್ಲಿ ಬರೆದು, ಒಂದೇ ದಿವಸ ಪೇಮೆಂಟ್ ಮಾಡಿ, ಕಬ್ಬಿಣದ ಅಂಗಡಿಯಲ್ಲಿ ನಾವು ಚಿಲ್ಲಿ ಸೀಡ್ಸ್ ತಂದಿದ್ದೇವೆ ಎಂದು ಹಾಕಿಕೊಂಡಿದ್ದಾರೆ. ನೀವು ವೆರಿಫೈ ಮಾಡಿ, ಏಕೆಂದರೆ ತನಿಖೆಗೆ ಬರುತ್ತಾರೆಂದು ಆತುರವಾಗಿ ಮಾಡಿರತಕ್ಕಂಥ ಕೆಲಸವಾಗಿದೆ. ಈ ತರಹ ಶಿವಮೊಗ್ಗದಲ್ಲಿ ಡಿ.ಎಲ್.ಡಿ.ಬಿನಲ್ಲಿ ದುರುಪಯೋಗವಾಗಿದೆ ಎಂದು ನನ್ನ ಗಮನಕ್ಕೆ ಬಂದಿದೆ, ನನ್ನ ಗಮನಕ್ಕೆ ಬಂದಿದ್ದನ್ನು ನಾನು ಸರ್ಕಾರದ ಗಮನಕ್ಕೆ ತರುವುದು ನನ್ನ ಆದ್ಯ ಕರ್ತವ್ಯ. ಆ ದಿಕ್ಕಿನಲ್ಲಿ ತಾವು ವಿಶೇಷ ಗಮನವನ್ನು ಹರಿಸಬೇಕೆಂದು ಹೇಳಲಿಚ್ಛಿಸುತ್ತೇನೆ.

ಇನ್ನು ಬಹಳ ಮುಖ್ಯವಾದ ನೀರಾವರಿ ಇಲಾಖೆಯ ಬಗ್ಗೆ ಒಂದು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನೀರಾವರಿ ಇಲಾಖೆಗೆ ಸರ್ಕಾರದವರು ಸುಮಾರು ಒಂದು ಕೋಟಿ ರೂಪಾಯಿ ಹತ್ತಿರ ಖರ್ಚು ಮಾಡುತ್ತಿದ್ದಾರೆ. ಅದರಲ್ಲಿ

ಸದುಪಯೋಗವಾಗುವುದು ಎಷ್ಟು? ನೀರಿನ ಹಾಗೆ ಹಣದ ಹೊಳೆ ಹರಿದುಹೋಗುವುದು ಎಷ್ಟು ಎಂದು ನಾವೆಲ್ಲರೂ ಕೂಡ ಇವತ್ತು ಕುಳಿತು ವಿಮರ್ಶೆಯನ್ನು ಮಾಡಿಕೊಳ್ಳಬೇಕು. ನೀರಾವರಿಗೆ ಕೊಡತಕ್ಕಂಥ ಬಹುತೇಕ ಹಣ ನೀರಾವರಿ ಇಲಾಖೆಗೆ ಸದುಪಯೋಗ ಆಗುತ್ತಿಲ್ಲ. ದುರುಪಯೋಗ ಆಗುತ್ತಿದೆ. ಗುಣಮಟ್ಟದ ಕೆಲಸಗಳು ಆಗುತ್ತಿಲ್ಲ ಕಳಪೆ ಕಾಮಗಾರಿಗಳು ಆಗುತ್ತಿವೆ ಎನ್ನುವಂಥದ್ದನ್ನು ತಾವು ಒಪ್ಪಿಕೊಳ್ಳುತ್ತೀರಿ ಎಂಬ ವಿಶ್ವಾಸ ನನಗೆ ಇದೆ. ಸರ್ಕಾರ ಕೂಡ ಒಪ್ಪಿಕೊಳ್ಳುತ್ತದೆ.

ಏಕೆಂದರೆ ಕಳಪೆ ಕಾಮಗಾರಿ ಆಗಿದ್ದುದು ಸರ್ಕಾರದ ಗಮನಕ್ಕೆ ಬಂದಿದೆ. ಕೃಷಿ ಇಲಾಖೆಯಲ್ಲಿ ಕೃಷಿ ಸಚಿವರು ಎಂಟು ಹತ್ತು ಜನರನ್ನು ಸಸ್ಪೆಂಡ್ ಮಾಡಿದ್ದಾರೆ. ದುರುಪಯೋಗದ ಆಪಾದನೆ ಮೇಲೆ ಎಂದು ನಾವು ಓದಿದ್ದೇವೆ, ತಿಳಿದುಕೊಂಡಿದ್ದೇವೆ. ಆದೇ ನೀರಾವರಿ ಇಲಾಖೆಯಲ್ಲಿ ಕಳಪೆ ಕಾಮಗಾರಿಗಳನ್ನು ಮಾಡಿ ಹಣ ಲೂಟಿ ಮಾಡುತ್ತಿಲ್ಲವೇ? ಸರ್ಕಾರದವರು ಎಷ್ಟು ಜನರಿಗೆ ಸಸ್ಪೆಂಡ್ ಮಾಡಿದ್ದಾರೆ? ಕಳಪೆ ಕಾಮಗಾರಿ ಆಗುತ್ತಿಲ್ಲವೇ? ಹಣ ದುರುಪಯೋಗ ಆಗುತ್ತಿಲ್ಲವೇ? ಲೂಟಿ ಆಗುತ್ತಿಲ್ಲವೇ? ಪರ್ಸಂಟೇಜ್ ವಸೂಲಿ ಮಾಡುತ್ತಿಲ್ಲವೇ? ಇದ್ದರೂ ನಾವು ಕಣ್ಣು ಮುಚ್ಚಿ ಕುಳಿತಿದ್ದೇವೆ ಎಂದರೆ ನಾವೂ ಕೂಡ ಭಾಗಿಗಳಾಗಿದ್ದೇವೆ ಎಂದು ಅರ್ಥ ಬರುವುದಿಲ್ಲವೇ?

ಇಲ್ಲಿ ಹತ್ತು ಸಾವಿರ, ಇಪ್ಪತ್ತು ಸಾವಿರ ಹಣ ದುರುಪಯೋಗ ಆಗುವುದನ್ನು ನಾವು ನೋಡುತ್ತಿದ್ದೇವೆ. ಅಲ್ಲಿ ಕೋಟಿಗಟ್ಟಲೆ ಹಣ ದುರುಪಯೋಗ ಆಗುತ್ತಿದೆ ಎಂಬುದು ಇದು ಸರ್ಕಾರಕ್ಕೆ ಗೊತ್ತಿಲ್ಲವೇ? ವೆಂಕಟೇಶ್‌ರವರಿಗೆ ಗೊತ್ತಿಲ್ಲವೇ? ಎಲ್ಲರೂ ಮನಸ್ಸು ಬಿಚ್ಚಿ ಆತ್ಮಾ ಅವಲೋಕನ ಮಾಡಿಕೊಳ್ಳೋಣ. ಅದನ್ನು ತಡೆಗಟ್ಟಲು ನಾವೇನು ಕ್ರಮವನ್ನು ತೆಗೆದುಕೊಂಡಿದ್ದೇವೆ.? ಇವೊತ್ತು ನನಗೆ ಗೊತ್ತಿರುವ ಹಾಗೆ ಒಂದು ಕೆಲಸಕ್ಕೆ ಒಬ್ಬ ಎಸ್ಟಿಮೇಟ್ ಮಾಡಿಕೊಂಡು ಬಿಲ್ ಮಾಡಿಕೊಂಡು ಹಣ ತೆಗೆದುಕೊಳ್ಳುವುದಕ್ಕೆ ಮೂವತ್ತೆರಡೂವರೆ ಪರ್ಸೆಂಟ್ ಹಣವನ್ನು ಅಧಿಕಾರಿಗಳಿಗೆ ಕೊಡಬೇಕಾಗುತ್ತದೆ. ಅದನ್ನೂ ಬೇಕಾದರೆ ಹೇಳುತ್ತೇನೆ. ಯಾರ್‍ಯಾರಿಗೆ ಎಷ್ಟೆಷ್ಟು ಕೊಡುತ್ತಾರೆಂದು ಹೇಳುತ್ತೇನೆ. ನೀರಾವರಿ ಇಲಾಖೆಯಲ್ಲಿ ಮೂವತ್ತೆರಡೂವರೆ ಪರ್ಸೆಂಟ್ ಹಣ ಕೊಡುತ್ತಿದ್ದುದು ಸರ್ಕಾರಕ್ಕೆ ಗೊತ್ತಿಲ್ಲವೇನು? ನಿಮಗ್ಯಾರಿಗೂ ಗೊತ್ತಿಲ್ಲವೇ? ಎಸ್ಟಿಮೇಟ್ ಮಾಡುವಾಗ ಸೆಕ್ಷನ್ ಆಫೀಸರ್‌ಗೆ ಎರಡು ಪರ್ಸೆಂಟ್, ಅಸಿಸ್ಟಂಟ್ ಎಕ್ಸಿಕೂಟಿವ್ ಇಂಜಿನಿಯರ್‌ಗೆ ಎಸ್ಟಿಮೇಟ್‌ನಲ್ಲಿ ಎರಡು ಪರ್ಸೆಂಟ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಎಸ್ಟಿಮೇಟ್‌ನಲ್ಲಿ: ಎರಡು ಪರ್ಸೆಂಟ್, ಐವತ್ತು ಸಾವಿರ ಮೇಲೆ ಇದ್ದರೆ ಎಸ್.ಇ.ಯವರಿಗೆ ಹೋಗಬೇಕು ಅವರಿಗೆ ಎರಡು ಪರ್ಸೆಂಟ್ ಎಸ್ಟಿಮೇಟ್‌ನಲ್ಲಿ, ಅಸಿಸ್ಟಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್‌ನಲ್ಲಿ ಎರಡು ಪರ್ಸೆಂಟ್, ಅಕೌಂಟೆಂಟ್ ಕ್ಲರ್ಕ್‌ಗಳಿಗೆ ಎರಡು ಪರ್ಸೆಂಟ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್‌ನಲ್ಲಿ ಒಂದು ಪರ್ಸೆಂಟ್,ಹೀಗೆ ಹತ್ತು ಪರ್ಸೆಂಟ್ ಹೋಯಿತು. ಎಸ್ಟಿಮೇಟ್ ಕೊಟ್ಟು ಸ್ಯಾಂಕ್ಷನ್ ಮಾಡಿಸಿಕೊಳ್ಳಲಿಕ್ಕೆ ಖರ್ಚಾಗತಕ್ಕಂಥದ್ದು,

ಬಿಲ್ ಮಾಡಿಕೊಳ್ಳುವಾಗ ಸೆಕ್ಷನ್ ಆಫೀಸರ್‌ಗೆ ಹತ್ತು ಪರ್ಸೆಂಟ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಐದು ಪರ್ಸೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಮೂರು ಪರ್ಸೆಂಟ್, ಚೀಫ್ ಇಂಜಿನಿಯರ್‌ಗೆ ಒಂದು ಪರ್ಸೆಂಟ್. ಇನ್ನು ಗುಣಮಟ್ಟ ತನಿಖೆ ಮಾಡುವುದಕ್ಕೆ ಕ್ವಾಲಿಟಿ ಕಂಟ್ರೋಲ್ ಇದೆ, ಅವರು ಅಲ್ಲಿ ಹೋಗುವುದೇ ಇಲ್ಲ ಅದು ಸರ್ಟಿಫಿಕೆಟ್ ಕೊಡಲಿಕ್ಕೆ ಒಂದೂವರೆ ಪರ್ಸೆಂಟ್. ಎಕ್ಸಿಕ್ಯೂಟಿವ್ ಆಫೀಸರ್‌ಗೆ ಒಂದೊಂದು ಪರ್ಸೆಂಟ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್‌ನಲ್ಲಿ ಒಂದು ಪರ್ಸೆಂಟ್. ಒಟ್ಟು ದುಡ್ಡು ತೆಗೆದುಕೊಳ್ಳುವುದಕ್ಕೆ ಇಪ್ಪತ್ತೆರಡೂವರೆ

ಪರ್ಸೆಂಟ್, ಎಸ್ಟಿಮೇಟ್ ಮಾಡುವಾಗ ಹತ್ತು ಪರ್ಸೆಂಟ್ ಇದು ಇದ್ದೇ ಇದೆ ಹಿಂದೆ ಕೂಡ ಇತ್ತು ಈಗ ದಿನೇ ದಿನೇ ಜಾಸ್ತಿಯಾಗುತ್ತಿದೆ. ನೀವು ಏನು ಮಾಡಿದ್ದೀರಿ? ನಮ್ಮ ಸರ್ಕಾರ ಇದ್ದಾಗ ಆಗತ್ತಿರಲಿಲ್ಲವೇ ಎಂದು ನೀವು ಹೇಳಬಹುದು ಈಗ ಇನ್ನೂ ಜಾಸ್ತಿಯಾಗಿದೆ.

SRI G.B. SHIVAKUMAR : Bad is better than worse ಇಷ್ಟು ಹೇಳಬಹುದು ರಾಮಸ್ವಾಮಿಯವರೇ ಪರಿಸ್ಥಿತಿ ನಿಮ್ಮ ಹತ್ತಿರ ಇರಲಿಲ್ಲವೆಂದಲ್ಲ. ನಿಮ್ಮ ಹತ್ತಿರ ಇದ್ದದ್ದು ಪೂರ್ತಿಗೊಳಿಸಿ ಸ್ವಲ್ಪ ನಾವು ಉತ್ತರಮರು ಎಂದು ಎನ್ನಿಸಿಕೊಂಡಿದ್ದೇವೆ ನೀವು ಹೇಳಿದ ಪರ್ಸೆಂಟೇಜ್ ಸ್ವಲ್ಪ ಜಾಸ್ತಿ ಅಥವಾ ಕಡಮೆ ಇರಬಹುದು. ಹೋಟೆಲ್‌ನಲ್ಲಿ ಬೆಲೆ ವ್ಯತ್ಯಾಸವಾದಾಗ ತಿದ್ದುವುದಿಲ್ಲವೇ?ನಿಮ್ಮಿಂದ ನಾವು ಪ್ರಭಾವಿತರಾಗಿದ್ದೇವೆ ಎಂದು ಹೇಳಿ. ಸ್ವಲ್ಪ ಉತ್ತಮರಾಗಿದ್ದೇವೆ ಅಷ್ಟೆ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಶಿವಕುಮಾರ್‌ರವರಿಗೆ ಆತಂಕ ಏನು ಎಂದರೆ ಹಿಂದೆ ಹದಿನೈದು ಪರ್ಸೆಂಟ್ ಇತ್ತು ಇವೊತ್ತು 32 ಪರ್ಸೆಂಟ್ ಆಯಿತು, ಇನ್ನೂ ಹದಿನೈದು ಪರ್ಸೆಂಟ್ ಎಲ್ಲಿ ಹೋಗುತ್ತಿದೆ ಎಂದು ಆತಂಕ ಇದೆ ಅವರಿಗೆ.

ಶ್ರೀ ಕುಂಬ್ಳೆ ಸುಂದರ್‌ರಾವ್ : ಪರ್ಸೆಂಟೇಜ್ ಹಿಂದೆ ಇತ್ತು, ಹಿಂದೆಗಿಂತ ಇಂದು ಬಲವಾಗಿದೆ ಎಂದು ಹೇಳಿದಾಗ ನನಗೆ ಒಂದು ಕಥೆ ನೆನಪಾಗುತ್ತದೆ, ಕೇಳಿ ತುಂಬಾ ಚೆನ್ನಾಗಿದೆ. ಒಂದು ಊರಿನಲ್ಲಿ ಒಬ್ಬ ದೋಣಿ ನಡೆಸುವವ ಇದ್ದ. ಆ ದೋಣಿ ನಡೆಸುವವ ಏನು ಮಾಡುತ್ತಿದ್ದ ಎಂದರೆ ದೋಣಿಯನ್ನು ಪೂರ್ತಿ ದಡದವರೆಗೆ ತೆಗೆದುಕೊಂಡು ಹೋಗುತ್ತಿರಲಿಲ್ಲ. ಸ್ವಲ್ಪ ದೂರದಲ್ಲಿಯೇ ನಿಲ್ಲಿಸಿ ಇಳಿದು ಬಿಡಿ ನನ್ನ ದೋಣಿ ಇಷ್ಟೇ ಹೋಗೋದು ಎಂದು ಹೇಳುತ್ತಿದ್ದ. ಜನ ಇಳಿದು ನೀರಿನಲ್ಲಿ ನಿಂತು ಅಯ್ಯೋ ಇವನ ಮನೆ ಹಾಳಾಗ ಎಂದು ಬಯ್ದುಕೊಂಡು ಹೋಗುತ್ತಿದ್ದರು. ಬಹಳ ವರ್ಷವಾದ ನಂತರ ಅವನಿಗೆ ಪ್ರಾಯ ಆಯಿತು. ಅವನು ಸಾಯುವ ಸ್ಥಿತಿಗೆ ಬಂದ ಆಗ ಆ ಮುದುಕನಿಗೆ ಪಶ್ಚಾತ್ತಾಪವಾಯಿತು. ಎಷ್ಟೋ ಜನರಿಂದ ಕೆಟ್ಟದ್ದನ್ನು ಕೇಳಿದ್ದೇನೆ, ಒಳ್ಳೆಯದು ಕೇಳಬೇಕಾಗಿತ್ತು, ಸಾಯುವವರೆಗೂ ಜನ ಶಾಪ ಹಾಕಿಕೊಂಡು ಹೋಗಿಯಾಯಿತಲ್ಲಾ ಎಂದು ಮರುಗಿದಾಗ ಅವನ ಮಗನು ಯೋಚನೆ ಮಾಡಬೇಡ ಅಪ್ಪಾ ನಾನು ನಿನ್ನನ್ನು ಇವೊತ್ತು ಸಾಯಂಕಾಲದೊಳಗೆ ಒಳ್ಳೆಯವನು ಎಂದು ಎನ್ನಿಸುತ್ತೇನೆ ಎಂದು ಹೇಳಿದ. ಹಾಗೂ ದೋಣಿಯನ್ನು ತೆಗೆದುಕೊಂಡು ಹೋದ. ಮಧ್ಯದಲ್ಲಿ ಬಂದಾಗ ಈಗ ಇಳಿದು ಬಿಡಿ ನನ್ನ ದೋಣಿ ಇಷ್ಟಕ್ಕೆ ಹೋಗುವುದು ಎಂದು ಹೇಳಿದ ಆಗ ಜನ ಎಲಾ ಇವನ ಮನೆ ಹಾಳಾಗ ಆ ಮುದುಕ ಚೆನ್ನಾಗಿದ್ದ, ಇವನೇ ಚೆನ್ನಾಗಿಲ್ಲ ಎಂದು ಬಯ್ದುಕೊಂಡು ಹೋದರು. ಮಾನ್ಯ ಅಧ್ಯಕ್ಷರೇ ಹೀಗಾಯಿತು ಇವರ ಕಥೆ ಕೂಡ. ಅವರು ಹಾಳು ಮಾಡಿದರು. ಇವರು ಅದಕ್ಕಿಂತ ಹೆಚ್ಚು ಹಾಳು ಮಾಡಿದರು ಎಂದ ಹಾಗೆ.

ಶ್ರೀ ಜೆ.ಟಿ. ಪಾಟೀಲ್ : ರಾಮಸ್ವಾಮಿಯವರೇ, ಅಧಿಕಾರಿಗಳ ಪರ್ಸೆಂಟೇಜ್ ಹೇಳಿದಿರಿ. ಅದರಲ್ಲಿ ಶಾಸಕರ ಪರ್ಸೆಂಟೇಜ್ ಇಲ್ಲವೇ?

ಶ್ರೀ ಎ.ಟಿ. ರಾಮಸ್ವಾಮಿ : ಅದಕ್ಕೆ ಸರ್ಕಾರ ಉತ್ತರ ಹೇಳುತ್ತದೆ. ಅದಕ್ಕಾಗಿ ನಾನು ಮೊದಲೇ ಹೇಳಿದ್ದೆ ಒಂದು ಒಳ್ಳೆಯ ಸಂಪ್ರದಾಯವನ್ನು ನಾವು ಪ್ರಾರಂಭ ಮಾಡೋಣ ಎಂದು.

ಶ್ರೀ ಸಿ.ಎಸ್. ಪುಟ್ಟೇಗೌಡ : ನಮಗಿಂತ ಮೊದಲು ನೀವು ಸರ್ಕಾರ ನಡೆದಿದೆ ಶಾಸಕರು.

ಶ್ರೀ ಎ.ಟಿ. ರಾಮಸ್ವಾಮಿ : ನನ್ನ ನೈತಿಕತೆಯ ಬಗ್ಗೆ ಪುಟ್ಟೇಗೌಡರೇ, ನಿಮಗೂ ಚೆನ್ನಾಗಿ ಗೊತ್ತಿದೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ನಾನು ಕೇಳಿದ್ದುದು. ಏಕೆ ಎಂದರೆ ನೀವು ನಮಗೆ ಬಹಳ ಹಿರಿಯರು, ನಿಮ್ಮ ದಾರಿಯಲ್ಲಿ ನಾವು ಬಂದವರು, ನಿಮ್ಮ ಕಾಲದಲ್ಲಿ ಶಾಸಕರ ಪರ್ಸೆಂಟೇಜ್ ಇತ್ತೋ ಇಲ್ಲವೋ ನೀವು ಹೇಳಿ ಎಂದು ಅವರು ಕೇಳಿದ್ದುದು.

ಶ್ರೀ ಎ.ಟಿ. ರಾಮಸ್ವಾಮಿ : ನಮ್ಮ ಹತ್ತಿರ ಇಲ್ಲಪ್ಪ, ನಿಮ್ಮ ಹತ್ತಿರ ಇರಬೇಕೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ಸಿ.ಎಸ್. ಪುಟ್ಟೇಗೌಡ : ಇದನ್ನು ನಾನು ರಾಮಸ್ವಾಮಿಯವರ ವೈಯಕ್ತಿಕ ಪ್ರಶ್ನೆ ಎಂದು ಕೇಳಲಿಲ್ಲ. ಸರ್ಕಾರ ನಡೆಸುವಂಥ ಎಲ್ಲಾ ಕಾಲದ ಸರ್ಕಾರಗಳಲ್ಲಿ ಎಲ್ಲಾ ಶಾಸಕರು ನಡೆದುಕೊಂಡು ಬಂದ ದಾರಿ ಏನು?

ಶ್ರೀ ಎ.ಟಿ. ರಾಮಸ್ವಾಮಿ : ಅಂದರೆ ಎಲ್ಲಾ ಆಗುತ್ತಿದೆ ಈಗಲೂ ನಡೆದುಕೊಂಡು ಹೋಗಲಿ ಎಂಬ ಒಂದು ನಿರ್ಧಾರಕ್ಕೆ ಬರಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಇದಕ್ಕೆ ಒಪ್ಪುವುದಿಲ್ಲ ಮಾನ್ಯ ಅಧ್ಯಕ್ಷರೇ. ಏಕೆಂದರೆ ನಾನು ಹಿಂದೆ ಈ ಸದನದಲ್ಲಿ ಹೇಳುವಾಗ ಪರ್ಸೆಂಟೇಜ್ ಅಲ್ಲಿಂದ ಪ್ರಾರಂಭವಾಗಿ ಇಲ್ಲಿಂದ ಮುಟ್ಟುತ್ತದೆ ಎಂದು ಸ್ವಲ್ಪ ಲೆಕ್ಕ ಹಾಕಿ ಎಂದು ನಾನು ಮೊದಲೇ ಹೇಳಿದ್ದೆ. ಅದನ್ನು ಮಾತನಾಡುವುದನ್ನು ಬಿಟ್ಟು ಶಾಸಕರೇ ಇಲ್ವಾ ಎಂದು ಮಾತನಾಡಿದರೆ ಏನು ಅರ್ಥ?

ಶ್ರೀ ವಾಟಾಳ್ ನಾಗರಾಜ್ : ಶಾಸಕರ ಬಗ್ಗೆ ಜನ ಲಘುವಾಗಿ ಮಾತನಾಡುತ್ತಿದ್ದಾರೆ ಎಂದರೆ ಇಲ್ಲಿ ಅದನ್ನೇ ಚರ್ಚೆ ಮಾಡುವುದಾದರೆ ಅದಕ್ಕೇನಾದರೂ ಬೆಲೆ ಬೇಡವೇ? ಇದು ತೀರಾ ನಾಚಿಕೆ ಆಗತಕ್ಕಂಥದ್ದು.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ನಾನು ಅದಕ್ಕಾಗಿಯೇ ಹೇಳಿದ್ದುದು ಈ ಜನತಂತ್ರ ವ್ಯವಸ್ಥೆಯ ಅತ್ಯಂತ ಎತ್ತರದ ಸ್ಥಾನಕ್ಕೆ ನಾವೆಲ್ಲರೂ ಕೂಡ ಆಯ್ಕೆಯಾಗಿ ಬಂದಿದ್ದೇವೆ. ನಾವೇ ಒಂದು ಒಳ್ಳೆಯ ಸಂಪ್ರದಾಯ ಹಾಕದೇ ಇದ್ದರೆ ಹೇಗೆ? ಈಗಾಗಲೇ ನಾವು ವಿನಾಶದ ಅಂಚಿಗೆ ತಲುಪಿಬಿಟ್ಟಿದ್ದೇವೆ. ಮುಂದೆ ನಮ್ಮ ಮಕ್ಕಳು ಎಲ್ಲರೂ ಕೂಡ ಶಾಪ ಹಾಕತಕ್ಕಂಥ ದಿನ ಬಹಳ ದೂರ ಇಲ್ಲ. ಅದು ಆಗುವುದಕ್ಕೆ ಮುಂಚೆ ನೀವೇ ಒಂದು ದಿವಸ ಹೇಳಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡುವಾಗಲೇ ತುಂಬಾ ಜಾಸ್ತಿಯಾಗುತ್ತದೆಂದು • ಸ್ವಲ್ಪ ತಡವರಿಸಿದೆ. ಇವೊತ್ತು ಈ ಪರಿಸ್ಥಿತಿ ಏತಕ್ಕೆ ಬಂತು ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳಲ್ಲಿ ಪ್ರಾಮಾಣಿಕತೆ ಇಲ್ಲ. ಈ ವ್ಯವಸ್ಥೆ ಏಕೆ ಬಂತು? ಇದನ್ನು ತಡೆಯುವುದಕ್ಕೆ ಏನಾದರೂ ಪ್ರಾಮಾಣಿಕ ಪ್ರಯತ್ನ ನಮ್ಮಿಂದ ಆಗಬೇಕಲ್ಲಾ, ಇವೊತ್ತು ಅನೇಕ ಅವ್ಯವಹಾರಗಳನ್ನು ಮಾಡುವುದಕ್ಕೆ ನಾವೇ ಸಹಕಾರ ಕೊಡುತ್ತೇವೆ. ಆವಾಗ ಆ ಅಧಿಕಾರಿ ಹತ್ತು ಮಾಡುವುದನ್ನು ಹನ್ನೊಂದು ಮಾಡುತ್ತಾರೆ. ಆ ಫೈಲನ್ನು ಅವನ ಮನೆಯಲ್ಲಿಟ್ಟುಕೊಂಡು ಆಟ ಆಡಿಸುತ್ತಾನೆ. ಇದು ನಡೆದುಕೊಂಡು

ಬರುತ್ತಿದೆ. ನಾವು ನಿಶ್ಚಯ ಮಾಡೋಣ ಬದುಕುವುದಕ್ಕೆ ಆಗಿದೆ, ತಮ್ಮ ಹೆಂಡತಿ ಮಕ್ಕಳು ಇನ್ನು ಹತ್ತು ತಲೆಮಾರಿಗಾಗುವಷ್ಟು ನೆಮ್ಮದಿಯಿಂದ ಇರುವ ರೀತಿಯಲ್ಲಿ ಕೆಲವು ರಾಜಕಾರಣಿಗಳು ಇದ್ದಾರೆಂದು ನಾನು ಅಂದುಕೊಂಡಿದ್ದೇನೆ. ಎಷ್ಟು ದುರಾಸೆ ಬೇಕು? 49 ವರ್ಷವಾಯಿತು. ಇದಕ್ಕೆ ಕೊನೆಯನ್ನು ಈಗಲಾದರೂ ಮಾಡಿ ಒಂದು ಹೊಸ ಅಧ್ಯಾಯ ಪ್ರಾರಂಭ ಮಾಡಿ ಬದುಕಿರುವವರೆಗೆ ನೀವೇ ಅಧಿಕಾರದಲ್ಲಿರುತ್ತೀರಿ ಸ್ವಾಮಿ ಅದನ್ನು ಮಾಡಿ ಆ ನಿಶ್ಚಯ ಮಾಡಿ, ಲೂಟಿ ನಡೆಯುತ್ತಿದೆ, ಅದನ್ನು ಬದಲಾವಣೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿ ಎಂದು ಅವರು ಹೇಳುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಯಡಿಯೂರಪ್ಪನವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಭ್ರಷ್ಟಾಚಾರ ಆಡಳಿತ ಪಕ್ಷದ ಮುಖಾಂತರವೇ ಆಗುತ್ತಿರತಕ್ಕಂಥ ಕೆಲಸವಲ್ಲ. ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರೂ ಒಟ್ಟಾರೆ ಸೇರಿಕೊಂಡು ನಮ್ಮ ನಮ್ಮಲ್ಲಿರತಕ್ಕಂಥ ಹುಳುಕನ್ನು ನಾವು ದೂರದಲ್ಲಿಟ್ಟು ಸಮಾಜದಲ್ಲಿರತಕ್ಕಂಥ ಈ ಒಂದು ಅವ್ಯವಸ್ಥೆಯನ್ನು ಸರಿ ಮಾಡಬೇಕಾದರೆ ಸರ್ಕಾರ ಎಲ್ಲರನ್ನೂ ಒಟ್ಟಿಗೆ ಈ ನಿಟ್ಟಿನಲ್ಲಿ ತೆಗೆದುಕೊಂಡು ಹೋದರೆ ಇದನ್ನು ಸರಿ ಮಾಡಬಹುದು. ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಇವೊತ್ತು ಆಡಳಿತ ಪಕ್ಷಕ್ಕೆ ಮಾತ್ರ ಹೇಳಿ ಫೈಲ್‌ಗಳನ್ನು ತೆಗೆದುಕೊಂಡು ಹೋಗುತ್ತಾರೆ, ಅದನ್ನು ಹಾಗೆಯೇ ಇಟ್ಟುಕೊಂಡಿರುತ್ತಾರೆ ಎಂದು ಏನು ನೀವು ಹೇಳುತ್ತೀರಲ್ಲಾ ಇದು ಆಡಳಿತ ಪಕ್ಷಕ್ಕೇ ಮಾತ್ರ ಸೀಮಿತವಾಗಿರತಕ್ಕಂಥದ್ದಲ್ಲ, ಇದು ವಿರೋಧ ಪಕ್ಷಕ್ಕೂ ಸೀಮಿತವಾಗಿಲ್ಲವೆ? ಆದ್ದರಿಂದ ನಾವು ಇಲ್ಲಿ ಮಾಡಬೇಕಾಗಿರತಕ್ಕಂಥ ಕೆಲಸ ಏನು ಎಂದರೆ ಈ ಶಾಸನಸಭೆಯ ಮುಖಾಂತರವೇ ನಾವು ಇಂದು ಕಾನೂನನ್ನು, ಶಾಸನವನ್ನು ರಚನೆ ಮಾಡುತ್ತಿರುವುದು. ಅಂದಮೇಲೆ ನಾವು ಕಾನೂನನ್ನು ಶಾಸನಸಭೆಯಲ್ಲಿ ರಚನೆ ಮಾಡುವ 224 ಜನರೂ ಮೇಲಕ್ಕೇರಿದಾಗ ತನ್ನ ಹಾಗೆ ತಾನೇ ಇವೆಲ್ಲಾ ಕೆಳಗೆ ಇಳಿಯುತ್ತವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇದು ಒಳ್ಳೆಯ ಸಲಹೆಯಾಗಿದೆ. ಏಕೆಂದರೆ ಆಡಳಿತ ಪಕ್ಷದವರಿಗೆ ಮಾತ್ರ ಇದು ಸೀಮಿತವಾಗಿಲ್ಲ ಎಂದು ಏನು ಅವರು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಾವು ಇದರ ಬಗ್ಗೆ ಒಂದು ಕೆಲಸವನ್ನು ಮಾಡಬೇಕು.ಇಲ್ಲೇನಾಗಿದೆ ಎಂದರೆ ನಾನೇ ನೋಡಿರುವ ಹಾಗೆ ನೀವೆಷ್ಟು ಮಾಡಿದ್ದೀರಿ, ನೀವು ಮಾಡುವ ಕೆಲಸ ನಮಗೆ ಗೊತ್ತಿಲ್ಲವೇ;

ಅಂದರೆ ನಾವು ಮಾಡಿದರೆ ನೀವು ಪರ್ಮಿಷನ್ ಕೊಡಿ ಎನ್ನುವ ರೀತಿಯಲ್ಲಿ ಧಾಟಿಯಲ್ಲಿ ನಾವು ಅನೇಕ ಸಲ ಮಾತನಾಡುತ್ತೇವೆ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ ದಯಮಾಡಿ ನಿರ್ಭೀತಿಯಿಂದ ಈ ಕಡೆ ಇರುವಂಥವರ ಬಗ್ಗೆ ನಿಮಗೆ ಏನೇನು ಮನವರಿಕೆ ಬರುತ್ತದೆಯೋ ಅದನ್ನು ಸ್ಪಷ್ಟ ಮಾಡಿ ಅದನ್ನು ಬಹಿರಂಗ ಮಾಡಿ, ಅದೇ ರೀತಿಯಲ್ಲಿ ನಾವು ನಿಮ್ಮ ಕಡೆಯ ಬಗ್ಗೆ ಏನೇನು ಮನವರಿಕೆ ಆಗಿದೆಯೋ ಅದನ್ನೆಲ್ಲವನ್ನೂ ನಾವು ಬಹಿರಂಗ ಮಾಡುತ್ತೇವೆ. ಆ ರೀತಿಯಲ್ಲಿ ಬಹಿರಂಗ ಮಾಡುವಾಗ ತಾವು ಅದನ್ನು ಒಳ್ಳೆಯ ಸ್ಪಿರಿಟ್‌ನಲ್ಲಿ ನೀವು ತೆಗೆದುಕೊಳ್ಳಿ. ಅದೇ ರೀತಿಯಲ್ಲಿ ನಾವು ಮಾತನಾಡಿ ಅವ್ಯವಹಾರ ಬಹಿರಂಗ ಮಾಡಿದೆವು ಎನ್ನುವುದನ್ನೇ ಹೇಳುತ್ತಿದ್ದರೆ ಇದನ್ನು ಸರಿ ಮಾಡಿಸುವುದು ಹೇಗೆ ಎಂಬುದನ್ನು ನಾವು ಯೋಚನೆ ಮಾಡದೇ... ಇವನು ಈ ರೀತಿಯಲ್ಲಿ ಮಾತನಾಡಿದ್ದಾನೆ,

ಹುಷಾರ್ ನಾಳೆ ಅವನ ಕ್ಷೇತ್ರಕ್ಕೆ ಏನೂ ಕೊಡದೇ ಇರುವ ಹಾಗೆ ನೋಡಿಕೋ... ಈ ಪ್ರವೃತ್ತಿ ಏನಿದೆ ಇದು ಆಗಬಾರದು. ಆಗ ಮಾತ್ರ ಬಿಗಿ ಆಗುತ್ತದೆ, ಸರಿ ಆಗುತ್ತದೆ, ನಿಶ್ಚಯ ಮಾಡಿ ಬದಲಾವಣೆ ತರಬಹುದು.

ಶ್ರೀ ಸಿದ್ಧರಾಮಯ್ಯ (ಹಣಕಾಸು ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈ ಭ್ರಷ್ಟಾಚಾರ ಹೋಗಬೇಕು ಎಂಬುದರ ಬಗ್ಗೆ ಹಲವಾರು ಸದಸ್ಯರು ಮಾತನಾಡಿದ್ದಾರೆ. ಈ ಭ್ರಷ್ಟಾಚಾರ ಹೋಗಬೇಕು ಎಂಬುದರಲ್ಲಿ ನಾವೂ ಕೂಡ ಬದ್ಧರಾಗಿದ್ದೇವೆ. ಆದರೆ ಇದು ಎಲ್ಲಿಂದ ಶುರುವಾಗಿದೆ ಎಂಬುದನ್ನು ನಾವು ನೋಡಿಕೊಂಡು ಹೋಗಬೇಕಾಗಿದೆ. ಈಗಾಗಲೇ ಇದು ವ್ಯಾಪಾಕವಾಗಿ ಆಗಿಬಿಟ್ಟಿದೆ. ಬರೀ ಇಲ್ಲಿ ನಾವು ಮಾಡುತ್ತೇವೆ, ಅವರೂ ಕೂಡ ಮಾಡುತ್ತಾರೆ ಎಂಬುದೊಂದು ಬಿಟ್ಟರೆ ಆಗುವುದಿಲ್ಲ. ಮೊದಲು ಸಾರ್ವಜನಿಕರು ಭ್ರಷ್ಟಾಚಾರಕ್ಕೆ ವಿರೋಧವನ್ನು ವ್ಯಕ್ತಪಡಿಸಬೇಕಾಗುತ್ತದೆ. ಇಲ್ಲಿ ನಾವು ಭ್ರಷ್ಟಾಚಾರವನ್ನು ಪೂರ್ಣವಾಗಿ ತೆಗೆದುಹಾಕಿದ್ದೇವೆ ಎಂದು ಹೇಳಿದರೆ ಅದು ಆತ್ಮವಂಚನೆಯನ್ನು ಮಾಡಿಕೊಂಡು ನಾವು ಹೇಳಿದ ಹಾಗೆ ಆಗುತ್ತದೆ. ಜೊತೆಗೆ ಇಲ್ಲಿ ಬೇರೆಯವರೆಲ್ಲಾ ಹೇಳಿದರೂ ಕೂಡ ಅದೇ ರೀತಿ ಆಗುತ್ತದೆ. ಸಾರ್ವಜನಿಕ ಬದುಕಿನಲ್ಲಿ ಇದು ಬಹಳ ವ್ಯಾಪಕವಾಗಿ ಹರಡಿಕೊಂಡು ಬಿಟ್ಟಿದೆ. ಜನರು ಇದರ ಬಗ್ಗೆ ಜಾಗೃತರಾಗಿ, ಇದೊಂದು ರೋಗ ಎಂದು ತಿಳಿದು ಇದರ ಬಗ್ಗೆ ವಿರೋಧ ವ್ಯಕ್ತಪಡಿಸಿ ಜನರು ಎಲ್ಲಿಯವರೆಗೆ ಎದ್ದೇಳುವುದಿಲ್ಲವೋ ಅಲ್ಲಿಯವರೆಗೆ ಭ್ರಷ್ಟಾಚಾರ ಸಂಪೂರ್ಣವಾಗಿ ಅಷ್ಟು ಸುಲಭವಾಗಿ ಹೋಗುವುದಕ್ಕಾಗುವುದಿಲ್ಲ. ಈ ರೀತಿಯಲ್ಲಿ ನಾನು ಹೇಳಿದಾಕ್ಷಣ, ಅವರೆಲ್ಲರೂ ಮೊದಲಿಂದ ಹೊಂದಿಕೊಂಡು ಬಿಟ್ಟಿದ್ದಾರೆಯಾದ ಕಾರಣ ನಾವು ಅದನ್ನು ಪೋಷಿಸಿಕೊಂಡು ಹೋಗಬೇಕು ಎಂದೇನೂ ಹೇಳುತ್ತಿಲ್ಲ. ಭ್ರಷ್ಟಾಚಾರ ನಿರ್ಮೂಲನೆಗೆ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿ ಇದನ್ನು ಆದಷ್ಟು ಕಡಿಮೆ ಮಾಡಬೇಕು. ಈ ಕೆಲಸ ಪ್ರಾಮಾಣಿಕವಾಗಿ ಆಗಬೇಕು. ಈ ಕೆಲಸದಲ್ಲಿ ಎಲ್ಲರೂ ಕೂಡಿ ಒಟ್ಟಾಗಿ ಪ್ರಯತ್ನ ಮಾಡಿ ಜನರಲ್ಲಿ ಜಾಗೃತಿಗೊಳಿಸಿ, ಜನರು ಇದರ ವಿರುದ್ಧ ಎಲ್ಲಿಯವರೆಗೆ ಎದ್ದೇಳುವುದಿಲ್ಲವೋ ಅಲ್ಲಿಯವರೆಗೆ ಈ ಭ್ರಷ್ಟಾಚಾರ ಅಷ್ಟು ಸುಲಭವಾಗಿ ಹೋಗುವುದಿಲ್ಲ ಎನ್ನತಕ್ಕಂಥದ್ದನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜನರು ಇದರ ಬಗ್ಗೆ ಹೋರಾಟ ಮಾಡಿ ಮಾಡಿ ಸುಸ್ತಾಗಿ ಕಡೆಗೆ ಲಂಚ ಕೊಡದೇ ಹೋದರೆ ಏನೂ ಕೆಲಸವಾಗುವುದೇ ಇಲ್ಲ ಎನ್ನುವ ಒಂದು ತೀರ್ಮಾನಕ್ಕೆ ಜನ ಬಂದಿದ್ದಾರೆ. ಎಲ್ಲಿಯವರೆಗೆ ಈ ಪರಿಸ್ಥಿತಿ ಬಂದಿದೆ ಎಂದರೆ ಇವೊತ್ತು ಚುನಾಯಿತ ಪ್ರತಿನಿಧಿಗಳ ಹತ್ತಿರ ಬಂದು ಫೈಲ್ ಹಿಡಿದುಕೊಂಡು ಈ ಪೇಪರ್ ಬಂದಿದೆ ಅರ್ಜಿ ಕೊಟ್ಟಿದ್ದೇವೆ ಇದನ್ನು ಮಾಡಿಸಿಕೊಡಬೇಕು ಎಂದು ಶಾಸಕನ ಹತ್ತಿರ ಬಂದಾಗ ನಾವು ಅಧಿಕಾರಿಗಳ ಜೊತೆ ಆ ಅರ್ಜಿ ಬಗ್ಗೆ ಮಾತನಾಡಿದರೇ ಆ ಪೇಪರ್ ಮೂವ್ ಆಗುವುದಿಲ್ಲ, ಏಕೆಂದರೆ ಅವನು ಮಾಮೂಲಿಯನ್ನು ತೆಗೆಯುವುದಕ್ಕೆ ಮುಂಚೆ ಆ ಅರ್ಜಿ ಮುಂದೆ ಹೋಗುವುದೇ ಇಲ್ಲ. ಈ ವ್ಯವಸ್ಥೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇದನ್ನು ಸರಿಪಡಿಸುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿ. ಮೇಲ್ಮಟ್ಟದ ಭ್ರಷ್ಟಾಚಾರದ ಬಗ್ಗೆ ನಾನು ಮಾತನಾಡಿದ್ದೇನೆ. ಗ್ರಾನೈಟ್ ಹಗರಣದ ಬಗ್ಗೆ ಸರ್ಕಾರಕ್ಕೆ ಗೊತ್ತಿಲ್ಲವೇ ಮಾನ್ಯ ಅಧ್ಯಕ್ಷರೆ? ಒಂದು ಸಾವಿರ ಕೋಟಿ ರೂ.ಗಳಷ್ಟು 20 ವರ್ಷಗಳಿಂದ ಲೂಟಿಯಾಗುತ್ತಿದೆ ಎಂದು ಕೋರ್ಟ್ ಹೇಳುವವರೆಗೂ ಅದನ್ನು ಹಾಗೆಯೇ ಮುಚ್ಚಿಟ್ಟುಕೊಂಡಿದ್ದಾರೆ, ಸರ್ಕಾರದವರಿಗೆ ಈ ವಿಷಯ ಗೊತ್ತಿರಲಿಲ್ಲವೇ? ಲೂಟಿ ನಡೆದಿರುವುದು ನಿಮಗೆ ಗೊತ್ತಿರಲಿಲ್ಲವೇ? ಅವರ ಸಹಾಯವನ್ನು ನೀವು ಪಡೆಯಲಿಲ್ಲವೇ? ಪಡೆಯದೇ ಇದ್ದರೆ

ಅವನನ್ನು ಮುಚ್ಚಿಟ್ಟುಕೊಳ್ಳುವುದಕ್ಕೆ ಇವೊತ್ತಿನವರೆಗೆ ಅವನು ಕೋರ್ಟ್‌ಗೆ ಹೋಗುವವರೆಗೆ ಬರುತ್ತಿತ್ತೆ?

ಅಧ್ಯಕ್ಷರು : ತೊಂದರೆ ಇಲ್ಲಿ ಏನಾಗಿದೆ ಎಂದರೆ, "ಊರು ತುಂಬಾ ಜಂಗಮರೇ ಆದರೆ ಕೋಳಿ ಹೋದರೆ ಗೊತ್ತಾಗುವುದಿಲ್ಲ." ಆ ರೀತಿಯಲ್ಲಿ ಈಗ ಆಗಿಬಿಟ್ಟಿದೆ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಕಳೆದ ವಾರ ತಾವು ಒಂದು ಮಾತನ್ನು ಹೇಳುತ್ತಾ ಮಾರ್ಕ್ಸ್ ಕಾರ್ಡ್‌ನ್ನು ತಿದ್ದುತ್ತಾರೆಂದೂ ಮತ್ತು ಪಾಸ್ ಆಗುವ ವಿದ್ಯಾರ್ಥಿಯನ್ನು ಫೇಲ್ ಮಾಡಿರುತ್ತಾರೆಂದು ಇದರಲ್ಲಿ ಪಿ.ಯು.ಸಿ. ಬೋರ್ಡಿನಲ್ಲಿ ಬಹಳ ಲೋಪದೋಷಗಳಾಗುತ್ತಿವೆ ಎಂದು ಪ್ರಸ್ತಾಪ ಮಾಡಿ ಫೇಲ್ ಆದವರು ಎಲ್ಲಿಗೆ ಹೋಗುತ್ತಾರೆಂದರೆ ಅವರು ಇಲ್ಲಿಗೆ ಬರುತ್ತಾರೆ. ಎಂದಿರಿ. ಆ ಮಟ್ಟಕ್ಕೆ ಇಂದು ಹೋಗುತ್ತಿದ್ದಾರಲ್ಲಾ ಎನ್ನುವುದೇ ವ್ಯಥೆಯಾಗಿದೆ. ಇವೊತ್ತು ಪತ್ರಿಕೆಯಲ್ಲಿ ನಾವು ದಿನನಿತ್ಯ ನೋಡುತ್ತಿರುತ್ತೇವೆ. ರಾಜಕಾರಣಿಯನ್ನು ಒಂದು ವ್ಯಂಗ್ಯ ಚಿತ್ರ ಮಾಡಿ ಚಿತ್ರಿಸಿ ಪತ್ರಿಕೆಯಲ್ಲಿ ಹಾಕಿರುತ್ತಾರೆ. ಇದನ್ನು ನೋಡಿ ನನಗೆ ಒಂದೊಂದು ಬಾರಿ ಅನ್ನಿಸುತ್ತದೆ, ಏಕಪ್ಪಾ ನಾವು ಇಲ್ಲಿದ್ದೇವೆ ಎಂದೆನಿಸಿಬಿಡುತ್ತದೆ. ಏನೋ ತಪ್ಪು ಮಾಡಿಬಿಟ್ಟು ಇಲ್ಲಿಗೆ ಬಂದಿದ್ದೆವೆಯೇ ಎಂದೆನಿಸುತ್ತದೆ.

ಆ ದೃಷ್ಟಿಯಿಂದ ಇವೊತ್ತು ನಾವು ಇಲ್ಲಿಂದ ಒಂದು ಹೊಸ ಸಂಪ್ರದಾಯ ಹಾಕಿ ನಾವೆಲ್ಲರೂ ಒಂದು ತೀರ್ಮಾನ ಕೈಗೊಳ್ಳೋಣ, ಆ ನಿಟ್ಟಿನಲ್ಲಿ ನಾವೆಲ್ಲರೂ ಕೂಡ ಪ್ರಾಮಾಣಿಕವಾಗಿ ಸ್ವಚ್ಛತೆಯಿಂದ ದಕ್ಷತೆಯಿಂದ ಕೆಲಸ ಮಾಡೋಣ ಎಂದು ನಮ್ಮ ಮೇಲೆ ನಾವೇ ಒಂದು ಶಿಸ್ತನ್ನು ರೂಢಿಸಿಕೊಳ್ಳೋಣ. ಇದು ಪ್ರಾರಂಭ. ಇದಕ್ಕೆ ತಾವು ದಯಮಾಡಿ ಕ್ರಮವನ್ನು ಕೈಗೊಳ್ಳಬೇಕು. ಏಕೆಂದರೆ ನೀವು ಆಡಳಿತ ಪಕ್ಷದಲ್ಲಿದ್ದೀರಿ. ಈಗ ಏನು $32\frac{1}{2}$ ಪರ್ಸೆಂಟ್ ಎಂದು ಹೇಳಿದೆ ಅದು ನಿಗಧಿತ ಹಣ. ಇಷ್ಟು ಹಣವನ್ನು ಕೊಡಲೇಬೇಕು ಎಂದು ಎಲ್ಲರಿಗೂ ತಿಳಿದಿರುವ ವಿಚಾರ. ಇದನ್ನು ಕಡಿಮೆ ಮಾಡುವುದಕ್ಕೆ ಮತ್ತು ನಿಯಂತ್ರಣ ಮಾಡುವುದಕ್ಕೆ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿದೆ? ಇವೊತ್ತು ಗುಣ ನಿಯಂತ್ರಣ ಮಂಡಳಿ ಇದೆ. ಕೆಲಸಗಳು ಸರಿಯಾಗಿ ಆಗಿದೆಯೋ ಅಥವಾ ಇಲ್ಲವೋ ಎಂದು ನೋಡಿ ಇದರ ಬಗ್ಗೆ ಸರ್ಟಿಫಿಕೇಟ್‌ನ್ನು ಕೊಡಬೇಕಾದುದು ಇದರ ಕರ್ತವ್ಯ. ಆದರೆ ಈ ಗುಣ ನಿಯಂತ್ರಣ ಮಂಡಳಿಯವರು ಎಷ್ಟು ಕಡೆ ಹೋಗಿ ಟೆಸ್ಟ್‌ನ್ನು ಮಾಡಿದ್ದಾರೆ? ಕಳೆದ ಸಾರಿ ಮಾಡಿದ್ದು ಈಗ ಬಿದ್ದುಹೋಗಿವೆ. ಬಿದ್ದುಹೋಗಿದೆಯಲ್ಲಾ ಮತ್ತೆ ನೀವು ಕ್ವಾಲಿಟಿ ಕಂಟ್ರೋಲ್‌ನವರು ಹೇಗೆ ಸರ್ಟಿಫಿಕೇಟ್‌ನ್ನು ಕೊಟ್ಟರಿ ಎಂದು ಕೇಳಿ ಅವರ ಮೇಲೆ ನೀವು ಕ್ರಮವನ್ನೇನಾದರೂ ಕೈಗೊಂಡಿದ್ದೀರಾ? ಕ್ರಮ ಕೈಗೊಳ್ಳದೇ ಇದ್ದರೆ ಏತಕ್ಕಾಗಿ ಕ್ರಮವನ್ನು ಕೈಗೊಳ್ಳಲಿಲ್ಲ? ಇದಕ್ಕೆ ನಾನು ಏನು ಹೇಳಬೇಕು, ಇವರೂ ಭಾಗಿಗಳಾಗಿದ್ದಾರೆ, ಶಾಮೀಲಾಗಿದ್ದಾರೆ ಎಂದು ನಾನು ಹೇಳಬೇಕೆ?

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಪೀಠವನ್ನು ಅಲಂಕರಿಸಿದರು)

ಆ ದಿಕ್ಕಿನಲ್ಲಿ ತಾವು ಕಾರ್ಯೋನ್ಮುಖರಾಗಬೇಕು. ಈ ಒಂದು ಕಳಪೆ ಕಾಮಗಾರಿಗಳು ಏನು ಆಗುತ್ತಿವೆ ಅದನ್ನು ನಿಯಂತ್ರಣ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರ ಮುಖೇನ ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತಿದ್ದೇನೆ.

ಇನ್ನು ಸಿಲ್ಟ್ ತೆಗೆಯುವುದಕ್ಕೆ ಸುಮಾರು 25 ಕೋಟಿ ರೂಗಳನ್ನು ಒಂದು ವರ್ಷಕ್ಕೆ ವೆಚ್ಚ ಮಾಡಬಹುದು. ನನಗೆ ಸರಿಯಾಗಿ ಅಂಕಿ ಅಂಶಗಳು ಗೊತ್ತಿಲ್ಲ. ಜಿಡ್ಡು ಮತ್ತು ಸಿಲ್ಟ್ ತೆಗೆಯುವುದಕ್ಕೆ. ಇದನ್ನು ಯಾವಾಗ ಮಾಡುತ್ತಾರೆಂದರೆ ಮೇಜರ್ ಇರಿಗೇಷನ್‌ನಲ್ಲಿ ನೀರನ್ನು ಬಿಡುತ್ತಾರಲ್ಲಾ ಆ ನೀರು ಬಿಟ್ಟಾಗ ಮೇಲೆ ಈ ಸಿಲ್ಟ್ ಮತ್ತು ಜಿಡ್ಡನ್ನು ತೆಗೆಯುವುದಕ್ಕೆ ಹೋಗುತ್ತಾರೆ. ಈ ಪದ್ಧತಿ ನಿಮ್ಮಲ್ಲೂ ನಡೆದುಕೊಂಡುಬಂದಿರಬಹುದು ಇದು ನಮ್ಮಲ್ಲಿ ಕೂಡ ನಡೆದುಕೊಂಡೇ ಬಂದಿದೆ, ಇದು ಇವೊತ್ತಿನಿಂದ ನಡೆದುಕೊಂಡು ಬಂದಿರುವುದಲ್ಲ, ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. 25 ಕೋಟಿ ರೂ.ಗಳಲ್ಲಿ 5 ಕೋಟಿ ರೂ.ಗಳೂ ಕೂಡ ಖರ್ಚಾಗುವುದಿಲ್ಲ. ಇದಕ್ಕಾಗಿ ನಿಗದಿ ಮಾಡಿರುವ ಮೇನ್‌ಟೆನೆನ್ಸ್ ಹಣ ಖಾಯಂ ಆಗಿ ಬಂದೇ ಬರುತ್ತದೆ. ಆದುದರಿಂದ ಮೊದಲೇ ಅದನ್ನು ಎಸ್ಟಿಮೇಟ್ ಮಾಡಿಕೊಂಡು ಆ ಸಿಲ್ಟ್ ತೆಗೆಯುವುದಕ್ಕೆ ಕ್ರಮ ಕೈಗೊಳ್ಳಬಾರದೇ ? ಇಷ್ಟು ಹಣ ಹಾಡುಹಗಲಲ್ಲೇ ದುರುಪಯೋಗ ಆಗುತ್ತಿದೆಯಲ್ಲಾ ಇದನ್ನು ನೋಡಿಕೊಂಡು ನಾವು ಮತ್ತು ನೀವು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಬೇಕೆ?

ಈ ರೀತಿ ಆಗುತ್ತಿದೆಯೋ ಇಲ್ಲವೋ ನೀವೇ ಹೇಳಿ. ಏಕೆ ನೀವು ನೀರು ಬಿಟ್ಟಮೇಲೆ ಸಿಲ್ಟ್ ತೆಗೆಸುವುದು? ಇದೇ ಕೆಲಸವನ್ನು ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ಏಕೆ ಮಾಡಿಸುವುದಿಲ್ಲ? ನೀರು ಬಿಟ್ಟಮೇಲೆ ಏಕೆ ತೆಗೆಸುವುದಕ್ಕೆ ಹೋಗುತ್ತೀರಿ? ಇದನ್ನು ನೋಡಿಕೊಂಡು ನಾವು ಸುಮ್ಮನೇ ಕೂತಿಲ್ಲವೇ, ಸರ್ಕಾರ ಇದನ್ನು ಕಣ್ಣು ಮುಚ್ಚಿಕೊಂಡು ನೋಡಿಕೊಂಡು ಕೂತಿಲ್ಲವೇ, ಅಂದರೆ ಅದಕ್ಕೆ ಭಾಗಿಗಳಾಗಿದ್ದೇವೆ ಎಂದು ಅರ್ಥವೇ, 25ಕೋಟಿ ರೂ.ಗಳಲ್ಲಿ 5ಕೋಟಿ ರೂಪಾಯಿಗಳೂ ಕೂಡ ಖರ್ಚಾಗುವುದಿಲ್ಲ. ನೀವು ಹೇಳಿ ಇದರ ಬಗ್ಗೆ, ಇಲ್ಲಿ ನಾವು ಇದನ್ನು ಸರಿ ಮಾಡುವುದಕ್ಕೆ ಕ್ರಮ ಕೈಗೊಂಡಿದ್ದೇವೆ, ಹಣ ದುರುಪಯೋಗವಾಗುತ್ತಿಲ್ಲ ಎಂದು ಸರ್ಕಾರದ ವತಿಯಿಂದ ಹೇಳಿ ನೋಡೋಣ. ಈಗ ಪರವಾಗಿಲ್ಲ ಕ್ರಮ ಕೈಗೊಂಡಿದ್ದಾರೆ, ಶಹಭಾಸ್ ಎಂದು ನಾವು ಹೇಳುತ್ತೇವೆ. ನುಡಿದಂತೆ ನಡೆಯೋ ಸರ್ಕಾರ ಇದು ಎಂದು ಹೇಳುತ್ತೇವೆ. ಇದರ ಬಗ್ಗೆ ಇಲಾಖೆಯ ಅಧಿಕಾರಿಗಳೂ ಕೂಡ ಗಮನವನ್ನು ಹರಿಸಬೇಕು. ಕಾರ್ಯದರ್ಶಿಗಳು ಇರಬಹುದು, ಮುಖ್ಯ ಅಭಿಯಂತರು ಇರಬಹುದು. ಸುಮಾರು 25 ಕೋಟಿ ಹಣವನ್ನು ತೆಗೆದುಕೊಂಡು ಸುಮಾರು 25 ಲಕ್ಷ ಹೆಕ್ಟೇರ್ ನೀರಾವರಿ ಪ್ರದೇಶಕ್ಕೆ ಒಳಪಡಿಸಿದ್ದೇವೆ ಎಂದು ಹೇಳುತ್ತಾರೆ.

ಅಷ್ಟು ಹಣವನ್ನು ತೆಗೆದುಕೊಂಡು ದುರುಪಯೋಗ ಮಾಡಿರುವುದರಿಂದ ಇವತ್ತು ರೈತರಿಗೆ ನೀರು ಕೊಡಲಿಕ್ಕೆ ಆಗಲಿಲ್ಲ. ರೈತರಿಗೆ ನಾವು ವಂಚನೆ ಮಾಡುತ್ತಿದ್ದೇವೆ ಮತ್ತು ಮೋಸ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಅನಿವಾರ್ಯವಾಗಿ ನಾವು ಹೇಳಲೇಬೇಕಾಗುತ್ತದೆ. ಆ ಹಣ ಸರಿಯಾಗಿ ಸದುಪಯೋಗ ಆಗುವುದಕ್ಕೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮಗೆ ತಿಳಿಸಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ಕಾವೇರಿ ಮತ್ತು ಕೃಷ್ಣಾ ಬಗ್ಗೆ ಚರ್ಚೆ ಆಗುವಾಗ ಒಂದು ಮಾತನ್ನು ಹೇಳಿದರು. ನಾವು 5 ಟಿ.ಎಂ.ಸಿ. ನೀರನ್ನು ಬಿಟ್ಟಿದ್ದೀರಿ ಎಂದು ಕೇಳಿದಾಗ, ಇಲ್ಲ ನಾವು ನೀರು ಬಿಟ್ಟಿಲ್ಲ, ನಾವು ಸಾಕಷ್ಟು ನೀರನ್ನು ನಮ್ಮ ಬೆಳೆಗಳಿಗೆ ಆಗುವಷ್ಟು ನೀರನ್ನು ನಾವು ಇಟ್ಟುಕೊಂಡಿದ್ದೇವೆ, ನಮ್ಮ ರೈತರಿಗೆ ಯಾವುದೇ ಸಂದರ್ಭದಲ್ಲೂ ಕೂಡ ತೊಂದರೆ ಆಗುವುದಕ್ಕೆ ನಾವು ಅವಕಾಶವನ್ನು ಮಾಡಿಕೊಡುವುದಿಲ್ಲ ಮತ್ತು ತೊಂದರೆಯೂ ಆಗುವುದಿಲ್ಲ ಮತ್ತು ಒಂದು ವೇಳೆ ರೈತರಿಗೆ ತೊಂದರೆ ಆದರೆ ಒಂದು ಘಳಿಗೆ ಕೂಡ ಅಧಿಕಾರದಲ್ಲಿ

ಇರುವುದಿಲ್ಲ ಎನ್ನತಕ್ಕಂಥ ಮಾತನ್ನು ಬೈರೇಗೌಡರೇ ಹೇಳಿದ್ದಾರೆ. ಹೌದು ತಾನೆ? ನೀವು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರವೇ ನಾನು ಹೇಳುತ್ತಿದ್ದೇನೆ.

ಬೇಸಿಗೆಯಲ್ಲಿ ಹೇಮಾವತಿಯಿಂದ 17 ಟಿ.ಎಂ.ಸಿ. ನೀರನ್ನು ನದಿಗೆ ಬಿಟ್ಟರು. ಈ ನೀರು ನದಿಯ ಮೂಲಕ ತಮಿಳುನಾಡಿಗೆ ಹೋಯಿತು. ಇವೊತ್ತು ನಮ್ಮ ಖಾರೀಫ್ ಬೆಳೆಗೆ ನೀರು ಕೊಡಿ ಎಂದು ಕೇಳಿದರೆ, ನೀರಿಲ್ಲ, ನೀರು ಗೇಟ್ ಲಿವೆಲ್‌ಗೆ ಬಂದಿಲ್ಲವಾದ ಕಾರಣ ನೀರನ್ನು ಕೊಡುವುದಕ್ಕಾಗುವುದಿಲ್ಲವೆನ್ನುವ ನಿರ್ಣಯವನ್ನು ಮಾಡಿದರು. ಹೇಮಾವತಿ ಬಲದಂಡೆ ನಾಲೆಯಲ್ಲಿ ಜಲಾಶಯದ ನೀರಿನ ಮಟ್ಟು 28.92 ಅಡಿ ಮುಟ್ಟಿದರೆ ಮಾತ್ರ ನೀರನ್ನು ಕೊಡಲಾಗುವುದು ಎಂದು ನೀರಾವರಿ ಸಮಿತಿಯಲ್ಲಿ ನಿರ್ಣಯ ಆಗಿರುವಂಥದ್ದು. ಅಂದರೆ ನಮಗೆ ನೀರಿಲ್ಲ ಎನ್ನುವುದು ನಿಮಗೆ ಅರ್ಥವಾಯಿತು ತಾನೇ? ನೀವೇ ಹೇಳಿದ್ದೀರಿ, ರೈತರಿಗೆ ನಾವು ನೀರನ್ನು ಕೊಡಲಿಕ್ಕೆ ಆಗಲಿಲ್ಲವೆಂದರೆ ಒಂದು ಕ್ಷಣ ಕೂಡ ನಾವು ಅಧಿಕಾರದಲ್ಲಿ ಇರುವುದಿಲ್ಲ ಎಂದಿದ್ದೀರಿ. ಹಾಗಾದರೆ ಇದಕ್ಕೆ ಸರ್ಕಾರ ಏನು ಹೇಳುತ್ತದೆ? ಬೇಸಿಗೆಯಲ್ಲಿ ನಮ್ಮಲ್ಲಿದ್ದಂತಹ ನೀರನ್ನು ತಮಿಳುನಾಡಿಗೆ ಬಿಟ್ಟರು. ಇಲ್ಲಿ ನಮ್ಮ ಖಾರೀಫ್ ಬೆಳೆಗೆ ಬೇಸಿಗೆಯಲ್ಲಿ ನೀರನ್ನು ಕೊಡಲಿಲ್ಲ.

ಖಾರೀಫ್ ಬೆಳೆಗೆ ನೀರನ್ನು ಕೊಡಿ ಎಂದು ಕೇಳಿದರೆ ಇನ್ನೂ ಗೇಟ್ ಲಿವೆಲ್‌ಗೆ ನೀರು ಬಂದಿಲ್ಲವಾದ ಕಾರಣ ನೀರು ಬಂದಾಗ ನೀರನ್ನು ಬಿಡುತ್ತೇವೆನ್ನುವ ನಿರ್ಣಯವನ್ನು ಮಾಡಿದರು. ಯಾವ ತಿಂಗಳಿನಲ್ಲಿ? ಇದು ಜುಲೈ ತಿಂಗಳಿನಲ್ಲಿ ಮಾಡಿರತಕ್ಕಂಥ ನಿರ್ಣಯ. ಎಂದರೆ ರೈತರಿಗೆ ನೀರು ಕೊಡುವುದಕ್ಕೆ ಇವರಿಗೆ ಆಗಿಲ್ಲ. ರೈತರಿಗೆ ನೀರು ಕೊಡುವುದಕ್ಕೆ ಆಗದಿದ್ದರೆ ಒಂದು ಘಳಿಗೆ ಕೂಡ ಅಧಿಕಾರದಲ್ಲಿ ಇರುವುದಿಲ್ಲ ಎಂದು ಹೇಳಿದ್ದೀರಲ್ಲಾ ಈಗ ನಿಮಗೆ ನಾನು ಕೇಳುತ್ತಿದ್ದೇನೆ. ರೈತರಿಗೆ ನೀರು ಕೊಡುವುದಕ್ಕೆ ಆಗಿಲ್ಲವಲ್ಲಾ ರಾಜೀನಾಮೆ ಕೊಡುವುದಕ್ಕೆ ನಿಮಗೆ ತಾಕತ್ತು ಇದೆಯೇ, ಇದೆಯೇ ಹೇಳಿ? ಇವತ್ತು ರೈತರ ಹೆಸರಿನಲ್ಲಿ ಏನು ಅಧಿಕಾರಕ್ಕೆ ಬಂದಿದ್ದೀರಿ, ರೈತರ ಮಕ್ಕಳ ಹೆಸರಿನಲ್ಲಿ ಏನು ಬಂದಿದ್ದೀರಿ ತಾವು ರೈತರಿಗೆ ವಂಚನೆ ಮಾಡಬಾರದು....

ಉಪಾಧ್ಯಕ್ಷರು : ಈಗಾಗಲೇ ಒಂದೂವರೆ ಗಂಟೆಯಾಯಿತು. ತಾವು ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ.?

ಶ್ರೀ ಎ.ಟಿ. ರಾಮಸ್ವಾಮಿ : ಬೇಕಾದರೆ ಲಂಚ್‌ಗೆ ಅಡ್ಜರ್ನ್ ಮಾಡಿ.

ಉಪಾಧ್ಯಕ್ಷರು : ತಾವು ಮುಗಿಸಿಬಿಡಿ. ಈವತ್ತು ಲಂಚ್ ಅವರ್ ಇಲ್ಲ

ಶ್ರೀ ಎ.ಟಿ. ರಾಮಸ್ವಾಮಿ : ಹೀಗಾಗಿ ಇವತ್ತು ಹೇಮಾವತಿ, ಕಾವೇರಿ ನೀರನ್ನು ಸಕಾಲದಲ್ಲಿ ಕೊಡುವುದಕ್ಕಾಗಿಲ್ಲ. ಸರ್ಕಾರ ನಮ್ಮ ಪ್ರದೇಶದ ರೈತರಿಗೆ ಅನ್ಯಾಯ ಮಾಡಿದ್ದಾರೆ. ಆ ದಿಕ್ಕಿನಲ್ಲಿ ನೀವು ಕ್ಷಮೆಯನ್ನು ಕೇಳಬೇಕು ಎಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಲ್ಲಿ ಇಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಒಬ್ಬ ಪಂಚಾಯಿತಿ ಸದಸ್ಯನಿರುತ್ತಾನೆ. ಅವನು ಗುತ್ತಿಗೆ ಮಾಡಿ ಬಿಡುತ್ತಾನೆ. ಅವನ ಸದಸ್ಯತ್ವ ಅನರ್ಹತೆಯನ್ನು ಮಾಡಬೇಕು ಎಂದು ಅರ್ಜಿಯನ್ನು ಅಸಿಸ್ಟೆಂಟ್ ಕಮಿಷನರ್ ಉಪ ವಿಭಾಗಾಧಿಕಾರಿಗಳಿಗೆ ಅರ್ಜಿ ಹಾಕಬೇಕು. ಅರ್ಜಿ ಹಾಕಿದಮೇಲೆ ಒಂದು ಕಾಲಮಿತಿ ಬೇಕಲ್ಲ. ಅವನು ಅನರ್ಹ ಆಗುತ್ತಾನೆ ಅಥವಾ ಇಲ್ಲ ಎಂದು. ಎರಡು ವರ್ಷವಾದರೂ ತೀರ್ಮಾನವಾಗದೇ ಇದ್ದರೆ ಈ

ಕಾನೂನು ಏಕೆ ಮಾಡಬೇಕು? ಕೆಲವಾರು ಕಾರಣಗಳಿಗಾಗಿ ಅನರ್ಹತೆ ಉಂಟಾಗುತ್ತದೆ. ಅಸಿಸ್ಟೆಂಟ್ ಕಮಿಷನರ್‌ಗೆ ಅರ್ಜಿ ಹಾಕುತ್ತಾರೆ. ಅವನಿಗೆ ಅನರ್ಹತೆ ಉಂಟಾಗಿದೆ ಎಂದು ಹೇಳಿ ಅಥವಾ ಇಲ್ಲ ಎಂದು ಹೇಳಿ ಒಂದು ಕಾಲಮಿತಿಯೊಳಗೆ ನಿರ್ಣಯ ಕೊಡಿ ನೀವು. ಐದು ವರ್ಷ ಆದಮೇಲೆ ನೀವು ನಿರ್ಣಯ ಕೊಡುವುದಾದರೆ ಈ ಕಾನೂನನ್ನು ನೀವು ಏಕೆ ಮಾಡಬೇಕು? ಆ ದಿಕ್ಕಿನಲ್ಲಿ ಸಂಬಂಧಪಟ್ಟ ಇಲಾಖೆಯವರಿಗೆ ಸೂಚನೆಯನ್ನು ಸರ್ಕಾರ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆ ನಿರ್ಮಲ ಕರ್ನಾಟಕ ಯೋಜನೆ ಎಂದು ರೂಪಿಸಿದಿರಿ. ಈ ನಿರ್ಮಲ ಕರ್ನಾಟಕ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯಿತಿಗಳ ಫಲಾನುಭವಿಗಳನ್ನು ಆಯ್ಕೆ ಮಾಡಿ

ಫಲಾನುಭವಿಗಳಿಗೆ ಹಣವನ್ನು ವಿತರಣೆ ಮಾಡಬೇಕು ಎಂದು ಸರ್ಕಾರದ ನಿರ್ದೇಶನ ಹಾಗೂ ಆದೇಶ ಇದೆ. ಆದರೆ ಗ್ರಾಮಪಂಚಾಯಿತಿಯಲ್ಲಿ ಹಣ ಬಿಡುಗಡೆಯಾಗಿಲ್ಲ. ಜಿಲ್ಲಾಪಂಚಾಯಿತಿಯವರು ಅವರೇ ಅಧಿಕಾರ ಇಟ್ಟು ಕೊಂಡು ಅವರೇ ಹಣ ಬಿಡುಗಡೆ ಮಾಡುತ್ತಿದ್ದಾರೆ. ನಿಮ್ಮ ಸರ್ಕಾರದ ಆದೇಶ ಏನಿದೆ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಂಬಂಧಪಟ್ಟವರಿಗೆ ಕಟ್ಟುನಿಟ್ಟಾಗಿ ಸೂಚನೆಯನ್ನು ತಾವು ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನ.

ಇನ್ನು ಸಾಮಾಜಿಕ ಅರಣ್ಯ ಇಲಾಖೆ, ಇಲ್ಲಿ ಅರಣ್ಯ ಮಂತ್ರಿಗಳು ಇಲ್ಲ ಎಂದು ಕಾಣುತ್ತದೆ ಅರಣ್ಯ ನಿಮ್ಮಲ್ಲಿ ಇಲ್ಲ. ಅರಣ್ಯದ ಬಗ್ಗೆ ಗೊತ್ತಿಲ್ಲದವರನ್ನು ತೆಗೆದುಕೊಂಡು ಹೋಗಿ ಅರಣ್ಯ ನೋಡಿಕೊಳ್ಳುವುದಕ್ಕೆ, ಕಾಪಾಡುವುದಕ್ಕೆ ಹಾಕಿಬಿಟ್ಟಿದ್ದಾರೆ. ಕಾಡೇ ಗೊತ್ತಿಲ್ಲದವರಿಗೆ ಕಾಡನ್ನು ಸಂರಕ್ಷಣೆ ಮಾಡುವುದಕ್ಕೆ ಹಾಕಿದರು.

ಶ್ರೀ ಗುರುಪಾದಪ್ಪ ಎಸ್. ನಾಗಮಾರಪಲ್ಲಿ : ಇಷ್ಟು ದಪ್ಪ ಇದ್ದೇನೆ ನಾನು ನಿಮಗೆ ಕಾಣಲಿಲ್ಲವೇ?

ಶ್ರೀ ಎ.ಟಿ. ರಾಮಸ್ವಾಮಿ : ಕಾಡೇ ಗೊತ್ತಿಲ್ಲದವರಿಗೆ ಕಾಡಿನ ಮಂತ್ರಿ ಮಾಡಿ ಬಿಟ್ಟರಲ್ಲಾ.

ಶ್ರೀ ಆರ್.ವಿ. ದೇಶಪಾಂಡೆ : ಡಾಕ್ಟರ್ ಆದವರನ್ನು ಆರೋಗ್ಯ ಮಂತ್ರಿಯನ್ನಾಗಿ ಮಾಡುವುದು ಕಷ್ಟ. ಬೀದರ್ ಕಡೆ ಅರಣ್ಯ ತೆಗೆದುಕೊಂಡು ಹೋಗಬೇಕು ಎಂದು ಮಾಡಿದ್ದಾರೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಈಗ ಸಾಕಷ್ಟು ಮಾತನಾಡಿದ್ದೇನೆ. ಅರಣ್ಯ ಸಚಿವರಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಪ್ರತಿವರ್ಷ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ನೀವು ಸಸಿಗಳನ್ನು ನೆಡಿಸುತ್ತಿದ್ದೀರಿ. ಒಳ್ಳೆಯ ಉದ್ದೇಶ ಅದು. ಆದರೆ ಆ ಉದ್ದೇಶ ಎಷ್ಟರಮಟ್ಟಿಗೆ ಸಾರ್ಥಕವಾಗುತ್ತಿದೆ ಎನ್ನುವುದನ್ನು ತಾವು •ಗಮನಿಸಬೇಕು. ಬಹುತೇಕವಾಗಿ ಗಿಡಗಳನ್ನು ಸಕಾಲದಲ್ಲಿ ನೆಡುವುದಿಲ್ಲ, ನೆಟ್ಟರೂ ಗಿಡ ನಿಲ್ಲುತ್ತಾ ಇಲ್ಲ. ಅರಣ್ಯ ಕೂಡ ಬೆಳೆಯುತ್ತಾ ಇಲ್ಲ. ಅದಕ್ಕೆ ನನ್ನ ಒಂದು ಸಲಹೆ ಏನೆಂದರೆ ನಿಮ್ಮ ಸರ್ಕಾರದ ಉದ್ದೇಶ ಏನು? ಅರಣ್ಯ ಬೆಳೆಸಬೇಕು. ಆದರೆ ನೀವು ಕೋಟ್ಯಾಂತರ ರೂಪಾಯಿ ಹಣವನ್ನು ಖರ್ಚು ಮಾಡಿ ಸರಿಯಾಗಿ ಅರಣ್ಯ ಬೆಳೆಸುವುದಕ್ಕೆ ಆಗಿಲ್ಲ. ಅದಕ್ಕೆ ಹಲವಾರು ಕಾರಣಗಳಿವೆ ಬಿಡಿ. ನನ್ನ ಸಲಹೆ

ಏನೆಂದರೆ ನೀವು ಗೋಮಾಳದಲ್ಲಿ ಅಥವಾ ಸಿ.ಅಂಡ್ ಡಿ ಲ್ಯಾಂಡ್‌ನಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಹೇಳುತ್ತೀರಿ. ನೀವು ಅರಣ್ಯವನ್ನು ಬೆಳೆಸುವ ಬದಲು ಯಾರಾದರೂ ಖಾಸಗಿಯವರಿಗೆ ಆ ಜಮೀನನ್ನು ಲೀಸ್‌ಗೆ ಕೊಟ್ಟು ಇಂಥ ಗಿಡಗಳನ್ನು ಬೆಳೆಸಿ ನೀವು ಇಷ್ಟು ವರ್ಷ ತೆಗೆದುಕೊಳ್ಳಿ ಎಂದು ಕೊಟ್ಟರೆ ನೀವು ಅರಣ್ಯ ಬೆಳೆಸಿದ ಹಾಗೆ ಆಗುತ್ತದೆ. ನಿಮಗೆ ಲೀಸ್ ಹಣ ಸಹ ಬರುತ್ತದೆ.

ಇದರಿಂದ ನಿಮ್ಮ ಉದ್ದೇಶ ಕೂಡ ಈಡೇರುತ್ತದೆ. ಏಕೆ ಈ ರೀತಿ ಕ್ರಮ ಕೈಗೊಳ್ಳಬಾರದು? ನಿಮ್ಮ ಸರ್ಕಾರದ ಬೊಕ್ಕಸಕ್ಕೆ ಹಣ ಖರ್ಚಾಗುವುದಿಲ್ಲ, ಸರ್ಕಾರಕ್ಕೂ ಲೀಸ್‌ನಿಂದ ಹಣ ಬರುತ್ತದೆ. ಇಂತಹ ಗಿಡಗಳನ್ನು ಹಾಕಿ ಎಂದು ಹೇಳಿದರೆ ಆ ಗಿಡಗಳನ್ನು ಹಾಕುತ್ತಾರೆ, ಅರಣ್ಯ ಬೆಳೆಸಿ ಸಂರಕ್ಷಣೆಯನ್ನು ಕೂಡ ಅವನೇ ಮಾಡಿದಂತಾಗುತ್ತದೆ. ನಿಮ್ಮ ಉದ್ದೇಶ ಕೂಡ ಈಡೇರುತ್ತದೆ. ಈ ರೀತಿ ಕಾಯಿದೇನ್ಮುಖವಾಗಿ. ಇಲ್ಲ ಎಂದರೆ ಕೊಟ್ಟ ಹಣ ಎಷ್ಟೋ ದುರುಪಯೋಗ ವಾಗುತ್ತವೆ. ಹಣ ಖರ್ಚು ಮಾಡಿದರೂ ಕೂಡ ಅದು ಸಾರ್ಥಕವಾಗುವುದಿಲ್ಲ, ಮತ್ತು ಗಿಡಗಳನ್ನು ಸಂರಕ್ಷಣೆ ಮಾಡುವುದಕ್ಕಾಗುವುದಿಲ್ಲ, ಹಾಳಾಗಿ ಹೋಗುತ್ತವೆ. ಆ ದಿಕ್ಕಿನಲ್ಲಿ ತಾವು ಗಮನಹರಿಸಬೇಕು ಎಂದು ಸಲಹೆಯನ್ನು ನಾನು ತಮಗೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಹಣಕಾಸು ಮಂತ್ರಿಗಳು ಇಲ್ಲಿಂದ ಹೋದರು ಎಂದು ಕಾಣುತ್ತದೆ. ಕಮರ್ಷಿಯಲ್ ಟ್ಯಾಕ್ಸ್ ವಸೂಲು ಮಾಡುತ್ತಾರೆ, ಅದು ನಾಲ್ಕು ಸಾವಿರ ಕೋಟಿ ರೂಪಾಯಿ ವಸೂಲಾಗುತ್ತಿರಬಹುದು. ನನಗೆ ಅನಿಸುತ್ತದೆ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಈ ಇಲಾಖೆಯನ್ನು ನಿರ್ವಹಣೆ ಮಾಡಿದರೆ ಇನ್ನುನಾಲ್ಕು ಕೋಟಿ ಸಾವಿರ ರೂಪಾಯಿ ಮಾರಾಟ ತೆರಿಗೆಯನ್ನು ವಸೂಲು ಮಾಡಬಹುದು. ನಮ್ಮ ಒಂದು ಊರಾದ ಅರಕಲಗೂಡಿನಲ್ಲಿ 10 ಜನ ಮಾತ್ರ ರಿಜಿಸ್ಟ್ರೇಷನ್ ಮಾಡಿಸಿರುವುದು. ಇನ್ನು 90 ಜನ ರಿಜಿಸ್ಟ್ರೇಷನ್ ಮಾಡಿಸುವುದಿಲ್ಲ.

ರಿಜಿಸ್ಟ್ರೇಷನ್ ಯಾರೂ ಮಾಡಿಸಿಲ್ಲ, ಅವರು ವರ್ಷಕ್ಕೆ ಒಂದೆರಡು ಸಾವಿರ ರೂಪಾಯಿ ಮಾಮೂಲಿ ಕೊಟ್ಟುಬಿಡುತ್ತಾರೆ. ಅದರಲ್ಲಿ 90 ಜನ ರಿಜಿಸ್ಟ್ರೇಷನ್ ಮಾಡಿಸಿರುವುದಿಲ್ಲ, ರಿಜಿಸ್ಟ್ರೇಷನ್ ಮಾಡಿಸಿರುವವರ ಪೈಕಿ ಕೂಡ ಎರಡು ಕೋಟಿ ರೂಪಾಯಿ ಟರ್ನ್‌ಓವರ್ ಆದರೆ ನಿಜವಾಗಿ ತೋರಿಸಿರುವುದು 50 ಲಕ್ಷ ರೂಪಾಯಿ. ಹೀಗಾಗಿ ಆ ಇಲಾಖೆಯಲ್ಲಿ . ಹಣ ಏನು ಬರಬೇಕಾಗಿತ್ತು, ತೆರಿಗೆ ಏನು ವಸೂಲಾಗಬೇಕಾಗಿತ್ತು, ಅದು ಸಮರ್ಪಕವಾಗಿ ತೆರಿಗೆ ವಸೂಲಾಗುತ್ತಿಲ್ಲ. ಆ ಇಲಾಖೆಯಲ್ಲಿ ಕಟ್ಟುನಿಟ್ಟಾದ ಕ್ರಮವನ್ನು ನೀವು ತೆಗೆದುಕೊಂಡು ತೆರಿಗೆಯನ್ನು ವಸೂಲು ಮಾಡಿದರೆ ಇವತ್ತು ಏನು ನಾಲ್ಕು ಕೋಟಿ ರೂಪಾಯಿ ತೆರಿಗೆ ವಸೂಲು ಮಾಡುತ್ತಿದ್ದೀರಿ. ಅದು ಎಂಟು ಕೋಟಿ ರೂಪಾಯಿ ವಸೂಲು ಮಾಡುವುದಕ್ಕೆ ಅವಕಾಶ ಇದೆ. ಸರ್ಕಾರ ಆ ಕಡೆ ಗಮನ ಹರಿಸಬೇಕು. ರೆವಿನ್ಯೂಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲವೆಂದು ಕಾಣುತ್ತದೆ. ಗ್ರೋ ಮೋರ್‌ಫುಡ್ ಪ್ರೋಗ್ರಾಂ ಅನ್ನು 1955-60ರಲ್ಲಿ ಒಂದು ಕಾರ್ಯಕ್ರಮವನ್ನು •ಮಾಡಿ ಜಮೀನು ಕೊಟ್ಟರು. ಹರಿಜನ ಗಿರಿಜನರಿಗೆ ಬೆಳೆಯುವುದಕ್ಕೆಂದು ಭೂಮಿಯನ್ನು ಕೊಟ್ಟು ಹಂಗಾಮಿ ಸಾಗುವಳಿ ಚೀಟಿ ಕೊಟ್ಟರು. ಇವತ್ತಿಗೂ ಸಹ ಆ ಭೂಮಿಯನ್ನು ಖಾಯಂ ಮಾಡಿಲ್ಲ. ಅಧ್ಯಕ್ಷರೇ ಇಲ್ಲಿ ನಾವು ಹೇಳುವುದನ್ನು ಯಾರು ಕೇಳಿಸಿಕೊಳ್ಳುತ್ತಿದ್ದಾರೆ? ಯಾರು ಇದರ ಬಗ್ಗೆ ಗುರುತು ಹಾಕಿಕೊಳ್ಳುತ್ತಿದ್ದಾರೆ? ಗ್ರೋ ಮೋರ್‌ಫುಡ್ ಎಂದು ಹೇಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಭೂಮಿಯನ್ನು ಕೊಟ್ಟರು.

ಅವರಿಗೆ ಹಂಗಾಮಿ ಸಾಗುವಳಿ ಚೀಟಿ ಕೊಟ್ಟರು. ಇವತ್ತು 35-40 ವರ್ಷಗಳಾದರೂ ಕೂಡ ಖಾಯಂಮಾತಿ ಸಾಗುವಳಿ ಚೀಟಿಯನ್ನು ಕೊಟ್ಟಿಲ್ಲ ಅದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಅವರಿಗೆ ಖಾಯಂ ಸಾಗುವಳಿ ಚೀಟಿಯನ್ನು ಕೊಡತಕ್ಕಂಥ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳುತ್ತಾ, ಬಗರ್ ಹುಕುಂ ಸಾಗುವಳಿದಾರರಿಗೆ ನಾವೇನು ಸಕ್ರಮಗೊಳಿಸಿದ್ದೇವೆ, ಅವರಿಗೆ ಕಂದಾಯದ 200 ಪಟ್ಟು ಆಫ್‌ಸೆಟ್ ಪ್ರೈಸ್‌ನ್ನು ಹಾಕಬೇಕು ಎಂದು ಆಯಿತು. ಅದು ಹೆಚ್ಚಾಯಿತು ಎಂದು ಈ ಸದನದಲ್ಲಿ ಚರ್ಚೆಯಾಗಿ ಕಂದಾಯದ 50 ಪಟ್ಟು ಆಫ್‌ಸೆಟ್ ಪ್ರೈಸ್‌ನ್ನು ಹಾಕಬೇಕು ಎಂದು ನಿರ್ಣಯವಾಗಿ, ಸರ್ಕಾರ ಇದರ ಬಗ್ಗೆ ಒಂದು ಸುತ್ತೋಲೆಯನ್ನು ಕಳುಹಿಸಿತು. ಆದರೆ ಇವತ್ತು ಅಧಿಕಾರಿಗಳು ಏನು ಹೇಳುತ್ತಾರೆಂದರೆ ಈ ಸುತ್ತೋಲೆ. ಬಂದಿದೆಯಲ್ಲ ಅಲ್ಲಿಂದ ಈಚೆಗೆ ಮಾತ್ರ ನಾವು 50 ಪಟ್ಟು ಹಾಕುತ್ತೇವೆ.

ಮೊದಲು ನಿರ್ಣಯವಾಗಿರುವುದಕ್ಕೆ 200 ಪಟ್ಟು ಹಾಕುತ್ತೇವೆ ಎಂದು ಹೇಳುತ್ತಾರೆ. ಬಗರ್ ಹುಕುಂ ಸಾಗುವಳಿಯನ್ನು ಮಾಡುತ್ತಿರುವವರು. ಬಹಳ ಕಡು ಬಡವರು. 1-2 ಎಕರೆ ಮಾಡಿಕೊಂಡಿರುವರಿಗೆ ಖಾಯಂ ಮಾಡಿತ್ತು. ಆವರು ಮೊದಲು ಮಾಡಿರಲಿ, ಈಚೆಗೆ ಮಾಡಿರಲಿ. ಅವರೆಲ್ಲರಿಗೂ ಕಂದಾಯದ 50 ಪಟ್ಟನ್ನು ನಿಗದಿ ಮಾಡಿ, ಸಾಗುವಳಿ ಚೀಟಿ ಕೊಡಬೇಕು ಎಂದು ತಮ್ಮಿಂದ ಒಂದು ನಿರ್ದೇಶನ ಹೋಗಬೇಕು. ಆದರೆ ಈಗಾಗಲೇ ಅದಕ್ಕೆ 50 ಪಟ್ಟು ಹಾಕಬೇಕು ಎಂದು ಆಗಿದೆ. ಆದರೆ ಅದರ ಹಿಂದಿನವುಗಳಿಗೆ ಆಗಿಲ್ಲ, ಅದರ ಬಗ್ಗೆ ಕ್ಲಾರಿಫಿಕೇಷನ್ ಆರ್ಡರ್ ಇಷ್ಯೂ ಮಾಡಬೇಕು ಎಂದು ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದ ಮಂತ್ರಿಗಳು ಒಂದು ಶಿಷ್ಟಾಚಾರ ಏನಿದೆ ಅದನ್ನು ಅನುಸರಿಸುತ್ತಿಲ್ಲ. ನನ್ನ ತಾಲ್ಲೂಕಿಗೆ ನನ್ನ ಜಿಲ್ಲಾಉಸ್ತುವಾರಿ ಮಂತ್ರಿಗಳು ಬಂದಿದ್ದರು. ಅವರು ಬರುವಾಗ ಕನಿಷ್ಟ ಸೌಜನ್ಯಕ್ಕಾದರೂ ಇಂತಹ ದಿವಸ ಬರುತ್ತಿದ್ದೇನೆ ಎಂದು ತಿಳಿಸಿಲ್ಲ. ಅಲ್ಲಿಗೆ ಬಂದು ಅಫಿಷಿಯಲ್ ಮೀಟಿಂಗ್ ಮಾಡಿದ್ದಾರೆ.

ಶಾಸಕರಿಗೆ ಮಾಹಿತಿ ಇಲ್ಲ, ಹಿಂದೆಯೂ ಕೂಡ ಈ ಸದನದಲ್ಲಿ ಚರ್ಚೆಯಾಗಿದೆ, ಏಕೆ ಲೋಪದೋಷ ಆಗಿದೆ? ಏಕೆ ಸಾರ್ವಜನಿಕ ಪ್ರತಿನಿಧಿಗಳನ್ನು ಕಡೆಗಾಣಿಸುತ್ತಿದ್ದೀರಿ? ಹೇಳಿ. ಆದ್ದರಿಂದ ನೀವು ಕಟ್ಟುನಿಟ್ಟಾಗಿ ಸೂಚನೆಯನ್ನು ಕೊಡಬೇಕು. ಇಲ್ಲದಿದ್ದರೆ ನಾಳೆ ಆಗತಕ್ಕಂಥ ಗೊಂದಲಕ್ಕೆ ಅನಾಹುತಕ್ಕೆ ಕಾರಣಕರ್ತರಾಗಬೇಕಾಗುತ್ತದೆ ಎನ್ನತಕ್ಕಂಥ ಎಚ್ಚರಿಕೆಯ ಮಾತನ್ನು ಸಹ ನಾನು ಈ ಸಂದರ್ಭದಲ್ಲಿ ಉಪಾಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರುತ್ತೇನೆ. ಜನರು ನಿಮಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಆಶೀರ್ವಾದ ಮಾಡಿದ್ದರು. ಕಳೆದ ಲೋಕಸಭಾ ಚುನಾವಣೆಯಲ್ಲೂ ಸಹ ಹೆಚ್ಚು ಜನ ಅಭ್ಯರ್ಥಿಗಳನ್ನು ಗೆಲ್ಲಿಸಿ ಆಶೀರ್ವಾದ ಮಾಡಿದ್ದಾರೆ. ಅದಕ್ಕ ಉಬ್ಬಿಹೋಗಬೇಡಿ, ಜನ ಬೂದಿಮುಚ್ಚಿದ ಕೆಂಡದಂತೆ ಇದ್ದಾರೆ. ಏನೋ ಹಲವಾರು ಲೋಪದೋಷಗಳಿಂದ, ರಾಜಕೀಯ ವ್ಯತ್ಯಾಸಗಳಿಂದ ನಿಮಗೆ ಮತ ಕೊಟ್ಟಿರಬಹುದು. ಆದರೆ ಜನ ಇವೊತ್ತು ಬೂದಿ ಮುಚ್ಚಿದ ಕೆಂಡದಂತಿದ್ದಾರೆ. ನೀವೇನು ಅಧಿಕಾರಕ್ಕೆ ಬರುವಾಗ ಹೇಳಿದ್ದಿರಿ, ನಾವು ಹಿಂದೆ ಕಚ್ಚಾಡಿದಂತೆ ಕಚ್ಚಾಡುವುದಿಲ್ಲ, ವಚನಬದ್ಧರಾಗುವುದಿಲ್ಲ, ವಚನ ಬದ್ಧರಾಗುತ್ತೇವೆ,

ನಾವೆಲ್ಲಾ ಒಗ್ಗಟ್ಟಾಗಿ ಇರುತ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದ ಒಂದೂ ಮುಕ್ಕಾಲು ವರ್ಷದೊಳಗೆಯೆ ಕಚ್ಚಾಟ ಆಗಿ ಯಾರು ನಮ್ಮ ಪಕ್ಷದ ಸ್ಥಾಪಕ, ಮಹಾನ್ ನಾಯಕರು ಇದ್ದರು ಅವರು ನಿಮ್ಮಿಂದ ಹೊರಗೆ ಹೋಗಿರತಕ್ಕಂಥದ್ದು

ತಮಗೆಲ್ಲ ಗೊತ್ತಿದೆ. ವಚನಬದ್ಧರೇನು ಆಗಿಲ್ಲ ನೀವು. ಜನರೂ ಕೂಡ ಬೂದಿ ಮುಚ್ಚಿದ ಕೆಂಡದಂತಿದ್ದಾರೆ, ಮುಂದಿನ ಚುನಾವಣೆಯಲ್ಲಿ ತಮಗೆ ಅರ್ಥವಾಗುತ್ತದೆ, ಗೊತ್ತಾಗುತ್ತದೆ ಆ ದಿಕ್ಕಿನಲ್ಲಿ ನೀವೇನು ಸಂವೃದ್ಧಿಯ ಸಮಾಜವನ್ನು ಹಾಗೂ ಕರ್ನಾಟಕವನ್ನು ಕಟ್ಟಬೇಕು ಎನ್ನುವಂಥ ಹಂಬಲವನ್ನು ಇಟ್ಟುಕೊಂಡು ಜನರಿಗೆ ಆಶ್ವಾಸನೆಯನ್ನು ಕೊಟ್ಟು ಅಧಿಕಾರಕ್ಕೆ ಬಂದಿರಿ, ಆ ದಿಕ್ಕಿನಲ್ಲಿ ಕೊಂಚವಾದರೂ ಕೂಡ ತಾವು ಸಾಗಲಿಕ್ಕೆ ಪ್ರಯತ್ನವನ್ನು ಮಾಡಬೇಕು ಎನ್ನತಕ್ಕಂಥ ವಿನಂತಿಯನ್ನು ಸನ್ಮಾನ್ಯ ಉಪಾಧ್ಯಕ್ಷರ ಮೂಲಕ ಸರ್ಕಾರಕ್ಕೆ ಮಾಡಿಕೊಂಡು ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸನ್ಮಾನ್ಯ ಉಪಾಧ್ಯಕ್ಷರೆ, ಊಟದ ಸಮಯದಲ್ಲಿ ಹಸಿವಾದಾಗ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ, ಈ ಕಡೆ ಪತ್ರಕರ್ತರಿಗೂ ಹಸಿವಾಗಿರುತ್ತದೆ, ಕುಳಿತಂತಹವರಿಗೂ ಹಸಿವಾಗಿರುತ್ತದೆ. ಸನ್ಮಾನ್ಯ ಉಪಾಧ್ಯಕ್ಷರೆ, ಏನೇ ಆದರೂ ಕೂಡ ನಾವೆಲ್ಲಾ ಜನಪ್ರತಿನಿಧಿಗಳು ಇಲ್ಲಿ ಕುಳಿತು ಮಾಡತಕ್ಕಂಥ ಕಾನೂನು ಮತ್ತು ಜನ ಕೊಟ್ಟಂಥ ತೆರಿಗೆ ಹಣದಿಂದ ನಾವೆಲ್ಲಾ ಸೇರಿ ಈ ರಾಜ್ಯದ ಅಭಿವೃದ್ಧಿಯನ್ನು ಮಾಡುತ್ತೇವೆ, ಬಹಳ ತ್ವರಿತಗತಿಯಿಂದ ನಮ್ಮ ಅಭಿವೃದ್ಧಿ ಸಾಗುತ್ತದೆ ಎಂದು ಹೇಳಿ ಜನ ಬಹಳ ದೊಡ್ಡ ಆಶಾವಾದವನ್ನು ಇಟ್ಟುಕೊಂಡಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯ ಇರಬಹುದು ಅಥವಾ ಜಗತ್ತಿನ ಬೇರೆ ಯಾವುದೇ ಭಾಗ ಇರಬಹುದು. ಸನ್ಮಾನ್ಯ ಉಪಾಧ್ಯಕ್ಷರೆ, ನಾನೂ ಕೂಡ ವಿಶ್ವದ ಸುಮಾರು ಬೇರೆ ಬೇರೆ 6-7 ರಾಷ್ಟ್ರಗಳನ್ನು ಪ್ರವಾಸ ಮಾಡಿಬಂದಿದ್ದೇನೆ, ಪಾಶ್ಚಿಮಾತ್ಯ ರಾಷ್ಟ್ರಗಳನ್ನು ನಾನೂ ಕೂಡ ಪ್ರವಾಸ ಮಾಡುವಂಥ ಒಂದು ಅವಕಾಶ ನನ್ನ ಜೀವನದಲ್ಲಿ ಸಿಕ್ಕಿತ್ತು. ಪ್ರಥಮತಃ ನಾವು ಅಲ್ಲಿಗೆ ಹೋದಾಗ ಅಲ್ಲಿಯ ರಸ್ತೆಗಳು ಹೇಗಿದ್ದಾವೆ, ಅಲ್ಲಿಯ ಕಟ್ಟಡಗಳು ಹೇಗಿದ್ದಾವೆ, ಇದರ ಆಧಾರದ ಮೇಲೆ ನಮಗೂ ಮತ್ತು ಆ ದೇಶಕ್ಕೂ ತುಲನೆಯನ್ನು ಮಾಡಲಿಕ್ಕೆ ಬರುತ್ತದೆ. ಹೀಗಾಗಿ ಪ್ರಥಮತಃ ನಮಗೆ ಕಾಣತಕ್ಕಂಥದ್ದು ದುರಸ್ಥಿ ಮತ್ತು ಸಂಪರ್ಕ ಇವು,

ನಮ್ಮ ರಾಷ್ಟ್ರಕ್ಕೆ ಬೇರೆಯವರು ಬಂದಾಗಲೂ ಸಹ ನಮ್ಮ ಪ್ರಗತಿಯ ಅಳತೆಗೋಲಾಗುತ್ತದೆ. ನಮ್ಮ ಆರ್ಥಿಕ ಚಟುವಟಿಕೆಯ ಅಳತೆಗೋಲು ಈ ಸಂಪರ್ಕ ಸಾಧನಗಳು ಈ ರಸ್ತೆ, ಕಟ್ಟಡ ಇವೆಲ್ಲವೂ ಕೂಡ. ಇವೊತ್ತು ನಾವು ಯಾವ ಸ್ಥಿತಿಯಲ್ಲಿದ್ದೇವೆ, ಈ ಜಗತ್ತಿನ ಬೇರೆ ರಾಷ್ಟ್ರಗಳು ಚಂದ್ರಲೋಕಕ್ಕೆ ಹೋಗಿ ನೆಲೆಯೂರಲಿಕ್ಕೆ ಪ್ರಯತ್ನ ಮಾಡುತ್ತಿದ್ದಾವೆ, ಮಂಗಳ ಗ್ರಹದಲ್ಲಿ ಜೀವಿಗಳಿದ್ದಾವೆ, ಅಲ್ಲಿಗೆ ಹೋಗಿ ಹೇಗೆ ಸೈಟ್ ಮಾಡುವಂಥದ್ದು, ರಸ್ತೆ ಮಾಡುವಂತದ್ದು ಎಂದು ಹೇಳಿ ಹುಡುಕುತ್ತಿದ್ದಾರೆ. ನಮ್ಮದು ರಸ್ತಯ ಹೊಂಡ ಮುಚ್ಚುವುದೇ ಒಂದು ದೊಡ್ಡ ವಿಜ್ಞಾನ, ನಮ್ಮದು ಒಂದು ದೊಡ್ಡ ಸಾಧನೆ. ಜನತಾ ಮನೆಗಳನ್ನು ಕಟ್ಟುವುದೇ ಸಾಧನೆ, ಅದು ಉರುಳಿ ಬೀಳುವುದೇ ಒಂದು ದೊಡ್ಡಸಾಧನೆ ನಮ್ಮದು. ನಮಗೂ ಅವರಿಗೂ ಇರತಕ್ಕಂಥ ವ್ಯತ್ಯಾಸವನ್ನು ನಾವು ಮನಗಾಣಬೇಕು. ಇವೊತ್ತು ಯಾರೇ ಆಳಲಿ, ಯಾರೇ ವಿರೋಧಪಕ್ಷದಲ್ಲಿ ಕುಳಿತಿರಲಿ, ಅತ್ಯಂತ ಪ್ರಾಮಾಣಿಕವಾಗಿ ನಾವು ಇದನ್ನು ಆಲೋಚನೆ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಉಪಾಧ್ಯಕ್ಷರೇ, ನಾನು ಹೇಳುವಂಥದ್ದು, ನಮ್ಮ ರಾಜ್ಯದಲ್ಲಿ ತಾವು ಹೇಳಿದಿರಿ, ನಾವು ಪ್ರಗತಿ ಮಾಡುತ್ತೇವೆ, ಎಲ್ಲಾ ರಸ್ತೆಗಳನ್ನು ದುರಸ್ಥಿ ಮಾಡುತ್ತೇವೆ, ಎಲ್ಲವನ್ನೂ ಕೂಡ ನಾವು ಮಾಡಿ

ಅಭಿವೃದ್ಧಿಯನ್ನು ಸಾಧಿಸುತ್ತೇವೆ ಎಂದು ಹೇಳಿ ವಚನ ಕೊಟ್ಟು ತಾವು ಇಲ್ಲಿ ಬಂದಿದ್ದೀರಿ, ಈಗಾಗಲೇ ಬೇಡಿಕೆಯ ಮೇಲೆ ಚರ್ಚೆ ನಡೆಯುತ್ತಾ ಇದೆ, ನಾನು ಹೇಳುತ್ತಿದ್ದೇನೆ ಇದು ಅತ್ಯಂತ ಅವೈಜ್ಞಾನಿಕವಾಗಿರತಕ್ಕಂಥ ನಿಮ್ಮ ಸರ್ಕಾರದ ಬೇಡಿಕೆ. ಇದನ್ನು ತೀವ್ರವಾಗಿ ವಿರೋಧಿಸುತ್ತಾ ನಾನೂ ಈ ಚರ್ಚೆಯನ್ನು ಪ್ರಾರಂಭ ಮಾಡುತ್ತಿದ್ದೇನೆ. ಈ ಲೋಕೋಪಯೋಗಿ ಇಲಾಖೆಗೆ ತಾವು ಕೊಟ್ಟಿರತಕ್ಕಂಥ ಹಣ 1995-96ನೇ ಸಾಲಿನಲ್ಲಿ 97.59 ಕೋಟಿ ರೂಪಾಯಿಗಳನ್ನು ಕೊಟ್ಟಿರಿ, ಆಮೇಲೆ ಪುನರ್ ಪರಿಷ್ಕರಣೆ ಮಾಡಿದಿರಿ, ಕೇವಲ 77.59 ಕೋಟಿಗೆ ತಂದು ನಿಲ್ಲಿಸಿದಿರಿ, ಬಜೆಟ್‌ನಲ್ಲಿ ಮೀಸಲಿಟ್ಟಿದಂತಹದ್ದು 1995-96ಕ್ಕೆ 97.59 ಕೋಟಿ, ಆಮೇಲೆ 20 ಕೋಟಿ ಅದರಲ್ಲಿ ಕಡಿತ ಮಾಡಿದರು.

ಇದರಲ್ಲಿ ಖರ್ಚಾಗತಕ್ಕಂಥದ್ದು ಹೇಗಿದೆ ಎಂದರೆ ಈ ಕೇವಲ 77.59 ಕೋಟಿಯಲ್ಲಿ 45.5. ಕೋಟಿ, ನಲವತ್ತೈದೂವರೆ ಕೋಟಿ ರೂಪಾಯಿಗಳು ಹುಬ್ಬಳ್ಳಿ ಅಂಕೋಲ ರಸ್ತೆ, ಕೊಂಕಣ ರೈಲ್ವೆ ಕಾರ್ಪೋರೇಷನ್, ಹೆಚ್.ಎ.ಎಲ್. ವಿಮಾನ ನಿಲ್ದಾಣಗಳಿಗೆ, ಗ್ರ್ಯಾಂಟ್ ಇನ್ ಏಡ್ ಮುಂತಾದವುಗಳಿಗೆ ಹೋಗುತ್ತದೆ. ಉಳಿದಿರತಕ್ಕಂಥ ಹಣದಲ್ಲಿ ನಾವು ಹೊಸ ರಸ್ತೆ ಮಾಡಿದ್ದೇವೆ ದುರಸ್ತಿ ಮಾಡಿದ್ದೇವೆ, ಇವೆಲ್ಲವನ್ನೂ ಕೂಡ ಮಾಡಿದ್ದೇವೆ. ಎಂದರೆ ಎಷ್ಟು ಅಭಿವೃದ್ಧಿಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ? ಎಷ್ಟು ಸಾವಿರ ಕಿಲೋಮೀಟರ್ ರಸ್ತೆ ನಮಗೆ, ಇದೆ, ಇದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಈಗ 1996-97ನೇ ಸಾಲಿನಲ್ಲಿ ನೀವು ಇಟ್ಟಿರತಕ್ಕಂಥ ಹಣ, 1995-96ನೇ ಸಾಲಿನಲ್ಲಿ 77.59 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ, 1996-97ನೇ ಸಾಲಿಗೆ ನೀವು 60.70 ಕೋಟಿ ಮಾತ್ರ ಇಟ್ಟುಕೊಂಡಿದ್ದೀರಿ, ಏಕೆ ಇದು? ಹಾಗಾದರೆ ಎಲ್ಲಾ ಧಾರಣೆಗಳು ಇಳಿದಿದ್ದಾವೆಯೇ? ಜಲ್ಲಿ ರೇಟ್ ಇಳಿದಿದೆಯೇ, ಟಾರ್ ರೇಟ್ ಇಳಿದಿದೆಯೇ, ಲೇಬರ್ ರೇಟ್ ಇಳಿದಿದೆಯೇ? ಇದು ವೈಜ್ಞಾನಿಕವಾಗಿ ಹೇಗೆ ಸರಿ? ಇದನ್ನು ನೀವು ಹೇಗೆ ಸಮರ್ಥಿಸುತ್ತೀರಿ? ದಯಮಾಡಿ ಇದು ನಿಮ್ಮ ಚಿಂತನೆಯ ಅಭಾವವೋ ಅಥವಾ ಜನ ಓಟು ಕೊಟ್ಟಿದ್ದಾರೆ ಹೇಗೆ ಬೇಕಾದರೂ ಕೂಡ ಮಾಡಬಹುದು, ಬೇಕಾದರೆ ಚುನಾವಣೆಗೆ ಒಂದು ವರ್ಷ ಮೊದಲು ಸಾಕಷ್ಟು ಅದಕ್ಕೆ ಹಣ ಕೊಟ್ಟು ಸ್ವಲ್ಪ ಗಡಿಬಿಡಿ ಮಾಡಿ ಎಲ್ಲದ್ದಕ್ಕೂ ಕೂಡ ಉದ್ಘಾಟನೆ ಮಾಡಿ ಆಮೇಲೆ ಮತ್ತೊಂದು ಚುನಾವಣೆಗೆ ಇದನ್ನೆಲ್ಲಾ ರೆಡಿ ಮಾಡಿಕೊಳ್ಳೋಣ ಎನ್ನುವಂಥ ಚಿಂತನೆ ನಿಮ್ಮದೇನಾದರೂ ಇದ್ದರೆ ಇದು ಜನರನ್ನು ಮೋಸ ಮಾಡತಕ್ಕಂಥ ಚಿಂತನೆಯೇ ಹೊರತು ಬೇರೆ ಯಾವುದೂ ಅಲ್ಲ.

ರಸ್ತೆ ದುರಸ್ಥಿಗೆ ಎಸ್.ಆರ್.ರೇಟಿನ ಬಗ್ಗೆ ನಾನು ಹೇಳುತ್ತೇನೆ, ಇದು ಎಷ್ಟು ಅವೈಜ್ಞಾನಿಕವಾಗಿದೆ ಎಂದರೆ ಉಪಾಧ್ಯಕ್ಷರೆ, ಷೆಡ್ಯೂಲ್ ರೇಟ್ ನಿಮ್ಮದು ಏನು ಇದೆ, ಒಂದು ಬಿಲ್ಡಿಂಗ್ ಕಟ್ಟಬೇಕೆಂದರೆ ನೂರು ಸೈಜಿಗಲ್ಲಿಗೆ ನಿಮ್ಮ ಎಸ್.ಆರ್.ರೇಟು 160 ರೂಪಾಯಿ ಇದೆ, ಆದರೆ ಮಾರ್ಕೆಟ್‌ನಲ್ಲಿ 160 ರೂಪಾಯಿಗೆ ನೀವು ಕೊಡಿಸಿಬಿಟ್ಟರೆ ಏನು ಬೇಕಾದರೂ ಕೆಲಸ ಮಾಡಬಹುದು. ಮಾರ್ಕೆಟ್‌ನಲ್ಲಿ ಎಷ್ಟಿದೆ. ನೂರು ಸೈಜುಗಲ್ಲಿಗೆ 225 ರೂಪಾಯಿ ಇದೆ ನನ್ನ ತೀರ್ಥಹಳ್ಳಿಯ ರೇಟ್. ಬಹುಶಃ ಬೇರೆ ಬೇರೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೇಟ್‌ಗಳು ಇರಬಹುದು, ಮರಳು 1 ಸಿ.ಎಸ್.ಟಿ.ಆರ್.ಗೆ. ನಿಮ್ಮ ಷೆಡ್ಯೂಲ್ ರೇಟ್ ಎಷ್ಟಿದೆಯೆಂದರೆ 24.65 ಪೈಸೆ ಇದೆ. ಇವೊತ್ತು ಮಾರ್ಕೆಟ್‌ನಲ್ಲಿ 62 ರೂಪಾಯಿ ಇದೆ. ಯಾರಾದರೂ ಕೆಲಸ ಮಾಡಲಿಕ್ಕೆ ಬರುತ್ತಾರೋ? 20 ಎಂ.ಎಂ.ಜೆಲ್ಲಿ 1 ಸಿ.ಎಸ್.ಟಿ.ಆರ್.ಗೆ 280 ರೂಪಾಯಿ

ಆದರೆ ಓಪನ್ ಮಾರ್ಕೆಟ್‌ನಲ್ಲಿ ವಾಸ್ತವಿಕವಾಗಿ 1 ಸಿ.ಎಸ್.ಟಿ.ಆರ್.ಗೆ. 430 ರೂಪಾಯಿ ಇದೆ, ಇದರ ವ್ಯತ್ಯಾಸ ಎಷ್ಟು ಎಂದು ತಾವು ನೋಡಬೇಕು. ಗಾರೆ ಆಳು ನಿಮ್ಮ ಎಸ್.ಆರ್. ಪ್ರಕಾರ 64.25 ಪೈಸೆ, ಹೆಲ್ಪರ್‌ಗೆ 47 ರೂಪಾಯಿ, ಆದರೆ ಮಾರ್ಕೆಟ್‌ನಲ್ಲಿ ಗಾರೆಯಾಳಿಗೆ ಯಾರೂ ಕೂಡ 64 ರೂಪಾಯಿಗೆ ಸಿಗುವುದಿಲ್ಲ. ನೂರು ರೂಪಾಯಿ ಕಡಿಮೆ ಮೇಸ್ತ್ರೀ ಯಾರೂ ಸಿಗುವುದಿಲ್ಲ.

ನಾವು ನೀವು ಎಲ್ಲರೂ ಕೂಡ ಕೆಲಸ ಮಾಡಿಸಿದ್ದೇವೆ. ಹಾಗಾದರೆ ಎಷ್ಟೊಂದು ವೈಜ್ಞಾನಿಕ ಎಂದು ಹೇಳಿ ತಾವು ನೋಡಬಹುದು. ಪ್ಲಾಸ್ಟಿಂಗ್ ಒಂದು ಚದುರ ಅಡಿಗೆ 34 ರೂಪಾಯಿ, ಇದರಲ್ಲಿ ಮರಳು, ಲೇಬರ್ ಕ್ಯೂರಿಂಗ್ ಎಲ್ಲಾ ಸೇರಿ. ಬರೀ ಲೇಬರ್ ರೇಟ್. ನಾನು ಈಗ ಹೇಳಿದ್ದೇನೆ ಅದು 100 ರೂಪಾಯಿ ಆಗುತ್ತದೆ. ಹಾಗಾದರೆ ಇದು ಎಷ್ಟು ವೈಜ್ಞಾನಿಕ?. ಯಾವ ಅಧಾರದ ಮೇಲೆ ನೀವು ಎಸ್.ಆರ್. ಅನ್ನು ನಿಗಧಿ ಮಾಡುತ್ತೀರಿ? ಎಸ್.ಆರ್. ಅನ್ನು ಏನು ಮಾಡುತ್ತೀರಿ ವರ್ಷೇ ವರ್ಷೇ ಹತ್ತು ಪರ್ಸೆಂಟ್ ಹದಿನೈದು ಪರ್ಸೆಂಟ್ ಏರಿಸಿಕೊಂಡು ತಾವು ಹೋಗುತ್ತಾ ಇದ್ದೀರಿ ಇದು ಅಜಗಜಾಂತರ ವ್ಯತ್ಯಾಸ ಇದೆ. ನಾವು ಇವೊತ್ತು ಇಂಜಿನಿಯರ್‌ಗೆ ಹೇಳುತ್ತೇವೆ, ಕಳಪೆ ಕೆಲಸ ಮಾಡುತ್ತಾನೆ, ಅಥವಾ ಅವನ ಮೇಲೆ ಆ ಇಂಜಿನಿಯರ್ ಇಲಾಖೆ ಮೇಲೆ ಬಹಳ ದೊಡ್ಡ ದೋಷಾರೋಪಣೆಯನ್ನು ನಾವು ಹೊರಿಸುತ್ತಾ ಹೋಗುತ್ತಿದ್ದೇವೆ. ಮೂಲಭೂತವಾಗಿ ಕಳ್ಳರನ್ನು ಮಾಡುತ್ತಿರುವಂತದ್ದು ನಾವೇನೇ.

ನಮ್ಮ ಈ ಅವೈಜ್ಞಾನಿಕವಾಗಿರತಕ್ಕಂಥ ರೇಟನ್ನು ನಿಗಧಿ ಮಾಡುವುದರ ಮೂಲಕ ವಾಸ್ತವಿಕ ಸಂಗತಿಯನ್ನು ಅರ್ಥಮಾಡಿಕೊಳ್ಳದೆಯೇ ನಾವು ಈ ರೀತಿಯ ಒಂದು ದರವನ್ನು ನಿಗದಿ ಮಾಡಿ ಹಣವನ್ನು ವಿನಿಯೋಗ ಮಾಡುವುದರಿಂದಾಗಿ ಇದು ಆಗುತ್ತಿದೆ. ಇವೊತ್ತು ದುರಸ್ಥಿ, ವಾರ್ಷಿಕ ದುರಸ್ಥಿಗೆ ನೀವು ಎಷ್ಟು ಇಡುತ್ತಿದ್ದೀರಿ ಎಂದರೆ, ಸ್ಟೇಟ್ ಹೈವೆಗೆ 1 ಕಿಲೋಮೀಟರ್‌ಗೆ 12,500 ಓ.ಡಿ.ಆರ್.ಗೆ. 4,491 ರೂಪಾಯಿ, ಎಂ.ಡಿ.ಆರ್.ಗೆ 11,500 ಇದು ವಾರ್ಷಿಕ ದುರಸ್ಥಿಗಾಗಿ. ಇದರಿಂದ ಏನು ಮಾಡಬಹುದು? 7-8 ವರ್ಷಗಳಿಂದ ಇದೇ ರೇಟ್ ಇದೆ ಇದರಲ್ಲಿ ಏನೂ ವ್ಯತ್ಯಾಸ ಆಗಲಿಲ್ಲ. ಒಂದು ಬ್ಯಾರೆಲ್ ಟಾರ್ 600 ರೂಪಾಯಿ ನಾಲ್ಕು ವರ್ಷದ ಹಿಂದೆ ಇತ್ತು, ಇವೊತ್ತು .1100 ರೂಪಾಯಿ ಕೊಟ್ಟರೂ ಸಹ ಒಂದು ಬ್ಯಾರೆಲ್ ಟಾರ್ ಸಿಗುತ್ತಾ ಇಲ್ಲ. ಒನ್ ಟು ಡಬಲ್ ಆಗಿದೆ ಈ ಟಾರ್‌ನ ರೇಟ್. ಆಧರೆ ನೀವು ಕೊಡುತ್ತಾ ಇರತಕ್ಕಂಥ ರೇಟ್ ಒಂದೇನೇ. ಹಾಗಾದರೆ ಎಲ್ಲಿ ಹೊಂಡಾವನ್ನು ಮುಚ್ಚಿಸುವುದಕ್ಕೆ ಸಾಧ್ಯವಾಗುತ್ತದೆ,? ಎಲ್ಲಿ ಗುಂಡಿಗಳನ್ನು ಮುಚ್ಚಲಿಕ್ಕೆ ಸಾಧ್ಯವಾಗುತ್ತದೆ? ಎಲ್ಲಿ ನಾವು ವಾಹನವನ್ನು ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ.?

2.20 ಪಿ.ಎಂ.

ಇದರ ಬಗ್ಗೆ ನಾವು ಬಹಳ ಆಲೋಚನೆಯನ್ನು ಮಾಡಬೇಕಾಗುತ್ತದೆ. ಈಗ ನಾವು ಬಹಳ ಸುಸ್ಥಿತಿಯಲ್ಲಿದ್ದೇವೆ, ಮಾನ್ಯ ಹಣಕಾಸಿನ ಮಂತ್ರಿಗಳು ಇಲ್ಲಿ ಇಲ್ಲ. ನಾವು ಪ್ರತಿ ಮೂರು ತಿಂಗಳಿಗೊಮ್ಮೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಏನೂತೊಂದರೆ ಇಲ್ಲವೆಂದು ಹೇಳಿದರು. ಇವತ್ತೂ ಕೂಡ ಸಂಪರ್ಕ ಮತ್ತು ಕಟ್ಟಡಗಳು ಉತ್ತರ ಮತ್ತು ದಕ್ಷಿಣ ಎರಡು ರಾಜ್ಯಗಳಿಂದ ಮೂವತ್ತೈದು ಕೋಟಿ ರೂಪಾಯಿಗಳು, ಮಾರ್ಚಿ ತಿಂಗಳಿನಿಂದ ಬಾಕಿ ಇದೆ. ಇವತ್ತಿಗೂ ನೀವು ಈ

ಮೂವತ್ತೈದು ಕೋಟಿ ರೂಪಾಯಿಗಳ ಪೇಮೆಂಟನ್ನು ಮಾಡಿಲ್ಲ. ಈಗ ಪರಿಸ್ಥಿತಿ ಹೇಗೆ ಆಗಿದೆ ಎಂದರೆ ಇವತ್ತು ಕೂಡ ಯಾರು ಗೌರವಸ್ಥ ಕಂಟ್ರಾಕ್ಟ್‌ದಾರರು ಕೆಲಸವನ್ನು ಮಾಡಲು ಮುಂದೆ ಬರುವುದಿಲ್ಲ. ಅವರು ತಮ್ಮ ಹೆಂಡತಿ ಮಕ್ಕಳ ಕೊರಳಿನಲ್ಲಿರುವಂತಹ ಚಿನ್ನವನ್ನು ಅಡವಿಟ್ಟು ಇವತ್ತು ನಿಮ್ಮಿಂದ ಹಣ ಬರುತ್ತದೆಂದು ಅವರು ಕೆಲಸಕ್ಕೆ ಬಂಡವಾಳವನ್ನು ಹಾಕಿದ್ದಾರೆ. ಇಪ್ಪತ್ತೈದು ಪರ್ಸೆಂಟ್, ಮೂವತ್ತು ಪರ್ಸೆಂಟ್‌ಗಳಲ್ಲಿ ಯಾವ್ಯಾವುದೊ ಫೈನಾನ್ಸ್‌ನಿಂದ ಬಡ್ಡಿಯಲ್ಲಿ ಹಣವನ್ನು ತಂದಿದ್ದಾರೆ. ಹೀಗಾಗಿ ಅವರೆಲ್ಲಾ ಪಾಪರ್ ಆಗುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಕಳೆದ ಸಾರಿ ನಮ್ಮ ವಿಷಯ ಸಮಿತಿಯವರು ಸೂಚನೆಯನ್ನು ಮಾಡಿದ್ದರು. ಸಕ್ಕರೆ ಕಾರ್ಖಾನೆಗಳಿಂದ ಕಬ್ಬಿನ ಮೇಲೆ ತೆರಿಗೆಯನ್ನು ವಿಧಿಸಿ ಇದಕ್ಕೆ ಹಣವನ್ನು ಖರ್ಚು ಮಾಡಬೇಕೆಂದು ನಿರ್ಧರಿಸಿದ್ದರು. ಸುಮಾರು ಎಂಟು ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದೀರಿ. ಆದರೆ ರಸ್ತೆಗಳಿಗೋಸ್ಕರ ಬಿಡುಗಡೆ ಮಾಡಿರುವಂಥ ಹಣ ಕೇವಲ 4 ಕೋಟಿ ರೂಪಾಯಿಗಳು ಮಾತ್ರ. ಉಳಿದಂತಹ ಹಣವನ್ನು ನೀವು ಬೇರೆ ಬೇರೆ ವಿಧಾನಗಳಿಗೆ ಖರ್ಚು ಮಾಡಿಕೊಂಡಿದ್ದೀರಿ. ಇದು ಯಾವ ರೀತಿಯಲ್ಲಿ ನ್ಯಾಯವಾಗುತ್ತದೆ? ಸರಿಯಾಗುತ್ತದೆ. ಕಬ್ಬು ಬೆಳೆಯುವಂತಹ ರೈತರ ಮೇಲೆ ತೆರಿಗೆ ಹೋಗಿದೆ.

ಆದರೂ ಅವರಿಗೆ ಒಳ್ಳೆಯ ರಸ್ತೆಗಳನ್ನು ಕೊಡಲಿಲ್ಲ. ಅವನು ಲಾರಿ ಮಾಲೀಕರನ್ನು ಕರೆದರೆ ಅವರು ಬರಲು ಒಪ್ಪುವುದಿಲ್ಲ. ನಿಮ್ಮಿಂದ ರಸ್ತೆಯನ್ನು ದುರಸ್ತಿ ಮಾಡಲು ಸಾಧ್ಯವಾಗಿಲ್ಲ. ಹಿಂದಿನ ವರ್ಷವೆಲ್ಲಾ ನೀವು ಲೈಫ್ ಟ್ಯಾಕ್ಸ್ ಅನ್ನು ವಾಹನಗಳ ಮೇಲೆ ವಸೂಲಿ ಮಾಡಿದ್ದೀರಿ. ಒಂದು ಮಾರುತಿ ಕಾರನ್ನು ತೆಗೆದುಕೊಂಡರೆ ಇಪ್ಪತ್ತು ಸಾವಿರ ರೂಪಾಯಿಗಳೋ ಎಷ್ಟೋ ತೆರಿಗೆಯನ್ನು ಕೊಡಬೇಕಾಗುತ್ತದೆ. ಕಾರನ್ನು ತೆಗೆದುಕೊಂಡ ಕಾರಿನ ಮಾಲೀಕನು ನಿಮಗೆ 20 ಸಾವಿರ ರೂಪಾಯಿಗಳ ಲೈಫ್ ತೆರಿಗೆ ಕೊಟ್ಟು ಸುಖವಾಗಿ ಹೋಗಲು ರಸ್ತೆಗಳಲ್ಲಿ ಆಗುತ್ತದೆಯೇ ಆ ರಸ್ತೆಗಳನ್ನು ಏಕೆ ದುರಸ್ತಿ ಮಾಡಿಸಿಲ್ಲ?. ನೀವು ಕೊಡುತ್ತಿರುವಂತಹ ಹಣ ನಾವು ಕೊಟ್ಟಿರುವಂಥ ರೋಡಿನ ತೆರಿಗೆಯ ಹಣ ಅಥವಾ ಲೈಫ್ ಟ್ಯಾಕ್ಸ್ ಹಮ ಏನಿದೆ ಅದರಲ್ಲಿ ಯಾವುದೇ ಒಂದು ಭಾಗದ ಹಣವನ್ನು ಹಾಕುತ್ತಾ ಇಲ್ಲ. ಕಟ್ಟಡಗಳ ನಿರ್ಮಾಣ ವೆಚ್ಚ, ಇವತ್ತಿನ ದಿವಸ ನಮ್ಮ ಸಾರ್ವಜನಿಕ ಕಟ್ಟಡಗಳು ಯಾವ ಪರಿಸ್ಥಿತಿಯಲ್ಲಿವೆ. ಇದಕ್ಕೆ ನೀವು ಕೊಡುತ್ತಿರುವಂತಹ ಬೆಲೆ ಏನು?- 1940ರ ನಂತರ 1975ರ ನಡುವೆ ಮಾಡಿರತಕ್ಕಂಥ ಕಟ್ಟಡಗಳಿಗೆ ಅದರ ಮೂಲ ಬೆಲೆಯ ಶೇ.5ರಷ್ಟನ್ನು ನೀವು ಕೊಡುತ್ತಾ ಇದ್ದೀರಿ. ಅಂದಿನ ಧಾರಣೆ ಬಹಳ ಕಡಿಮೆ ಇತ್ತು.

ಆಗ 25 ಸಾವಿರಕ್ಕೆ ಕಟ್ಟಿರುವಂಥ ಕಟ್ಟಡ ಇವತ್ತು ನಾವು ಅಂತಹ ಕಟ್ಟಡವನ್ನು ಕಟ್ಟಲು ಹೋದರೆ ಎರಡೂವರೆ ಲಕ್ಷ ರೂಪಾಯಿಗಳಾಗುತ್ತದೆ. ಆ ಒಂದು ಬೆಲೆಯನ್ನು ನಿಗದಿ ಮಾಡಿರುವಂತಹ ಹಿನ್ನಲೆಯಲ್ಲಿ ವಾರ್ಷಿಕ ದುರಸ್ತಿ ವೆಚ್ಚ ಶೇ. 5 ಇದೆ.1975ರ ನಂತರ ಕಟ್ಟಿದ ಕಟ್ಟಡಗಳಿಗೆ ಕೇವಲ ಶೇ. 3ರಷ್ಟು ಅಂದರೆ ಇಷ್ಟರಲ್ಲಿ ಸುಣ್ಣ ಬಣ್ಣವನ್ನು ಮಾಡುವುದಕ್ಕೂ ಆಗುವುದಿಲ್ಲ. ನಮ್ಮ ಎಲ್ಲಾ ಸಾರ್ವಜನಿಕ ಕಟ್ಟಡಗಳು ಉರುಳಿ ಬೀಳುತ್ತಿವೆ. ಅದು ಹೈಸ್ಕೂಲ್‌ಗಳಿರಬಹುದು, ಆಸ್ಪತ್ರೆಗಳು ಇರಬಹುದು, ದೊಡ್ಡ ದೊಡ್ಡ ಕೋರ್ಟ್ ಬಿಲ್ಡಿಂಗ್‌ಗಳು ಇರಬಹುದು. ಇದನ್ನು ಉಳಿಸಿಕೊಳ್ಳುವುದಕ್ಕೆ ಏನು ಕಾರ್ಯಕ್ರಮ ಇದೆ. ಈಗ ಅವು ಉರುಳಿ ಹೋದರೆ ನಾವು ಮತ್ತೆ ಹೊಸದಾಗಿ ಕಟ್ಟುತ್ತೇವೆಂದರೆ ನಮ್ಮ ಹತ್ತಿರ ಹಣವಿಲ್ಲ.

ಈ ವಾರ್ಷಿಕ ದುರಸ್ತಿ ವೆಚ್ಚದ ಹಣವನ್ನು ಜಾಸ್ತಿ ಮಾಡಲು ವಿಷಯ ಸಮಿತಿಯವರು ಶಿಫಾರಸ್ಸು ಮಾಡಿದ್ದಾರೆ. ಪ್ರತಿ ವರ್ಷ ಇದನ್ನು ಜಾಸ್ತಿ ಮಾಡುವಂತಹ ಕ್ರಮವೇ ಇಲ್ಲ, ಅವೈಜ್ಞಾನಿಕವಾದ ವಿಧಾನದಲ್ಲಿ ನಿರ್ಧಾರ ಮಾಡಿದ್ದೇವೆ. ಹೀಗಾಗಿ ರಾಷ್ಟ್ರೀಯ ಹೆದ್ದಾರಿಗೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆಂದು ಹೇಳಿ, ಕಳೆದ ಸಾರಿ ಇಪ್ಪತ್ತೈದು ಕೋಟಿ ರೂಪಾಯಿಗಳನ್ನು ನಮ್ಮ ಹಣದಿಂದ ಖರ್ಚು ಮಾಡಿದ್ದೀರಿ. ಇವತ್ತಿಗೂ ಸಹ ಈ ಹಣವನ್ನು ಕೇಂದ್ರ ಸರ್ಕಾರದಿಂದ ಪಡೆಯಲಿಲ್ಲ.

ಇದರ ಪರಿಣಾಮವೇನಾಗುತ್ತದೆ ಎಂದರೆ ನಮ್ಮ ಗ್ರಾಮಾಂತರ ರಸ್ತೆಗಳು ಮತ್ತು ರಾಜ್ಯ ಹೆದ್ದಾರಿ ರಸ್ತೆಗಳಿಗೆ ಈ 25 ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡಿದ್ದೇವೆ. ಹೀಗೆ ಮಾಡದೆ ಹೋಗಿದ್ದರೆ ಕನಿಷ್ಠ ಬೇರೆ ಬೇರೆ ರಸ್ತೆಗಳಿಗೆ ಮತ್ತು ಕಟ್ಟಡಗಳಿಗೆ ಉಪಯೋಗವಾಗುತ್ತಿತ್ತು. ಇವತ್ತು ಎ.ಪಿ.ಎಂ.ಸಿ. ರಸ್ತೆಗಳಿಗೆ ಹಣವನ್ನು ಕೊಟ್ಟಿದ್ದೇವೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೀರಿ. 124 ವಿಧಾನಸಭಾ ಕ್ಷೇತ್ರಗಳಲ್ಲಿ ಎ.ಪಿ.ಎಂ.ಸಿ. ರಸ್ತೆಗಳನ್ನು ನೇರವಾಗಿ ಮಾಡಬೇಕೆಂದು ಹೇಳಿದ್ದೀರಿ. ಅವರಲ್ಲಿ ಇಂಜಿನಿಯರ್ಸ್ ಇಲ್ಲ ಸಲಕರಣೆಗಳು ಇಲ್ಲ, ಪರಿಕರಗಳು ಇಲ್ಲ, ಅವರಲ್ಲಿ ಏನೂ ಇಲ್ಲ, ಅವರಿಗೆ 124 ವಿಧಾನಸಭಾ ಕ್ಷೇತ್ರಗಳಲ್ಲಿ ಕೆಲಸವನ್ನು ಮಾಡಲು ವಹಿಸಿಕೊಟ್ಟಿದ್ದೀರಿ. ಇದನ್ನು ಮಾಡಲಿಲ್ಲ. ಕಳೆದ ಬಾರಿ ಡಾಂಬರ್‌ಗೆ ತಾವು ಮದ್ರಾಸ್ ರೀಫೈನರಿಸ್‌ಗೆ ಆದೇಶವನ್ನು ಕೊಟ್ಟಿರಿ.

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ : ಮಾನ್ಯ ಉಪಾಧ್ಯಕ್ಷರೆ, ಕೋರಂ ಇಲ್ಲ ಸಭೆ ನಡೆಸುವುದು ಹೇಗೆ?

ಉಪಾಧ್ಯಕ್ಷರು : ಈಗ ಊಟಕ್ಕೆ ಹೋಗಿದ್ದಾರೆ ಬರುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ಊಟಕ್ಕೆ ಹೋಗಿದ್ದಾರೆ ಬರುತ್ತಾರೆ. ಮಾನ್ಯ ಸದಸ್ಯರುಗಳಿಗೆ ಅನುಕೂಲ ಮಾಡಲು ಇವತ್ತು ಸದನ ನಡೆಸುತ್ತಿದ್ದೇವೆ. ಊಟಕ್ಕೆ ಎಂದು ಎದ್ದರೆ ತೊಂದರೆಯಾಗುತ್ತದೆ. ಸಭೆಯನ್ನು ಮುಂದುವರೆಸಿ ಬೇಗ ಬೇಕಾದರೆ ಮುಗಿಸೋಣ.

ಶ್ರೀ ಅರಗ ಜ್ಞಾನೇಂದ್ರ : ಇನ್ನು ಇದರ ನಿಗದಿ ಮಾಡುವಾಗ ಷೆಡ್ಯೂಲ್ ರೇಟನ್ನು ನಿಗದಿ ಮಾಡಿ ನಾವು ವರ್ಷ ವರ್ಷ ಕಳುಹಿಸಬೇಕಾಗುತ್ತದೆ. ಷೆಡ್ಯೂಲ್ ರೇಟ್ ನಿಗದಿ ಮಾಡುವಂಥಾದ್ದು ಮಾರ್ಚಿ ತಿಂಗಳಲ್ಲಿ ಮಾಡಬೇಕಾಗುತ್ತದೆ. ಆದರೆ ಆ ಷೆಡ್ಯೂಲ್ ರೇಟಿನ ದರ ಪಟ್ಟಿ ಏನು ಇದೆ. ಅದು ಇವತ್ತಿಗೂ ಕೂಡ ಅಂದರೆ ಈಗ ನಾವು ಆಗಸ್ಟ್ ತಿಂಗಳಲ್ಲಿ ಇದ್ದೇವೆ. ಇವತ್ತಿಗೂ ನಮ್ಮ ಡಿವಿಜನ್‌ಗಳಿಗೆ ಬಂದು ತಲುಪಿಲ್ಲ. ಅವರು ಯಾವ ಆಧಾರದ ಮೇಲೆ ಕೆಲಸವನ್ನು ಮಾಡಿಸಬೇಕೆಂದು ನಾವು ಹೇಳುವುದಿಲ್ಲ. ಈ ರೀತಿಯಲ್ಲಿ ಇಲಾಖೆಗೆ ಕೊಡುವಂತಹ ಗಮನ ಸರ್ಕಾರದ ಕಡೆಯಿಂದ ಅತ್ಯಂತ ಕಡಿಮೆ ಇದೆ. ಮತ್ತೆ ಭ್ರಷ್ಟಚಾರದ ಬಗ್ಗೆ ಹೇಳಿದರು. ಪರ್ಸೆಂಟೇಜ್ ಬಗ್ಗೆಯೂ ಹೇಳಿದರು. ನಾನೂ ಕೂಡ ಇದರ ಬಗ್ಗೆ ಬರೆದು ಇಟ್ಟುಕೊಂಡಿದ್ದೇನೆ. ಇದು ಓಪನ್ ಸೀಕ್ರೆಟ್, ಇದು ಎಲ್ಲರಿಗೂ ಗೊತ್ತಿದೆ. 'ಎಷ್ಟೆಷ್ಟು ಪರ್ಸೆಂಟ್ ಇದೆ, ಎಷ್ಟು ಇದೆ ಎಂದು ಹೇಳಿ. ಯಾವ ಇಂಜಿನಿಯರ್‌ಗಳೇ ಆಗಲಿ, ನಮ್ಮ ಹತ್ತಿರದ ನೆಂಟರೇ ಆಗಲಿ ಅದರಲ್ಲಿ ಏನೂ ಕನ್‌ಸಿಷನ್ ಇರುವುದಿಲ್ಲ. ಏಕೆಂದರೆ ಅವನು ಬೇರೆಯವರಿಗೆ ಕೊಡಬೇಕಾಗುತ್ತದೆಂದು ಕನ್ಸೆಷನ್ ಇರುವುದಿಲ್ಲ. ಆದ್ದರಿಂದ ಅದನ್ನು ನಾನು ಚರ್ವಿತ ಚರ್ವಣ ಮಾಡುವುದಕ್ಕೆ ಹೋಗುವುದಿಲ್ಲ. ಈ ಇಲಾಖೆ ಎಷ್ಟರಮಟ್ಟಿಗೆ ಪ್ರಗತಿಯಾಗಿದೆ ಎಂದರೆ ಕೆಲವು ವರ್ಷಗಳ ಹಿಂದೆ ಹಣವನ್ನು

ಗುತ್ತಿಗೆದಾರರಿಗೆ ಕೊಡುತ್ತಿದ್ದರು. ಗುತ್ತಿಗೆದಾರರಿಗೆ ಕೊಟ್ಟಂತಹ ಸ್ವಲ್ಪ ಹಣವನ್ನು ಇಂಜಿನಿಯರ್‌ಗಳು ತೆಗೆದುಕೊಳ್ಳುತ್ತಿದ್ದರು. ಆದರೆ ಇವತ್ತಿನ ಪ್ರಗತಿ ಏನೆಂದರೆ ಹಣವನ್ನು ಡ್ರಾ ಮಾಡಿಕೊಳ್ಳುವವನು ಇಂಜಿನೀಯರ್, ಸ್ವಲ್ಪ ಹಣವನ್ನು ಗುತ್ತಿಗೆದಾರನಿಗೆ ಕೊಡುವುದು. ಇದರಲ್ಲಿ ವ್ಯತ್ಯಾಸವಿರುವುದು ಇಷ್ಟೆ, ಇವತ್ತು ಟೆಂಡರ್ ಕರೆಯುವಂತಹ ಪದ್ಧತಿ ಇಲ್ಲ, ಇಲಾಖೆಯವರ ಕೆಲಸವಾಗಿರುತ್ತದೆ. ಏಕೆಂದರೆ ಮೂರನೇ ಒಂದು ಭಾಗ ಹಣವನ್ನು ಅದಕ್ಕೆ ಇಡುವುದಿಲ್ಲ. ಈ ಡಿಪಾರ್ಟ್‌ಮೆಂಟಲ್ ವರ್ಕ್ ಹಣವನ್ನು ಹೊಡೆಯಲು ಒಂದು ದೊಡ್ಡ ಸಾಧನವೆಂದು ಇವತ್ತು ಎಲ್ಲರಿಗೂ ಗೊತ್ತಿದೆ. ಲೋಕೋಪಯೋಗಿ ಇಲಾಖೆಗೆ ಯಾವ ರೀತಿಯಲ್ಲಿ ನಾವು ಆದ್ಯತೆಯನ್ನು ಕೊಡಬೇಕಾಗಿತ್ತೋ ಇದನ್ನು ಕೊಡದೆ, ಯಾರು ಭ್ರಷ್ಟರು, ಅಯೋಗ್ಯರು ಇದ್ದಾರೆ, ತಿಮಿಂಗಲಗಳು ಇದ್ದಾವೆ. ಅವರುಗಳನ್ನು ಸಾಕಿಕೊಂಡು ಬಂದಿದ್ದೇವೆ.

ಮೊನ್ನೆ ಗ್ರಾಮೀಣ ಸಚಿವರು ಇದ್ದರು ಹೇಳಿದೆ. ನಮಗೆ ಕೇಂದ್ರ ಸರ್ಕಾರದಿಂದ ಶಿವಮೊಗ್ಗ ಜಿಲ್ಲೆಗೆ ನಾನ್ ಕವರ್ಡ್ ವಿಲೇಜುಗಳಿಗೆ ಮತ್ತು ಪಾರ್ಷಿಯಲಿ ಕವರ್ಡ್ ವಿಲೇಜ್‌ಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೋಸ್ಕರ ಸುಮಾರು 50 ಲಕ್ಷ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬಂತು. ಇದು ಒಂದು ಚಿಕ್ಕ ಉದಾಹರಣೆ, ಈ ಹಣವನ್ನು ಒಬ್ಬ ಅಧಿಕಾರಿ ಮತ್ತು ಶಿವಮೊಗ್ಗದ ಜಿಲ್ಲಾಪರಿಷತ್ತಿನ ಅಧ್ಯಕ್ಷರು ಸೇರಿ ಬೇರೆ ಬೇರೆ ಕಂಪನಿಗಳಿಗೆ ಆದೇಶವನ್ನು ಕೊಟ್ಟು ಯಾವ ಸಲಕರಣೆಗಳನ್ನು ಅವಶ್ಯಕತೆ ಇಲ್ಲವೋ ಅವುಗಳನ್ನು ಮಾರ್ಚಿ ತಿಂಗಳ ಕೊನೆಯಲ್ಲಿ ತೆಗೆದುಕೊಂಡು ಆ ಹಣವನ್ನು ಪೂರ್ತಿಯಾಗಿ ವ್ಯವಸ್ಥಿತವಾಗಿ ಪರ್ಸಂಟೇಜ್ ತಿನ್ನುವುದಕ್ಕೋಸ್ಕರ ವಿನಿಯೋಗ ಮಾಡಿದ್ದಾರೆ. ಬಾವಿಗಳನ್ನು ಮಾಡಿದಂತಹ ಜನರಿಗೆ ಹಣವನ್ನು ಕೊಡುವುದಕ್ಕೆ ದುಡ್ಡು ಇಲ್ಲ. ಬಾವಿಗಳೆಲ್ಲಾ ಜರಿದು ಹೋಗುತ್ತಿರುವಂಥ ವಿಷಯವು ತಮಗೆ ಗೊತ್ತಿದೆ. ಲೋಕೋಪಯೋಗಿ ಇಲಾಖೆ ಜಿಲ್ಲಾಪರಿಷತ್ತಿನ ಇಂಜಿನೀಯರಿಂಗ್ ವಿಭಾಗ ಮಾಡಿರತಕ್ಕಂಥಹ ಬಾವಿಗಳು ಕುಸಿದು ಹೋಗುತ್ತಿವೆ. ಮಲೆನಾಡಿನ ಭಾಗದಲ್ಲಿ ಬಹಳಷ್ಟು ಪ್ರಮಾಣದಲ್ಲಿ ಬರುತ್ತಿದೆ.

ಇದರಿಂದ ಆ ಬಾರಿಗಳನ್ನು ರಕ್ಷಣೆ ಮಾಡಿಕೊಳ್ಳಲು ಆಗದೇ ಆ ಕಂಟ್ರಾಕ್ಟರ್‌ಗಳು ಬಾವಿಗಳಿಗೆ ರಿಂಗ್‌ಗಳನ್ನು ಇಳಿಸದೇ ಕಲ್ಲು ಕಟ್ಟದೆ ಮಾಡಿರುವಂತಹ ಬಾವಿಗಳೆಲ್ಲಾ ಸರ್ವನಾಶವಾಗುತ್ತಿವೆ. ಯಾವ ಒಂದು ಒಳ್ಳೆಯ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರ ಇದಕ್ಕೆ ಹಣವನ್ನು ಕೊಡುತ್ತಿದೆಯೇ ಇದನ್ನು ಕೂಡ ಸದ್ವಿನಿಯೋಗ ಮಾಡದೆ ಆ ಜನರಿಗೆ ವಂಚನೆ ಮಾಡಿರುವುದು ನಡೆದಿದೆ. ನಾನು ಇನ್ನೊಂದು ಸಲಹೆಯನ್ನು ಹೇಳುತ್ತೇನೆ. ಮಲೆನಾಡಿನ ಭಾಗ ಮತ್ತು ಬೇರೆ ಬೇರೆ ಭಾಗಗಳಿಗೆ ಬೇರೆ ಬೇರೆ ಆಗಿರುವಂತಹ ಎಸ್.ಆರ್.ಅನ್ನು ನಿರ್ಧಾರ ಮಾಡಬೇಕು ಮತ್ತು ಟಾರ್‌ಗೆ ಸಂಬಂದಪಟ್ಟಂತೆ ಒಂದು ಬೇರೆ ಬೇರೆ ಯಾಗಿ ನಿಗದಿ ಮಾಡಬೇಕು. ಟಾರಿನ ಒಂದು ರಸ್ತೆ ಮಾಡಿದ ಮೇಲೆ ಇದು 5-6 ವರ್ಷಗಳಲ್ಲಿ ರೀ ಆಸ್ಫಾಲ್‌ಟಿಂಗ್ ಮಾಡಬೇಕಾಗುತ್ತದೆ. ಇವತ್ತು ರಸ್ತೆಗಳನ್ನು ಮಾಡಿ 12-13 ವರ್ಷಗಳಾಗಿದೆ, ಅದೇ ರಸ್ತೆಯಲ್ಲಿ ಓಡಾಡುತ್ತಿದ್ದೇವೆ. ಸಾಕಷ್ಟು ಟನ್‌ಗಳ ಲಾರಿಗಳು ಓಡಾಡುತ್ತಾ ಇದೆ. ಇವತ್ತು 8-10ಟನ್‌ಗಳಿಗೆ ಮಾಡಿರುವಂತಹ ರಸ್ತೆಗಳು, ಇದರ ಮೇಲೆ 15 ಟನ್‌ಗಳ ವಾಹನಗಳು ಓಡಾಡುತ್ತಿವೆ. ನಿಮ್ಮ ಕಡೆ ಕಡಕಲ್ ರೊಟ್ಟಿ ಎಂದು ಹೇಳುತ್ತಾರೆ. ಅದನ್ನು ಮುರಿದರೆ ಏನು ಆಗಬಹುದೋ ಆ ಪರಿಸ್ಥಿತಿ ಈ ನಮ್ಮ ಟಾರ್ ರಸ್ತೆಗಳು ಆಗಿದೆ.

ಈ ರಸ್ತೆಗಳು ಉಳಿಯುವುದು ಯಾವ ರೀತಿ? ಇದನ್ನು ಸರಿಯಾದ ರೀತಿಯಲ್ಲಿ ಕೂಲಂಕುಷವಾಗಿ ಯೋಚನೆ ಮಾಡಿ ಈ ಒಂದು ಕಾರ್ಯಕ್ರಮವನ್ನು ಯಶಸ್ವಿ ಮಾಡದೇ ಹೋದರೆ, ನಮಗೆ ಯಾರಿಗೂ ಗೌರವ ಬರುವುದಿಲ್ಲ. ನಮ್ಮ ಜನ ಹೇಗೆಂದರೆ, ರಸ್ತೆಯಲ್ಲಿ ಹೋತ್ತಿರುವಾಗ ಜಲ್ಲಿಕಲ್ಲನ್ನು ಎಡವಿದರೂ ಕೂಡ, ಇದನ್ನು ಈ ಎಂಎಲ್ಎ ಮಾಡಿದ್ದಕ್ಕೆ ಹೀಗಾಯಿತೆಂದು ಇವತ್ತು ಬೈಯ್ಯುತ್ತಾರೆ. ಅಧಿಕಾರಿ ಈ ರೀತಿ ಮಾಡಿದ್ದಾನೆ ಅಥವಾ ಸರ್ಕಾರ ಹೀಗೆ ಮಾಡಿದೆ ಎಂದು ಯಾರಿಗೂ ಹೇಳುವುದಿಲ್ಲ. ಅಲ್ಲಿ ಯಾರು ಜನರ ಪ್ರತಿನಿಧಿ ಇದ್ದಾನೆ, ಅವನು ಪ್ರತಿನಿತ್ಯ ಈ ಬೈಗುಳಗಳನ್ನು ಕೇಳಬೇಕಾಗುತ್ತದೆ. ದಯಮಾಡಿ ಇದನ್ನು ತೊಲಗಿಸಬೇಕು. ಇನ್ನೊಂದು ವಿಚಾರವನ್ನು ನಾನು ಹೇಳುತ್ತಿದ್ದೇನೆ. ಈ ಐಬಿಗಳಿದ್ದಾವೆ, ವಿಶೇಷವಾಗಿ ಸರ್ಕ್ಯೂಟ್ ಹೌಸ್‌ಗಳು, ಬಂಗಲೆಗಳಿದ್ದಾವೆ. ಸನ್ಮಾನ್ಯ ಅಧ್ಯಕ್ಷರೆ, ಬ್ರಿಟಿಷರ ಕಾಲದಲ್ಲಿ ಯಾವಾಗಲೋ ಮಾಡಿದರು. ಅದು ಅವರ ಸಂಸ್ಕೃತಿ, ಅವರ್ಯು ನಮ್ಮ ಮನೆಗಳಲ್ಲೆಲ್ಲೂ ಊಟ ಮಾಡುತ್ತಿರಲಿಲ್ಲ, ಎಲ್ಲಾ ತಿಂಡಿಯನ್ನು ತಿನ್ನುತ್ತಿರಲಿಲ್ಲ, [illegible] ಅವರು ಉಳಿದುಕೊಳ್ಳುವುದಕ್ಕೆ ಸರಿಯಾದ ವ್ಯವಸ್ಥೆ ಇರಲಿಲ್ಲ.

ಈ ಐಬಿ ಸಂಸ್ಕೃತಿಯನ್ನು ನಾವು ಇವತ್ತು ಬಹಳ ದೊಡ್ಡ ರೀತಿಯಲ್ಲಿ ಹಚ್ಚಿಕೊಂಡಿದ್ದೇವೆ. ಅಲ್ಲಿ ಹೋಗುವುದು ಕೇವಲ ಶಾಸಕ, ಮಂತ್ರಿ ಅಥವಾ ಯಾರೋ ಅಧಿಕಾರಿ ಇವರುಗಳಿಗೆ ಮಾತ್ರ ಆ ಐಬಿಗಳು ಸೀಮಿತವಾಗಿಲ್ಲ. ಕುಡಿದು, ತಿಂದು ಗ್ಯಾಂಬ್ಲಿಂಗ್ ಮಾಡುವ ವ್ಯವಹಾರದ ಒಂದು ದೊಡ್ಡ ಕೇಂದ್ರಗಳಾಗಿದ್ದಾವೆ. ನಾನೊಬ್ಬ ಶಾಸಕನಾಗಿ ಇವತ್ತು ನಾನು ಐಬಿ ಬಂಗಲೆಗೆ ಹೋದರೆ ರೂಂ ಇಲ್ಲ ಅಥವಾ ಇಲ್ಲಿಂದ ಒಬ್ಬ ರಾಜ್ಯ ಮಟ್ಟದ ಅಧಿಕಾರಿ ಹೋದರೆ ಇರುವುದಕ್ಕೆ ಅವನಿಗೂ ರೂಂ ಇಲ್ಲವೆಂದು ಹೇಳುತ್ತಾರೆ. ಆದರೆ ಈ ರೀತಿ ಗ್ಯಾಂಬ್ಲಿಂಗ್ ಯಾರು ಮಾಡುತ್ತಿದ್ದಾರೆ ಇವರಿಗೆ ಇವತ್ತು ಐಬಿನಲ್ಲಿ ಸ್ಥಳವಿದೆ. ನಾನು ಮೊನ್ನೆ ದಿವಸ ಒಂದು ಪ್ರಶ್ನೆಯನ್ನು, ಕೇಳಿದ್ದೆ ಐಬಿಗಳಿಂದ, ಲೋಕೋಪಯೋಗಿ ಇಲಾಖೆಯಲ್ಲಿರುವ ಸರ್ಕ್ಯೂಟ್ ಹೌಸ್‌ಗಳಿಂದ ಇತ್ಯಾದಿಗಳಿಂದ ನಿಮಗೆ ಆದಾಯ ಎಷ್ಟು ಬರುತ್ತದೆಂದು ಕೇಳಿದ್ದೆ. ಬರುವ ಒಟ್ಟು ವಾರ್ಷಿಕ ಆದಾಯ 51 ಲಕ್ಷ ರೂಪಾಯಿಗಳು ಮಾತ್ರ, ನಾವು ಮಾಡುವ ಖರ್ಚು ಸುಮಾರು 300 ಲಕ್ಷ ರೂಪಾಯಿಗಳು. ನಮ್ಮ ಐಬಿಗಳಿಗೆ, ಸರ್ಕ್ಯೂಟ್ ಹೌಸ್‌ಗಳಿಗೆ, ಗೆಸ್ಟ್ ಹೌಸ್‌ಗಳಿಗೆ ನಾವು ಮಾಡತಕ್ಕ ಖರ್ಚು ಮೂರು ಕೋಟಿ ರೂಪಾಯಿಗಳು. ಬರತಕ್ಕದ್ದು ಅರ್ಧ ಕೋಟಿ ರೂಪಾಯಿಗಳು. ಇದು ಏತಕ್ಕೆ? ಎಷ್ಟು ಜನರನ್ನು ಸಾಕುತ್ತಿದ್ದೇವೆ? ಅಲ್ಲಿ ಎಷ್ಟು ಜನರಿನ್ನಿಟ್ಟಿದ್ದೇವೆ? ಅವರೆಲ್ಲಾ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಯೇ? ಬೇರೆಯದಕ್ಕೆ ಸೌಲಭ್ಯಗಳನ್ನು ಒದಗಿಸಿಕೊಡುತ್ತಿದ್ದಾರೆಯೇ? ದಯವಿಟ್ಟು ಸರ್ಕಾರಕ್ಕೆ ನನ್ನದೊಂದು ಸಲಹೆ ಇದೆ. ಈ ದೊಡ್ಡ ದೊಡ್ಡ ಐಬಿಗಳನ್ನು ಖಾಸಗಿಯವರಿಗೆ ವಹಿಸಿಬಿಡಿ. ಯಾವಾಗಲೂ ಯಾರು ಐಬಿಗಳಿಗೆ ಹೋಗುವುದಿಲ್ಲ, ವಿಶೇಷವಾಗಿ ನಮ್ಮ ಮಂತ್ರಿಗಳು ಅಥವಾ ಯಾರಾದರೂ ಹೋದರೆ ಎರಡು ರೂಂಗಳನ್ನು ಕಾಯ್ದಿರಿಸಲಿ. ಈ ರೀತಿ ದುರುಪಯೋಗವಾಗತಕ್ಕ ಹಾಳು ದಂಧೆಗಳಾದರೂ ನಿಲ್ಲಲಿ. ನಮ್ಮ ಸಾಮಾನ್ಯ ರೈತ, ಸಾಮಾನ್ಯ ಮನುಷ್ಯ ಕೊಟ್ಟಿರುವ ಬೆವರಿನ ತೆರಿಗೆಯ ಹಣ ಈ ರೀತಿ ದುರುಪಯೋಗವಾಗತಕ್ಕದ್ದನ್ನು ಇವತ್ತು ನಿಲ್ಲಿಸಬೇಕಾಗಿದೆ. ಇದಕ್ಕಾಗಿ ಇವನ್ನು ಖಾಸಗಿಯವರಿಗೆ ವಹಿಸಿಕೊಡುವುದರಿಂದ ನಮಗೆ ಒಂದಿಷ್ಟು ಆದಾಯ ಬರುತ್ತದೆ.

ಇದನ್ನು ಟೆಂಡರ್ ಹಾಕಿ ಖಾಸಗಿಯವರಿಗೆ ವಹಿಸಿಕೊಡಿ. ನಾಣಯ್ಯನವರೆ, ನಮ್ಮ ಆಗುಂಬೆಯಲ್ಲಿ ಒಂದು ಗೆಸ್ಟ್ ಹೌಸ್ ಇರುವುದನ್ನು ತಾವು ನೋಡಿರಬಹುದು.

ಬಹುಶಃ ನಾನು ಶಾಸಕನಾಗಿ ಆಯ್ಕೆಯಾಗಿ ಹತ್ತಿರ ಸುಮಾರು ಒಂದು ಮುಕ್ಕಾಲು ವರ್ಷವಾಯಿತು, ಇವತ್ತಿನವರೆವಿಗೂ ನಾನು ಶಾಸಕನಾಗಿ ಅದರ ಮೆಟ್ಟಿಲನ್ನು ಹತ್ತಲಿಲ್ಲ. ಶಾಸಕನಾಗಿ ಅದರ ಮೆಟ್ಟಿಲನ್ನು ಹತ್ತುವಂಥ ಸಂದರ್ಭವೂ ಕೂಡ ಬರಲಿಲ್ಲ, ಅದನ್ನು ನಾನು ಉಪಯೋಗಿಸುವುದೇ ಇಲ್ಲ, ಬಹುಶಃ ನಮ್ಮ ಅಧಿಕಾರಿಗಳ್ಯಾರು ಅಲ್ಲಿ ಹೋಗಿ ಬಹಳ ಕಾಲ ಉಳಿಯುತ್ತಾರೆಂದು ಹೇಳುವುದಕ್ಕಾಗುವುದಿಲ್ಲ, ಇವತ್ತು ಅಲ್ಲಿ ಏನಾಗಿದೆ? ದಕ್ಷಿಣ ಕನ್ನಡ, ಬೇರೆ ಬೇರೆ ಕಡೆಯಿಂದ ಮಜಾ ಮಾಡುವುದಕ್ಕೋಸ್ಕರ ಒಂದು ಗುಂಪು ಬರುತ್ತದೆ. ಇಲ್ಲಿನ ಪ್ರಕೃತಿ ಸೌಂದರ್ಯವನ್ನು ಸವಿದು ಮಜಾ ಮಾಡುವುದಕ್ಕೋಸ್ಕರ ಬರುತ್ತದೆ. ನಾನು ಯಾವುದೋ ಒಂದು ಭಾಗದವರನ್ನು ದೂರತಕ್ಕಂಥದ್ದಲ್ಲ, ಯಾರೋ ಕೆಲವರು ಸಾಮಾಜಿಕ ವಿದ್ರೋಹಿಗಳು ಬರುತ್ತಿದ್ದಾರೆ, ಸಾಮಾಜಿಕ ವಿದ್ರೋಹಿಗಳು ಬಂದು ಅಲ್ಲಿ ಕೂಟ ನಡೆಸುತ್ತಿದ್ದಾರೆ. ಕೋಳಿ ಮಾಡಿದರೆ, ಹೆಂಡ ತಂದು ಕೊಟ್ಟರೆ ಅಲ್ಲಿರುವ ಸಿಬ್ಬಂದಿಗೆ ಭಾರಿ ಕಮಾಯಿ.

ಶ್ರೀ ಎಂ.ಸಿ. ನಾಣಯ್ಯ : ನೀವು ಮಲೆನಾಡಿನ ಜನರೇ ಕೊಡಗು, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಈ ಮಲೆನಾಡು ಭಾಗದಲ್ಲಿ ಸ್ವಲ್ಪ ಮಜಾ ಮಾಡುವ ಜನರೇ ಜಾಸ್ತಿ.

ಶ್ರೀ ಅರಗ ಜ್ಞಾನೇಂದ್ರ : ಈ ಮಜಾವನ್ನು ಯಾರ ಮೇಲೆ ಮಾಡಬೇಕು? ನಮ್ಮ ಸಾಮಾನ್ಯ ಜನರ ಬೆನ್ನಿನ ಮೇಲೆ ಮಾಡುವುದೇ? ಮಜಾ ಮಾಡುವುದಕ್ಕೆ ನಮ್ಮ ಸಾಮಾನ್ಯ ಜನರ ಜೇಬನ್ನು ಕತ್ತರಿಸಬೇಕೇನು? ಅವರು ಕೊಡುವ ತೆರಿಗೆ ಹಣದಿಂದ ಟಿಬಿಗಳನ್ನು ಮೆಂಟೇನ್ ಮಾಡಿ, ಅಲ್ಲಿ ಐದಾರು ಜನ ಸಿಬ್ಬಂದಿಗಳನ್ನಿಟ್ಟು, ಅವರಿಗೆ ಕೈತುಂಬಾ ಸಂಬಳವನ್ನು ಕೊಟ್ಟು, ಅವರ ಹತ್ತಿರ ಕೋಳಿಯ ಅಡಿಗೆಯನ್ನು ಮಾಡಿಸಿ, ಅವರ್‍ಯಾರಿಗೂ ಬಡಿಸುವುದಕ್ಕೆ ಇವು ಹೋಟೆಲ್‌ಗಳಲ್ಲ; ಬಾರ್‌ಗಳಲ್ಲ, ಇವು ಗ್ಯಾಂಬ್ಲಿಂಗ್ ಆಡುವ ಕ್ಲಬ್‌ಗಳಲ್ಲ. ಇವಕ್ಕೊಂದು ಮರ್ಯಾದೆ ಇರಬೇಕಾಗುತ್ತದೆ, ಸಂಸ್ಕೃತಿ ಇರಬೇಕಾಗುತ್ತದೆ. ನಾಣಯ್ಯನವರಂಥವರು ಅಲ್ಲಿಗೆ ಹೋಗಿದ್ದಾರೆಂದರೆ ಅದಕ್ಕೊಂದು ಮರ್ಯಾದೆ ಬರಬೇಕಾಗುತ್ತದೆ. ನೀವು ಹೋದಂಥ ಟಿಬಿಗೆ ಇನ್ಯಾರೋ ಒಬ್ಬ ಗ್ಯಾಂಬ್ಲರ್ ಅಲ್ಲಿ ಬಂದಿರುತ್ತಾನೆ, ಅವರಿಗೂ ಇವರಿಗೂ ವ್ಯತ್ಯಾಸವೇನು? ಈ ರೀತಿಯಲ್ಲಿ ಇವತ್ತು ಟಿಬಿನಲ್ಲಿ ಹೋಗಿ ಉಳಿದಿದ್ದಾನೆಂದರೆ ಅವನ ಮೇಲೆ ಅನುಮಾನಪಡುವಂಥ ಸ್ಥಿತಿ ಇವತ್ತು ಅಲ್ಲಿ ನಿರ್ಮಾಣವಾಗಿದೆ.

ಇವತ್ತು ಅಲ್ಲಿಗೆ ಹೋದರೆ ರೆಡ್‌ಲೈಟ್ ಪ್ರದೇಶಗಳಿಗೆ ಹೋದಂತಾಗುತ್ತದೆ. ಇವತ್ತು ಕೆಲವು ಟಿಬಿಗಳಿಗೆ ಹೋಗಿ ಉಳಿದಿದ್ದಾನೆಂದರೆ ಅವಮಾನ. ಹಾಗಾಗಿ ಅನೇಕ ಮರ್ಯಾದಸ್ಥ ವ್ಯಕ್ತಿಗಳು ಕೆಲವು ಟಿಬಿಗಳಿಗೆ ಹೋಗಬೇಕಾದದ್ದನ್ನು ಕೈಬಿಡಬೇಕಾದ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ದಯಮಾಡಿ ಇಂಥದ್ದನ್ನು ಬಂದ್ ಮಾಡಿ; ಯಾವ ಟಿಬಿಗಳು ಅವಶ್ಯಕತೆ ಇಲ್ಲ ಅಂಥವುಗಳನ್ನು ಬಂದ್ ಮಾಡಿ ಅಥವಾ ಬೇರೆ ಬೇರೆ ಹೋಟೆಲ್‌ಗಳನ್ನು ನಡೆಸುವಂಥ ಇಲಾಖೆಗಳಿದ್ದಾವೆ ಅದಕ್ಕೆ ಕೊಟ್ಟು, ತಾವು ದಯಮಾಡಿ ಇದನ್ನು ದುರಸ್ತಿ ಮಾಡಬೇಕಾಗುತ್ತದೆ; ಇಲ್ಲದಿದ್ದರೆ ತುಂಬಾ ಕಷ್ಟವಾಗುತ್ತದೆ. ಮಾನ್ಯ ಅಧ್ಯಕ್ಷರೆ, ನಾನು ಇವತ್ತು ನನ್ನದು ಈ ಪಿಡಬ್ಲ್ಯುಡಿ ಇಲಾಖೆಗೆಲ್ಲಾ ಆದಾಯ ತರತಕ್ಕಂಥ ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ ಹೇಳಿದೆ. ಒಂದು ಸಲಹೆ ಇದೆ. ಅದು ಏನೆಂದರೆ, ಕೆಲವು ಹುದ್ದೆಗಳನ್ನು ಹರಾಜು ಹಾಕಬಾರದೇಕೆ? ಎಕ್ಸಿಕ್ಯೂಟಿವ್ ಇಂಜಿನಿಯರ್ ಪೋಸ್ಟ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಪೋಸ್ಟ್, ಸೂಪರಿಂಟೆಂಡೆಂಟ್ ಇಂಜಿನಿಯರ್ ಪೋಸ್ಟ್, ಚೀಫ್ ಇಂಜಿನಿಯರ್ ಪೋಸ್ಟ್‌ಗಳನ್ನು

ಹರಾಜು ಹಾಕಿಬಿಡೋಣ. ಸಬ್ ರಿಜಿಸ್ಟ್ರಾರ್ ಇಂತಹ ಪೋಸ್ಟ್‌ಗಳನ್ನು ಹರಾಜು ಹಾಕಿದರೆ ನಮ್ಮ ಸರ್ಕಾರಕ್ಕೆ ಒಂದು ಸ್ವಲ್ಪ ಆದಾಯ ಬರುತ್ತದೆ.

ಇದು ಆದಾಯ ಬರತಕ್ಕಂಥ ಮೂಲವಾಗಿದೆ ಇದನ್ನೇಕೆ ಹಾಗೆಯೇ ಬಿಡುತ್ತೀರೆಂದು ನನಗೆ ಅರ್ಥವಾಗುತ್ತಿಲ್ಲ. ಈ ಭ್ರಷ್ಟಾಚಾರವನ್ನು ತಪ್ಪಿಸುವುದಕ್ಕಾಗುವುದಿಲ್ಲ, ಹರಾಜು ಹಾಕಿದರೆ ನೀನು ಎಷ್ಟಕ್ಕೆ ತೆಗೆದುಕೊಳ್ಳುತ್ತೀಯ ಎಂದು ಹರಾಜು ಹಾಕುವುದು. ಈಗ ವೆಂಡರ್ ಶರಾಬು ಮಾರಾಟ ಮಾಡಿದರೆ ನೀನು ಎಷ್ಟು ಕೊಡುತ್ತೀಯಾ ಎಂದು ಕೇಳುವುದು. ನಾವೆಲ್ಲಾ ಹಾಲಿನ ಬೂತುಗಳನ್ನು ಹರಾಜು ಹಾಕಿದ್ದೇವೆ, ಹಾಲನ್ನು ಅವನೇ ಮಾರಾಟ ಮಾಡಿಕೊಳ್ಳುತ್ತಾನೆ, ಲಾಭ ನಷ್ಟಕ್ಕೆ ಅವನೇ ಜವಾಬ್ದಾರನಾಗಿರುತ್ತಾನೆ, ನಮಗೆ ಒಂದಷ್ಟು ಹಣವನ್ನು ಕೊಡುತ್ತಾನೆ. ಈ ರೀತಿಯಾಗಿ ಈ ಎಲ್ಲಾ ಹುದ್ದೆಗಳನ್ನು ಹರಾಜು ಹಾಕಿದರೆ ಒಳ್ಳೆಯದು ಎನ್ನುವುದು ನನ್ನ ಸಲಹೆ.

ಇದನ್ನು ತಪ್ಪಿಸುವುದಕ್ಕೆ ನಮ್ಮ ಸಾರ್ವಜನಿಕ ಜೀವನದಲ್ಲಿ ಆಗುವುದಿಲ್ಲ. ಏಕೆಂದರೆ ಇಲ್ಲಿರತಕ್ಕಂಥ ಡಿಬೇಟ್ ಅನ್ನು ಬಹಳ ಸಮಯದಿಂದ ನೋಡಿದ್ದೇನೆ. ನಿಮಗೆ ಹೇಳಿದ ತಕ್ಷಣ ನೀವೇನು ಮಾಡಿದ್ದುದು, ಯಾರ ಕಾಲದಲ್ಲಾಗಿದ್ದು ಎಂದು ನೀವು ಚುಚ್ಚಿ ಹೇಳುತ್ತೀರಿ. ಅವರು, ನಮ್ಮ ಕಾಲದಲ್ಲಿ ಆಗಿದ್ದು, ನಿಮ್ಮ ಕಾಲದಲ್ಲಿ ಇನ್ನೂ ಜಾಸ್ತಿಯಾಗಿದೆ ಎಂದು ಹೇಳುತ್ತಾರೆ. ಈಗ ನಾವು ನೀವು, ಅವರು ಯಾರೂ ತಪ್ಪಿಸುವುದಕ್ಕೆ ಆಗದಿರುವಂತಹ ಒಂದು ಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳುವುದಾದರೆ ಇವನ್ನು ಹರಾಜು ಹಾಕುವುದು ತುಂಬಾ ಒಳ್ಳೆಯದು. ಏಕೆಂದರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ತುಂಬಾ ಚೆನ್ನಾಗಿ ಮಾತನಾಡಿದರು. ನಾನೂ ಕೂಡ ಸಮಾಜವಾದಿ ಗೋಪಾಲ-ಗೌಡರ ಊರಿನಿಂದ ಬಂದಿರತಕ್ಕಂಥವನು, ನಾನು ಪಟೇಲರ ಭಾಷಣವನ್ನು ತುಂಬಾ ಸಾರಿ ಕೇಳಿದ್ದೇನೆ; ತುಂಬಾ ಚೆನ್ನಾಗಿ ಮಾತನಾಡುತ್ತಾರೆ. ಆದರೆ ಪಟೇಲ್ ರವರಂಥ ನೇತೃತ್ವದಲ್ಲಿ, ಕ್ರಾಂತಿಕಾರಕ ವಿಚಾರಧಾರೆಯನ್ನಿಟ್ಟು ಕೊಂಡಿರತಕ್ಕಂಥ ನಿಮ್ಮಂತಹವರ ಕೈಯಲ್ಲಿ ಇವತ್ತು ಆಡಳಿತ ಸಿಕ್ಕಿದೆ, ನಮ್ಮ ಕರ್ನಾಟಕ ಜನತೆ ಅಧಿಕಾರವನ್ನು ಕೊಟ್ಟಿದ್ದಾರೆ ಎಂದ ಮೇಲೆ, ನೀವೇನು ಹೇಳುತ್ತಿದ್ದೀರಿ ಇದನ್ನು ಕೃತಿಗಿಳಿಸಬೇಕು; ಕೇವಲ ಉಪದೇಶ ಮಾಡುವ ಕೆಲಸವಲ್ಲ, ಅಧ್ಯಕ್ಷರೆ,

ನಾನು ಹೇಳುತ್ತಿದ್ದೇನೆ ನಮ್ಮ ಕೃಷಿ ಇಲಾಖೆಯನ್ನು ವಹಿಸಿಕೊಂಡಿರುವ ಮಾನ್ಯ ಮಂತ್ರಿಗಳು ತುಂಬಾ ಪ್ರಾಮಾಣಿಕರು, ಅವರ ಬೆತ್ತ ಮೊನ್ನೆ ಯಾರ ಮೇಲೋ ಹೋಗಿದೆ ಎಂದು ಪತ್ರಿಕೆಯಲ್ಲಿ ಬಂತು. ನಮ್ಮ ಹಳ್ಳಿಯಲ್ಲಿ ಜನ ಅವರನ್ನು ತುಂಬಾ ಪ್ರಶಂಸೆ ಮಾಡಿದರು. ಏನಾದರೂ ಆಗಲಿ ಇಂಥ ಒಬ್ಬ ಗಡಸಿನ ಮಂತ್ರಿ ಇದ್ದಾರಲ್ಲಾ ಎಂದು ನಮ್ಮ ರೈತರೆಲ್ಲಾ ತುಂಬಾ ಪ್ರಶಂಸೆ ಮಾಡಿದರು. ಸ್ವಾಮಿ. ಬೈರೇಗೌಡರೇ, ನೀವು ಎಷ್ಟು ಬೆತ್ತಗಳನ್ನು ಮುರಿಯುತ್ತೀರಿ ನೀವು? ನಿಮ್ಮ ಬೆತ್ತಕ್ಕೆ ತಾಕತ್ತು ಸಾಕಾಗುವುದಿಲ್ಲ. ಇವನ್ನು ನಾವು ಎಲ್ಲೋ ಒಂದು ಕಡೆ ರಾಜಿ ಮಾಡಿಕೊಳ್ಳಲೇ ಬೇಕಾಗುತ್ತದೆ. ಮೊನ್ನೆ ತಾವು ಕೋಲಾರದಲ್ಲಿ ವಿಸಿಟ್ ಮಾಡಿದ್ದೀರಿ, ಏನಾಗಿದ್ದಾವೆಯ ವೆಂಟೆಡ್ ಡ್ಯಾಂ ಆಗದೆಯೇ ಬಿಲ್ ಮಾಡಿದ್ದಾರೆ. ಇಲ್ಲಿ ನನ್ನ ಕ್ಷೇತ್ರದಲ್ಲಿ ಬಾವಿಯಾಗಲಿಲ್ಲ. ನನ್ನ ಕ್ಷೇತ್ರದಲ್ಲಿ ಮನೆಗಳಲ್ಲಿ ಕಳ್ಳತನವಾಗಿದ್ದಾವೆ, ಬಾವಿ ಕಳ್ಳತನವಾಗಿದ್ದಾವೆ ಎಂದು ನಾನು ಮೊನ್ನೆ ಹೇಳಿದೆ. ನಿಮ್ಮ ಇಲಾಖೆನಲ್ಲಿ ವೆಂಟೆಡ್ ಡ್ಯಾಮ್‌ಗಳೇ ಕಳ್ಳತನವಾಗಿದ್ದಾವೆ. ಬೈರೇಗೌಡರೆ, ನನ್ನ ಕ್ಷೇತ್ರದಲ್ಲಿ ಈ ವೆಂಟೆಡ್ ಡ್ಯಾಂಗಳನ್ನು ಕಟ್ಟುವುದಕ್ಕಾಗಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಾನು ಇತ್ತೀಚೆಗೆ ಪ್ರವಾಸ ಮಾಡಿ ನೋಡಿದರೆ ಅಲ್ಲಿ ಇಲ್ಲಿ ಒಂದೊಂದು ಕಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ದೊಣ್ಣೆ ತೋರಿಸುವುದು ಬೇಡ ಬೈರೇಗೌಡರೇ, ಮಂತ್ರಿಗಳು ಹೋದಾಗ ಯಾವ ಅಧಿಕಾರಿಯಿಲ್ಲ, ಸಿಎಲ್ ಹಾಕಿದ್ದಾನೋ, ಇಎಲ್ ಹಾಕಿದ್ದಾನೋ, ಅವನು ಎಲ್ಲಿ ಹೋಗಿದ್ದಾನೆಂದರೆ ಕೆಲವು ಇಲಾಖೆಗಳನ್ನು ಬಿಟ್ಟರೆ, ಪ್ರತಿ ಇಲಾಖೆಗಳಲ್ಲೂ ಆ ಲೀವ್ ಲೆಟರ್‌ಗಳು ರೆಡಿ ಇದ್ದಾವೆ. ನೀವು ಹೋದಾಗ, ನಾನು ಶಾಸಕ ಹೋಗಿ ಕೇಳಿದಾಗ ಆ ಸಿಎಲ್, ಆ ಇಎಲ್ ಆ ದಿನಾಂಕವನ್ನು ನಮೂದು ಮಾಡಿ ತಂದುಕೊಡುವುದು ಪರ್ಮನೆಂಟ್. ಕುಲಗೆಟ್ಟು ಹೋಗಿದೆ ಎಂದು ನಾನು ಹೇಳುತ್ತೇನೆ. ದಯಮಾಡಿ ಇದನ್ನು ಬಿಗಿ ಮಾಡಿ; ತೊಂದರೆ ಇಲ್ಲ, ಅವರು ಬೇಸರ ಮಾಡಿಕೊಂಡರೂ ಪರವಾಗಿಲ್ಲ, ಅವರು ಮಾಡುವ ಒಳ್ಳೆಯ ಕೆಲಸಕ್ಕೆ ಶಭಾಷ್ ಗಿರಿ ಹೇಳೋಣ. ಈ ರೀತಿಯ ದೊಣ್ಣೆಯನ್ನು ನೀವು ಎಷ್ಟು ಜನಕ್ಕೆ ತೋರಿಸಬಹುದು? ಅವನು ನಿಮಗೆ ಸಿಟ್ಟು ಬಂದಿರಬಹುದು ಅದಕ್ಕೆ ನಾನು ಸರಿತಪ್ಪುಗಳನ್ನು ಪ್ರಸ್ತಾಪ ಮಾಡಲಿಲ್ಲ. ನಾವು ಸಂಯಮದಿಂದ ಇರೋಣ,

ಸಿಟ್ಟು ಬಂದಾಗ ಆ ರೀತಿ ಆಗುತ್ತದೆ. ಆದರೆ ಈ ಕೆಲಸವೇನಿದೆ, ಇದಕ್ಕೆ ಕಡಿವಾಣ ಹಾಕಬೇಕು, ನಿಮ್ಮ ಮೇಲಿನಧಿಕಾರಿಗಳಿಗೆ ಹೇಳಬೇಕು, ಇನ್ಸ್‌ಪೆಕ್ಷನ್‌ಗೆ ಹೋಗಬೇಕು, ಯಾರ ಭಯ ಯಾರಿಗೂ ಇಲ್ಲ. ಒಂದು ಕಾಲದಲ್ಲಿ ಡೆಪ್ಯೂಟಿ ಕಮಿಷನರ್ ಜಿಲ್ಲೆಗೆ, ತಾಲ್ಲೂಕಿಗೆ ಬರುತ್ತಾರೆಂದರೆ ಅಧಿಕಾರಿಗಳು ಏನಾಗಬಹುದು ಎನ್ನುವ ಭಯದ ವಾತಾವರಣದಲ್ಲಿ ನಡುಗುತ್ತಿದ್ದರು. ಈಗ ಅವರು ಅಲ್ಲಿ ಬರುವುದು ಅವರಿಗೆ ಆನಂದವಾಗಿ ಎಲ್ಲಾ ವ್ಯವಸ್ಥೆ ಮಾಡುವುದು. ಸರ್ಕ್ಯೂಟ್ ಹೌಸ್‌ಗಳು, ಗೆಸ್ಟ್ ಗೌಸ್ಗಳು ಏನಾಗಿದ್ದಾವೆಂದು ಹೇಳಿದರಲ್ಲಾ, ಅದಕ್ಕೆ ಉಪಯೋಗವಾಗುತ್ತದೆಯೇ ಹೊರತು, ಖಂಡಿತವಾಗಿ ನೊಂದು ಈ ಮಾತನ್ನು ಹೇಳುತ್ತಿದ್ದೇನೆ, ದಯಮಾಡಿ ಸರಿಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಅರಗ ಜ್ಞಾನೇಂದ್ರ : ಸನ್ಮಾನ್ಯ ಅಧ್ಯಕ್ಷರೆ, ಈ ವ್ಯವಸಾಯ ಇಲಾಖೆ, ಇದು ತಾಂತ್ರಿಕ ಸಲಹೆಯನ್ನು ಕೊಡುತ್ತಿದ್ದ ಇಲಾಖೆಯಾಗಿದ್ದಾಗಲೇ ಚೆನ್ನಾಗಿತ್ತು; ಇದಕ್ಕೊಂದು ಮರ್ಯಾದೆ ಇತ್ತು, ಗೌರವವಿತ್ತು. ಸಾಕಷ್ಟು ಅಗ್ರಿಕಲ್ಚರ್ ಗ್ರ್ಯಾಜ್ಯುಯೇಟ್ಸ್ ಗಳನ್ನು ತಂದಿಟ್ಟು ನಾವು ಬರೀ ಲೋಕಲ್ ತಳಿಗಳನ್ನು ಬೆಳೆಯುತ್ತಿದ್ದೆವು. ನಮಗೆ ಜಯ ಭತ್ತ ಹಾಕುವುದು ಹೇಗೆ ಎನ್ನುವುದನ್ನು ಕಲಿಸಿಕೊಟ್ಟರು, ಸಾಲು ನಾಟಿ ಹೇಗೆ ಹಾಕುವುದನ್ನು ಕಲಿಸಿಕೊಟ್ಟರು. ರಾಸಾಯನಿಕ ಗೊಬ್ಬರಗಳನ್ನು ಯಾವ ವಿಧಾನದಲ್ಲಿ ಹಾಕಬೇಕೆಂದು ಅವತ್ತು ಗ್ರಾಮಸೇವಕರುಗಳು, ಸಹಾಯಕ ನಿರ್ದೇಶಕರುಗಳು ಬಂದು ನಮ್ಮ ಗದ್ದೆಯ ಮೇಲೆ ನಿಂತುಕೊಂಡು, ಅವರೇ ಸ್ವತಹ ಹಗ್ಗವನ್ನು ಹಿಡಿದುಕೊಂಡು ನಮ್ಮ ಕೈಯಲ್ಲೇ ನಾಟಿ ಮಾಡಿಸುತ್ತಿದ್ದರು. ನಿಮ್ಮ ಇಲಾಖೆಗೆ ತುಂಬಾ ಗೌರವ ಕೊಡುತ್ತಿದ್ದರು. ನೀವು ತೆಗೆದು ತೆಗೆದು ಈ ಹಣವನ್ನು ಕೊಟ್ಟ ಮೇಲೆ ಆ ಇಲಾಖೆ ಈ ಲೋಕೋಪಯೋಗಿ ಇಲಾಖೆಗಿಂತ ಕೆಟ್ಟು ಹಾಳಾಗಿ ಹೋಗಿದೆ.

ಅಲ್ಲಿ ಏನೂ ಇಲ್ಲ. ಅವರಿಗೆ ಎಂಥ ಮಾಹಿತಿ ಇದೆ. ಒಬ್ಬ ಇಂಜಿನಿಯರ್ ಅಲ್ಲ, ಅಗ್ರಿಕಲ್ಚರ್ ಗ್ರ್ಯಾಜ್ಯುಯೇಟ್‌ಗೆ ವೆಂಟೆಡ್ ಡ್ಯಾಮ್‌ಗಳನ್ನು ಕಟ್ಟಲು, ನನ್ನ ಒಂದು ತಾಲ್ಲೂಕಿನಲ್ಲೇ 20 ಲಕ್ಷ ರೂಪಾಯಿ ಕೊಟ್ಟಿದ್ದೀರಿ ನೀವು. ಯಾರು ಎಸ್ಟಿಮೇಟ್ ಮಾಡುತ್ತಾನೆ? ಯಾರು ಪ್ಲಾನ್ ಮಾಡುತ್ತಾನೆ.? ಮಲೆನಾಡಿನಲ್ಲಿ ಸೈಜ್ ಸ್ಟೋನ್ ಮೇಸನರಿ ಹಾಕಿದ್ದಾರೆ. ನಮ್ಮ ಮಲೆನಾಡಿನಲ್ಲಿ ಅದು ಉಳಿಯುತ್ತದೆಯೇ ಸ್ವಾಮಿ? ಏರಿಯೆಲ್ಲಾ ಕೊರೆದು ಕೊರೆದು ಹಾಳಾಗಿದೆ. ತಾವು ಬಂದು ನೋಡಿ. ಕೇವಲ

ಒಂದು ವರ್ಷದಲ್ಲಿ ಅಷ್ಟೂ ಹೋಗಿಬಿಟ್ಟಿವೆ. ನಾವು ಹೇಳಿದೆವು, ಜಿಲ್ಲಾ ಪರಿಷತ್ತಿನಿಂದ ನಿರ್ಣಯ ಮಾಡಿದೆವು, ಕಾಂಕ್ರೀಟ್ ಹಾಕಿ ಕಟ್ಟಿ, ಉಳಿಯುತ್ತದೆ ಎಂದು ಹೇಳಿದೆವು. ತಾವು ಇಷ್ಟು ಕೋಟಿಗಟ್ಟಲೆ ಹಣ ಸುರಿಯುತ್ತಿದ್ದೀರಲ್ಲಾ, ಅದರಲ್ಲಿ ಸೈಜ್ ಸ್ಟೋನ್ ತಂದು ಹಾಕುತ್ತಿದ್ದಾರೆ. ಅವರೇ ಕಾಂಟ್ರಾಕ್ಟರ್. ನಮ್ಮಲ್ಲೆಲ್ಲಾ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳೇ ಕಾಂಟ್ರಾಕ್ಟರುಗಳು. ಗುಲ್ಬರ್ಗಾ, ರಾಯಚೂರು ಕಡೆಯಿಂದ ಜನರನ್ನು ತಂದು ಇಟ್ಟುಕೊಂಡು ಬಿಟ್ಟಿದ್ದಾರೆ. ಅವರೆಲ್ಲಾ ಜನರನ್ನು ತಂದು ಇಟ್ಟುಕೊಂಡು ಅವರೇ ಕಾಂಟ್ರಾಕ್ಟ್ ಮಾಡುವುದು. ನಾನು ಯಾರಿಗೆ ಕಾಂಟ್ರಾಕ್ಟ್ ಕೊಡುತ್ತೀರಿ ಎಂದು ಕೇಳಿದರೆ, ಇಲ್ಲಿ ಕಾಂಟ್ರಾಕ್ಟರುಗಳು ಸರಿಯಾಗಿ ಮಾಡುವುದಿಲ್ಲ, ನಮ್ಮ ಜನರು ಇದ್ದಾರೆ, ಮಾಡಿಸುತ್ತೇವೆ. ನಿಮಗೆ ಎಲ್ಲಿ ಆಗಬೇಕು ಹೇಳಿ ಎಂದು ಕೇಳುತ್ತಾರೆ.

ನಾನು ಕೇಳಿದರೆ, ನಿಮಗೆ ಎಲ್ಲಿ ಕೆಲಸ ಆಗಬೇಕು ಎಂದು ಕೇಳುತ್ತಾರೆ, ನನ್ನನ್ನು ಮೆಚ್ಚಿಸುವುದಕ್ಕಾಗಿ. ನಾನು ಹೇಳಿದ ಕಡೆ ಎಲ್ಲಾ ಕೆಲಸ ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ. ಏಕೆಂದರೆ ನಾನು ಖುಷಿಯಾಗಿರಬೇಕು. ಹೋಗಿ ನೋಡಿದರೆ ವೆಂಟೆಡ್ ಡ್ಯಾಂ ಸರಿಯಿಲ್ಲ. 20 ಲಕ್ಷ ನನ್ನ ಒಂದು ಕ್ಷೇತ್ರದಲ್ಲೇ ಆಗಿರಬಹುದು ಎಂದರೆ ಬಹುಶಃ ಇದು ಇಡೀ ರಾಜ್ಯದಲ್ಲಿ ಎಷ್ಟೊಂದು ದುರುಪಯೋಗ ಆಗಿರಬಹುದು. ದಯಮಾಡಿ ತಾವು ಈ ಇಲಾಖೆಯ ವರಿಷ್ಠ ಅಧಿಕಾರಿಗಳನ್ನು ಕೂರಿಸಿಕೊಂಡು, ಯಾವ ರೀತಿ ಇದನ್ನು ಕಟ್ಟಬೇಕು ಎನ್ನುವುದನ್ನು ವೈಜ್ಞಾನಿಕವಾಗಿ ಅವರಿಗೆ ತರಬೇತಿ ಕೊಡಬೇಕು. ಇಲ್ಲದಿದ್ದರೆ ಕೆಲವು ಇಂಜಿನಿಯರ್‌ಗಳನ್ನು ನಮ್ಮ ಇಲಾಖೆಗೆ ಡೆಪ್ಯುಟೇಷನ್ ಮೇಲೆ ಕೊಡಬೇಕು. ಇಲ್ಲದಿದ್ದರೆ ಇದು ಏನೂ ತಿಳಿಯುವುದಕ್ಕೆ ಸಾಧ್ಯವಿಲ್ಲ. ಮತ್ತು ಅಕೌಂಟಬಲಿಟಿ ಇರಬೇಕು. ನೀವು ಎಲ್ಲೋ ಒಂದು ಕ್ಷೇತ್ರಕ್ಕೆ ಹೋಗಿ ಒಬ್ಬ ಅಗ್ರಿಕಲ್ಚರ್ ಅಸಿಸ್ಟೆಂಟನ್ನು ಸಸ್ಪೆಂಡ ಮಾಡಿ ಬಂದರೆ ಏನೂ ಪ್ರಯೋಜನವಿಲ್ಲ. ಈ ಅಗ್ರಿಕಲ್ಚರ್ ಅಸಿಸ್ಟೆಂಟ್ ಪ್ಲಾನ್ ಮಾಡಿದ್ದಾನೆಯೇ ಎಸ್ಟಿಮೇಟ್ ಮಾಡಿದ್ದಾನೆಯೇ ಅಥವಾ ಬಿಲ್ ಮಾಡಿದ್ದಾನೆಯೇ ಎಂದು ನಾನು ಕೇಳುತ್ತೇನೆ.

ನಿಮ್ಮ ಜಾಯಿಂಟ್ ಡೈರೆಕ್ಟರ್ ಮಣ್ಣು ತಿನ್ನುತಿದ್ದರೇ ಸ್ವಾಮಿ ಅಥವಾ ರಾಜ್ಯ ಮಟ್ಟದ ಡೈರೆಕ್ಟರ್ ಮಣ್ಣು ತಿನ್ನುತ್ತಿದ್ದರೇ? ಇದನ್ನು ನೀವು ಚೆಕ್ ಮಾಡಿ. ಅವರ ಡೈರಿಗಳನ್ನು ಚೆಕ್ ಮಾಡಿ. ಎಷ್ಟು ಸಲ ಅವರು ಕೋಲಾರಕ್ಕೆ ವಿಸಿಟ್ ಮಾಡಿದ್ದಾರೆ? ಎಷ್ಟು ಸಲ ನನ್ನ ಶಿವಮೊಗ್ಗಕ್ಕೆ ವಿಸಿಟ್ ಮಾಡಿದ್ದಾರೆ? ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕಂಥ ಜಾಯಿಂಟ್ ಡೈರೆಕ್ಟರ್ ಎಷ್ಟು ಸಾರಿ ತೀರ್ಥಹಳ್ಳಿಗೆ ವಿಸಿಟ್ ಮಾಡಿದ್ದಾರೆ? ಆತ ಏಕೆ ನೋಡಲಿಲ್ಲ? ಆತನ ಫಾಲ್ಟ್ ಏನು? ಮೇಲಾಧಿಕಾರಿಗಳ ಮೇಲೆ ಬಿಗಿ ಕ್ರಮ ತೆಗೆದುಕೊಳ್ಳಿ. ರಾಜ್ಯಮಟ್ಟದ ಒಬ್ಬಿಬ್ಬರು ಅಧಿಕಾರಿಗಳನ್ನು ಬಗ್ಗುಬಡಿಯಿರಿ. ಆಗ ಇದು ದುರಸ್ತಿಯಾಗುತ್ತದೆ. ಆದರ್ಶ ಯಾವಾಗಲೂ ಮೇಲಿನಿಂದ ಬರಬೇಕು, ಕೆಳಗಡೆಯಿಂದ ಅಲ್ಲ. 10 ರೂಪಾಯಿ, 5 ರೂಪಾಯಿ ತಿನ್ನತಕ್ಕಂಥವರ ಮೇಲೆ ಛಡಿ ಆಡಿಸಿದರೆ ಪ್ರಯೋಜನವಿಲ್ಲ. ಇಲ್ಲಿ ಕುಳಿತಿದ್ದಾರಲ್ಲ ದೊಡ್ಡ ದೊಡ್ಡ ಬಂಗಲೆಗಳಲ್ಲಿರುವವರ ಮೇಲೆ ನಿಮ್ಮ ವಾಕಿಂಗ್ ಸ್ಟಿಕ್ ಸ್ವಲ್ಪ ಕೆಲಸ ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿ ಹೋಗಿ ಇನ್ಸ್‌ಪೆಕ್ಷನ್ ಮಾಡಿ ಬಿಗಿ ತನ್ನಿ ಎಂದು ಹೇಳುತ್ತಿದ್ದಾರೆ, ಮತ್ತೇನೂ ಇಲ್ಲ ಅವರ ಮಾತಿನಲ್ಲಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೇ, ನಿನ್ನೆ ಸನ್ಮಾನ್ಯ ಸದಸ್ಯರುಗಳು ಹೇಳಿದರು. ಇದರದ್ದೇ ಒಂದು ಗೊಂದಲವಾಯಿತು. ಮತ್ತೆ ಛಡಿ ಆಡಿಸುವುದಕ್ಕೆ ಅವರೇ ಪ್ರೋತ್ಸಾಹ ಕೊಡುತ್ತಿದ್ದಾರೆ. ಎಲ್ಲಾ ಅನಾಹುತಕ್ಕೂ ಇವರೇ ಕಾರಣರಾಗುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದೆಲ್ಲ ಅವರ ಉದ್ದೇಶ. ಯಾರು ಸೆಕೆಂಡ್ ಡಿವಿಕ್ಷನ್ ಕ್ಲರ್ಕ್ ತರಹದವರು ಇದ್ದಾರೆ. ಅವರ ಮೇಲೆ ತೋರಿಸುವುದಕ್ಕೆ ಹೋಗಬೇಡಿ. ನೀವು ಹೋಗುತ್ತಿದ್ದ ಹಾಗೆ, ಸರಿಯಿಲ್ಲದಿದ್ದರೆ ನಾನು ಆ ಸ್ಥಾನದಲ್ಲಿ ಉಳಿಯುವುದು ಕಷ್ಟ, ಎನ್ನುವಂಥ ವಾತಾವರಣ ಇದ್ದರೆ, ನೀವು ಏನೂ ತೋರಿಸುವ ಅಗತ್ಯವಿಲ್ಲ. ಏನಾಗಿದೆ ಎಂದರೆ ಅಪರೂಪಕ್ಕೆ ನಿಮ್ಮಂಥವರು ಚಟಕ್ಕೆ ಒಂದು ಸಲ ಮಾಡುತ್ತೀರಿ, ನಂತರ ಕೈಬಿಟ್ಟು ಬಿಡುತ್ತೀರೋ ಮತ್ತು ಉಳಿದವರು ಅವರ ಜೊತೆಗೆ ಎಲ್ಲಾ ನಡೆಯುತ್ತಿದೆ. ಇದನ್ನು ನಂಬುತ್ತೀರೋ ಇಲ್ಲವೋ, ನಾನು ಹೇಳಬಾರದು, ದೊಡ್ಡ ದೊಡ್ಡವರ ಜೊತೆಗೆ ಸಚಿವರುಗಳ ಸಂಬಂಧ ಏನಿದೆ, ಅವರ ಇತಿಮಿತಿ, ದೂರ ಅಂತರ, ನಾನು ಮಂತ್ರಿ ಬಂದಿದ್ದೇನೆ ಎನ್ನುವ ಭಯ ಬಂದರೆ ಅನೇಕ ಕ್ರಾಂತಿಯಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ನಾನು ಇಲ್ಲಿ ಅವರ ವಾಕಿಂಗ್ ಸ್ಟಿಕ್ ಬಗ್ಗೆ ಏಕೆ ಹೇಳಿದೆ ಎಂದರೆ, ಅವರು ನನ್ನಿಂದೇನೂ ಸ್ಫೂರ್ತಿ ಪಡೆದುಕೊಳ್ಳಬೇಕಾದುದ್ದಿಲ್ಲ ಎಂದು ಕಾಣುತ್ತದೆ. ಬೈರೇಗೌಡರಿಗೆ ಆ ಸ್ಥಿಮಿತ ಇದೆ. ನಾನು ಅವರ ಬಗ್ಗೆ ಬಹಳ ಗೌರವ ಹೊಂದಿರತಕ್ಕವನು. ಯಾರ‍್ಯಾರು ದ್ರೋಹ ಮಾಡುತ್ತಾರೆ, ಯಾರು ಆಯೋಗ್ಯರಿದ್ದಾರೆ, ಅವರ ಮೇಲೆ ನೀವು ಇದೇ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ. ಒಬ್ಬ ರೈತನ ಮಗನಾಗಿ ಹೇಳುತ್ತೇನೆ, ಈ ರಾಜ್ಯದಲ್ಲಿ ಈ ರೀತಿಯ ಕೋಟಿಗಟ್ಟಲೆ ಲೂಟಿ ಹೊಡೆಯುವಂಥಾವರ ಬಗ್ಗೆ ಮರ್ಸಿಲೆಸ್ ಆಗಿ ನೀವು ಕ್ರಮ ತೆಗೆದುಕೊಳ್ಳಿ. ಇದರ ಬಗ್ಗೆ ಖಂಡಿತವಾಗಿ ನಮ್ಮ ಯಾರದೂ ವಿರೋಧವಿಲ್ಲ. ಪಕ್ಷ, ಪಂಗಡ ಎಂದು ಹೇಳುತ್ತಾ ಕುಳಿತುಕೊಂಡು, ಇಲ್ಲಿ ಯಾರನ್ನೋ ಬೆಳೆಸುತ್ತ ಇದ್ದುಬಿಟ್ಟರೆ ಅವರು ನಮ್ಮನ್ನು ಆಹುತಿ ತೆಗೆದುಕೊಳ್ಳುತ್ತಾರೆ, ನಿಮ್ಮನ್ನೂ ಆಹುತಿ ತೆಗೆದುಕೊಳ್ಳುತ್ತಾರೆ. ಭಸ್ಮಾಸುರನ ವಂಶ ಇದು. ಇವತ್ತು ನಿಮ್ಮ ತಲೆಯ ಮೇಲೆ ಕೈ ಇಡುತ್ತಾರೆ, ನನ್ನ ತಲೆಯ ಮೇಲೆ ಕೈ ಇಡುತ್ತಾರೆ, ಎಲ್ಲಾ ಸಾರ್ವಜನಿಕರ ತಲೆಯ ಮೇಲೂ ಕೈ ಇಡುತ್ತಾರೆ. ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇನ್ನೊಂದು ವಿಷಯವೆಂದರೆ, ವ್ಯವಸಾಯ ಇಲಾಖೆಯ ಬಗ್ಗೆ ತಾವು ಆದಷ್ಟು ಪ್ರಯತ್ನ ಮಾಡುತ್ತಿದ್ದೀರಿ. ನಾನೂ ಕೂಡ ಶಿವಮೊಗ್ಗ ಜಿಲ್ಲಾ ಪರಿಷತ್ತಿನ ಸದಸ್ಯನಾಗಿದ್ದಾಗ, ಅಗ್ರಿಕಲ್ಚರ್ ಕಮಿಟಿಯ ಛೇರ್‌ಮೆನ್ ಆಗಿದ್ದೆ.

ನನ್ನ ಅನೇಕ ಅನುಭವಗಳನ್ನು, ಸ್ವಲ್ಪ ಸಣ್ಣಮಟ್ಟ ಅನುಭವಗಳನ್ನು ತಮ್ಮೊಂದಿಗೆ ಹಂಚಿಕೊಂಡರೆ ತಾವು ಇದನ್ನು ಮಾನ್ಯ ಮಾಡಬಹುದು ಎಂದು ನಾನು ಭಾವಿಸಿಕೊಂಡಿದ್ದೇನೆ. ಪರಿಕರಗಳನ್ನು ಕೊಳ್ಳಲು ರಾಜ್ಯದಲ್ಲಿ ಎಸ್.ಪಿ.ಡಿ. ರೇಟ್ ಕಾಂಟ್ರ್ಯಾಕ್ಟ್ ಎಂದು ಇದೆ, ಇದು ಭಾರೀ ಕೆಟ್ಟ ದಂಧೆ. ಮಾರ್ಕೆಟ್ ರೇಟಿಗೂ, ಎಸ್.ಪಿ.ಸಿ. ರೇಟಿಗೂ ಅಜಗಜಾಂತರ ವ್ಯತ್ಯಾಸವಿದೆ. ನೀವು ಅವನ ಫ್ಯಾಕ್ಟರಿಗೇ ಹೋಗಿ ಕೇಳಿ. ಒಂದು ಕಬ್ಬಿಣದ ನೇಗಿಲಿಗೆ ನೂರು ರೂಪಾಯಿ ಕೊಡುತ್ತಾನೆ, ಎಸ್.ಪಿ.ಡಿ. ರೇಟ್‌ನಲ್ಲಿ ಅವನು ಇನ್ನೂರು • ರೂಪಾಯಿ ಹಾಕಿಕೊಂಡಿರುತ್ತಾರೆ, ಹಾಗೆ ಪುಸ್ತಕದಲ್ಲಿ ಮೆನ್‌ಷನ್ ಮಾಡಿರುತ್ತಾರೆ. ಎಲ್ಲಿ ಕೊಂಡುಕೊಂಡಿರಿ ಎಂದು ನೀವು ಅಧಿಕಾರಿಗಳನ್ನು ಕೇಳಿದರೆ, ಎಸ್.ಪಿ.ಡಿ,. ಕಾಂಟ್ರ್ಯಾಕ್ಟ್ ಎಂದು ಇದೆ, ಪುಸ್ತಕದ ಪ್ರಕಾರ ಅಲ್ಲೇ ಕೊಳ್ಳಬೇಕು ಎಂದು ಇದೆ ಎಂದು ಹೇಳುತ್ತಾರೆ. ಇಲ್ಲಿ ರಾಜ್ಯ ಮಟ್ಟದಿಂದ ಕೊನೆಯವರೆಗೂ ಕೂಡ ಇದು ಇದೆ. ಶಿವಮೊಗ್ಗ ಜಿಲ್ಲಾ ಪರಿಷತ್ತಿನಲ್ಲಿ ಇದ್ದಾಗ. ನಾವು ಇದನ್ನು ಕಂಟ್ರೋಲ್ ಮಾಡಿದೆವು.

ಸರ್ಕಾರದ ಏನು ಬೇಕಾದರೂ ಹೇಳಲಿ. ನಮ್ಮ ಜಿಲ್ಲಾ ಪರಿಷತ್ತಿನಿಂದ ನಾವು, ಯಾರು ಲೋಕಲ್ ಆಗಿ ಕುಲುಮೆಯಲ್ಲಿ ಕೆಲಸ ಮಾಡುತ್ತಾರೆ, ನೇಗಿಲು ಬಡಿಯುತ್ತಾರೆ ಹಾರೆ ತಯಾರು ಮಾಡುತ್ತಾರೆ, ಅಂಥವರ ಕೈಗೆ ಕೆಲಸವಾಗಲಿ ಎಂದು ಹೇಳಿ ನಾವು ನಮ್ಮ ಟಿ.ಎ.ಪಿ. ಸಂಸ್ಥೆಗಳಿಗೆ ಕೊಟ್ಟೆವು. ಟೆಂಡರ್‌ನಲ್ಲಿ ಎಸ್.ಪಿ.ಡಿ. ರೇಟ್‌ನವರಿಂದಲೂ, ಬೇರೆ ಬೇರೆ ಕಾರ್ಖಾನೆಗಳವರೆಲ್ಲರಿಂದಲೂ ಸ್ಯಾಂಪಲ್ ತರಿಸಿಕೊಂಡು, ಅವರ ನೇಗಿಲುಗಳನ್ನು ಸ್ಯಾಂಪಲ್ ತಂದು ಇಟ್ಟೆವು. ನಮ್ಮ ಟಿ.ಎ.ಪಿ. ಸಂಸ್ಥೆಗಳವರೂ ಕೂಡ ಸ್ಯಾಂಪಲ್ ತಂದು ಇಟ್ಟರು. ಒಂದು ಜಿಲ್ಲೆಯಲ್ಲಿ ಚೆನ್ನಾಗಿ ಕೆಲಸ ಮಾಡುವಂಥ ಟಿ.ಎ.ಪಿ. ಸಂಸ್ಥೆಗಳಿಗೆ ಎನ್‌ಕರೇಜ್ ಮಾಡಿ, ಅವರ ಸ್ಯಾಂಪಲ್ ತಂದು ಇಡಿಸಿ, ನಾವು ಅವರಿಗೆ ಆರ್ಡರ್ ಕೊಟ್ಟೆವು.

ಟಿ.ಎ.ಪಿ. ಸಂಸ್ಥೆಗಳಿಗೆ ನೀವು ಸರಬರಾಜು ಮಾಡಿ ಎಂದು ಕೊಟ್ಟೆವು. ಎಲ್ಲರಿಗಿಂತ ಕಡಿಮೆ ರೇಟಿನಲ್ಲಿ ತೀರ್ಥಹಳ್ಳಿ ಮತ್ತು ಸಾಗರಗಳಲ್ಲಿ ಟಿ.ಎ.ಪಿ. ಸಂಸ್ಥೆಗಳು ಸರಬರಾಜು ಮಾಡಿದವು, ಇದು 1989-90ನೇ ಇಸವಿಯಲ್ಲಿ. ಆ ವರ್ಷ ನನ್ನ ಅಂದಾಜಿನಲ್ಲಿ ಇದರಿಂದ ಒಂದು ಜಿಲ್ಲಾ ಪರಿಷತ್ತಿಗೆ ಎಷ್ಟು ಉಳಿತಾಯ ಆಗಬಹುದು ಹೇಳಿ. ಸುಮಾರು ಐದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣ ಪರಿಕರಗಳನ್ನು ಕೊಳ್ಳುವುದರಲ್ಲಿ ಉಳಿತಾಯ ಆಯಿತು. ನಾವು ಐದು ಲಕ್ಷ ರೂಪಾಯಿಗಳಷ್ಟು ಹೆಚ್ಚಿನ ಪರಿಕರಗಳನ್ನು ಹಂಚಿದ್ದೇವೆ. ಸ್ಥಳೀಯವಾಗಿರತಕ್ಕಂಥ ನಮ್ಮ ಕುಲುಮೆ ಕೆಲಸಗಾರರು ಯಾರಿದ್ದಾರೆ, ಅವರ ಕೈಗೆ ಒಂದು ಕೆಲಸ ಕೂಡ ಆಯಿತು. ದಯಮಾಡಿ ಇದನ್ನು ಮಾಡಿ. ತಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಇದೆಯಲ್ಲಾ, ಅಲ್ಲಿ ಭಾರೀ ದರ್ಬಾರು ನಡೆಯುತ್ತಿದೆ. ಅಲ್ಲಿ ಜಿಲ್ಲಾ ಮ್ಯಾನೇಜರ್ ಇರುತ್ತಾನಲ್ಲಾ, ಅವನು ರಾಜಕುಮಾರ. ಇವತ್ತು ಮಹಾರಾಜರುಗಳೆಲ್ಲಾ ಸತ್ತು ಹೋಗಿದ್ದಾರೆ. ಇವರದ್ದೇ ದರ್ಬಾರು. ಆತನ ಕಾರು ಏನು, ಆತನ ದರ್ಬಾರು ಏನು? ನಾನು ಹೋದರೆ ಆತ ಸಿಗರೇಟು ಎಳೆಯುತ್ತಾ ಕಾಲ ಮೇಲೆ ಕಾಲು ಹಾಕಿಕೊಂಡು, ನಾನು ಒಬ್ಬ ಶಾಸಕ ಬಂದಿದ್ದೇನೆ ಎಂದರೂ ಕೂಡ ರೆಕಗ್ನೈಸ್ ಮಾಡುವ ಸ್ಥಿತಿಯಲ್ಲಿಲ್ಲ. ಫೋನ್ ಮಾಡುತ್ತಿದ್ದಾನೆ, ನನಗೆ ಐದು ಟನ್ ಗೊಬ್ಬರ ಕೊಡಿ,

ನಾನು ಅಲ್ಲಿಗೆ ಕಳುಹಿಸಬೇಕು ಎಂದು. ಅವರ ಸ್ವಂತ ದಂಧೆಗಳು ಈ ರೀತಿಯಲ್ಲಿ ನಡೆಯುತ್ತಿವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರಲ್ಲ, ಎಷ್ಟು ವ್ಯತ್ಯಾಸಗಳು ಇದೆ ಎಂದು. ಈ ರಾಜಕುಮಾರರನ್ನು ಸಾಕಲಿಕ್ಕಾಗಿ ಈ ಎಲ್ಲಾ ಹಣ, ನಮ್ಮ ಎಸ್.ಸಿ.ಪಿ.ಯಲ್ಲಿ ಕೊಟ್ಟಿರುವ ಹಣವನ್ನು, ನಮ್ಮ ರೈತರ ಹಣವನ್ನು, ಯಾರು ದುರ್ಬಲ ವರ್ಗದವರಿಗೆ ನೀವು ಪರಿಕರಗಳನ್ನು ಹಂಚಬೇಕು ಎಂದು ಹೇಳಿದ್ದೀರಿ, ಈ ಹಣದಲ್ಲಿ ಲಾಭ ತಿಂದು ಇವರನ್ನು ಬೆಳೆಸುವುದು ಬೇಡ ನಾವು. ತಾವೂ ಕೂಡ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥವರು, ದಯಮಾಡಿ ತಾವು ಈ ದಿಕ್ಕಿನಲ್ಲಿ, ಟಿ.ಎ.ಪಿ. ಸಂಸ್ಥೆಗಳಿಗೆ ಇವುಗಳನ್ನು ಕೊಟ್ಟು ವಿತರಣೆ ಮಾಡಿಸಿದರೆ ಸ್ವಲ್ಪ ಒಳ್ಳೆಯದು ಆಗಬಹುದೇನೋ ಎಂದು ಹೇಳುತ್ತೇನೆ. ಏಕೆಂದರೆ ಜಾಗ್ರತೆ ಜಿಲ್ಲಾ ಪರಿಷತ್ತಿನವರು ಈ ರಿಸ್ಕನ್ನು ತೆಗೆದುಕೊಂಡು ಅವರು ಪ್ರಾಮಾಣಿಕವಾಗಿ ಇದ್ದುದನ್ನು ಸ್ವಲ್ಪ ವಾಚ್ ಅಂಡ್ ವಾರ್ಡ್ ಮಾಡಬೇಕು. ಏಕೆಂದರೆ ನೀವು ರಾಜ್ಯದ ಮಂತ್ರಿಯಾಗಿ ಎಲ್ಲಾ ಹಳ್ಳಿಹಳ್ಳಿಗಳಿಗೆ ಹೋಗಿ ನೋಡಲು ಆಗುವುದಿಲ್ಲ. ಇದನ್ನು ಮಾಡಲು ಆಗುತ್ತದೆಯೇ ಎನ್ನುವುದನ್ನು ದಯಮಾಡಿ ಹೇಳಬೇಕು.

ಶ್ರೀ ಸಿ. ಬೈರೇಗೌಡ : ಅರಗ ಜ್ಞಾನೇಂದ್ರ ಅವರು ಹೇಳಿರತಕ್ಕಂಥಾದ್ದು ನಿಜ. ರಾಜ್ಯಮಟ್ಟದಲ್ಲಿ ಬೆಲೆಯನ್ನು ನಿಗದಿ ಮಾಡತಕ್ಕಂಥ ವ್ಯವಸ್ಥೆ ಇತ್ತು. ಇದು ನನಗೂ

ಕೂಡ ಗೊತ್ತಿತ್ತು. ಇವರು ಬೆಲೆ ನಿಗದಿ ಮಾಡತಕ್ಕಂಥಾದ್ದಕ್ಕೂ, ಒಬ್ಬ ರೈತ ನೇರವಾಗಿ ಅಂಗಡಿಯಲ್ಲಿ ಕೊಂಡುಕೊಳ್ಳತಕ್ಕಂಥ ಬೆಲೆಗೂ ಅಜಗಜಾಂತರ ವ್ಯತ್ಯಾಸ ಇದ್ದುದ್ದು ನಿಜ. ಇದನ್ನು ಮನಗಂದು ಈ ವರ್ಷ ರಾಜ್ಯ ಮಟ್ಟದಲ್ಲಿ ಬೆಲೆಯನ್ನು ನಿಗದಿ ಮಾಡತಕ್ಕಂಥಾದ್ದನ್ನು ಸಂಪೂರ್ಣವಾಗಿ ರದ್ದು ಮಾಡಿದ್ದೇವೆ. ಅದು ನೇಗಿಲು ಇರಬಹುದು ಅಥವಾ ಬೇರೆ ಏನೇ ಇರಬಹುದು, ಅದನ್ನು ನೇರವಾಗಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮೂಲಕ, ಯಾರು ತಯಾರಕರಿದ್ದಾರೆ, ಅವರಿಂದ ಕೊಂಡುಕೊಳ್ಳತಕ್ಕಂಥಾದ್ದನ್ನು ಮಾಡಿದ್ದೇವೆ. ನಾನು ಈಗಾಗಲೇ ಒಂದು ಉದಾಹರಣೆ ಕೊಟ್ಟೆ, ಒಂದು ಸಬ್ ಮರ್ಸಿಬಲ್ ಪಂಪು 22 ಸಾವಿರ ರೂಪಾಯಿ ಎಸ್.ಡಿ.ಪಿ. ರೇಟ್‌ನಲ್ಲಿ ಇದ್ದದ್ದು ಈಗ ಸರಬರಾಜು ಆಗುತ್ತಾ ಇರತಕ್ಕಂಥಾದ್ದು ಸುಮಾರು ಹದಿನೇಳೂವರೆ, 18 ಸಾವಿರ ರೂಪಾಯಿಗೆ. ಒಂದೇ ಒಂದು ಬಾಬತ್ತಿನಲ್ಲಿ ಸುಮಾರು 3 ಸಾವಿರ ರೂಪಾಯಿ ಕಡಿಮೆ ಬೆಲೆಗೆ ಇವತ್ತು ಸರಬರಾಜು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇದೇ ವ್ಯವಸ್ಥೆಯನ್ನು ಬೇರೆ ಎಲ್ಲ ಪರಿಕರಗಳಿಗೂ ತರಬೇಕು ಎನ್ನುವ ತೀರ್ಮಾನ ಮಾಡಿದ್ದೇವೆ. ರೈತರಿಗೆ ಮೋಸ ಆಗುತ್ತಾ ಇದ್ದದ್ದು ನಿಜ. ಆ ಮೋಸವನ್ನು ತಡೆಗಟ್ಟತಕ್ಕಂಥ ಪ್ರಯತ್ನ ಮಾಡಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಇನ್ನೂ ರೆವಿನ್ಯೂ ಬಗರ್ ಹುಕುಂ ಸಾಗುವಳಿ ಬಗ್ಗೆ ಈಗಾಗಲೇ ಪ್ರಸ್ತಾಪಿಸಲಾಗಿದೆ. ನಾನೂ ಕೂಡ ಬಗರ್ ಹುಕುಂ ಸಾಗುವಳಿ ಮಂಜೂರಾತಿ ಸಮಿತಿಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಇವತ್ತು ಅಲ್ಲಿ ಅನೇಕ ತೊಡಕುಗಳಿವೆ ನಮಗೆ. ಶಾಸಕರಾಗಿ ಕೆಲವರು ಹೇಳುತ್ತಾರೆ, ಕೆಲವರು ಹೇಳಲು ಆಗುವುದಿಲ್ಲ. ನಾವು ಇತ್ತೀಚೆಗೆ ಪತ್ರಿಕೆಯಲ್ಲಿ ನೋಡಿದೆ. ಎಷ್ಟೋ ಸಾವಿರ ಹೆಕ್ಟೇರು ಪ್ರದೇಶವನ್ನು ನಮಗೆ ರಿಲೀಸ್ ಮಾಡಿ ಕೊಟ್ಟರು. ಕೇಂದ್ರ ಸರ್ಕಾರದವರು ಎಂದು ಹೇಳಿದ್ದಾರೆ. ನಮ್ಮ ಬಗರ್ ಹುಕುಂ ಸಮಿತಿಗಳಿಗೆ,. ತಹಶೀಲ್ದಾರರಿಗೆ ಈ ಸುತ್ತೋಲೆ ಬರಲಿಲ್ಲ. ಅರಣ್ಯ ಇಲಾಖೆಯಿಂದ ಎಷ್ಟು ಜಮೀನನ್ನು ಹಸ್ತಾಂತರ ಮಾಡಿದ್ದಾರೆ, ಇದನ್ನು ನಾವು ಎಷ್ಟು ಮಂಜೂರು ಮಾಡಲು ಆಗುತ್ತದೆ ಎನ್ನುವುದು ಇಲ್ಲಿಯವರೆಗೂ ಕೂಡ ಬರಲಿಲ್ಲ. ಸೊಪ್ಪಿನ ಬೆಟ್ಟ ಇದೆ. ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್ ಇದೆ.

ಇದನ್ನು ನಮ್ಮ ರೆವಿನ್ಯೂ ಇಲಾಖೆಯವರು ನಿರ್ಧಾರ ತೆಗೆದುಕೊಳ್ಳತಕ್ಕಂಥಾದ್ದು. ಇದಕ್ಕೆ ನಾನು ಮಾನ್ಯ ಜಾಲಪ್ಪನವರು ಇದ್ದಾಗ ಕೇಳಿದೆ. ಅದನ್ನು ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಿದ್ದೇವೆ, ಅವರ ರಿಪೋರ್ಟ್ ಬಂದ ನಂತರ ನಾವು ನಿಮಗೆ ಸುತ್ತೋಲೆಯನ್ನು ಕೊಡುತ್ತೇವೆ ಎಂದು ಹೇಳಿದರು. ಅದು ಇವತ್ತಿಗೂ ಕೂಡ ಬರಲಿಲ್ಲ. ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದು ಹೌದೇ? ಅಥವಾ ಇದರ ಬಗ್ಗೆ ಏನು ನಿರ್ಧಾರ ತೆಗೆದುಕೊಂಡಿದ್ದೀರಿ? ನಮ್ಮ ಮಲೆನಾಡಿನಲ್ಲಿ ಎಲ್ಲವೂ ಕೂಡ ಸಿ ಅಂಡ್ ಡಿ ಮತ್ತು ಸೊಪ್ಪಿನ ಬೆಟ್ಟಗಳೇ ನಾವು ಕೊಡಲಿಕ್ಕೆ ಬರುವುದಿಲ್ಲ, ಯಾರಿಗೂ ಏನೂ ಮಂಜೂರು ಮಾಡಲಿಕ್ಕೆ ಬರುವುದಿಲ್ಲ. ಸಾವಿರಾರು ಅರ್ಜಿಗಳು ಇವತ್ತು ಇವೆ. ಅಂಥ ರೈತರನ್ನು ಬಿಡಿಸಲಿಕ್ಕೆ ಕೂಡ ಆಗುವುದಿಲ್ಲ.

ಹಾಗಾಗಿ ಸರ್ಕಾರಕ್ಕೆ ಆದಾಯ • ಬರುತ್ತದೆ. ಅವರಿಗೂ ಕೂಡ ಒಂದು ಹಕ್ಕು ಹಾಕಿ ಕೊಟ್ಟ ಹಾಗೆ ಆಗುತ್ತದೆ. ಇನ್ನೊಂದು ವಿಷಯ ಎಂದರೆ ಸರ್ವೇಯರ್‌ಗಳು ಇಲ್ಲದೇ ನಾವು ಬಗರ್ ಹುಕುಂ ಸಾಗುವಳಿ ಮಂಜೂರಾತಿ ಕಮಿಟಿಯನ್ನು ರಚನೆ ಮಾಡಿ ಕೂಡ ಏನೂ ಪ್ರಯೋಜನವಿಲ್ಲ. ಯಾರು ಎಷ್ಟು ಬಗರ್ ಹುಕುಂ ಸಾಗುವಳಿ ಮಾಡಿದ್ದಾನೆ ಎನ್ನುವಂಥಾದ್ದು ನಿರ್ದಿಷ್ಟವಾಗಿ ಸರ್ವೇಯರ್ ಅಳತೆ ಮಾಡಬೇಕು. ಆ ಅಳತೆಯ ಒಂದು ಸ್ಕೆಚ್ಚನ್ನು ತಾನು ಕೊಟ್ಟ ನಂತರ ನಾವು

ಸಾಗುವಳಿ ಚೀಟಿ ಕೊಟ್ಟರೆ ಅದಕ್ಕೆ ಅರ್ಥ ಬರುತ್ತದೆ. ಅಥವಾ ಇವತ್ತು ನಾವು ಕಣ್ಣು ಅಂದಾಜಿನಲ್ಲಿ ಸಾಗುವಳಿ ಚೀಟಿ ಕೊಡುತ್ತೇವೆ. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಸರ್ವೆಗೆ ಒಳಪಡಿಸಿ, ಸರತಿಗೆ ಒಳಪಡಿಸಿ ನಾವು ಖಾತೆ ಹಾಕಿ ಕೊಡುತ್ತೇವೆ. ನಾಳೆ ಸರ್ವೆ ಆದನಂತರ ಅದನ್ನು ತಿದ್ದುಪಡಿ ಮಾಡಲು ಬರುತ್ತಿತ್ತು. ಆದರೆ ಬಗರ್ ಹುಕುಂ ಕಮಿಟಿಗೆ ಈ ಕಾನೂನಿನಲ್ಲಿ ಅವಕಾಶವಿಲ್ಲ. ದಯಮಾಡಿ ಮಾನ್ಯ ಕಾನೂನು ಸಚಿವರು ಇದನ್ನು ಸ್ವಲ್ಪ ತಿದ್ದುಪಡಿ ಮಾಡಬೇಕು. ಈಗ ಸರ್ವೇಯರ್ ಇಲ್ಲ, ಒಬ್ಬ ಎರಡು ಎಕರೆ ಮಾಡಿದ್ದಾನೆ ಎಂದು ಕಣ್ಣು ಅಂದಾಜಿಗೆ ಒಂದು ಸ್ಕೆಚ್ಚನ್ನು ತಂದು

2.50 ಪಿ.ಎಂ.

ನಾವು 2 ಎಕರೆ ಮಂಜೂರು ಮಾಡಿ ಅವನಿಗೆ ಸಾಗುವಳಿ ಚೀಟಿ ಕೊಟ್ಟ ನಂತರ ಅದೇ ಜಾಗವನ್ನು ನಾಳೆ ಹೋಗಿ ಅಳತೆ ಮಾಡಿದಾಗ ಅಲ್ಲಿ ಎರಡೂವರೆ ಎಕರೆ ಜಾಗವಿರಬಹುದು ಅಥವಾ ಒಂದೂವರೆ ಎಕರೆ ಜಾಗವಿರುಬಹುದು. ಇದನ್ನು ಬದಲಾವಣೆ ಮಾಡಲಿಕ್ಕೆ ಒಂದು ಅವಕಾಶವನ್ನು ಕಾನೂನಿನಲ್ಲಿ ಮಾಡಿಕೊಡಿ. ಇಲ್ಲದೇಹೋದರೆ ತತ್‌ಕ್ಷಣ ಸರ್ವೇಯರ್‌ನ್ನು ನೇಮಕ ಮಾಡಬೇಕು. ಈ ಎರಡರಲ್ಲೆ ಒಂದನ್ನು ಮಾಡಬೇಕು. ಈ ರೀತಿ ಮಾಡಿದರೆ ಆಗ ಮಾತ್ರ ರಾಜ್ಯದಲ್ಲಿ ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಡೈರಿ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗವುದಿಲ್ಲ. ಈಗ ನನ್ನ ಒಂದು ಅನುಭವವನ್ನು ಹೇಳುತ್ತಿದ್ದೇನೆ. ಅನೇಕ ವರ್ಷಗಳಿಂದ ನಾನು ಶಿವಮೊಗ್ಗ ವಿಭಾಗದ ಡೈರಿಯಲ್ಲಿ ಅಧ್ಯಕ್ಷನಾಗಿ ಮತ್ತು ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ.

ಇವತ್ತು ಹಾಲಿಗೆ ಬೆಲೆ ಜಾಸ್ತಿಮಾಡಿದ್ದಾರೆಂದು ಎಲ್ಲರೂ ಕೂಡ ಬೈಯ್ಯುತ್ತಿದ್ದಾರೆ. ಹಾಲಿಗೆ ಬೆಲೆ ಜಾಸ್ತಿಮಾಡದೇ ಹೋದರೆ ಹಾಲು ಹಾಕುವಂಥ ರೈತರಿಗೆ ನಷ್ಟವಾಗುತ್ತದೆ. ಇಕ್ಕಟ್ಟಿನ ಸ್ಥಿತಿಯಲ್ಲಿ ಸರ್ಕಾರ ಮತ್ತು ಡೈರಿಗಳು ಕೆಟ್ಟ ಹೆಸರು ತೆಗೆದುಕೊಳ್ಳುತ್ತಿವೆ. ಸದನದಲ್ಲಿ ಮಾನ್ಯ ಪಶುಸಂಗೋಪನಾ ಸಚಿವರು ಇಲ್ಲವೆಂದು ತೋರುತ್ತದೆ. ಒಂದು ವಿಚಾರವನ್ನು ಹೇಳುತ್ತೇನೆ,, ಆದೇನೆಂದರೆ ಕೋಟಿಗಟ್ಟಲೆ ಹಣವನ್ನು ನಾವು ಅನುದಾನದ ರೂಪದಲ್ಲಿ ಕೆಲವು ಡೈರಿಗಳಿಗೆ ಕೊಡುತ್ತಿದ್ದೇವೆ. ಇದು ಶಿವಮೊಗ್ಗ ವಿಭಾಗದ ಡೈರಿಗಳಿಗೆ ಬರುವುದಿಲ್ಲ. ಅನುದಾನಗಳನ್ನು ಕೊಡುವಾಗ ಆ ಡೈರಿಗಳ . ಮೇಲೆ ಕೆಲವು ಕಂಟ್ರೋಲ್‌ಗಳನ್ನು ಇಡಬೇಕು. ಇವತ್ತು ಏಕೆ ಹಾಲು ಬೆಲೆ ಜಾಸ್ತಿ ಮಾಡಬೇಕಾಯಿತೆಂದರೆ ಸಂಬಳ ಕೊಡುವುದಕ್ಕೆ ಸಿಕ್ಕಾಪಟ್ಟೆ ಹಣ ಹೋಗುತ್ತದೆ. ಏಕೆ ಹೀಗೆ ಆಗಿದೆಯೆಂದರೆ ನನ್ನ ಅಕ್ಕನ ಮಗ, ನನ್ನ ತಂಗಿ ಮಗ, ನಮ್ಮ ಮಾವನ ಮಗ ಹೀಗೆ ಎಲ್ಲರನ್ನೂ ಕೂಡ ನಿಯಮಾವಳಿ ಇಲ್ಲದೆಯೇ ಡೈರಿಗಳಿಗೆ ಸೇರಿಸಿಕೊಂಡಿದ್ದಾರೆ. ಅಪಾಯಿಂಟ್‌ಮೆಂಟ್ ಕೊಡಬೇಕಾದರೆ ಹಿಂದೆ ಡೈರಿಗಳಲ್ಲಿ ಯಾವುದೇ ರೀತಿ ನಿರೂಪಣೆ ಏನೂ ಕೂಡ ಇರಲಿಲ್ಲ. ತುಮಕೂರು ಡೈರಿ, ನಿಮ್ಮ ಮಂಡ್ಯ ಡೈರಿ ಅಲ್ಲಿ ಈ ತರಹ ಹೆಚ್ಚಿಗೆ ಜನರನ್ನು ಸೇರಿಸಿಕೊಂಡಿದ್ದಾರೆ. ನಮ್ಮ ಶಿವಮೊಗ್ಗ ಡೈರಿಗೆ ಎಷ್ಟು ಜನ ಬೇಕಾಗುತ್ತದೆ, ಪ್ಯಾಕೆಟ್ ಮಾಡಬೇಕಾದರೆ, ಮಾರಾಟ ಮಾಡಬೇಕಾದರೆ ಎಂಬುದನ್ನು ಎನ್.ಡಿ.ಡಿ.ಬಿ.ಯವರ ಹತ್ತಿರ ಸರ್ವೇ ಮಾಡಿಸಿದ್ದೇನೆ.

ನಾನು ಡೆನ್ಮಾರ್ಕಿನ ಆರ್ ಎನ್. ಡೈರಿಗೆ ಹೋಗಿದ್ದೇನೆ. ಆರ್.ಎನ್. ಡೈರಿಯಲ್ಲಿ ಕೇವಲ 65 ಜನ ಕಾರ್ಮಿಕರು ದಿನಕ್ಕೆ 3 ಲಕ್ಷ ಲೀಟರ್ ಹಾಲನ್ನು ಪ್ರೊಸಸ್ ಮಾಡುತ್ತಿದ್ದಾರೆ. ಶಿವಮೊಗ್ಗದ ಒಂದು ಡೈರಿಯಲ್ಲಿ 300 ಜನ ಕಾರ್ಮಿಕರಿಂದ ನಾವು

65 ಸಾವಿರ ಲೀಟರ್ ಹಾಲನ್ನು ಪ್ರೊಸಸ್ ಮಾಡುತ್ತೇವೆ, ಅದೇ ರೀತಿಯಾಗಿ ಎಲ್ಲಾ ಡೈರಿಗಳಿಗೂ ಎಷ್ಟು ಲೀಟರ್‌ಹಾಲನ್ನು ಪ್ರೊಸಸ್ ಮಾಡಬೇಕಾದರೆ ಎಷ್ಟು ಜನ ಕಾರ್ಮಿಕರು ಬೇಕು ಎಂಬುದನ್ನು ವೈಜ್ಞಾನಿಕವಾಗಿ ಸಂಶೋಧನೆಯನ್ನು ಮಾಡಿ ನಿಗದಿಗೊಳಿಸಬೇಕು. ಇದನ್ನು ನಿಯೋಜನೆ ಮಾಡದೇ ಹೋದರೆ ನಮ್ಮ ಹಾಲನ್ನು ಕೊಂಡುಕೊಂಡ ಗ್ರಾಹಕರಿಗೂ ಕೂಡ ಚೌರ ಆಗುತ್ತದೆ. ಇವತ್ತು ಕೂಡ ಹಾಲು ಹಿಂಡತಕ್ಕಂಥವರಿಗೆ ಏನೂ ಸಿಗುವುದಿಲ್ಲ. ಸಗಣಿ ಕೂಡ ಅವರಿಗೆ ಸಿಗುವುದಿಲ್ಲ. ಸಗಣಿ ವಾಸನೆ ಮಾತ್ರ ಅವರಿಗೆ ಉಳಿಯುತ್ತದೆ. ಬೇರೆ ಏನೂ ಅವರಿಗೆ ಸಿಗುವುದಿಲ್ಲ. ನಾವು ಡೈರಿಗಳಿಗೆ ಅನುದಾನವನ್ನು ಕೊಡಬೇಕಾದರೆ ಎನ್.ಡಿ.ಡಿ.ಬಿ.ಯವರ ಸಲಹೆಯನ್ನು ಪಡೆಯಬೇಕು. ಎನ್.ಡಿ.ಡಿ.ಬಿ.ಯಲ್ಲಿ ವೈಜ್ಞಾನಿಕವಾದ ಒಳ್ಳೆಯ ಅಧಿಕಾರಿಗಳು ಇದ್ದಾರೆ. ತುಂಬಾ ಪ್ರಾಮಾಣಿಕರಾದವರು ಇದ್ದಾರೆ. ಅವರ ಸಲಹೆಯನ್ನು ಪಡೆದು ನಮ್ಮ ಡೈರಿಗಳಿಗೆ ಯಾವ ರೀತಿ ವ್ಯವಸ್ಥೆ ಮಾಡಬೇಕು ಇದನ್ನು ತಾವು ಆಲೋಚನೆ ಮಾಡಿ ಅನುದಾನವನ್ನು ಕೊಡಬೇಕು. ಇಲ್ಲದಿದ್ದರೆ ಡೈರಿಗಳ ಕೆಲಸ ಕಾರ್ಯಗಳಲ್ಲಿ ಸರ್ಕಾರದವರೇ ಕೈಹಾಕಬಾರದು.

ಎನ್.ಡಿ.ಡಿ.ಬಿ.ಯವರಿಗೆ ನಡೆಸಿ ಎಂದು ಹೇಳಬೇಕು. ನಾವು ಪ್ರವೇಶ ಮಾಡದಿದ್ದರೂ ಕೂಡ ಎನ್.ಡಿ.ಡಿ.ಬಿ.ಯವರು ಚೆನ್ನಾಗಿ ನಡೆಸುತ್ತಾರೆ. ಇದನ್ನು ತಾವು ಆತ್ಮಾವಲೋಕನ ಮಾಡಬೇಕು. ಅರಣ್ಯ ಇಲಾಖೆಯ ಬಗ್ಗೆ ನಾನು ಒಂದೇ ಒಂದು ವಿಚಾರವನ್ನು ಮಾತ್ರ ಹೇಳುತ್ತೇನೆ. ಇಲ್ಲಿ ಮಾನ್ಯ ಅರಣ್ಯ ಮಂತ್ರಿಗಳು ಇದ್ದಾರೆ. ನಾನು ಕೂಡ ಅರಣ್ಯ ಇಲಾಖೆಯ ವಿಷಯ ಸಮಿತಿಯಲ್ಲಿ ಕೆಲಸ ಮಾಡಿದ್ದೇನೆ. ಮಾನ್ಯ ಮಂತ್ರಿಯವರಿಗೆ ತಮ್ಮ ಮೂಲಕ ಒಂದೇ ಒಂದು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಜಂಟಿ ಅರಣ್ಯ ಯೋಜನೆಯನ್ನು ಸರ್ಕಾರದವರು ಜಾರಿಗೆ ತಂದಿದ್ದಾರೆ.

ಇದು ತುಂಬಾ ಉತ್ಕೃಷ್ಟವಾದಂಥ ಯೋಜನೆಯಾಗಿದೆ. ಮೊದಲು ಅರಣ್ಯ ಇಲಾಖೆ ಮತ್ತು ಸಾರ್ವಜನಿಕರಿಗೆ ಸಂಬಂಧವೇ ಇರಲಿಲ್ಲ. ಜಂಟಿ ಅರಣ್ಯ ಯೋಜನೆಯಿಂದಾಗಿ ಈ ಸಂಬಂಧ ಇವತ್ತು ಮಾರ್ಪಾಡಾಗಿದೆ. ನಮ್ಮ ತಾಲ್ಲೂಕಿನಲ್ಲಿ ವಿಶೇಷವಾಗಿ ಒತ್ತುಕೊಟ್ಟು ಅಧಿಕಾರಿಗಳಿಗೆ ಹೇಳಿ ಜಂಟಿ ಅರಣ್ಯ ಸಮಿತಿ ಯೋಜನೆಗಳನ್ನು ಇವತ್ತು ನಿರ್ಮಾಣ ಮಾಡಿಸುತ್ತಿದ್ದೇವೆ. ಜನರೇ ಅರಣ್ಯ ಇಲಾಖೆಯಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳುವಂತೆ ಅರಣ್ಯ ಉತ್ಪನ್ನಗಳಿಂದ ಸ್ಥಳೀಯವಾಗಿರತಕ್ಕಂಥ ಹಳ್ಳಿಯ ಜನರಿಗೆ ಲಾಭವಾಗುತ್ತದೆ ಎನ್ನುವಂಥ ಒಂದು ಭಾವನೆಯನ್ನು ಇವತ್ತು ಬೆಳೆಸಬೇಕಾಗಿದೆ. ಖಂಡಿತವಾಗಿಯೂ ಇದು ಒಳ್ಳೆಯ ಯೋಜನೆ. ಇದನ್ನು ಮಾಡುವಾಗ ಹೆಚ್ಚು ಒತ್ತಾಸೆ ಕೊಡಬೇಕು. ನಮ್ಮ ರೇಂಜ್ ಆಫೀಸರ್‌ಗಳಿಗೆ ಫಾರೆಸ್ಟ್ ಆಫೀಸರ್‌ಗಳಿಗೆ ಯಾರು ಹೆಚ್ಚು ಅರಣ್ಯ ಸಮಿತಿಗಳನ್ನು ಮಾಡುತ್ತಾರೋ ಅವರಿಗೆ ಒಂದು ಇನ್‌ಕ್ರಿಮೆಂಟ್ ಕೊಡಿ ಅಥವಾ ಅವರಿಗೆ ಪ್ರಮೋಷನ್‌ನಲ್ಲಿ ಆದ್ಯತೆಯನ್ನು ಕೊಡಿ.

ಇದು ಖಂಡಿತವಾಗಿಯೂ ಒಳ್ಳೆಯದು. ಇದು ಮಾಡಿಲ್ಲವೆಂದರೆ ಜಂಟಿ ಸಮಿತಿಯಲ್ಲಿ ಇಟ್ಟ ಹಣದಲ್ಲಿ ಶೇಕಡಾವಾರು ವ್ಯವಹಾರ ನಡೆಯುತ್ತದೆ. ಅರಣ್ಯ ಇಲಾಖೆಯ ರೇಂಜರ್‌ರವರು ಕೆಲಸ ಮಾಡಿಸಿದರೆ, ಆ ಬಿಲ್ಲಿನ ಹಣವನ್ನು ಪಾವತಿಸಬೇಕಾದರೆ ಡಿ.ಎಫ್.ಓ.ರವರು ಹಣ ಬಿಲ್ ಕಟ್ ಮಾಡಿ ಎ.ಸಿ.ಎಫ್.ಗೆ ಕೊಡುತ್ತಾರೆ, ಎ.ಸಿ.ಎಫ್.ರವರು ಕಟ್ ಮಾಡಿ ರೇಂಜರ್‌ರವರಿಗೆ ಕೊಡುತ್ತಾರೆ. ರೇಂಜರ್ ರವರು ಕಟ್ ಮಾಡಿ ಫಾರೆಸ್ಟರ್‌ರವರಿಗೆ ಕೊಡುತ್ತಾರೆ. ಹೀಗೆ ಅದು ವ್ಯವಸ್ಥಿತವಾಗಿ ಬೆಳೆದುಕೊಂಡು ಬಂದಿರತಕ್ಕಂಥದ್ದು. ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ

ಕೊನೆಯಲ್ಲಿ 25 ಲಕ್ಷ ರೂಪಾಯಿ ಕೆಲಸ ಕೂಡ ಅರಣ್ಯ ಇಲಾಖೆಯಲ್ಲಿ ಆಗುತ್ತಿರಲಿಲ್ಲ. ಜಂಟಿ ಅರಣ್ಯ ಯೋಜನೆ ಮಾಡಿದಿರಿ. ಇನ್ನೊಂದು ಸೂಚನೆ ಮಾನ್ಯ ಮಂತ್ರಿಗಳಿಗೆ ಏನೆಂದರೆ ನನ್ನ ತಾಲ್ಲೂಕಿನಲ್ಲಿ ಮೊನ್ನೆ ಒಂದು ಚರ್ಚೆ ಅರಣ್ಯ ಇಲಾಖೆಯ ಅಧಿಕಾರಿಗಳವರದ್ದು ಆಗಿತ್ತು.

ಜಂಟಿ ಅರಣ್ಯ ಯೋಜನೆಯಲ್ಲಿ ಎಷ್ಟು ಹಣ ಬಂದಿದೆ, ಎಂದು ನೀವು ಹೇಳುವುದಿಲ್ಲ, ಎಷ್ಟು ಹಣವನ್ನು ತಿನ್ನುತ್ತಿದ್ದೀರಿ ನೀವು ಎಂದು ಹಳ್ಳಿಯ ಅಧ್ಯಕ್ಷ ಭಾರಿ ಚರ್ಚೆ ಮಾಡುತ್ತಿದ್ದನ್ನು ಮತ್ತು ನೀವು ಡಿ.ಎಫ್.ಓ. ಎಲ್ಲಾ ಹಣ ಇಟ್ಟುಕೊಂಡಿದ್ದೀರಿ ಎಂದು ಆತನೆ ಹೇಳುತ್ತಾನೆ ಎಂದು ಆ ಅಧಿಕಾರಿ ನನಗೆ ಹೇಳಿದನು. ಡಿ.ಎಫ್.ಓ. ಯಾವತ್ತು ಪಾರದರ್ಶಕವಾಗಿರಬೇಕು. ಸರ್ಕಾರದಿಂದ ಬಂದಿರತಕ್ಕಂಥ ಹಣವನ್ನು ಅರಣ್ಯ ಜಂಟಿ ಸಮಿತಿಯ ಅಧ್ಯಕ್ಷ ಮತ್ತು ನಿನ್ನ ಫಾರೆಸ್ಟರ್ ಇಬ್ಬರ ಜಂಟಿ ಖಾತೆಯನ್ನು ತೆಗೆದು ಬ್ಯಾಂಕ್‌ನಲ್ಲಿ ಹಣ ಇಡಬೇಕು, ಆವಾಗ ಹಳ್ಳಿಯವರಿಗೂ ಕೂಡ ನಾನೂ ಕೂಡ ಇದರಲ್ಲಿ ಭಾಗವಹಿಸುತ್ತಿದ್ದೇನೆಂದು ಹೊಣೆಗಾರಿಕೆ ಬರುತ್ತದೆ. ಇವತ್ತಿಗೂ ಕೂಡ ಜಂಟಿಕ ಅರಣ್ಯ ಸಮಿತಿಗಳ ಅದರ ಕಾರ್ಯಕ್ರಮಗಳು ನಡೆಯುತ್ತಿದ್ದರೂ ಕೂಡ ಹಣ ಜಂಟಿ ಅರಣ್ಯ ಸಮಿತಿಗೆ ಹೋಗುವುದಿಲ್ಲ, ರೇಂಜರ್‌ರವರೇ ಆ ಹಣದ ಬಗ್ಗೆ ತಮ್ಮ ಒಡೆತನವನ್ನು ಇಟ್ಟುಕೊಂಡಿರುತ್ತಾರೆ. ಡಿಫ್‌ಓ ತನ್ನ ಅಥೈರೈಸೇಷನ್ ಇಟ್ಟುಕೊಂಡಿದ್ದಾರೆ. ಹೀಗಾಗಿ ಹಣ ನೋಡದೆಯೇ ಜನ ಈ ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ. ಅವರನ್ನು ಈ ಯೋಜನೆಯಲ್ಲಿ ತೊಡಗಿಸಬೇಕಾದರೆ ಈ ಹಣ ಅಲ್ಲಿಯವರೆಗೆ ಹೋಗಬೇಕು. ಪುನಃ ಜಂಟಿ ಅರಣ್ಯ ಸಮಿತಿಗಳನ್ನು ಹೆಚ್ಚು ಒತ್ತು ಕೊಟ್ಟು ದಯವಿಟ್ಟು ಇದನ್ನು ಮಾಡಿಸಿ. ಇದರಿಂದ ತಮಗೂ ಒಳ್ಳೆಯ ಹೆಸರು ಬರುತ್ತದೆ. ನಮ್ಮ ಅರಣ್ಯಗಳು ಕೂಡ ಸಾಕಷ್ಟು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಎನ್ನುವಂಥ ಮಾತನ್ನು ಹೇಳುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಡಿ.ಆರ್. ಪಾಟೀಲ್ : (ಗದಗ) ಮಾನ್ಯ ಉಪಾಧ್ಯಕ್ಷರೆ, ಇಂದು ನಮ್ಮ ಮುಂದಿರುವ ಎಲ್ಲಾ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ನನ್ನ ಅನಿಸಿಕೆಗಳನ್ನು ಬೇರೆ ಬೇರೆ ಇಲಾಖೆಯ ಆಡಳಿತದ ಬಗ್ಗೆ ತಮ್ಮ ಮುಖಾಂತರ ಸಂಬಂಧಿಸಿದ ಸಚಿವರಿಗೆ ಹೇಳಬೇಕೆಂದು ಎದ್ದು ನಿಂತಿದ್ದೇನೆ. ನಮ್ಮ ರಾಜ್ಯದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಬಂದು ಬಹಳಷ್ಟು ವರ್ಷಗಳಾಯಿತು. ನಮ್ಮ ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿ ಆ ವ್ಯವಸ್ಥೆ ಬಂತು. ಶ್ರೀಯುತರುಗಳಾದ : ರಾಮಕೃಷ್ಣ ಹೆಗ್ಗಡೆಯವರು ಮತ್ತು ನಜೀರ್ ಸಾಹೇಬರು ಅಧಿಕಾರದಲ್ಲಿ ಇದ್ದಾಗ ಅದಕ್ಕೆ ಒಂದು ವ್ಯಾಪಕವಾದ ಬದಲಾವಣೆಯನ್ನು ತರಲಾಯಿತು. ಆದರೆ ಒಂದು ದೊಡ್ಡ ದೋಷ ಇದರಲ್ಲಿ ಇತ್ತು. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಎಲ್ಲಾ ವರ್ಗದ ಜನ ಇದರಲ್ಲಿ ಭಾಗವಹಿಸುವಂಥ ಅವಶ್ಯಕತೆ ಬಹಳಷ್ಟು ಇದ್ದರೂ ಸಹಿತ, ನಜೀರ್ ಸಾಹೇಬರಿಗೂ ಸಹಿತ ಅದನ್ನು ಜಾರಿಗೆ ತರಲಿಕ್ಕೆ ಸಾಧ್ಯವಾಗಲಿಲ್ಲ. ನಾವು ನಜೀರ್ ಸಾಹೇಬರ ಜೊತೆ ಇದರ ಬಗ್ಗೆ ಚರ್ಚೆ ಮಾಡಿದಾಗ ಅವರು ಹೇಳಿದರು. ಏನೆಂದರೆ, ನಾವು ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಇವತ್ತು ಏನಾದರೂ ಪಂಚಾಯತ್ ವ್ಯವಸ್ಥೆಯಲ್ಲಿ ಜಾರಿಗೆ ತರುವುದಕ್ಕೆ ಪ್ರಾರಂಭ ಮಾಡಿದರೆ ಈ ಕಾನೂನೇ ಪಾಸ್ ಆಗುವುದಿಲ್ಲ ಅಂತಹ ಪರಿಸ್ಥಿತಿ ಇದೆ ಎಂದು ಅವರು ಹೇಳಿದರು. ಅದಕ್ಕೆ ಮೊದಲು ಇದು

ಪಾಸ್ ಆಗಲಿ, ಇದಕ್ಕೆ ಬದಲಾವಣೆಯನ್ನು ಹೇಗೆ ತರಬೇಕು ಎನ್ನುವುದಕ್ಕೆ ಜನರೇ ಬದಲಾವಣೆಯನ್ನು ತಂದರೂ ತರಬಹುದು ಎನ್ನುವಂಥ ಮಾತ್ನು ಅವರು ಹೇಳಿದ್ದರು.

ಮುಂದೆ ರಾಜೀವಗಾಂಧಿಯವರು ಈ ದೇಶದ ಪ್ರಧಾನಿಯಾದ ಮೇಲೆ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅಮೂಲಾಗ್ರವಾಗ ಬದಲಾವಣೆಯನ್ನು ತರಬೇಕು, ಅದಕ್ಕೆ ಒಂದು ಘಟನಾ ಬದ್ಧವಾದಂಥ ಶಾಶ್ವತ ವ್ಯವಸ್ಥೆಯನ್ನು ಮಾಡಿ ಹೋಗಬೇಕೆನ್ನುವ ದೃಷ್ಟಿಯಿಂದ ಈ ದೇಶಾದ್ಯಂತ ಸುಮಾರು 2 ವರ್ಷಗಳ ಕಾಲ ಪ್ರತಿಯೊಬ್ಬ ಪಂಚಾಯತ್ ಸದಸ್ಯನಿಂದ ಹಿಡಿದು ಮುಖ್ಯಮಂತ್ರಿಗಳವರೆಗೆ, ಮುಖ್ಯ ಕಾರ್ಯದರ್ಶಿಗಳವರೆಗೆ ಕಾರ್ಯಾಚರಣೆಯನ್ನು ಏರ್ಪಡಿಸಿ ಅವರ ಸಲಹೆಸೂಚನೆಗಳನ್ನು ತಯಾರಿಸಿ ಒಂದು ಘಟನೆಯ ತಿದ್ದುಪಡಿ ಮಾಡುವಂತೆ ವ್ಯವಸ್ಥೆಯನ್ನು ಮಾಡಿದರು. ಲೋಕಸಭೆಯಲ್ಲಿ ಆ ಬಿಲ್ ಪಾಸ್ ಆಯಿತು. ದುರ್ದೈವದಿಂದ ರಾಜ್ಯಸಭೆಯಲ್ಲಿ ಆ 64ನೇ ಘಟನಾ ತಿದ್ದುಪಡಿ ಆಗಿನ ಜನತಾದಳ ಸದಸ್ಯರ ವಿರೋಧದಿಂದಲೇ ಪಾಸ್ ಆಗಲಿಲ್ಲ.

ಅದೇ ತಿದ್ದುಪಡಿ ಇವತ್ತು 73ನೇ ಘಟನಾ ತಿದ್ದುಪಡಿಯಾಗಿ ಮಾನ್ಯ ನರಸಿಂಹರಾಯರ ಸರ್ಕಾರದಲ್ಲಿ ನರಸಿಂಹರಾಯರ ಚಾಣಾಕ್ಷತನದಂದ ಜನಾತದಳಕ್ಕೂ ಸಹಿತ ಬೆಂಬಲದ ಒಂದು ಪರಿಸ್ಥಿತಿ ನಿರ್ಮಾಣವಾಗಿ ಇವತ್ತು ವ್ಯಾಪಕ ಬದಲಾವಣೆಯಾಗಿ ಪಂಚಾಯತ್‌ರಾಜ್ ವ್ಯವಸ್ಥೆ ನಮ್ಮ ರಾಜ್ಯದೊಳಗೆ ಬಂದಿದೆ. ಇದರಿಂದಾಗಿ ಸಮಾಜದ ಎಲ್ಲ ವರ್ಗದ ಜನರು ಅಧಿಕಾರವನ್ನು ವಹಿಸಿಕೊಳ್ಳುವಂಥ ಒಂದು ಅವಕಾಶ ಕಲ್ಪಿಸಿಕೊಟ್ಟಿದೆ. ತಮಗೆಲ್ಲಾಗೊತ್ತಿರುವ ಹಾಗೆ ಈ ವ್ಯವಸ್ಥೆ ಬರುವುದಕ್ಕಿಂತ ಮುಂಚೆ ಯಾವ ಗ್ರಾಮದೊಳಗೂ, ಬಹುತೇಕ ಗ್ರಾಮಗಳಲ್ಲಿರತಕ್ಕಂಥ ಗೌಡರು, ಶ್ಯಾನುಬೋಗರು, ಶ್ರೀಮಂತರನ್ನು ಬಿಟ್ಟರೆ ಮತ್ತೊಬ್ಬರಿಗೆ ಆಡಳಿತವನ್ನು ನಡೆಸುವುದಕ್ಕೆ ಅವಕಾಶ ಇರಲಿಲ್ಲ. ಇವತ್ತು ಆಡಳಿತ ನಡೆಸುವಂಥ ಆ ಅವಕಾಶ ಬಂದಿದೆ. ಗ್ರಾಮೀಣ ಭಾಗದಲ್ಲಿ ನಾಯಕತ್ವ ಬೆಳೆಯಬೇಕಾದರೆ, ಬೇರೆ ವರ್ಗದ ನಾಯಕತ್ವ ಬೆಳೆಯಬೇಕಾದರೆ, ಇಲ್ಲಿಯವರೆಗೆ ಅಲಕ್ಷಿಸಿದಂಥ ವರ್ಗದ ನಾಯಕತ್ವ ಬೆಳೆಯಬೇಕಾದರೆ ಅವರಿಗೆ ಅವಕಾಶ ಕೊಟ್ಟು ಹೆಚ್ಚಿನ ಅವಧಿಯನ್ನು ಕೊಡಬೇಕಾಗುತ್ತದೆ. ಆ ಹೆಚ್ಚಿನ ಅವಧಿಯನ್ನು ಕೊಡಬೇಕೆನ್ನುವ ಪ್ರಶ್ನೆ ಇದ್ದಾಗ ತಾವು ಇವತ್ತು ಹೊಸ ತಿದ್ದುಪಡಿಯನ್ನು ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಈ ಅಧಿಕಾರದ ಅವಧಿಯನ್ನೇ ಮೊಟಕುಗೊಳಿಸುವಂಥದ್ದು, ಅಧ್ಯಕ್ಷರ ಉಪಾಧ್ಯಕ್ಷರ ಅವಧಿಯನ್ನು ಮೊಟಕುಗೊಳಿಸುತ್ತಿದ್ದೀರಿ. ನೀವು ಏನೋ ಎಲ್ಲರಿಗೂ ಅವಕಾಶ ಕೊಡುತ್ತೇವೆಂದು ಹೇಳುತ್ತೀರಿ ಆದರೆ ಉದ್ದೇಶ ಬೇರೆ ಇದೆ ಎನ್ನುವಂಥ ಭಾವನೆ ನನಗೆ ಬರುತ್ತಿದೆ. ಇಲ್ಲಿಯವರೆಗೆ ಅಧಿಕಾರದಿಂದ ವಂಚಿತರಾಗಿರತಕ್ಕಂಥ ಜನ ಸೀಟ್‌ಗೆ ಬಂದಮೇಲೆ ಅವರಿಗೆ ಅನುಭವ ಹೆಚ್ಚಾಗಿ, ಅವರೇ ಅಧಿಕಾರದಲ್ಲಿ ಆ ಅಧಿಕಾರವನ್ನು ಚಲಾಯಿಸುವಂಥ ಒಂದು ಆತ್ಮವಿಶ್ವಾಸವನ್ನು ಮೂಡಿಸಿಕೊಳ್ಳುವಂಥ ಪೂರ್ವದಲ್ಲಿಯೇ ಅವರ ಅವಧಿಯನ್ನು ಕುಂಟಿತ ಮಾಡಿ ಅವರಿಗೆ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಆಗಲಾರದಂಥತ ವ್ಯವಸ್ಥೆಯನ್ನೇ ಮಾಡುವುದರ ಸಲುವಾಗಿ ತಾವು ಅವಧಿಯನ್ನು ಮೊಟಕುಗೊಳಿಸುವಂಥ ವ್ಯವಸ್ಥೆಯನ್ನು ಮಾಡುತ್ತಿದ್ದೀರಿ ಎನ್ನುವಂಥ ಭಾವನೆ ನನಗೆ ಬಂದಿದೆ.

ದಯವಿಟ್ಟು ಇದಕ್ಕೆ ಶ್ರೀ ಎಂ.ಸಿ. ನಾಣಯ್ಯನವರು ಆಗಲಿ, ಶ್ರೀ ಸಿ.ಬೈರೇಗೌಡರು ಆಗಲಿ,, ಶ್ರೀ ಆರ್.ವಿ. ದೇಶಪಾಂಡೆಯವರು ಆಗಲಿ ನೀವುಗಳು ಯಾರು ಇದಕ್ಕೆ ಅವಕಾಶವನ್ನು ಕೊಡಬಾರದೆಂದು ಹೇಳಿ, ನನ್ನ ಒಂದು ಸವಿನಯ ಪ್ರಾರ್ಥನೆ. ಇಲ್ಲ ಎಂದರೆ ಆ ವರ್ಗದ ಜನರಿಗೆ ಏನು ಆಡಳಿತದಲ್ಲಿ ಪಾಲುಗಾರರನ್ನಾಗಿ ಮಾಡಬೇಕು

ಎನ್ನುವಂತ ಗುರಿ ಇದೆ. ಆ ಗುರಿ ಸಾಧನೆ ಸಮರ್ಪಕವಾಗಿ ಆಗುವುದಿಲ್ಲ ಎನ್ನುವ ಮಾತನ್ನು ಒಪ್ಪಿಕೊಳ್ಳಬೇಕು. ಬೇಕಾದರೆ ನೀವುಗಳು ಒಬ್ಬರೆ ಇದ್ದಾಗ ಇದರ ಬಗ್ಗೆ ವಿಚಾರಣೆಯನ್ನು ಮಾಡಿ ನೋಡಿ. ಆದರಿಂದ ಅವರ ಹಿತಕ್ಕೆ ಧಕ್ಕೆ ಯಾಗುತ್ತದೆಯೇ ಇಲ್ಲವೋ ಎಂಬುದನ್ನು ವಿಚಾರ ಮಾಡಿ ನೋಡಬೇಕು. ಮಾನ್ಯ ಉಪಾಧ್ಯಕ್ಷರೇ, ಇವತ್ತು ನಮ್ಮ ಪಂಚಾಯತ್ ರಾಜ್ಯ ಸಭೆಗೆ ಬಹಳಷ್ಟು ಅಧಿಕಾರವನ್ನು ಕೊಟ್ಟಿದ್ದೇವೆ. ನಮ್ಮ ಸಹಕಾರಿ ಸಂಸ್ಥೆಗಳಿಗೆ ಜನರಲ್ ಬಾಡಿಗಳಿಗೆ ಏನು ಅಧಿಕಾರವಿರುತ್ತದೆ, ಬಹುತೇಕವಾಗಿ ಬಜೆಟ್‌ನ್ನು ಮುಂಜೂರು ಮಾಡುವುದನ್ನು ಬಿಟ್ಟು ಬಿಟ್ಟರೆ, ಅಷ್ಟೇ ಅಧಿಕಾರಗಳನ್ನು ಇವತ್ತು ಗ್ರಾಮ ಸಭೆಗಳು ಹೊಂದಿವೆ. ಎಲ್ಲಾ ಅಭಿವೃದ್ಧಿಯ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಸಭೆಗಳ ಮುಖಾಂತರ ಆಗಬೇಕು ಎಂಬುದು ಕಾನೂನು. ಇವೊತ್ತು ಗ್ರಾಮಗಳಲ್ಲಿ ಏನಾಗುತ್ತಿದೆ ಎಂದರೆ, ಯಾವ ಗ್ರಾಮ ಸಭೆಗಳು ಸಹ ನಡೆಯುತ್ತಿಲ್ಲ, ಯಾವ ಗ್ರಾಮ ಸಭೆಗಳು ನಡೆಯುವ ಅವಶ್ಯಕತೆಯೂ ಇಲ್ಲ. ಕಾನೂನು ಆ ರೀತಿಯಾಗಿದೆ. ಮಾನ್ಯ ಅಧ್ಯಕ್ಷರೆ, ಈ ಸದನದ ಸಭೆಯು ನಡೆಯಬೇಕಾದರೆ ಕೋರಂ ಬೇಕು. ಜಿಲ್ಲಾ ಪಂಚಾಯ್ತಿಯ ಸಭೆಯು ನಡೆಯಬೇಕಾದರೆ ಕೋರಂ ಬೇಕು. ತಾಲ್ಲೂಕು ಪಂಚಾಯ್ತಿಯ ಸಭೆಯು ನಡೆಯಬೇಕಾದರೆ ಕೋರಂ ಬೇಕು. ಗ್ರಾಮ ಪಂಚಾಯ್ತಿಯ ಸಭೆಯು ನಡೆಯಬೇಕಾದರೂ ಸಹ ಕೋರಂ ಬೇಕು. ಆದರೆ ಗ್ರಾಮ ಸಭೆ ನಡೆಯಬೇಕಾದರೆ ಯಾವ ಕೋರಂನ ಅವಶ್ಯಕತೆ ಇಲ್ಲ. ಆ ಒಬ್ಬ ಸದಸ್ಯ, ಸದಸ್ಯನ ಕುಟುಂಬದ ಜನ. ಇವರೇ ಒಂದು ಗ್ರಾಮ ಸಭೆಯನ್ನು ಬರೆದುಕೊಂಡರು ಕಾನೂನಿನ ಬದ್ಧವಾಗಿ ಅದು ಸರಿಯಾದ ವ್ಯವಸ್ಥೆಯೇ ಆಗುತ್ತದೆ. ಇವೊತ್ತು ಆಗುತ್ತಿರುವುದು ಸಹ ಇದೆ. ಅದಕ್ಕೆ ಗ್ರಾಮ ಸಭೆಗಳಿಗೆ ಕೋರಂನ್ನು ಕಡ್ಡಾಯವಾಗಿ ತಾವು ಮಾಡಬೇಕು. ಅಲ್ಲಿ ಫಲಾನುಭವಿಗಳ ಆಯ್ಕೆಯೂ ಗ್ರಾಮ ಸಭೆಯಲ್ಲಿಯೇ ಆಗುವಂತೆ ಒಂದು ಸಿಸ್ಟಂನ್ನು ತಾವು ಮಾಡಿ.

ನಾನು ಒಂದು ಸೂಚನೆಯನ್ನು ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಕೊಟ್ಟಿದ್ದೆ. ಸ್ವಾಮಿ ಗ್ರಾಮ ಸಭೆಯೊಳಗೆ ಆ ಗ್ರಾಮ ಮಟ್ಟದಲ್ಲಿ ಆಗತಕ್ಕಂತಹ ಎಲ್ಲಾ ಡೆವಲಪ್‌ಮೆಂಟಲ್ ವರ್ಕ್ಸ್ ಹಣ ಯಾವ ರೀತಿಯಲ್ಲಿ ವಿನಿಯೋಗವಾಗಿದೆ, ಯಾವ ರೀತಿಯಲ್ಲಿ ಖರ್ಚಾಗಿದೆ, ಎನ್ನುವುದರ ವಿಚಾರ ಮಾಡುವಂತಹ ಒಂದು ವ್ಯವಸ್ಥೆಯು ಕಾನೂನಿನ ಒಳಗಡೆ ಇದೆ, ಆಮೇಲೆ ಎಲ್ಲಾ ಫಲಾನುಭವಿಗಳನ್ನು ಆಯ್ಕೆ ಮಾಡುವಂತಹ ವ್ಯವಸ್ಥೆಯು ಅವರಿಗೆ ಇದೆ. ಇವು ಎರಡು ಬಹಳ ಸಮರ್ಪಕವಾಗಿ ನಡೆಯಬೇಕಾದರೆ ಇಲ್ಲಿ ನಡೆದದ್ದೇ ನಡವಳಿಕೆಯಲ್ಲಿ ಮೂಡಿ ಬರಬೇಕಾದರೆ ನೀವು ವಿಡೀಯೋ ಗ್ರಾಫ್ ಮಾಡುವಂತಹ ಒಂದು ವ್ಯವಸ್ಥೆಯನ್ನು ಜಾರಿಗೆ ತೆಗೆದುಕೊಂಡು ಬನ್ನಿ ಅಂದರೆ ದಾಖಲೆಗಳನ್ನು ತಿರುಚಲಿಕ್ಕೆ ಇದರಿಂದ ಯಾರಿಗೂ ಅವಕಾಶವಾಗುವುದಿಲ್ಲ. ಯಾವ ಛೇರ್ಮನ್‌ಗಳು ಸಹ ಅದನ್ನು ಬದಲಿ ಮಾಡುವುದಕ್ಕೆ ಆಗುವುದಿಲ್ಲ.

ಇದರಿಂದ ಅರ್ಹ ಫಲಾನುಭವಿಗಳ ಆಯ್ಕೆಯಾಗುತ್ತದೆ ಮತ್ತು ಆ ಗ್ರಾಮ ಮಟ್ಟದಲ್ಲಿ ಆದಂಥ ಅಭಿವೃದ್ಧಿಯ ಕಾರ್ಯಗಳಲ್ಲಿ ಏನಾದರೂ ವ್ಯತ್ಯಾಸವಿದ್ದರೆ, ಅವ್ಯವಹಾರ ನಡೆದಿದ್ದರೆ ಅಲ್ಲಿ ದಾಖಲಾಗುತ್ತದೆ. ಒಂದು ಮೂಲ ಭೂತವಾದಂತಹ ಡಾಟಾ ಅಲ್ಲಿ ಸಿಗುತ್ತದೆ. ಆ ರೀತಿಯಾಗಿ ಸಿಗುವುದರಿಂದ ಅಲ್ಲಿ ಭ್ರಷ್ಟಾಚಾರ ಸಾಕಷ್ಟು ಹತೋಟಿಗೆ ತರುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ನೀವು ವೀಡಿಯೋ ಗ್ರಾಫ್ ಮಾಡಿಸುವುದಕ್ಕೆ ಸರ್ಕಾರದವರು ಮುಂದಾಗಬೇಕೆಂದು ಹೇಳುತ್ತೇನೆ. ಇದನ್ನು ಮಾನ್ಯ ಪ್ರಕಾಶ್‌ರವರು ಒಪ್ಪಿದ್ದರು ವಿಡಿಯೋಗ್ರಾಫ್ ಮಾಡಿಸುವುದು ಒಳ್ಳೆಯ ಸಲಹೆ ಎಂದು ಹೇಳಿದ್ದರು. ಅಮೇಲೆ 4 ದಿವಸಗಳ ನಂತರ ನನ್ನನ್ನು

ಕರೆದು ಮಾನ್ಯ ಡಿ.ಆರ್. ಪಾಟೀಲ್‌ರೆ, ವಿಡಿಯೋಗ್ರಾಫ್ ಮಾಡಿಸುವುದಕ್ಕೆ ನಮ್ಮ ಇಲಾಖೆಯವರು ಏಕೋ ಒಪ್ಪುತ್ತಿಲ್ಲ. ಫೋಟೋ ತೆಗೆಸೋಣವೆಂದು ಹೇಳುತ್ತಾರೆ. ಫೋಟೋವನ್ನು ತೆಗೆಯುವುದರಿಂದ ಏನು ಸಾಧನೆಯನ್ನು ಮಾಡಿದ ಹಾಗೆ ಆಗುತ್ತದೆ? ಫೋಟೋ ಯಾವುದೇ ದಾಖಲೆಯನ್ನು ಕೊಡುವುದಿಲ್ಲ. ವಿಡಿಯೋಗ್ರಾಫ್ ಮಾಡುವುದರಿಂದ ಆ ಗ್ರಾಮ ಸಭೆಯಲ್ಲಿ ನಡೆದಂತೆ ಚರ್ಚೆ ಆಗ್ರಾಮ ಸಭೆಯಲ್ಲಿ ನಡೆದಂತಹ ನಡೆವಳಿಕೆ,

ಆ ಗ್ರಾಮ ಸಭೆಯಲ್ಲಿ ನಡೆದ ಎಲ್ಲಾ ನಿರ್ಣಯಗಳು ಒಂದು ದಾಖಲಾತಿಯಾಗಿ ನಿಮಗೆ ಸಿಗುತ್ತದೆ. ಅದನ್ನು ತಿರುಚುವುದಕ್ಕೆ ಯಾರ ಕೈಯಲ್ಲಿಯೂ ಅವಕಾಶವಿರುವುದಿಲ್ಲ. ಈ ಕೆಲಸವನ್ನು ಮಾಡುವುದರಿಂದ ಈ ಕೆಳಹಂತದಲ್ಲಿ ಏನು ಭ್ರಷ್ಟಾಚಾರ ನಡೆಯುತ್ತದೆ, ಅದಕ್ಕೆ ಒಂದು ದೊಡ್ಡ ಕಡಿವಾಣವನ್ನು ಹಾಕಿದ ಹಾಗೆ ಆಗುತ್ತದೆ. ಆದುದರಿಂದ ದಯವಿಟ್ಟು ಇದನ್ನು ಖರ್ಚು ಬಹಳ ಬರುತ್ತದೆಂದು ಹೇಳಬೇಡಿ. ಒಂದು ಗ್ರಾಮ ಸಭೆಯನ್ನು ನಡೆಸುವುದಕ್ಕೆ 500 ರೂಪಾಯಿಗಳು ಖರ್ಚು ಬರಬಹುದು. ಅಥವಾ ವಿಡಿಯೋಗ್ರಾಫ್ ಮಾಡಿಸುವುದಕ್ಕೆ ಸಾವಿರ ರೂಪಾಯಿಗಳು ಖರ್ಚು ಬರಲಿ, ಒಂದು ವರ್ಷದೊಳಗೆ ಎರಡು ಗ್ರಾಮ ಸಭೆಗಳನ್ನು ಮಾಡುತ್ತೇವೆ. ಒಂದು ಗ್ರಾಮಕ್ಕೆ 2000 ರೂಪಾಯಿಗಳನ್ನು ಈ ದಾಖಲೆಗಳನ್ನು ಸರಿಯಾಗಿ ಇಡುವುದಕ್ಕೆ, ದಾಖಲೆಗಳನ್ನು ಪ್ರಾಮಾಣಿಕವಾಗಿ ಇಡುವುದಕ್ಕೆ ಈ ವ್ಯವಸ್ಥೆಯಲ್ಲಿ ಪ್ರಾಮಾಣಿಕವಾಗಿ ಆಯ್ಕೆಯಾಗುವಂತಹ ಒಂದು ವ್ಯವಸ್ಥೆಯನ್ನು ನಾವು ಮಾಡಲಿಕ್ಕೆ, ಖರ್ಚು ಬರುವುದಾದರೆ, ಖರ್ಚಿನ ಒಂದು ನೆಪವನ್ನು ಮಾಡಿ ಇದನ್ನು ಮಾತ್ರ ದೂರ ಮಾಡುವಂತಹ ಪರಿಸ್ಥಿತಿಯನ್ನು ದಯವಿಟ್ಟು ಮಾಡಬೇಡಿ. ಇದು ಒಂದು ಬದಲಾವಣೆಯನ್ನು ಜಾರಿಗೆ ತಂದರೆ ಗ್ರಾಮ ಮಟ್ಟದಲ್ಲಿ ವ್ಯಾಪಕವಾದಂತಹ ಬದಲಾವಣೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅದನ್ನು ಜಾರಿಗೆ ತರಬೇಕೆಂದು ತಮ್ಮ ಮೂಲಕ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಉಪಾಧ್ಯಕ್ಷರೆ, ತಾವು ಕೊಟ್ಟಂತಹ ಸಲಹೆ, ಗ್ರಾಮ ಸಭೆಗಳಿಗೆ ಚುನಾವಣೆಯಾಗಬೇಕೇ? ಇಲ್ಲ, ಎಂದ ಮೇಲೆ ಕೋರಂ ಪ್ರಶ್ನೆಯನ್ನು ಹೇಗೆ ನಿರ್ಣಯವನ್ನು ಮಾಡುತ್ತೀರಿ? ಯಾವಾಗ ಗ್ರಾಮ ಸಭೆಗೆ ಚುನಾಯಿತ ಪ್ರತಿನಿಧಿಗಳು ಬರುವುದಿಲ್ಲವೋ ಕೋರಂನ್ನು ಹೇಗೆ ನಿರ್ಣಯವನ್ನು ಮಾಡುತ್ತೀರಿ? ಇದನ್ನು ಸ್ವಲ್ಪ ದಯವಿಟ್ಟು ತಿಳಿಸಿ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಗ್ರಾಮ ಸಭೆಯಲ್ಲಿ ಪ್ರತಿ ಗ್ರಾಮಕ್ಕೆ ಎಷ್ಟು ಸದಸ್ಯರು ಇರುತ್ತಾರೆ ಎಂಬ ಬಗ್ಗೆ ಅವರಲ್ಲಿ ಅಂಕಿ ಸಂಖ್ಯೆಗಳು ಇರುತ್ತದೆ. 18 ವರ್ಷದ ಮೇಲ್ಪಟ್ಟವರು ಎಲ್ಲಾ ಅಲ್ಲಿ ....

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಇವತ್ತು ನಮ್ಮ ಹಳ್ಳಿಯ ಜನರು ಬಹಳ ಜಾಗರೂಕರಾಗಿದ್ದಾರೆ. ಗ್ರಾಮ ಸಭೆಯು ನಡೆಯುತ್ತದೆ ಎಂದು ಟಾಮ್ ಟಾಮ್ ಮಾಡಿಸಿ ಸರಿಯಾಗಿ ನಮ್ಮ ಅಧಿಕಾರಿಗಳು • ಕ್ರಮವನ್ನು ತೆಗೆದುಕೊಂಡರೆ, ಅಲ್ಲಿಯ ಮೈದಾನಗಳು ಸಾಕಾಗುವುದಿಲ್ಲ ಅಷ್ಟು ಜನರು ಆ ಗ್ರಾಮ ಸಭೆಗೆ ಬಂದು ಸೇರಿರುತ್ತಾರೆ. ಅವರ ಒಂದು ಸೂಕ್ತವಾದಂತಹ ಸಮಯವನ್ನು ನೋಡಿಕೊಂಡು, ಸೋಮವಾರ ರೈತಾಪಿ ಜನಗಳು ಕೆಲಸವನ್ನು ಮಾಡದೇ ಇರುವಂತಹ ದಿವಸಗಳಲ್ಲಿ ನಮ್ಮ ಅಧಿಕಾರಿಗಳು ಅಂತಹ ದಿವಸಗಳಲ್ಲಿ ಫಾಲೋ ಅಫ್ ಮಾಡಿದರೆ, ನೀವು ಅಲ್ಲಿ ಬಂದವರಿಗೆ ಉತ್ತರವನ್ನು ಕೊಡುವುದಕ್ಕೆ ಆಗುವುದಿಲ್ಲ, ಅಲ್ಲಿ ಅಧಿಕಾರಿಗಳು ನಿಲ್ಲುವುದಕ್ಕೆ ಸಾಧ್ಯವಾಗದಷ್ಟು ಜನರು

ಬಂದು ಸೇರುತ್ತಾರೆ. ಜನ ಇವತ್ತು ಅಷ್ಟು ಜಾಗರೂಕರಾಗಿದ್ದಾರೆ. ಗ್ರಾಮ ಸಭೆ ಆಗುತ್ತದೆ ಎಂಬ ಸುದ್ದಿಯೂ ಗೊತ್ತಿಲ್ಲದೆ ಏನೋ ದಾಖಲೆಯನ್ನು ಮಾಡಿಕೊಂಡು ಬಂದರೆ, ಹೇಗೆ? ಅದಕ್ಕೆ ಸರಿಯಾದಂತಹ ಪ್ರಚಾರ ಇದ್ದರೆ ಸಾಕು ಬೇಕಾದಷ್ಟು ಆಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಾನು ವಿರೋಧ ಪಕ್ಷದ ನಾಯಕರು ಹೇಳಿದಂತಹ....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಶಾಸಕರುಗಳನ್ನು ಅಲ್ಲಿಗೆ ಕಳುಹಿಸಿದರೆ, ನಮ್ಮ ಕೈ ಕಾಲುಗಳು ನೇರವಾಗಿ ಇರುವುದಿಲ್ಲ. ನೀವುಗಳು ಏನು ಮಾಡಿದ್ದೀರಿ ನಿಮ್ಮ ಕಥೆ ಏನು ಎಂದು ಹೇಳಿ ಹಿಡಿದುಕೊಂಡು ಬಂದು ಬಡಿದು ವಾಪಸ್ಸು ಕಳುಹಿಸಿ ಬಿಡುತ್ತಾರೆ. ಅದಕ್ಕೆ ಯಾರೂ ಪತ್ತಿರ ಹೋಗುವುದಿಲ್ಲ. ಇಂತಹ ಪರಿಸ್ಥಿತಿ ಇದೆ.

ಶ್ರೀ ಎಂ. ನಾರಾಯಣ ಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾವು ಜನರ ಹತ್ತಿರ ತೀರ್ಪು ತೆಗೆದು ಕೊಂಡು ಕೇವಲ 3 ತಿಂಗಳುಗಳಾಗಿದೆ. ನಾವು ಜನರ ಹತ್ತಿರ ತೀರ್ಪನ್ನು ತೆಗೆದುಕೊಂಡು ಲೋಕ ಸಭೆಯ ಚುನಾವಣೆಯಲ್ಲಿ ನಮ್ಮ ಪಕ್ಷ ಗೆದ್ದಿದೆ. ಮಾನ್ಯ ಯಡಿಯೂರಪ್ಪನವರು ಹೇಳುತ್ತಿದ್ದಾರೆ ಅಲ್ಲಿಗೆ ಹೋದರೆ ಕೈ ಕಾಲುಗಳು ನೆಟ್ಟಗೆ ಇರುವುದಿಲ್ಲವೆಂದು, ಈಗ ನೆಟ್ಟಗೆ ಇದೆ, ಸರಿಯಾಗಿದೆ, ಲೋಕ ಸಭೆಯಲ್ಲಿ 16 ಸೀಟ್‌ಗಳನ್ನು ಗೆದ್ದು ಕೇವಲ 90 ದಿವಸಗಳಾಗಿವೆ.

ಶ್ರೀ ಐ.ಎಂ. ಜಯರಾಮ್ ಶೆಟ್ಟಿ : ಶಾಸಕರಿಗೆ, ಗ್ರಾಮ ಪಂಚಾಯ್ತಿಯ ದಿವಸವನ್ನು ನಿಗಧಿಯನ್ನು ಮಾಡುವಾಗಲೇ ತಿಳಿಸಬೇಕು. ಈಗ ಏನು ಮಾಡುತ್ತಿದ್ದಾರೆಂದರೆ ಗ್ರಾಮ ಸಭೆಯ ದಿನಾಂಕವನ್ನು ನಿಗಧಿ ಮಾಡಿ ಆನಂತರ ಶಾಸಕರಿಗೆ ಒಂದು ದಿವಸ ಅಥವಾ ಎರಡು ದಿವಸಗಳ ಮುಂಚೆ ದಿನಾಂಕವನ್ನು ತಿಳಿಸುತ್ತಾರೆ. ಆದ್ದರಿಂದ ನಾವುಗಳು ಹಾಜರಾಗಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಗ್ರಾಮ ಸಭೆ ನಡೆಸುವುದರ ಬಗ್ಗೆ ಮತ್ತು ಜಾಸ್ತಿ ಜನರು ಭಾಗವಹಿಸುವುದರ ಬಗ್ಗೆ ವಿರೋಧ ಪಕ್ಷದ ನಾಯಕರು 'ಏನು ಸೂಚನೆಯನ್ನು ಕೊಟ್ಟರು ಅದು ಒಳ್ಳೆಯ ಸೂಚನೆ ಇದೆ. ಅದರ ಹಿಂದೆ ಇದ್ದಂತಹ ವ್ಯವಸ್ಥೆಯೊಳಗೆ ಗ್ರಾಮ ಸಭೆಯನ್ನು ನಡೆಸುವುದರ ಬಗ್ಗೆಯೂ ಸರಿಯಾಗಿ ತಿಳುವಳಿಕೆ ಇಲ್ಲದ ರೀತಿಯಲ್ಲಿ ಆಗುತ್ತಿದೆ. ಅದನ್ನು ಬದಲು ಮಾಡಬೇಕು, ಎಂದು ಗ್ರಾಮ ಸಭೆ ನಡೆಯುತ್ತದೆ ಎಂಬ ಬಗ್ಗೆ ಆ ಗ್ರಾಮಸ್ಥರಿಗೆ ತಿಳಿಸುವಂತಹ ಪ್ರಚಾರ ವ್ಯವಸ್ಥೆ, ಆ ಆಡಳಿತಗಾರರು ಬಿಟ್ಟು ಬೇರೆಯವರು ಮಾಡುವಂತಹ ವ್ಯವಸ್ಥೆ ಇರಬೇಕು. ಮಾನ್ಯ ಉಪಾಧ್ಯಕ್ಷರೇ, ಅದು ರೇಡಿಯೋ ಮೂಲಕ ಪ್ರಚಾರವಾಗುವಂತೆ ಮಾಡಿ, ಅಥವಾ ಪತ್ರಿಕೆಯಲ್ಲಿ ಯಾವ್ಯಾವ ಗ್ರಾಮಸಭೆಗಳು ಯಾವ್ಯಾವ ದಿನಾಂಕದಂದು ನಡೆಯುತ್ತದೆ ಎಂಬ ಬಗ್ಗೆಯೂ ಕೂಡ್ಲ ಜಾಹೀರಾತನ್ನು ಕೊಡಿ. ಇದರಿಂದ ಏನು ತೊಂದರೆಯಾಗುವುದಿಲ್ಲ. ಅಂದರೆ ಗ್ರಾಮ ಸಭೆಯಲ್ಲಿ ಹಾಜರಾತಿಯಾದ ಮೇಲೆ ಸರಿಯಾಗಿ ರಿಕಾರ್ಡ್‌ಆಗುವಂತಹ ವ್ಯವಸ್ಥೆಯಿಂದ ಅನುಕೂಲವಾಗುತ್ತದೆ. ಇವತ್ತು ನಾವು ನಮ್ಮ ಗ್ರಾಮ ಮಟ್ಟದಲ್ಲಿ ಹಿಂದೆ ನಾವು,

ನೀವು ಸಣ್ಣವರು ಇದ್ದಾಗ ನಮ್ಮ ಗ್ರಾಮದೊಳಗೆ ಶಾಲಾ ಕಟ್ಟಡವಾಗಲಿ, ಯಾವ ಗ್ರಾಮ ಪಂಚಾಯಿತಿಯ ಕಟ್ಟಡವಾಗಲಿ, ಗರಡಿ ಮನೆಯಾಗಲಿ ಇದು ಎಲ್ಲಾ

ಸಮಾಜದ ಸಹಯೋಗದಿಂದ ನಡೆಯುತ್ತಿತ್ತು. ಸರ್ಕಾರದ ಸಹಾಯ ಸ್ವಲ್ಪ ಸಿಗುತ್ತಿತ್ತು. ಸಮಾಜದ ಸಹಾಯ ಬಹಳಷ್ಟು ಇರುತ್ತಿತ್ತು. ಡಿಎಲ್‌ಬಿಗಳು ಇದ್ದಾಗ ನಮ್ಮ ಉತ್ತರ ಕರ್ನಾಟಕದಲ್ಲಿದ್ದಾಗ ಆ ವ್ಯವಸ್ಥೆ ಇತ್ತು.ಇವೊತ್ತು ಗ್ರಾಮ ಜನರ ಆರ್ಥಿಕ ಸಹಯೋಗ ಅಂತೂ ಇಲ್ಲವೇ ಇಲ್ಲ. ಅವರಿಂದ ಪಾಲಿನ ವಂತಿಗೆಯನ್ನು ಏನು ಅಪೇಕ್ಷೆಯನ್ನು ಮಾಡದೇ, ಸರ್ಕಾರವೇ ಎಲ್ಲಾ ಮಾಡುತ್ತದೆ ಎನ್ನುವ ದೃಷ್ಟಿಯಿಂದ, ಈ ಅಭಿವೃದ್ಧಿ ಕೆಲಸವನ್ನು ಕೈಗೊಳ್ಳುತ್ತಿರುವುದರಿಂದ ಇವತ್ತು ಏನಾಗುತ್ತಿದೆ ಎಂದರೆ ಸರ್ಕಾರ ಎಷ್ಟು ಹಣವನ್ನು ಇಟ್ಟಿರುತ್ತದೆ, ಎಷ್ಟು ಹಣ ಖರ್ಚಾಗುತ್ತಿದೆ, ಎಷ್ಟು ಅಪವ್ಯಯವಾಗುತ್ತಿದೆ ಎನ್ನುವುದರ ಬಗ್ಗೆ ಯಾರೂ ಸಹ ದೃಷ್ಟಿಯನ್ನು ಹರಿಸುತ್ತಿಲ್ಲ. ನಿಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ನಾವು ಜಿಲ್ಲಾ ಪರಿಷತ್ತಿನಲ್ಲಿ 1982ರಿಂದ 1992ರವರೆಗೆ ಆಗ ಮೊದಲನೆಯ ಸಲ ಗ್ರಾಮ ಸಭೆ ಬಹಳ ಉತ್ಸುಕತೆಯಿಂದ ನಡೆಯಿತು, ಎರಡನೇ ಸಲವು ಸಹ ನಡೆಯಿತು. ಮೂರನೆಯ ಸಲದಿಂದ ಗ್ರಾಮ ಸಭೆಗಳು ನಡೆಯದೇ ಹೋಯಿತು. ಆಗ 'ಏನಾಯಿತು, ಆಗ ನಾನು ಎಲ್ಲಾ ಗ್ರಾಮ ಸಭೆಗಳಿಗೂ ಹೋಗುತ್ತಿದ್ದೆ. ಗದಗ ತಾಲ್ಲೂಕ್ ಹಳ್ಳಿಯೊಳಗೆ, ನನ್ನ ಕ್ಷೇತ್ರದ ಕೆಲವೇ ಹಳ್ಳಿಯೊಳಗೆ ಒಂದು ಗ್ರಾಮದೊಳಗೆ ಅಂಗನವಾಡಿ ಕಟ್ಟಡ, ಒಂದು ಚದರ ಅಡಿಗೆ 100 ರೂಪಾಯಿಗಳು ಖರ್ಚು ಇತ್ತು. ಇನ್ನೊಂದು ಗ್ರಾಮದೊಳಗೆ ಅಂಗನವಾಡಿ ಕಟ್ಟಡಕ್ಕೆ 220ರೂಪಾಯಿಗಳು ಚದರ ಅಡಿಗೆ ಖರ್ಚು ಇತ್ತು. ಅದು ಏಕೆಂದರೆ ಎಸ್ಟಿಮೇಟ್ ಅಷ್ಟು ಇದೆ ಎಂದು ಹೇಳುತ್ತಿದ್ದರು. ಒಂದು ಕಡೆ 100 ರೂಪಾಯಿಗಳು ಇನ್ನೊಂದು ಕಡೆ 220 ರೂಪಾಯಿಗಳು ಎಷ್ಟು ವ್ಯತ್ಯಾಸಗಳು ಇರುತ್ತಿತ್ತು.

ಎಸ್ಟಿಮೇಟ್‌ನಲ್ಲಿ 100ರೂ.ನಿಂದ 220ರೂ. ಎಂದರೆ ಎಷ್ಟು ವ್ಯತ್ಯಾಸವಾಗುತ್ತದೆ ಎಂಬುದನ್ನು ನೀವೇ ನೋಡಿ. ಕಾನೂನು ಬದ್ಧವಾಗಿ ಎಲ್ಲವನ್ನೂ ಸರಿಯಾಗಿ ಇಡುವುದಕ್ಕೆ ಅದನ್ನು ಹಂಚಿಕೊಳ್ಳುವವರೆಲ್ಲರೂ ಸರಿಯಾಗಿ ಯೋಚನೆ ಮಾಡಿ ಕೆಲಸ ಮಾಡಿದ್ದಾರೆ. ಇದು ನಿಲ್ಲಬೇಕಾದರೆ ನಾನು ಕೊಟ್ಟಂಥ ಸೂಚನೆಯನ್ನು ತಾವು ಗ್ರಾಮ ಸಭೆಯ ಮಟ್ಟದಲ್ಲಿ ಜಾರಿಗೆತರಲೇಬೇಕು. ಇನ್ನು ಸಮಾಜದ ಸಹಯೋಗದಿಂದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಮುಂದಾದರೆ ಯಾವ ಮಟ್ಟದ ಸಾಧನೆಯನ್ನು ಮಾಡಬಹುದೆಂಬುದರ ಬಗ್ಗೆ ನಮ್ಮ ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ರಾಳೆಗಾಂವ್ ಸಿಟಿಯಲ್ಲಿ ಅಣ್ಣಾ ಹಜಾರೆಯವರು ಮಾಡಿದ್ದಾರೆ. ಗುಜರಾತ್ ಮತ್ತು ಮಹಾರಾಷ್ಟ್ರದ ಕೆಲವು ಹಳ್ಳಿಗಳಲ್ಲಿ ಅದೇ ರೀತಿ ಮಾಡಿದ್ದಾರೆ. ಈಗ ಒರಿಸ್ಸಾದ ಕೆಲವು ಹಳ್ಳಿಗಳಲ್ಲಿಯೂ ಕೂಡ ಪಾಂಡುರಂಗ ಶಾಸ್ತ್ರಿ ಅಟ್ವಾಲಿಯವರು ತಮ್ಮ ಸ್ವ ಅಧ್ಯಾಯ ಕಾರ್ಯಕ್ರಮದಿಂದ ಮಾಡುತ್ತಿದ್ದಾರೆ. ನೀವು ಬಾರಾಮತಿಗೆ ಹೋದರೆ ಅಲ್ಲಿ ಶರದ್ ಪವಾರ್‌ರವರ ಅಣ್ಣನವರು ಗೋವಿಂದರಾವ್ ಪವಾರ್ ಎಂದು ಇದ್ದಾರೆ.

ಅವರು ಮಾಡುವಂಥ ಕೆಲಸಗಳನ್ನೂ ಕೂಡ ತಾವು ನೋಡಬಹುದು. ಇವು ಯಾವುದನ್ನೂ ನೋಡುವುದು ಬೇಡವೆನ್ನುವುದಾದರೆ, ನಮ್ಮ ಕರ್ನಾಟಕದಲ್ಲಿ ಬೆಳ್ತಂಗಡಿಯಲ್ಲಿ ವೀರೇಂದ್ರ ಹೆಗಡೆಯವರು ಮಾಡುತ್ತಿದ್ದಾರೆ. ಅವುಗಳನ್ನು ತಾವು ನೋಡಿಕೊಂಡು ಬರಬೇಕು. ಕೌಟುಂಬಿಕ ಅಭಿವೃದ್ಧಿಯಾಗಲಿ ಅಥವಾ ಗ್ರಾಮದ ಅಭಿವೃದ್ಧಿಯಾಗಲಿ, ಅಥವಾ ಪರಿಸರದ ಅಭಿವೃದ್ಧಿಯಾಗಲಿ ಜನರ ಸಹಭಾಗಿತ್ವ ಇದ್ದರೆ ಹೇಗಾಗುತ್ತದೆ? ಸರ್ಕಾರ ಕೊಡುವಂಥ ಪ್ರತಿಯೊಂದು ಪೈಸೆಯೂ ಯಾವ ರೀತಿ ಸದುಪಯೋಗವಾಗುತ್ತದೆಂಬುದನ್ನು ಇಲ್ಲಿ ನಡೆದಿರುವಂಥ ಪ್ರಯೋಗಗಳನ್ನು ನೋಡಿಕೊಂಡುಬಂದು ಅದೇ ರೀತಿಯ ಪ್ರಯೋಗಗಳನ್ನು ನಮ್ಮ ರಾಜ್ಯದ ಎಲ್ಲಾ

ಗ್ರಾಮಗಳಲ್ಲೂ ನಡೆಯುವುದಕ್ಕೆ ಬೇಕಾದಂಥ ವಾತಾವರಣವನ್ನು ಸೃಷ್ಟಿ ಮಾಡುವ ಜವಾಬ್ದಾರಿ ಈ ಸರ್ಕಾರದ ಮೇಲಿದೆ. ದಯವಿಟ್ಟು ಇದನ್ನು ಮಾಡಿ. ಮಹಾರಾಷ್ಟ್ರದಲ್ಲಿ ಅಣ್ಣಾ ಹಜಾರೆಯವರು ಮಾಡಿರುವಂಥ ಪ್ರಯೋಗದಿಂದ ಬಹಳ ಪ್ರಭಾವಿತರಾಗಿ ಮಾನ್ಯ ಶರದ್ ಪವಾರ್‌ರವರು ಒಂದು ಕೆಲಸವನ್ನು ಮಾಡಿದರು. ಅದೇನೆಂದರೆ, ಅಣ್ಣಾ ಹಜಾರೆಯವರನ್ನು ಕರೆದು ಅವರ ನೇತೃತ್ವದಲ್ಲಿ ರಾಜ್ಯಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿದರು. ನೀವು ಈಗ ರಾಳೆಗಾಂವ್ ಸ್ಥಿತಿಯಲ್ಲಿ ಏನು ಮಾಡಿದಿರಿ ಇದನ್ನು ಕನಿಷ್ಠ ನಮ್ಮ ಪ್ರತಿಯೊಂದು ತಾಲೂಕಿನಲ್ಲೂ ಒಂದೊಂದು ಗ್ರಾಮದಲ್ಲಿ ಆಗುವಂತೆ ಮಾಡಬೇಕೆಂದು ಹೇಳಿ ಅವರಿಗೆ ಬೇಕಾದ ಎಲ್ಲಾ ಅನುಕೂಲಗಳನ್ನೂ ಕೊಟ್ಟರು. ಅವರಿಗೆ ಇದನ್ನು ಕಾರ್ಯಗತಮಾಡಲು ಏನೇನು ಅಧಿಕಾರಗಳು ಮತ್ತು ಅಧಿಕಾರಿಗಳು ಬೇಕೋ ಅದನ್ನೆಲ್ಲಾ ಆ ಸಮಿತಿಗೆ ಒದಗಿಸಿಕೊಟ್ಟರು. ನಿಜವಾಗಿ ಮೆಚ್ಚತಕ್ಕ ಒಂದು ವಿಚಾರ ಎಂದರೆ, ಮಹಾರಾಷ್ಟ್ರದಲ್ಲಿ ಶರದ್‌ಪವಾರ್‌ರವರ ಸರ್ಕಾರ ಹೋಯಿತು, ಬಿ.ಜೆ.ಪಿ.ಯವರ ಸರ್ಕಾರ ಅಧಿಕಾರಕ್ಕೆ ಬಂತು. ಬಿ.ಜೆ.ಪಿ. ಸರ್ಕಾರ ಬಂದ ಕೂಡಲೇ ಅಣ್ಣಾ ಹಬಾರೆಯವರು ತಮ್ಮ ರಾಜೀನಾಮೆಯನ್ನು ಆ ಸಮಿತಿಯ ಅಧ್ಯಕ್ಷ ಪದವಿಗೆ ಕಳುಹಿಸಿದರು. ನನ್ನನ್ನು ಮಾನ್ಯ ಶರತ್ ಪವಾರ್‌ರವರು ನೇಮಿಸಿದ್ದರು, ನಾನು ನನ್ನ ಕೆಲಸವನ್ನು ಮಾಡಿದ್ದೇನೆ.

ಅದು ಆ ಸರ್ಕಾರಕ್ಕೆ ಉಪಯೋಗ ಇದೆಯೋ, ಅಥವಾ ಇಲ್ಲವೋ ಗೊತ್ತಿಲ್ಲ, ತಾವು ಒಪ್ಪಿದರೆ ಇದನ್ನು ಮುಂದುವರೆಸಿಕೊಂಡು ಹೋಗಬಹುದು, ಇಲ್ಲದಿದ್ದರೆ ಬಿಡಬಹುದೆಂದು ತಿಳಿಸಿ ತಮ್ಮ ರಾಜೀನಾಮೆಯನ್ನು ಕಳುಹಿಸಿಕೊಟ್ಟರು. ಮಾನ್ಯ ಮನೋಹರ ಜೋಷಿಯವರು, ಗೋಪಿನಾಥ ಮುಂಡೆಯವರು, ಮುಖ್ಯ ಮಂತ್ರಿ ಮತ್ತು ಉಪ ಮುಖ್ಯ ಮಂತ್ರಿಗಳಿಬ್ಬರೂ ಮುಂಬಯಿಯಿಂದ ರಾಳೇಗಾಂವ್ ಸಿದ್ದಿಗೆ ಹೋದರು. ಅಣ್ಣಾ ಹಜಾರೆಯವರಲ್ಲಿ ಕೇಳಿಕೊಂಡರು, ನೀವು ಈ ರಾಜೀನಾಮೆಯನ್ನು ಕೊಡತಕ್ಕದ್ದಲ್ಲ.

ನಾವು ನಿಮ್ಮ ರಾಜೀನಾಮೆಯನ್ನು ಒಪ್ಪುವುದಿಲ್ಲ, ನಿಮ್ಮ ಪ್ರಯೋಗ ಮುಂದುವರೆಯತಕ್ಕದ್ದು, ನಿಮಗೆ ಶರದ್ ಪವಾರ್‌ರವರು ಏನೇನು ಬೆಂಬಲವನ್ನು ಕೊಟ್ಟಿದ್ದರೋ, ಆ ಎಲ್ಲಾ ಬೆಂಬಲವನ್ನೂ ಈ ಸರ್ಕಾರವೂ ಕೊಡುತ್ತದೆಂಬ ಮಾತನ್ನು ಹೇಳಿದ ಮೇಲೆ ಇವತ್ತು ಅಲ್ಲಿ ಅವರ ಪ್ರಯೋಗ ಮುಂದುವರೆದಿದೆ. ಅಂಥ ಒಂದು ಕೆಲಸ ನಮ್ಮ ರಾಜ್ಯದಲ್ಲೂ ಆಗಬೇಕಲ್ಲಾ. ನಮ್ಮ ರಾಜ್ಯದಲ್ಲಿ ಅಂಥ ಒಂದು ವಾತಾವರಣ ಇಲ್ಲವೆಂದು ಹೇಳುತ್ತೀರಾ? ಆ ರೀತಿಯ ಪ್ರಯೋಗಗಳು ನಡೆದಿಲ್ಲ ಎಂದು ಹೇಳುತ್ತೀರಾ? ನಡೆದಿವೆ. ಜನರು ಇಂಥ ಪ್ರಯೋಗಗಳನ್ನು ನಡೆಸಬೇಕೆಂಬ ಇಚ್ಛೆ ಉಳ್ಳವರೂ ಆಗಿದ್ದಾರೆ. ಅದಕ್ಕೆ ಅನುಕೂಲವಾಗುವಂಥ ಅಧಿಕಾರಿಗಳ ಸಹಕಾರ, ರಾಜಕೀಯ ಇಚ್ಛೆ ಇವೆರಡೂ ಬೇಕಾಗಿದೆ. ಇವೆರಡನ್ನೂ ಮಾಡುವುದರಿಂದ ಈ ಎಲ್ಲಾ ಅಭಿವೃದ್ಧಿ ಕಾರ್ಯ ಕ್ರಮಗಳು ಗ್ರಾಮ ಮಟ್ಟದಲ್ಲಿ ಬಹಳಷ್ಟು ಉಪಯೋಗಕರವಾಗಿ ನಡೆಯುತ್ತವೆ. ಇವತ್ತು ನಾವು ಸಾವಿರಾರು ಕೋಟಿ ರೂ.ಗಳನ್ನು ಗ್ರಾಮೀಣಾಭಿವೃದ್ಧಿಯ ಸಲುವಾಗಿ ಖರ್ಚು ಮಾಡುತ್ತಿದ್ದೇವೆ. ಇದು ನಮಗೆ, ನಿಮಗೆಲ್ಲರಿಗೂ ಗೊತ್ತಿದೆ. ಇದರಲ್ಲಿ ಸಾಕಷ್ಟು ಹಣ ಸೋರಿಹೋಗುತ್ತಿದೆ. ಆವತ್ತು ರಾಜೀವ್ ಗಾಂಧಿಯವರು ಒಂದು ಲೆಕ್ಕವನ್ನು ತೆಗೆದಿದ್ದರು. ನೂರು ರೂ.ಗಳನ್ನು ಅಭಿವೃದ್ಧಿ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದವರು ರಿಲೀಸ್ ಮಾಡಿದರೆ ಅದು ಗ್ರಾಮ ಮಟ್ಟಕ್ಕೆ ಹೋಗಿ ಮುಟ್ಟುವಷ್ಟರಲ್ಲಿ 85 ರೂ.ಗಳನ್ನು ಆ ವ್ಯವಸ್ಥೆಯೇ ನುಂಗಿಹಾಕುತ್ತದೆ, ಕೇವಲ 15 ರೂ. ಮಾತ್ರ ಫಲಾನುಭವಿಗಳಿಗೆ ಮುಟ್ಟುತ್ತದೆ ಎಂದು ಹೇಳಿದ್ದರು.

ಹಾಗಾಗಿ ಅವರು ಗ್ರಾಮ ಪಂಚಾಯಿತಿಗೆ ಕೊಡಬೇಕಾದ ಹಣವನ್ನು ನೇರವಾಗಿ ಜಿಲ್ಲಾ ಪಂಚಾಯಿತಿ ಮೂಲಕ ಮುಟ್ಟುವಂಥ ವ್ಯವಸ್ಥೆಯನ್ನು ಮಾಡಿದರು. ಇವತ್ತು ಈ ಪ್ರಧಾನಿಗಳು ಬಂದು ಆ ವ್ಯವಸ್ಥೆಯನ್ನು ಬದಲಾವಣೆ ಮಾಡಿದ್ದಾರೆ. ನಾವು ನೇರವಾಗಿ ಜಿಲ್ಲಾ ಪಂಚಾಯಿತಿಗೆ, ಗ್ರಾಮ ಪಂಚಾಯಿತಿಗೆ ಹಣವನ್ನು ಬಿಡುಗಡೆ ಮಾಡುವುದಿಲ್ಲ, ನಾವು ರಾಜ್ಯಗಳಿಗೆ ಕೊಡುತ್ತೇವೆ, ಆ ರಾಜ್ಯದ ಮೂಲಕ ಅಲ್ಲಿಗೆ ಹೋಗಿ ಮುಟ್ಟಲಿ ಎಂದು. ನೀವೂ ಕೂಡ ಹೇಳಬಹುದುಸ ನಾವು ರಾಜ್ಯಗಳ ಮೂಲಕ ಸಂಬಂಧಪಟ್ಟ ಜಿಲ್ಲೆಗಳಿಗೆ ಗ್ರಾಮಗಳಿಗೆ ಕೊಡುತ್ತೇವೆಂದು ಭರವಸೆಯನ್ನು ಕೊಡಬಹುದು. ಆದರೆ ಅವರು ಜನಸಂಖ್ಯೆಯ ಆಧಾರದ ಮೇಲೆ ಮತ್ತು ಇನ್ನೂ ಬೇರೆ ಬೇರೆ ಆಧಾರದ ಮೇಲೆ ಹಣ ಜಿಲ್ಲೆಗೆ ಗ್ರಾಮಕ್ಕೆ ಹೋಗುವಂಥ ವ್ಯವಸ್ಥೆಯನ್ನು ಏನು ಮಾಡಿದ್ದರೋ ಅದನ್ನೇ ತಾವು ಮುಂದುವರೆಸುತ್ತೀರಾ? ಅಥವಾ ಇಲ್ಲಿ ಬೆಂಗಳೂರಿನ ಸಮೀಪ ಇರುವಂಥ ಜಿಲ್ಲೆಗಳಿಗೆ ಹೆಚ್ಚು ಹಣ, ಬೆಂಗಳೂರಿನಿಂದ ದೂರ ಇರುವಂಥ ಜಿಲ್ಲೆಗಳಿಗೆ ಕಡಿಮೆ, ಏನ್ನತಕ್ಕ ತಾರತಮ್ಯವನ್ನು ಮಾಡದ ರೀತಿಯಲ್ಲಿ ಒಂದು ಫೂಲ್‌ಪ್ರೂಫ್ ಸಿಸ್ಟಂನ್ನು ಈ ಹಣಕಾಸನ್ನು ಬಿಡುಗಡೆ ಮಾಡುವಾಗ ಮಾಡಬೇಕೆಂಬ ಒತ್ತಾಯವನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ.

(ಮಾನ್ಯ ಧರ್ಮಸಿಂಗ್‌ರವರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು.)

ಶ್ರೀ ಡಿ.ಆರ್. ಪಾಟೀಲ್ : ಇನ್ನು ಮೀಸಲಾತಿ ವ್ಯವಸ್ಥೆ ಬಂದಾಗ ಹಿಂದೆ ನಮ್ಮ ಸರ್ಕಾರ ಇದ್ದಾಗ ಎಸ್.ಟಿ. ಜನಾಂಗದವರಿಗೂ 3 ಪರ್ಸೆಂಟ್ ಕನಿಷ್ಠ ಇರಬೇಕೆಂಬ ಕಾನೂನನ್ನು ತಂದಿದ್ದೆವು. ಈಗ ತಮ್ಮ ಸರ್ಕಾರ ಬಂದ ಮೇಲೆ ಕನಿಷ್ಠ 3 ಪರ್ಸೆಂಟ್ ಎಂಬ ಕಾನೂನು ಹೋಗಿ ಎಸ್.ಟಿ. ಜನಾಂಗದವರಿಗೆ ಪ್ರತಿ ತಾಲೂಕಿನಲ್ಲೂ ಕನಿಷ್ಠ ಒಂದು ಗ್ರಾಮ ಪಂಚಾಯಿತಿಯಲ್ಲೂ ಅಧ್ಯಕ್ಷರಾಗಿರುವುದಕ್ಕೆ ಇದ್ದಂಥ ಅವಕಾಶ ಹೊರಟುಹೋಗಿದೆ, ಈ ಅವಕಾಶದಿಂದ ಅವರು ಇವತ್ತು ವಂಚಿತರಾಗಿದ್ದಾರೆ. ಇದನ್ನು ತಾವು ದಯವಿಟ್ಟು ಪುನರ್ ಪರಿಶೀಲನೆ ಮಾಡಬೇಕು. ಒಂದು ಜನಾಂಗಕ್ಕೆ ಸಿಕ್ಕಬೇಕಾದ ಅಧಿಕಾರವನ್ನು ತಪ್ಪಿಸುವಂಥ ಕೆಲಸವನ್ನು ನಾವು ಮಾಡಬಾರದು. ಅದೂ ಕೂಡ ಒಮ್ಮೆ ಅಧಿಕಾರವನ್ನು ಕೊಟ್ಟು ಅನಂತರ ಅದನ್ನು ಕಸಿದುಕೊಳ್ಳುವುದಾದರೆ ಅದು ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಅದು ಯಾವ ಕಾರಣಕ್ಕಾಗಿ ಆಯಿತೋ ಗೊತ್ತಿಲ್ಲ.

ಎಸ್.ಟಿ.ಗೆ ಕನಿಷ್ಠ 3 ಪರ್ಸೆಂಟ್ ಎಂದು ಏನಿತ್ತು ಅದನ್ನು ತೆಗೆದು ಜನಸಂಖ್ಯೆಯ ಆಧಾರದ ಮೇಲೆ ಎಂದು ನೀವು ಹೇಳಿದಿರಿ.

ಶ್ರೀ ಎಂ.ಸಿ. ನಾಣಯ್ಯ : ಇಲ್ಲ ಹಾಗಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಕನಿಷ್ಠ 3 ಪರ್ಸೆಂಟ್ ಎಂದು ಇದ್ದುದರಿಂದ ಒಂದು ಸ್ಥಾನವಾದರೂ ಅವರಿಗೆ ಸಿಕ್ಕೇ ಸಿಕ್ಕುತ್ತಿತ್ತು. ಆದರೆ ನೀವು ಜನಸಂಖ್ಯೆಯ ಅಧಾರದಮೇಲೆ ಎಂದು ಮಾಡಿದ್ದರಿಂದ ಅವರಿಗೆ ಇಲ್ಲದಂತಾಯಿತು. ಅವರು ಆ ಅವಕಾಶದಿಂದ ವಂಚಿತರಾಗಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಇವತ್ತು ನಮ್ಮ ತಾಲೂಕಿನಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಆ ಜನರು ಆ ಅವಕಾಶದಿಂದ ವಂಚಿತರಾಗಿದ್ದಾರೆ. ಇದು ನಮ್ಮ ತಾಲ್ಲೂಕು ಪಂಚಾಯಿತಿಗೆ ಬರದಿದ್ದರೂ ನಮ್ಮ ಜಿಲ್ಲೆಯಲ್ಲಿ......

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲರು ಎತ್ತಿರುವಂಥ ವಿಚಾರ 73-74ನೇ ತಿದ್ದುಪಡಿಗಳು ಎರಡೂ ಬಂದ ಮೇಲೆ ಅದಕ್ಕನುಗುಣವಾಗಿ ಇಲ್ಲಿ ನಾವು ನಮ್ಮ ಜಿಲ್ಲಾ ಪಂಚಾಯಿತಿ ಮತ್ತು ಮುನಿಸಿಪಾಲಿಟಿ ಕಾಯಿದೆಗೆ ತಿದ್ದುಪಡಿಯನ್ನು ತಂದೆವು. ಆ ಸಂದರ್ಭದಲ್ಲಿ ಮೀಸಲಾತಿ ಕೊಡುವಾಗ ಎಲ್ಲಾ ವರ್ಗದವರಿಗೂ ಸಂಬಂಧಪಟ್ಟಂತೆ Proportionate to the population ಎಂದು ಮಾಡಿದೆವು. ಬಹುಶಃ ಇದರ ಬಗ್ಗೆ ಮಾನ್ಯ ರಾಮಕೃಷ್ಣರವರೂ ಚರ್ಚೆಮಾಡಿದರು. ಮುನಿಸಿಪಲ್ ಕಾಯಿದೆಗೆ ತಿದ್ದುಪಡಿಯನ್ನು ತಂದಾಗ ಅಲ್ಲೂ ಕೂಡ ನಾವು ಮೀಸಲಾತಿಯನ್ನು ಹಿಂದುಳಿದವರ್ಗದವರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರೆಲ್ಲರಿಗೂ ಕೊಟ್ಟಿದ್ದೇವೆ. ಅಲ್ಲಿ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿಯನ್ನು ಕೊಟ್ಟ ಸಂದರ್ಭದಲ್ಲಿ Proportionate to the population ಎಂದು ಎಲ್ಲಾದರೂ ಒಂದು ಭಾಗದಲ್ಲಿ ಅಥವಾ ಒಂದು ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯೆ 15 ಪರ್ಸೆಂಟ್‌ಗಿಂತ ಜಾಸ್ತಿ ಇದ್ದಾಗ ಅದಕ್ಕನುಗುಣವಾಗಿ ಕೊಡಿ ಎಂದು ಮಾಡಿದ್ದೇವೆ. ಕೆಲವುಕಡೆ 21 ಪರ್ಸೆಂಟ್, ಕೆಲವು ಕಡೆ 22 ಪರ್ಸೆಂಟ್,ಇದೆ. ಕೆಲವು ಭಾಗಗಳಲ್ಲಿ ಪರಿಶಿಷ್ಟ ಪಂಗಡದವರ ಜನಸಂಖ್ಯೆ 4-5 ಪರ್ಸೆಂಟ್ ಇದ್ದಾಗ ಅದಕ್ಕನುಗುಣವಾಗಿ ಕೊಡಿ ಎಂದು ಹೇಳಿದ್ದೇವೆ. ಅಲ್ಲಿ 22 ಇದ್ದರೆ 22 ಕೊಡಿ, 5 ಇದ್ದರೆ 5 ಕೊಡಿ. ಎಂಬ ವಾದವನ್ನು ಒಪ್ಪಿ ಅದಕ್ಕನುಗುಣವಾಗಿ ತಿದ್ದುಪಡಿಯನ್ನು ತಂದಿದ್ದೇವೆ. ಇದು ರಾಜ್ಯವ್ಯಾಪ್ತಿಯಾಗಿ ಅಂದರೆ ರಾಜ್ಯವನ್ನೇ ಒಂದು ಯೂನಿಟ್ ಆಗಿ ತೆಗೆದುಕೊಂಡು ಹಲವಾರು ಭಾಗಗಳಲ್ಲಿ ಪರಿಶಿಷ್ಟ ಜಾತಿಯವರು 18-19-20 ಪರ್ಸೆಂಟ್ ಇದ್ದಾಗ ಮೀಸಲಾತಿಯ ಪ್ರಮಾಣ 20 ಪರ್ಸೆಂಟ್ ವರೆಗೂ ಹೋಗಿದೆ. ಅಷ್ಟೇ ಅಲ್ಲ 21 ಪರ್ಸೆಂಟ್‌ವರೆಗೂ ಇಲ್ಲಿ ರಾಜ್ಯವನ್ನೇ ಒಂದು ಯೂನಿಟ್ ಆಗಿ ತೆಗೆದುಕೊಂಡಾಗ ಅದು ಸುಮಾರು 18.4 ಪರ್ಸೆಂಟ್‌ಗೆ ಅಂದರೆ ಆ ಜನಸಂಖ್ಯೆ ಎಷ್ಟಿದೆ ಅದಕ್ಕನುಗುಣವಾಗಿ ಕೊಟ್ಟಿದೆ. ಪರಿಶಿಷ್ಟ ಪಂಗಡದವರಿಗೆ 5.1 ಪರ್ಸೆಂಟ್‌ವರೆಗೂ ಕೊಟ್ಟಿದ್ದೇವೆ. ಇದರ ಬಗ್ಗೆ ಮಾನ್ಯ ರಾಮಕೃಷ್ಣರವರೂ ಮಾತನಾಡಿದ್ದಾರೆ.

ಶ್ರೀ ವೈ. ರಾಮಕೃಷ್ಣ : ಇಡೀ ಜಗತ್ತಲ್ಲಿ ಯಾರಿದ್ದರೂ ಕೊಡಲೇಬೇಕು. ಆದರೆ ವರ್ಗೀಕರಿಸಿರುವ ರೀತಿ ಏನಿದೆ ಅದು ಸರ್ಕಾರದ ಡಿಸ್ಕಿಷನ್. ಇದನ್ನು ನೀವು ಹೇಗೆ ಸೈಂಟಿಫಿಕ್ ಆಗಿ ಮಾಡಿಲ್ಲವೋ ಅದೇ ರೀತಿ ಅದನ್ನೂ ಸೈಂಟಿಫಿಕ್ ಆಗಿ ಮಾಡಿಲ್ಲ, ಅದನ್ನೇ ನಾನು ಹೇಳುತ್ತಿರುವುದು.

ಶ್ರೀ ಎಂ.ಸಿ. ನಾಣಯ್ಯ : 33 ಪರ್ಸೆಂಟ್ ಕೊಟ್ಟಿದ್ದೇವೆ. ಇಡೀ ರಾಷ್ಟ್ರದಲ್ಲಿ ನಿಜವಾಗಿ ಹಿಂದುಳಿದವರ್ಗದವರು ಯಾರಿದ್ದಾರೆ ಅವರನ್ನು ಗುರುತುಮಾಡಿ ಶೇಕಡ 27ರಷ್ಟು ಅವರಿಗೇ ಹೋಗಬೇಕೆಂದುಮಾಡಿದ್ದು ಪ್ರಥಮ ಬಾರಿಗೆ ನಮ್ಮ ಕರ್ನಾಟಕ ರಾಜ್ಯ. ಬೇರೆ ಇನ್ನೆಲ್ಲೂ ಆಗಿಲ್ಲ. ಬಾಕಿ ಇರತಕ್ಕ 6 ಪರ್ಸೆಂಟ್‌ನ್ನು ಕೆಟಗರಿ 'ಬಿ' ಎಂದು ನಾವು ಮಾಡಿದೆವು.

3.20 ಪಿ.ಎಂ.

ಇದರಲ್ಲಿ ಬಾಕಿ ಇರತಕ್ಕ ಹಿಂದುಳಿದ ವರ್ಗದವರೂ ಸೇರುತ್ತಾರೆ. ಆದರೆ ನಿಜವಾದ ಹಿಂದುಳಿದ ವರ್ಗದವರು ಮಂಡಲ್ ಕಮಿಷನ್ ಪ್ರಕಾರ ಇರುವಂಥ ಅತಿ ಹಿಂದುಳಿದವರು, ಮತ್ತು ಹಿಂದುಳಿದವರು ಶೇಕಡ 27, ಅದು ಈ ವರ್ಗಕ್ಕೆ

ಸೇರಿರತಕ್ಕವರು. ಪರಿಶಿಷ್ಠ ಜಾತಿಗೆ ಮೀಸಲಾತಿ ಯಾವುದು ಇದೆ ಎಲ್ಲೆಲ್ಲಿ ಅವರ ಜನಸಂಖ್ಯೆ 15ಪರ್ಸೆಂಟ್‌ಗಿಂತ ಜಾಸ್ತಿ ಇದ್ದಾಗ 17-18-19-20ಇದ್ದಾಗ ಅದಕ್ಕನುಗುಣವಾಗಿ ಕೊಟ್ಟು ಅದು 21-22 ಪರ್ಸೆಂಟ್‌ಗೆ ಬಂದು, ಕೆಲವು ಭಾಗಗಳಲ್ಲಿ ಪೂರ್ತಿ ಮಿಸಲಾತಿಯನ್ನು ತೆಗೆದುಕೊಂಡಾಗ 23.6 ಪರ್ಸೆಂಟ್ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಮೀಸಲಾತಿಯನ್ನು ಕೊಟ್ಟಿದೆ. ಕೇವಲ ಸದಸ್ಯತನಕ್ಕೆ ಮಾತ್ರವಲ್ಲ, ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೂ ಕೂಡ ಅನ್ವಯಿಸುತ್ತದೆ.

ಶ್ರೀ ಡಿ.ಆರ್.ಪಾಟೀಲ್ : ತಾವು ಹೇಳುವುದನ್ನು ಒಪ್ಪುತ್ತೇನೆ. ಒಂದು ತಾಲೂಕಿನಲ್ಲಿ ಕನಿಷ್ಠ ಒಂದು ಪಂಚಾಯಿತಿಯಲ್ಲಾದರೂ ಪರಿಶಿಷ್ಠ ಜನಾಂಗದವರು ಅಧ್ಯಕ್ಷರಾಗಿರುವಂಥ ಒಂದು ವ್ಯವಸ್ಥೆಯನ್ನು ತಂದು ಬಿಡಿ. ಇಲ್ಲದೇ ಹೋದರೆ ಈಗಾಗಲೇ ಈ ವರ್ಗದವರಿಗೆಕೊಟ್ಟಂಥ ಸೌಲಭ್ಯವನ್ನು ಮತ್ತೆ ನಾವು ಕಿತ್ತು ಕೊಂಡಂತಾಗಿದೆ. ಮತ್ತೆ ಅದು ಸಿಗುವಂತೆ ಮಾಡುತ್ತೇವೆಂಬ ಭರವಸೆಯನ್ನು ತಾವು ಹೇಳಬೇಕು. ಸಾಮಾಜಿಕ ನ್ಯಾಯದ ಬಗ್ಗೆ ವಿಶ್ವಾಸ ಇಲ್ಲದಂಥ ನಿಮ್ಮ ಪಕ್ಷ ನಿಜವಾಗಿಯೂ ಈಗ ಪಂಚಾಯತ್‌ರಾಜ್‌ಗೆ ತಂದಂಥ ತಿದ್ದುಪಡಿಯಿಂದ ಸಾಕಷ್ಟು ವಿಶ್ವಾಸವನ್ನು ನೀವು ಇಡುತ್ತಿದ್ದೀರೆಂಬ ಭರವಸೆಯನ್ನು ಮಂಡಿಸಿದ್ದೀರಿ. ಅದಕ್ಕಾಗಿ ನಿಮಗೆ, ನಿಮ್ಮ ಹಿಂದಿನ ಮುಖ್ಯ ಮಂತ್ರಿಗಳಿಗೆ, ಸಿದ್ಧರಾಮಯ್ಯನವರಿಗೆ, ಜಾಲಪ್ಪನವರಿಗೆ ಎಲ್ಲರಿಗೂ ನಮ್ಮ ಅಭಿನಂದನೆಗಳನ್ನರ್ಪಿಸುತ್ತೇವೆ. ಆದರೆ ಒಮ್ಮೆ ಅಧಿಕಾರವನ್ನು ಅನುಭವಿಸಿದ ಜನರಲ್ಲಿ ಮತ್ತೆ ಅ ಅಧಿಕಾರವನ್ನು ಕಿತ್ತುಕೊಂಡರು ಎನ್ನತಕ್ಕ ಭಾವನೆ ಬರಬಾರದು. ಇದು ಆಗಿದೆ. ನಾನು ಬಂದು ತಮಗೆ ಕನ್ವಿನ್ಸ್ ಮಾಡಿ ತೋರಿಸುತ್ತೇನೆ. ಅವರಿಗೆ ಅನ್ಯಾಯ ಆಗಿದ್ದರೆ ಅದನ್ನು ಸರಿಪಡಿಸುತ್ತೇನೆಂಬ ಭರವಸೆಯನ್ನು ತಾವು ನಮಗೆ ನೀಡಿದರೆ ಸಾಕು. ನನಗೆ ಆಗ ಬಹಳ ಸಂತೋಷವಾಗುತ್ತದೆ.

ಇನ್ನು ಗ್ರಾಮ ಸಭೆ ಮುಗಿದ ಮೇಲೆ, ಗ್ರಾಮ ಪಂಚಾಯಿತಿ ವ್ಯವಸ್ಥೆಯ ಬಗ್ಗೆ ವಿಚಾರ ಮಾಡೋಣ. ಗ್ರಾಮ ಪಂಚಾಯಿತಿಯಲ್ಲಿ ಪಿ.ಡಿ.ಎಸ್. ಮಾನಿಟರ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಪ್ರೈಮರಿ ಸ್ಕೂಲುಗಳನ್ನು ಮಾನಿಟರ್ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಅಲ್ಲಿ ಹೆಲ್ತ್ ಇನ್‌ಸ್ಟಿಟ್ಯೂಟ್ ಇತ್ಯಾದಿ ಮಾನಿಟರ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅವರು ಮೇಲ್ವಿಚಾರಣೆಯನ್ನು ಮಾಡಿ, ಆ ಸೌಲಭ್ಯಗಳ ಸದುಪಯೋಗ ಆ ಗ್ರಾಮದ ಜನರಿಗೆ ಆಗುವಂಥ ವ್ಯವಸ್ಥೆ ಆಗಬೇಕಾದರೆ ಅಲ್ಲಿ ಶಾಲೆಯ ಮಾಸ್ತರರೇ ಆಲಿ, ಅಥವಾ ಆಸ್ಪತ್ರೆಯ, ವೆಟರ್ನರಿ ಆಸ್ಪತ್ರಯ, ವೈದ್ಯರಾಗಲಿ, ಎ.ಎನ್.ಎಂ.ಗಳೇ ಆಗಲಿ, ಅವರ ಮಾತನ್ನು ಕೇಳುವಂಥಾದರೋ ಆಗಬೇಕಲ್ಲವೆ? ನೀವು ಈಗ ಅವರಿಗೆ ನೇರವಾಗಿ ಇಲಾಖೆಯ ಮೂಲಕ ಸಂಬಳವನ್ನು ಕೊಡುತ್ತಿದ್ದೀರಿ. ತಾಲ್ಲೂಕು ಪಂಚಾಯಿತಿ ಮೂಲಕವೋ, ಜಿಲ್ಲಾ ಪಂಚಾಯಿತಿಯ ಮೂಲಕವೋ, ಗ್ರಾಮ ಪಂಚಾಯಿತಿಗಳ ಮೂಲಕ ಕೊಡುವಂತೆ ಏತಕ್ಕೆ ಮಾಡಬಾರದು? ಗ್ರಾಮ ಪಂಚಾಯಿತಿಗಳ ಮೂಲಕ ಅವರಿಗೆ ಸಂಬಳವನ್ನು ಬಟವಾಡೆ ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದರೆ, ಈ ಮಾಸ್ತರು ನಮ್ಮ ಶಾಲೆಗೆ ಬಂದಿದ್ದಾನೋ, ಇಲ್ಲವೋ, ಈ ಡಾಕ್ಟರ್ ನಮ್ಮ ಊರಿಗೆ ಬಂದಿದ್ದಾನೋ ಇಲ್ಲವೋ, ಈ ದನದ ಡಾಕ್ಟರ್ ನಮ್ಮ ಊರಿನಲ್ಲಿದ್ದಾನೋ ಇಲ್ಲವೋ ಎಂಬುದನ್ನು ಕೇಳುವ ಹಕ್ಕಾದರೂ ಇವರಿಗೆ ಬರುತ್ತದಲ್ಲ! ತಮ್ಮ ಮಾಲೀಕರು ಯಾರು ಎಂಬ ಭಾವನೆ ಅವರಿಗೂ ಬರುತ್ತದೆ. ನಿಮಗೆ ಇದರಿಂದ ಹಣಕಾಸಿನ ತೊಂದರೆ ಏನೂ ಇಲ್ಲ.

ಅದೇ ಹಣವನ್ನು ನೀವು ಗ್ರಾಮ ಪಂಚಾಯಿತಿಗಳ ಮೂಲಕ ಕೊಡುತ್ತೀರಿ? ದಯವಿಟ್ಟು ಈ ವ್ಯವಸ್ಥೆಯನ್ನು ಮಾಡಿ. ಇವತ್ತು ನಮ್ಮ ಸರ್ಕಾರದಿಂದ ಸಂಬಳವನ್ನು ಸಾಕಷ್ಟು ಪಡೆದುಕೊಂಡಂಥ ಶಾಲಾ ಮಾಸ್ತರು ಆಗಲಿ, ಡಾಕ್ಟರ್‌ಗಳಾಗಲಿ, ದನದ ಡಾಕ್ಟರ್ ಆಗಲಿ, ಎ.ಎನ್.ಎಂ. ಗಳಾಗಲಿ ಕೊನೆಗೆ ತಲಾಟೀಸ್ ಆಗಲಿ ಇವರ ಸೇವೆ ಗ್ರಾಮಸ್ಥರಿಗೆ ಸಮರ್ಪಕವಾಗಿ ಮುಟ್ಟುತ್ತಿಲ್ಲ ಎಂಬುದನ್ನು ನಾವೆಲ್ಲರೂ ಪ್ರಾಂಜಲವಾಗಿ ಒಪ್ಪಿಕೊಳ್ಳಲೇಬೇಕು. ಈ ವ್ಯವಸ್ಥೆ ಬದಲಾಗುವಂತೆ ಮಾಡಿ. ಒಂದು ಉದಾಹರಣೆಯನ್ನು ಹೇಳುವುದಾದರೆ, ಒಬ್ಬ ಶಾಲಾ ಮಾಸ್ತರನ ಪರ್‌ಫಾರ್ಮ್‌ನ್ಸ್‌ನ್ನು ನೋಡಿ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ನ್ನು ಯಾರು ಬರೆಯಬೇಕು? ನಿಮ್ಮ ಪ್ರಕಾರ ಆ ಶಾಲೆಯ ಹೆಡ್‌ಮಾಸ್ಟರ್ ಬರೆಯಬೇಕು. ಹೌದಲ್ಲವೆ? ಅವರು ಬರೆಯದಿದ್ದರೆ ಆ ಶಾಲೆಯ ಬೆಟರ್‌ಮೆಂಟ್ ಕಮಿಟಿಯವರು ಬರೆಯಬೇಕು. ಆದರೆ ಇಲ್ಲಿ ಇವತ್ತು ಆ ಶಾಲೆಯ ಹೆಡ್‌ಮಾಸ್ಟರೂ ಪರ್‌ಫಾರ್ಮ್‌ನ್ಸ್ ರಿಪೋರ್ಟ್‌ನ್ನು ಬರೆಯುವಂತಿಲ್ಲ. ಬೆಟರ್‌ಮೆಂಟ್ ಕಮಿಟಿಯವರಿಗೂ ಆ ಅವಕಾಶ ಇಲ್ಲ. ಇದನ್ನು ಬರೆಯುವವರು ಎ.ಇ.ಒ., ಡಿ.ಇ.ಒ.ರವರು ಇದು ಏಕೆ? ಈ ಊರಿನಲ್ಲಿ ಶಾಲೆಯನ್ನು ಕಲಿಸುತ್ತಾನೋ, ಇಲ್ಲವೋ ಆ ಎ.ಇ.ಒ.ಗೆ ಏನು ಬೇಕಾಗಿದೆ? ಈ ಊರಿನಲ್ಲಿ ಆ ಮಾಸ್ತರ ಶಾಲೆಯನ್ನು ಕಲಿಸುತ್ತಿದ್ದಾನೆಂಬುದು ಆ ಶಾಲೆಯ ಬೆಟರ್‌ಮೆಂಟ್ ಕಮಿಟಿಗೆ ಗೊತ್ತಿರುತ್ತದೆ. ಆ ಊರಿನ ಗ್ರಾಮ ಪಂಚಾಯಿತಿಯ ಸದಸ್ಯರಿಗೆ ಗೊತ್ತಿರುತ್ತದೆ. ಇದು ಡಿ.ಇ.ಒ., ಎ.ಇ.ಒ.ಗಳಿಗೆ ಇರುವುದಿಲ್ಲ.

ಆದ್ದರಿಂದ ಪರ್‌ಫಾರ್ಮೆನ್ಸ್ ರಿಪೋರ್ಟ್‌ನ್ನು ಬರೆಯುವಂಥ ಅಧಿಕಾರವನ್ನು ದಯವಿಟ್ಟು ಆ ಬೆಟರ್‌ಮೆಂಟ್ ಕಮಿಟಿಯವರಿಗೆ ಕೊಡಿ. ಮಾಸ್ತರು ಶಾಲೆಗೆ ಸರಿಯಾಗಿಬಂದು ಮಕ್ಕಳಿಗೆ ಪಾಠವನ್ನು ಸರಿಯಾಗಿ ಕಲಿಸಿದರೆ ಅವರ ಪರ್‌ಫಾರ್ಮೆನ್ ರಿಪೋರ್ಟ್‌ಸರಿಯಾಗಿರುತ್ತದೆ. ಸರಿಯಾಗಿ ಕಲಿಸದೇ ಹೋದರೆ ಅವರ ಪರ್‌ಫಾರ್ಮ್‌ನ್ಸ್ ರಿಪೋರ್ಟ್‌ನಲ್ಲಿ ರಿಮಾರ್ಕ್ಸ್ ಆಗುತ್ತದೆ. ಆದರ ಮೇಲೆ ಅವನ ಸಂಬಳ, ಪದೋನ್ನತಿಯ ಬಗ್ಗೆ ನಿರ್ಣಯ ಮಾಡುವಂಥ ವ್ಯವಸ್ಥೆಯನ್ನು ದಯವಿಟ್ಟು ಜಾರಿಗೆ ತನ್ನಿ. ಇದು ಕೇವಲ ಶಾಲಾ ಮಾಸ್ತರರಿಗೆ ಮಾತ್ರ ಎಂದು ಅಲ್ಲ, ಆ ಗ್ರಾಮದಲ್ಲಿ ಕೆಲಸಮಾಡುವಂಥ ಪ್ರತಿಯೊಬ್ಬ ಸರ್ಕಾರೀ ನೌಕರರ ಮೇಲಿನ ಹಿಡಿತವನ್ನು ಪಂಚಾಯಿತಿ ಮಟ್ಟದಲ್ಲಿ ಕೊಟ್ಟರೆ, ಅವರಿಂದ ಹೆಚ್ಚಿನ ಸೇವೆಯನ್ನು ಗ್ರಾಮಸ್ಥರಿಗೆ ಒದಗಿಸಲು ಆ ಗ್ರಾಮ ಪಂಚಾಯಿತಿಗಳಿಗೆ ಸಾಧ್ಯವಾಗುತ್ತದೆ. ದಯವಿಟ್ಟು ಇದನ್ನು ಮಾಡಬೇಕೆಂದು ವಿನಂತಿಸುತ್ತೇನೆ.

ಇನ್ನು ತಾಲೂಕು ಪಂಚಾಯಿತಿ ಬಗ್ಗೆ ಹೇಳುವುದಾದರೆ, ತಾಲೂಕು ಪಂಚಾಯಿತಿಗಳಲ್ಲಿ ಅಧ್ಯಕ್ಷರಿಗೆ ವಾಹನ ಸೌಲಭ್ಯ ಇಲ್ಲವೆಂದು ಅವರು ಅಧಿಕಾರಕ್ಕೆ ಬಂದ ಕೂಡಲೇ ಕೇಳಿದರು. ಈಗ ತಾವು ಅವರಿಗೆ ವಾಹನ ಸೌಲಭ್ಯವನ್ನು ಕೊಟ್ಟಿದ್ದೀರಿ. ಅದು ಹೇಗೆ ಕೊಟ್ಟಿದ್ದೀರಿ, ಅಲ್ಲಿನ ಅಧ್ಯಕ್ಷರು ಮತ್ತು ಎಕ್ಸಿಕ್ಯುಟಿವ್ ಆಫೀಸರ್ ಇಬ್ಬರಿಗೋ ಸೇರಿದಂತೆ ಒಂದು ವಾಹನವನ್ನು ಕೊಟ್ಟಿದ್ದೀರಿ. ಕೆಲವು ತಾಲ್ಲೂಕು ಪಂಚಾಯಿತಿಗಳಲ್ಲಿ ಆ ಎಕ್ಸಿಕ್ಯುಟಿವ್ ಆಫೀಸರ್ಸ್‌ಗಳು ಅಧ್ಯಕ್ಷರಿಗೆ ಆ ವಾಹನವನ್ನು ಹತ್ತುವುದಕ್ಕೇ ಬಿಡುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಇವತ್ತು ಮಂಡರಗಿ ತಾಲೂಕಿನಲ್ಲಿ ಒಬ್ಬ ಹರಿಜನ ಲಂಬಾಣಿ ಮಹಿಳೆ ಆ ತಾಲೂಕು ಪಂಚಾಯಿತಿಯ ಅಧ್ಯಕ್ಷೆಯಾಗಿದ್ದಾಳೆ. ಆಕೆ ಅಧ್ಯಕ್ಷಿಣಿಯಾದಾಗಿನಿಂದ ಇವತ್ತಿನವರೆಗೂ ನೀವು ಕೊಟ್ಟಿರುವಂಥ ಜೀಪನ್ನು ಹತ್ತಿಲ್ಲ. ಏಕೆ ಎಂದು ನಾವೇನಾದರೂ ಕೇಳಿದರೆ, ಆ ಜೀಪನ್ನು ರಿಪೇರಿಗಾಗಿ ಕಳುಹಿಸಿದ್ದಾರಂತೆ ಎಂದು ಹೇಳುತ್ತಾಳೆ. ಅಂದರೆ ಅಲ್ಲಿ ಆಡಳಿತ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ತಾವೇ ಯೋಚನೆ ಮಾಡಿ.

ಸಾಮಾಜಿಕ ನ್ಯಾಯಾದ ಬಗ್ಗೆ ಸಾಕಷ್ಟು ಕಳಕಳಿ ಇರುವಂಥ ಜನ ನೀವು ಇಲ್ಲಿ ಅಧಿಕಾರದಲ್ಲಿದ್ದರೂ ಕೂಡ ಕೆಳಮಟ್ಟದಲ್ಲಿ ಅಧಿಕಾರ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ನೋಡಿ. ತಾಲೂಕು ಪಂಚಾಯಿತಿಯ ಕೆಳವರ್ಗದ ಅಧ್ಯಕ್ಷಿಣಿಗೆ ನೀವು ಕೊಟ್ಟಿರುವಂಥ ಜೀಪನ್ನು ಹತ್ತುವುದಕ್ಕೆ ಇವತ್ತಿನವರೆಗೂ ಅವಕಾಶ ಕೊಟ್ಟಿಲ್ಲ ಎಂದರೆ ಇದನ್ನು ಹೇಗೆ ಸರಿಪಡಿಸುತ್ತೀರೆಂಬ ವಿಚಾರವನ್ನು ನಿಮಗೇ ಬಿಟ್ಟಿದ್ದೇವೆ. ಈ ರೀತಿ ಆಗಬಾರದು. ಇದನ್ನು ದಯವಿಟ್ಟು ಸರಿಪಡಿಸಿ. ನೀವು ಅವರಿಗೆ ವಾಹನವನ್ನು ಕೊಟ್ಟಿದ್ದೀರಿ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಆ ಜೀಪು ರಿಪೇರಿಗೆ ಹೋಗಿದೆ ಎಂದು ಕಳುಹಿಸಿಬಿಡುತ್ತಾರೆ. ಅಧ್ಯಕ್ಷರಿಗೆ ಅವಕಾಶ ಕೊಡಬಾರದೆಂದು ಈ ರೀತಿ ಮಾಡುತ್ತಾರೆ. ಆದರೆ ಅದೇನಿಮ್ಮ ಎಕ್ಸಿಕ್ಯುಟಿವ್ ಆಫೀಸರ್‌ಗೆ ವಾಹನ ಬೇಕೆಂದರೆ ಅವರು ಬೇರೆ ಇಲಾಖೆಯಿಂದ ತರಿಸಿಕೊಳ್ಳುತ್ತಾರೆ. ಅಧ್ಯಕ್ಷರಿಗೆ ನಡೆಯಲಾರದಂಥ ಒಂದು ವ್ಯವಸ್ಥೆ ಅಲ್ಲಿದೆ. ಇದನ್ನು ಹೇಗೆ ಸರಿಪಡಿಸುತ್ತೀರೋ ಇದು ನಿಮಗೆ ಬಿಟ್ಟಿದ್ದು. ಇಲ್ಲದಿದ್ದರೆ ಆ ಸಪೋವರಿಗೆ ಏನು ಭಾವನೆ ಬರುತ್ತದೆ? ಗೌಡರು, ಶ್ಯಾನುಭೋಗರಿಗೆ ಅಧಿಕಾರ ಇದ್ದರೆ ಮಾತ್ರ ಜೀಪುಕೊಡುತ್ತೀರೋ? ನಮ್ಮಂಥವರು ಅಧಿಕಾರದಲ್ಲಿದ್ದರೆ ನಮಗೆ ಜೀಪು ಇಲ್ಲ ಎನ್ನುವಂಥ ಭಾವನೆಯನ್ನು ಬೇರೂರಿಸುವಂತೆ ಮಾಡುವುದು ಸರಿಯಲ್ಲ. ಇದು ಆಗಬಾರದು. ಯಾವ ಯಾವ ಗ್ರಾಮಗಳಲ್ಲಿ, ಯಾವ ಯಾವ ಪಿ.ಹೆಚ್.ಸಿ.ಗಳಲ್ಲಿ ಡಾಕ್ಟರ್‌ಗಳಿಲ್ಲ ಅಲ್ಲಿಗೆ ಗುತ್ತಿಗೆ ಆಧಾರದ ಮೇಲೆ ಡಾಕ್ಟರ್‌ಗಳನ್ನು ನೇಮಿಸಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೀರಿ.

ಆದರೆ ಆ ಅಧಿಕಾರವನ್ನು ನೀವು ಅಲ್ಲಿನ ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದೀರಿ. ಇದು ಏಕೆ? ಹುಲಕೋಟಿಯಲ್ಲಿ ಡಾಕ್ಟರ್ ಇಲ್ಲದಿದ್ದರೆ ಅಲ್ಲಿದೆ ನೇಮಕ ಮಾಡಬೇಕೆಂಬ ಕಳಕಳಿ ಆ ಜಿಲ್ಲಾಧಿಕಾರಿಗೆ ಇರುತ್ತದೆಯೇ? ಈ ಅಧಿಕಾರವನ್ನು ತಾಲ್ಲೂಕು ಪಂಚಾಯಿತಿಗೆ ಕೊಡಿ. ಅಥವಾ ಗ್ರಾಮಪಂಚಾಯಿತಿಗಳಿಗೆ ಕೊಡಿ. ನಮ್ಮ ಊರಿಗೆ ಯಾವ ಡಾಕ್ಟರ್ ಬಂದು ಕೆಲಸಮಾಡುವುದಕ್ಕೆ ತಯಾರಿರುತ್ತಾನೆ ಅವನ ಮನವೊಲಿಸಿಕೊಂಡು ಬಂದು ಇವನನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿ, ಇವನು ನಮ್ಮ ಊರಿನಲ್ಲಿ ಕೆಲಸಮಾಡುತ್ತಾನೆಂದು ನಾವು ಹೇಳುತ್ತೇವೆ. ಗ್ರಾಮ ಪಂಚಾಯಿತಿಯವರು ರೆಕಮೆಂಡ್ ಮಾಡಿದವರಿಗೆ ನೇಮಕಾತಿ ಮಾಡುವಂತೆ ವ್ಯವಸ್ಥೆ ಮಾಡಿ. ಸರ್ಕಾರದವರು ಯಾರನ್ನೋ ಗುತ್ತಿಗೆ ಆಧಾರದ ಮೇಲೆ ಕಳುಹಿಸಿಕೊಡುತ್ತಾರೆ. ಆದರೆ ಅವರು ಅಲ್ಲಿಗೆ ಬರುವುದೇ ಇಲ್ಲ. ಗುತ್ತಿಗೆ ಆಧಾರದ ಮೇಲೆ ಗ್ರಾಮಗಳಲ್ಲಿ ಕೆಲಸಮಾಡುವುದಕ್ಕೆ ಡಾಕ್ಟರ್‌ಗಳು ಬರುವುದೇ ಇಲ್ಲ. ಬಹಳಷ್ಟು ಸಾರಿ ಡಾಕ್ಟರ್‌ಗಳೇ ಸಿಕ್ಕುವುದಿಲ್ಲವೆಂದು ಹೇಳುತ್ತೀರಿ.

ಹೆಲ್ತ್ ಡಿಪಾರ್ಟ್‌ಮೆಂಟ್ ಪಂಚಾಯತ್‌ರಾಜ್‌ನಲ್ಲಿದೆ. ಹಾಗಿದ್ದರೂ ಜಿಲ್ಲಾಧಿಕಾರಿಯವರಿಗೆ ಏಕೆ ಅಧಿಕಾರ ಕೊಡುತ್ತೀರಿ? ಅದೇ ರೀತಿ ರೇಷನ್‌ಡಿಸ್ಟ್ರಿಬ್ಯೂಷನ್ ಕೂಡ ಪಂಚಾಯತ್‌ರಾಜ್‌ನಲ್ಲಿದೆ. ಅದನ್ನೂ ಕೂಡ ಜಿಲ್ಲಾಧಿಕಾರಿಯವರ ಕೈಯಲ್ಲೇ ಇಟ್ಟಿದ್ದೀರಿ. ಎಲ್ಲೆಲ್ಲಿ ಸರ್ಕಾರದ ಇಲಾಖೆಯಲ್ಲಿ ಅಧಿಕಾರ ಇದೆ ಅದನ್ನು ಯಾವ ಯಾವ ಹಂತದಲ್ಲಿ ಪಂಚಾಯತ್‌ರಾಜ್ ಆ ಇಲಾಖೆಗಳನ್ನೂ, ಜವಾಬ್ದಾರಿಯನ್ನು ಹಸ್ತಾಂತರ ಮಾಡಬೇಕೆಂದು ಮಾಡಿದ್ದೀರೋ ಆ ಎಲ್ಲಾ ಆಡಳಿತವನ್ನೂ ಸಂಪೂರ್ಣವಾಗಿ ಹಸ್ತಾಂತರ ಮಾಡುವಂಥ ವ್ಯವಸ್ಥೆ ಮಾಡಿ. ಇಲ್ಲದೇ ಹೋದರೆ ಈ ಜಿಲ್ಲಾಧಿಕಾರಿಗಳು, ರಾಜ್ಯಮಟ್ಟದ ಅಧಿಕಾರಿಗಳು ಆ ಅಧಿಕಾರವನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾರೆ. ಯಾರಿಗೇ ಆಗಲಿ ಮೊದಲು ಅಧಿಕಾರವನ್ನು ಇಟ್ಟುಕೊಂಡಿರುವವರು ಆ ಅಧಿಕಾರವನ್ನು ಬಿಟ್ಟುಕೊಡುವುದು ಎಂದರೆ ಬಹಳ ಸಂಕಟವಾಗುತ್ತದೆ. ಆಶ್ರಯ

ಕಮಿಟಿಯ ಅಧ್ಯಕ್ಷರನ್ನಾಗಿ ಶಾಸಕರನ್ನು ಮಾಡಿ ಎಂದು ನಾವು ಹೇಳುತ್ತಿದ್ದೇವಲ್ಲಾ ಹಾಗೆ. ಪಂಚಾಯತ್ ಕಾನೂನನ್ನು ಒಪ್ಪಿಕೊಂಡಮೇಲೆ ಆಶ್ರಯ ಕಮಿಟಿಯ ಅಧ್ಯಕ್ಷರಾಗುವ ಹಕ್ಕು ನಮಗಿಲ್ಲ. ನಾವು ಇದನ್ನು ಒಪ್ಪಿಕೊಳ್ಳಬೇಕು. ಮೊದಲು ನ್ಯಾಯಯುತವಾಗಿ ನಮಗೆ ಇದ್ದಂಥ ಹಕ್ಕನ್ನು ನಾವು ಬಿಟ್ಟುಕೊಟ್ಟೆವು. ಅದನ್ನು ಮತ್ತೆ ನಾವು ಕಸಿದುಕೊಳ್ಳಬಾರದು. ಕೊಟ್ಟ ಅಧಿಕಾರವನ್ನು ಕಸಿದುಕೊಳ್ಳುವಂಥ ಪ್ರಯತ್ನ ಈ ಪ್ರಜಾಪ್ರಭುತ್ವದಲ್ಲಿ ಒಳ್ಳೆಯದಲ್ಲ. ಇನ್ನೂ ಹೆಚ್ಚಿನ ಅಧಿಕಾರವನ್ನು ತಾವು ಕೊಡಿ. ಆದರೆ ಕೊಟ್ಟಂಥ ಅಧಿಕಾರವನ್ನು ಕಸಿದುಕೊಳ್ಳುವ ಪ್ರಯತ್ನ ಯಾರಿಂದಲೂ ಆಗಬಾರದು. ಅದು ಶಾಸಕರಿಂದಲೂ ಆಗಬಾರದು, ಅಧಿಕಾರಿಗಳಿಂದಲೂ ಆಗಬಾರದು, ಮಂತ್ರಿಗಳಿಂದಲೂ ಆಗಬಾರದು.

ಇನ್ನು ಜವಾಹರ್ ರೋಜ್‌ಗಾರ್ ಯೋಜನೆ ಎಂಪ್ಲಾಯ್‌ಮೆಂಟ್ ಅಶ್ಯೂರೆನ್ಸ್ ಸ್ಕೀಂನಲ್ಲಿ ನಾವು ನೂರಾರು ಕೋಟಿ ರೂಪಾಯಿಗಳನ್ನು ಮಾಡುತ್ತಿದ್ದೇವೆ. ಗ್ರಾಮೀಣ ಭಗಗಳಲ್ಲಿ ಸಾಕಷ್ಟು ಸೌಲಭ್ಯಗಳು ಆ ಜನರಿಗೆ ಸಿಕ್ಕಲಿ, ಅವರಿಗೆ ಅನುಕೂಲವಾಗಲಿ, ಅವರಿಗೆ ಉದ್ಯೋಗ ಸಿಕ್ಕಲಿ ಎಂಬ ಉದ್ದೇಶದಿಂದ. ಪ್ರಾಮಾಣಿಕವಾಗಿ ಹೇಳಬೇಕೆಂದರೆ ನಮ್ಮ ಭಾಗದಲ್ಲಿ ಉದ್ಯೋಗದ ಸಮಸ್ಯೆ ಇಲ್ಲ. ಜವಾಹರ್ ರೋಜ್‌ಗಾರ್ ಯೋಜನೆ ಆಗಲಿ, ಎಂಪ್ಲಾಯ್‌ಮೆಂಟ್ ಸ್ಕೀಂ ಆಗಲಿ, ಡಿಪಿಎಪಿ ಸ್ಕೀಂ ಆಗಲಿ, ಇವುಗಳ ಮೂಲಕ ಜನರಿಗೆ ಉದ್ಯೋಗವನ್ನು ಕಲ್ಪಿಸುವ ದೃಷ್ಟಿಯಿಂದ ಈ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತೇವೆಂದು ಏನಾದರೂ ಇನ್ನೂ ತಿಳಿದುಕೊಂಡಿದ್ದರೆ ಅದು ತಪ್ಪು. ಈ ದೃಷ್ಟಿಯಿಂದ ನಮಗೆ ಹಣ ಬರುತ್ತದೆ ಆ ದುಡ್ಡನ್ನು ಉಪಯೋಗ ಮಾಡಿಕೊಂಡು ಇಲ್ಲಿ ಸೌಲಭ್ಯಗಳನ್ನು ಕ್ರಿಯೇಟ್ ಮಾಡಬೇಕೆಂಬ ಉದ್ದೇಶ ಇದ್ದರೆ ಅದನ್ನು ನಾನು ಒಪ್ಪುತ್ತೇನೆ. ಅದಿಲ್ಲದಿದ್ದರೆ ಉದ್ಯೋಗದ ಸಲುವಾಗಿ ಈ ಯೋಜನೆಗಳು ಅಲ್ಲ. ಈಗ ಗ್ರಾಮ ಮಟ್ಟದಲ್ಲಿ ಇವುಗಳ ಅವಶ್ಯಕತೆ ಇಲ್ಲ. ಇದೆಲ್ಲಾ ಮ್ಯಾನ್ಯುಪುಲೇಷನ್ ಆಗುತ್ತದೆ. ನಾವು ಕಂಟ್ರ್ಯಾಕ್ಟರ್‌ಗಳಿಗೆ ಕೊಟ್ಟಿರುತ್ತೇವೆ, ಡಿಪಿಎಪಿ ಕೆಲಸವನ್ನೂ ಕೂಡ ಬುಲ್ಡೋಜರ್ ಉಪಯೋಗಿಸಿ ಕೆಲಸವನ್ನೂ ಮಾಡುವುದನ್ನೂ ನಾವು ನೋಡುತ್ತೇವೆ. ಇಲ್ಲದೇ ಹೋದರೆ ಆ ಕೆಲಸ ಆಗುವುದಿಲ್ಲ. ಈ ರೀತಿ ಏಕೆ ಮಾಡುತ್ತೀರೆಂದರೆ, ನಮಗೆ ಆಳುಗಳು ಸಿಕ್ಕುವುದಿಲ್ಲವೆಂದು ಹೇಳುತ್ತಾರೆ. ಆಳುಗಳು ಸಿಕ್ಕದೇ ಹೋದರೆ ನಮ್ಮಲ್ಲಿ ಕೆಲಸ ಆಗುವುದಿಲ್ಲ, ಅನಂತರ ಅಷ್ಟು ಹಣ ನನ್ನ ಕ್ಷೇತ್ರಕ್ಕೆ ಬರುವುದು ನಿಂತುಹೋಗುತ್ತದೆ. ಆದ್ದರಿಂಧ ಇದರ ಬಗ್ಗೆ ನಾವು ಯಾವುದೇ ಅಡೆತಡೆಯನ್ನೂ ಮಾಡುತ್ತಿಲ್ಲ, ಮಾಡುವುದೂ ಇಲ್ಲ.

ಅದಕ್ಕೆ ದಯವಿಟ್ಟು ಒಂದು ಏನು ಮಾಡಬೇಕು ನೀವು ಇಲ್ಲಿ ಜೆ.ಆರ್.ವೈ. ಫಂಡ್ಸ್‌ನಲ್ಲಿ ಯಾರು ಯಾರು ಗುತ್ತಿಗೆದಾರರು ಇರಬಾರದು ಎಂದು ಕೇಂದ್ರ ಸರ್ಕಾರದ ನಿರ್ದೇಶನ ಇದೆ. ಎಲ್ಲಾ ಕಾರ್ಯಕ್ರಮದಲ್ಲೂ ಗುತ್ತಿಗೆದಾರರಿರುತ್ತಾರೆ. ಆದರೆ ಕಾಗದಪತ್ರದಲ್ಲಿ ಮಾತ್ರ ಗುತ್ತಿಗೆದಾರರು ಇರುವುದಿಲ್ಲ. ಹೀಗಾಗಿ ಅವರು ಕಳಪೆ ಕೆಲಸ ಮಾಡುತ್ತಾರೆ. ಕಳಪೆ ಕೆಲಸ ಮಾಡಿದ ಮೇಲೆ ಅವರನ್ನು ಜವಾಬ್ದಾರರನ್ನಾಗಿ ಹಿಡಿಯುವ ಹಕ್ಕೇ ಇಲ್ಲಿವಲ್ಲ ಎಲ್ಲೂ ಕಾಗದ ಪತ್ರದೊಳಗೆ. ಏಕೆಂದರೆ ಅವರು ಗುತ್ತಿಗೆದಾರರು ಅಲ್ಲವೇ ಅಲ್ಲ. ಅಲ್ಲಿ ಬರುವುದು ಪಾಪ ಈ ಗ್ರಾಮಪಂಚಾಯಿತಿ ಅಧ್ಯಕ್ಷರೋ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರೋ ಅಥವಾ ಇಂಜಿನಿಯರ್ರೋ ಇವರು ಸಿಕ್ಕಿಬಿಡುತ್ತಾರೆ. ಅವರು ಪಾರಾಗುತ್ತಾನೆ. ಇವರ ಸಹಾಯ ಇಲ್ಲದೆ ಅವನು ಪಾರಾಗುವುದು ಆಗುವುದಿಲ್ಲ. ಇವರ ಸಹಾಯ ಇದ್ದೇ ಇರುತ್ತದೆ, ಒಪ್ಪುತ್ತೇನೆ ನಾನು. ಎಲ್ಲರೂ ಅದರೊಳಗೆ ನಾವು ಪಾಲುದಾರರಾಗಿ ಕೊಳ್ಳೆ ಹೊಡೆಯುವಂಥ ಒಂದು

ಪರಿಸ್ಥಿತಿ ಇದೆ. ಇದು ನಿಲ್ಲಬೇಕು. ಸಾರ್ ಭ್ರಷ್ಟಾಚಾರವನ್ನು ನಾವು ಯಾರಿಗಾದರೂ ಶಿಕ್ಷೆ ಮಾಡಿ ನಿಲ್ಲಿಸುತ್ತೇವೆ, ಅಥವಾ ಯಾರಿಗಾದರೂ ತನಿಖೆ ಮಾಡಿ ನಿಲ್ಲಿಸುತ್ತೇವೆ ಅಂದರೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಆಗುವುದಿಲ್ಲ. ನನಗೊಂದು ಬಹಳ ಕಹಿ ಅನುಭವ ಇದೆ ಸಾರ್.

ನಾನು ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡುವಾಗ ಒಬ್ಬ ಡಿ.ಹೆಚ್.ಓ. 25 ಲಕ್ಷ ರೂಪಾಯಿ ಔಷಧಿ ಖರೀದಿಯೊಳಗೆ 8 ಲಕ್ಷ ರೂಪಾಯಿ ತಿಂದಿದ್ದರು. ಎಲ್ಲಾ ದಾಖಲೆ ಸಮೇತ ನಾವು ಕೊಟ್ಟೆವು. ಆಯಿತು. ಪಾಪ ಅವರು ಡಿಸ್‌ಮಿಸ್ ಆದರು ಹೋದರು. ಆದರೆ ಅದರಿಂದ ನನಗೆ ಎಷ್ಟು ಹಿಂಸೆಯಾಯಿತು ಎಂಬುದು ನನಗೆ ಅನುಭವ ಇದೆ. ಅದಕ್ಕೆ ನಾವು ಪೋಸ್ಟ್‌ಮಾರ್ಟಂ ಮಾಡುವುದರಿಂದ ವ್ಯವಸ್ಥೆಯನ್ನು ಸುಧಾರಿಸಲಿಕ್ಕೆ ಆಗುವುದಿಲ್ಲ. ಅದಕ್ಕೆ ಇದ್ದ ವ್ಯವಸ್ಥೆಯೊಳಗೆ ಈ ಭ್ರಷ್ಟ ವ್ಯವಹಾರ ಮಾಡಲಿಕ್ಕೆ ಅನುಕೂಲವಾಗದಹಾಗೆ ಒಂದು ಫುಲ್‌ಪ್ರೂಫ್ ಸಿಸ್ಟಮನ್ನು ಇವಾಲ್ವ್ ಮಾಡುವುದನ್ನು ಮಾತ್ರ ಸರ್ಕಾರ ಮತ್ತು ವಿವಿಧ ಹಂತದಲ್ಲಿರುವ ನಮ್ಮಂಥವರು ಜವಾಬ್ದಾರಿ ಹೊತ್ತು ಆ ಕೆಲಸ ನಾವು ಮಾಡಬೇಕಾಗುತ್ತದೆ. ಅದಕ್ಕೆ ಸರ್ಕಾರ ಅಣಿಯಾಗಬೇಕು. ಈಗ ಕೇಂದ್ರ ಸರ್ಕಾರ ಒಂದು ಆದೇಶವನ್ನು ತಮಗೆ ಕೊಟ್ಟಿದೆ. ಪ್ರತಿ ಗ್ರಾಮಕ್ಕೆ ಅಲ್ಲಿಯ ಪಂಚಾಯಿತಿ ಸದಸ್ಯರನ್ನು ಮತ್ತು ಯಾವುದೇ ರಾಜಕೀಯ ಪಕ್ಷದ ಸದಸ್ಯರನ್ನು ಹೊರತುಪಡಿಸಿ ಒಂದೊಂದು ಜಾಗೃತ ಸಮಿತಿ ಆಗಬೇಕು.

ಈ ಎಲ್ಲಾ ಜೆ.ಆರ್.ವೈ. ಫಂಡ್ಸ್, ಎಂಪ್ಲಾಯ್ಮೆಂಟ್ ಅಷ್ಯೂರೆನ್ಸ್ ಸ್ಕೀಮಿನ ಫಂಡ್ಸ್, ಇವುಗಳ ಮೇಲ್ವಿಚಾರಣೆ ಸರಿಯಾಗಿ ಆಗುತ್ತದೋ ಅಥವ ಇಲ್ಲವೋ ಎನ್ನುವುದರ ಬಗ್ಗೆ ಮೇಲ್ವಿಚಾರಣೆ ಮಾಡುವುದಕ್ಕೆ ರಾಜಕೀಯ ಜನರನ್ನು ಪೂರ್ತಿ ದೂರವಾಗಿಟ್ಟು ಜಾಗೃತಾ ಸಮಿತಿಯನ್ನು ರಚಿಸಬೇಕು ಎಂದು ಗೈಡ್‌ಲೈನ್ಸ್ ಬಂದಿದೆ. ಯಾವ ಗ್ರಾಮದಲ್ಲೂ ಆ ಜಾಗ್ರತಾ ಸಮಿತಿಗಳ ರಚನೆಯಾಗಿಲ್ಲ. ಅವುಗಳನ್ನು ಮಾಡಗೊಡುವುದಿಲ್ಲ. ಅದಕ್ಕೆ ದಯವಿಟ್ಟು ತಾವು ಈ ಜಾಗೃತ ಸಮಿತಿಗಳ ರಚನೆ ಗ್ರಾಮಸಭೆಯ ಮುಖಾಂತರವೇ ಆಗಬೇಕು ಎನ್ನುವುದು ಸರ್ಕಾರದ ಸುತ್ತೋಲೆ ಇದೆ. ಅವು ಬೇಗ ಪ್ರತಿ ಗ್ರಾಮದಲ್ಲಿ ಆಗಿ ಅವು ಕಾರ್ಯದ ಪರಿವೀಕ್ಷಣೆ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಿ. ಇವತ್ತು ನಮ್ಮ ಗ್ರಾಮಕ್ಕೆ ಹುಲಕೋಟೆಯಿಂದ ಕುರ್ತಕೋಟೆಗೆ ಒಂದು ರೋಡು. ಆ ರೋಡಿಗೆ ನೀವು ಸುಮಾರು 5 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದೀರಿ ಎಂದು ತಿಳಿಯಿರಿ. 5 ಲಕ್ಷ ರೂಪಾಯಿ ಎಸ್ಟಿಮೇಟ್ ಅಂದರೆ ನನಗೆ ತಿಳಿಯುವಹಾಗಿಲ್ಲ, ಸ್ವಾಮಿ, ಆ 5 ಲಕ್ಷ ರೂಪಾಯಿ ಹೇಗೆ ಖರ್ಚಾಗುತ್ತದೆ? ಯಾವ ಯಾವ ಐಟಂಗೆ ನೀವು ಏನೇನು ಖರ್ಚು ಮಾಡುತ್ತೀರಿ ಅದು ಎಷ್ಟು, ಎಷ್ಟು ಟ್ರಿಕ್ ಹಾಕುತ್ತೀರಿ ಎನ್ನುವುದು ಸರಿಯಾಗಿ ತಿಳಿಯುವ ಹಾಗೆ ಮಾಹಿತಿ ಆ ಎರಡೂಗ್ರಾಮಸ್ಥರಿಗೆ ಸಿಗುವ ಹಾಗೆ ಇರಬೇಕು. ಅಂದರೆ ಈ ರೋಡಿನ ಮೇಲೆ ಕೆಲಸ ಮಾಡುವಂಥ ಗುತ್ತಿಗೆದಾರ ಇರಲಿ ಅದನ್ನು ನೋಡುವಂಥ ಇಂಜಿನಿಯರೇ ಇರಲಿ ಸರಿಯಾಗಿ ಮಾಡುತ್ತಾರೋ ಇಲ್ಲವೋ ಎನ್ನುವುದು ನನಗೆ ಗೊತ್ತಾಗುತ್ತದೆ.

ಈ ರೋಡಿನ ಮೇಲೆ ನೂರು ಟ್ರಿಪ್ ಮೋರಮ್ ಬೀಳಬೇಕು ಎಂದು ನನಗೆ ಗೊತ್ತಿದ್ದರೆ ಆ ನೂರು ಟ್ರಿಪ್ ಮೋರಮ್ ಬಿದ್ದಿದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಾಗುತ್ತದೆ. ಇಲ್ಲವೇ ಐವತ್ತೇ ಟ್ರಿಪ್‌ಮೋರಮ್ ಹಾಕಿ

ಮಾಡಬಹುದು ಅವನು. ಈಗ ನಡೆದಿರುವುದೇ ಅದು. ಐವತ್ತೂ ಟ್ರಿಪ್ ಹಾಕುವುದಿಲ್ಲ. ಇಪ್ಪತ್ತೈದು ಟ್ರಿಪ್ ಹಾಕುತ್ತಾರೆ. 25 ಪರ್ಸೆಂಟ್ ಹಣ ಮಾತ್ರ ವೆಚ್ಚವಾಗುತ್ತದೆ. ಉಳಿದ 75 ಪರ್ಸೆಂಟ್ ನಾವು, ಅಧಿಕಾರಿಗಳು, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿರುವಂಥ ಜನ ಪ್ರತಿನಿಧಿಗಳು ಎಲ್ಲರೂ ಕೂಡ ನುಂಗಿಹಾಕುವಂಥ ವ್ಯವಸ್ಥೆ ಇವತ್ತು ಇದೆ. ಇದು ಹೋಗಬೇಕಾದರೆ ಜನರಿಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿ ಸಿಗುವಹಾಗೆ ನಾವು ಮಾಡಬೇಕು. ಮಾಹಿತಿ ಸಿಗಲಿಲ್ಲ ಅಂದರೆ ಏನಾಗಿದೆ ಎಂಬುದು ಅವರಿಗೆ ಗೊತ್ತಾಗುವುದಿಲ್ಲ. ಅವರಿಗೆ ಗೊತ್ತಾಗಲಿಲ್ಲ ಅಂದರೆ ನಾವು ಅವ್ಯಾಹತವಾಗಿ ಈ ಕೆಲಸವನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೊಂದು ಕಡಿವಾಣ ಹಾಕುವುದರ ಸಲುವಾಗಿ ಎಲ್ಲಾ ಯೋಜನೆಗಳ ಬಗ್ಗೆ ಅವು ಜಿಲ್ಲಾ ಪಂಚಾಯಿತಿಯಿಂದ ಇರುವ ಯೋಜನೆಗಳೇ ಇರಲಿ, ರಾಜ್ಯ ಸರ್ಕಾರದಿಂದ ಬರುವಂಥ ಯೋಜನೆಗಳೇ ಇರಲಿ, ಯಾವ ಯೋಜನೆಗಳೇ ಇರಲಿ, ಆ ಎಲ್ಲಾ ಯೋಜನೆಗಳೂ ಗ್ರಾಮ ಮಟ್ಟದಲ್ಲಿ ಅನುಷ್ಠಾನ ಆಗುವಾಗ ಈ ಜಾಗೃತ ಸಮಿತಿಯ ಪರಿವೀಕ್ಷಣೆಗೆ ಒಳಪಡಬೇಕು. ಆ ಜಾಗೃತ ಸಮಿತಿಗೆ ಬೇಕಾದಂಥ ಎಸ್ಟಿಮೇಟ್ ಪ್ಲಾನು ಎಲ್ಲಾ ಮಾಹಿತಿ ಅವರಿಗೆ ತಿಳಿಯುವ ಭಾಷೆಯಲ್ಲಿ ಸಿಗುವಂಥ ಒಂದು ವ್ಯವಸ್ಥೆಯನ್ನು ತಾವು ಮಾಡಿ. ಇದನ್ನು ಮಾಡುವುದರಿಂದ ಬಹಳಷ್ಟು ಅನುಕೂಲವಾಗುತ್ತದೆ. ಇಷ್ಟು ಮಾತನ್ನು ಪಂಚಾಯತ್ ರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ ಬಗ್ಗೆ ಹೇಳಿ ಹೋದ ವರ್ಷದ ಪರ್ಫಾರ್ಮೆನ್ಸ್ ಈ ಇಲಾಖೆ ಮುಖಾಂತರ ಆಗಿದ್ದರಲ್ಲಿ ನೋಡುತ್ತಾ ಇದ್ದೆ.

ಐ.ಆರ್.ಡಿ.ಪಿ. ಬೆನಿಫಿಷರೀಸನ್ನು ಹೋದವರ್ಷ ಒಂದು ಲಕ್ಷ ಗುರಿ ಇಟ್ಟರೂ 1,19,685 ಜನರನ್ನು ಗುರಿ ಮುಟ್ಟಿದ್ದೀರಿ ನೀವು. ಅದಕ್ಕೆ ನಿಮಗೆ ಶಹಬಾಶ್‌ಗಿರಿ ಕೊಡುತ್ತೇನೆ. ಆದರೆ ಈ ವರ್ಷಕ್ಕೆ ಅದನ್ನು 69,000ಕ್ಕೆ ಇಳಿಸಿದ್ದೀರಲ್ಲ ಏಕೆ? 1,20,000 ನೀವು ಹೋದವರ್ಷ ಸಾಧನೆ ಮಾಡಿದ್ದೀರಿ. ಈ ವರ್ಷ ಇನ್ನೂ 1,30,000 ಇಟ್ಟರೆ ಪರ್ವಾಗಿಲ್ಲ ಎನ್ನಬಹುದು. ನೀವು 69,000 ಇಟ್ಟಿದ್ದೀರಿ ಏಕೆ? ಇನ್ನೂ ಬಹಳಷ್ಟು ಜನ ಇದ್ದಾರೆ. ಯಾರೂ ಇಲ್ಲ ಎನ್ನುವ ಮಾತನ್ನು ನೀವು ಹೇಳಿದರೆ ಅಡ್ಡಿ ಇಲ್ಲ. ಅಷ್ಟು ಮಂದಿ ಬಡವರು ನಮಗೆ ಸಿಗುತ್ತಾ ಇಲ್ಲ, ಈ ಕಾಂಗ್ರೆಸ್ ಸರ್ಕಾರ ಇದ್ದಾಗ ಅಷ್ಟರಮಟ್ಟಿಗೆ ಬಡತನ ಕಡಿಮೆ ಮಾಡಿಬಿಟ್ಟಿದೆ, ಈಗ ನಮಗೆ ಬಡವರೇ ಸಿಗುತ್ತಿಲ್ಲ ಎನ್ನುವ ಶಹಭಾಸ್ ಗಿರಿಯನ್ನು ನೀವು ನಮಗೆ ಕೊಡುತ್ತಿದ್ದರೂ ಪರ್ವಾಗಿಲ್ಲ ಒಪ್ಪಿಕೊಳ್ಳುತ್ತೇನೆ ನಾನು.

ಇದನ್ನು ನೋಡಿ ದಯವಿಟ್ಟು, ಇದು ಆ ರೀತಿ ಆಗುವುದಿಲ್ಲ. ಈಗ ಬಯೋಗ್ಯಾಸ್ ಮತ್ತು ಇಂಪ್ರೂವ್ಡ್ ಚುಲ್ಲ (ಒಲೆ) ಈ ಎರಡೂ ಕಾರ್ಯಕ್ರಮ ಬೆಳಗಾಂ ಜಿಲ್ಲೆಯೊಳಗೆ ನಮ್ಮ ಉಪಾಧ್ಯಕ್ಷರ ಜಿಲ್ಲೆಯೊಳಗೆ ಬಹಳ ಅನುಕರಣೀಯವಾದ ರೀತಿಯಲ್ಲ ಕೆಲಸ ನಡೆದಿದೆ. ಇಡೀ ರಾಷ್ಟ್ರಕ್ಕೆ ಅವರು ಯಾವಾಗಲೂ ಪ್ರಥಮ ಸ್ಥಾನವನ್ನು ಪಡೆಯುತ್ತಾ ಇದ್ದಾರೆ. ಕಳೆದ ಐದು ವರ್ಷದಿಂದ ಬೆಳಗಾಂ ಜಿಲ್ಲೆ ಇಡೀ ರಾಷ್ಟ್ರಕ್ಕೇ ಪ್ರಥಮ ಸ್ಥಾನವನ್ನು ಪಡೆಯುತ್ತಿದೆ. ಅವರಿಂದ ನಾವು ಧಾರವಾಡ ಜಿಲ್ಲೆಯವರೂ ಏನೂ ಪ್ರೇರೇಪಣೆ ಪಡೆಯಲಿಲ್ಲ. ಬಿಜಾಪುರ ಜಿಲ್ಲೆಯವರೂ ಪ್ರೇರೇಪಣೆ ಪಡೆಯಲಿಲ್ಲ. ರಾಜ್ಯ ಸರ್ಕಾರ ಪ್ರೇರೇಪಣೆ ಪಡೆಯಲಿಲ್ಲ ಏಕೆ ಅಲ್ಲಿ ಸಕ್ಸಸ್‌ಫುಲ್ ಆಯಿತು? ಉಳಿದ ಕಡೆ ಏಕೆ ಆಗುವುದಿಲ್ಲ? ಉಳಿದ ಕಡೆಯೂ ಏಕೆ ನಾವು ಸಕ್ಸಸ್‌ಫುಲ್ಲಾಗಿ ಮಾಡಬಾರದು? ಎನ್ನುವುದರ ಬಗ್ಗೆ ನೀವು ವಿಚಾರಾನೇ ಮಾಡಲಿಲ್ಲವಲ್ಲ. ದಯವಿಟ್ಟು ಅದನ್ನು ಮಾಡಿ. ಏಕೆಂದರೆ ಈ ಎರಡೂ ಯೋಜನೆ ಅಡಿಯಲ್ಲಿ ನಿಮಗೆ ದುಡ್ಡು ಸಾಕಷ್ಟು ಸಿಗುತ್ತದೆ. ದುಡ್ಡಿದೆ ಲಿಮಿಟ್ ಇಲ್ಲ, ಇದನ್ನು

ಮಾಡುವುದರಿಂದ ನಮ್ಮ ಅರಣ್ಯದ ಮೇಲೆ ಏನು ಒತ್ತಾಯ ಈಗ ಜನರದು ಬೀಳುತ್ತಾ ಇದೆ ಆ ಒತ್ತಾಯವೂ ಬಹಳಷ್ಟು ಕಡಿಮೆಯಾಗುತ್ತದೆ. ನೀವು ಅರಣ್ಯ ಸಂರಕ್ಷಣೆ ಮಾಡುವುದರ ಜೊತೆಗೆ ಸಾಕಷ್ಟು ಗಿಡ ಉಳಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ದಯವಿಟ್ಟು ಆ ಎರಡೂ ಕೆಲಸಗಳನ್ನು ತಾವು ಮಾಡಬೇಕು ಎನ್ನುವಂಥ ಮಾತನ್ನು ತಮಗೆ ಹೇಳಿ ಇನ್ನು ಕೃಷಿಯ ಬಗ್ಗೆ ಹೇಳುತ್ತೇನೆ. ನನಗೆ ಏಕೋ ಕೃಷಿ, ಕೃಷಿ ಕುಟುಂಬದ ಒಬ್ಬ ಸದಸ್ಯನಾಗಿ ಗ್ರಾಮೀಣ ಭಾಗದಲ್ಲಿ ಕೃಷಿ ಕೆಲಸ ಮಾಡುತ್ತಿರುವಂಥ ಅನುಭವದ ಹಿನ್ನಲೆಯಲ್ಲಿ ಎಲ್ಲಾ ನಾವು ಕೃಷಿಕರು ಹೇಳುತ್ತೇವೆ, ಗೊಬ್ಬರದ ಬೆಲೆ ಹೆಚ್ಚಾಯಿತು, ಸಬ್ಸಿಡಿ ಕಡಿಮೆಯಾಯಿತು ಎಂದು. ಸಬ್ಸಿಡಿ ಹೆಚ್ಚಾಗಿಬಿಟ್ಟರೆ ಭಾರಿ ಖುಷಿಯಾಗಿಬಿಡುತ್ತೇವೆ ನಾವು. ಸ್ವಾಮಿ, ಈ ರಾಸಾಯನಿಕ ಗೊಬ್ಬರಗಳನ್ನು ಕ್ರಿಮಿನಾಶಕಗಳನ್ನು ಉಪಯೋಗ ಮಾಡುವುದರಿಂದ ನಮ್ಮ ಭೂಮಿಯ ಫಲವತ್ತತೆ ಕಡಿಮೆಯಾಗುತ್ತಾ ಇದೆ. ನಮ್ಮ ಭೂಮಿಯಿಂದ ಬಗತಕ್ಕ ಉತ್ಪನ್ನ ಕಡಿಮೆಯಾಗುತ್ತಿದೆ. ಇದರ ಬಗ್ಗೆ ಸಾಕಷ್ಟು ರಿಪೋರ್ಟ್ ಇದೆ ನಿಮಗೆ. ನಿಮ್ಮ ಅಗ್ರಿಕಲ್ಚರ್ ಯೂನಿವರ್ಸಿಟಿಯವರೂ ನಿಮಗೆ ಹೇಳುತ್ತಾರೆ.

ಎಕ್ಸ್‌ಪರ್ಟ್ಸ್ ಕೂಡ ನಿಮಗೆ ಹೇಳುತ್ತಾರೆ. ಆದರೂ ಗೊಬ್ಬರಕ್ಕೆ ಸಬ್ಸಿಡಿ ಹೆಚ್ಚು ಕೊಡುವುದರಲ್ಲೇ ನಮಲ್ಲಿ ಪೈಪೋಟಿ. ಮಾನ್ಯ ದೇವೇಗೌಡರು, ಮಾನ್ಯ ಭೈರೇಗೌಡರು ಅದೇನೋ ಗೊಬ್ಬರಕ್ಕೆ ಹೆಚ್ಚು ಸಬ್ಸಿಡಿ ಕೊಟ್ಟುಬಿಟ್ಟರೆ ರೈತರ ಉದ್ಧಾರ ಆಗಿಹೋಯಿತು ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ರೈತರು ಉದ್ಧಾರ ಆಗುವುದಿಲ್ಲ, ಈ ಭೂಮಿಗೆ ರಾಸಾಯನಿಕ ಗೊಬ್ಬರ ಕೊಡುವುದೂ ಅಷ್ಟೆ. ನಮಗೆ ಹೆಂಡ ಕುಡಿಸುವುದೂ ಅಷ್ಟೆ. ನಮಗೆ ಹೆಂಡ ಕುಡಿಸುವುದರಿಂದ ನಮ್ಮ ದೇಹಕ್ಕೆ ಏನು ತೊಂದರೆಯಾಗುತ್ತದೆಯೋ ಅಷ್ಟು ಆ ಭೂಮಿಗೆ ರಾಸಾಯನಿಕ ಗೊಬ್ಬರ ಕೊಡುವುದರಿಂದ ತೊಂದರೆಯಾಗುತ್ತದೆ. ಅದಕ್ಕೆ ದಯವಿಟ್ಟು ಗೊಬ್ಬರದ ಮೇಲೆ ಸಬ್ಸಿಡಿ ಕೊಡುವುದರಿಂದ ರೈತರು ಉದ್ಧಾರವಾಗುತ್ತಾರೆ ಎನ್ನುವಂಥ ಕಲ್ಪನೆ ಏನಿದೆ ಇದನ್ನು ತೆಗೆದುಹಾಕಬೇಕು.

ನಾವು ಕಾಂಪೋಸ್ಟ್ ಗೊಬ್ಬರವನ್ನು ಸಾವಯವ ಗೊಬ್ಬರವನ್ನು, ಮೊಳೆಹುಳದ ಗೊಬ್ಬರವನ್ನು ಉಪಯೋಗ ಮಾಡಿಕೊಂಡು ಭೂಮಿಯ ಫಲವತ್ತತೆಯನ್ನು ಹೆಚ್ಚು ಮಾಡಬೇಕು. ಭೂಮಿಯ ಫಲವತ್ತತೆ ಹೆಚ್ಚಾಗುವುದು ಆವಾಗ. ಸಾರ್, ಎಲ್ಲೋ ನೀವು ಹೋಗಿಬನ್ನಿ. ವರ್ತೂರ್ ಹತ್ತಿರ ಸೋರಹುಣಸೆ ಗ್ರಾಮದೊಳಗೆ ನಾರಾಯಣ ರೆಡ್ಡಿ ಎಂಬ ಒಬ್ಬರು ರೈತರಿದ್ದಾರೆ. ನೀವು ಹೋಗಿ ನೋಡಿ ಬರಬೇಕು. ಕಳೆದ 12 ವರ್ಷಕ್ಕೂ ಹೆಚ್ಚು ಈ ನೈಸರ್ಗಿಕ ಕೃಷಿಯನ್ನು ತಮ್ಮ 7 ಎಕರೆ ಜಮಿನಿನಲ್ಲಿ ಅವರು ಪ್ರಯೋಗ ಮಾಡಿ ಇವತ್ತು ಅವರ ಜಮೀನಿಗೆ ನೈಟ್ರೋಜಿನ್ ಕೊಡುವ ಅವಶ್ಯಕತೆಯೇ ಇಲ್ಲ. ಜಮೀನು ಅಷ್ಟು ಫಲವತ್ತಾಗಿದೆ.

ಅವರು 7 ಎಕರೆ ಹೊಲದೊಳಗೆ ಆ ಜಮೀನಿಗೆ ಬೇಕಾದ ಸಗಣಿ ಗೊಬ್ಬರ ಕಾಂಪೋಸ್ಟ್ ಗೊಬ್ಬರದ ಅನುಕೂಲದ ಸಲುವಾಗಿ 10 ಆಕಳ ಕಟ್ಟಿದ್ದಾಳೆ. 10 ಆಕಳದ ಸಗಣಿಯನ್ನು ಇವತ್ತು ಬೇರೆಯವರಿಗೆ ಮಾರುತ್ತಾರೆ. ಅಂದರೆ ಭೂಮಿ ಅಷ್ಟು ಫಲವತ್ತಾಗಿದೆ. ಭೂಮಿ ಬರಡಾಗಲಿಲ್ಲ, ರಾಸಾಯನಿಕ ಗೊಬ್ಬರ ಉಪಯೋಗ ಮಾಡುವುದರಿಂದ ಭೂಮಿ ಬರಡಾಗುತ್ತದೆ. ತಾತ್ಕಾಲಿಕವಾಗಿ ನಮಗೆ ಲಾಭವಾಗುತ್ತದೆ. ಆದರೆ ಲಾಂಗ್‌ರೇಂಜ್‌ನೊಳಗೆ ಅದು ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ, ಭೂಮಿ ಹಾಳಾಗುತ್ತದೆ.

ಅದು ನಮಗೆ ಕುಡಿಯುವ ಚಟ ಇದ್ದ ಹಾಗೆ. ದಯವಿಟ್ಟು ಅದಕ್ಕೆ ನೀವು ನೈಸರ್ಗಿಕ ಕೃಷಿಯನ್ನು ಯೂನಿವರ್ಸಿಟಿ ಮುಖಾಂತರ, ಕೃಷಿ ವಿಜ್ಞಾನ ಕೇಂದ್ರದ ಮುಖಾಂತರ ನಿಮ್ಮ ಡಿಪಾರ್ಟ್‌ಮೆಂಟ್ ಮುಖಾಂತರ, ಹೆಚ್ಚು ವ್ಯಾಪಕವಾದ ಪ್ರಚಾರವಾಗಲಿಕ್ಕೆ ಅದಕ್ಕೆ ಬೇಕಾಗುವಂತಹ ಸೌಲಭ್ಯಗಳನ್ನು ಸಲಕರಣೆಗಳನ್ನು ಮತ್ತು ಸವಲತ್ತುಗಳನ್ನು ಕೊಡಲಿಕ್ಕೆ, ನಾನು ಒಂದು ವೇಳೆ ಸಾವಯವ ಗೊಬ್ಬರವನ್ನು ನನ್ನ ಭೂಮಿಗೆ ಉಪಯೋಗ ಮಾಡುತ್ತೇನೆ, ಸಗಣಿ ಗೊಬ್ಬರವನ್ನು ನನ್ನ ಭೂಮಿಗೆ ಉಪಯೋಗ ಮಾಡುತ್ತೇನೆ, ಕಾಂಪೋಸ್ಟ್ ಗೊಬ್ಬರವನ್ನು ನನ್ನ ಭೂಮಿಗೆ ಉಪಯೋಗ ಮಾಡುತ್ತೇನೆಂದರೆ ಸೊಸೈಟಿಯೊಳಗೆ ಅದಕ್ಕೂ ಸಾಲ ಸಿಗಲಿಕ್ಕೆ ನೀವು ವ್ಯವಸ್ಥೆ ಮಾಡಬೇಕು. ಸೊಸೈಟಿಯೊಳಗೆ 'ಬಿ' ಕಾಂಪೋನೆಂಟ್ ಏತಕ್ಕೆ ಕೊಡುತ್ತೀರಿ ಈಗ? ರಾಸಾಯನಿಕ ಗೊಬ್ಬರ ತಂದರೆ ಕೊಡುತ್ತೀರಿ ನೀವು. ಏಕೆ ನಮ್ಮ ಕಾಂಪೋಸ್ಟ್ ಗೊಬ್ಬರ ಹಾಕಿದರೆ ಕೊಡಬಾರದೇನು? ಇದರ ಬಗ್ಗೆ ವಿಚಾರ ಮಾಡಿ. ಈ ವ್ಯವಸ್ಥೆ ಯಾವ ರೀತಿ ಇದೆ ಅಂದರೆ ನಾವು ಅದರಿಂದ ಹಾಳಾದೆವು ಎಂದು ಆಗಬಾರದು. ಇದಕ್ಕೊಂದು ಬದಲಾವಣೆ ಪ್ರಕ್ರಿಯೆ ತಮ್ಮಿಂದ ಆಗಬೇಕು. ಆ ಕೆಲಸ ಸಹಕಾರಿ ಸಂಘಗಳ ಮಟ್ಟದಲ್ಲಿ ಆಗಬೇಕು. ಕೃಷಿ ಇಲಾಖೆಯ ಮಟ್ಟದಲ್ಲಿ ಆಗಬೇಕು. ಅದು ಯೂನಿವರ್ಸಿಟಿ ಮಟ್ಟದಲ್ಲಿ ಆಗಬೇಕು. ಕೃಷಿ ವಿಜ್ಞಾನ ಕೇಂದ್ರದ ಮುಖಾಂತರ ಆಗಬೇಕು. ನಾನು ಬರಗಾಲ ಪ್ರದೇಶದಿಂದ ಬಂದವನು. ಮಳೆ ಬಿದ್ದರೆ ನಮ್ಮ ಕೃಷಿ, ಮಳೆ ಬರದಿದ್ದರೆ ಸುಮ್ಮನೆ ಕೂಡುವ ಪರಿಸ್ಥಿತಿ ಇದೆ. ಇವತ್ತು ನೀರಾವರಿಯ ಸಲುವಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಮಾಡಿ ಬೇಡ ಎನ್ನುವುದಿಲ್ಲ. ಇದರಿಂದ ಎಷ್ಟು ಜನರ ಭೂಮಿ ನೀರಾವರಿಯಾಗುತ್ತದೆ? ಎಷ್ಟು ಆಗುತ್ತದೆಂದರೆ 40 ಪರ್ಸೆಂಟ್ ಆಗುತ್ತದೆ. ಉಳಿದ 60 ಪರ್ಸೆಂಟ್ ಜನ ಮಳೆಯನ್ನು ಅವಲಂಬಿಸಿದ್ದಾರೆ. ನಮ್ಮ ಹಣದಲ್ಲಿ ನಮಗೆ ಪಾಲು ಬೇಡವೇ? ನೀವು ನೀರಾವರಿಗಾಗಿ 2 ಸಾವಿರ ಕೋಟಿ ರೂಪಾಯಿ ವರ್ಷಕ್ಕೆ ಖರ್ಚು ಮಾಡಿ, ನಾವು ಹೆಚ್ಚು ಉತ್ಪಾದನೆಯನ್ನು ಮಾಡಲು ಏನು ವ್ಯವಸ್ಥೆ ಇದೆ? ನಮಗೆ ಹೆಚ್ಚಿನ ಹಣವನ್ನು ಕೊಡುವ ವ್ಯವಸ್ಥೆಯನ್ನು ಮಾಡಿ. ಎಂಪ್ಲಾಯಿಮೆಂಟ್ ಕೊಡುವ ಸಲುವಾಗಿ ಜೆ.ಆರ್.ವೈ. ಆಗಲಿ ಕೇಂದ್ರ ಸರ್ಕಾರ ಸುತ್ತೋಲೆ ಹೊರಡಿಸಿ 50 ಪರ್ಸೆಂಟ್ ಹಣ ಜಲಾನಯನ ಅಭಿವೃದ್ಧಿಗಾಗಿ ಉಪಯೋಗವಾಗಬೇಕು ಎಂದು ತಿಳಿಸಿದೆ.

ಶ್ರೀ ಬಿ.ಎ. ಮೊಯ್ದೀನ್ : ಹಾಗಾದರೆ ತಾವು ಹೇಳುವುದು ಇರಿಗೇಷನ್‌ಏರಿಯಾದಲ್ಲಿ ವಾಟರ್‌ರೇಟ್ ಹೆಚ್ಚುಮಾಡಿಯೆಂದು ಹೇಳುತ್ತಿದ್ದೀರೋ?

ಶ್ರೀ ಡಿ.ಆರ್. ಪಾಟೀಲ್ : ಅದು ಮಾಡಬೇಕು, ಇದು ಮಾಡಬೇಕೆಂದು ನಾನು ಹೇಳುತ್ತಿಲ್ಲ. ನಿಮಗೆ ನೀರಾವರಿ ಪ್ರದೇಶದಲ್ಲಿ ಬರತಕ್ಕ ರೈತರು ಚೊಚ್ಚಲ ಮಕ್ಕಳು. ಬರಗಾಲ ಪೀಡಿತ ಪ್ರದೇಶದಲ್ಲಿರುವಂತಹ ರೈತರು ನಿಮಗೆ ಮಲಮಕ್ಕಳಾಗಿದ್ದಾರೆ. ಆ ಚೊಚ್ಚಲ ಮಕ್ಕಳಿಗೆ ಕೊಡಿ, ಅವರಿಗೆ ಅಧಿಕಾರವಿರಲಿ ನಮ್ಮನ್ನು ಮಲ ಮಕ್ಕಳು ಎನ್ನುವ ಹಾಗೆ ಆದರೂ ಟ್ರೀಟ್ ಮಾಡಿರಿ. ನಾವು ಅವರಿಗಿಂತ ಸಣ್ಣವರು ಎಂದು ಒಪ್ಪಿಕೊಳ್ಳುತ್ತೇವೆ. ನಮಗೆ ನಮ್ಮ ಪಾಲಿನ ಹಣ ಇರಲಿ. ಮಾನ್ಯ ಭೈರೇಗೌಡರು ಕೃಷಿ ಇಲಾಖೆಯ ಉಸ್ತುವಾರಿಯನ್ನು ವಹಿಸಿದ್ದಾರೆ. ಅವರು ಬಹಳಷ್ಟು ಪ್ರಯತ್ನಪಟ್ಟು ಬರಗಾಲಪೀಡಿತ ಪ್ರದೇಶ ಅಭಿವೃದ್ಧಿ ಮಂಡಳಿಗೆ 5 ಕೋಟಿ ಇದ್ದದನ್ನು 25 ಕೋಟಿ ಪಡೆದುಕೊಂಡಿದ್ದಾರೆ. ನಮ್ಮ ಡಿಮಾಂಡ್ ಹೇಗಿದೆ ನೋಡಿ. ಕೃಷ್ಣಾಕ್ಕೆ ಸಾವಿರ ಕೋಟಿಯಾಗಲಿ ಖರ್ಚು ಮಾಡೋಣ, ಕಾವೇರಿಗೆ ಸಾವಿರ ಕೋಟಿಯಾಗಲಿ ಖರ್ಚು ಮಾಡೋಣವೆನ್ನುತ್ತೇವೆ.

ಅವರ ಸಲುವಾಗಿ ದುಡ್ಡು ಹೆಚ್ಚು ಖರ್ಚುಮಾಡುತ್ತೇವೆ ಇಲ್ಲಿ ಸದನದ ಟೈಮ್ ಅವರ ಸಲುವಾಗಿ ಹೆಚ್ಚು ಖರ್ಚು ಮಾಡುತ್ತೇವೆ. ನಾವು ಮಾತ್ರ ಪರದೇಶಿ ಮಕ್ಕಳು ನಮ್ಮ ಸಲುವಾಗಿ ಯಾವುದೋ ಇಲ್ಲ, ಹಣವೂ ಕಡಿಮೆ, ಇಲ್ಲಿ ಟೈಮ್ ಕಡಿಮೆ. ದಯವಿಟ್ಟು ಈ ತಾರತಮ್ಯ ಹೋಗಬೇಕು. ಸುದೈವದಿಂದ ಆ ಬರಗಾಲಪೀಡಿತ ಪ್ರದೇಶದಿಂದಲೇ ಬಂದಂತಹವರು ಕೃಷಿ ಇಲಾಖೆಯ ಉಸ್ತುವಾರಿಯನ್ನು ವಹಿಸುತ್ತಿರುವುದರಿಂದ, ಮಾನ್ಯ ಭೈರೇಗೌಡರೇ ನೀವು ಸಿದ್ದರಾಮಯ್ಯನವರು ಚೆನ್ನಾಗಿದ್ದೀರಿ. ಆ ಸಂಬಂಧ ನಿಮ್ಮ ವೈಯಕ್ತಿಕ ಸಂಬಂಧವಾಗಿರಬಾರದು. ಅದು ನಮ್ಮ ರೈತರಿಗೆ ಲಾಭ ಮುಟ್ಟಬೇಕು ಸ್ವಾಮಿ. ಅವರಿಗೆ ಹೇಳಿ, ನೀವು ನೀರಾವರಿಗೆ ಎಷ್ಟು ಖರ್ಚು ಮಾಡುತ್ತಿರೋ ಅದರಲ್ಲಿ ನಮಗೆ ಇಷ್ಟು ಪರ್ಸೆಂಟೇಜ್ ನಮಗೆ ಬೇಕು. ಎಂದು ಪ್ರತಿ ವರ್ಷ 20 ಪರ್ಸೆಂಟ್ ಅನ್ನಿರಿ 25 ಪರ್ಸೆಂಟ್ ಅನ್ನಿರಿ 30 ಪರ್ಸೆಂಟ್ ಅನ್ನಿರಿ ಒಂದು ಪರ್ಸೆಂಟೇಜ್ ಫಿಕ್ಸ್ ಮಾಡಿಕೊಳ್ಳಿ. ಇದ್ದ ಹಣದಲ್ಲಿಯೇ ಹಂಚಿಕೆ ಮಾಡಿಕೊಳ್ಳೋಣ ನಾವು ಒಪ್ಪುತ್ತೇವೆ. ನಮಗೆ ಇನ್ನು ಅವರಿಗಿಂತ ಸ್ವಲ್ಪ ಕಡಿಮೆ ಇರಲಿ. ಆದರೆ ಪ್ರತಿ ವರ್ಷ ಅಷ್ಟು ಹಣವನ್ನು ಮೀಸಲಾಗಿಡಲಿ. ಮಳೆಯಿಂದ ಬಿದ್ದಂತಹ ನೀರು ನನ್ನ ಜಮೀನಿನೊಳಗೆ ಹಿಂಗಬೇಕು. ನನ್ನ ಜಮೀನಿನ ಸುತ್ತಮುತ್ತ ಇರತಕ್ಕ ಕೆರೆಕಟ್ಟೆಗಳಲ್ಲಿ ನೀರು ನಿಲ್ಲಬೇಕು. ನಾನು ಏನಾದರೂ ಬಾವಿ ತೆಗೆಸಿದರೆ ಆ ಬಾವಿಯೊಳಗೆ ಜಲದಮಟ್ಟ ಮೇಲಿರಬೇಕು. ಇದು ಆಗಬೇಕಾದರೆ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಅದನ್ನು ರೂಪಿಸಿಕೊಳ್ಳಬೇಕಾದರೆ ನಿಮಗೆ ಸಾಕಷ್ಟು ಹಣಕಾಸು ಬೇಕು. ಆ ಹಣಕಾಸು ಸಿಕ್ಕಿತು ಅಂದರೆ ಈ ನೀರಾವರಿ ಪ್ರದೇಶದವರು ಏನು ಬೆಳೆಯನ್ನು ತೆಗೆಯುತ್ತಾರೆ. ಇದರ ದುಪ್ಪಟ್ಟು ತೆಗೆಯುತ್ತೇವೆ ಎನ್ನುವ ಅನುಭವ ತಮಗೂ ಇದೆ, ನಮಗೂ ಇದೆ.

ಏಕೆ ಆ ರೈತರಿಗೆ ಅಷ್ಟೇ ಮೀಸಲು ಅಲ್ಲ, ನಮಗೂ ದಯವಿಟ್ಟು ಕೊಡುವಂತಹ ಒಂದು ಬದಲಾವಣೆಯನ್ನು ತಾವು ಮಾಡಬೇಕು. ಒಂದು ವಿಚಾರವನ್ನು ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಮಾನ್ಯ ಬೈರೇಗೌಡರು ಈ ರಾಜ್ಯದ ಕೃಷಿ ಸಚಿವರಾದ ಮೇಲೆ ಇವರ ಬಗ್ಗೆ ನನಗೆ ಸಾಕಷ್ಟು ತಿಳುವಳಿಕೆ ಇದ್ದುದರಿಂದ ನನ್ನ ಕ್ಷೇತ್ರದಲ್ಲಿ ಸಾಯಿಲ್ ಕನ್ಸರ್ವೇಷನ್ ಕೆಲಸ ಹೇಗೆ ನಡೆದಿದೆಯೆಂದು ಹೇಳಿ ನೋಡಲಿಕ್ಕೆ ಹೋದೆ ನಾನು. ಖಾತರಿ ಇತ್ತು ಚೆನ್ನಾಗಿಯೇ ನಡೆದಿದೆ. ಬಹಳ ಸತೋಷದಿಂದ ನಿಮಗೆ ನಾನು ಹೇಳುತ್ತೇನೆ. ಒಬ್ಬ ಮಂತ್ರಿ ಪ್ರಾಮಾಣಿಕನಾಗಿದ್ದರೆ ಕೆಳಹಂತದ ರೈತನಿಗೆ ಅದು ಯಾವ ರೀತಿ ಲಾಭವಾಗುತ್ತದೆನ್ನುವುದು ಇವತ್ತು ಕೃಷಿ ಇಲಾಖೆಯಲ್ಲಿ ನಾವು ನೋಡುತ್ತಿದ್ದೇವೆ. ಇದು ಪ್ರತಿ ಇಲಾಖೆಯಲ್ಲಿಯೂ ಬರಬೇಕು. ನಾವೆಲ್ಲರೋ ಹೇಳುತ್ತೇವೆ, ಭ್ರಷ್ಟಾಚಾರ ಬಹಳ ವ್ಯಾಪಕವಾಗಿ ಆಗಿದೆ.

ಇದನ್ನು ಬದಲು ಮಾಡಲಿಕ್ಕಾಗುವುದಿಲ್ಲ ನಿಲ್ಲಿಸುವುದಕ್ಕಾಗುವುದಿಲ್ಲವೆನ್ನುವುದನ್ನು ನಾನೂ ಹೇಳುತ್ತೇನೆ. ಸಿದ್ಧರಾಮಯ್ಯನವರು ಅನ್ನುತ್ತಾರೆ. ಮಾನ್ಯ ನಾಣಯ್ಯನವರು ಅನ್ನುತ್ತಾರೆ, ಬೈರೇಗೌಡರು ಅನ್ನುತ್ತಾರೆ ಎಲ್ಲರೂ ಅನ್ನುತ್ತಾರೆ. ಇದನ್ನು ನಿಲ್ಲಿಸುವುದಕ್ಕೆ ಎಲ್ಲಿಯಾದರೂ ಕೆಲಸವಂತೂ ನಡೆಯಬೇಕಲ್ಲಾ ಸಾರ್. ದಯವಿಟ್ಟು ಒಂದು ಕೆಲಸ ಮಾಡಿ ಮುಂದಿನ ಸದನದೊಳಗೆ ಒಂದು ಏಳು ದಿವಸ ಪ್ರತಿ ಇಲಾಖೆಯೊಳಗೆ ಭ್ರಷ್ಟಾಚಾರವನ್ನು ಕಡಿಮೆ ಮಾಡಲಿಕ್ಕೆ ಸಾಕಷ್ಟು ಪರಿಣಾಮಕಾರಿಯಾಗಿ ಅದನ್ನು ನಿಲ್ಲಿಸಲಿಕ್ಕೆ ಏನೇನು ಕ್ರಮ ಕೈಗೊಳ್ಳಬೇಕು ಯಾವ್ಯಾವ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕೆನ್ನುವುದರ ಬಗ್ಗೆ ಇಲಾಖೆಯ ಸಮಿತಿಗಳಿಗೆ ಮುಂದಿನ ಸದನಕ್ಕೆ ನೀವು ರಿಪೋರ್ಟ್ ಅದರ ಬಗ್ಗೆ ಕೊಡಬೇಕೆಂದು ಅವುಗಳಿಗೆ ಒಂದು ನಿರ್ದೇಶನ ಕೊಡಿ. ನಾನು ಒಪ್ಪುತ್ತೇನೆ,

ಗ್ರಾಮಸಹಾಯಕರ ಮಟ್ಟದಲ್ಲಿ ಹೇಗೆ ಭ್ರಷ್ಟಾಚಾರವಾಗುತ್ತದೆ ಅದನ್ನು ಹೇಗೆ ನಿಲ್ಲಿಸಬೇಕು, ತಲಾಟಿಯವರ ಮಟ್ಟದಲ್ಲಿ ಹೇಗೆ ಭ್ರಷ್ಟಚಾರವಾಗುತ್ತದೆ ಅದನ್ನು ಹೇಗೆ ನಿಲ್ಲಿಸಬೇಕು, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಹೇಗೆ ಭ್ರಷ್ಟಾಚಾರವಾಗುತ್ತದೆ ಅದನ್ನು ಹೇಗೆ ನಿಲ್ಲಿಸಬಹುದು ಎಂದು ನಾವು ನಮ್ಮ ಅನುಭವವನ್ನು ಇಲಾಖೆಯ ಸಮಿತಿಯಲ್ಲಿ ಹೇಳುತ್ತೇವೆ. ನೀವು ಕಾರ್ಯಕ್ರಮವನ್ನು ಕೈಗೊಳ್ಳಿ. ಭ್ರಷ್ಟಾಚಾರವನ್ನು ನಿಲ್ಲಿಸಬೇಕೆಂದು ತಮಗೆ ಇಚ್ಛೆಯಿದ್ದರೆ ನಿಲ್ಲಿಸಬಾರದೆನ್ನುವ ಇಚ್ಛೆಯಿದ್ದರೆ ಆ ಮಾತು ಬೇರೆ. ಹೋಗಲಿ ಹೀಗೆ ಹಾಳಾಗಿಹೋಗಲಿ. 1970ರ ಪೂರ್ವದೊಳಗೆ ಕೆಲವೇ ಮಂತ್ರಿಗಳು, ಕೆಲವೇ ಇಲಾಖೆಗಳ ಅಧಿಕಾರಿಗಳು ಮಾತ್ರ ಭ್ರಷ್ಟಾಚಾರಿಗಳು ಎಂದೋ ಇರುತ್ತಿದ್ದರು.

1970ರ ದಶಕದೊಳಗೆ ಬಹುತೇಕ ಎಲ್ಲಾ ಇಲಾಖೆಗಳು ಎಲ್ಲಾ ಮಂತ್ರಿಗಳು ಭ್ರಷ್ಟರು ಎನ್ನುವಂತಹ ಒಂದು ವಾತಾವರಣ ನಿರ್ಮಾಣವಾಗಿದೆ. 1980ರ ದಶಕದೊಳಗೆ ಎಲ್ಲಾ ಶಾಸಕರು ಅದೇ ನಮೂನೆ ಏನೋ ಎನ್ನುವ ಹಾಗೆ ಆಗಿದೆ. ಈಗ 1990ರ ದಶಕದೊಳಗೆ ಎಲ್ಲಾ ಪಂಚಾಯತ್ ರಾಜ್ ಸದಸ್ಯರು ಸಹಿತ ಅದೇ ನಮೂನೆ ಏನೋ ಎನ್ನುವ ಹಾಗೆ ಇದೆ. ನಾವು ಕೈಬೆರಳು ಎಣಿಸುವಷ್ಟು ಜನ ಮಾತ್ರ ಪ್ರಾಮಾಣಿಕರಿದ್ದೇವೆ. ಬಹಳಷ್ಟು ಜನ ನಾವು ಭ್ರಷ್ಟರು ಇದ್ದೇವೆ. ನಾವು ಪ್ರಾಮಾಣಿಕರಾಗದಿದ್ದರೆ ಆಡಳಿತರಂಗವನ್ನು ಸುಧಾರಿಸುವುದಕ್ಕೆ ಆಗುವುದಿಲ್ಲ. ಅವರ ಕಡೆ ನಾವು ಬೊಟ್ಟು ಮಾಡಿ ತೋರಿಸಬೇಕಾದರೆ ನಾವು ಮೊದಲು ಸುಧಾರಿಸಬೇಕು. ಅದಕ್ಕೆ ನಾನು ಮೊನ್ನೆ ಹೇಳಿದೆ, ನಮಗೂ ಒಂದು ಕೋಡ್ ಆಫ್ ಕಾಂಡಕ್ಟ್‌ಗೆ ಇನ್‌ವಾಲ್ವ್ ಮಾಡಿರಿಯೆಂದು. ಕೋಡ್ ಆಫ್ ಕಾಂಡಕ್ಟ್‌ಗೆ ಇನ್‌ವಾಲ್ವ್ ಮಾಡಿ ಶಾಸಕರಿಗೆ. ಮೇಲ್ಪಂಕ್ತಿಯನ್ನು ಆಡಳಿತದಲ್ಲಿ ಪಂಚಾಯಿತಿಯಲ್ಲಿ ಕೆಲಸ ಮಾಡುವಂತಹ ನಮ್ಮ ಸಹೋದರ ಸಹೋದರಿಯರಿಗೆ ಹಾಕಬಹುದು ಎನ್ನುವುದರ ಬಗ್ಗೆ ನಮಗೆ ದಯವಿಟ್ಟು ಮಾರ್ಗದರ್ಶನ ಮಾಡಿರಿ ಸ್ವಾಮಿ.

ಈ ಭ್ರಷ್ಟಾಚಾರದಿಂದ ರಾಜಕೀಯ ಮಾಡುವ ಜನರ ಬಗ್ಗೆ ಒಂದು ಜಿಗುಪ್ಸೆ ಸಮಾಜದೊಳಗೆ ಇವತ್ತು ಹುಟ್ಟಿದೆ. ರಾಜಕೀಯ ಮಾಡುವುದು ಅಂದರೆ ದುಡ್ಡು ಗಳಿಸುವುದಕ್ಕೆ ಎನ್ನುವ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಹೋಗಬೇಕು. ಇದು ಹೋಗಲಿಲ್ಲವೆಂದರೆ, ಈಗ ಗೌಡರು ಅಧಿಕಾರಿಗಳಿಗೆ ಬೆತ್ತ ತೆಗೆದುಕೊಂಡ ಹಾಗೆ ಜನ ನಮಗೆ ಬೆತ್ತ ತೆಗೆದುಕೊಳ್ಳುತ್ತಾರೆ. ಬೆತ್ತ ತೆಗೆದುಕೊಂಡು ಹೊಡೆಯಬೇಕು ಬಿಡ್ರಿ. ಇಲ್ಲವೆಂದರೆ ಬದಲಿ ಹೇಗಾದರು ನೀವು ಅಧಿಕಾರಿಗಳನ್ನು ಹೊಡೆದಿದ್ದೀರಿ. ಜನ ನಮಗೆ ಹೊಡೆಯಬೇಕೋ ಬೇಡವೋ? ಜನ ಶಾಸಕರನ್ನು ಹೊಡೆಯಬೇಕು. ಅಷ್ಟು ಜನ ರೊಚ್ಚಿಗೆದ್ದಾಗ ಆಗ ಜನ ನಮ್ಮನ್ನು ಬದಲಿ ಮಾಡುತ್ತಾರೆ. ಬದಲು ಮಾಡುವುದು ಬೇಕಾಗಿಲ್ಲ, ನಮ್ಮನ್ನು ಹಿಡಿದು ಹೊಡೆಯಬೇಕು. ನಮ್ಮ ಮರ್ಯಾದೆ ಕಳೆಯಬೇಕು. ಅಂದಾಗ ಏನಾದರೂ ನಮಗೆ ಅರಿವು ಬರುತ್ತದೆ ನಾವೆಲ್ಲರೋ ಇವತ್ತು ಆತ್ಮಾವಲೋಕನ ಮಾಡಿಕೊಳ್ಳಬೇಕು. ಭ್ರಷ್ಟ ವ್ಯವಸ್ಥೆಯನ್ನು ಬದಲಿ ಮಾಡುವುದಕ್ಕೆ ನಾವೆಲ್ಲರೂ ಇವತ್ತು ಪ್ರಾಜ್ಞರಾಗಬೇಕು. ಮಾನ್ಯ ಸಿದ್ದರಾಮಯ್ಯನವರೇ ನಿಮ್ಮ ಬಗ್ಗೆ ನಮಗೆ ತಾವು ಪ್ರಾಮಾಣಿಕರು ಎನ್ನುವ ಅಭಿಪ್ರಾಯವಿದೆ. ನೀವು ದಯವಿಟ್ಟು ಈ ಕೆಲಸ ಪ್ರಾರಂಭ ಮಾಡಿ. ನಿಮ್ಮ ಇಲಾಖೆಯ ಬಗ್ಗೆ ಒಂದು ಸೂಚನೆ. ನಿಮ್ಮ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯ ಬಗ್ಗೆ ಸಾಕಷ್ಟು ಸಂಶಯವಿದೆ.

ನಿಮ್ಮ ಇಲಾಖೆಯಲ್ಲಿ ಸೋರಿಕೆಯನ್ನು ಪೂರ್ತಿ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಅದು ನಮಗೆ ಗೊತ್ತು. ಆದರೆ ಒಂದು ಮಾಡುವುದಕ್ಕೆ ಆಗುತ್ತದೆಯೇ ನೋಡಿರಿ

ಕಾನೂನಿನೊಳಗೆ, ಅದನ್ನು ಮಾನ್ಯ ನಾಣಯ್ಯನವರು ಹೇಳಬೇಕು. ಈಗ ಎಕ್ಸೈಜ್ ಹರಾಜು ಹಾಕುತ್ತೀರಿ. ಟೋಲ್ ನಾಕಾದೊಳಗೆ ದುಡ್ಡು ಕಲೆಕ್ಟ್ ಮಾಡಲಿಕ್ಕೆ ಹರಾಜು ಹಾಕುತ್ತೀರಿ. ಹಾಗೆ ಕಮರ್ಷಿಯಲ್ ಟ್ಯಾಕ್ಸ್ ವಸೂಲಿ ಮಾಡಲಿಕ್ಕೆ ಹರಾಜು ಬರುತ್ತಿದ್ದರೆ ದಯವಿಟ್ಟು ಹರಾಜು ಹಾಕಿ. ಖಾಸಗಿಯವರನ್ನು ಅಲ್ಲಿ ತೆಗೆದುಕೊಂಡು ಬನ್ನಿ. ಇವತ್ತೇನು ನಿಮಗೆ ನಾಲ್ಕು ಸಾವಿರ ನಾಲ್ಕೂವರೆ ಸಾವಿರ ಬರುತ್ತದೆಯಲ್ಲಾ ಅದು ದುಪ್ಪಟ್ಟು ಆಗುತ್ತದೆ. ನಿಮಗೆ ಹಣಕಾಸಿನ ತೊಂದರೆಯಾಗುವುದಿಲ್ಲ. ನೀವೇನು ಈಗ ಪ್ರಾಹಿಬಿಷನ್ ತರಬೇಕೆಂದು ಹೇಳುತ್ತೀರಿ, ಪಾನನಿಷೇಧ ಜಾರಿಗೆ ತರಬೇಕೆಂದು ಹೇಳುತ್ತೀರಿ ನಿಮಗೆ ಅನುಕೂಲವಾಗುತ್ತದೆ. ಮಾನ್ಯ ಶಾಣಪ್ಪನವರಿಗೆ ಅನುಕೂಲವಾಗುತ್ತದೆ. ನಮ್ಮ ಗ್ರಾಮಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು ಇದನ್ನು ನೀವು ಮಾಡಿ. ಹರಾಜು ಹಾಕಿ ಹಾಕಲಿಕ್ಕೆ ಬರುತ್ತಿದ್ದರೆ ಗದಗ ವಿಭಾಗ, ಅಲ್ಲಿ ನೀವು ಹರಾಜಿಗೆ ಇಟ್ಟರೆ ಅಲ್ಲಿಂದ ನಿಮಗೆ 10 ಕೋಟಿ ಬರುತ್ತಿತ್ತು ಅಂದರೆ ಕನಿಷ್ಟ ಯಾವನು 20 ಕೋಟಿ ರೂಪಾಯಿ ಬಿಡ್ ಮಾಡುತ್ತಾನ ಅವನಿಗೆ ಕೊಡುತ್ತೇವೆ ನಾವು. 20 ಕೋಟಿಯ ಮೇಲೆ ಹರಾಜು ಹಾಕುತ್ತೇವೆ. 20ಕೋಟಿ ಕೊಟ್ಟು ಜನ ಅದನ್ನು ತೆಗೆದುಕೊಳ್ಳುತ್ತಾರೆ. ಏಕೇ? ಸೋರಿಕೆ ಅರ್ಧಕ್ಕಿಂತ ಹೆಚ್ಚು ಇದೆ. ಸೋರಿಕೆ ಅರ್ಧಕ್ಕಿಂತ ಹೆಚ್ಚು ಇದೆ ಕಮರ್ಷಿಯಲ್ ಟ್ಯಾಕ್ಸ್‌ನೊಳಗೆ. ಈ ಸೋರಿಕೆ ನಿಲ್ಲಿಸಲಿಕ್ಕೆ ಇನ್ನೊಂದು ನಿಮಗೆ ದೊಡ್ಡ ಅಸ್ತ್ರವೆಂದರೆ ಎಲ್ಲಾ ರೆಗ್ಯೂಲೆಟೆಡ್ ಮಾರ್ಕೆಟ್ಸ್ ಏನಿರುತ್ತವೆ, ರೆಗ್ಯುಲೆಟೆಡ್ ಮಾರ್ಕೆಟ್‌ನೊಳಗೆ ಎಂಟ್ರಿ ಎಕ್ಸಿಟ್ ಕಂಟ್ರೋಲ್ ಮಾಡಿ.

3.50 ಪಿ.ಎಂ.

ಎಷ್ಟು ಮಾಲು ಒಳಗಡೆಗೆ ಬರುತ್ತದೆ, ಎಷ್ಟು ಮಾಲು ಹೊರಗಡೆಗೆ ಬರುತ್ತದೆ, ಆ ಎಂಟ್ರಿ ಎಕ್ಸಿಟ್ ಕಂಟ್ರೋಲ್ ಮಾಡಿಸಿ ಎಂಟ್ರಿ ಎಕ್ಸಿಟ್ ಕಂಟ್ರೋಲ್ ಮಾಡುವುದಕ್ಕೆ ಹೋಗಿ ಮತ್ತೆ ಮಾಮೂಲಿ ಫಿಕ್ಸ್ ಮಾಡುವುದನ್ನು ದಯವಿಟ್ಟು ಮಾಡಬೇಡಿ. ನಂಬರ್-2 ಇವತ್ತು ಮಾರುಕಟ್ಟೆ ಯೂರ್ಡಿನಲ್ಲಿ ಸಾಕಷ್ಟು ಆಗುತ್ತದೆ. ನಂಬರ್-2 ನಿಂತಿತು ಎಂದರೆ ಎ.ಪಿ.ಎಂ.ಸಿ.ಗೆ. ಒಂದು ಪರ್ಸೆಂಟ್ ಸೆಸ್ ಬಂದೆರ ನಿಮೆಗ 4 ಪರ್ಸೆಂಟ್-6 ಪರ್ಸೆಂಟ್ ಕಮರ್ಷಿಯಲ್ ಟ್ಯಾಕ್ಸ್ ಬರುತ್ತದೆ. ಅದರ ಮೇಲೆ ಮತ್ತೆ ಮಾರಾಟವಾಗುವಂಥ ಸೊಸೈಟಿಯಲ್ಲಿ ಮಾಡುತ್ತಾರಲ್ಲಾ, ಎಣ್ಣೆ, ಹಿಂಡಿ ಅವೆಲ್ಲಕ್ಕೂ ಬರುತ್ತದೆ. ಶೇಂಗಾಕ್ಕೆ ನಿಮಗೆ ನಂಬರ್-2 ದೊಳಗೆ ರೆಗ್ಯುಲೇಟೆಡ್ ಮಾರ್ಕೆಟ್ ಒಳಗೆ ಯಾವ ರೀತಿ ಮಾಡುವುದು ಎಂದರೆ, ಅದನ್ನು ಪ್ರೋಸೆಸ್ ಮಾಡಿ, ಎಣ್ಣೆ ಮಾಡಿ ಹಿಂಡಿ ಮಾಡುವುದರೊಳಗೆ ನೀವು ಮಾರಾಟ ಮಾಡುವುದರೊಳಗೆ 12 ಪರ್ಸೆಂಟ್ ಕಮರ್ಷಿಯಲ್ ಟ್ಯಾಕ್ಸ್ ಉಳಿತಾಯ ಮಾಡಬಹುದು. ಆ ಮನುಷ್ಯ ಎಷ್ಟು ಗ್ರಾಬ್ ಮಾಡುತ್ತಾನೆ ನೋಡಿ. 12 ಪರ್ಸೆಂಟ್ ನಿಮಗೆ ಬಂತು ಎಂದರೆ ಎಷ್ಟು ಅನುಕೂಲವಾಗುತ್ತದೆ?

ಆ ದುಡ್ಡನ್ನು ಉಪಯೋಗಿ ಮಾಡಿಕೊಂಡು ಗ್ರಾಮಾಂತರ ಜನರಿಗೆ ಶಾಪ ಎನ್ನಿಸುವಂಥ ಪಾನನಿಶೇಷ ಕಾರ್ಯಕ್ರಮವನ್ನು ಜಾರಿಗೆ ತರುವುದು ಸಾಧ್ಯವಾಗುತ್ತದೆ. ಏನೋ ಮೊನ್ನೆ ಮಾತನಾಡುವ ಮುಂಚೆ ತಾವು ಹೇಳಿದಿರಿ. ನನಗೆ ಬಹಳ ಬೇಜಾರು ಆಯಿತು. ನಾವು ಸಂಪೂರ್ಣ ಪಾನನಿರೋಧಕ್ಕೆ ಯವಾಗಲೂ ಒಪ್ಪಿಲ್ಲ, ಸಾರಾಯಿ ಮಾರಾಟವನ್ನು ನಿಲ್ಲಿಸುತ್ತೇವೆ ಎನ್ನುವಂಥ ಮಾತನ್ನು ತಾವು ಹೇಳಿದಿರಿ. ಸಾರಾಯಿ ಬಿಟ್ಟು ಬಾಕಿ ಎಲ್ಲಾ ಕುಡಿಸಿದರೆ ಏನಾಗಬಹುದು ಮತ್ತೆ? ಹೀಗೆ ಮಾಡಿ

ನಿಮಗೆ ಏನಾದರೂ ತೊಂದರೆ ಇದ್ದರೆ ಸಾರಾಯಿಯನ್ನು ಸಂಪೂರ್ಣ ನಿಲ್ಲಿಸಿ. ಗ್ರಾಮ ಸಭೆಯಲ್ಲಿ ನಾವು ನಿರ್ಣಯ ಮಾಡಿದ್ದೇವೆ, ನಮ್ಮ ಗ್ರಾಮದಲ್ಲಿ ಸಂಪೂರ್ಣ ಪಾನನಿಶೇಧ ತರಬೇಕು ಎಂದು ನಾವು ನಿರ್ಣಯ ಮಾಡಿದರೆ ಆ ಗ್ರಾಮದಲ್ಲಿ ಸಂಪೂರ್ಣ ಪಾನನಿಶೇಧ ಜಾರಿಗೆ ಬರುವ ಹಾಗೆ ದಯವಿಟ್ಟು ಮಾಡಿ. ಜನರಿಗೆ ಬೇಕು ಎಂದರೆ ನೀವು ಕೊಡಿ. ಇದನ್ನು ಮಾಡುವುದಕ್ಕೆ ಏನೂ ತೊಂದರೆಯಾಗಲಾರದು.

ಶ್ರೀ ಕೆ.ಬಿ. ಶಾಣಪ್ಪ : ಸಾರಾಯಿ ಬಂದ ನಂತರ ಐ.ಎಂ.ಎಫ್.ಎಲ್. ಬಗ್ಗೆ ಆ ವಿಷಯವಾಗಿ ತೊಂದರೆ ಆಗುತ್ತದೆ ಎಂದರೆ, ಇವರದ್ದು ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೇಳುತ್ತೇವೆ. ಊರಿನವರೆಲ್ಲರೂ ನಮಗೆ ಬೇಡ ಎಂದರೆ ಎರಡೂ ಬಂದ್ ಆಗಿ ಬಿಡುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಎರಡೂ ಬಂದ್ ಆಗುತ್ತವಲ್ಲಾ, ದಯವಿಟ್ಟು ಮಾನ್ಯ ಸಿದ್ಧರಾಮಯ್ಯನವರು ನಾಳೆ ಉತ್ತರ ಕೊಡುವ ಮುಂಚೆ ಇದನ್ನು ಡಿಕ್ಲೇರ್ ಮಾಡಿರಿ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ಮಾನ್ಯ ಸದಸ್ಯರು ಹೇಳುವ ಸೂಚನೆ ಬಹಳ ಚೆನ್ನಾಗಿ ಇದೆ. ಸಾರಾಯಿ ಬಂದ್ ಮಾಡಿದರೆ, ಬ್ರಾಂದಿ, ಬೀರು, ವಿಸ್ಕಿ ಇದೆಯಲ್ಲಾ ಅದನ್ನು ಸಂಪೂರ್ಣವಾಗಿ ಆ ಊರಿನಲ್ಲೆ ಡ್ರೈವಿಲೇಜ್ ಎಂದು ಮಾಡಬಹುದು. ತೊಂದರೆ ಆಗುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ನಾವು ಗ್ರಾಮಸಭೆಯಲ್ಲಿ ನಮ್ಮ ಗ್ರಾಮದಲ್ಲಿ ಸಂಪೂರ್ಣ ಪಾನನಿರೋಧ ಜಾರಿಗೆ ಬರಬೇಕು ಎಂದು ಅಪೇಕ್ಷೆ ಪಟ್ಟರೆ, ಹಾಗೆಂದು ನಾವು ನಿರ್ಣಯ ಮಾಡಿದರೆ ಅಲ್ಲಿ ಪಾನನಿಶೇಧವನ್ನು ಸಂಪೂರ್ಣವಾಗಿ ತರುತ್ತೇವೆ ಎಂದು ಭರವಸೆ ಕೊಡಿ, ಅದನ್ನು ಹೇಳಿಬಿಡಿ.

ಶ್ರೀ ಸಿದ್ಧರಾಮಯ್ಯ : ಮಾಡಬಹುದು, ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ನನಗೆ ನಿಜವಾಗಿಯೂ ಬಹಳ ಸಂತೋಷವಾಗಿದೆ.

ಶ್ರೀ ಸಿ. ಬೈರೇಗೌಡ : ಅದರ ಜೊತೆಗೆ ಇದನ್ನೂ ಕೂಡ ಆಲೋಚನೆ ಮಾಡಬಹುದು ಎಂದು ಎನ್ನಿಸುತ್ತದೆ. ಯಾವ ಗ್ರಾಮದವರು ಸಂಪೂರ್ಣ ಪಾನನಿರೋಧಕ್ಕೆ ಒಪ್ಪುತ್ತಾರೆ. ಅಂತಹ ಗ್ರಾಮಕ್ಕೆ ವಿಶೇಷವಾದ ಒಂದು ಹಣವನ್ನು ಅಲ್ಲಿಯ ಅಭಿವೃದ್ಧಿ ಕಾರ್ಯಗಳಿಗೆ ಕೊಡುತ್ತೇವೆ ಎನ್ನುವಂಥ ಒಂದು ಆಲೋಚನೆಯನ್ನು ಸಹ, ಇದರ ಜೊತೆಯಲ್ಲೇ ಮಾಡಿದರೆ ಬಹುಶಃ ಅನೇಕ ಗ್ರಾಮಗಳನ್ನು ಹಳ್ಳಿಗಳನ್ನು ಇದಕ್ಕೆ ಒಪ್ಪಿಸಬಹುದು ಎಂಬ ನಂಬಿಕೆ ನಮಗೆ ಇದೆ. ಇದನ್ನು ನಾವು ತೀವ್ರವಾಗಿ ಚರ್ಚೆ ಮಾಡುತ್ತೇವೆ.

ಶ್ರೀ ಡಿ.ಆರ್.ಪಾಟೀಲ್ : ಇದು ಬಹಳ ಉತ್ತಮವಾದಂಥ ಸಲಹೆ. ಮಾನ್ಯ ಗೌಡರಿಗೆ ಗೊತ್ತಿದೆ. ಈಗ ಕೃಷಿಕರ ಬಗ್ಗೆ ಹೇಳಬೇಕೆಂದರೆ ನಾವು ಬರೀ ಉತ್ಪಾದನೆ ಮಾಡಿಬಿಟ್ಟರೆ ನಮ್ಮ ಅಭಿವೃದ್ಧಿ ಆಗುವುದಿಲ್ಲ. ನಾವು ಉತ್ಪಾದನೆ ಮಾಡಿದಾಗ ನಮ್ಮ ಉತ್ಪಾದನೆಗೆ ಯೋಗ್ಯ ಬೆಲೆ ಮಾರುಕಟ್ಟೆಯಲ್ಲಿ ನಮಗೆ ಸಿಗಬೇಕು. ಆಮೇಲೆ ನಾವು ಮಾರಾಟ ಮಾಡಿದಂಥ ಹಣ ನಮಗೆ ಕೂಡಲೇ ಸಂದಾಯವಾಗಬೇಕು. ಇವತ್ತು ನಾವು ನೋಡುತ್ತಿದ್ದೇವೆ. ನಾವು ಉತ್ಪಾದನೆ ಹೆಚ್ಚು ಮಾಡಿದ್ದೇವೆ. ಎಂದರೆ, ಮಾರುಕಟ್ಟೆಯ ಬೆಲೆ ಇಳಿಯುತ್ತದೆ. ನಾವು ಕಬ್ಬು, ಶೇಂಗಾ ಬೆಳೆ ಹೆಚ್ಚು ಮಾಡಿದರೆ, ರೊಕ್ಕ ಹೆಚ್ಚು ಮಾಡಿರಿ. ಉತ್ಪಾದನೆ ಮಾಡುವುದು ನಮಗೆ ಒಂದು ಶಾಪವೇನು?

ಮಿನಿಮಮ್ ಇಷ್ಟು ಈ ಬೆಳೆಗೆ, ಈ ಬೆಲೆ ರೈತರಿಗೆ ದುಡ್ಡು ಮುಟ್ಟಲೇಬೇಕು ಎನ್ನುವಂಥ ಮಿನಿಮಮ್ ಸಪೋರ್ಟ್ ಪ್ರೈಸ್ ಮಾಡಿ. ಅದಕ್ಕಿಂತ ಕಡಿಮೆ ರೇಟಿನಲ್ಲಿ ಯಾರೂ ಮಾರುಕಟ್ಟೆಯಲ್ಲಿ ಬಿಡ್ ಮಾಡತಕ್ಕದ್ದು ಅಲ್ಲ. ಹಾಗೆ ಬಿಡ್ ಮಾಡತಕ್ಕದ್ದು ಅಕ್ರಮ ಕೆಲಸವೆಂದು ಕಾನೂನಿನಲ್ಲಿ ತಿದ್ದುಪಡಿಯನ್ನು ತರಬೇಕು. ಅದು ಮಧ್ಯ ಪ್ರದೇಶದಲ್ಲಿ ಇದೆ.

ಈಗ ಸಪೋರ್ಟಿಂಗ್ ಪ್ರೈಸ್‌ನ್ನು ಡಿಕ್ಲೇರ್ ಮಾಡುತ್ತೀರಿ. ಈಗ ಕಬ್ಬಿಗೆ ಒಂದು ಟನ್‌ಗೆ ಆರುನೂರು ರೂಪಾಯಿ ಎಂದು ಡಿಕ್ಲೇರ್ ಮಾಡಿದರೆ ಅರುನೂರಕ್ಕಿಂತ ಕಡಿಮೆ ಯಾರಾದರೂ ಕೊಟ್ಟರು ಅಂದರೆ ಅವರಿಗೆ ಕಾನೂನು ಪ್ರಕಾರ ಶಿಕ್ಷೆ ಇರಲಿ. ಶೇಂಗಾಕ್ಕೆ ಎಂಟುನೂರು ಫಿಕ್ಸ್ ಮಾಡಿದರೆ ಮಾರುಕಟ್ಟೆಯೊಳಗೆ ಎಂಟುನೂರಕ್ಕಿಂತ ಯಾರಾದರೂ ಕಡಿಮೆ ಹಾಕಿದರೆ ಅವರು ಶಿಕ್ಷಾರ್ಹರು. ಇಂತಹ ಒಂದು ಬದಲಾವಣೆಯನ್ನು ಮಾರುಕಟ್ಟೆ ಇಲಾಖೆಯ ಕಾನೂನಿಗೆ ನಮ್ಮ ಮಾರುಕಟ್ಟೆ ಸಚಿವರು ತರಬೇಕಾಗುತ್ತದೆ. ಇವತ್ತು ಮಾರುಕಟ್ಟೆ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎನ್ನುವುದು ಮಾನ್ಯ ನಾಗಪ್ಪನವರಿಗೆ ಗೊತ್ತಿದೆ ಅವರು ಕೃಷಿಕರು. ಮತ್ತೆ ಮಾನ್ಯ ನಿಂಗಯ್ಯನವರು ಇದಕ್ಕೆ ಮೊದಲು ನಿಮ್ಮ ಇಲಾಖೆಯ ಮಂತ್ರಿಗಳಾಗಿದ್ದರು. ಮಾನ್ಯ ಗುರುಪಾದಪ್ಪನವರು ನಮ್ಮ ಸಮಿತಿಯ ಸದಸ್ಯರಾಗಿದ್ದರು.

ಉಪಾಧ್ಯಕ್ಷರು : ಪಾಟೀಲರೇ, ಒಂದು ಗಂಟೆಯಾಯಿತು. ನೀವು ಮೂವತ್ತು ನಿಮಿಷ ಎಂದು ಬರೆದುಕೊಟ್ಟಿದ್ದೀರಿ. ಒಂದು ಗಂಟೆಯಾಯಿತು..

ಶ್ರೀ ಡಿ.ಆರ್. ಪಾಟೀಲ್ : ನಾನು ಮೊದಲನೇ ಸಲ ಮಾತನಾಡುತ್ತಿದ್ದೇನೆ. ಬೇಗ ಮುಗಿಸುತ್ತೇನೆ.

ಉಪಾಧ್ಯಕ್ಷರು : ಚೆನ್ನಾಗಿ ಮಾತನಾಡುತ್ತಿದ್ದೀರಿ ಎಂದೇ ಒಂದು ಗಂಟೆ ಆಯಿತು.

ಶ್ರೀ ಡಿ.ಆರ್. ಪಾಟೀಲ್ : ಮಂಡಿ ಮಾರುಕಟ್ಟೆಯಲ್ಲಿ ಏನಾಗುತ್ತಿದೆ ಎಂದರೆ ರೈತರಿಂದ ದಲಾಲಿ ತೆಗೆದುಕೊಳ್ಳಬಾರದು ಎಂದು ಕಾನೂನು ಇದೆ. ಇದು ಕಾನೂನಿನ್ವಯ ಅಪರಾಧ. ಆದರೆ ಪ್ರತಿ ಮಾರುಕಟ್ಟೆಯೊಳಗೆ ದಲಾಲಿ ತೆಗೆದುಕೊಳ್ಳುವಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅದು ಗದಗ್‌ನಲ್ಲಿ 2 ಪರ್ಸೆಂಟ್ ಇದೆ. ದಯವಿಟ್ಟು ಮಾನ್ಯ ನಿಂಗಯ್ಯನವರು, ಮೊದಲು ಈ ಇಲಾಖೆಯನ್ನು ನೋಡಿಕೊಂಡಂಥವರು. ಮಾನ್ಯ ಬೈರೇಗೌಡರೇ, ತಾವು ಸ್ವಲ್ಪ ಕೇಳಿ. ನಮ್ಮ ರೆಗ್ಯುಲೇಟೆಡ್ ಮಾರುಕಟ್ಟೆಯೊಳಗೆ ಯಾವ ಮಂಡಿ ವ್ಯಾಪಾರಸ್ತರು ರೈತರಿಂದ ದಲಾಲಿ ತೆಗೆದುಕೊಳ್ಳಬಾರದು ಎಂದು ಮಾನ್ಯ ಜಾಲಪ್ಪನವರು ಒಂದು ಕಾನೂನನ್ನು ಮಾಡಿದ್ದಾರೆ. ಆದರೆ ಎಲ್ಲಾ ದಲಾಲರು ರೈತರಿಂದ ದಲಾಲಿಯನ್ನು ವಸೂಲಿ ಮಾಡುತ್ತಾರೆ. ಇದು ನಿಲ್ಲಬೇಕು. ಇದನ್ನು ನಿಲ್ಲಿಸುವುದಕ್ಕೆ ನಮ್ಮ ಇಲಾಖೆ ಸಮಿತಿಯ ವತಿಯಿಂದ ಹೋದವರ್ಷ ಒಂದು ಸಲಹೆಯನ್ನು ಕೊಟ್ಟಿದ್ದೇವು. ಈಗ ದಲಾಲರು ರೈತರಿಗೆ ಕೊಡುವಂಥ ಹಣವನ್ನು ಎ.ಪಿ.ಎಂ.ಸಿ. ಮುಖಾಂತರ ಕೊಡಬೇಕು. ದಲಾಲರಿಗೆ ವಾಪಸ್ಸು ಕೊಡುವ ಹಣ ಸಹಿತ ಎ.ಪಿ.ಎಂ.ಸಿ. ಮೂಲಕ ಸಂದಾಯ ಆಗಬೇಕು. ಈಗ ಏನು ಒಂದು ಸಾವಿರ ರೂಪಾಯಿಗೆ ಸಹಿ ಮಾಡಿಸಿಕೊಂಡು ಒಂಬೈನೂರು ರೂಪಾಯಿ ಕೊಡುತ್ತಾರಲ್ಲಾ. ಅದು ಎ.ಪಿ.ಎಂ.ಸಿ. ಮೂಲಕ ಸಂದಾಯವಾದರೆ ನನಗೆ ಸಾವಿರ ರೂಪಾಯಿಯೇ ಬರುತ್ತದೆ.

ಮಾರುಕಟ್ಟೆಯಲ್ಲಿ ಈ ಅಕ್ರಮ ದಲಾಲಿ ಏನಿದೆ, ಗದಗ್‌ನಲ್ಲಿ 2 ಪರ್ಸೆಂಟ್ ಇದ್ದರೆ, ರಾಣೆಬೆನ್ನೂರಿನಲ್ಲಿ 20 ಪರ್ಸೆಂಟ್ ಇದೆ. ಹತ್ತಿ ಮಾರುಕಟ್ಟೆಯೊಳಗೆ 20 ಪರ್ಸೆಂಟ್ ದಲಾಲಿ ಮುರಿದುಕೊಂಡು ಕೊಡುತ್ತಾರೆ. ಐದು ಸಾವಿರ ರೂಪಾಯಿ ಕಾಸ್ಟ್ ಇದ್ದರೆ, ಒಂದು ಸಾವಿರ ರೂಪಾಯಿ ನಾವು ದಲಾಲರಿಗೆ ಕೊಡಬೇಕು ಎಂದರೆ ಇದು ನಮ್ಮ ಕಿಸೆಯಿಂದ ಹಿಡಿದ ಹಾಗೆ ಆಗುವುದಿಲ್ಲವೇ? ಯಾರಾದರೂ ನಮ್ಮ ಪಿಕ್‌ಪ್ಯಾಕೆಟ್ ಮಾಡಿದರೆ ನಾವು ಏನು ಮಾಡುತ್ತೇವೆ? ಹಿಡಿದು ನಾಲ್ಕು ಏಟು ಹಾಕುತ್ತೇವೆ. ಆದರೆ ಇವರಿಗೆ ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ಅವರೆಲ್ಲರೂ ಸಮಾಜದಲ್ಲಿ ಗಣ್ಯರು, ದೊಡ್ಡ ಸ್ಥಾನಮಾನದಲ್ಲಿ ಇರುವವರು. ಹಾಗೆ ನಾವೇನಾದರೂ ಮಾಡಿದರೆ ನಾಳೆ ಕುರ್ಚಿ ಹತ್ತುವುದಕ್ಕೂ ಇವರು ಅಡ್ಡಿ ಬರುವವರೇ. ಅಂದರೆ ಇವರು ಅಷ್ಟು ತಾಕತ್ತು ಇರುವವರು ಇದ್ದಾರೆ. ಆದ್ದರಿಂದ ಇವರನ್ನು ನೀವು ಕಾನೂನಿನಿಂದಲೇ ಬಗ್ಗುಬಡಿಯಬೇಕಾಗುತ್ತದೆ.

ಅದಕ್ಕೆ ಸೂಕ್ತ ಕಾನೂನು ಬದಲಾವಣೆಯನ್ನು ತರಬೇಕು. ಈ ಬದಲಾವಣೆಯನ್ನು ತರುವುದಕ್ಕೆ ಆಗಿನ ಮುಖ್ಯಮಂತ್ರಿಯಾಗಿದ್ದ ಮಾನ್ಯ ದೇವೇಗೌಡರನ್ನು ನಾವು ಡೆಲ್ಲಿಯಲ್ಲಿ ಭೇಟಿ ಮಾಡಿದಾಗ ಅವರು ಭರವಸೆಯನ್ನು ಕೊಟ್ಟಿದ್ದರು. ಆಗಿನ ಈ ಇಲಾಖೆಯ ಸಚಿವರಾದ ಮಾನ್ಯ ನಿಂಗಯ್ಯ ನವರೂ ನಮಗೆ ಭರವಸೆಯನ್ನು ಕೊಟ್ಟಿದ್ದರು. ಈಗ ಮಾನ್ಯ ನಾಗಪ್ಪನವರು ಬಂದಿದ್ದಾರೆ. ಅವರೂ ಕೃಷಿಕರು ಇದ್ದಾರೆ. ಕಾನೂನಿಗೆ ತಾವು ದಯವಿಟ್ಟು ಬದಲಾವಣೆಯನ್ನು ತರಬೇಕು. ತರುತ್ತೇವೆ ಎನ್ನುವಂಥ ಭರವಸೆಯನ್ನು ನಾಳೆ ತಮ್ಮ ಉತ್ತರದಲ್ಲಿ ಕೊಡಿ.

ಉಪಾಧ್ಯಕ್ಷರು : ಪಾಟೀಲರೇ, ದಯವಿಟ್ಟು ಮುಕ್ತಾಯ ಮಾಡಿರಿ. ಟೈಮ್ ಬಹಳ ಆಯಿತು.

ಶ್ರೀ ಡಿ.ಆರ್. ಪಾಟೀಲ್ : ಸ್ವಾಮಿ, ನೀವೇ ಹೇಳಿ. ಇದರ ಜೊತೆಗೆ ಈಗ ರೈತ ಬೆಳೆದಂಥ ಮಾಲಿಗೆ ಬೆಲೆ ಕಟ್ಟುವಂಥ ವ್ಯವಸ್ಥೆ ಅಂತೂ ಇಲ್ಲ. ಖರೀದಿದಾರರು ಯಾವ ರೇಟು ಹಾಕುತ್ತಾರೆ ಅದಕ್ಕೆ ನಾವು ಕೊಟ್ಟುಬಿಡುತ್ತೇವೆ. ಆದರೆ ರೈತರೇ ಸಂಘಟನೆ ಮಾಡುವಂಥ ಸಂಸ್ಕರಣ ಸಂಘಗಳು ಏನಾದರೂ ಬಂದರೆ ಅವುಗಳು ಪ್ರಭಾವಯುತವಾಗಿ ಬೆಳೆದರೆ ಆ ಸಂಸ್ಕರಣ ಸಂಘದ ಮೂಲಕ ರೈತ ಬೇಡಿದ ಬೆಲೆಯನ್ನು, ಈಗ ಏನು ಸಕ್ಕರೆ ಕಾರ್ಖಾನೆಯಲ್ಲಿ ನಮಗೆ ಇಷ್ಟು ರೇಟು ಬೇಕು ಎಂದು ಹೇಳುತ್ತೇವಲ್ಲಾ, ಹಾಗೆ ರೈತನ ಉಳಿದ ಮಾಲಿಗೆ ಸಹಿತ, ಆತ ಬೇಡಿದ ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ದಯವಿಟ್ಟು ಸಂಸ್ಕರಣ ಸಂಘಗಳನ್ನು ಸ್ಥಾಪನೆ ಮಾಡುವುದಕ್ಕೆ ಸಹಕಾರ ಇಲಾಖೆಯಿಂದ ಸಾಕಷ್ಟು ಹಣಕಾಸು ಒದಗಿಸಿ ಸಹಾಯ ಮಾಡಬೇಕು. ಇವತ್ತು ಅದು ಆಗುತ್ತಿಲ್ಲ. ಸ್ಪಿನ್ನಿಂಗ್ ಮಿಲ್ಸ್ ಸಲುವಾಗಿ ಇವತ್ತು ಎರಡು ಕೋಟಿ 40 ಲಕ್ಷ ರೂಪಾಯಿಗಳನ್ನು ಹಾಕಿದ್ದೀರಿ. ಆಮೇಲೆ ಕಬ್ಬಿನ ಸಲುವಾಗಿ 4 ಕೋಟಿ 42 ಲಕ್ಷ ಇಟ್ಟಿದ್ದೀರಿ. ಒಂದು ಸ್ಪಿನ್ನಿಂಗ್ ಮಿಲ್ ಹೆಚ್ಚಿಗೆ ಚಾಲೂ ಮಾಡುವುದಕ್ಕೆ ಆಗುವುದಿಲ್ಲ. ಒಂದು ಶುಗರ್ ಫ್ಯಾಕ್ಟರಿ ಹೆಚ್ಚಿಗೆ ಚಾಲು ಮಾಡುವುದಕ್ಕೆ ಆಗುವುದಿಲ್ಲ. ಇದರಿಂದ ಖಾಸಗಿಯವರು ಬಂದರೆ ಅವರಿಗೆ ಲಾಭ ಆಗುತ್ತದೆ. ರೈತರಿಗೆ ಲಾಭ ಆಗುವುದಿಲ್ಲ. ರೈತರನ್ನು ಸಂಘಟನೆ ಮಾಡುವಂಥ ಸಂಘಸಂಸ್ಥೆಗಳು ಬಂದರೆ ರೈತರಿಗೆ ನೇರವಾಗಿ, ಅವರು ಬೆಳೆದ ಮಾಲಿಗೆ ಒಳ್ಳೆಯ ದರ ಸಿಗುತ್ತದೆ. ದಯವಿಟ್ಟು ಸಂಸ್ಕರಣ ಸಂಘಗಳನ್ನು ತಾವು ಸ್ಥಾಪನೆ ಮಾಡಬೇಕೆಂದು ನಾನು ಹೇಳುತ್ತೇನೆ. ನನಗೆ ತಾವು ಬಹಳಷ್ಟು ಸಮಯ

ಈಗಾಗಲೇ ಕೊಟ್ಟಿದ್ದೀರಿ. ಇಲ್ಲವೆಂದು ನಾನು ಹೇಳುವುದಿಲ್ಲ. ಹಲವಾರು ಸಲಹೆಗಳನ್ನು ನಾನು ಕೊಟ್ಟಿದ್ದೇನೆ.

ಮೊನ್ನೆ ಮಾನ್ಯ ಜೆ.ಹೆಚ್. ಪಟೇಲರು ತಮ್ಮ ಉತ್ತರದಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆ, ರಾಜಕೀಯ ವ್ಯವಸ್ಥೆ ಆಡಳಿತ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎನ್ನುವ ಬಗ್ಗೆ ಸರಿಯಾದ ಚಿತ್ರಣವನ್ನು ನಮಗೆಲ್ಲರಿಗೂ ಕೊಟ್ಟರು. ಇದು ಬದಲಾವಣೆಯಾಗಬೇಕೆನ್ನುವಂಥ ಅಪೇಕ್ಷೆ ನಮಗೂ ಇದೆ, ನಿಮಗೂ ಇದೆ, ಎಲ್ಲರಿಗೂ ಇದೆ. ಎಲ್ಲರಿಗೂ ಇದೆ. ಇದು ಮುಂದುವರಿಯಬೇಕೆಂದು ಇಚ್ಛೆ ಯಾರಿಗೂ ಇಲ್ಲ. ಇದು ಮುಂದುವರಿದರೆ, ನಾವು ನೀವು ಎಲ್ಲರೂ ಅದರಲ್ಲಿ ಕೊಚ್ಚಿ ಹೋಗುತ್ತೇವೆ. ಆದ್ದರಿಂದ, ಅದು ಮುಂದುವರಿಯಬಾರದು ಎಂದು ಎಲ್ಲರಿಗೂ ಇದೆ. ಇದು ಬಂದ್ ಆಗಬೇಕಾದರೆ, ಮಾಡಲಿಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು. ಸರ್ಕಾರದ ಮಟ್ಟದಲ್ಲಿ ಏನಾಗಬೇಕು, ಅಧಿಕಾರಿಗಳ ಮಟ್ಟದಲ್ಲಿ ಏನಾಗಬೇಕು, ಶಾಸಕರ ಮಟ್ಟದಲ್ಲಿ ಏನಾಗಬೇಕು, ಪಂಚಾಯಿತಿ ಮಟ್ಟದಲ್ಲಿ ಏನಾಗಬೇಕು ಹೀಗೆ ಎಲ್ಲಾ ಮಟ್ಟದಲ್ಲಿ ಏನೇನು ಕಾರ್ಯಕ್ರಮ ಆಗಬೇಕೆಂಬುದರ ಬಗ್ಗೆ ಏನು ನಾನು ಮೊದಲೇ ತಮಗೆ ಹೇಳಿದೆ. ಇಲಾಖಾ ವಿಷಯ ಸಮಿತಿಗಳು ಇವೆ,

ಈ ಎಲ್ಲಾ ವಿಷಯ ಸಮಿತಿಯವರಿಗೆ ನೀವು ಆದೇಶ ಕೊಟ್ಟು, ನೀವು, ನಿಮ್ಮ ನಿಮ್ಮ ಇಲಾಖೆಯಲ್ಲಿ ಆಡಳಿತದಲ್ಲಿ ಒಳಹೊಡೆತವನ್ನು ಹೇಗೆ ನಿಲ್ಲಿಸುವುದಕ್ಕೆ ಏನು ಮಾಡಬೇಕು, ಏನು ಬದಲಾವಣೆ ತಂದರೆ ಸಾಧ್ಯವಾಗುತ್ತದೆ. ಅದು ಕಾನೂನು ಬದಲಾವಣೆ ಇರಲಿ, ನಿಯಮಗಳ ಬದಲಾವಣೆ ಇರಲಿ, ವ್ಯವಸ್ಥೆಯ ಬದಲಾವಣೆ ಇರಲಿ, ಈ ಬದಲಾವಣೆಗಳನ್ನು ಯಾವ ರೀತಿ ತರಬೇಕೆನ್ನುವುದರ ಬಗ್ಗೆ ಅಧ್ಯಯನ ಮಾಡಿ, ಪ್ರವಾಸ ಮಾಡಿ, ಅಲ್ಲಿಯ ಗ್ರಾಮಸ್ಥರು, ಪರಿಣಿತರ ಅಭಿಪ್ರಾಯವನ್ನು ತೆಗೆದುಕೊಂಡು ಪ್ರತಿ ಇಲಾಖಾ ವಿಷಯ ಸಮಿತಿಯವರೂ ವರದಿಯನ್ನು ಕೊಡಬೇಕೆಂದು ಸೂಚನೆಯನ್ನು ಕೊಡಬೇಕು. ಇವತ್ತು ನಾವೇನು ನೈತಿಕವಾಗಿ ಕೆಳಮಟ್ಟಕ್ಕೆ ಹೋಗಿದ್ದೇವೆ, ಇದು ಬದಲಾಗುವಂಥ ಕಾರ್ಯಕ್ರಮ ಈ ಸರ್ಕಾರದಿಂದ ಪ್ರಾರಂಭವಾಗಬೇಕು, ಈ ಶ್ರೇಯಸ್ಸನ್ನು ತಾವು ಪಡೆದುಕೊಳ್ಳಬೇಕೆಂದು ಹೇಳಿ, ಮಾನ್ಯ ಉಪಾಧ್ಯಕ್ಷರು ಇಷ್ಟು ಸಮಯದವರೆಗೆ, ಯಾವುದೇ ಇಂಟರಪ್ಷನ್ ಇಲ್ಲದೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ, ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ (ಬೀದರ್) : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಮೊಟ್ಟ ಮೊದಲನೆಯದಾಗಿ, ನಮ್ಮ ಜಿಲ್ಲಾ ಆಡಳಿತದ ಮೇಲೆ ಮಾತನಾಡುತ್ತೇನೆ. ನಮ್ಮ ಜಿಲ್ಲೆಯ ಆಡಳಿತ ಏನಿದೆ, ಯಾವ ಜಿಲ್ಲಾ ಅಧಿಕಾರಿಗಳು ನಮ್ಮಲ್ಲಿ ಬರುತ್ತಿದ್ದಾರೆ. ಸರ್ಕಾರದವರು ಯಾವ ಜಿಲ್ಲಾ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಕಳುಹಿಸುತ್ತಿದ್ದಾರೆ ಎಂದರೆ, ಯಾರಿಗೆ ಪನಿಷ್ಮೆಂಟ್ ಕೊಡುತ್ತಾರೆ, ಅವರಿಗೆ ನಮ್ಮಲ್ಲಿ ವರ್ಗಾವಣೆ ಆಗುತ್ತಾ ಇದೆ. ನಮ್ಮ ಬೀದರ್ ಜಿಲ್ಲೆ ಅತಿ ಹಿಂದುಳಿದ ಜಿಲ್ಲೆ. ನಾನು, ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಯಾರು ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ, ಅಂತಹ ಅಧಿಕಾರಿಗಳನ್ನು ನಮ್ಮ ಜಿಲ್ಲೆಗೆ ಹಾಕಬೇಕು. ಇದು ನಮ್ಮ ವಿನಂತಿ ಇದೆ. ಏಕೆಂದರೆ, ನಮ್ಮ ಜಿಲ್ಲೆಯಲ್ಲಿ ಯಾವುದೇ ಸರ್ಕಾರಿ ಸ್ಕೀಮ್ ಇರಲಿ, ಇಂಪ್ಲಿಮೆಂಟೇಷನ್ ಆಗುತ್ತಾ ಇಲ್ಲ. ವಿಶೇಷವಾಗಿ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ಬಗ್ಗೆ ನಾನು ಪದೇ ಪದೇ ನಮ್ಮ ಜಿಲ್ಲಾಧಿಕಾರಿಗಳಿಗೆ ಹೇಳುತ್ತಿದ್ದೇನೆ.

ನಮ್ಮ ಜಿಲ್ಲೆಯಲ್ಲಿ, ಈ ಸಮಾಜ ಕಲ್ಯಾಣ ಇಲಾಖೆಯ ಮತ್ತು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಆಫೀಸುಗಳು ಇವೆ. ಈ ಎರಡು ಇಲಾಖೆಗಳಿಗೆ, ಮೊದಲು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ, ಸ್ಥಳಾವಕಾಶ ಮಾಡಿಕೊಡಬೇಕು. ಹಿಂದಿನ ಕಾಲಕ್ಕೆ, ಸಮಾಜ ಕಲ್ಯಾಣ ಇಲಾಖೆ, ಎಸ್ಸಿ ಎಸ್ಟಿ ಮತ್ತು ಬಿ.ಸಿ.ಎಂ. ಇಲಾಖಾ ಆಫೀಸುಗಳು ಊರು ಹೊರಗಡೆ ಇದ್ದವು. ಈಗಲೂ ಸಮಾಜ ಕಲ್ಯಾಣ ಇಲಾಖೆ, ಮತ್ತು ಈ ಬಿ.ಸಿ.ಎಂ. ಇಲಾಖೆಗಳ ಕಛೇರಿಗಳು ಸಿಟಿ ಹೊರಗಡೆಯೇ ಇದೆ. ಇದರಿಂದ ಜನರಿಗೆ ಬರುವುದಕ್ಕೆ, ಹೋಗುವುದಕ್ಕೆ ಮತ್ತು ಅವರ ಅಭಿಪ್ರಾಯ ಏನಿದೆ, ಅವರ ಕಷ್ಟ ಏನಿದೆ, ಎಂಬುದನ್ನು ಹೇಳಲು ಈ ಆಫೀಸಿಗೆ ಹೋಗುವುದಕ್ಕೆ ಸೌಲಭ್ಯ ಇಲ್ಲ. ಅದಕ್ಕಾಗಿ, ನಮ್ಮದು ಇಷ್ಟೇ ವಿನಂತಿ. ಈ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆಗಳಿಗೆ ನೀವು ಅಧಿಕಾರಿಗಳನ್ನು ಏನು ಹಾಕುತ್ತೀರಿ, ಅವರು ಬೇಕಂತಲೇ, ಕೆಲವು ಸ್ಕೀಮುಗಳನ್ನು ನಾಶ ಮಾಡುತ್ತಿದ್ದಾರೆ. ಅದರ ಸಲುವಾಗಿ ಈ ಎರಡು ಇಲಾಖೆಗಳಿಗೆ ಸೀನಿಯರ್ ಐಎಎಸ್ ಅಧಿಕಾರಿಗಳನ್ನು ಹಾಕಬೇಕು. ಏಕೆಂದರೆ, ಇವು ಎಲ್ಲದಕ್ಕಿಂತ ದೊಡ್ಡ ಇಲಾಖೆಗಳು. ಎಲ್ಲದಕ್ಕಿಂತ ಹೆಚ್ಚಾಗಿ, ರಾಷ್ಟ್ರಮಟ್ಟದ, ರಾಜ್ಯಮಟ್ಟದ 85 ಪರ್ಸೆಂಟ್ ಸಮಾಜದ ಕೆಲಸ ಮಾಡುವುದು ಈ ಎರಡು ಇಲಾಖೆಗಳೇ.

ಆದರೆ, ನೀವು ಇವುಗಳನ್ನು ತುಳಿಯತಕ್ಕ ಕೆಲಸ ಮಾಡುತ್ತಿದ್ದೀರಿ. ಮತ್ತು ನಮ್ಮ ಜಿಲ್ಲೆಯ ಹೆಸರು ಇವತ್ತು ಬೀದರ್ ಜಿಲ್ಲೆ ಎಂದು ಇಲ್ಲ. ಇವತ್ತು ಭ್ರಷ್ಟಾಚಾರ ಜಿಲ್ಲೆಯಾಗಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಆರೋಗ್ಯ ಇಲಾಖೆಯಲ್ಲಿ 60 ಲಕ್ಷ ಅಕೌಂಟ್ನಲ್ಲಿದೆ. ಜಿಲ್ಲಾ ಪಂಚಾಯಿತ್ತಿಯಲ್ಲಿ, ಎಜ್ಯುಕೇಷನ್ ಡಿಪಾರ್ಟ್ಮೆಂಟ್ನಲ್ಲಿ ಮತ್ತು ಹೆಚ್ಚಿಗೆ ಏನು ಮಾಡಿದ್ದಾರೆ ನಮ್ಮ ಜಿಲ್ಲೆಯಲ್ಲಿ ಎಂದರೆ, ಈ ಎಸ್.ಸಿ.ಪಿ. ಪ್ರೋಗ್ರಾಂ ಸಲುವಾಗಿ ಯಾವ ಹಣ ಬರುತ್ತಾ ಇದೆ. ಹಾಸ್ಟಲ್ ಸಲುವಾಗಿ, ನೀರು ಸರಬರಾಜು ಸಲುವಾಗಿ, ರೋಡ್ಸ್ ಸಲುವಾಗಿ, ಚರಂಡಿ ಸಲುವಾಗಿ ಈ ಎಲ್ಲವನ್ನು ಬೇರೆ ಬೇರೆ ಕಡೆ ಡೈವರ್ಷನ್ ಮಾಡಿ, ಏನು ಮಾಡುತ್ತಿದ್ದಾರೆಂದರೆ, ಪರ್ಚೇಸ್ ಮಾಡುತ್ತಿದ್ದಾರೆ.

ನಾನು ಸರ್ಕಾರಕ್ಕೆ ಮತ್ತು ವಿಷಯ ಸಮಿತಿಗೂ ವರದಿ ಕೊಟ್ಟಿದ್ದೇನೆ. ಇದು ಕಂಟ್ರೋಲ್ ಆಗಬೇಕು. ಏಕೆ ಇದು ಹೀಗೆ ಆಗುತ್ತಾ ಇದೆ? ಜಿಲ್ಲಾ ಆಡಳಿತ ಚೆನ್ನಾಗಿರಬೇಕು. ಆದ್ದರಿಂದ, ನಮ್ಮ ಜಿಲ್ಲೆಯದು ಇಷ್ಟೇ ವಿನಂತಿ. ನಮ್ಮ ಜಿಲ್ಲೆ ಮುಂದೆ ಬರಬೇಕಾದರೆ, ತಾವು ಮೊದಲನೆಯದಾಗಿ ಪ್ರಾಮಾಣಿಕ ಅದಿಕಾರಿಗಳನ್ನು ಅಲ್ಲಿಗೆ ಹಾಕಬೇಕು. ಮತ್ತೆ ಏನಾಗಿದೆ ನಮ್ಮ ಪರಿಸ್ಥಿತಿ ಎಂದರೆ, ಯಾವುದೇ ಹಣ ಸ್ಕೇರ್‌ಸಿಟಿ ಹಣ ನಮ್ಮ ಜಿಲ್ಲೆಗೆ ಬರುತ್ತದೆ. ಅದು ಜಿಲ್ಲೆಯ ಹಣ. ಆಫೀಸರು ಏನು ಮಾಡುತ್ತಿದ್ದಾರೆ. ನಮ್ಮಲ್ಲಿ ಡಿಪಾಸಿಟ್ ಮಾಡುವುದಕ್ಕೆ ದುಡ್ಡಿಲ್ಲ. ನಮ್ಮ ಪರಿಸ್ಥಿತಿ ಮಾನ್ಯ ಧರ್ಮಸಿಂಗ್ರವರಿಗೂ ಗೊತ್ತಿದೆ. ನಮ್ಮ ಜನರು ಓಟು ಕೊಟ್ಟಿದ್ದಾರೆ, ಅದರ ಜೊತೆಗೆ ನೋಟನ್ನೂ ಕೊಟ್ಟಿದ್ದಾರೆ. ನಾವು ಏನಾದರೂ ಸೇವ್ ಮಾಡಬೇಕೆಂದರೆ, ನಮ್ಮ ಜಿಲ್ಲೆಯ ಅಧಿಕಾರಿಗಳ ಸಹಕಾರ ಇಲ್ಲ. ಏಕೆಂದರೆ ನಮ್ಮಲ್ಲಿ ಸ್ಕೇರ್ಸಿಟಿ ಸಮಸ್ಯೆ ಇದೆ. ಎಲ್ಲದಕ್ಕಿಂತ ಹೆಚ್ಚು ನಮ್ಮ ಸಿಟಿಯಲ್ಲಿದೆ, ನಮ್ಮ ಕ್ಷೇತ್ರದಲ್ಲಿದೆ. ಜಿಲ್ಲಾಧಿಕಾರಿಗಳು ಏನು ಮಾಡುತ್ತಿದ್ದಾರೆ, ಶಾಸಕರ ಮಾತು ಕೇಳದಿದ್ದರೂ, ಮಂತ್ರಿಗಳು ಮಾತು ಕೇಳಬೇಕು. ಇದು ನಮ್ಮಲ್ಲಿ ಆಗಿದೆ. ತಮಗೆ ಗೊತ್ತಿದೆ. ತಾವು ನಮ್ಮ ಜಿಲ್ಲಾ ಮಂತ್ರಿಗಳಾಗಿ ನಮಗೆ ಸಹಕಾರ ಮಾಡಬೇಕು.

ನಾವು ವಿರೋಧಪಕ್ಷದವರಿದ್ದೇವೆ, ಅದು ಬೇರೆ ಮಾತು. ಅಭಿವೃದ್ಧಿ ಕೆಲಸಗಳ ಸಲುವಾಗಿ, ಮತ್ತು ಭ್ರಷ್ಟಾಚಾರದ ವಿರೋಧವಾಗಿ ನಾನು ಮಾತನಾಡುತ್ತಾ ಇದ್ದೆ. ಜಿಲ್ಲಾ ಪಂಚಾಯಿತಿ ಸಭೆಯಾಗಲೀ ಅಥವಾ ಯಾವುದೇ ಸಭೆಯಾಗಲೀ ಅವರಿಗೆ ವಿರೋಧವಾಗಿ ನಾನು ಮಾತನಾಡುತ್ತಿದ್ದೆ. ಎಲ್ಲಾ ಅಧಿಕಾರಿಗಳೂ ಒಂದಾಗಿ, ನಮ್ಮನ್ನು ತುಳಿಯತಕ್ಕ ಕೆಲಸ ಮಾಡುತ್ತಿದ್ದಾರೆ ಮತ್ತು ನಮ್ಮ ಸರ್ಕಾರಿ ಆಡಳಿತ ಪಕ್ಷದ ಶಾಸಕರು ಇರಲಿ ಅಥವಾ ಮಂತ್ರಿಗಳು ಇರಲಿ. ಅವರಿಗೆ ತಮ್ಮ ಮೂಲಕ ನಮ್ಮ ವಿನಂತಿ ಇದೆ. ಇಂತಹ ಆಫೀಸರುಗಳಿಗೆ ತಾವು ಬೆಂಬಲ ಮಾಡಬಾರದು. ನಾನು ಇದನ್ನು ಜನರಲ್ ಆಗಿ ಮಾತನಾಡಿದೆ. ಮತ್ತೆ, ಮೊದಲನೆಯದಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದವರು ಮತ್ತು ಹಿಂದುಳಿದ ವರ್ಗಗಳ ಕ್ಷೇಮಾಭಿವೃದ್ಧಿ ಮೇಲೆ ಮಾತನಾಡುತ್ತಾ ಇದ್ದೆ. ವಿಶೇಷವಾಗಿ, ಪರಿಶಿಷ್ಟ ಜಾತಿ ಮತ್ತು ಪಂಗಡದವರ ಇಲಾಖೆ ಬಗ್ಗೆ ಹೇಳಬಯಸುತ್ತೇನೆ. ತಮಗೆ ನನ್ನ ವಿನಂತಿ ಇದೆ.

ನಾನು ಯಾವುದೇ ವಿಷಯದ ಮೇಲೆ ಮಾತನಾಡುವಾಗ ಏನಾದರೂ ಹೆಚ್ಚು ಕಡಿಮೆಯಾದರೆ, ಮಾನ್ಯ ವಾಟಾಳ್ ನಾಗರಾಜ್ ನಮಗೆ ಸಹಕಾರ ಮಾಡಬೇಕು. ನಮ್ಮ ವಿಷಯ ಸರ್ಕಾರಕ್ಕೆ ಗೊತ್ತಾಗಬೇಕು. ಎಲ್ಲಾ ಐ.ಎ.ಎಸ್. ಅಧಿಕಾರಿಗಳು ಇದ್ದಾರೆ, ಎಲ್ಲರಿಗೂ ಗೊತ್ತಿದೆ. ನಮ್ಮ ನಾಯಕರು, ಸಿದ್ಧರಾಮಯ್ಯನವರಿಗೂ ನಮ್ಮ ಮಾತು ಹಿಡಿಸುತ್ತದೆ. ಅದರ ಸಲುವಾಗಿ, ಆದರೂ ನಮ್ಮ ಮಾತಿಗೆ ಸಹಕಾರ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಸ್ಸಿ ಎಸ್ಟಿ ಸಲುವಾಗಿ ಆಶ್ರಮ ಶಾಲೆಗಳು ಇವೆ. ಈ ಆಶ್ರಮ ಶಾಲೆಗಳು ಕೊಟ್ಟು ಏನು ಮಾಡಿದ್ದಾರೆಂದರೆ, ಅಲ್ಲಿ ಒಬ್ಬರೇ ಉಪಾಧ್ಯಾಯರು. ಉಪಾಧ್ಯಾಯರೂ ಅವರೇ, ಸೂಪರಿಂಟೆಂಡೆಂಟೂ ಅವರೇ, ಹಿಂದಿನ ಕಾಲದಲ್ಲಿ ಈ ಎಸ್ಸಿ ಎಸ್ ಜನರನ್ನು ಊರು ಹೊರಗೆ ಇಡುತ್ತಿದ್ದರು. ಈ ಕಾಲದಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಯಾವ ಸರ್ಕಾರವೇ ಬರಲಿ, ಅದು ಜನತಾ ದಳದ ಸರ್ಕಾರ ಬರಲಿ, ಕಾಂಗ್ರೆಸ್, ಸರ್ಕಾರ ಬರಲಿ, ಸ್ವತಂತ್ರ ದಿವಸ ಇರಲಿ, ಚುನಾವಣೆ ಪ್ರಣಾಳಿಕೆ ಇರಲಿ, ಎಲ್ಲಾ ಸರ್ಕಾರಗಳೂ ಏನು ಹೇಳುತ್ತಿದ್ದಾರೆ. ದಲಿತರಿಗೆ ಹಿಂದುಳಿದವರಿಗೆ ಅಲ್ಪಸಂಖ್ಯಾತರಿಗೆ ನಾವು ಸೌಲಭ್ಯ ಮಾಡಿ ಕೊಡುತ್ತೇವೆ ಎಂದು ತಾವೇ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಸ್ವಾತಂತ್ರ್ಯ ಬಂದು 50 ವರ್ಷವಾಗುತ್ತಾ ಇದೆ ಎಂದು ಮತ್ತೆ ಆಗಸ್ಟ್ 15ರಂದು ಅದೇ ಭಾಷಣವಾಗುತ್ತದೆ.

ಪ್ರಧಾನ ಮಂತ್ರಿಗಳು ಇರಲಿ ಮುಖ್ಯಮಂತ್ರಿಗಳು ಇರಲಿ ಯಾರೇ ಇರಲಿ ಎಲ್ಲರೂ ಭಾಷಣ ಮಾಡುವಾಗ ಹಿಂದುಳಿದ ವರ್ಗಗಳ ಬಗ್ಗೆ ದೀನದಲಿತದ ಬಗ್ಗೆ ಅಲ್ಪಸಂಖ್ಯಾತರ ಬಗ್ಗೆ ಮಾತನಾಡುತ್ತಾರೆ. ಆದರೆ ಹಿಂದುಳಿದ ವರ್ಗದವರು ಅಲ್ಪಸಂಖ್ಯಾತರು ದೀನದಲಿತರು ಎಲ್ಲರೂ ಅಲ್ಲೇ ಇದ್ದಾರೆ ಕಳೆದ 49-50 ವರ್ಷಗಳಲ್ಲಿ, ಈ ರೀತಿ ಹೇಳಿಕೊಂಡು ಬಂದವರೆಲ್ಲರೂ ಮುಂದೆ ಬಂದರು. ಹಿಂದುಳಿದವರು ಹಿಂದೆಯೇ ಬಿದ್ದಿದ್ದಾರೆ. ಏನು • ಮಾಡುತ್ತಿದ್ದೀರಿ ನೀವು ಹುಡುಗರಿಗೆ ಅರಿವೆ ಕೊಡುತ್ತಿದ್ದೀರಲ್ಲಾ ಆ ಅರಿವೆಯನ್ನು ಹುಡುಗ ಹಾಕಿಕೊಂಡ ತಕ್ಷಣ ಗೊತ್ತಾಗಬೇಕು ಈ ಹುಡುಗ ಷೆಡ್ಯೂಲ್ಡ್ ಕ್ಯಾಸ್ಟ್ ಹುಡುಗ ಎಂದು. ಅಂತಹ ಅರಿವೆಯನ್ನು ನೀವು ಕೊಡಬೇಡಿ. ಒಳ್ಳೆಯ ಪಾಲಿಸ್ಟರ್ ಅರಿವೆಯ್ನು ನೀವು ಕೊಡಬೇಕು. ಸಾಮಾನ್ಯವಾಗಿ ಬಡ ಕುಟುಂಬದಿಂದ ಬಂದಂತಹ ಹುಡುಗರು ಅವರು. ಎಲ್ಲರಲ್ಲಿ ಸಮಾನತೆ ಬರಬೇಕಾದರೆ ಅಂತಹ ಅರಿವೆಯನ್ನು ನೀವು ಕೊಟ್ಟರೆ ಹೇಗೆ ಸಮಾನತೆ ಬರುತ್ತದೆ?

ಇನ್ನು ಆಶ್ರಮ ಶಾಲಾ ಮಕ್ಕಳಿಗೆ ಯಾರೂ ಊಟ ಮಾಡಬಾರದು ಅಂಥ ಊಟವನ್ನು ತಾವು ಕೊಡುತ್ತಿದ್ದೀರಿ. ಒಳ್ಳೆಯ ಊಟವನ್ನು ತಾವು ಅವರಿಗೆ ಕೊಡಬೇಕು. ಈ ವರ್ಗಕ್ಕೆ ಏಕೆ ರಿಸರ್ವೇಷನ್ ಮಾಡಿದ್ದಾರೆ? ನಮ್ಮ ಬಾಬಾ ಸಾಹೇಬ್ ಅಂಬೇಡ್ಕರ್ ಏಕೆ ರಿಸರ್ವೆಷನ್ ಮಾಡಿದರು ಅಂದರೆ ಯಾರು ಈ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿದ್ದಾರೆ ಅವರು ಮೇಲೆ ಬೆರಬೇಕೆನ್ನುವ ದೃಷ್ಟಿಯಿಂದ ರಿಸರ್ವೇಷನ್ ಮಾಡಿದ್ದಾರೆ. ಆದರೆ ತಾವು ಇವತ್ತು ಹಾಗೆ ಮಾಡುತ್ತಿಲ್ಲ. ನಾನು ಇಲ್ಲಿ ಯಾರನ್ನೂ ಟೀಕೆ ಮಾಡುತ್ತಿಲ್ಲ, ಇದು ನನ್ನ ಅಭಿಪ್ರಾಯ, ನಾನು ನೋಡಿದ್ದನ್ನು ಹೇಳಲಿಕ್ಕೆ ಹೊರಟಿದ್ದೇನೆ. ನಮ್ಮ ಜನತಾ ದಳ ಸರ್ಕಾರದಲ್ಲಿ ಹಿಂದುಳಿದವರು, ಅಲ್ಪಸಂಖ್ಯಾತರು ದೀನದಲಿತರ ನಾಯಕರು ಇದ್ದಾರೆ. ನಮ್ಮ ಉಪ ಮುಖ್ಯಮಂತ್ರಿಗಳು ನಮ್ಮ ಗುರುಗಳು. ಅವರ ಸಹಾಯದಿಂದ ನಾನು ಇಷ್ಟು ಮುಂದೆ ಬಂದಿದ್ದೇನೆ. ಅವರು ನನಗೆ ಬಹಳ ಸಹಕಾರ ಮಾಡಿದ್ದಾರೆ. ನಮ್ಮ ಹಣಕಾಸಿನ ಮಂತ್ರಿಗಳು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಹಾಸ್ಟಲ್ ಕೊಡಿ, ನಮ್ಮ ಬ್ಯಾಕ್‌ವರ್ಡ್ ಕ್ಲಾಸ್ಗೆ ಸ್ಕೂಲ್ ಕೊಡಿ ಅಂದರೆ ನಮ್ಮ ಇಲಾಖೆಯಲ್ಲಿ ದುಡ್ಡೇ ಇಲ್ಲ ಎಂದು ಅವರು ಹೇಳುತ್ತಿದ್ದಾರೆ. ಬ್ಯಾಕ್‌ವರ್ಡ್ ಕ್ಲಾಸಸ್ ಡಿಪಾರ್ಟ್‌ಮೆಂಟ್ ಈಗ ಸೆಪರೇಟ್ ಆಗಿರುವುದರಿಂದ ಈಗ ಈ ಒಂದು ಇಲಾಖೆ ಇದೆ ಎನ್ನುವುದು ಜನರಿಗೆ ಕಾಣಿಸುತ್ತಿದೆ. ಅವರು ಕೆಲಸ ಮಾಡಬೇಕಾದರೆ ತಾವು ಅವರಿಗೆ ಹೆಚ್ಚು ಹಣವನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ. ಇದು ಬಹಳ ದೊಡ್ಡ ಇಲಾಖೆ ಈ ಇಲಾಖೆಗೆ ಹೆಚ್ಚು ಹಣ ಬೇಕು. ಬೇರೆ ಬೇರೆ ಇಲಾಖೆಗೆ ಸುಮ್ಮ ಸುಮ್ಮನೇ ದುಡ್ಡು ಕೊಡುತ್ತಾ ಇಡುತ್ತೀರಿ. ರಾಷ್ಟ್ರದಲ್ಲಿ ಇವತ್ತು ಒಂದು ಕ್ರಾಂತಿ ಬರುತ್ತಿದೆ. ಬಹುಸಮಾಜ ಪಾರ್ಟಿ ಅಂತ ಅದು ಕ್ರಾಂತಿ ಅಲ್ಲ ಸಾರ್. ಬಹುಸಮಾಜ್ ಕ್ರಾಂತಿ ಬರುತ್ತಿದೆ. ಎಲ್ಲರೂ ತಾವು ಬಹು ಸಮಾಜ್ ಕ್ರಾಂತಿಗೆ ಸಹಕಾರ ಮಾಡುತ್ತಿದ್ದೀರಿ. ತಾವು ಯಾವಾಗಲೂ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವವರಿದ್ದೀರಿ. ಅದು ಇರಬೇಕು.

ಆದರೆ ಇವತ್ತು ಆಶ್ರಮ ಶಾಲೆಗಳಲ್ಲಿ ಮತ್ತೆ ಏನು ಆಗುತ್ತಿದೆ ಅಂದರೆ ತಾವು ಕೊಟ್ಟ ಅರಿವೆಯನ್ನು ಕ್ಲೀನ್ ಮಾಡುವುದಕ್ಕೆ ಯಾವುದೇ ಸೌಲಭ್ಯ ಇಲ್ಲ. ಈ ಆಶ್ರಮ ಶಾಲೆಗಳಲ್ಲಿ ಬಟ್ಟೆಗಳನ್ನು ಕ್ಲೀನ್ ಮಾಡುವುದಕ್ಕೆ ತಾವು ವ್ಯವಸ್ಥೆ ಮಾಡಿಕೊಡಬೇಕು. ಮತ್ತು ಆ ಹುಡುಗರಿಗೆ ಮೆಡಿಕಲ್ ಟ್ರೀಟ್‌ಮೆಂಟ್ ಸಲುವಾಗಿ ನಿಮ್ಮಲ್ಲಿ ಯಾವುದೇ ಸೌಲಭ್ಯ ಇಲ್ಲ. ಮತ್ತೆ ಯಾವ ಹುಡುಗ ಆಶ್ರಮ ಶಾಲೆಗಳಲ್ಲಿ ಪಾಸು ಮಾಡುತ್ತಾನೆ ಆ ಹುಡುಗರಿಗೆ ಪ್ರೀ ಮೆಟ್ರಿಕ್‌ನಲ್ಲಿ ಮತ್ತು ಪೋಸ್ಟ್ ಮೆಟ್ರಿಕ್‌ನಲ್ಲಿ ಅಡ್ಮಿಷನ್ ಸಿಗುತ್ತಿಲ್ಲ, ತಾವು ಪರ್ಸೆಂಟೇಜ್ ಎಂಬ ಕಂಡೀಷನ್ ಇಟ್ಟಿದ್ದೀರಿ. ಆ ಹುಡುಗ ಆಶ್ರಮ ಶಾಲೆಗೆ ಹೋದಾಗ ಫಸ್ಟ್ ಸ್ಟ್ಯಾಂಡರ್ಡ್‌ನಿಂದ ಫೋರ್ತ್ ಕ್ಲಾಸಿನವರೆಗೂ ಒಂದೇ ಟೀಚರ್. ಅಲ್ಲಿ ಅವನೇ ಸೂಪರಿಂಟೆಂಡೆಂಟ್, ಎಲ್ಲಾ ಕೆಲಸ ಅವನೇ ಮಾಡಬೇಕು, ಈ ರೀತಿ ಆದರೆ ಆ ಹುಡುಗರಿಗೆ ಓದಲಿಕ್ಕೆ ಹೇಗೆ ಸಾಧ್ಯವಾಗುತ್ತದೆ? ನಾನು ನಿಮ್ಮ ಸರ್ಕಾರದ ಮೇಲೆ ಟೀಕೆಟಿಪ್ಪಣಿಯನ್ನು ಮಾಡಲಿಕ್ಕೆ ಡಿಮ್ಯಾಂಡ್ ಮೇಲೆ ಭಾಷಣ ಮಾಡುತ್ತಿಲ್ಲ. ನನ್ನದು ವಿನಂತಿ ಇದೆ ನಿಮ್ಮ ಸರ್ಕಾರದಲ್ಲಿ ಇದನ್ನು ಬಹಳ ಸೀರಿಯಸ್ ಆಗಿ ತೆಗೆದುಕೊಂಡು ಇಂಪ್ಲಿಮೆಂಟ್ ಮಾಡಬೇಕು ಎಂದು. ನನ್ನದು ಒಂದು ಚಾಲೇಂಜ್ ಇದೆ, ಆಶ್ರಮ ಸ್ಕೂಲ್‌ಗೆ ಯಾರ ಹುಡುಗ ಹೋಗುತ್ತಿದ್ದಾನೆ ಕಳೆದ 20 ವರ್ಷದಿಂದದ ಈ ಶಾಲೆಗಳು ಹಾಗೆಯೇ ಇವೆ.

ಅದು ಯಾವುದೇ ಸರ್ಕಾರ ಇರಲಿ. ಕಳೆದ 20 ವರ್ಷಗಳಿಂದ ಈ ಆಶ್ರಮ ಶಾಲೆಗಳಲ್ಲಿ ಓದಿದ ಹುಡುಗ ಒಬ್ಬರೂ ಸಹ ಪದವೀಧರ ಆಗಲಿಲ್ಲ, ಏಕೆಂದರೆ

ಅವರಿಗೆ ಆ ಸೌಲಭ್ಯವೇ ಇಲ್ಲ. ವಿದ್ಯಾಭ್ಯಾಸ ಮಾಡುವುದಕ್ಕೆ ಅಲ್ಲಿ ಸರಿಯಾದ ಸೌಲಭ್ಯ ಇಲ್ಲ. ಆ ಆಶ್ರಮ ಶಾಲೆಗಳಲ್ಲ ಒಬ್ಬರೂ ಷೆಡ್ಯೂಲ್ಡ್ ಕ್ಯಾಸ್ಟ್ ಹುಡುಗ ಇಲ್ಲ. ಯಾವ ಸಮಾಜವನ್ನು ಮುಂದೆ ತರಬೇಕೆಂದು ತಾವು ಪ್ರಯತ್ನಮಾಡುತ್ತಿದ್ದಿರೋ ಅವರಿಗೆ ಮೊದಲು ವಿದ್ಯಾಭ್ಯಾಸವನ್ನು ಕೊಡಬೇಕು. ಏಕೆಂದರೆ ಇದು ಸಂವಿಧಾನದಲ್ಲಿ ಇದೆ. ಒಂದರಿಂದ 16 ವರ್ಷದವರೆಗೂ ಎಲ್ಲರಿಗೂ ಫ್ರೀ ಎಜ್ಯುಕೇಷನ್ ಕೊಡಬೇಕೆಂದು. ಅದರಲ್ಲಿ ತುಳಿಯಲ್ಪಟ್ಟಿರುವಂತಹ ಸಮಾಜಕ್ಕೆ ತಾವು ಹೆಚ್ಚು ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಮಾಜ ಕಲ್ಯಾಣ ಸಚಿವರ ಬಗ್ಗೆ ನನಗೆ ಬಹಳ ಗೌರವ ಇದೆ. ಏಕೆಂದರೆ ತಾವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ, ಈಗ ಫ್ರೀ ಮೆಟ್ರಿಕ್ ಹಾಸ್ಟಲ್‌ಗಳು ಏನು ಇವೆ ಅಲ್ಲಿ ತಾವು ಏನು ಮಾಡುತ್ತಿದ್ದೀರಿ ಒಬ್ಬ ಹುಡುಗರಿಗೆ 150 ರೂಪಾಯಿಗಳನ್ನು ಒಂದು ತಿಂಗಳಿಗೆ ಕೊಡುತ್ತಿದ್ದೀರಿ. ಆ 150 ರೂಪಾಯಿಗಳಲ್ಲಿ ಅವರಿಗೆ ತಾವು ಹೇಗೆ ಊಟ ಹಾಕುತ್ತೀರಿ? ಹೇಗೆ ಅವನಿಗೆ ವಿದ್ಯಾಭ್ಯಾಸ ಕೊಡುತ್ತೀರಿ? ಎನ್ನುವುದನ್ನು ತಾವೇ ಹೇಳಿ. ಇದು ನಮ್ಮ ಭಾರತ ದೇಶದ ಪರಿಸ್ಥಿತಿ ಇದೆ. ತಾವು ಎಲ್ಲಾ ಕಡೆ ಹೇಳುತ್ತಿದ್ದೀರಿ. ನಾವು ಅವರಿಗೆ ಪ್ರಮೋಷನ್ ಕೊಡುತ್ತಿದ್ದೇವೆ ರಿಸರ್ವೇಷನ್ ಕೊಟ್ಟಿದ್ದೇವೆ ಎಂದು ಹೇಳುತ್ತೇವೆ ತಾವು ಏನೇ ಕೊಟ್ಟರೂ ಮೊದಲನೇಯದಾಗಿ ಇವರಿಗೆ ನ್ಯಾಯ ಕೊಡಬೇಕು. ತಾವು ಸ್ವಾತಂತ್ರ್ಯದ ದಿನ ಇಂತಹ ಮಾತುಗಳನ್ನು ಹೇಳಿ ಇಂತಹ ಸುಳ್ಳು ಕೆಲಸಗಳನ್ನು ಮಾಡುತ್ತಿದ್ದೀರಿ ಇದರಿಂದ ನಮಗೆ ಬಹಳ ನಾಚಿಕೆ ಆಗುತ್ತಿದೆ. ಪೋಸ್ಟ್‌ಮೆಟ್ರಿಕ್ ಸಲುವಾಗಿ ತಾವು 300 ರೂಪಾಯಿಗಳನ್ನು ಕೊಡುತ್ತಿದ್ದೀರಿ. ತಾವು ಬಿಚ್ಚು ಮನಸ್ಸಿನಿಂದ ಕೆಲಸ ಮಾಡಬೇಕೆಂದರೂ ಈ ಸಮಾಜವನ್ನು ಮುಂದೆ ತರಬೇಕೆಂದರೂ ತಾವು ತಮ್ಮ ಮನೆಗಳಲ್ಲಿ ಊಟ ಮಾಡುತ್ತೀರಿ. ಯಾರು ಶ್ರೀಮಂತರ ಮಕ್ಕಳ ಸಲುವಾಗಿ ಏನು ಅವಕಾಶ ಇದೆ ಅದೇ ಅವಕಾಶವನ್ನು ತಾವು ಈ ಹುಡುಗರಿಗೂ ಮಾಡಿಕೊಡಬೇಕು.

ಅದು ಸಾಧ್ಯವಾಗದೇ ಹೋದರೆ ಅದರಲ್ಲಿ 50 ಪರ್ಸೆಂಟ್ ಆದರೂ ಮಾಡಿಕೊಡಿ. ಇದರಿಂದ ಆ ಸಮಾಜವನ್ನು ಮುಂದೆ ತರಲು ಸಾಧ್ಯವಾಗುತ್ತದೆ. ತಾವು ಹಾಸ್ಟಲ್‌ಗಳಲ್ಲಿ ಒಳ್ಳೆಯ ಊಟ ಕೊಡಬೇಕು. ಈಗ ಕೊಡುತ್ತಿರುವ ಊಟ ಸರಿಯಾಗಿಲ್ಲ. ಇನ್ನು ನಮ್ಮ ಭಾಗದಲ್ಲಿ ಜೋಳದ ರೊಟ್ಟಿ ಇದೆ. ಈ ಹಾಸ್ಟಲ್‌ಗಳಲ್ಲಿ 100 ಹುಡುಗರಿಗೆ ಒಬ್ಬ ಹೆಲ್ಪರ್ ಎಂದು ಇಟ್ಟಿದ್ದೀರಿ. ಅವರು ಜೋಳದ ರೊಟ್ಟಿ ಮಾಡಬೇಕು. ರೊಟ್ಟಿ ಮಾಡುವುದಕ್ಕೆ ಜನ ಹೆಚ್ಚು ಬೇಕು. ಬರೇ ಅನ್ನ ಮಾಡುವುದಿದ್ದರೆ ನಡೆಯುತ್ತದೆ ಅದನ್ನು ಒಬ್ಬರೇ ಮಾಡಬಹುದು. ರೊಟ್ಟಿ ಕೈಯಲ್ಲಿ ಮಾಡಬೇಕು. ಆ ಕೆಲಸಕ್ಕೆ ಹೆಚ್ಚು ಸಿಬ್ಬಂದಿಯನ್ನು ತಾವು ಅಪಾಯಿಂಟ್ ಮಾಡಬೇಕು, ಇನ್ನು ಯಾವ ಹಾಸ್ಟಲ್‌ನಲ್ಲಿಯೂ ಮೆಡಿಕಲ್ ಟ್ರೀಟ್‌ಮೆಂಟ್ ಇಲ್ಲ. ಇನ್ನೊಂದು ನನ್ನದು ಚಾಲೆಂಜ್ ಇದೆ. ನಮ್ಮ ರಾಜ್ಯದಲ್ಲಿ ಯಾವ ಹಾಸ್ಟಲ್‌ನಲ್ಲಿಯೂ ಲೈಬ್ರರಿ ಇಲ್ಲ. ಮತ್ತೆ ಅವನ ಟ್ಯೂಷನ್ ಸಲುವಾಗಿ 100 ರೂಪಾಯಿಗಳನ್ನು ಕೊಡುತ್ತಿದ್ದೀರಿ. 100 ರೂಪಾಯಿಗಳಿಗೆ ಯಾರು ಟ್ಯೂಷನ್ ಕೊಡುತ್ತಾರೆ. ಯಾರೂ ಬರುವುದಿಲ್ಲ.

ಪ್ರೈವೇಟ್‌ನಲ್ಲಿ ಒಂದು ಸಬ್ಜೆಕ್ಟ್‌ಗೆ ಒಂದು ಸಾವಿರ ರೂಪಾಯಿ ಕೊಡುತ್ತಾರೆ. ತಾವು ಈ ಬಡ ಹುಡುಗರ ಸಲುವಾಗಿ 100 ರೂಪಾಯಿಗಳನ್ನು ಕೊಡುತ್ತಿದ್ದೀರಿ. ಅದರ ಸಲುವಾಗಿ ತಾವು ವಿಶೇಷವಾಗಿ ಬಿ.ಎ., ಬಿ.ಎಡ್, ಬಿ.ಎಸ್ಸಿ, ಬಿ.ಎಡ್, ಕ್ವಾಲಿಫೈಡ್ ಟೀಚರ್‌ನ್ನು ತಾವು ಟ್ಯೂಷನ್ ಸಲುವಾಗಿ ಅಪಾಯಿಂಟ್ ಮಾಡಬೇಕು. ಮತ್ತು ಒಳ್ಳೆಯ ಲೈಬ್ರರಿ ಇರಬೇಕು. ಮತ್ತು ಹಾಸ್ಟೆಲ್‌ಗಳಲ್ಲಿ ಎಲ್ಲಾ ಸೌಲಭ್ಯಗಳು

ಇರಬೇಕು. ಸುಮ್ಮನೆ ಎಲ್ಲಾ ಕಡೆ ಹಾಸ್ಟಲ್‌ಗಳನ್ನು ಮಾಡುತ್ತೀರಿ. ಈ ಹಾಸ್ಟಲ್‌ಗಳ ಸಲುವಾಗಿ ನೀವು ಇಷ್ಟು ಬಡ್ಜೆಟ್ ಇಟ್ಟಿದ್ದೇವೆ ಎಂದು ಹೇಳುತ್ತೀರೇ ಹೊರತು ಅಲ್ಲಿ ಏನೂ ಕೆಲಸ ಆಗುತ್ತಿಲ್ಲ. ನಮ್ಮದು ತಮ್ಮಲ್ಲಿ ವಿನಂತಿ ಇದೆ ಒಳ್ಳೆಯ ವಿದ್ಯಾಭ್ಯಾಸ ಸಲುವಾಗಿ ಒಳ್ಳೆಯ ಹಾಸ್ಟಲ್ ಒಳ್ಳೆಯ ಟ್ಯೂಷನ್ ಕೊಡಬೇಕು.

4.20 ಪಿ.ಎಂ.

ಇನ್ನು ಡಿಗ್ರಿ ಸ್ಟೂಡೆಂಟ್‌ಗಳ ಹಾಸ್ಟೆಲ್‌ಗಳ ಬಗ್ಗೆ ಹೇಳುವುದಾದರೆ, ಎಕ್ಸಾಮಿನೇಷನ್ ಪೀರಿಯಡ್‌ನಲ್ಲಿ ಹಾಸ್ಟೆಲ್‌ಗಳನ್ನು ಮುಚ್ಚಿಬಿಡುತ್ತಾರೆ. ಇದರಿಂದಾಗಿ ರೂರಲ್ ಕಡೆಯಿಂದ ಹಾಗೂ ಪಟ್ಟಣಗಳ ಕಡೆಯಿಂದ ಬಂದಿರತಕ್ಕಂಥ ಹುಡುಗರಿಗೆ ಬಹಳ ಕಷ್ಟವಾಗುತ್ತದೆ. ಆಮೇಲೆ, ಕಾಲೇಜು ಸ್ಟಾರ್ಟ್ ಆದ ಎರಡು ತಿಂಗಳ ಮೇಲೆ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತಾರೆ. ಇದರಿಂದಾಗಿಯೂ ಹುಡುಗರಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಇನ್ನು ಮುಂದೆ ಕಾಲೇಜು ಪ್ರಾರಂಭವಾದ ತಕ್ಷಣ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿ, ಎಕ್ಸಾಮಿನೇಷನ್ ಮುಗಿಯುವರೆಗೂ ಹಾಸ್ಟೆಲ್‌ಗಳನ್ನು ತೆರೆಯಬೇಕು. ಜೊತೆಗೆ ಹುಡುಗರಿಗೆ ಒಳ್ಳೆಯ ಟ್ಯೂಷನ್ ಕೊಡುವುದರ ಜೊತೆಗೆ ಸ್ಪೆಷಲ್ ಕ್ಲಾಸ್‌ಗಳನ್ನು ತೆಗೆದುಕೊಂಡು ಪಾಠ ಕಲಿಸಿಕೊಡಬೇಕು. ಎಸ್.ಸಿ, ಎಸ್.ಟಿ. ಹಾಸ್ಟೆಲ್‌ಗಳ ಬಗ್ಗೆ ಪರಿಶೀಲನೆ ಮಾಡಲು ಗುರುಪ್ರಸಾದ್ ಎನ್ನುವವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಲಾಗಿತ್ತು, ಆ ಸಮಿತಿಯು ಹಾಸ್ಟೆಲ್‌ಗಳ ಅಭಿವೃದ್ಧಿ ಮಾಡುವ ಬಗ್ಗೆ ಹಲವಾರು ರೆಕಮೆಂಡೇಷನ್‌ಗಳನ್ನು ಮಾಡಲಾಗಿದೆ. ಆ ರೆಕಮೆಂಡೇಷನ್ ಸರ್ಕಾರ ಇಂಪ್ಲಿಮೆಂಟ್ ಮಾಡುತ್ತದೆಯೇ ಎಂದು ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕು.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಉರ್ದುವಿನಲ್ಲಿ ಮಾತನಾಡಿದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಅವರು ಮಾತನಾಡಲಿ, ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಅವರು ಮಾತನಾಡುವುದು ಕಡತಕ್ಕೆ ಹೋಗುತ್ತಿಲ್ಲ. ಈಗ ಅವರು ಮಾತನಾಡುತ್ತಿರುವುದು ಬಹಳ ಜನಕ್ಕೆ ಅರ್ಥವಾಗುತ್ತಿಲ್ಲ.

ಉಪಾಧ್ಯಕ್ಷರು : ಅವರು ಭಾಷಣವನ್ನು ಮಾಡಿಬಿಟ್ಟಿದ್ದಾರೆ. ಈಗ ಅದನ್ನು ಚೇಂಜ್ ಮಾಡಲಿಕ್ಕೆ ಬರುತ್ತದೆ ಏನು?

(ಗೊಂದಲ)

ಉಪಾಧ್ಯಕ್ಷರು : ತಾವು ಆ ತರಹ ಸಿಟ್ಟು ಮಾಡಿಕೊಂಡು ಮಾತನಾಡುವುದು ಬೇಡ. ಸ್ವಲ್ಪ ಸಮಾಧಾನದಿಂದ ಮಾತನಾಡಿ.

(ಗೊಂದಲ)

ಉಪಾಧ್ಯಕ್ಷರು : ನಿಮಗೂ ಇದು ಅರ್ಥವಾಗುವುದಿಲ್ಲವೆಂದು ಛೇರ್ ಕಡೆ ಕೈ ಮಾಡಿ ತೋರಿಸುವುದು ಸರಿಯೇ?

ಶ್ರೀ ವಾಟಾಳ್ ನಾಗರಾಜ್ : ತಮಗೆ ಅರ್ಥವಾಯಿತು ಎಂದು ಇಟ್ಟುಕೊಳ್ಳೋಣ. ಆದರೆ ಇದರ ಬಗ್ಗೆ ಸರ್ಕಾರದ ನೀತಿ ಏನು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಮಾತಿಗೆ ನನ್ನ ವಿರೋಧವಿಲ್ಲ. ಆದರೆ, ಈ ರಾಜ್ಯದ ಭಾಷೆ ಬಗ್ಗೆ ಒಂದು ನೀತಿ ಇರಬೇಕಲ್ಲ.

(ಗೊಂದಲ)

ಶ್ರೀ ಎನ್.ಎಂ. ನಬಿ : ಮಾನ್ಯ ಹಷ್ಮಿಯವರು ಉರ್ದುವಿನಲ್ಲಿ ಮಾತನಾಡಲು ಈ ಹಿಂದೆ ಎರಡು ಮೂರು ಸಾರಿ ಅಧ್ಯಕ್ಷರಿಂದ ಪರ್ಮಿಷನ್ ಪಡೆದುಕೊಂಡಿದ್ದರು. ಮಾನ್ಯ ವಾಟಾಳ್ ನಾಗರಾಜ್‌ರವರ ಬಲವಂತಕ್ಕೆ ಅವರು ಕನ್ನಡದಲ್ಲೇ ಮಾತನಾಡಲು ಪ್ರಯತ್ನ ಮಾಡಿದ್ದಾರೆ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಉರ್ದು ಭಾಷೆ ಪ್ರಾಬಲ್ಯ ಇರುವ ಬೀದರ್ ಕಡೆಯಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರು ಕನ್ನಡವನ್ನು ಕಲಿತು ಕನ್ನಡದಲ್ಲಿ ಭಾಷಣ ಮಾಡುವುದಕ್ಕೆ ಪ್ರಯತ್ನ ಪಟ್ಟಿರುವುದಕ್ಕಾಗಿ ನಾವುಗಳೆಲ್ಲರೂ ಅವರನ್ನು ಮೊದಲು ಅಭಿನಂದಿಸಬೇಕಾಗುತ್ತದೆ. ಪಾರ್ಲಿಮೆಂಟ್‌ನಲ್ಲೂ ಕೂಡ ಉರ್ದುವಿನಲ್ಲಿ, ಕನ್ನಡದಲ್ಲಿ, ಇಂಗ್ಲೀಷ್‌ನಲ್ಲಿ ವ್ಯಾಖ್ಯಾನ ಮಾಡುವುದಕ್ಕೆ ಅವಕಾಶವಿರುವಾಗ ಇಲ್ಲಿ ಮಾತನಾಡಿದರೆ ಏನೂ ತಪ್ಪಾಗುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಎದ್ದು ನಿಂತು ಮಾನ್ಯ ಸದಸ್ಯರು ಮಾತನಾಡತಕ್ಕಂಥಾದ್ದು ಕಡತಕ್ಕೆ ಹೋಗುವುದಿಲ್ಲವೆಂದು ಹೇಳಿದ್ದಾರೆ. ಕಡತಕ್ಕೆ ಹೋಗದೇ ಇರುವುದು ದೊಡ್ಡ ಅನಾಹುತ ಏನಲ್ಲ. ಮಾನ್ಯ ಸದಸ್ಯರು ಕನ್ನಡದಲ್ಲಿ ಸುಲಭವಾಗಿ ಮಾತನಾಡುವುದಕ್ಕೆ ಸಾಧ್ಯವಾಗದೇ ಇರುವುದರಿಂದ ಮಾತ್ರ ಉರ್ದುವಿನಲ್ಲಿ ಮಾತನಾಡಿದ್ದಾರೆಂದು ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಅವರ ಭಾಷಣಕ್ಕೆ ನಾನು ಅಡ್ಡಿಪಡಿಸುತ್ತಿಲ್ಲ. ಅವರು ಕನ್ನಡದಲ್ಲಿ ಭಾಷಣ ಮಾಡುತ್ತಿದ್ದಾಗ ನಾನೂ ಸಹಾ ಕುತೂಹಲದಿಂದ ಆಲಿಸುತ್ತಿದ್ದೆ. ಅವರು ಉರ್ದುವಿನಲ್ಲಿ ಮಾತನಾಡಿದಾಗ ನಾನು ಬೇರೆ ಭಾಷೆಯನ್ನು ವಿರೋಧ ಮಾಡಬೇಕೆಂದು ಹೇಳಲಿಲ್ಲ. ಭಾಷೆಯನ್ನು ಬೆಳೆಸುವುದರ ಬಗ್ಗೆ ಸರ್ಕಾರದ ನೀತಿ ಏನು? ನೀತಿಯನ್ನು ಬದಲಾವಣೆ ಮಾಡುವುದಾದರೆ ಮಾಡಲಿ. ಆದರೆ, ನಾನು ವೈಯಕ್ತಿಕವಾಗಿ ನಾನು ಸರ್ಕಾರದ ನೀತಿ ಪರವಾಗಿ ಇದ್ದೇನೆ. ಸರ್ಕಾರದ ನೀತಿ ಬದಲಾಗಿದೆ, ನಾಳೆಯಿಂದ ಉರ್ದು, ತೆಲುಗು, ತಮಿಳು, ಮರಾಠಿ, ಮಲೆಯಾಳಿ, ಹಿಂದಿ ಯಾವ ಭಾಷೆಯಲ್ಲಿ ಭಾಷಣ ಮಾಡಿ ಎಂದು ಹೇಳಿದರೆ ನನ್ನ ಅಭ್ಯಂತರವೇನೂ ಇಲ್ಲ. ಆದುದರಿಂದ ಸರ್ಕಾರದ ನೀತಿ ಏನಿದೆ ಎಂಬ ಬಗ್ಗೆ ಇವತ್ತು ತೀರ್ಮಾನವಾಗಲಿ. ವೈಯಕ್ತಿಕವಾಗಿ ಅವರ ಮೇಲೆ ದ್ವೇಷವಿಲ್ಲ. ಇಲ್ಲಿ ನಾನು ಯಾರನ್ನೂ ವಿರೋಧ ಮಾಡುವುದಕ್ಕೆ ಬಂದಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಷ್ಮಿಯವರು ಕನ್ನಡದಲ್ಲಿ ಭಾಷಣ ಮಾಡಿದ್ದಾರೆ. ಕಡೆಯದಾಗಿ ಕೆಲವು ಭಾವನೆಗಳನ್ನು ಕನ್ನಡದಲ್ಲಿ ವ್ಯಕ್ತಮಾಡುವುದಕ್ಕೆ ಸಾಧ್ಯವಾಗದೇ ಇದ್ದುದರಿಂದ ಅದನ್ನು ಉರ್ದುವಿನಲ್ಲಿ ಹೇಳಿದ್ದಾರೆ. ಉರ್ದುವಿನಲ್ಲಿ ಭಾಷಣ ಮಾಡಿದರೆ ಅದು ಕಡತಕ್ಕೆ ಹೋಗುವುದಿಲ್ಲವೆಂದು ಹೇಳಿರುವುದು ನಿಜ. ಏಕೆಂದರೆ ಅದಕ್ಕೆ ನಾವು ಏರ್ಪಾಡು ಮಾಡಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಇದರ ಬಗ್ಗೆ ಸರ್ಕಾರದ ನೀತಿ ಏನೆಂದು ಕೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ 'ಕನ್ನಡ ಆಡಳಿತ ಭಾಷೆ' ಎಂಬುದು ಸರ್ಕಾರದ ನೀತಿಯಾಗಿದೆ. ಆದರೆ,

ಕೆಲವು ಸಂದರ್ಭಗಳಲ್ಲಿ ಕೆಲವು ಮಾನ್ಯ ಸದಸ್ಯರುಗಳು ಕನ್ನಡದಲ್ಲಿ ತಮ್ಮ ಅನಿಸಿಕೆಯನ್ನು ಪ್ರತಿಪಾದನೆ ಮಾಡಲು ಶಕ್ತಿ ಇಲ್ಲದಿದ್ದರೆ ಕೆಲವು ಪದಗಳನ್ನು ಇತರೇ ಭಾಷೆಗಳಲ್ಲಿ ಬಳಸಲಿಕ್ಕೆ ಅವಕಾಶವೂ ಉಂಟು. ಕೆಲವು ಸಂದರ್ಭಗಳಲ್ಲಿ ನಾವೂ ಇಂಗ್ಲೀಷ್ ಭಾಷೆಯನ್ನು ಬಳಸುತ್ತೇನೆ. ಈಗ ಆ ಮಾನ್ಯ ಸದಸ್ಯರು ಬಹುತೇಕ ಭಾಷಣವನ್ನು ಕನ್ನಡದಲ್ಲೇ ಮಾತನಾಡಿ ಸ್ವಲ್ಪ ಮಾತ್ರ ಉರ್ದುವಿನಲ್ಲಿ ಮಾತನಾಡಿದ್ದಾರೆ. ಸರ್ಕಾರದ ನೀತಿ ವಿಷಯ ಬಂದಾಗ ಮಾತ್ರ, ಕರ್ನಾಟಕದಲ್ಲಿ ಕನ್ನಡವೇ ರಾಜ್ಯ ಭಾಷೆ. ಆದರೆ ಸದನದಲ್ಲಿ ಮಾತ್ರ ಕೆಲವು ಮಾನ್ಯ ಸದಸ್ಯರುಗಳು ಬೇರೆ ಭಾಷೆ ಮಾತನಾಡಲು ಅವಕಾಶವಿದೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಮಾನ್ಯ ಅಧ್ಯಕ್ಷರೇ, ಇದೇ ಸಮಯದಲ್ಲಿ ಸರಕಾರದಲ್ಲಿ ನನ್ನ ಬೇಡಿಕೆ ಒಂದು ಇದೆ. ನಾನು ಕನ್ನಡವನ್ನು ಕಲಿಯಲು ಬಹಳ ಪ್ರಯತ್ನ ಮಾಡುತ್ತಾ ಇದ್ದೇನೆ. ಈಗ ನಾನು ಕನ್ನಡದಲ್ಲಿಯೇ ಭಾಷಣವನ್ನೂ ಕೂಡ ಮಾಡಿದ್ದೇನೆ. ನಮ್ಮ ಊರ್ದು ಶಾಲೆಗಳಿಗೆ ಒಂದು ಅಡಿಷನಲ್ ಕನ್ನಡ ಟೀಚರ್‌ನ್ನು ಕೊಡಲು ನೀವು ಮನಸ್ಸು ಮಾಡಿದ್ದೀರೋ? ಇದನ್ನು ತಾವು ಪ್ರಾಮಾಣಿಕವಾಗಿ ಹೇಳಬೇಕು. ಹೀಗಿರುವಾಗ ನಾವು ಕನ್ನಡ ಕಲಿಯುವುದಾದರೂ ಹೇಗೆ? ಈ ಬಗ್ಗೆ ತಾವುಗಳು ಪ್ರಾಮಾಣಿಕವಾಗಿ ಹೇಳಬೇಕಾಗುತ್ತದೆ. ಅದನ್ನು ಬಿಟ್ಟು ಉರ್ದುಮಾತನಾಡ ಬೇಡಿ, ಕನ್ನಡ ಮಾತನಾಡಿ ಅಂದರೆ ಹೇಗೆ? ಹೀಗೆ ಸವಾಲು ಹಾಕಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಈ ಸವಾಲನ್ನು ಹಷ್ಮಿಯವರು ಸರಕಾರಕ್ಕೆ ಹಾಕಬೇಕು. ಅಂಥ ಸರಕಾರಕ್ಕೆ ಮಂಗಳಾರತಿ ಎತ್ತಿ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ : ಹಷ್ಮಿಯವರು ಹೇಳುವುದು ಸರಿಯಾಗಿದೆ. ಉರ್ದುಶಾಲೆಗಳಲ್ಲಿ ಬೇಕಾಗುವಷ್ಟು ಕನ್ನಡ ಅಧ್ಯಾಪಕರನ್ನು ಹಾಕಬೇಕು. ಅವರು ಸರಕಾರದ ಮೇಲೆ ಸವಾಲು ಹಾಕುತ್ತಿದ್ದಾರೆಯೇ ಹೊರತು ಬೇರೆ ಯಾರ ಮೇಲೆಯೂ ಸವಾಲು ಹಾಕುತ್ತಾ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವೊತ್ತು ರಜೆ ಇದ್ದರೂ ಕೂಡ ಕಲಾಪಗಳನ್ನು ಮಾಡಬೇಕೆಂದು ಇಲ್ಲಿ ಸದನದಲ್ಲಿ ಕುಳಿತಿದ್ದೇವೆ. ನಮ್ಮ ಶಾಸಕರು ಮಾತನಾಡಬೇಕು. ರಾತ್ರಿ ಹತ್ತು ಗಂಟೆಯಾದರೂ ಅಡ್ಡಿ ಇಲ್ಲ.

(ಗೊಂದಲ)

ಉಪಾಧ್ಯಕ್ಷರು : ಹಷ್ಮಿಯವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ, ಅವರಿಗೆ ಅಡ್ಡಿಪಡಿಸಬೇಡಿರಿ ಸುಮ್ಮನೆ ಅಡ್ಡಿಪಡಿಸಿ ಸಮಯ ವೇಸ್ಟ್ ಮಾಡಬೇಡಿ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಮಾನ್ಯ ಅಧ್ಯಕ್ಷರೇ ಈ ಸರಕಾರಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಾ ಇದ್ದೇನೆ. ಬ್ಯಾಕ್‌ವರ್ಡ್ ಮತ್ತು ಮೈನಾರಿಟಿಯವರಿಗೆ ಒಂದು ಪ್ರತ್ಯೇಕ ಸಚಿವ ಖಾತೆಯನ್ನು ಕೊಟ್ಟಿದ್ದಕ್ಕಾಗಿ ಸರಕಾರವನ್ನು ಅಭಿನಂದಿಸುತ್ತೇನೆ. ಆ ಇಲಾಖೆಯ ಮಂತ್ರಿಯವರಲ್ಲಿ ನಾನು ಒಂದು ಬೇಡಿಕೆಯನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಸಚಿವರು ನಮ್ಮ ಭಾಗದವರು ಇದ್ದಾರೆ, ನಾನು ವೈಯಕ್ತಿಕವಾಗಿ ಅವರ ಜೊತೆಗೆ ಮಾತನಾಡಿದ್ದೇನೆ. ಅವರು ಬಂದ ಮೇಲೆ ಸ್ವಲ್ಪ ಹೆಚ್ಚಿನ ಡೆವಲಪ್‌ಮೆಂಟ್ ಮಾಡಿದ್ದಾರೆ. ಮೈನಾರಿಟಿ ಮತ್ತು ಬ್ಯಾಕ್‌ವರ್ಡ್ಸ್ ಸಲುವಾಗಿ ಸರಕಾರದಲ್ಲಿ ಯಾವ ಸ್ಕೀಮ್‌ಗಳು ಇವೆ. ಆ ಸ್ಕೀಮ್‌ಗಳು ಇಲಾಖೆಯವರು ಇಂಪ್ಲಿಮೆಂಟ್ ಮಾಡುತ್ತಾ ಇಲ್ಲ, ಹೀಗಿರುವಾಗ ಇಲಾಖೆಯ ಸ್ಕೀಮ್‌ಗಳು ನಡೆಯುತ್ತಿವೆಯೋ ಅಥವಾ ಇಲ್ಲವೋ

ಎಂಬ ಬಗ್ಗೆ ತಾವು ಒಂದು ವಾಚ್‌ಡಾಗ್ ಕಮಿಟಿಯನ್ನು ಮಾಡಬೇಕು. ಯಾರು ಸಂಬಂಧಪಟ್ಟವರು ಸ್ಕೀಮ್‌ಗಳನ್ನು ಇಂಪ್ಲಿಮೆಂಟ್ ಮಾಡುತ್ತಾ ಇಲ್ಲ ಅವರ ಮೇಲೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ರೀತಿಯಾಗಿ ಮಾಡದಿದ್ದರೆ ಅವರು ಸ್ಕೀಮ್‌ಗಳನ್ನು ಇಂಪ್ಲಿಮೆಂಟ್ ಮಾಡುವುದೇ ಇಲ್ಲ. ಇಲಾಖೆಯವರು ನಮಗೆ ಬಹಳ ಹೆರ್‍ಯಾಸ್‌ಮೆಂಟ್ ಮಾಡುತ್ತಾ ಇದ್ದಾರೆ. ಈ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಎನ್‌ಟಿ, ಎಸ್‌ಸಿ, ಬ್ಯಾಕವರ್ಡ್‌ಕ್ಲಾಸ್ ಸ್ಕೀಮ್‌ಗಳು ಯಾವುದೂ ಸರಿಯಾಗಿ ಇಂಪ್ಲಿಮೆಂಟ್ ಆಗುತ್ತಾ ಇಲ್ಲ.

ಈ ಸ್ಕೀಮ್‌ಗಳು ಬ್ಯಾಂಕ್ ಅಧಿಕಾರಿಗಳ ಹತ್ತಿರ ಹೋದಾಗ ಅವರು ಸಾಮಾನ್ಯವಾಗಿ ರಿಜೆಕ್ಟ್ ಮಾಡುತ್ತಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಾವು ಆಕ್ಷನ್ ತೆಗೆದುಕೊಳ್ಳಬೇಕು. ಮಾನ್ಯ ದೇವೇಗೌಡ ಸಾಹೇಬರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಮುಸಲ್ಮಾನ ಅಲ್ಪಸಂಖ್ಯಾತರ ಮಕ್ಕಳಿಗೆ ಕೆಲವು ರೆಸಿಡೆನ್‌ಷಿಯಲ್ ಶಾಲೆಗಳನ್ನು ಮೊರಾರ್ಜಿದೇಸಾಯಿ ವಸತಿಶಾಲೆಗಳನ್ನು ಕೊಟ್ಟರು. ಹೀಗೆ ಐದು ರೆಸಿಡೆನ್‌ಷಿಯಲ್ ಶಾಲೆಗಳನ್ನು ಕೊಟ್ಟರು. ನಿಜವಾಗಿಯೂ ಅವರ ಮನಸ್ಸಿನಲ್ಲಿ ಒಂದು ಒಳ್ಳೆಯ ಅಭಿಪ್ರಾಯದಿಂದ ಇದನ್ನು ಮಾಡಿದ್ದರು. ಏತಕ್ಕೆಂದರೆ ದಲಿತರಿಗಿಂತಲೂ ತುಳಿತಕ್ಕೆ ಸಿಕ್ಕ ಸಮಾಜವೆಂದರೆ ಮುಸಲ್ಮಾನ ಸಮಾಜ. ಮಾನ್ಯ ಉಪಮುಖ್ಯಮಂತ್ರಿಯವರಲ್ಲಿ ನಾನು ಕೇಳುವುದೇನೆಂದರೆ ಆ ಐದು ರೆಸಿಡೆನ್‌ಷಿಯಲ್ ಸ್ಕೂಲ್‌ಗಳಲ್ಲಿ ಎಷ್ಟು ಪ್ರಾರಂಭವಾಗಿವೆ ಎಂಬುದನ್ನು ಹೇಳಬೇಕು. ಕೇವಲ ಮೂರು ಶಾಲೆಗಳು ಮಾತ್ರ ಈ ವರ್ಷದಿಂದ ಪ್ರಾರಂಭವಾಗಿದೆ. ಹೋದ ವರ್ಷ ಕೊಟ್ಟ ಶಾಲೆಗಳು ಈ ವರ್ಷದಲ್ಲಿ ಪ್ರಾರಂಭವಾಗಿವೆ. ಮಾನ್ಯ ದೇವೇಗೌಡರವರು ಮುಖ್ಯಮಂತ್ರಿಯವರಿದ್ದಾಗ ಗುಲ್ಬರ್ಗಕ್ಕೆ ಬಂದಿದ್ದರು.

ನಮ್ಮ ಮುಸಲ್ಮಾನ ಸಮಾಜಕ್ಕೆ ಇಂಥ ಒಂದು ಒಳ್ಳೆಯ ಯೋಜನೆಯನ್ನು ಕೊಟ್ಟಿದ್ದಕ್ಕಾಗಿ ಅವರನ್ನು ಗುಲ್ಬರ್ಗದಲ್ಲಿ ಸ್ವಾಗತ ಮಾಡಲು ನಾನು 40 ಲಾರಿಗಳಲ್ಲಿ ಜನರನ್ನು ಸಂತೋಷದಿಂದ ಕರೆದುಕೊಂಡು ಬಂದಿದ್ದೆನು. ಆಗ ನಾನು ಮಾನ್ಯ ದೇವೇಗೌಡಜೀಯವರನ್ನು ಭೇಟಿಯಾಗಿ ನಮ್ಮ ಬೀದರ್‌ಗೆ ಒಂದು ರೆಸಿಡೆನ್‌ಷಿಯಲ್ ಸ್ಕೂಲ್‌ನ್ನು ಕೊಡಿ. ನಮ್ಮ ಬೀದರ್ ಬಹಳ ಹಿಂದುಳಿದ ಪ್ರದೇಶ ಎಂದು ಕೇಳಿಕೊಂಡಿದ್ದೆನು. ಕೇಂದ್ರ ಸರಕಾರದಿಂದ ನಮಗೆ ಬಹಳ ಹೆಲ್ಪ್ ಕೂಡ ಸಿಗುತ್ತದೆ ಎಂದು ಹೇಳಿದಾಗ ಬೀದರ್‌ಗೂ ಒಂದು ರೆಸಿಡೆನ್‌ಷಿಯಲ್ ಸ್ಕೂಲ್ ಸೇರಿ ಇನ್ನೂ ಐದು ಸ್ಕೂಲ್‌ಗಳನ್ನು ಕೊಡುತ್ತೇನೆ ಎಂದು ಹೇಳಿದರು. ಅವರು ಮೊದಲು ಹೇಳಿದ ಐದು ಶಾಲೆಗಳು ಇನ್ನೂ ಸ್ಟಾರ್ಟ್ ಆಗಿಲ್ಲ ಮತ್ತೆ ಐದನ್ನು ಎಲ್ಲಿ ಪ್ರಾರಂಭ ಮಾಡುತ್ತಾರೆ? ಆದುದರಿಂದ ಸರಕಾರದಲ್ಲಿ ನನ್ನ ವಿನಂತಿ ಏನೆಂದರೆ ನಾನು ಏನಾದರೂ ಹೇಳಿದರೆ ಮಾನ್ಯ ಸಿಂಧ್ಯಾರವರು ನಮ್ಮ ಮೇಲೆ ಸಿಟ್ಟಿಗೇಳುತ್ತಾರೆ, ಒಮ್ಮೆ ಹಾಗೆ ಮಾಡಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸಿಟ್ಟು ಯಾವಾಗಲೂ ಹೆಚ್ಚು ಪ್ರೀತಿ ಇರುವವರ ಮೇಲೆ ಬರುತ್ತದೆ. ನಾನು ಹಷ್ಮಿಯವರ ಮೇಲೆ ಸಿಟ್ಟುಮಾಡಿಕೊಳ್ಳದೇ ಮಾನ್ಯ ಯಡಿಯೂರಪ್ಪನವರ ಮೇಲೆ ಸಿಟ್ಟು ಮಾಡಿಕೊಳ್ಳಲು ಆಗುತ್ತದೆಯೇ?

ಶ್ರೀ ಎಸ್. ಸುರೇಶ್‌ಕುಮಾರ್ : ಹಾಗಾದರೆ ಸಿಂಧ್ಯಾರವರಿಗೆ ಅಪ್ಪಚ್ಚುರಂಜನ್ ಮೇಲೆ ಬಹಳಷ್ಟು ಪ್ರೀತಿ ಇತ್ತು ಎಂದು ಕಾಣುತ್ತದೆ...

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರಿಗೆ ಐದು ವಸತಿ ಶಾಲೆಗಳನ್ನು ಕೊಡಲಾಗುವುದು....

ಉಪಾಧ್ಯಕ್ಷರು : ಅವರು ಮಾತನಾಡುವಾಗ ನೀವು ಮಾತನಾಡುವುದು ಬೇಡ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಅವರು ಈಲ್ಡ್ ಆಗಿದ್ದಾರೆ. ಮಾತನಾಡುವ ವಿಚಾರಗಳನ್ನು ಮಾತನಾಡಬೇಕಾಗುತ್ತದೆ. ಮಾನ್ಯ ಉಪಮುಖ್ಯಮಂತ್ರಿಯವರು ಇಲ್ಲ ಎಂದು ಹೇಳುತ್ತಿದ್ದಾರೆ. ಯಾವುದೇ ಸಮಾಜದವರನ್ನು ಯಾರೂ ದತ್ತು ತೆಗೆದುಕೊಂಡಿಲ್ಲ. ನಾನು ಸಗೀರ್ ಅಹಮ್ಮದ್ ಆಗಿ ಯಾವುದೇ ಸಮಾಜವನ್ನು ದತ್ತು ತೆಗೆದುಕೊಂಡಿಲ್ಲ. ಆದರೆ ಸರಕಾರದ ನೀತಿಯ ಬಗ್ಗೆ ನಾನು ಪ್ರಶ್ನೆ ಮಾಡುತ್ತಿದ್ದೇನೆ. ಈ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರಿಗೆ ಐದು ವಸತಿ ಶಾಲೆಗಳನ್ನು ಕೊಡುವ ವಾಗ್ದಾನವನ್ನು ಮಾಡಿದ ನಿಮ್ಮ ಸರಕಾರ ಯಾವ ಹಂತದಲ್ಲಿದೆ? ಹೀಗೆ ಹೇಳಿ ಕಣ್ಣೀರು ಒರೆಸುವಂಥ ಕೆಲಸವನ್ನು ಮಾತ್ರ ಮಾಡಿದ್ದೀರಿ. ನಿಮ್ಮ ಏಳು ತಿಂಗಳ ಅವಧಿಯಲ್ಲಿ ಯಾವ ಯಾವ ಭಾಗದಲ್ಲಿ ವಸತಿ ಶಾಲೆಗಳು ಪ್ರಾರಂಭವಾಗಿವೆ? ಯಾವ ಯಾವ ಜಿಲ್ಲೆಗಳಲ್ಲಿ ಮತೀಯ ಅಲ್ಪಸಂಖ್ಯಾತರು ಜಾಸ್ತಿ ಸಂಖ್ಯೆಯಲ್ಲಿದ್ದಾರೆ ಅದನ್ನು ಗುರುತಿಸಿ ಶಾಲೆಗಳನ್ನು ಕೊಡಬೇಕಾಗಿತ್ತು....

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ .. ತಮಗೆ ನಾಳೆ ಅವಕಾಶ ಸಿಕ್ಕಾಗ ತಾವು ಹೇಳುವುದನ್ನು ಹೇಳಬಹುದು. ಈಗ ಬೇಡ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಸ್ವಲ್ಪ ಅವಕಾಶ ಕೊಡಿ. ಮತನಾಡಬೇಕಾದ ಮುಖ್ಯವಿಚಾರಗಳು ಇವೆ. ಈ ವಸತಿ ಶಾಲೆಗಳು ಜನತಾದಳದ ಮುಖಂಡರುಗಳ ಕೈಯಲ್ಲಿ ಇವೆ. ಇವೊತ್ತಿನವರೆಗೂ ಅಂಥ ಸಂಸ್ಥೆಗಳು ರಾಜ್ಯದಲ್ಲಿ ನೊಂದಾಯಿಸಲ್ಪಟ್ಟಿಲ್ಲ.

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಬೇಕು. ಮಾನ್ಯ ಹಷ್ಮಿಯವರು ತಮ್ಮ ಮಾತುಗಳನ್ನು ಬೇಗನೆ ಮುಗಿಸಿಬಿಡಿ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಮಾನ್ಯ ಅಧ್ಯಕ್ಷರೇ, ಎರಡು ವಾರಗಳ ಹಿಂದೆ ನಾನು ಒಂದು ಕಾಲ್‌ಅಟೆನ್‌ಷನ್ ಕೊಟ್ಟಿದ್ದೆ. ಈ ವಿಚಾರವನ್ನು ನಾನು ಪದೇ ಪದೇ ಸರಕಾರದ ಗಮನಕ್ಕೆ ತರುತ್ತಾ ಇದ್ದೇನೆ. ಇಂಥ ಶಾಲೆಗಳು ನಮ್ಮ ಸಮಾಜಕ್ಕೆ ಬೇಕಾಗಿದೆ. ನಾನು ಇದಕ್ಕೆ ಸರಕಾರದ ಮೇಲೆ ಹೇಳುತ್ತಾ ಇಲ್ಲ. 18.6.95ರಲ್ಲಿ ಸರಕಾರದವರು ಒಂದು ನೋಟಿಫಿಕೇಷನ್ ಕೊಟ್ಟಿದ್ದಾರೆ. ಅಂಥ ಒಂದು ಸರಕಾರಿ ಆದೇಶ ಹೊರಡಿಸಿದರು. ಶಿಕ್ಷಣ ಕಾರ್ಯದರ್ಶಿ - 2, ಅಧ್ಯಕ್ಷರು, ಸದಸ್ಯರು, ನಿರ್ದೇಶಕರು ಅಲ್ಪಸಂಖ್ಯಾತ ನಿರ್ದೇಶನಾಲಯ ಇವರೂ ಕೂಡ ಅದರ ಸದಸ್ಯರು ಎಂದು ಒಂದು ಸಮಿತಿಯನ್ನು ಮಾಡಿದರು. ಇದಾದ ಮೇಲೆ ಯಾವ ಟ್ರಸ್ಟ್‌ಗೆ ಬೈಲಾಸ್ ಇಲ್ಲ, ರಿಜಿಸ್ಟರ್ಡ್ ಆಗಿಲ್ಲ ಅಂಥ ಟ್ರಸ್ಟ್‌ಗೆ ಈ ಐದು ಶಾಲೆಗಳನ್ನು ನಡೆಸಲು ಕೊಟ್ಟಿದ್ದೀರಿ. ಮಾನ್ಯ ಉಪ-ಮುಖ್ಯಮಂತ್ರಿಯವರ ಬಗ್ಗೆ ನನಗೆ ಬಹಳ ಗೌರವವಿದೆ. ತಮ್ಮ ಮೇಲೆ ನನಗೆ ಯಾವ ಬೇಸರವೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಎಲ್ಲಾ ವಿಷಯಗಳನ್ನು ಹೇಳುವುದು ಬೇಡ. ಬೀದರ್‌ಗೆ ಒಂದು ಕೊಡಿ ಎಂದು ಕೇಳಿದರೆ ಅವರು ಕೊಡುತ್ತಾರೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ನನ್ನ ಪ್ರಾರ್ಥನೆ ಏನೆಂದರೆ ಈ ಶಾಲೆಗಳನ್ನು ಸರಕಾರದವರೇ ನಡೆಸಬೇಕು. ಅಂತೆಯೇ ಮಾರಾರ್ಜಿದೇಸಾಯಿ ವಸತಿ ಶಾಲೆಗಳನ್ನು ಪ್ರತಿಯೊಂದು ತಾಲ್ಲೂಕಿಗೂ ಕೊಡಬೇಕು. ಯಾವುದೇ ಸಮಾಜಕ್ಕೂ

ಇಂಥ ಶಾಲೆಗಳನ್ನು ಕೊಡುವಾಗ ಸರಿಯಾದ ರೀತಿಯಲ್ಲಿಕೊಡಬೇಕು. ಈಗ ಬಿಸಿಎಂ ಹಾಸ್ಟೆಲ್‌ಗಳಿಗೆ 10 ಸಾವಿರ ಅರ್ಜಿಗಳು ಬರುತ್ತವೆ. ಅದರಲ್ಲಿ ಎಷ್ಟು ಜನರಿಗೆ ನೀವು ಕೊಡುತ್ತೀರಿ?

ಅಡ್ಮಿಷನ್ 50 ಹುಡಗರದ್ದು ಆಗುತ್ತದೆ. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಜಾತಿಗಳಲ್ಲಿ ಒಂದೆರಡು ಜಾತಿ ಬಿಟ್ಟು ಎಲ್ಲಾ ಜಾತಿಗಳೂ ಬರುತ್ತವೆ. ಒಂದು ಹಾಸ್ಟೆಲ್‌ಗೆ 100 ಅಥವಾ 50 ಹುಡುಗರು ಇರಬೇಕು, ನಮ್ಮ ಜಿಲ್ಲೆಯಲ್ಲಿ 10 ಸಾವಿರ ಅರ್ಜಿಗಳು ಬಂದಿದೆ. ನಿಮ್ಮಲ್ಲೆ ಹಿಂದುಳಿದ ಜಾತಿ ಹಾಗೂ ಅಲ್ಪಸಂಖ್ಯಾತರ ಪರವಾಗಿ ವಿನಂತಿ ಇಷ್ಟೆ. ಈ ಜಾತಿಗಳಿಗಾಗಿ ಫ್ರೀ ಪ್ರೈಮರಿಯಿಂದ ಡಿಗ್ರಿತನಕ ಹಾಸ್ಟೆಲ್‌ಗಳನ್ನು ಕೊಡಬೇಕು. ಮೈನಾರಿಟಿ ಅಭಿವೃದ್ಧಿ ನಿಗಮವಿದೆ, ಈ ವಿಷಯದ ಮೇಲೆ ಯಾರೂ ಹೇಳಿಲ್ಲ, ನಾನು ಸರ್ಕಾರದ ಮೇಲೆ ಟೀಕೆ ಟಿಪ್ಪಣಿ ಮಾಡುತ್ತಿಲ್ಲ, ಸಜೆಕ್ಷನ್ ಮಾಡುತ್ತಿದ್ದೇನೆ. ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ಜಾತಿಗಳಿಗೆ ಇಷ್ಟೊಂದು ಹೆರ್‍ಯಾಸ್‌ಮೆಂಟ್ ಇದೆ. ಇದಕ್ಕೆ ನಮ್ಮ್ಮ ಸಮಾಜದ ಜನ ಏನೆಂದು ಹೆಸರು ಕೊಟ್ಟಿದಾದರೆ ಗೊತ್ತೇ, ಮೈನಾರಿಟಿಸ್ ಹೆರ್‍ಯಾಸ್‌ಮೆಂಟ್ ಅಭಿವೃದ್ಧಿ ನಿಗಮ,

ಏಕೆಂದರೆ ಜನ ಅರ್ಜಿ ಹಾಕುತ್ತಾರೆ. ದೀಡ್ ವರ್ಷ ತಿರುಗುತ್ತಾನೆ, ಆ ಕಡೆ ಈ ಕಡೆ, 50 ಸಾವಿರಕ್ಕೆ ಆಟೋ ಬರುತ್ತದೆ. ಅವರು ಸಾಲ ಕೊಡುವುದು 5 ಸಾವಿರ. ಆ ದೀಡ್ ವರ್ಷದಲ್ಲಿ ಬಕ್ರೀದ್, ರಂಜಾನ್ ಮುಂತಾದ ಹಬ್ಬ ಬಂದುಬಿಡುತ್ತದೆ, ಅದು ಮಾಡಿ ಮನೆಗೆ ಹೋಗಿಬಿಡುತ್ತಾನೆ ಆ ದುಡ್ಡು ಅವನ ಮೇಲೆ ಹಾಗೆಯೇ ಡ್ಯೂ ಇರುತ್ತದೆ. ಅದಕ್ಕಾಗಿ ಸರ್ಕಾರದಲ್ಲಿ ನನ್ನ ವಿನಂತಿ ಇಷ್ಟೇ ನಮ್ಮ ಮೈನಾರಿಟಿಸ್‌ಗೆ ನೀವು ಆಟೋಡ್ರೈವಿಂಗ್ ಟ್ರೈನಿಂಗ್ ಕೊಡುತ್ತಿದ್ದೀರಿ,

ನಮ್ಮ ಸಮಾಜದವರು ಹಿಂದುಳಿದ ಜಾತಿಯವರು ಆಟೋವನ್ನೇ ನಡೆಸಬೇಕೇ? ನಾವು ಐಪಿಎಸ್ ಐಎಎಸ್ ಆಗಬಾರದೆ? ಆಟೋಡ್ರೈವಿಂಗ್, ಸೈಕಲ್ ರಿಪೇರಿ ಟ್ರೈನಿಂಗ್? ಇದೆಲ್ಲಾ ಏಕೆ ಸ್ವಾಮಿ? ನೀವು ಐಎಎಸ್ ಐಪಿಎಸ್‌ಗಳ ಟ್ರೈನಿಂಗೂ ಕೊಡಬೇಕು ನಮಗೆ. ನೀವು ಕಂಪ್ಯೂಟರ್ ಟ್ರೈನಿಂಗ್‌ದ್ದು 6 ತಿಂಗಳ ಸರ್ಟಿಫಿಕೇಟ್ ಏನು ಕೊಡುತ್ತಿದ್ದೀರಿ ಅದಕ್ಕೆ ಸರ್ಕಾರದಲ್ಲಿ ವ್ಯಾಲ್ಯೂ ಇಲ್ಲ. ತಾವೂ ಆ ಸರ್ಟಿಫಿಕೆಟ್ ತಂದವರಿಗೆ ಜಾಬ್ ಕೊಡುವುದಿಲ್ಲ ಅದರ ಸಲುವಾಗಿ ತಮ್ಮಲ್ಲಿ ನಮ್ಮದು ವಿನಂತಿ ಇದೆ. ವಾಣಯ್ಯ ಸಾಹೇಬರು ನಮ್ಮ ಮೇಲೆ ಸಿಟ್ಟುಮಾಡಿಕೊಳ್ಳಬೇಡಿ. ಒಂದು ಸಾರಿ ನೀವೂ ಸಿಟ್ಟುಮಾಡಿಕೊಂಡಿದ್ದಿರಿ. ಯುವ ಜನತಾದಳ ಅಧ್ಯಕ್ಷನಾಗಿ ನಿಮಗೆ ಬಹಳ ಸೇವಾ ಮಾಡಿದ್ದೇನೆ, ಈಗ ಎಲ್ಲರೂ ನಿಮ್ಮ ಹಿಂದೆ ಬರುತ್ತಿದ್ದಾರೆ, ಯಾವಾಗ ನಿಮ್ಮಲ್ಲಿ ಅಧಿಕಾರ ಇರಲಿಲ್ಲವೋ ಆಗ ನಾನು ನಿಮ್ಮ ಸೇವೆ ಮಾಡಿದ್ದೇನೆ. ಅದರ ಸಲುವಾಗಿ ನಮ್ಮ ಮಾತು ಕೇಳಬೇಕು. ತಾವು ಡೈರೆಕ್ಟಾಗಿ ಲೋನ್ ಕೊಡಬೇಕು ಮತ್ತು ಒಳ್ಳೆಯ ಟ್ರೈನಿಂಗನ್ನು ನೀವು ಕೊಡಬೇಕು ಮತ್ತು ಎಲ್ಲಾ ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಹುಡುಗರಿಗೆ ಹಾಸ್ಟೆಲನ್ನು ಕಂಪಲ್ಸರಿ ಅಥವಾ ಸ್ಕಾಲರ್‌ಶಿಫ್‌ನ್ನು ಕೊಡ್ಬಬೇಕು. ಇನ್ನೊಂದು ಗಂಗಾ ಕಲ್ಯಾಣ ಯೋಜನೆ ಇದೆ,

ಮೈನಾರಿಟಿಯವರಿಗೆ ಅದರಿಂದೇನೂ ಹೆಲ್ಪಿಲ್ಲ, ಹಿಂದುಳಿದ ವರ್ಗದ 25 ಪರ್ಸೆಂಟ್ ನಮ್ಮ ಜಿಲ್ಲೆ ಜನರಿಗೆ ಕೊಡುತ್ತಿದ್ದೀರಿ, ಏಕೆ ಸ್ವಾಮಿ ಹೀಗೆ ಮಾಡುತ್ತಿದ್ದೀರಿ ನೀವು ಕಂಪ್ಲೀಟ್ ಸರ್ವೆ ಒಂದು ಮಾಡಿ, ಟೈಂಬಾಂಡ್ ವರ್ಕ್ ಮಾಡಿ, 5 ವರ್ಷಗಳಲ್ಲಿ ಇಷ್ಟು ಹಿಂದುಳಿದ ಜಾತಿಯವರಿಗೆ ಇಷ್ಟು ಅಲ್ಪಸಂಖ್ಯಾತರಿಗೆ ಇವರ ರೈತರಿಗೆ ಗಂಗಾಕಲ್ಯಾಣ ಯೋಜನೆಯನ್ನು ಕಂಪ್ಲೀಟ್ ಸೌಲಭ್ಯ ಕೊಡುತ್ತೇವೆಂದು ವರ್ಕ್‌ಮಾಡಿ.

ಸುಮ್ಮನೆ ಮಾತು ಹೇಳುತ್ತೀರಿ ನೀವು. ಆ ಮಾತು ಆ ಮಾತು ಹೇಳಬೇಡಿ ಸಾರ್, ಹೀಗಾಗಬಾರದು ಎಂಬುದು ನಮ್ಮ ವಿನಂತಿ. ಈ ಐದು ವರ್ಷ ನಿಮ್ಮ ಸರ್ಕಾರ ಇರಬೇಕೆಂದು ನಮ್ಮ ಸಮಾಜ ಏನು ನಿಮಗೆ ಆಶೀರ್ವಾದ ಕೊಟ್ಟಿದ್ದಾರೆ, ಯಾವ ಒಂದು ಸಮಾಜ ನಿಮಗೆ ವೋಟ್ ಕೊಟ್ಟಿದ್ದಾರೆ, ಆ ಸಮಾಜದ ಪರವಾಗಿ ಕೆಲಸ ಮಾಡಿ. ಎಸ್ಪೆಷಲಿ ನಮ್ಮ ಉಪಮುಖ್ಯಮಂತ್ರಿಗಳ ಬಗ್ಗೆ ನಂಬಿಕೆಯಿದೆ. ಒಂದು ಸಲ ನಮ್ಮ ಹಿಂದುಳಿದವರ್ಗಗಳ ಅಲ್ಪಸಂಖ್ಯಾತರ ಇಂಟಲೆಕ್ಚುಯಲ್ಸ್‌ಗಳ ಮೀಟಿಂಗ್ ಕರೆಯಿರಿ.

ಅವರ ಸಮಸ್ಯೆ ಏನಿದೆ ಎಂಬುದನ್ನು ಕೇಳಿ ಒಂದು ಕಾಂಕ್ರೀಟ್ ಪ್ರಪೋಸಲ್ ತಯಾರುಮಾಡಿ ಅದನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ತಾವು ಹಣಕಾಸು ಸಚಿವರಿದ್ದೀರಿ ಅದಕ್ಕೆ ಹಣ ಕೊಡಬೇಕು. ಆಗ ಆ ಸಮಾಜ ಮುಂದಕ್ಕೆ ಬರುತ್ತದೆ. ಸರ್ಕಾರದ ಸ್ಕೀಂಗಳು ಇದೆ. ಮೈನಾರಿಟಿಯವರು ಉರ್ದುಪೇಪರ್ ನೋಡುತ್ತಾರೆ. ತಾವು ಉರ್ದುಪೇಪರ್‌ನಲ್ಲಿ ಈ ಬಗ್ಗೆ ಪ್ರಚಾರ ಕೊಡಬೇಕು. ಟಿವಿಯಲ್ಲಿ ಹೇಳಬೇಕು. ಇನ್ನು 7.25 ಕೋಟಿ ಅಲ್ಪಸಂಖ್ಯಾತ ನಿಗಮದ ಬಡ್ಜೆಟ್ ಇದೆ, ತಾವು 3.70 ಕೋಟಿ ಬಿಡುಗಡೆ ಮಾಡಿದಿರಿ. ಉಳಿದದ್ದನ್ನು ತಾವು ಬಿಡುಗಡೆ ಮಾಡಿಲ್ಲ, ಮತ್ತೆ ಈ ವರ್ಷ ಬಜೆಟ್‌ನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 4 ಕೋಟಿ ಮಾತ್ರ ಕೊಟ್ಟಿದ್ದೀರಿ, ಆ ದುಡ್ಡನ್ನು ನೀವು ಹೆಚ್ಚಾಗಿ ಮಾಡಬೇಕು ಏಕೆಂದರೆ ಏನೇ ಕೆಲಸ ಮಾಡಬೇಕಾದರೂ ದುಡ್ಡು ಬೇಕಾಗಿದೆ. ದೇವರಾಜ ಅರಸರ ಕಾಲದಲ್ಲಿ ವಿಶೇಷತಃ ಮುಸ್ಲಿಂ ಅಲ್ಪಸಂಖ್ಯಾತರಿಗೆ ಅರೆಬಿಕ್ ಶಾಲೆಗಳಿಗೆ ಗ್ರಾಂಟ್ ಕೊಡಬೇಕೆಂದು ಆದೇಶ ಆಗಿತ್ತು.ಆದರೆ ಈಗ ನಿಮ್ಮ ಜಂಟಿ ನಿರ್ದೇಶಕರುಗಳು ಇದನ್ನು ಇಂಪ್ಲಿಮೆಂಟ್ ಮಾಡುತ್ತಿಲ್ಲ, ಅಲ್ಪಸಂಖ್ಯಾತರಿಗಾಗಿ ಎಷ್ಟು ಸರ್ಕಾರಿ ಆದೇಶಗಳಿವೆ ಅವನ್ನೆಲ್ಲಾ ಮಾನ್ಯ ಸಚಿವರಿಗೆ ಕಳುಹಿಸುತ್ತಿದ್ದೇನೆ. ಅವರಲ್ಲಿ ನನ್ನ ವಿನಂತಿ ಇಷ್ಟು ಏನೇನು ಸ್ಕೀಮ್ಸು ಇದೆ ಏನೇನು ಆರ್ಡರ್ರ್ಸಿದೆ ಅವನ್ನು ನೋಡಿ ಅಲ್ಪಸಂಖ್ಯಾತರ ಸಲುವಾಗಿ ಒಂದು ವಾಚ್‌ಡಾಗ್ ಕಮಿಟಿ ಮಾಡಿ ಅದನ್ನು ಇಂಪ್ಲಿಮೆಂಟ್ ಮಾಡಲು ಪ್ರಯತ್ನಿಸುತ್ತೀರೆಂದು ನಮ್ಮ ಆಶೆ ಇದೆ. ನಮ್ಮ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಖಾತೆ ಸಚಿವರು ಬಂದ ಕೂಡಲೇ ಉತ್ತಮ ಕೆಲಸ ಮಾಡಿದ್ದಾರೆ, ಅವರಿಗೆ ತಮ್ಮ ಮೂಲಕ ಅಭಿನಂದನೆ ಕೊಡುತ್ತಿದ್ದೇನೆ. ಅವರು ಬಂದ ಮೇಲೆ 22 ಸಾವಿರ ರೂ. ಮಾಡಿದರು ಇದರಿಂದ ಸ್ವಲ್ಪ ನಮ್ಮ ಜನರಿಗೆ ಸಹಾಯವಾಗಿದೆ. ಮತ್ತು 5 ಸಾವಿರ ರೂ.ಗಳನ್ನು ಯಾರು ಸಾಲ ತೆಗೆದುಕೊಳ್ಳುತ್ತಿದ್ದಿದ್ದರೋ ಅವರಿಗೆ 50 ಪರ್ಸೆಂಟ್ ಮಾರ್ಜಿನ್‌ಮನಿ ಬಿಟ್ಟಿ ಸಬ್ಸಿಡಿ ಕೊಟ್ಟಿದ್ದೀರಿ, ಸಣ್ಣ ಸಣ್ಣ ಕೆಲಸ ಮಾಡುವವರಿಗೆ ಕೂಡ ಹೆಲ್ಪಾಗಿದೆ.

ಮತ್ತು 50 ಸಾವಿರ ರೂ ಲೋನ್ ಲಿಮಿಟ್ ಇತ್ತು, ನಮ್ಮ ಸಚಿವರು ಬಂದನಂತರ ಒಂದು ಲಕ್ಷ ರೂ. ಎಂದು ಮಾಡಿದ್ದಾರೆ, ಅವರ ಮಿತಿಯಲ್ಲಿ ಎಷ್ಟು ಮಾಡಬಹುದೋ ಅಷ್ಟು ಮಾಡಿದ್ದಾರೆ. ಆದರೆ ಅವರ ಇಲಾಖೆಗೆ ದುಡ್ಡೇ ಇಲ್ಲ ಆದ್ದರಿಂದ ತಾವು ಹೆಚ್ಚಾಗಿ ಹಣ ನೀಡಬೇಕೆಂದು ನಮ್ಮ ವಿನಂತಿ ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ಸಲುವಾಗಿ ವೀರಪ್ಪಮೊಯ್ಲಿಯರ ಕಾಲದಲ್ಲಿ ಒಂದು ಸ್ಕೀಮಿದೆ, ದೇವರಾಜ ಅರಸ್ ಬರ್ತ್‌ಡೆ, ಈ ಸ್ಕೀಂ ಅಪ್ರೂ ಆಗಿದೆ, ಆದರೆ ಇಂಪ್ಲಿಮೆಂಟ್‌ಗಾಗಿ ಹಣ ರಿಲೀಸಾಗಿಲ್ಲ ಆ ಸ್ಕೀಮಿನ ವಿವರವನ್ನು ಸಂಬಂಧಿಸಿದ ಮಂತ್ರಿಗಳಿಗೆ ಕೊಡುತ್ತಿದ್ದೇನೆ. ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಸಲುವಾಗಿ ಗೂಡ್‌ವಾಲ ಸಮಿತಿ ಆಗಿತ್ತು ಅದು ಶಿಫಾರಸ್ ಮಾಡಿದೆ. ಗೂಡವಾಲ ಕಮಿಷನ್ ಇರಲಿ, ಕೆ.

ರೆಹಮಾನ್‌ಖಾನ್ ಕಮಿಷನ್ ಇರಲಿ, ಅವುಗಳ ಶಿಫಾರಸ್‌ಗಳೇನಿವೆ ಅದನ್ನು ನೋಡಿ ಚರ್ಚಿಸಿ ಮುಂದೆ ಅದನ್ನು ಇಂಪ್ಲಿಮೆಂಟ್ ಮಾಡುತ್ತೀರೆಂಬ ಆಸೆ ನಮಗೆ ಇದೆ. ಕೇಂದ್ರ ಸರ್ಕಾರದಿಂದಲೂ ಮೈನಾರಿಟಿ ಸಲುವಾಗಿ ಬಹಳ ಸ್ಕೀಮ್ಸ್‌ಗಳಿವೆ. 10 ವರ್ಷದಿಂದಲೂ ಕೇಂದ್ರದ ಹಣ ಲ್ಯಾಪ್ಸ್ ಆಗುತ್ತಿದೆ.

ನಮ್ಮ ರಾಜ್ಯದಲ್ಲಿ ಆಫೀಸರ್‌ಗಳು ಸ್ಕೀಮುಗಳನ್ನು ಇಂಪ್ಲಿಮೆಂಟ್ ಮಾಡುತ್ತಿಲ್ಲ. ಶಿಕ್ಷಣದ ಸಲುವಾಗಿ ಏನು ಸ್ಕೀಮ್ಸ್‌ಗಳಿವೆ. ಅದರ ಪಟ್ಟಿಯನ್ನು ತಮಗೆ ಕೊಡುತ್ತಿದ್ದೇನೆ. ಅದನ್ನು ತಾವು ನೋಡಿ ಇಂಪ್ಲಿಮೆಂಟ್ ಮಾಡಬೇಕೆಂದು ಕೋರುತ್ತೇನೆ. ಅದಕ್ಕಾಗಿ ಎಲ್ಲಾ ಸ್ಕೀಮುಗಳ ವಿವರಗಳನ್ನು ಮಂತ್ರಿಗಳಿಗೆ ನಾನು ಕೊಡುತ್ತಿದ್ದೇನೆ. ಮೈನಾರಿಟಿಸ್ ಮತ್ತು ಹಿಂದುಳಿದ ವರ್ಗಗಳ ಸ್ಕೀಂಗಳನ್ನು ಇಂಪ್ಲಿಮೆಂಟ್ ಮಾಡುವುದರ ಬಗ್ಗೆ ಒಂದು ವಾಚ್‌ಡಾಗ್ ಕಮಿಟಿ ಮಾಡಬೇಕೆಂದು ವಿನಂತಿಸುತ್ತೇನೆ. ಆ ಜನಗಳ ಸಲುವಾಗಿ ನೀವು ಹೋರಾಟ ಮಾಡುತ್ತಿದ್ದೀರಿ, ಕೊನೆಯದಾಗಿ ಎಸ್‌ಸಿ, ಎಸ್‌ಟಿಸ್ ಸ್ಕೀಮ್ಸ್ ಏನಿದೆ ಅವೂ ಲ್ಯಾಪ್ಸ್ ಆಗುತ್ತಿವೆ ಅದರ ಸಲುವಾಗಿಯೂ ಒಂದು ವಾಚ್‌ಡಾಗ್ ಕಮಿಟಿ ಮಾಡಬೇಕೆಂದು ವಿನಂತಿಸುತ್ತಾ, ಈ ಸದನಕ್ಕೆ ನನ್ನ ಗೌರವ ಇದೆ ಇಲ್ಲಿ ಮುಖ್ಯ ಮಂತ್ರಿಯಾಗಿದ್ದವರು ಪ್ರಧಾನಮಂತ್ರಿಯಾಗಿದ್ದಾರೆ, ಪ್ರಧಾನಿ ಅಂದರೆ ನಮಗೆ ಅಪರೂಪ ಇತ್ತು ಈಗ ನಮ್ಮವರೇ ಪ್ರಧಾನಿಯಾಗಿದ್ದಾರೆ, ಅದರ ಸಲುವಾಗಿ ಒಂದು ಶಾಹಿರಿ ಇದೆ.

ಇಷ್ಟು ಹೇಳಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

4.50 ಪಿ.ಎಂ.

+ ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ನಾನು ಎರಡು ಮೂರು ಇಲಾಖೆಗಳ ಬಗ್ಗೆ ಮಾತ್ರ ಪ್ರಸ್ತಾಪ ಮಾಡುತ್ತೇನೆ. ಪ್ರಾಯಶಃ ನಾನು ಸಹಕಾರ ಇಲಾಖೆ ಬಗ್ಗೆ ಮಾತನಾಡಬೇಕೆಂದು ಇಚ್ಛೆ ಇತ್ತು, ಆದರೆ ಮಾನ್ಯ ಸಹಕಾರ ಮಂತ್ರಿಗಳು ಇಲ್ಲಿ ಉಪಸ್ಥಿತರಿಲ್ಲ. ಮಾನ್ಯ ನಾಣಯ್ಯನವರು ಇದ್ದಾರೆ., ಹಿಂದಿನಿಂದಲೂ ಮಾನ್ಯ ನಾಣಯ್ಯನವರು ಸಹಕಾರಿ ರಂಗದಲ್ಲಿ ಅತ್ಯಂತ ಅನುಭವವನ್ನು ಹೊಂದಿದವರಾಗಿದ್ದಾರೆ. ಅವರು ಇದನ್ನೆಲ್ಲಾ ಕೇಳುತ್ತಾರೆಂಬ ಭಾವನೆ ನಮಗೆ ಇದೆ. ಇವತ್ತು ಸಹಕಾರ ಇಲಾಖೆ ಸಹಕಾರಿ ಇಲಾಖೆಯಾಗಿ ಉಳಿದಿಲ್ಲ. ಇದು ಜನರಿಗಾಗಿ ಜನರಿಂದ ಜನಗಳಿಗೆ ಬೇಕಾದ ಇಲಾಖೆಯಾಗಿ ಉಳಿದಿಲ್ಲ, ಅದು ಸರಕಾರದ ಇಲಾಖೆಯಾಗಿ ಉಳಿದಿದೆ ಎಂದು ನಾನು ಭಾವಿಸುತ್ತೇನೆ. ಸಹಕಾರ ರಂಗ ಯಾವ ರೀತಿ ಇರಬೇಕು ಆ ಊರಿನ ಜನರಿಗೆ ಅನುಕೂಲವಾಗುವ ಹಾಗೆ ಆ ಊರಿನ ಪರಿಸರಕ್ಕೆ ಆ ಊರಿನ ರೈತಾಪಿ ವರ್ಗಕ್ಕೆ ಅನುಕೂಲ ಮಾಡುವಂತಹ ಒಂದು ಸಂಸ್ಥೆ ಇದು. ಇವತ್ತು ಈ ಸಹಕಾರಿ ಇಲಾಖೆಯ ಮೇಲೆ ಪೂರ್ಣ ಪ್ರಮಾಣದ ಸರಕಾರದ ಹಸ್ತಕ್ಷೇಪ ಆಗಿ, ಸಹಕಾರ ಹೋಗಿ ಸರಕಾರೀ ಇಲಾಖೆಯಾಗಿದೆ. ಯಾವುದೇ ರೀತಿಯಲ್ಲಿ ಜನಗಳಿಗೆ ಬೇಕಾದಂತಹ, ಸದಸ್ಯರಿಗೆ ಬೇಕಾದಂತಹ ವ್ಯವಸ್ಥೆಗಳು ಇದರಿಂದಾಗುತ್ತಿಲ್ಲ, ಈ ಮಾತನ್ನು ಹೇಳುವಾಗ ಬಹುಶಃ ಸರಕಾರ ಎಷ್ಟು ಗಂಭೀರವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದರೂ ಕೂಡ ಅದರ ಬಗ್ಗೆ ಅವರು ಚಿಂತನೆ ಮಾಡುವುದಿಲ್ಲ, ಸಹಕಾರಿ ಸಂಘ ಸದಸ್ಯರು ಮತ್ತು ಸರಕಾರ ಅಥವಾ ಆಡಳಿತಾಧಿಕಾರಿಗಳು ಹೇಗೆ ಇದ್ದರು ಎಂದು ಹೇಳುವುದಕ್ಕೆ ಒಂದು ಸಣ್ಣ ಕಥೆ ನೆನಪಾಗುತ್ತದೆ. ಜನತಾದಳ ಅಧಿಕಾರಕ್ಕೆ ಬಂದಾಗಲೆಲ್ಲಾ ಬರಗಾಲ ಬರುತ್ತದೆ ಅದೇ ರೀತಿ ಒಂದು ಊರಿನಲ್ಲಿ ಬರಗಾಲ ಬರುತ್ತದೆ. ಅಲ್ಲಿ ನರಿ ಮತ್ತು ಕರಡಿ ಇಬ್ಬರು ಸ್ನೇಹಿತರು ಇದ್ದರು

ಈ ಸ್ನೇಹಿತರು ನಮ್ಮ ಊರಿನಲ್ಲಿ ಬರಗಾಲ ಬಂತಲ್ಲ ಎಂದು ಪಕ್ಕದ ಊರಿಗೆ ಮಳೆ ಬಿದ್ದಲ್ಲಿಗೆ ಹೋಗಿ ವ್ಯವಸಾಯ ಮಾಡೋಣ ಎಂದು ಹೋದರು.

ಕರಡಿ ಸ್ವಲ್ಪ ದಪ್ಪ ದೇಹದ ಒಳ್ಳೆಯ ಕೆಲಸ ಮಾಡುವಂತಹ ಒಂದು ವರ್ಗಕ್ಕೆ ಸೇರಿದ್ದು. ಆದರೆ ನರಿ ಸ್ವಲ್ಪ ಕುಹಕ ಬುದ್ಧಿದ್ದು. ಇಬ್ಬರು ಮಿತ್ರರು ಇನ್ನೊಂದು ಕಡೆ ಹೋಗಿ ಅಲ್ಲಿ ಕೃಷಿ ಮಾಡಬೇಕೆಂದು ನಿಶ್ಚಯ ಮಾಡಿದರು. ನರಿ ಮೈಗಳ್ಳತನದ ಒಂದು ಕೆಲಸದಿಂದ ಎಲ್ಲವನ್ನೂ ತಾನೇ ಮಾಡಬೇಕೆಂದು ನಿಶ್ಚಯ ಮಾಡಿತು. ಇಬ್ಬರೂ ಯಾವ ಕೃಷಿ ಮಾಡಬೇಕೆಂದು ಆಲೋಚನೆ ಮಾಡಿ ಇಬ್ಬರೂ ಒಪ್ಪಂದಕ್ಕೆ ಬಂದು ಈ ಸಲ ಸಿಹಿ ಗೆಣಸನ್ನು ಬೆಳೆಯೋಣವೆಂದು ನಿಶ್ಚಯಿಸಿದರು. ಈ ಗೆಣಸನ್ನು ಬೇಸಾಯ ಮಾಡುವುದೆಂದು ನಿಶ್ಚಯ ಮಾಡಿದ ತಕ್ಷಣ ನರಿ ಏನು ಮಾಡಿತೆಂದರೆ ಕರಡಿಯ ತಲೆಯೊಳಗೆ ಪ್ರಾರಂಭದಿಂದಲೇ ಕೆಲವು ವಿಚಾರಗಳನ್ನು ತುಂಬಲಿಕ್ಕೆ ಪ್ರಯತ್ನ ಮಾಡಿತು. ಈ ಸಾರಿ ಗೆಣಸಿನ ಬಳ್ಳಿ ಹಾಗಾಗುತ್ತದೆ ಹೀಗಾಗುತ್ತದೆಂದು ಹೇಳಿ ಶುರು ಮಾಡಿತು. ಕರಡಿಯ ಹೆಗಲಿಗೆ ನೇಗಿಲನ್ನು ಕಟ್ಟಿ ಹೊಲ ಊಳುವಂತಹ ಕೆಲಸ ಮಾಡಿತು. ಒಳ್ಳೆಯ ಫಸಲು ಬರುವಾಗ ಮೇಲೆ ಒಳ್ಳೆ ಬಳ್ಳಿಗಳು ಬಂತು, ಬಳ್ಳಿಗಳು ಬರುವಾಗ ಕರಡಿ ಮೇಲೆಲ್ಲಾ ಇಷ್ಟು ಒಳ್ಳೆಯ ಬಳ್ಳಿಗಳು ಇವೆ ಆದಕಾರಣ ಮೇಲಿನದ್ದನ್ನು ನಾನು ತೆಗೆದುಕೊಳ್ಳಬೇಕೆಂದು ನಿಶ್ಚಯ ಮಾಡಿತು. ನರಿಗೆ ಗೊತ್ತಿತ್ತು ಮಾನಸಿಕವಾಗಿ ಕರಡಿಯ ಮೇಲೆ ತನ್ನ ಪ್ರತಾಪ ಜಾರಿಯಾಗಿದೆ ಎಂದು. ಆದ್ದರಿಂದ ಅದು ನಿನಗೆ ಮೇಲೆ ಇರುವುದು ಬೇಕೋ ಕೆಳಗಡೆ ಇರುವುದು ಬೇಕೋ ಎಂದು ಕೇಳಿತು. ಕರಡಿ ಆಲೋಚನೆ ಮಾಡಿ ಈ ಸಾರಿ ನನಗೆ ಮೇಲಿರುವುದು ಬೇಕು ಎಂದು ಹೇಳಿತು. ಎಲ್ಲಾ ತೆಗೆದಾಗ ಒಳಗಡೆ ಇದ್ದಂತಹ ಗೆಣಸು ಗೆಡ್ಡೆಗಳೆಲ್ಲಾ ನರಿಯ ಪಾಲಾಯಿತು ಮೇಲಿದ್ದಂತಹ ಬಳ್ಳಿಯ ಪಾಲೆಲ್ಲಾ ಪಾಪ ಕರಡಿಯ ಪಾಲಾಯಿತು. ಈ ವರ್ಷ ಹೀಗಾಯಿತಲ್ಲಾ ಇನ್ನೊಂದು ವರ್ಷ ನೋಡಬೇಕೆಂದು ಕರಡಿ ಆಲೋಚನೆಯಾಯಿತು. ಇನ್ನೊಂದು ಸಲ ಏನು ಬೆಳೆ ಮಾಡೋಣವೆಂದು ಆಲೋಚನೆ ಮಾಡಿದರು. ಆಲೋಚನೆ ಮಾಡಿ ಮಾಡಿ ನರಿ ಈ ಸಲ ಕಲ್ಲಂಗಡಿ ಹಣ್ಣನ್ನು ಬೆಳೆಯೋಣವೆಂದು ಹೇಳಿತು. ಪುನಃ ನಮ್ಮ ಕರಡಿಯ ಹೆಗಲಿಗೆ ನೇಗಿಲನ್ನು ಕಟ್ಟಿ ಹೊಲ ಉತ್ತಿತು.

ಕರಡಿ ಶ್ರಮ ವಹಿಸಿ ಕೆಲಸ ಮಾಡಿತು. ದೊಡ್ಡ ಬಳ್ಳಿಗಳು ಹೋಗಿ ಮೇಲೆ ಕಲ್ಲಂಗಡಿ ಹಣ್ಣು ಬಂತು. ಕರಡಿಗೆ ಸರಿಯ ಕುಹಕತನ ಗೊತ್ತಿಲ್ಲ. ಅದು ಶ್ರಮಜೀವಿ ಆ ಕರಡಿ ಆಲೋಚನೆ ಮಾಡಿ ಮೇಲಿರುವಂತಹ ಕಲ್ಲಂಗಡಿ ಹಣ್ಣೇ ಇಷ್ಟು ದೊಡ್ಡದಿರಬೇಕಾದರೆ ಕೆಳಗೆ ಇನ್ನು ಎಷ್ಟು ದೊಡ್ಡದಿರಬಹುದೆಂದು ಆಲೋಚನೆ ಮಾಡಿತು. ಕಳೆದ ಸಾರಿ ಮೇಲೆ ಬಳ್ಳಿ ಮಾತ್ರ ಇದ್ದು ಕೆಳಗೆ ಗದ್ದೆ ಗೆಣಸು ಇತ್ತು. ಈ ಸಲ ಕೆಳಗಿನದು ನನಗೆ ಇರಲಿ ಎಂದು ಹೇಳಿತು ಕಲ್ಲಂಗಡಿ ಹಣ್ಣೆಲ್ಲಾ ನರಿಯ ಪಾಲಾಯಿತು. ಬರೀ ಬೇರುಗಳಲ್ಲಾ ಕರಡಿಗೆ ಸಿಕ್ಕಿತು. ಸರಕಾರದ ಹಸ್ತಕ್ಷೇಪ ಸಹಕಾರಿ ಇಲಾಖೆಯ ಮೇಲೆ ಈ ಜನರ ಮೇಲೆ, ಎಷ್ಟರ ಮಟ್ಟಿಗೆ ರೈತಾಪಿ ವರ್ಗದ ಮೇಲೆ ಸಂಘದ ಸದಸ್ಯರ ಮೇಲೆ ಎಷ್ಟು ಪ್ರಭಾವ ಪರಿಣಾಮ ಬೀರಿದೆ ಎಂದರೆ ಏನೋ ಒಂದು ಮೇಲೆ ತೋರಿಸುವಂತಹ ವ್ಯವಸ್ಥೆಗಳ ಮುಖಾಂತರ ಜನರಿಗೆ ತೋರಿಸುವಂತಹ ಕೆಲಸವಾಗಿದೆ. ಸಹಕಾರಿ ಸಂಘಕ್ಕೆ ಕಾಯಕಲ್ಪವಾಗ ಬೇಕು. ಸಹಕಾರಿ ಇಲಾಖೆಯಲ್ಲಿರುವಂತಹ ಕಾನೂನು ಏನು ಇದೇ ಇದರ ಮೂಲಭೂತ ತಿದ್ದುಪಡಿಯಾಗಬೇಕೆಂದು ಹೇಳುವ ಆಗ್ರಹವನ್ನು ನಾನು ಮಾಡುತ್ತಿದ್ದೇನೆ. ಪತ್ರಿಕೆಗಳಲ್ಲಿ ಸಾಕಷ್ಟು ಪ್ರಸ್ತಾಪವನ್ನು ಸಹಕಾರ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು,

ಮಾನ್ಯ ನಾಣಯ್ಯನವರು ಮಾಡಿದ್ದಾರೆ. ಅಧಿಕಾರಕ್ಕೆ ಬಂದ ತಕ್ಷಣದಿಂದ ಶುರು ಮಾಡಿದ್ದಾರೆ. ಸಹಕಾರಿ ಸಂಘಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಕೆಲವಾರು ನಿಯಮಗಳ ಬಗ್ಗೆ ನಾನು ಉಲ್ಲೇಖ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸರಕಾರ ಕಾಯಿದೆಯ ಸೆಕ್ಷನ್ 21, 27(1), 29, 30ಎ, 30ಬಿ ಸೆಕ್ಷನ್ 53 ಎ, 121 ಇದನ್ನು ಡಿಲೀಟ್ ಮಾಡುವಂತಹ ಅತಿ ಅವಶ್ಯಕತೆ ಸರಕಾರಿ ಕಾಯಿದೆಯಲ್ಲಿ ಇದೆ ಎಂದು ಪ್ರಸ್ತಾಪ ಮಾಡುತ್ತಿದ್ದೇನೆ. ಎಲ್ಲೆಲ್ಲಿ ಏನೇನು ನಡೆದಿದೆ ಎಂದು ಹೇಳಬಯಸುತ್ತೇನೆ. ಸೆಕ್ಷನ್ 27(1) ಏನು ಹೇಳುತ್ತದೆ ಅದನ್ನು ಪೂರ್ತಿಯಾಗಿ ನಾನು ಓದಬೇಕಾಗಿಲ್ಲ. ಅದರ ಪ್ರೊವಿಸೋ ಏನು ಹೇಳುತ್ತಿದೆ ಎಂದು ಮಾತ್ರ ಹೇಳಬಯಸುತ್ತೇನೆ. ಇವತ್ತು ಸಹಕಾರಿ ಸಂಘ ಅದರಲ್ಲಿರುವಂತಹ ಸದಸ್ಯರ ಪರವಾಗಿ ಆ ಸದಸ್ಯರಿಗೆ ಮಾತ್ರ ಎಂದಾದರೆ ಈ ಸೆಕ್ಷನ್ 27(1) ನ ಪ್ರೊವಿಸೋ ಅವಶ್ಯಕತೆ ಇಲ್ಲ. ಅದು ಏನು ಹೇಳುತ್ತದೆಂದರೆ.

'Provided for that every annual General Body Meeting or election to Co-operative Society shall be subject to the control and supervision of the Government and it shall be lawful for the Government to issue directions regarding all matters connected with the Annual general Body Meeting or elections including directions for cancellation or postponement of such means,....

ಎಂದು ಹೇಳುತ್ತದೆ ಬಹುಶಃ ಮಾನ್ಯ ನಾಣಯ್ಯನವರು ನನ್ನ ಜಿಲ್ಲೆಯ ಹಲವಾರು ಕಡೆ ಹೋದಾಗ ಪ್ರಸ್ತಾಪ ಮಾಡಿದರು. ಜನರಲ್ ಬಾಡಿ ಸಭೆ ಕೊನೇ ಮಿನಿಟಿನಲ್ಲಿ ಪೋಸ್ಟ್‌ಪೋನ್ ಮಾಡಿದರು. ಮೊದಲನೇ ದಿವಸ ಅಲ್ಲಿ ಆಡಳಿತ ಪಕ್ಷದ ನಾಯಕರು ಯಾರೋ ಬಂದರು. ನಂತರ ಮತ್ತೆ ನಾವು ಚುನಾವಣೆಯಲ್ಲಿ ಗೆಲ್ಲುತ್ತೇವೆಂದು ಹೇಳುವ ಧೈರ್ಯ ಅವರಿಗೆ ಇಲ್ಲ. ಅಥವಾ ಬೇರೆ ಯಾವುದೋ ವಿಚಾರದಲ್ಲಿ ಅವರು ಸಿಕ್ಕಿ ಹಾಕಿಕೊಂಡಿರುತ್ತಾರೆ. ಇವರ ಒತ್ತಡಕ್ಕೆ ಮಣಿದು ಜನರಲ್ ಬಾಡಿಗಳನ್ನು ಕೊನೆಯ ಹಂತದಲ್ಲಿ ಪೋಸ್ಟ್‌ಪೋನ್ ಮಾಡುವಂತಹ ಹಲವಾರು ವಿಚಾರಗಳು ಇವೆ. ಮಂಗಳೂರಿನ ಸೆಂಟ್ರಲ್ ಬ್ಯಾಂಕಿಗೆ 8 ವರ್ಷದಿಂದ ಚುನಾವಣೆ ನಡೆಯುತ್ತಿಲ್ಲ. ಕರ್ನಾಟಕ ರಾಜ್ಯದ ಭೂ ಬ್ಯಾಂಕಿಗೆ ಚುನಾವಣೆ ನಡೆಯದೆ ಎಷ್ಟು ವರ್ಷವಾಯಿತು ಎಂಬುದು ಮಾನ್ಯ ನಾಣಯ್ಯನವರಿಗೆ ಚೆನ್ನಾಗಿ ಗೊತ್ತಿದೆ. ಚುನಾವಣೆ ನಡೆದು ಹತ್ತು ವರ್ಷವಾಯಿತು. ಕೋರ್ಟಿನ ವಿಚಾರ ಇರಬಹುದು ಅಥವಾ ಸಹಕಾರಿ ಸಂಘದ ಕಾಯಿದೆ ವಿಚಾರ ಇರಬಹುದು.

ಇದು ಏಕೆ ಹೀಗಾಗುತ್ತದೆ? ಈ ಪ್ರೊವಿಸೋನನ್ನು ನಾವು ಡಿಲೀಟ್ ಮಡುವಂತಹ ಸಂದರ್ಭಗಳು ಬಂದಾಗ, ಇಂಥಾದ್ದರಲ್ಲಿ ಸರಕಾರ ಹಸ್ತಕ್ಷೇಪ ಮಾಡಿದ ಸಂದರ್ಭ ಬಂದಾಗ ಸಹಕಾರ ಇಲಾಖೆ ಸರಿಯಾಗಿ ನಡೆಯಬೇಕಾದರೆ ಅದು ಸಾಧ್ಯವಾಗುತ್ತದೆ. ತಾವು ಅತ್ಯಂತ ಹಿರಿಯ ಸಚಿವರಿದ್ದೀರಿ ತಮಗೆ ಸಹಕಾರ ಸಂಘದ ವಿಚಾರಗಳು ಗೊತ್ತುಂಟು. ಸರಕಾರದ ಹಸ್ತಕ್ಷೇಪವನ್ನು ಬಿಟ್ಟು ಬಿಡಿ. ಆಂಧ್ರದಲ್ಲಿ ಹೊಸದಾಗಿ ಹೊಸ ರೀತಿಯಲ್ಲಿ ಸಹಕಾರಿ ಕಾನೂನನ್ನು ಜಾರಿಗೆ ತರುವಂತಹ ಪ್ರಯತ್ನಗಳು ತಮಗೆ ತಿಳಿದಿರಬಹುದು. ಈ ಹಿನ್ನೆಲೆಯಲ್ಲಿ ಸೆಕ್ಷನ್ 27(1) ಈ ಪ್ರೊವಿಸೋ ಅನ್ನು ಡಿಲೀಟ್ ಮಾಡುವುದರ ಮುಖಾಂತರ ಪ್ರಥಮ ಹಂತದಲ್ಲಿ ಜನರಲ್ ಬಾಡಿಯನ್ನು ಮುಂದೂಡುವಂಥದ್ದು ಅಥವಾ ಯಾವುದೇ ಚುನಾವಣೆಯನ್ನು ಮುಂದೂಡುವುದು ಈ ಕೆಲಸಗಳನ್ನು ಮಾಡಲಿಕ್ಕೆ ಸಹಕಾರಿಯಾಗುತ್ತದೆ. ಇದರಿಂದಾಗಿ ಸಹಕಾರಿ ಸಂಘದಲ್ಲಿ

ಏನು ಅನ್ಯಾಯವಾಗುತ್ತಿದೆ ಚುನಾವಣೆಯಾಗದೆ ಜನರು ಏನು ಮುಂದುವರಿಯುತ್ತಾರೆ, ಇವರ ವಿರುದ್ಧ ಜನರಿಗೆ ಒಂದು ತೀರ್ಪನ್ನು ಕೊಡಲಿಕ್ಕೆ ಸಹಾಯವಾಗುತ್ತದೆ. ಇದಕ್ಕಾಗಿ ಇದನ್ನು ಡಿಲೀಟ್ ಮಾಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಇನ್ನು ನಾಮ ನಿರ್ದೇಶನ ಮಾಡುವಂಥಾದ್ದು ಬಹುಶಃ ಸೆಕ್ಷನ್ 27 ಮತ್ತು 53 ಅನ್ನು ಜೊತೆಯಲ್ಲಿ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತೇನೆ.

ನಾಮ ನಿರ್ದೇಶನದ ಬಗ್ಗೆ ಈ ಸೆಕ್ಷನ್‌ಗ ಹೋಗುವುದಕ್ಕೆ ಮೊದ್ಲು ನಮ್ಮ ಹಲವಾರು ಮಂತ್ರಿಗಳು ಹೇಳಿದಂತಹ ಹೇಳಿಕೆಗಳ ಬಗ್ಗೆ ಇಲ್ಲಿ ಹೇಳಬಯಸುತ್ತೇನೆ. ತಾವು ಅಧಿಕಾರಕ್ಕೆ ಬಂದ ಪ್ರಥಮ ದಿನಗಳಲ್ಲಿ ಸಹಕಾರಿ ಸಚಿವರಾದ ಪಾಟೀಲ್‌ರವರು ಏನು ಹೇಳಿದ್ದಾರೆಂದರೆ, ನಾಮಕರಣ ಪದ್ಧತಿ ನಿಲ್ಲದಿದ್ದರೆ ನಾನು ಮನೆಗೆ ಹೋಗುವೆ. ಎಂದು ಬಹುಶಃ ಇವತ್ತು ಎಲ್ಲಿಗೆ ಹೋಗಿದ್ದಾರೋ ನನಗೆ ಗೊತ್ತಿಲ್ಲ, ಈ ಮಾತನ್ನು ಮಾನ್ಯ ಪಾಟೀಲರು ನವೆಂಬರ್ 17ನೇ ತಾರೀಖಿನಂದು ಹೇಳಿದರು. ಎಷ್ಟು ಸಮಯವಾಯಿತು. ಒಂದು ವೇಳೆ ಸಹಕಾರಿ ಇಲಾಖೆಯ ಆ ಕಾಯಿದೆಗೆ ತಿದ್ದುಪಡಿ ಮಾಡಿ, ಕಾಯಕಲ್ಪ ಮಾಡಬೇಕೆಂಬ ಉದ್ದೇಶವಿದ್ದರೆ, ಇಷ್ಟು ಕಾಲ ಬೇಕೇ? ಸಹಕಾರಿ ಸಂಸ್ಥೆಗೆ ನಾಮಕರಣ ರದ್ದು, ಜೂನ್ 4ನೇ ತಾರೀಖು ಕಳೆದ ವರ್ಷ ಸಹಕಾರಿ ಕ್ಷೇತ್ರದಲ್ಲಿ ರಾಜ್ಯ ಮಟ್ಟದ 4-6 ಸಂಸ್ಥೆಗಳನ್ನು ಬಿಟ್ಟು ಉಳಿದ ಸಹಕಾರಿ ಸಂಸ್ಥೆಗಳಿಗೆ ನಾಮಕರಣ ಮಾಡುವ ಪದ್ಧತಿಯನ್ನು ರದ್ದುಪಡಿಸುವ ಆಲೋಚನೆ ಇದೆ ಎಂದು ಮುಖ್ಯ ಮಂತ್ರಿಯಾದ ದೇವೇಗೌಡ ಅವರು ಭಾನುವಾರ ಹೇಳಿದರು. ಈ ನಾಟಕಗಳು ಏಕೆ? ಘೋಷಣೆಗಳು ಮಾಡುವಂಥಾದ್ದು ಏಕೆ? ಘೋಷಣೆಗಳ ಆಧಾರದಲ್ಲಿ ನಾವು ನಮ್ಮ ಪ್ರಕ್ರಿಯೆಯನ್ನು ಶುರು ಮಾಡದೆ ಜನರನ್ನು ದುಸ್ಥಿತಿಗೆ ಎಳೆಯುವಂತಹ ಪರಿಸ್ಥಿತಿಗಳು ಏಕೆ? ನಾಮ ನಿರ್ದೇಶನದಿಂದ ಆಗುವಂತಹ ದುರವಸ್ಥೆಗಳ ಬಗ್ಗೆ ನಾನು ವಿಶೇಷವಾಗಿ ಪ್ರಸ್ತಾಪ ಮಾಡಬೇಕಾಗಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯ ಜನತಾ ಬಜಾರ್ ಒಂದೇ ಉದಾಹರಣೆ ಸಾಕು.

ಮೊನ್ನೆ ಮೊನ್ನೆ ಏನಾಯಿತು. 3 ತಿಂಗಳ ಹಿಂದೆ ಜನತಾ ಬಜಾರಿಗೆ ಚುನಾವಣೆಯಾಯಿತು. 9 ಜನ ಸಹಕಾರ ಭಾರತಿ ಸದಸ್ಯರು ಚುನಾವಣೆಯಲ್ಲಿ ಗೆದ್ದರು. ಒಬ್ಬರು ಜನತಾ ದಳದವರು ಗೆದ್ದರು. ಇನ್ನೊಬ್ಬರು ಕಾಂಗ್ರೆಸ್‌ನವರು ಗೆದ್ದರು. ಅಲ್ಲಿ ರಾಜಕೀಯ ಇಲ್ಲ, ಅಲ್ಲಿ 3 ಜನ ನಾಮ ನಿರ್ದೇಶನದ ಅಧಿಕಾರಿಗಳು ಇದ್ದರು. ನೀವೇನು ಮಾಡಿದಿರಿ. ಎಷ್ಟು ನಾಮಿನೇಷನ್ ಮಾಡಿದಿರಿ. ಈ ಅಧಿಕಾರಿಗಳನ್ನೇನು ಮಾಡಿದಿರಿ. ಇವರು ನಾಮ ನಿರ್ದೇಶನದ ವ್ಯಾಪ್ತಿಗೆ ಬರುವುದಿಲ್ಲವೆನ್ನುವ ಆದೇಶ ಮಾಡುವುದರ ಮುಖಾಂತರ ಇತರ 5 ಜನರನ್ನು ಅಲ್ಲಿಗೆ ನಾಮಿನೇಷನ್ ಮಾಡಿ, ನಿಮ್ಮ ಜನಕ್ಕೆ ಅಧ್ಯಕ್ಷ ಪಟ್ಟಕೊಡಬೇಕೆಂದು ಕೈಗೊಂಡಿರಿ ಅಲ್ಲಿ ಕಳೆದ ಒಂದೂವರೆ ವರ್ಷದಿಂದ ಅಧಿಕಾರ ಇರಲಿಲ್ಲ ಆ ಅಧಿಕಾರದ ಅವಧಿಯಲ್ಲಿ ಅಲ್ಲಿ ವಿಶೇಷ ಅಧಿಕಾರಿ ಏನು ಅಪಾಯಿಂಟ್ ಆಗಿದ್ದರು. ಅವರು ಮಾಡಿದ ಅನ್ಯಾಯವನ್ನು ಮುಚ್ಚಿ ಹಾಕಬೇಕೆಂದು ಹೇಳುವ ದೃಷ್ಟಿಯಿಂದ ಇವತ್ತು ಆ ಜನತಾ ಬಜಾರಿನಲ್ಲೇನು ಮಾಡಿದ್ದೀರಿ. 50 ಲಕ್ಷಕ್ಕೂ ಹೆಚ್ಚು ಲಾಸಾಗಿದೆ. ಅಲ್ಲಿ ಕೇಳುವವರು ಯಾರು?

ನಿಮ್ಮ ಅಧ್ಯಕ್ಷರು ಐದು ಜನ ಅವರನ್ನು, ಮೂರು ಜನ ಅಧಿಕಾರಿಗಳು ಸೇರಿ ಒಟ್ಟು ಎಂಟು ಜನರನ್ನು ನಾಮ ನಿರ್ದೇಶನ ಮಾಡಿದ ಕಾರಣ ಏನಾಗುತ್ತದೆ ಎಂದರೆ ಈಗ ನಿಮ್ಮ ಒಬ್ಬರೇ ಜನರು ಇರುವಂಥದ್ದು. ಅವರು ನಿಮ್ಮ ಎಂ.ಡಿ.ಯ ಕೈಯೊಳಗೆ ಇದ್ದಾರೆ. ಏನು ಮಾಡಿದರೂ ಮಾತನಾಡುವ ಹಾಗೆ ಇಲ್ಲ. ಏನೂ

ಹೇಳಿದರೂ ಕೇಳುವ ಹಾಗೆ ಇಲ್ಲ. ಬಾಯಿ ಮುಚ್ಚಿಕೊಂಡು ಅವರು ಹೇಳಿದ್ದಕ್ಕೆ ದಸ್ಕತ್ತ ಹಾಕಿ ಇವತ್ತು ಸಹಕಾರಿ ತತ್ವವನ್ನು ಬೀದಿಗೆ ಎಳೆಯುವಂಥ ಪ್ರವೃತ್ತಿ ಈ ನಾಮ ನಿರ್ದೇಶನ ಮಂಗಳೂರಿನ ಜನತಾ ಬಜಾರಿನಲ್ಲಿ ಆಗಿದೆ ಸ್ವಾಮಿ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಪಟ್ಟಿಗಳ ಅಂಕಿಅಂಶಗಳ ಆಧಾರದಲ್ಲಿ ಹೇಳಿದಿರಲ್ಲ, ನಾನು ನಾಮಿನೇಷನ್ ಮಾಡುವುದಿಲ್ಲ ಎಂದಿರಲ್ಲ, ಇದನ್ನು ತಕ್ಷಣ ರದ್ದು ಮಾಡುತ್ತೇವೆ, ಮನೆಗೆ ಹೋಗುತ್ತೇನೆ ಎಂದು ಹೇಳಿದ ಮಂತ್ರಿಗಳೇ ಎಂಟು ಜನರನ್ನು ಮಾಡಿದ್ದಾರೆ. 11 ಜನ ಡೈರೆಕ್ಟರ್‌ಗಳಲ್ಲಿ ಎಷ್ಟು ಮಾಡಬಹುದು. ಮೂರನೇ ಒಂದು ಅಂಶ ಎಂದರೆ. ಕಾನೂನು ಪ್ರಕಾರವೇ ನೀವು ತೆಗೆದುಕೊಳ್ಳಿ. ಮೂರನೇ ಒಂದು ಅಂಶ ಎಂದರೆ ಎಷ್ಟು ನಾಮಿನೇಷನ್ ಮಾಡಿಲಿಕ್ಕಾಗುತ್ತದೆ ನಿಮಗೆ? ಎಂಟು ಜನ ನಾಮ ನಿರ್ದೇಶನ ಮಾಡುವುದರ ಮುಖಾಂತರ ಕಾನೂನಿಗೆ ವಿರುದ್ಧವಾಗಿ ಆಡಳಿತ ಹಸ್ತಕ್ಷೇಪ ಮಾಡುವಂಥ ಪ್ರವೃತ್ತಿಯನ್ನು ಮಾಡಿ ಸಹಕಾರಿ ತತ್ವಕ್ಕೆ ತಿಲಾಂಜಲಿ ಕೊಟ್ಟಂಥ ದೊಡ್ಡ ಕೀರ್ತಿ ಏನೇ ಇದ್ದರು ಅದು ಇವತ್ತಿನ ಜನತಾದಳದ ಸರ್ಕಾರಕ್ಕೆ ಸಲ್ಲಬೇಕು, ಎಂದು ಘಂಟಾಘೋಷವಾಗಿ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಚೆಪಡುತ್ತಿದ್ದೇನೆ.

ದಯವಿಟ್ಟು ಇನ್ನಾದರೂ ತಿಳಿದುಕೊಳ್ಳಿ. ಎಚ್ಚರವಾಗುವಂಥ ಸಂದರ್ಭ ಇದು. ಈ ಕಾಲಘಟ್ಟದಲ್ಲಾದರೂ ತಾವು ಎಚ್ಚರವಾಗುವುದಿಲ್ಲ ಎಂದರೆ ಮುಂದೆ ಯಾವತ್ತೂ ಎಚ್ಚರವಾಗುವಂಥ ಪರಿಸ್ಥಿತಿ ಇಲ್ಲ. ಈ ಒಂದು ದೊಡ್ಡ ರಂಗವಾದಕ ಸಹಕಾರಿ ರಂಗ ಮತ್ತೆ ನಿರ್ನಾಮವಾಗುವುದರಲ್ಲಿ ಯಾವುದೇ ಒಂದು ವ್ಯತ್ಯಾಸಗಳಿಲ್ಲ. ಇದಕ್ಕೆ ಬೇಕಾದರೆ ನಾನು ಹೇಳುತ್ತೇನೆ. 29ನೇ ಸೆಕ್ಷನ್ ಏನು ಹೇಳುತ್ತದೆ? "Nomination by the Government on the Committee of Co-operative Society." ಅದೇ ರೀತಿ ಸೆಕ್ಷನ್ 53(ಎ)ರಲ್ಲಿ ಏನು ಹೇಳುತ್ತದೆ, ಅದೂ ಹೇಳುತ್ತದೆ, ಇದೂ ಹೇಳುತ್ತದೆ. ಇದು ಎರಡರ ಮೂಲಭೂತ ಉದ್ದೇಶ ಏನು? ಸಹಕಾರಿ ರಂಗದಲ್ಲಿ ಈ ಜನಗಳಿಂದಲೇ ಬಂದಂಥ ಜನ ಇದ್ದಾಗ ತಮಗೆ ಗೊತ್ತಿದೆ, ಈ ರಾಜ್ಯದಲ್ಲಿ ಹೆಚ್ಚಿನ ಕಡೆ ಏನಾಗಿದೆ ಎಂದರೆ ಸಹಕಾರಿ ರಂಗದಲ್ಲಿ ರಾಜಕೀಯ ರಹಿತ ವ್ಯಕ್ತಿಗಳಿದ್ದಾರೆ. ಆದರೆ ಹಲವಾರು ಕಡೆಗಳಲ್ಲಿ ಏನಾಗುತ್ತದೆ. ಈ ರಾಜಕೀಯ ರಹಿತ ವ್ಯಕ್ತಿಗಳು ಚೆನ್ನಾಗಿ ಈ ಸಂಘಸಂಸ್ಥೆಗಳನ್ನು ನಡೆಸಿಕೊಂಡು ಹೋಗುವಂಥ ಸಂದರ್ಭದಲ್ಲಿ ಅಲ್ಲಿ ಹೋಗುವಂಥ ರಾಜಕಾರಣಿಗಳಿಗೆ ಯಾವುದೇ ಗೌರವಗಳು ಸಿಕ್ಕುವುದಿಲ್ಲ ಎಂದು ಹೇಳುವಂಥ ಏಕಮೇವ ಹಿನ್ನಲೆಯಿಂದ ಈ ನಾಮಿನೇಷನ್ ಮಾಡುವಂಥ ಪ್ರವೃತ್ತಿಯನ್ನು ಮಾಡಿದ್ದೀರಿ. ಇದನ್ನು ನಿಮಗೆ ರದ್ದುಮಾಡುವುದಕ್ಕಾಗುವುದಿಲ್ಲವೇ? ನೀವು ನಾಮನಿರ್ದೇಶನ ಮಾಡಿದ್ದಕ್ಕೆ ನಾನು ಇವತ್ತು ಉದಾಹರಣೆಯನ್ನು ಕೊಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ಎಲ್ಲಾ ರಾಜಕಾರಣಿಗಳೇ. ಎಲ್ಲಾ ರಾಜಕೀಯ ಪಕ್ಷಕ್ಕೆ ಸೇರಿದವರು ಎನ್ನುವುದನ್ನು ನೇರವಾಗಿ ಒಪ್ಪಿಕೊಂಡು ಬಿಡೋಣ. ಆದ್ದರಿಂದ ಈ ಸಹಕಾರಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಸಲ್ಲದು. ಇದರಲ್ಲಿ ರಾಜಕೀಯ ಇರಲೇಕೂಡದು ಎಂದು ಹೇಳಿ ಹತ್ತಾರು ವರ್ಷಗಳಿಂದ ನಾವು ಹೇಳಿಕೊಂಡು ಬಂದಿದ್ದೇವೆ. ನಾನು ಹೇಳುತ್ತೇನೆ, ಇದು ಸಾಧ್ಯವಿಲ್ಲ. ನೇರವಾಗಿ ಹೇಳುತ್ತೇನೆ. ರಾಜಕೀಯ ಇಲ್ಲದೇ ಇವತ್ತು ಸಹಕಾರಿ ಕ್ಷೇತ್ರ ನಡೆಯುವುದಿಲ್ಲ. ಸಹಕಾರಿ ಕ್ಷೇತ್ರದ ಮುಖಾಂತರವೇ ಇವತ್ತು ರಾಜಕಾರಣಿಗಳು ಮೇಲೇರತಕ್ಕಂಥ ಮೆಟ್ಟಿಲು. ಇದನ್ನು ನೇರವಾಗಿ ಒಪ್ಪಿಕೊಂಡುಬಿಡೋಣ. ನಾನು ಹತ್ತಾರು ವರ್ಷದಿಂದ ನೋಡಿ ಆಯಿತು. ಪರಿಸ್ಥಿತಿ ಅಲ್ಲಿಗೆ ತಲುಪಿದೆ.

ಶ್ರೀ ವೈ. ರಾಮಕೃಷ್ಣ : ಆದರೆ ಎಲೆಕ್ಟೆಡ್ ಮೆಂಬರ್ಸ್‌ಗಿಂತ ಜಾಸ್ತಿ ನಾಮಿನೇಷನ್ ಮಾಡಿ ಅದನ್ನು ಪೊಲಿಟಿಕಲೈಜೇಷನ್ ಮಾಡುವ ಬದಲು ಕೋ-ಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಬೆಳೆಸಿ. ಅಮೆಂಡ್ ಮಾಡಿ. ಅದನ್ನೇ ನಾವು ಹೇಳುತ್ತಿರುವುದು.

ಶ್ರೀ ಎಂ.ಸಿ. ನಾಣಯ್ಯ : ನೀವು ಹೇಳಿರುವುದಕ್ಕೆ ಒಂದು ವ್ಯತ್ಯಾಸವನ್ನು ಹೇಳುತ್ತೇನೆ. "Where Government subscribes to the share capital of a co-operative society". This is Section 29. ಅದು ಐದು ರೂಪಾಯಿ ಇರಬಹುದು, ಹತ್ತು ರೂಪಾಯಿ ಇರಬಹುದು, ಆದರೆ ಸೆಕ್ಷನ್ 53 (ಎ) "Where Government subscribes Rs. 5 lakhs or 50% of the share capital."

ಶ್ರೀ ವೈ. ರಾಮಕೃಷ್ಣ : ಹಾಗಿದ್ದರೆ ಅದಕ್ಕೆ ತಿದ್ದುಪಡಿ ಮಾಡಿ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಯಡಿಯೂರಪ್ಪನವರೇ, ಗುಜರಾತ್‌ನಲ್ಲಿ ನಾನು ನೋಡಿದ್ದೇನೆ, ಮುಂದೆ ಉತ್ತರಪ್ರದೇಶದಲ್ಲಿ ಇದ್ದದ್ದು ನೋಡಿದ್ದೇನೆ. ರಾಜಸ್ಥಾನದಲ್ಲಿ ಇದ್ದದ್ದು ನೋಡಿದ್ದೇನೆ. ಏನಾಗಿದೆ? ನೀವು ಅಧಿಕಾರಕ್ಕೆ ಬಂದಾಗ ಬಹುಶಃ ವಿರೋಧಪಕ್ಷದಲ್ಲಿದ್ದಾಗ ನಾವು ಇದನ್ನು ಹೇಳಿಕೊಂಡೇ ಬಂದೆವು. ನಿಜ ನನ್ನ ಮನಸ್ಸಿನ ವೈಯಕ್ತಿಕವಾಗಿರುವ ಕಲ್ಪನೆ ಬೇರೆ. ನನ್ನ ವೈಯಕ್ತಿಕವಾಗಿರುವ ಚಿಂತನೆ ಬೇರೆ. ಆದರೆ ನಾವು ಆಡಳಿತಪಕ್ಷಕ್ಕೆ ಬಂದಂಥ ಸಂದರ್ಭದಲ್ಲಿ ಅದಕ್ಕೆ ಬೇಕಾದಷ್ಟು ಬೇರೆ ಬೇರೆ ಕೈಕಾಲುಗಳು ಬರುತ್ತಾ ಇರುತ್ತವೆ. ಇದು ಎಲ್ಲಾ ರಾಜಕೀಯ ಪಕ್ಷಗಳು, ಆಡಳಿತ ಪಕ್ಷಕ್ಕೆ ಬಂದ ಕೂಡಲೇ ನಡೆಯುತ್ತದೆ, ನಿಲ್ಲಿಸುವುದಕ್ಕಾಗುವುದಿಲ್ಲ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಸನ್ಮಾನ್ಯ ನಾಣಯ್ಯನವರು ಹೇಳಿದರು.

ಉಪಾಧ್ಯಕ್ಷರು : ನಿಮ್ಮ ಭಾಷಣ ಮಾಡುವಾದ ಇದನ್ನು ಮಾತನಾಡಿ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಈ ನಾಮಕರಣ ಪದ್ಧತಿಗೆ ನಾವು ಸಂಪೂರ್ಣ ವಿರೋಧ ಇದ್ದೇವೆ. ಇದರ ಜೊತೆಗೆ ಸಹಕಾರ ಸಚಿವರು ಎಲ್ಲಾ ಕಾರ್ಯಕ್ರಮಗಳಿಗೆ ಹೋದ ಕಡೆಗಳಲ್ಲೆಲ್ಲಾ ಈ ಪದ್ಧತಿಗೆ ನಾವು ವಿರೋಧ ಇದ್ದೇವೆ. ಅದನ್ನು ಬಂದ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಆ ಕಾರಣ ತಾವು ಹೇಳಿದಂತೆ ಅವರೂ ಕೂಡ ಸ್ಪಷ್ಟವಾಗಿ ಹೇಳಿದರೆ ನಮಗೆ ಬಹಳ ಸಂತೋಷ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಬಹಳ ಜನರ ಅಭಿಪ್ರಾಯ ಅದೇ ಇದೆ. ನಾಮಿನೇಷನ್ ಮಾಡ ಬಾರದುಎಂದು. ವೈಯಕ್ತಿಕವಾಗಿ ಇದೆ. ಅದು ಅಮೆಂಡ್‌ಮೆಂಟ್ ಆದಾಗ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಷ್ಟರಮಟ್ಟಿಗೆ ಯಾವ ಯಾವ ಸಂದರ್ಭದಲ್ಲಿ ಇದನ್ನು ಪ್ರತಿಪಾದನೆ ಮಾಡಿದ್ದೀರಿ ಎನ್ನುವುದನ್ನು ನಾನು ನಿಮಗೆ ತಂದು ಓದುತ್ತೇನೆ. ನನ್ನದೇನೆಂದರೆ ಇದು ಎಲ್ಲಾದರೂ ಇದು ನಿಲ್ಲಬೇಕಲ್ಲ, ಆ ರೀತಿಯ ಒಂದು ತೀರ್ಮಾನ ತೆಗೆದುಕೊಳ್ಳಬೇಕಲ್ಲಾ. ಸಹಕಾರಿ ಸಂಘದ ಸದಸ್ಯರೇ ಆಯ್ಕೆ ಮಾಡಿಕೊಂಡಂಥ ಪ್ರತಿನಿಧಿ ಅಲ್ಲಿದ್ದಾಗ, ನೀವು ಈ ರೀತಿ ಕೆಲವು ಸದಸ್ಯರುಗಳು ಅಲ್ಲಿ ಎಷ್ಟು ಸದಸ್ಯರು ಆಯ್ಕೆಯಾಗಿದ್ದಾರೆ, ಜಸ್ಟ್ ಯಾರನ್ನೋ ಅಧ್ಯಕ್ಷರನ್ನು ಮಾಡುವುದಕ್ಕೆ ಇನ್ನೊಂದು ನಾಮಿನೇಷನ್ ಮಾಡಿ ಕಳುಹಿಸಿಕೊಡುವುದು, ಅದು ಅಲ್ಲಿಗೆ ನಿಲ್ಲಲಿಲ್ಲ. ಎಲ್ಲಿಎಲ್ಲಿಗೆ ಬಂದಿದೆ ಪುರಸಭೆ, ನಗರಸಭೆ ಮತ್ತೊಂದು ಮಗದೊಂದು, ನಾನು ಹೇಳುವುದು

ಈ ಪ್ರವೃತ್ತಿ ಏನಿದೆ, ಎಲ್ಲದರಲ್ಲೂ ರಾಜಕೀಯವೇಕೆ? ಎಲ್ಲದರಲ್ಲೂ, ನಿಮ್ಮವರನ್ನು ತೂರಿಸುವುದೇಕೆ? ಅಲ್ಲಿ ಗೆದ್ದಿರುವವರು ಸ್ವತಂತ್ರವಾಗಿ ಸಂಸ್ಥೆಯಲ್ಲಿ ಕೆಲಸ ಮಾಡಬೇಕಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಈಗ ಏನಿದೆ ಪರಿಸ್ಥಿತಿ? ರಾಜಕೀಯ ಕ್ಷೇತ್ರದಲ್ಲಿ ಸಹಕಾರ ಇಲ್ಲ. ಸಹಕಾರ ಕ್ಷೇತ್ರದಲ್ಲಿ ಜಾಸ್ತಿ ರಾಜಕೀಯ ಇದೆ. ಸ್ವಲ್ಪ ರಿವರ್ಸ್ ಆದರೆ ಬಹಳ ಒಳ್ಳೆಯದು.

ಶ್ರೀ ಎಂ.ಸಿ. ನಾಣಯ್ಯ : ಅದಕ್ಕೆ ನಾವು ನೀವೂ ಸೇರಿ ಪ್ರಯತ್ನಪಡೋಣ.

ಶ್ರೀ ಡಿ.ವಿ. ಸದಾನಂದಗೌಡ : ನಮ್ಮ ಸಚಿವರು ಸ್ಪಷ್ಟವಾಗಿ ರಾಜಕೀಯ ಇಲ್ಲದವರು ಸಹಕಾರಿ ರಂಗದಲ್ಲಿ ಇಲ್ಲ ಎಂದು ಹೇಳಿದ್ದಾರೆ. ಖಂಡಿತವಾಗಿ ನಾನು ಉದಾಹರಣೆಯನ್ನು ಕೊಡುತ್ತೇನೆ. ದಕ್ಷಿಣ ಕನ್ನಡದಲ್ಲಿ ಪೆರಾಜೆ ಶ್ರೀನಿವಾಸರಾಯರಂಥವರು ಯಾವುದೇ ರಾಜಕೀಯರಂಗದಲ್ಲಿ ಇಲ್ಲದ್ದಂಥ ವ್ಯಕ್ತಿ ಇವತ್ತು ಸಹಕಾರಿ ರಂಗದಲ್ಲಿದ್ದಾರೆ. ಬಹುಶಃ ತಾವು ಹೇಳಿದ್ದುದು ಅವರಿಗೆ ಅಪಚಾರವಾಗಬಹುದು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಜನ ಇವತ್ತು ರಾಜಕೀಯರಹಿತವಾದಂಥ ವ್ಯಕ್ತಿಗಳು ಅವರ ಮನಸ್ಸು ಯಾವುದಕ್ಕೋ ಓಟು ಕೊಡಬಹುದು, ಅವರು ಜನತಾದಳಕ್ಕೆ ಕೊಡಬಹುದು, ಕಾಂಗ್ರೆಸ್‌ಗೆ ಕೊಡಬಹುದು ಬಿಜೆಪಿಗೆ ಕೊಡಬಹುದು, ಆದರೆ ರಾಜಾರೋಷವಾದ ಮಾರ್ಗದಲ್ಲಿ ರಾಜಕೀಯ ಮಾಡದೆ ಸಹಕಾರಿ ತತ್ವವನ್ನೇ ಅವಲಂಬನೆ ಮಾಡಿದಂಥ ಹಲವಾರು ವ್ಯಕ್ತಿಗಳಿದ್ದಾರೆ, For each and every rule there is an exception. Atleast we should concede to that extent.

ಶ್ರೀ ಎಂ.ಸಿ. ನಾಣಯ್ಯ : ಪೆರಾಜೆ ಶ್ರೀನಿವಾಸರಾಯರನ್ನು ನಾನು ಮೂವತ್ತು ವರ್ಷಗಳಿಂದ ನೋಡಿದ್ದೇನೆ. ಪೆರಾಜೆ ಶ್ರೀನಿವಾಸರಾಯರು ಕೋ-ಆಪರೇಟಿವ್ ಯೂನಿಯನ್ ಅಧ್ಯಕ್ಷರಾಗಿ ಕಾರ್ನಾಡ್ ಸದಾಶಿವರಾಯರ ಒಬ್ಬ ಶಿಷ್ಯರಾಗಿ ಬೆಳೆದಿರತಕ್ಕಂಥದ್ದು ನಾನು ಮೂವತ್ತು ವರ್ಷದಿಂದ ಬಲ್ಲೆ, ಅವರೆಲ್ಲಾ ಆ ಗತಕಾಲದ ಸಹಕಾರ ಚಳುವಳಿಗೆ ಸೇರಿರತಕ್ಕಂಥ ಮಹಾಜನರು ಇನ್ನೂ ಕೆಲವು ಜನ ಇದ್ದಾರೆ. ಅವರೆಲ್ಲಾ 75-80 ವರ್ಷ ತಲುಪಿಬಿಟ್ಟಿದ್ದಾರೆ. ಆದರೆ ಇತ್ತೀಚೆಗೆ 15-20 ವರ್ಷಗಳ ಸಹಕಾರಿ ವಲಯವನ್ನೂ ನಾನು ನೋಡಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ : ನಿಮ್ಮ ಸರ್ಕಾರ ಬಂದ ಮೇಲೆ ಈ ಧಾಳಿ ಭಾರೀ ತೀವ್ರವಾಗಿರಬಹುದು. ಎಲ್ಲಾ ಕಡೆ ರಾಜಕೀಯ ಹಸ್ತಕ್ಷೇಪವಾಗಿರಬಹುದು. ಇದರ ಬಗ್ಗೆ ನಾನು ಹೇಳುತ್ತಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ದಯವಿಟ್ಟು ತಾವು ಒಂದು ಸ್ಪಷ್ಟೀಕರಣವನ್ನು ಈ ಸಂದರ್ಭದಲ್ಲಿ ಕೊಟ್ಟರೆ ಒಳ್ಳೆಯದು ಎಂದು ಕಾಣುತ್ತದೆ. ಏನು ಜನತಾಬಜಾರ್‌ನ ವಿಚಾರವನ್ನು ನಾನು ಹೇಳಿದ್ದೇನೆ, ಕೇವಲ 11 ಜನ ನಿರ್ದೇಶಕರು ಇರುವ ಸಂದರ್ಭದಲ್ಲಿ ಎಂಟು ಜನರನ್ನು ನೀವು ನಾಮಿನೇಷನ್ ಮಾಡಿದ್ದೀರಲ್ಲಾ ಇದು ಕಾನೂನಿಗೆ ಸರಿಯಾಗಿದೆಯೇ? ಇದು ಪೊಲಿಟಿಕಲ್ ಮೋಟಿವೇಷನ್ ಅಲ್ಲವೇ? ಕೇವಲ ಒಂದೇ ಒಂದು ಜನತಾದಳದ ಸದಸ್ಯನಿದ್ದು ಕೇವಲ ಒಂದೇ ಒಂದು ಕಾಂಗ್ರೆಸ್‌ನವರಿದ್ದು ಒಂಭತ್ತು ಜನ ಸಹಕಾರ ಭಾರತಿ ಸದಸ್ಯರು ಇರುವಂಥ ಸಂದರ್ಭದಲ್ಲಿ ಇದರಲ್ಲಿ ತಾವು ಎಂಟು ಜನರ ನಾಮಿನೇಷನ್ ಮಾಡಿದ್ದುದು ಕಾನೂನು ಪ್ರಕಾರ ಸರಿಯೇ? ನಾನು ನಿಮ್ಮಲ್ಲಿ ಕೇಳುತ್ತಿದ್ದೇನೆ. ಏನು ನಿಮ್ಮ ಮಂತ್ರಿಗಳು ಈ ಒಂದು ನಿರ್ದೇಶನ ಮಾಡುವಂಥದ್ದು ನಿಲ್ಲಿಸದಿದ್ದರೆ, ನಾನು ಮನೆಗೆ ಹೋಗುತ್ತೇನೆ ಎಂದು ಹೇಳಿದಂಥ ಮಂತ್ರಿಗಳು ಇವತ್ತು ಎಂಟು ಜನರನ್ನು

ನಾಮಿನೇಷನ್ ಮಾಡುವುದರ ಮುಖಾಂತರ ಕಾನೂನು ವಿರುದ್ಧವಾಗಿ ಒಂದು ಕೆಲಸ ಮಾಡಿದ್ದನ್ನು ತಾವು ಒಪ್ಪಿಕೊಳ್ಳುತ್ತೀರೋ ಆಮೇಲೆ ಇದಕ್ಕೆ ಉತ್ತರವನ್ನು ಕೊಡಿ.

ಶ್ರೀ ಎಂ.ಸಿ. ನಾಣಯ್ಯ : ಕಾನೂನಿಗೆ ವಿರುದ್ಧವಾಗಿರುವಂಥ ಯಾವುದೇ ಕ್ರಮವನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಬಹುದು.

ಶ್ರೀ ಡಿ.ವಿ. ಸದಾನಂದಗೌಡ : ಅದು ಬೇರೆ ಪ್ರಶ್ನೆ. ತಾವು ದಯವಿಟ್ಟು ನಮ್ಮನ್ನು ನ್ಯಾಯಾಲಯಕ್ಕೆ ಹೋಗಬೇಕೆಂದು ಹೇಳುವ ಅವಶ್ಯಕತೆ ಇಲ್ಲ. ನಿಮ್ಮ ಆತ್ಮಸಾಕ್ಷಿ, ನಿಮ್ಮ ಎದೆ ಮುಟ್ಟಿಕೊಂಡು ಹೇಳಿ. ನೀವು ಆಗಾಗ ಆತ್ಮಸಾಕ್ಷಿ ಎನ್ನುತ್ತೀರಲ್ಲಾ, ಒಮ್ಮೆ ನಿಮ್ಮ ಎದೆ ಮುಟ್ಟುಕೊಂಡು ಹೇಳಿ. ಆತ್ಮಸಾಕ್ಷಿಗೆ ಸರಿಯಾಗಿ ಮಾತನಾಡಿ. ಬೇರೆ ಮಾತನಾಡುವ ಅವಶ್ಯಕತೆ ಇಲ್ಲ, ಇನ್ನು ಎರಡು ಸೆಕ್ಷನ್‌ಗಳು 30 (ಎ) ಮತ್ತು 30(ಬಿ) ಅಪಾಯಿಂಟ್‌ಮೆಂಟ್ ಆಫ್ ಸ್ಪೆಷಲ್ ಆಫೀಸರ್ ....

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಸಾರಿ ಆಡಳಿತಪಕ್ಷಕ್ಕೆ ಬಂದಮೇಲೆ ಆತ್ಮಸಾಕ್ಷಿ ಎನ್ನುವುದು ಹೊರಟುಹೋಗುತ್ತದೆ. ಸುಮ್ಮನೆ ಏತಕ್ಕೆ ಅವರನ್ನು ಕೇಳುವುದಕ್ಕೆ ಹೋಗುತ್ತೀರಿ?

ಶ್ರೀ ಎಂ.ಸಿ. ನಾಣಯ್ಯ : ನಮಗೆ ಆತ್ಮಸಾಕ್ಷಿ ಇದೆ. ಆತ್ಮ ಸಾಕ್ಷಿ ಎಂದು ಬಂದಾದಮೇಲೆ ಹಿಂದಿನ ಆಡಳಿತ ಪಕ್ಷದವರು ಯಾರ ರೀತಿಯಾಗಿ ನಡೆದುಕೊಂಡು ಬಂದಿದ್ದಾರೆ, ಅದನ್ನೂ ನಾವು ಅನುಸರಿಸಿಕೊಂಡು ಹೋಗಬೇಕಾಗುತ್ತದೆ. ಹಿಂದಿನ ಆಡಳಿತ ಪಕ್ಷದವರು ನಡೆಸಿಕೊಂಡು ಬಂದರಲ್ಲಾ, ಅದಕ್ಕನುಗುಣವಾಗಿಯೇ ನಡೆಸಿಕೊಂಡು ಹೋಗಬೇಕಾಗುತ್ತದೆ. ಆತ್ಮಸಾಕ್ಷಿ ಬೇರೆ ಇದೆ.

ಶ್ರೀ ಡಿ.ವಿ. ಸದಾನಂದಗೌಡ : ನಾನು ತಮ್ಮಲ್ಲಿ ಒಂದು ಪ್ರಶ್ನೆ ಕೇಳುತ್ತಿದ್ದೇನೆ, ಈ ಅಪಾಯಿಂಟ್‌ಮೆಂಟ್ ಆಫ್ ಸ್ಪೆಷಲ್ ಆಫೀಸರ್ Without notice to the Board. Is it fair ಅಥವಾ ನಿಮ ಮನಸ್ಸಿಗೆ ಇದು ಸರಿ ಎಂದು ಅನಿಸುತ್ತದೆಯೇ? ನಾನು ನಿಮ್ಮಲ್ಲಿ ಇವತ್ತು ಕೇಳುತ್ತಿದ್ದೇನೆ.

ತಾವು ವಿರೋಧ ಪಕ್ಷದಲ್ಲಿದ್ದಾಗ ಸಹಕಾರಿ ಮಹಾಮಂಡಲದ ಅಧ್ಯಕ್ಷರಾಗಿದ್ದಾಗ ಏನು ಹೇಳಿದ್ದೀರಿ? ಈ ಸೆಕ್ಷನ್ಗಳು ಇರಬಾರದು ಎಂದು ಪ್ರತಿಪಾದನೆ ಮಾಡಿದಂತಹ ಅತ್ಯಂತ ಮೇರು ವ್ಯಕ್ತಿತ್ವದ ಒಬ್ಬ ಮಂತ್ರಿಗಳು ತಾವು. ಇದನ್ನು ತಾವು ಒಪ್ಪಿಕೊಳ್ಳುತ್ತೀರಿ. ಆದರೆ ಅಲ್ಲಿ ಹೋದ ಕೂಡಲೇ ಬದಲಾವಣೆ ಏಕೆ ಆಯಿತು? ನಮ್ಮ ನಾಯಕರು ಹೇಳಿದ ಹಾಗೆ ತಕ್ಷಣ ಈ ಬದಲಾವಣೆ ಆಗುವಂತಹದು. ನಮ್ಮಲ್ಲಿ ಒಂದು ಹಾವು ಇದೆ. ನಿಮಗೆ ಗೊತ್ತಿರಬಹುದು, ನೀರಿನೊಳಗೆ ಇರುವಾಗ ಒಂದು ತರಹ ನೀರಿನ ಮೇಲೆ ಹತ್ತಿದಾಗ ಒಂದು ತರಹ, ದೋಣಿ ಹತ್ತಿದಾಗ ಒಂದು ತರಹ. ನಮ್ಮಲ್ಲಿ ಅಂಥ ಒಂದು ಹಾವು ಇದೆ, ಪಗೇ ಹಾವು ಎಂದು ಹೇಳುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನೀವು ಇಲ್ಲಿ ಬಂದರೂ ಅದೇ ಆಗುತ್ತದೆ.

ಶ್ರೀ ಡಿ.ವಿ. ಸದಾನಂದ ಗೌಡ : ಹಾಗಾದರೆ ನಿಮಗೆ ಈಗ ಹಾಗೆ ಆಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧಿಕಾರಕ್ಕೆ ಬಂದರೆ ಹಾಗೆ ಆಗುವುದು.

ಶ್ರೀ ಐ.ಎಂ. ಜಯರಾಮ ಶೆಟ್ಟಿ : ನಾವು ಬಂದಾಗ ಹಾಗೆ ಆಗುತ್ತದೆ ಎಂದು ಹೇಳುವುದು ಅದು ಸರಿಯಾದ ಉತ್ತರ ಅಲ್ಲ. ಅದನ್ನು ಉದಾಹರಣೆ

ಕೊಟ್ಟಿದ್ದೇವೆ. ಕಳೆದ ಸಲ ಕಾಂಗ್ರೆಸ್ ಮಾಡಿದ್ದನ್ನು ನಾವು ಮಾಡುವುದಿಲ್ಲ ಎಂದು ಹೇಳಿಕೊಂಡಿದ್ದೀರಿ.

ಶ್ರೀ ಡಿ.ವಿ. ಸದಾನಂದ ಗೌಡ : ಏನಾಗಿದೆ ಈಗ? ಸೆಕ್ಷನ್ 30(ಎ) ಮತ್ತು 30(ಬಿ) ಇದನ್ನು ಹೇಗೆ ಉಪಯೋಗ ಮಾಡಿಕೊಳ್ಳುತ್ತೀರಿ? ಮ್ಯಾನೇಜ್ಮೆಂಟ್ಗೆ ನೋಟೀಸ್ ಕೊಡುವುದಿಲ್ಲ, ಸ್ಪೆಷಲ್ ಆಫೀಸರ್ ಅನ್ನು ಅಪಾಯಿಂಟ್ಮೆಂಟ್ ಮಾಡುವಾಗ ಅಥವಾ ಪಬ್ಲಿಕ್ ಇಂಟೆರೆಸ್ಟ್ ಇದೆ ಎಂದು ಹೇಳುವಂತಹದು - ಪಬ್ಲಿಕ್ ಇಂಟರೆಸ್ಟ್ ಆಗಿ ಉಳಿಯುವುದಿಲ್ಲ, ಅದು ಪ್ರೈವೇಟ್ ಇಂಟರೆಸ್ಟ್ ಆಫ್ ದಿ ರೂಲಿಂಗ್ ಪಾರ್ಟಿ ಆಗಿರುತ್ತದೆ. ಯಾರು ಅಧಿಕಾರದಲ್ಲಿರುವ ಪಾರ್ಟಿ ಇದೆ, ಅವರ ಇಂಟರೆಸ್ಟ್ನ ಅಧಿಕಾರದಲ್ಲಿ ಈ ಸೆಕ್ಷನ್ ಇನ್ವೋಕ್ ಮಾಡುವಂತಹ ಹಲವಾರು ಪ್ರಮೇಯಗಳನ್ನು ನೋಡಬಹುದು. ಉದಾಹರಣೆಗೆ ಮಂಗಳೂರಿನಲ್ಲಿ ಜನತಾ ಬಜಾರ್ಗೆ ಕಳೆದ ಸಾರಿ ನೀವೇನು ಮಾಡಿದಿರಿ? ಮಂಗಳೂರಿನ ಜನತಾ ಬಜಾರ್ನಲ್ಲಿ ಅತ್ಯಂತ ಉನ್ನತ ವ್ಯವಸ್ಥೆ ಇದ್ದಾಗ, ಸುಮಾರು ಮೂರು ವರ್ಷದಲ್ಲಿ ಲಾಭದಾಯಕವಾಗಿ ಲಕ್ಷಾಂತರ ರೂಪಾಯಿ ಲಾಭ ಬಂದು, ಮತ್ತೆ ಹೊಸ ಆಧುನೀಕರಣದ ವ್ಯವಸ್ಥೆ ಎಲ್ಲಾ ಆದ ನಂತರ ರಾಜಕೀಯ ಪ್ರೇರಿತವಾದಂತಹ ಹಿನ್ನೆಲೆಯಲ್ಲಿ ಆ ಬೋರ್ಡನ್ನು ಸೂಪರ್ಸೀಡ್ ಮಾಡಿದಿರಿ. ಸ್ಪೆಷಲ್ ಆಫೀಸರನ್ನು ನೇಮಕ ಮಾಡಿದಿರಿ.

ಇನ್ ದಿ ಇಂಟರೆಸ್ಟ್ ಆಫ್ ಪಬ್ಲಿಕ್ ಎಂದು ಇಟ್ಟುಕೊಳ್ಳಿ. ಏನು ಆಯಿತು ಸ್ವಾಮಿ? ಜನತಾ ಬಜಾರ್ನಲ್ಲಿದ್ದಂತಹ ಇವತ್ತಿನ ಎಂ.ಡಿ ಕಳೆದ ಒಂದೂ ಕಾಲು ವರ್ಷದಲ್ಲಿ ಆ ಬೋರ್ಡ್ ಸೂಪರ್ ಸೀಡ್ ಆದ ನಂತರ ಎಷ್ಟು ನಷ್ಟ ಆಗಿದೆ? ನಾನು ಮೊನ್ನೆ ಪ್ರಶ್ನೆ ಕೇಳಿದಾಗ ಮಾನ್ಯ ಸಹಕಾರ ಮಂತ್ರಿಗಳು ಹೇಳಿದರು ಹೌದು ತುಂಬಾ ನಷ್ಟ ಆಗಿದೆ, ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವಂತಹ ಪ್ರಯತ್ನಗಳನ್ನು ಮಾಡುತ್ತೇವೆಂದು ಮಾತ್ರ ಹೇಳಿದರು. ಅಂಕಿ ಅಂಶಗಳ ಆಧಾರ ನನ್ನಲ್ಲಿದೆ. ಬಹುಶಃ ಇವತ್ತು ಮಾನ್ಯ ಉಪಾಧ್ಯಕ್ಷರು ಸಮಯ ಕೊಡಲಿಕ್ಕಿಲ್ಲ. ಇಲ್ಲದಿದ್ದರೆ ಪೂರ್ತಿ ಪ್ರಮಾಣದ ಸಹಕಾರಿ ಸಂಘದಲ್ಲಿ ಈ ಸೆಕ್ಷನ್ 30(ಎ) ಮತ್ತು 30(ಬಿ) ಈ ಎರಡು ಸೆಕ್ಷನ್ಗಳಿಂದ ಆದ ಅನ್ಯಾಯಗಳನ್ನು ಹಂತ ಹಂತವಾಗಿ ಅಂಕಿ ಅಂಶಗಳ ಆಧಾರ ಸಮೇತ 4-5 ಸಹಕಾರಿ ಸಂಘಗಳ ಉದಾಹರಣೆಯನ್ನು ಕೊಡಲಿಕ್ಕೆ ತಯಾರು ಇದ್ದೇನೆ. ರಾಜ್ಯ ಮಟ್ಟದ ಸಹಕಾರಿ ಸಂಘಗಳು ಇವೆ.

ಅದೇ ರೀತಿಯಾಗಿ ನಾನು ವಿವರ ಕೊಡಲು ತಯಾರಿದ್ದೇನೆ. ದಯವಿಟ್ಟು ನನ್ನ ವಿನಂತಿ ಇಷ್ಟೇ. ನಾನು ಬೇರೆ ಏನೂ ಹೇಳುವುದಕ್ಕೆ ಇಷ್ಟಪಡುತ್ತಿಲ್ಲ, ಈ ಸೆಕ್ಷನ್ 30()ಎ ಮತ್ತು 30(ಬಿ) ಅನ್ನು ಕೂಡ ತಾವು ಈ ಪುಸ್ತಕದಿಂದ ತೆಗೆದು ಹಾಕುವಂತಹ ಕೆಲಸಗಳನ್ನು ಮಾಡಿದರೆ, ಬಹುಶಃ ಸಹಕಾರ ಎಂದು ಹೇಳುವಂತಹ ಶಬ್ದಕ್ಕೆ ಪೂರ್ಣ ಮಾಹಿತಿಯ ಅರ್ಥ ಬರುತ್ತದೆ. ಇವತ್ತು ಸಮಾಜದಲ್ಲಿ ಅತ್ಯಂತ ಒಂದು ದೊಡ್ಡ 'ಸಂಘಟನೆ ಆದಂತಹ ಸಹಕಾರಿ ಮಾಧ್ಯಮಕ್ಕೆ ನೀವು ಚಾಲನೆ ಕೊಟ್ಟ ಹಾಗೆ ಆಗುತ್ತದೆ, ಎಂದು ಹೇಳುವಂತಹ ವಿನಂತಿಯನ್ನೂ ಕೂಡ ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಷ್ಟಪಡುತ್ತಿದ್ದೇನೆ. ಇನ್ನೊಂದು ಇದೆಲ್ಲಕ್ಕಿಂತಲೂ ದೊಡ್ಡದು. 121 ಸಂಖ್ಯೆ ಕೂಡ ದೊಡ್ಡದು. ಅದರ ವ್ಯವಸ್ಥೆ ಕೂಡ ದೊಡ್ಡದು. ಸೆಕ್ಷನ್ 121 ಆಕ್ಟ್‌ನ ಅಗತ್ಯ ಇಲ್ಲ. ಒಂದೇ ಒಂದು ಸೆಕ್ಷನ್ ತಾವು ಓದಿದರೆ ಗೊತ್ತಾಗುತ್ತದೆ ಈ ಆಕ್ಟ್‌ನ ಅವಶ್ಯಕತೆ ಇಲ್ಲ ಎಂದು.

ಈ ಆಕ್ಟಿಗಿಂತ ಮಿಗಿಲಾಗಿ ಆ ಒಂದು ಸೆಕ್ಷನ್ ಅನ್ನು ತಾವು ಇನ್ಸರ್ಟ್ ಮಾಡುವ ಮುಖಾಂತರ ಯಾವುದೇ ಸಂದರ್ಭದಲ್ಲಿ ಕೂಡ ಹಸ್ತಕ್ಷೇಪವನ್ನು ಮಾಡುವಂತಹ ಪ್ರಯತ್ನಗಳನ್ನು ಮಾಡುತ್ತೀರಿ. ಸ್ವಾಮಿ ನಾನು ಕೇಳುತ್ತೇನೆ, ಕರ್ನಾಟಕ ರಾಜ್ಯದಲ್ಲಿ ಎಷ್ಟು ಸಂಘ ಸಂಸ್ಥೆಗಳ ಅಧ್ಯಕ್ಷರನ್ನು ನೀವು ಸೆಕ್ಷನ್ 121ರ ಪ್ರಕಾರ ಆರು ವರ್ಷದ ಅವಧಿಯ ಮೇಲೆ ಮುಂದುವರಿಸಿದಿರಿ? ಸುಮಾರು 10-16 ಸಂಘಟನೆಗಳಲ್ಲಿ ಅಧ್ಯಕ್ಷರ ಅವಧಿಯನ್ನು ಆರು ವರ್ಷಕ್ಕಿಂತ ಜಾಸ್ತಿ ಮಾಡಿದ್ದು ಏಕೆ? ರಾಜಕೀಯ ಲಾಭಕ್ಕೆ ಬೇಕಾಗಿ ಮಾಡಿದ್ದುದು ನಿಮಗೆ ಚುನಾವಣೆಗಳು ಬಂದಾಗಲೆಲ್ಲಾ ಆರು ವರ್ಷ ಆಯಿತು ಎಂದು ಹೇಳಿದರೆ, ತಕ್ಷಣ ಅಧ್ಯಕ್ಷರನ್ನು ಮುಂದುವರಿಸುವಂತಹ ಪ್ರಯತ್ನ ಮಾಡಿದಿರಿ. ನಾನು ಉದಾಹರಣೆ ಕೊಡುತ್ತೇನೆ.

ಮಂಗಳೂರಿನ ಎಚ್‌ಕೆ ಸಂಸ್ಥೆಯ ಅಧ್ಯಕ್ಷರನ್ನು ಮೂರು ತಿಂಗಳ ಕಾಲ ಇದೇ ಮಂತ್ರಿಗಳು ಬಂದ ಮೇಲೆ ಮುಂದುವರಿಸಿದಿರಿ. ಕಾನೂನಿನ ಪ್ರಕಾರ ಅದನ್ನು ಮುಂದುವರಿಸುವಂತಹ ಅವಕಾಶ ಇಲ್ಲ. ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಇಲ್ಲಿ ಸದನದಲ್ಲಿ 121 ಸೆಕ್ಷನ್ ಅನ್ನು ನಾವು ಇನ್ವೋಕ್ ಮಾಡುವುದಿಲ್ಲ ಎಂದು ಹೇಳಿದಂತಹವರು ನಮ್ಮ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರ ಅವಧಿಯನ್ನು ಆರು ವರ್ಷ ಕಳೆದ ಮೇಲೆ ಮುಂದುವರಿಸಿದಂತಹ ದಾಖಲೆಗಳು ಇವೆ. ದಯವಿಟ್ಟು ನನ್ನ ವಿನಂತಿ. ನಾನು ಹೆಚ್ಚೇನೂ ಕೇಳುತ್ತಾ ಇಲ್ಲ. ಇದನ್ನು ಡಿಲೀಟ್ ಮಾಡಿ, ನಿಮಗೆ ಏಕೆ ಇದು ಬೇಕು? ಯಾವ ಬ್ಯಾಂಕನ್ನೂ ನಾನು ಕೆಟ್ಟದು ಎಂದು ಹೇಳುವುದಿಲ್ಲ. ನಿಮ್ಮಂತಹ ಅಧಿಕಾರೂಢ ರಾಜಕೀಯ ಹಸ್ತಕ್ಷೇಪ ಅದರೊಳಗೆ ಆದಾಗ ಅದು ಕೆಟ್ಟು ಹೋಗುತ್ತದೆ. ಕೆಟ್ಟು ಹೋಗುತ್ತದೆ, ಕೊಳೆತು ಹೋಗುತ್ತದೆ. ದೊಡ್ಡ ಕುಂಬಳಕಾಯಿ ಆಗಿ, ಒಳಗೆ ಟೊಳ್ಳು ಆದರೆ ಗೊತ್ತಾಗುವುದಿಲ್ಲ. ಮತ್ತೆ ಅದು ಒಡೆದಾಗ ಮಾತ್ರ ಬಾಕಿ ಎಲ್ಲಾ ವ್ಯವಹಾರಗಳು ಗೊತ್ತಾಗುತ್ತದೆ. ದಯವಿಟ್ಟು ಈ ಐದಾರು ಸೆಕ್ಷನ್ನುಗಳನ್ನು ಡಿಲೀಟ್ ಮಾಡುವಂತಹ ವ್ಯವಸ್ಥೆ ಮಾಡಿ. 27(1), 29, 30(ಎ) ಮತ್ತು 30(ಬಿ) 53ಎ, ಮತ್ತು 121 ಈ ಸೆಕ್ಷನ್ನುಗಳನ್ನು ತಾವು ಡಿಲೀಟ್ ಮಾಡುವಂತಹ ಒಂದು ಪ್ರಯತ್ನ ಮಾಡಿದಾಗ ಖಂಡಿತ ಸಹಕಾರಿ ರಂಗಕ್ಕೆ ಒಂದು ಕಾಯಕಲ್ಪ ಕೊಟ್ಟ ಹಾಗೆ ಆಗುತ್ತದೆ. ಮುಂದಿನ ಜನರ ಭವಿಷ್ಯದ ದೃಷ್ಟಿಯಿಂದ ಯಾರು ಈ ಸಹಕಾರಿ ಸಂಗ ಬೇಕು ಎಂದು ಹೇಳುವವರು ಇದ್ದಾರೆ, . ಅವರ ಭವಿಷ್ಯ ಒಳ್ಳೆಯದಾಗಲಿಕ್ಕೆ ಸಾಧ್ಯ ಇದೆ ಎಂಬ ವಿಚಾರವನ್ನು ಹೇಳುತ್ತೇನೆ. ಇನ್ನು ಒಂದೆರಡು ಸಣ್ಣ ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಇವತ್ತು ಸಹಕಾರಿ ರಂಗದಲ್ಲಿ ಏನಾಗುತ್ತದೆ ಎಂಬುದು ನಮಗೆಲ್ಲಾ ಗೊತ್ತು. ಸಹಕಾರಿ ರಂಗದಲ್ಲಿ ನಾವೆಲ್ಲಾ ಪ್ರೈಮರಿ ಕೋ-ಆಪರೇಟೀವ್ ಸೊಸೈಟಿ ತೆಗೆದುಕೊಳ್ಳುತ್ತೇವೆ ಅಥವಾ ಅದರಿಂದ ಮೇಲ್ಪಟ್ಟ ಪಿಎಲ್ಡಿ ಬ್ಯಾಂಕ್ಗಳನ್ನು ತೆಗೆದುಕೊಳ್ಳುತ್ತೇವೆ. ಅಥವಾ ಯಾವುದಾದರೂ ಮಾರ್ಕೆಟಿಂಗ್ ಬ್ಯಾಂಕ್ಗಳನ್ನು ತೆಗೆದುಕೊಳ್ಳುತ್ತೇವೆ.

ಅಲ್ಲಿ ಏನಾಗುತ್ತಿದೆ ಸ್ವಾಮಿ? ಯಾವುದಾದರೂ ಒಂದು ಬ್ಯಾಂಕಿನಿಂದ ಎಲ್ಲಾ ವಿಧಧ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆಯೇ, ಇದನ್ನು ನಾವು ಆಲೋಚನೆ ಮಾಡಬೇಕು. ಬದಲಿ ವ್ಯವಸ್ಥೆ ಮಾಡಬೇಕು. ಎಲ್ಲಾ ಸಮಸ್ಯೆಗಳಿಗೆ ಅಂದರೆ ಯಾವ ಸಮಸ್ಯೆಗಳು? ಆರ್ಥಿಕವಾಗಿ ಅವನ ನಿಜವಾದ ಸಮಸ್ಯೆಗಳಿಗೆ ಸ್ಪಂದನ ಆಗುವಂತಹ ರೀತಿಯಲ್ಲಿ ಸಿಂಗಲ್ ವಿಂಡೋ ಸಿಸ್ಟಂ ಮಾಡುವಂತಹ ಒಂದು ವ್ಯವಸ್ಥೆ ಆಗಬೇಕು. ಸಾಮಾನ್ಯ ರೈತ ಒಂದು ಸಾಲ ಬೇಕಾದರೆ ಕೋ-ಆಪರೇಟಿವ್ ಸೊಸೈಟಿಗೆ ಹೋಗಬೇಕು.

ಇನ್ನೊಂದು ಸಾಲ ಬೇಕಾದರೆ ರಾಷ್ಟ್ರೀಕೃತ ಬ್ಯಾಂಕ್ಗೆ ಹೋಗಬೇಕು. ಇವತ್ತು ರಾಷ್ಟ್ರೀಕೃತ ಬ್ಯಾಂಕ್ ಮತ್ತು ನಮ್ಮ ಕೋ-ಆಪರೇಟೀವ್ ಬ್ಯಾಂಕ್ಗಳಲ್ಲಿ ಯಾವ ರೀತಿ ಪೈಪೋಟಿ ನಡೆಯುತ್ತಿದೆ ಎಂಬುದು ತಮಗೆ ಗೊತ್ತಿದೆ. ತಾವೇನಾದರೂ ಒಂದೇ ರೀತಿಯ ಬಡ್ಡಿ ವ್ಯವಸ್ಥೆ ಮಾಡಿದ್ದೀರೋ ಕೋ-ಆಪರೇಟೀವ್ ಸೆಕ್ಟಾರ್ನಲ್ಲಿ ಎಲ್ಲಾ ಸಾಲಗಳಿಗೆ ಒಬ್ಬ ಸದಸ್ಯ ಪಡೆದುಕೊಳ್ಳುವಂತಹ ವಿವಿಧ ರೀತಿಯ ಸಾಲಗಳಿಗೆ ಒಂದೇ ರೀತಿಯ ಬಡ್ಡಿಯ ವ್ಯವಸ್ಥೆ ಮಾಡಿದರೆ ಏನಾಗುತ್ತದೆ? ಅವನಿಗೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಆಗುತ್ತದೆ. ಅಗ್ರಿಕಲ್ಚರಲ್ ಮತ್ತು ನಾನ್ ಅಗ್ರಿಕಲ್ಚರಲ್ ಲೋನ್ ವಿಚಾರ. ಉದಾಹರಣೆಗೆ ಒಬ್ಬ ರೈತ ಇದ್ದಾನೆ.

ಆ ರೈತನಿಗೆ ಐದಾರು ಮಕ್ಕಳು ಇದ್ದಾರೆ. ಆ ರೈತ ಕೃಷಿಗೆ ಅವಲಂಬಿತವಾಗಿ ಬದುಕಲಿಕ್ಕೆ ಸಾಧ್ಯ. ಅವನ ಮಗ ಕೃಷಿಗೆ ಅವಲಂಬಿತವಾಗಿ ಬದುಕಲಿಕ್ಕೆ ಸಾಧ್ಯ ಆಗುವುದಿಲ್ಲ. ಆ ಸಂದರ್ಭದಲ್ಲಿ ಅವನಿಗೆ ನಾನ್ ಅಗ್ರಿಕಲ್ಚರಲ್ ಲೋನ್ಸ್ ಯಾವುದಾದರೂ ಬೇಕು. ಈಗ ಪ್ರಾಥಮಿಕ ಬ್ಯಾಂಕ್ಗಳಲ್ಲಿ ಪಿಎಲ್ಡಿ ಬ್ಯಾಂಕ್ನಲ್ಲಿ ಕೆಲವನ್ನು ಇನ್ಸರ್ಟ್ ಮಾಡಿದಿರಿ. ಆದರೂ ಕೂಡ ಅದು ಸಾಕಾಗುವುದಿಲ್ಲ. ಅದಕ್ಕೆ ನನ್ನ ಅಭಿಪ್ರಾಯ ಇಷ್ಟೆ. ತಾವು ಈ ಅಗ್ರಿಕಲ್ಚರಲ್ ಸೆಕ್ಟಾರ್ಗೆ ಸ್ವಲ್ಪ ಹೆಚ್ಚಿನ ಒತ್ತು ಕೊಡುವುದರ ಮುಖಾಂತರ, ಗ್ರಾಮಾಂತರ ಮಟ್ಟದಲ್ಲಿ ಯಾರು ನಿರುದ್ಯೋಗಿ ಯುವಕರು ಇದ್ದಾರೆ, ಅವರ ನಿರುದ್ಯೋಗವನ್ನು ಹೋಗಲಾಡಿಸುವಂತಹ ಒಂದು ದೊಡ್ಡ ವ್ಯವಸ್ಥೆಯನ್ನು ಇದರಿಂದ ಮಾಡಲು ಸಾಧ್ಯ. ಅದಕ್ಕೆ ಅಗ್ರಿಕಲ್ಚರ್ಗೆ ಎಷ್ಟು ಇಂಪಾರ್ಟೆನ್ಸ್ ಕೊಡುತ್ತೀರಿ? ಅದೇ ರೀತಿ ಬ್ಯಾಂಕ್ಗಳಲ್ಲಿ ಅದೇ ರೀತಿ ಸೊಸೈಟಿಗಳಲ್ಲಿ ನಾನ್ ಅಗ್ರಿಕಲ್ಚರಲ್ ಸೆಕ್ಟಾರ್ಗೆ ಕೂಡ ಅಷ್ಟೇ ಒಂದು ಇಂಪಾರ್ಟೆನ್ಸ್ ಕೊಡಬೇಕು ಎಂದು ಹೇಳುವಂತಹ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ ಮತ್ತೆ ಇನ್ಸೆಂಟೀವ್ ವಿಚಾರ. ಯಾರು ಸರಿಯಾಗಿ ಲೋನ್ ಕಟ್ಟುತ್ತಾರೆಂದು ನಮಗೆಲ್ಲಾ ಗೊತ್ತು. ಸಾಧಾರಣವಾಗಿ ಯಾರು ಸಾಲ ಎಲ್ಲಿ ಕಟ್ಟುವುದಿಲ್ಲ? ಅವ ಐದು ವರ್ಷ ಡಿಫಾಲ್ಟರ್ ಆದ ಮೇಲೆ ಅವರ ಬಡ್ಡಿ ಮನ್ನಾ ಆಗುತ್ತದೆ. ಯಾರು ಸರಿಯಾಗಿ ಪಾವತಿ ಮಾಡುತ್ತಿದ್ದಾನೆ, ವರ್ಷಂಪ್ರತಿ ಪಾವತಿ ಮಾಡುತ್ತಿದ್ದಾನೆ, ಅದು ಅಲ್ಪಾವಧಿ ಸಾಲ, ದೀರ್ಘಾವಧಿ ಸಾಲ ಇರಬಹುದು, ಆದರೆ ಸರಿಯಾಗಿ ಕಂತುಗಳನ್ನು ಪಾವತಿ ಮಾಡುತ್ತಾನೆ ಅವನಿಗೆ ಇನ್ಸೆಂಟೀವ್ ಇಲ್ಲ. ಇದು ನಮಗೆಲ್ಲಾ ಗೊತ್ತಿರುವಂತಹ ಸಂಗತಿ. ಏಕೆಂದು ಕೇಳಿದರೆ ನಮ್ಮ ಮಂತ್ರಿಗಳು ಹೇಳುತ್ತಾರೆ ಅಥವಾ ಅಧಿಕಾರಿಗಳು ಹೇಳುತ್ತಾರೆ. ರಿಕವರಿ ಆಗಲಿಕ್ಕೆ ಹಾಗೆ ಮಾಡಿದರೆ ಕೂಡಲೇ ನಮ್ಮ ಎಲ್ಲಾ ಡ್ಯೂಸ್ ಬಂದು ಬಿಡುತ್ತದೆ ಎಂದು ಹೇಳುತ್ತಾರೆ. ರಿಕವರಿ ಬರುತ್ತದೆ ಎಂದು ಹೇಳುತ್ತಾರೆ. ಆ ರೀತಿ ಮಾಡಬಾರದು. ಯಾರು ನಿಜವಾಗಿ ಪೇಮೆಂಟ್ ಮಾಡುತ್ತಾನೆ ಯಾರು ಸಮಯಕ್ಕೆ ಸರಿಯಾಗಿ ತನ್ನ ಸಾಲಗಳನ್ನು ಮರು ಪಾವತಿ ಮಾಡುವಂತಹ ವ್ಯವಸ್ಥೆಗಳನ್ನು ಬೆಳೆಸಿಕೊಂಡಿದ್ದಾನೆ.

ಈ ಸಮಜದಲ್ಲಿ ಸರಿಯಾಗಿ ನಡೆಯುವಂತಹ ವ್ಯಕ್ತಿಗಳಿಗೆ ತಾವು ಒಳ್ಳೆಯ ಪೂರಕವಾದ ವ್ಯವಸ್ಥೆಗಳನ್ನು ಮಾಡಬೇಕು. ಅಂದರೆ ಯಾವುದಾದರೂ ಇನ್ಸೆಂಟೀವ್ ಕೊಡುವಂತಹ ರೀತಿಯಲ್ಲಿ ಕೆಲಸಗಳನ್ನು ಮಾಡಿದರೆ ರೈತನಿಗೆ ಮತ್ತಷ್ಟು ಪಾವತಿ ಮಾಡಲು ಮನಸ್ಸು ಬರುತ್ತದೆ. ರೈತ ಎಂದಲ್ಲ. ಯಾರು ಸಹಕಾರಿ ಸಂಘದಿಂದ ಸಾಲ ಪಡೆದುಕೊಂಡಿರುತ್ತಾರೆ, ಅವರಿಗೆ ಪಾವತಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದಕಾರಣ ಅದನ್ನು ಕೂಡ ತಾವು ಇದರಲ್ಲಿ ಸೇರಿಸಿಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಪಿಎಲ್ಡಿ ಬ್ಯಾಂಕ್ಗಳ ಬಗ್ಗೆ ನಮ್ಮ ಸಚಿವರು ಬಹಳ ದೊಡ್ಡ ಉಲ್ಲೇಖ

ಮಾಡಿದರು. ಈ ಪಿಎಲ್ಡಿ ಬ್ಯಾಂಕ್ಗಳು ನಮಗೆ ಬಹಳ ದೊಡ್ಡ ಬಿಳಿ ಆನೆಗಳು ಆಗಿವೆ, ಸಾಕಷ್ಟು ರೀತಿಯಲ್ಲಿ ನಮಗೆ ಲಾಸ್ ಕೊಡುವಂತಹ ಸಂಗತಿಗಳು ಪಿಎಲ್ಡಿ ಬ್ಯಾಂಕ್ಗಳಿಂದ ಆಗುತ್ತಿವೆ ಎಂದು ಹೇಳಿದರು. ಆದರೆ ಎಷ್ಟೋ ಕಡೆಗಳಲ್ಲಿ ನಾವು ನೋಡಿದ್ದೇವೆ. ಇವತ್ತು ಪಿಎಲ್ಡಿ ಬ್ಯಾಂಕುಗಳು ಕೂಡ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿವೆ. ಏಕೆ ಅದು ಕೆಲಸ ಮಾಡುತ್ತಿಲ್ಲ ಎಂದು ಹೇಳಿದರೆ ಅದರಲ್ಲಿರುವಂತಹ ಆಡಳಿತ ವರ್ಗದವರು ಯಾರು ಇದ್ದಾರೆ, ಅವರಿಗೆ ಏನೂ ರೈಟ್ಸ್ ಇಲ್ಲ, ನಾನು ಹೇಳುತ್ತೇನೆ. ನಮ್ಮ ನಾಗಮಾರಪಲ್ಲಿಯವರು ಇದ್ದಾರೆ,

ಒಂದು ಪಿಎಲ್ಡಿ ಬ್ಯಾಂಕಿನ ಅಧ್ಯಕ್ಷರಾದರೆ ಅಥವಾ ನಿರ್ದೇಶಕ ಆದರೆ ಅವರಿಗೆ ಏನು ಸವಲತ್ತು ಇದೆ? ಮೀಟಿಂಗ್ ಅಟೆಂಡ್ ಆಗುವುದು, ದಸ್ಕತ್ ಹಾಕುವುದು, ಪೇಪರ್ಗಳನ್ನು ಜಿಲ್ಲಾ ಕಛೇರಿಗೋ ಅಥವಾ ಬೆಂಗಳೂರಿನ ಕೇಂದ್ರ ಕಛೇರಿಗೋ ಕಳುಹಿಸುವುದು. ಇದನ್ನು ಹೊರತು ಪಡಿಸಿ ಒಂದು ನಿರ್ದೇಶಕನಿಗೆ ಅಥವಾ ಯಾವುದಾದರೂ ಅದರ ಅಧ್ಯಕ್ಷನಿಗೆ ಬೇರೆ ಯಾವುದೇ ಅಧಿಕಾರ ಇಲ್ಲ. ಸಾಲಕ್ಕೆ ರೆಕ್ಮಂಡ್ ಮಾಡುವಂತಹದು ಮಾತ್ರ ಅಧಿಕಾರ ಇದೆ. ಆದರೆ ಸಾಲುಗಳನ್ನು ಕೊಡಿಸಬೇಕಾದಂತಹ ಒಂದು ವ್ಯವಸ್ಥೆ ಆಗಬೇಕು. ಇವತ್ತು ನಿಜವಾದ ವಿಚಾರ, ನಬಾರ್ಡ್ನಿಂದಲೋ ಅಥವಾ ಬೇರೆ ಕಡೆಗಳಿಂದಲೋ ಬರುವಂತಹ ಸಾಲ ಒಂದು ಸಿಸ್ಟಮೆಟಿಕ್ ಆಗಿ ವಿತರಣೆ ಮಾಡುವಂತಹ ವ್ಯವಸ್ಥೆ ಮಾತ್ರ ಅಲ್ಲಿದ್ದರೂ ಕೂಡ ಅಲ್ಲಿರುವಂತಹ ಆಡಳಿತ ಮಂಡಲಿಯ ನಿರ್ದೇಶಕನಿಗೆ ಆ ವ್ಯವಸ್ಥೆಗೆ ಪೂರಕವಾದ ರೀತಿಯಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಾಗ ಅವನಿಗೆ ರಿಕವರಿಗೂ ಅನುಕೂಲ ಆಗುತ್ತದೆ. ಅದನ್ನು ಕೊಡಿಸುವಂತಹ ಪದ್ಧತಿ ಕೂಡ ಒಳ್ಳೆಯದಾಗುತ್ತದೆ.

(ಮಾನ್ಯ ವೈ. ರಾಮಕೃಷ್ಣ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು ಯಾವುದೇ ಒಂದು ಆಡಳಿತ ಮಂಡಲಿ ಇದ್ದಾಗ, ಆ ಆಡಳಿತ ಮಂಡಲಿಯ ಅಧ್ಯಕ್ಷರು ಕೇವಲ ನೆಪ ಮಾತ್ರಕ್ಕೆ, ನಾಮ ಮಾತ್ರಕ್ಕೆ ಅಧ್ಯಕ್ಷರಾಗಿ ಉಳಿಯಬಾರದು. ಅವರಿಗೆ ಆ ಸಂಘಟನೆಯ ಮೇಲೆ ಪ್ರೀತಿ, ವಿಶ್ವಾಸ ಬರುವಂತಹ ಒಂದು ಮೂಲಭೂತ ವ್ಯವಸ್ಥೆಯನ್ನು ಕೂಡ ಮಾಡಿಕೊಡಬೇಕು ಎಂದು ಹೇಳುವಂತಹ ವಿಚಾರವನ್ನು ಈ ಸಂದರ್ಭದಲ್ಲಿ ಉಲ್ಲೇಖ ಮಾಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಇದರ ಜೊತೆಗೆ ಕೊನೆಗೆ ಸಹಕಾರ ಸಂಘದ ವಿಚಾರ.

ಶ್ರೀ ಎಂ.ಸಿ. ನಾಣಯ್ಯ : ಸಾಲ ಮನ್ನದ ಚಿಂತನೆ ವಿಚಾರವನ್ನು ತಿಳಿಸಿ.

ಶ್ರೀ ಡಿ.ವಿ. ಸದಾನಂದ ಗೌಡ : ಸಾಲ ಮನ್ನದ ಬಗ್ಗೆ ನಮ್ಮ ಚಿಂತನೆ ಅಂದರೆ ಸಾಲ ರಿಕವರಿ ಆಗಬೇಕು. ಅದರ ಬಗ್ಗೆ ಎರಡು ಮಾತು ಇಲ್ಲ. ಸಾಲ ಮನ್ನಾ ಮಾಡುವಂತಹದು ಇಷ್ಟರಮಟ್ಟಿಗೆ ಮಾಡಿದ್ದು ಸರಿ. ಇನ್ನು ಮುಂದಕ್ಕೆ ಮನ್ನಾ ಮಾಡಬೇಕು ಎಂದು ನಾನೂ ವಿನಂತಿ ಮಾಡುತ್ತಿಲ್ಲ. ಏಕೆಂದರೆ ಒಂದು ಹಂತದಲ್ಲಿ ಅವನಿಗೆ ಸಾಲ ಬೆಳೆದು ಬೆಳೆದು ಹೊರೆ ಆದಾಗ ಅದನ್ನು ಒಮ್ಮೆ ನಿಭಾಯಿಸುವುದು ನಮ್ಮ ಕರ್ತವ್ಯ. ಇನ್ನು ನಾವು ಅವನನ್ನು ಮೋಟಿವೇಟ್ ಮಾಡಬೇಕು. ನೀನು ಸಾಲವನ್ನು ಸರಿಯಾದ ಸಮಯಕ್ಕೆ ಪಾವತಿ ಮಾಡು. ಅದು ಮತ್ತೆ ಕ್ರೋಢೀಕರಣ ಆಗುವುದು ಬೇಡ. ಮತ್ತೆ ಕ್ರೋಢೀಕರಣ ಆದರೆ ಮತ್ತೆ ಸಂಕಷ್ಟಕ್ಕೆ ಸಿಲುಕುತ್ತೀರಿ ಎಂದು ತಿಳಿಸಬೇಕು. ನಾನು ಇನ್ಸೆಂಟೀವ್ ಬಗ್ಗೆ ಪ್ರಸ್ತಾಪ ಮಾಡಿದಾಗ ತಾವು ಆಲೋಚನೆ ಮಾಡಬೇಕಾಗಿತ್ತು. ಏಕೆ ನಾನು ಇನ್ಸೆಂಟೀವ್ ಬಗ್ಗೆ ಪ್ರಸ್ತಾಪ ಮಾಡಿದೆ

ಎಂದು. ಒಬ್ಬ ವ್ಯಕ್ತಿ ಸಾಲವನ್ನು ಸರಿಯಾದ ಸಂದರ್ಭದಲ್ಲಿ ಪಾವತಿ ಮಾಡಿದಾಗ ಇನ್ಸೆಂಟೀವ್ಕೊಡಬೇಕು ಎಂದು ಏಕೆ ಹೇಳಿದೆ ಅಂದರೆ ಅವನ ಮನಸ್ಸಿನಲ್ಲಿ ನಾನು ಸಾಲವನ್ನು ನಿಗದಿತ ಸಮಯದಲ್ಲಿ ಪಾವತಿ ಮಾಡಬೇಕು ಎಂಬ ವಿಚಾರ ಬರಬೇಕು ಎಂದು. ಹಿಂದೆ ಒಂದು ಕಾಲ ಇತ್ತು. ಸಹಕಾರಿ ಸಂಘಗಳನ್ನು ಮುಳುಗಿಸುವಂತಹ ವ್ಯವಸ್ಥೆ ಜಾಸ್ತಿ ಇದ್ದಾಗ, ಯಾರು ಪಾವತಿ ಮಾಡದೇ ಇದ್ದರೆ ಅದು ದಕ್ಕಿ ಹೋಗುತ್ತದೆ ಎಂದು ಹೇಳುವಂತಹ ಭಾವನೆ ಜನರಲ್ಲಿತ್ತು.

ಅದನ್ನು ನಾವು ಹೋಗಲಾಡಿಸಬೇಕು. ಆ ಮನುಷ್ಯನಿಗೆ ಯಾರು ಸದಸ್ಯ ಇದ್ದಾನೆ, ಯಾರು ಸಾಲವನ್ನು ಪಡೆದುಕೊಂಡಿದ್ದಾನೆ. ಅವನಿಗೆ ಮೋಟಿವೇಷನ್ ಬೇಕು. ನೀನು ಸಾಲ ಪಡೆದುಕೊಳ್ಳಬೇಕು. ಸಾಲದಿಂದ ಒಳ್ಳೆಯ ರೀತಿ ಕೃಷಿ ಮಾಡಬೇಕು ಅಥವಾ ಯಾವುದಾದರೂ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು. ನೀನು ಒಳ್ಳೆಯವನಾಗಬೇಕು. ಪುನಃ ನೀನು ಅದರಲ್ಲಿ ಉದ್ಧಾರವಾಗಿ ರೀಪೇಮೆಂಟ್ ಮಾಡಬೇಕು. ಬರುವ ಸಾರಿ ಹೆಚ್ಚಿಗೆ ಸಾಲ ಪಡೆದುಕೊಂಡು ಹೆಚ್ಚಿಗೆ ವ್ಯವಸ್ಥೆಗಳನ್ನು ಮಾಡುವಂತಹ ವ್ಯವಸ್ಥೆ ಮಾಡಬೇಕು ಎಂದು ಹೇಳುವಂತಹ ರೀತಿಯಲ್ಲಿ ನೀವು ಇನ್ಸೆಂಟೀವ್ ಕೊಟ್ಟರೆ, ಸಾಲ ಮರು ಪಾವತಿಗೆ ಹೆಚ್ಚಿನ ಆದ್ಯತೆಗಳು ಬರುತ್ತದೆ. ಸಹಕಾರಿ ಸಪ್ತಾಹಗಳನ್ನು ಮಾಡುತ್ತೀರಿ. ಅಲ್ಲಲ್ಲಿ ಪತ್ರಿಕೆಯಲ್ಲಿ ಬರುತ್ತದೆ. ಸಹಕಾರಿ ಸಪ್ತಾಹಕ್ಕೆ ತಾವು ಏಕೆ ಜನರನ್ನು ಸೇರಿಸುತ್ತೀರಿ? ಬಹುಶಃ ನವೆಂಬರ್ 14 ರಿಂದ 20ನೇ ತಾರೀಖಿನವರೆಗೆ ಸಹಕಾರಿ ಸಪ್ತಾಹಗಳನ್ನು ನಡೆಸುವಂತಹ ದಿನಗಳು. ಆಗ ಏನು ಮಾಡುತ್ತೀರಿ? ಸಹಕಾರಿ ಸಪ್ತಾಹ ಎಂದು ದೊಡ್ಡ ಬೋರ್ಡ್ ಇದೆ. ಸಹಕಾರಿ ಸಪ್ತಾಹ ಎಂದು ಹಿಂದುಗಡೆ ಬೋರ್ಡ್ ಹಾಕುತ್ತೀರಿ. ಅದರ ನಿರ್ದೇಶಕರು ಎಲ್ಲರೂ ಬಂದಿರುವುದಿಲ್ಲ. 7-8 ಜನ ನಿರ್ದೇಶಕರು ಬಂದಿರುತ್ತಾರೆ. ಒಂದು ಚಹಾ ಕೂಟ ಮಾಡಿ ಆ ಸಹಕಾರಿ ಸಪ್ತಾಹಗಳನ್ನು ಮುಗಿಸುವಂತಹ ವ್ಯವಸ್ಥೆಗಳು ಆಗುತ್ತವೆ.

5.20 ಪಿ.ಎಂ

ನಾನು ಸಚಿವರಾದ ನಾಣಯ್ಯನವರಲ್ಲಿ ಕೇಳುವುದಕ್ಕೆ ಇಚ್ಛಿಸುತ್ತೇನೆ. ಸಹಕಾರ ಸಪ್ತಾಹಗಳು ಇವೊತ್ತಿನ ದಿವಸ ಜನರಿಗೆ ನಿಜವಾದ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತವೆಯೇ? ಇದಕ್ಕೆ ಉತ್ತರವಾಗಿ ಖಂಡಿತವಾಗಿಯೂ ಇಲ್ಲವೆಂಬುದು ನನ್ನ ಅನಿಸಿಕೆಯಾಗಿದೆ. ನಾನೂ ಕೂಡ ವರ್ಷದಲ್ಲಿ ಒಂದೆರಡು ಸಹಕಾರ ಸಪ್ತಾಹಕ್ಕೆ ಹೋಗುತ್ತಿದ್ದು, ಸಹಕಾರದಲ್ಲಿ 7-8-10 ಜನರಿರುತ್ತಾರೆ. ಸಹಕಾರ ಸಪ್ತಾಹ ಆಚರಿಸುವಂಥ ಸಂದರ್ಭದಲ್ಲಿ ಜನರನ್ನು ಸೇರಿಸುವಂಥ ವ್ಯವಸ್ಥೆಯಾಗುವುದಿಲ್ಲ. ಸಹಕಾರ ಸಂಘದವರಿಗೆ ಇದರ ಜವಾಬ್ದಾರಿ ಕೊಟ್ಟಿದ್ದು, ಸಂಘದಲ್ಲಿರುವ ಸದಸ್ಯರು ಹೇಳಿದ ತಕ್ಷಣ ಯಾರೂ ಬರುವುದಿಲ್ಲ. ಏಕೆ? ಅದರಿಂದ ಯಾರಿಗೇನೂ ಲಾಭವಿಲ್ಲ. ಆದಕಾರಣ, ಸಹಕಾರ ಸಂಘದ ವತಿಯಿಂದ ಮಾಡಿದಾಗ ವ್ಯವಸ್ಥೆ ಸರಿಯಾಗುವುದಿಲ್ಲ, ಬದಲಾಗಿ ಸರ್ಕಾರದ ವತಿಯಿಂದಲೇ ವ್ಯಾಪಕವಾದ ಒಂದು ಬದಲಿ ವ್ಯವಸ್ಥೆಯಾಗಬೇಕು.

ಜನರನ್ನು ಮೋಟಿವೇಷನ್ ಮಾಡಬೇಕು. ಏಕೆಂದರೆ, ಏಳು ದಿವಸಗಳ ಕಾಲ ಸಹಕಾರಿ ತತ್ವದ ವಿವಿಧ ವಿಚಾರಗಳನ್ನು ಜನರಿಗೆ ತಿಳಿಸುವಂಥ ಕೆಲಸಗಳನ್ನು ಮಾಡುವಾಗ, ಇದಕ್ಕೆ ಸರ್ಕಾರ ಒಂದು ಬದಲಿ ವ್ಯವಸ್ಥೆ ಮಾಡಿ ಎಲ್ಲಾ ಜನರಿಗೂ ತಿಳಿಸುವಂತೆ ಸಹಕಾರಿ ಸಪ್ತಾಹ ಆಚರಿಸಿದರೆ ಅತ್ಯಂತ ಸೂಕ್ತವೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುತ್ತಾ, ಕೃಷಿ ಮಾರುಕಟ್ಟೆ ವಿಚಾರವಾಗಿ ಸಚಿವರಲ್ಲಿ ಒಂದು ವಿಶೇಷ ವಿನಂತಿಯಿದೆ. ಮಾರುಕಟ್ಟೆ ವಿಚಾರವಾಗಿ ಹೆಚ್ಚು ವಿಚಾರಗಳನ್ನು

ಪ್ರಸ್ತಾಪಿಸುವುದಕ್ಕೆ ಹೋಗಿದೆ, ಕೇವಲ ಒಂದೆರಡು ವಿಚಾರಗಳನ್ನು ಮಾತ್ರ ಕೃಷಿ ಮಾರುಕಟ್ಟೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸುವುದಕ್ಕೆ ಇಚ್ಛಿಸುತ್ತೇನೆ. ಕೃಷಿ ಮಾರುಕಟ್ಟೆ ಬಗ್ಗೆ ತಮಗೆ ಗೊತ್ತಿರುವಂತೆ ರಾಜ್ಯದ ಎಲ್ಲಾ ಕಡೆಗಳಲ್ಲೂ ಮಾರುಕಟ್ಟೆಗಳನ್ನು ತೆರೆದು, ರೈತರಿಗೆ ಅಗತ್ಯವಾದ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ಹೆಚ್ಚು ಒತ್ತು ಕೊಟ್ಟು ಎಲ್ಲಾ ಕೆಲಸಗಳಾಗುತ್ತವೆ. ಆದರೆ, ಎಷ್ಟು ಕಡೆಗಳಲ್ಲಿ ಮಾರುಕಟ್ಟೆಗಳು ಇವೊತ್ತು ವ್ಯವಸ್ಥಿತವಾಗಿ ಸ್ಥಾಪಿಸಿದ ನಂತರ ಬೇರೆಡೆಗೆ ಸ್ಥಳಾಂತರವಾಗಿದೆ? ಎಂದು ಕೇಳುತ್ತಿದ್ದೇನೆ. ಉದಾಹರಣೆಗೆ, ಪುತ್ತೂರಿನಲ್ಲೇ ತೆಗೆದುಕೊಳ್ಳುವುದಾದರೆ, ಪುತ್ತೂರಿನಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ಕೃಷಿ ಮಾರುಕಟ್ಟೆ ಸ್ಥಾಪನೆಯಾಗಿದ್ದು, ಅಲ್ಲಿಗೆ ಡಾಂಬರೀಕರಣದ ವ್ಯವಸ್ಥೆಯಾಗಿದ್ದು ಒಳ್ಳೆಯ ಮಾರ್ಗವಾಗಿದೆ. ಅಲ್ಲದೆ, ಬೇಕಾದಷ್ಟು ವ್ಯವಸ್ಥೆ ಕೂಡ ಅಲ್ಲಿದೆ. ಆದರೆ, ವರ್ತಕರ ಗುಂಪಿನ ಕೈವಾಡಕ್ಕೆ ಮರುಳಾಗಿ ಮಾರುಕಟ್ಟೆಯನ್ನು ಹಸ್ತಾಂತರಿಸಲಾಗುವುದೆಂದು ಹೇಳಿ ಆಗಲೇ ಒಂದೂವರೆ ವರ್ಷ ಕಳೆಯಿತು.

ಇದರ ಬಗ್ಗೆ ತಾವು ಏಕೆ ಕ್ರಮ ಕೈಗೊಳ್ಳುತ್ತಿಲ್ಲ? ತಾವು ಹೊಸದಾಗಿ ಖಾತೆಯನ್ನು ವಹಿಸಿಕೊಂಡಿರುವ ಸಚಿವರಾಗಿರುವುದರಿಂದ, ಇದು ತಮ್ಮ ಮೇಲೆ ನೇರ ಆರೋಪವೆಂದು ತಾವು ತಿಳಿದುಕೊಳ್ಳಬಾರದು. ತಮ್ಮಲ್ಲಿ ನನ್ನ ವಿನಂತಿಯೇನೆಂದರೆ, ಅದನ್ನು ಆದಷ್ಟು ಶೀಘ್ರವಾಗಿ ಸುಸಜ್ಜಿತ ಮಾರುಕಟ್ಟೆಯನ್ನಾಗಿ ಮಾಡಬೇಕು. ಮಾನ್ಯ ಸಚಿವರಾದ ಬಿ.ಬಿ. ನಿಂಗಯ್ಯನವರು ಎರಡು ಬಾರಿ ಬಂದಿದ್ದಾರೆ. ಎಲ್ಲಾ ಪ್ರಯತ್ನಗಳನ್ನು ನಾವೂ ಮಾಡಿದ್ದೇವೆ. ಅವರಿಗೆ ಭಾರಿ ಮನಸ್ಸಿತ್ತು. ಆದರೂ ಕೂಡ ಇವೊತ್ತಿನ ರಾಜಕೀಯ ವ್ಯವಸ್ಥೆಯ ಹಲವಾರು ಒತ್ತಡಗಳ ಮಧ್ಯೆ ಸಿಕ್ಕಿ ಬಿದ್ದು ಅದನ್ನು ಹಸ್ತಾಂತರಗೊಳಿಸುವುದಕ್ಕೆ ಬೇಕಾದಂಥ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಲಿಲ್ಲ. ನನಗೆ ತಿಳಿದ ಮಟ್ಟಿಗೆ ಪ್ರತಿ ತಾಲ್ಲೂಕಿಗೊಂಡರಂತೆ ಕೃಷಿ ಮಾರುಕಟ್ಟೆಯನ್ನು ರಚಿಸುವುದಾಗಿ ಹೇಳಿದ್ದೀರಿ, ಆದರೂ ಇನ್ನೂ ಕೂಡ ಅದು ಅನುಷ್ಠಾನಗೊಳ್ಳಲಿಲ್ಲ. ಎಲ್ಲಿಯವರೆಗೆ ತಾಪತ್ರಯವಾಗುತ್ತಿದೆಯೆಂದು ಹೇಳಿದರೆ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹೋದಾಗ ಜೇಪಿನಲ್ಲಿ ಒಂದು ನಿಮ್ಮ ಮಾರುಕಟ್ಟೆಯವರು ಅಲ್ಲಿ ಸಿದ್ಧರಾಗಿರುತ್ತಾರೆ, ಕೂಡಲೇ ಅಲ್ಲಿ ಬರೆದು ಏನಾದರೂ ವ್ಯವಸ್ಥೆ ಮಾಡಿ ಅವರ ಕಿಸೆಗೆ ಹಾಕಿಕೊಂಡು ಹೋಗುವಂಥಾದ್ದು ಮತ್ತು ರೈತರುಗಳ ಮೇಲೆ ಅತ್ಯಂತ ಹೆಚ್ಚಿನ ರೀತಿಯಲ್ಲಿ ದಬ್ಬಾಳಿಕೆ ನಡೆಸುತ್ತಿರುವುದನ್ನು ನಾವು ಈ ರಾಜ್ಯದಲ್ಲಿ ನೋಡುತ್ತಿದ್ದೇವೆ. ದಯವಿಟ್ಟು ಮಾರುಕಟ್ಟೆಯನ್ನು ಸ್ಥಳಾಂತರಿಸಬಾರದು. ಆದುದರಿಂದ, ರಾಜ್ಯದಲ್ಲಿ ಈಗಾಗಲೇ ಎಲ್ಲೆಲ್ಲಿ ಕೃಷಿ ಮಾರುಕಟ್ಟೆಗಳಿವೆಯೋ, ಅವುಗಳನ್ನು ಈಗಾಗಲೇ ಎಲ್ಲೆಲ್ಲಿ ಸುಸಜ್ಜಿತವಾಗಿ ತಯಾರಾಗಿರುವ ಮಾರುಕಟ್ಟೆಗಳಿವೆಯೋ ಅಲ್ಲಿಗೆ ಸ್ಥಳಾಂತರಿಸಬೇಕು.

(ಈ ಹಂತದಲ್ಲಿ ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ಎಂ.ಮಾಮನಿರವರು ಪೀಠವನ್ನಲಂಕರಿಸಿದರು)

ಅಲ್ಲದೆ, ತಾಲ್ಲೂಕಿಗೊಂದು ಕೃಷಿ ಮಾರುಕಟ್ಟೆ ಪ್ರಾಂಗಣವನ್ನು ಆದಷ್ಟು ಶೀಘ್ರವಾಗಿ ಮಾಡಿದರೆ ಬಹುಶಃ ರೈತಾಪಿ ವರ್ಗದವರ ಕಳಕಳಿಗೆ ಪಾತ್ರರಾಗುತ್ತೀರೆಂದು ಹೇಳುತ್ತೇನೆ. ಇನ್ನೊಂದು ಭಾರಿ ದೊಡ್ಡ ಸಂಗತಿ ಜರುಗಿದೆ. ಸ್ವಾಮಿ, ಎ.ಪಿ.ಎಂ.ಸಿ.ಗೆ ಚುನಾವಣೆಗಳು ಜರುಗಿ ಎಷ್ಟು ವರ್ಷಗಳಾದವು? ಇದಕ್ಕೆ ದಯವಿಟ್ಟು ಮಂತ್ರಿಗಳು ಉತ್ತರಿಸುವರೇ? 1983ರ ನಂತರ ಕರ್ನಾಟಕ ರಾಜ್ಯದಲ್ಲಿ ಎ.ಪಿ.ಎಂ.ಸಿ.ಗೆ ಚುನಾವಣೆಗಳು ನಡೆಯಲಿಲ್ಲ. ತಾವು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತೀರಿ, ಜನ ಪ್ರತಿನಿಧಿಗಳ

ಕೈಗೆ ಅಧಿಕಾರ ಕೊಟ್ಟು ಆಡಳಿತ ನಡೆಯಬೇಕೆಂದು ಹೇಳುತ್ತೀರಲ್ಲಾ, ಏಕೆ ಸ್ವಾಮಿ ತಾವು ಚುನಾವಣೆ ನಡೆಸುತ್ತಿಲ್ಲ?

ಶ್ರೀ ಎಂ.ಸಿ. ನಾಣಯ್ಯ : ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳ ಚುನಾವಣೆಗಳು ನಡೆಸಲಾಯಿತು. ಅನಂತರ, ಲೋಕಸಭಾ ಚುನಾವಣೆಯೂ ನಡೆಯಿತು. ಕೊನೆಗೆ ಏನಾಯಿತೆಂದರೆ, ಎಪಿಎಂಸಿ ಚುನಾವಣೆಯನ್ನು ಮೇ ತಿಂಗಳಿನಲ್ಲಿ ನಡೆಸುವುದಕ್ಕೆ ಹೊರಟಾಗ 'ಸ್ವಾಮಿ, ದಯವಿಟ್ಟು ಈಗ ಚುನಾವಣೆ ಬೇಡ, ಡಿಸೆಂಬರ್ ತಿಂಗಳಿನಲ್ಲಿ ಮಾಡಿ' ಎಂದು ಜನರೇ ನಮಗೆ ಹೇಳಲು ಶುರು ಮಾಡಿದರು. ಜನರೇ ಹೇಳಿದರೆಂದು ನಾವು ಚುನಾವಣೆ ಮುಂದೂಡಿದೆವು.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಉಪಾಧ್ಯಕ್ಷರೆ, ಅಂತೂ ನಿಶ್ಚಯವಾಯಿತು. ಏಕೆಂದರೆ, ಚುನಾವಣೆ ಮಾಡಿದರೆ ಖಾಯಂ ಆಗಿ ಮಾಮೂಲು ತಂದು ಕೊಡುವ ಜನರು ತಪ್ಪುತ್ತಾರೆಂದು, ಕೃಷಿ ಮಾರುಕಟ್ಟೆಯಿಂದ ಖಾಯಂ ಆಗಿ ಮಾಮೂಲನ್ನು ಬೇರೆ ಕಡೆಗೆ ರವಾನಿಸುವಂಥ ವ್ಯಕ್ತಿಗಳಿಗೆ ಸ್ವಲ್ಪ ತೊಂದರೆಯಾಗುತ್ತದಲ್ಲದೆ, ಮತ್ತೆ ಅದನ್ನು ಪಡೆದು ಕೊಳ್ಳುವವರಿಗೂ ತೊಂದರೆಯಾಗುತ್ತದೆಂದು ಬಹುಶಃ ಈ ಕುರಿತು ನಿರ್ದಿಷ್ಟವಾಗಿ ಹೇಳುವುದಕ್ಕೆ ಕಾರಣವಿದೆ.

ಶ್ರೀ ಅರಗ ಜ್ಞಾನೇಂದ್ರ : ಹಣವಿಲ್ಲದಿದ್ದ ಸಂಸ್ಥೆಗಳಿಗೆ ತಾವು ಚುನಾವಣೆ ಮಾಡಿದಿರಿ. ಇದು ಕೋಟಿಗಟ್ಟಲೆ ಹಣವಿರುವಂಥ ಸಂಸ್ಥೆಯಾಗಿದ್ದು, ಅದನ್ನು ರೈತರ ಕಲ್ಯಾಣಕ್ಕೆ ಉಪಯೋಗಿಸುವುದರ ಬದಲು ಈ ರೀತಿ ಮಾಡುತ್ತೀರಿ. ಆದ್ದರಿಂದ ಅಲ್ಲಿ ಸ್ವಾಯತ್ತ ಸಂಸ್ಥೆಗಳು ಇರಬಾರದೆಂಬುದು ಸರ್ಕಾರದ ನೀತಿಯೇ?

ಶ್ರೀ ಡಿ.ವಿ. ಸದಾನಂದಗೌಡ : ಇನ್ನೊಂದು ದೊಡ್ಡ ಸಂಗತಿಯೇನೆಂದರೆ, ಪ್ರತಿ ವಿಧಾನಸಭಾ ಕ್ಷೇತ್ರಗಳಿಗೂ ಹದಿನೈದು ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತದೆಂದು ತಾವು ಪ್ರಸ್ತಾಪಿಸಿದಿರಿ, ಹಣವನ್ನು ಈಗಾಗಲೇ ಕೊಟ್ಟಿದ್ದೀರಿ. ಆದರೆ, ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲು ಈಗ ಟೆಂಡರ್ ಆಗಿವೆ ಮತ್ತು ಅಪ್ರೂವ್ ಮಾಡಲು ಎಷ್ಟು ಟೆಂಡರ್‌ಗಳು ಬಾಕಿ ಇವೆ ಎಂಬುದನ್ನು ಪರಿಶೀಲಿಸಬೇಕು. ಏಕೆಂದರೆ, ಹದಿನೈದು ಲಕ್ಷ ರೂಪಾಯಿಗಳು ಸರ್ಕಾರದಿಂದ ಬಂತು ಎಂದು ಹೇಳಿದ ತಕ್ಷಣ ವಿಧಾನಸಭಾ ಕ್ಷೇತ್ರಗಳಲ್ಲಿರುವ ಸದಸ್ಯರುಗಳು ಯಾವ್ಯಾವ ರಸ್ತೆಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂಬುದರ ಬಗ್ಗೆ ಪ್ರಕಟಣೆಗಳನ್ನು ಕೊಟ್ಟಿರುತ್ತಾರೆ. ಆದರೆ, ಜಿಲ್ಲಾ ಪಂಚಾಯಿತಿಗೂ ಎ.ಪಿ.ಎಂ.ಸಿ.ಗೂ ವ್ಯತ್ಯಾಸ ಬಂತು. ಜಿಲ್ಲಾ ಪಂಚಾಯಿತಿಗೆ ಸೇರಿದ ರಸ್ತೆಗಳು ಯಾವುದಿದೆಯೋ ಆ ರಸ್ತೆಗಳನ್ನು ಎ.ಪಿ.ಎಂ.ಸಿ.ಗೆ ವಹಿಕೊಡಲು ಅವರು ತಯಾರಾಗಲಿಲ್ಲ. ಕೊನೆಗೆ, ಏನೂ ಉಪಾಯವಿಲ್ಲದೆ ಜನರಿಂದ ಇದಕ್ಕೆ ತೀವ್ರ ವಿರೋಧ ಬಂದಾಗ ಈಗ ವಹಿಸಿಕೊಟ್ಟಿದ್ದಾರೆ.

(ಈ ಹಂತದಲ್ಲಿ ಸಭಾಧ್ಯಕ್ಷರು ಶ್ರೀ ರಮೇಶ್ ಕುಮಾರ್‌ರವರು ಪೀಠವನ್ನಲಂಕರಿಸಿದರು)

ಶ್ರೀ ಬಿ.ಬಿ. ನಿಂಗಯ್ಯ : ಈ ಇಲಾಖೆಯಲ್ಲಿ ಸಣ್ಣ-ಪುಟ್ಟ ಲೋಪ-ದೋಷಗಳಿರಬಹುದು. ನಿಮ್ಮ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಹೇಳಿದರೂ ಕೂಡ ನಿಮ್ಮ ಜಿಲ್ಲಾ ಪಂಚಾಯಿತಿಯವರು ನಾವೇ ಮಾಡುತ್ತೇವೆಂದು ಹೇಳಿದ್ದರಿಂದ ಹಾಗೆ

ಮಾಡಲಾಯಿತು. ಕೆಲಸ ತಡವಾದದ್ದು ಬಿಟ್ಟರೆ ಬೇರೇನೂ ಆಗಿಲ್ಲ. ಈಗ ಅದನ್ನು ಸರಿಯಾಗಿ ಮಾಡಿಕೊಟ್ಟಿದ್ದೇವೆ.

ಶ್ರೀ ಡಿ.ವಿ. ಸದಾನಂದಗೌಡ : ಈ ವರ್ಷದಲ್ಲಾದರೂ ಮುಂದುವರೆಸುತ್ತೀರೋ?

ಶ್ರೀ ಬಿ.ಬಿ. ನಿಂಗಯ್ಯ : ಅದನ್ನು ಖಂಡಿತವಾಗಿಯೂ ನಿಲ್ಲಿಸಬೇಕೆಂದೇನೂ ಅಲ್ಲ, ಮುಂದುವರೆಸಲೇಬೇಕು.

ಶ್ರೀ ಡಿ.ವಿ. ಸದಾನಂದಗೌಡ : ನಮ್ಮ ಜಿಲ್ಲೆಯಲ್ಲಿ ಏನಾಗಿದೆಯೆಂದರೆ, ನೀವು ಹದಿನೈದು ಲಕ್ಷ ರೂಪಾಯಿಗಳನ್ನು ಏನು ಕೊಟ್ಟಿದ್ದೀರಿ, ಕಾಮಗಾರಿ ಕೈಗೊಳ್ಳಲು ಟೆಂಡರ್ ಆಗದೇ ಹಲವಾರು ಕಡತಗಳು ಬಾಕಿ ಉಳಿದಿವೆ. ಆದುದರಿಂದ, ಆದಷ್ಟು ಬೇಗ ಟೆಂಡರ್ಗೆ ಅನುಮೋದನೆ ಕೊಡುವಂಥ ಕೆಲಸ ಮಾಡಬೇಕು. ಅಲ್ಲದೆ, ತಾವು ರೈತ ಸಂಜೀವಿನಿ ಎಂಬ ಹೊಸ ಯೋಜನೆಯನ್ನು ಮೊನ್ನೆ ತಾನೆ ಘೋಷಿಸಿದ್ದೀರಿ. ಇಲ್ಲೊಂದು ವಿಚಿತ್ರವಾದ ಸಂಗತಿಯಿದ್ದು, ನೋಡಿದರೆ ಭಾರಿ ಸಂತೋಷವಾಗುತ್ತದೆ. ಸದರಿ ಯೋಜನೆಯಡಿ ರೈತರು ಕೃಷಿ ಚಟುವಟಿಕೆಗಳಲ್ಲಿ ಕಾರ್ಯನಿರತರಾಗಿದ್ದಾಗ ಕೈ, ಕಾಲು, ಬೆರಳುಗಳು ಮುರಿದು ಕೊಂಡಿವೆ ಅಥವಾ ಯಾರು ಮರಣ ಹೊಂದುತ್ತಾರೋ ಅವರಿಗೆಲ್ಲಾ ರೈತ ಸಂಜೀವಿನಿ ಯೋಜನೆ ಮೂಲಕ ಪರಿಹಾರ ಕೊಡಿಸುವ ವ್ಯವಸ್ಥೆ ಮಾಡಿದ್ದಾರೆ. ನಾನು ಆ ಕುರಿತು ತಮಗೆ ಒಂದು ಮಾಹಿತಿ ಕಳುಹಿಸಿಕೊಡುತ್ತೇನೆ. ಇದು ಅತ್ಯಂತ ಭಾರಿ ಮಜಾವಿರುವ ಸಂಗತಿಯಾಗಿದೆ. ಏನೆಂದರೆ, ಒಬ್ಬ ರೈತ ಮರದಿಂದ ಕೆಳಗಡೆ ಬಿದ್ದು ಸೊಂಟ ಮುರಿದುಕೊಂಡಿದ್ದಾನೆ.

ಶ್ರೀ ಬಿ.ಬಿ. ನಿಂಗಯ್ಯ : ನೀವು ಹೇಳಿದ್ದು ಸರಿಯಾಗಿದೆ. ನಾನು ಅದನ್ನು ಓದಿದ್ದೇನೆ. ಯಾರು ಅಂಗಹೀನರಾಗುತ್ತಾರೋ, ಅವರನ್ನೂ ಸಹ ಈ ಯೋಜನೆಯಡಿ ಸೇರಿಸಲು ಏನು ಸಲಹೆ ಕೊಟ್ಟಿದ್ದೀರಿ. ಆ ಕುರಿತು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ಈ ಕುರಿತು ನಿನಗೆ ಬಂದಂಥ ಒಂದು ಪತ್ರವನ್ನು ಈ ಸದನದ ಮೂಲಕ ಓದಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರೈತ ಸಂಜೀವಿನಿ ವಿಮಾ ಯೋಜನಾಯನ್ವಯ ಪರಿಶಿಷ್ಟ ವರ್ಗಕ್ಕೆ ಸೇರಿರುವ ಅಪ್ಪನಾಯ್ಕ ಎಂಬ ರೈತ ಅಡಿಕೆ ಕೊಯ್ಯುತ್ತಿದ್ದಾಗ ಮರದಿಂದ ಕೆಳಗಡೆ ಬಿದ್ದು ಸೊಂಟಕ್ಕೆ ಪೆಟ್ಟಾಗಿದ್ದು ಪರಿಣಾಮವಾಗಿ ಅಂಗವಿಕಲತೆ ಸಂಭವಿಸಿದ್ದು ಪರಿಹಾರ ಪಡೆಯಲು ರೈತ ಸಂಜೀವಿನಿ ಯೋಜನೆಯಡಿ ಅರ್ಜಿ ಕೊಟ್ಟಿದ್ದಾರೆ. ರೈತ ಸಂಜೀವಿನಿ ಅಪಘಾತ ವಿಮೆ ಯಾರ್‍ಯಾರಿಗೆ ಅಂದರೆ ರೈತ ಹಾಗೂ ಕೃಷಿ ಕಾರ್ಮಿಕರು ಕೃಷಿ ಹಾಗೂ ಮಾರಾಟ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿದ್ದಾಗ ಮರಣ ಹೊಂದಿದಲ್ಲಿ ಎರಡು ಕಾಲುಗಳನ್ನು ಅಥವಾ ಕೈಗಳನ್ನು ಕಳೆದುಕೊಂಡಾಗ, ಎರಡು ಕಣ್ಣುಗಳನ್ನು ಕಳೆದುಕೊಂಡಾಗ ಒಂದು ಕಾಲು ಅಥವಾ ಕೈ ಕಳೆದುಕೊಂಡಾಗ, ಒಂದು ಕಣ್ಣು ಕಳೆದುಕೊಂಡಾಗ ಮತ್ತು ಕೈ ಅಥವಾ ಕಾಲಿನ ಬೆರಳುಗಳನ್ನು ಕಳೆದುಕೊಂಡಾಗ ಮಾತ್ರ ನಿಗದಿಯಾಗಿರುವ ಪರಿಹಾರದ ಮೊತ್ತವನ್ನು ಪಡೆಯಲು ಅರ್ಜಿದಾರರು ಅರ್ಹರಾಗಿರುತ್ತಾರೆ. ಆರ್ಥಿಕ ಸಹಾಯ ಕೋರಿ ಬರೆದ ನಿಮ್ಮ ಅರ್ಜಿಯನ್ನು ಪರಿಶೀಲಿಸಲಾಗಿ ಮೇಲೆ ತಿಳಿಸಲಾದ ಯಾವುದೇ ಸ್ವರೂಪದ ಅಂಗವಿಕಲತೆ ಕಂಡುಬರುವುದಿಲ್ಲವಾದ್ದರಿಂದ ವಿಮೆ ನಿರಾಕರಿಸಲಾಗಿದೆಯೆಂದು ತಿಳಿಸಿದ್ದಾರೆ. ಆತನಿಗೆ ಸೊಂಟದ ಕೀಲು ಮುಂದಿದೆ, ಕೈ-ಕಾಲುಗಳನ್ನು ಆಡಿಸಲಾಗುತ್ತಿಲ್ಲ, ಆದುದರಿಂದ, ದಯವಿಟ್ಟು ಇದರ ಬಗ್ಗೆ ತಾವು ಏನು ವ್ಯವಸ್ಥೆ ಮಾಡುತ್ತೀರಿ? ಪತ್ರದ ಪ್ರತಿಯನ್ನು ನಾನು ತಮಗೆ ಮಾಹಿತಿಗಾಗಿ ಕಳುಹಿಸಿಕೊಡುತ್ತಿದ್ದೇನೆ.

ಶ್ರೀ ಬಿ.ಬಿ. ನಿಂಗಯ್ಯ : ಇದರ ಬಗ್ಗೆ ಈಗಾಗಲೇ ಸರ್ಕಾರದ ಜೊತೆ ಮಾತನಾಡಿದ್ದೇನೆ, ತಕ್ಷಣ ಪರಿಹಾರ ಕೊಡಿಸುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಅವರಿಗೆ ಸೂಕ್ತ ಪರಿಹಾರ ಕೊಡುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : ಈ ರೀತಿ ಹಲವಾರು ಸಂದರ್ಭಗಳಲ್ಲಿ ಏನಾಗುತ್ತದೆಂದರೆ ತಾವು ಮಾಡುವುದು ಒಂದು, ಆದರೆ ಅಲ್ಲಿ ಆಗುವುದೇ ಇನ್ನೊಂದು. ಈ ರೀತಿ ಒಂದೇ ಕ್ಷೇತ್ರದಲ್ಲಿ ಆಗಿಲ್ಲ, ಇರುವ ವ್ಯವಸ್ಥೆಯಲ್ಲಿ ಹಲವಾರು ತಪ್ಪುಗಳು ಬಂದೇ ಬರುತ್ತವೆ, ನಾನು ಅದರ ಬಗ್ಗೆ ಹೇಳುತ್ತಿಲ್ಲ, ಆದರೆ, ನೇರವಾಗಿ ತಿಳಿದುಕೊಂಡು ತಪ್ಪು ಮಾಡುವಂಥ ಅಧಿಕಾರಿಗಳಿದ್ದಾರೆ. ನಾನು ಈಗಾಗಲೇ ಉಲ್ಲೇಖಿಸಿದಂತೆ ಆ ರೈತನಿಗೆ ಕೈ-ಕಾಲುಗಳನ್ನು ಆಡಿಸಲಾಗುತ್ತಿಲ್ಲ, ಸ್ಪೈನಲ್ ಕಾರ್ಡ್ ಕತ್ತರಿಸಲ್ಪಟ್ಟಿದೆ. ಇದರ ಬಗ್ಗೆ ಮಾಹಿತಿಯನ್ನು ಕೊಡುವಂಥ ಸೌಜನ್ಯ ನಿಮ್ಮ ಅಧಿಕಾರಿಗಳಲ್ಲಿ, ಆಡಳಿತ ವ್ಯವಸ್ಥೆಯಲ್ಲಿ ಇಲ್ಲವೆಂದರೆ ಪ್ರಾಯಶಃ ಯಾವ ರೀತಿ ಈ ಅಧಿಕಾರಿಗಳು ಆಡಳಿತ ನಡೆಸುತ್ತಿದ್ದಾರೆನ್ನುವಂತಾದ್ದನ್ನು ಯೋಚಿಸಬೇಕಾಗುತ್ತದೆ. ಏಕೆಂದರೆ, ಸದರಿ ಪ್ರಕರಣವನ್ನು ತಾವು ಗಂಭೀರವಾಗಿ ಪರಿಗಣಿಸಬೇಕು. ಇದೊಂದೇ ಉದಾಹರಣೆಯಲ್ಲ, ಇಂತಹ ಸಾವಿರಾರು ಉದಾಹರಣೆಗಳನ್ನು ಬೇಕಾದರೆ ನಾನು ಕೊಡುತ್ತೇನೆ. ಆದುದರಿಂದ, ಈ ಹಿನ್ನೆಲೆಯ ವ್ಯವಸ್ಥೆಯಲ್ಲಿ ಅಧಿಕಾರ ನಡೆಸುವಂಥ ವ್ಯಕ್ತಿಗಳ ಬಗ್ಗೆಯೂ ತಾವು ಸ್ವಲ್ಪಮಟ್ಟಿಗೆ ಗಮನಿಸಬೇಕು.

ಅಲ್ಲದೆ, ರೈತ ಸಂಜೀವಿನಿ ಯೋಜನೆಯಡಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಬರುವುದನ್ನೂ ಸಹ ಪೂರ್ತಿಯಾಗಿ ಅಳವಡಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಕೇಳುತ್ತಾ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಭೂ ಕಂದಾಯ ವ್ಯವಸ್ಥೆ ಬಗ್ಗೆ ಉಲ್ಲೇಖಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಸಾವಿರಾರು ಅರ್ಜಿಗಳು ಕಾಣೆ, ಬಾಣೆ ಮತ್ತು ಕುಮ್ಕಿ ಜಮೀನುಗಳ ಅಕ್ರಮ ಸಕ್ರಮ ಯೋಜನೆಯಡಿ ಬಂದಿವೆ. ಭೂ ಕಂದಾಯ ಅಧಿನಿಯಮಕ್ಕೆ ತಿದ್ದುಪಡಿ ತರಬೇಕೆಂದು ಹೇಳುವಂಥ ಹಿನ್ನೆಲೆಯಲ್ಲಿ ಈ ವಿಚಾರ ಸರ್ಕಾರದ ಮುಂದೆ ಹಲವಾರು ಬಾರಿ ಪ್ರಸ್ತಾಪಿಸಲಾಗಿದೆ. ನನ್ನ ಒಂದೇ ಕ್ಷೇತ್ರಕ್ಕೆ ಸೀಮಿತವಾಗಿ ಹೇಳುವುದಾದರೆ ಕುಮ್ಕಿ ಭೂಮಿಗೆ ಸಂಬಂಧಿಸಿದಂತೆ ನನ್ನ ಕ್ಷೇತ್ರದಿಂದ ಸುಮಾರು 8725 ಅರ್ಜಿಗಳು ಬಂದಿದ್ದು, ಇದು ಸರ್ಕಾರಿ ಅಂಕಿ-ಅಂಶಗಳಾಗಿವೆ.

ಈ ಪೈಕಿ ರಬ್ಬರ್ ಕೃಷಿಗೆ ಒಳಪಟ್ಟಿರುವುದು ಸುಮಾರು 250 ಅರ್ಜಿಗಳಿದ್ದು, ಇವೊತ್ತು ನಾನು ಸರ್ಕಾರವನ್ನು ಕೇಳುವುದೇನೆಂದರೆ, ಈಗ ಅಕ್ರಮಿತ ಜಾಗದಲ್ಲಿ ಕೃಷಿ ಮಾಡುತ್ತಾರೆ. ಈಗ ರಬ್ಬರ್ ತಯಾರಿಸುವುದು ಒಂದು ಕೃಷಿಯಲ್ಲವೇ? ಅಡಿಕೆ ಮತ್ತು ತೆಂಗಿನ ತೋಟವನ್ನು ಬೆಳೆಸುವುದು ಕುಮ್ಕಿಯಲ್ಲಿ ಅಲ್ಲವೇ? ಕಾನೂನಿನ ಚೌಕಟ್ಟಿನಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದರೂ ಸಹ ಅದಕ್ಕೆ ಬದಲಿ ವ್ಯವಸ್ಥೆ ಬಂದಾಗ ಮಾತ್ರ ಈ ಸಕ್ರಮವೆಂದು ಹೇಳುವಂಥ ವ್ಯಾಪ್ತಿಗೆ ತಾವು ಏನು ಇವೊತ್ತು ಈ ಸರ್ಕಾರದಲ್ಲಿ ವ್ಯವಸ್ಥೆ ಮಾಡಿದ್ದೀರಿ, ಅದು ಸಾಧನೆಯಾಗುತ್ತದೆ. ಇಲ್ಲದಿದ್ದರೆ, ಕೇವಲ ಘೋಷಣೆಗೆ ಮಾತ್ರ ಸಕ್ರಮಗೊಳಿಸುತ್ತೇವೆಂದು ನಿಜವಾಗಿಯೂ ಸರ್ಕಾರಿ ಭೂಮಿಯನ್ನು ಸಕ್ರಮಗೊಳಿಸಿದ್ದರೂ ಕೂಡ ಅದನ್ನು ಅನುಷ್ಠಾನಕ್ಕೆ ತರುವಂಥ ಸಂದರ್ಭದಲ್ಲಿ ಭೂ ಕಂದಾಯ ಅಧಿನಿಯಮಕ್ಕೆ ಸಣ್ಣ ತಿದ್ದುಪಡಿ ತರುವಂಥಾದ್ದಕ್ಕೆ ತಾವು ಏಕೆ ಪೂರಕ ವ್ಯವಸ್ಥೆ ಮಾಡಬಾರದು? ಈಗ ಕಾಫಿ ಮತ್ತು ರಬ್ಬರ್ ಕೃಷಿ ಇದ್ದು, ಕಾಣೆ,

ಬಾಣೆ ಮತ್ತು ಕುಮ್ಕಿ ಪ್ರದೇಶಗಳಲ್ಲಿ ಬೆಳೆಸಿದಂಥ ಅಡಿಕೆ ಮತ್ತು ತೆಂಗಿನ ತೋಟಗಳಿದ್ದು ಜಾಗವನ್ನು ಸಕ್ರಮಗೊಳಿಸುವ ಬಗ್ಗೆ ಪರಿಶೀಲಿಸುತ್ತೇನೆ ಎಂದು ಹೇಳುತ್ತಾರೆ. ನನಗೆ ಇದರಲ್ಲಿ ಭಾರಿ ಆಶ್ಚರ್ಯ ಏನೆಂದರೆ, ತಾವು ಸಹ ಸದನದಲ್ಲಿ ಹಲವು ಸಲ ಪರಿಶೀಲನೆ ಎಂದು ಹೇಳಿದ್ದೀರಿ. ಆದರೂ ಕೂಡ ಪರಿಶೀಲಿಸುತ್ತೇನೆ ಎಂದ ಹೇಳುವಂಥ ಶಬ್ದ ಈ ಸದನದಲ್ಲಿ ದಿವಸಕ್ಕೆ ಕನಿಷ್ಠವೆಂದರೂ 50-100 ಬಾರಿ ಪ್ರಸ್ತಾಪವಾಗುತ್ತದೆ.

ಆದುದರಿಂದ, ನನ್ನ ವಿನಂತಿ ಇಷ್ಟೆ ಇನ್ನು ಮುಂದೆ ಪರಿಶೀಲನೆ ಎಂದು ಹೇಳುವಂಥ ಶಬ್ದಕ್ಕೆ ಸ್ವಲ್ಪ ವೈಡರ್ ಸೆನ್ಸ್ ಅಂದರೆ ಜಾಸ್ತಿ ವ್ಯಾಪ್ತಿ ಕೊಟ್ಟು ಅದರ ಅನುಷ್ಠಾನಕ್ಕೆ ಪೂರಕವಾಗುವಂಥ ವ್ಯವಸ್ಥೆಯಾಗಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಾ ಭೂ ಕಂದಾಯ ಅಧಿನಿಯಮಕ್ಕೆ ತಾವು ಏನು ತಿದ್ದುಪಡಿ ತರುತ್ತಿದ್ದೀರಿ, ಅದನ್ನು ಆದಷ್ಟು ಶೀಘ್ರವಾಗಿ ತರಬೇಕು. ಈಗಾಗಲೇ ಒಂದೂವರೆ ವರ್ಷಗಳಾದವು. ಈ ಹಿಂದೆ ಕಂದಾಯ ಮಂತ್ರಿಗಳು ಪುತ್ತೂರಿಗೆ ಜನ ಸಂಪರ್ಕ ಸಭೆಗೆ ಮತ್ತು ಬೇರೆ ಉದ್ದೇಶದ ನಿಮಿತ್ತವಾಗಿ ಬಂದಿದ್ದಾಗ ಆ ಕುರಿತು ಉತ್ತರ ಕೊಟ್ಟಿದ್ದರು. ಕಾಣೆ, ಬಾಣೆ, ಕುಮ್ಕಿ ಇದರ ಬಗ್ಗೆ ತಕ್ಷಣ ಕಾನೂನಿನ ತಿದ್ದುಪಡಿ ಮಾಡುತ್ತೇವೆಂದು ಹೇಳಿದ್ದರು. ಆ ರೀತಿ ತಾವು ತಿದ್ದುಪಡಿ ಮಾಡುವುದಿದ್ದರೆ ಅದರ ಬಗ್ಗೆ ಘೋಷಣೆಯನ್ನೇನು ಮಾಡುತ್ತೀರಿ ಅದರ ಆಧಾರದ ಮೇಲೆ ರಾಜಕಾರಣವನ್ನು ನಡೆಸುತ್ತೇವೆನ್ನತಕ್ಕ ವ್ಯವಸ್ಥೆಯನ್ನು ತಾವು ಆದಷ್ಟು ಶೀಘ್ರವಾಗಿ ಕೈಬಿಡಬೇಕಾಗುತ್ತದೆ. ಈ ರೀತಿ ಘೋಷಣೆಗಳ ಮೇಲೆ ರಾಜಕಾರಣ ಮಾಡುತ್ತಿರುವುದು ಕಳೆದ ಒಂದೂವರೆ ವರ್ಷದಿಂದ ನಮಗೆ ಗೊತ್ತಾಗಿದೆ. ಹೆಚ್ಚು ಕಾಲ ಜನರು ತಮ್ಮನ್ನು ಕ್ಷಮಿಸಲು ಬಿಡುವುದಿಲ್ಲ, ಆದ್ದರಿಂದ ತಾವು ಏನೇ ಮಾಡುವುದಿದ್ದರು ಪರಿಶೀಲನೆ ಮಾಡುವುದಾಗಿ ಹೇಳುತ್ತೀರಿ. ಆ ಪರಿಶೀಲನೆ ಮಾಡುವ ವ್ಯಾಪ್ತಿಯನ್ನು ಬಿಟ್ಟು ಕಾರ್ಯರೂಪಕ್ಕೆ ತರುವ ದಿಸೆಯಲ್ಲಿ ಕ್ರಮತೆಗೆದುಕೊಳ್ಳಬೇಕೆಂದು ಹೇಳಿ ನನಗೆ ಬೇಡಿಕೆಯ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ (ಬೀಳಗಿ) : ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಪ್ರಥಮವಾಗಿ ತಮ್ಮನ್ನು ಅಭಿನಂದಿಸಿ, ನನ್ನ ವಿಷಯವನ್ನು ಪ್ರಸ್ತಾಪಿಸಬಯಸುತ್ತೇನೆ. ಯಾವುದೇ ದೇಶ ಅಥವಾ ನಾಡಿನ ಪ್ರಗತಿಯನ್ನು ಕಾಣಬೇಕಾದರೆ ಮುಖ್ಯವಾಗಿ ಅಲ್ಲಿನ ಕೃಷಿ ಮತ್ತು ಕೈಗಾರಿಕೆ ಅಭಿವೃದ್ಧಿಯಾದರೆ ಮಾತ್ರ ಸಾಧ್ಯವೆಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಕೃಷಿ ಮತ್ತು ಕೈಗಾರಿಕೆಗಳು ದೇಶದ ಪ್ರಗತಿಯ ರಥದ ಎರಡು ಚಕ್ರಗಳಿದ್ದಂತೆ. ಕೈಗಾರಿಕೆ ಮುಂದುವರಿಯಲು ವಿದ್ಯುತ್, ಕೃಷಿ ಅಭಿವೃದ್ಧಿಗೆ ಸಮೃದ್ಧವಾದ ನೀರು ಬೇಕಾಗಿದೆ. ನಮ್ಮಲ್ಲಿಂದು ವಿದ್ಯುತ್ ಕೊರತೆ ಇರುವುದು ನಿಜ. ಆದರೆ ವಿದ್ಯುತ್ತನ್ನು ಉತ್ಪಾದನೆ ಮಾಡಲು ಸಾಕಷ್ಟು ಅವಕಾಶಗಳಿವೆ. ನಮ್ಮಲ್ಲಿ ನೀರಿನ ಕೊರತೆಯಂತು ಇಲ್ಲವೇ ಇಲ್ಲ. ಆದರೆ ಲಭ್ಯವಿರತಕ್ಕ ನೀರನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕಾಗಿದೆ. ನಮ್ಮ ರಾಜ್ಯದ ನೀರಾವರಿ ಸಾಮರ್ಥ್ಯ ಬಹಳ ದೊಡ್ಡದು. ಆದರೆ ಆ ನೀರಿನ ಸಾಮರ್ಥ್ಯವನ್ನು ನಾವುಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಬಳಸಿಕೊಂಡಿದ್ದೇವೆ. ಅದಕ್ಕೆ ಹಿಂದಿನ ಸರ್ಕಾರದವರು ಹೊಣೆಗಾರರೆಂದು ನಾನು ಹೇಳುತ್ತೇನೆಂದು ತಾವು ಭಾವಿಸಿಕೊಳ್ಳಬಾರದು.

ಇಲ್ಲಿಯವರೆಗೆ ಆಡಳಿತವನ್ನಾಳಿರುವ ಯಾವುದೇ ಸರ್ಕಾರವೂ ಈ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ನದಿಗಳ ಜಾಲವೇ ಹರಿದಿದೆ. ನಿಸರ್ಗದ ವಿಶೇಷ ಕೃಪೆಗೆ ಒಳಗಾದ ರಾಜ್ಯ ನಮ್ಮ ಕರ್ನಾಟಕ ರಾಜ್ಯ. ಸುಂದರವಾಗಿರತಕ್ಕ ಮತ್ತು ವಿಶಾಲವಾದ ಕರಾವಳಿ, ಕರಾವಳಿಯುದ್ದಕ್ಕೂ ಇರುವ ಪಶ್ಚಿಮ ಘಟ್ಟಗಳು, ಹಿಂಗಾರು ಮತ್ತು ಮುಂಗಾರು ಮಳೆಯ ಸಾಧ್ಯತೆಗಳು, ಪೂರ್ವ ಮತ್ತು ಪಶ್ಚಿಮಕ್ಕೆ ಹರಿಯುವಂಥ ನದಿಗಳು, ಸಾಕಷ್ಟು ಜಲಪಾತಗಳು ನಮ್ಮಲ್ಲಿದ್ದರೂ ನಮಗೆ ನೀಡಿರುವ ನಿಸರ್ಗದ ವಿಶೇಷ ಸೌಲಭ್ಯಗಳನ್ನು ನಾವು ಸುದೈವದಿಂದ ಸರಿಯಾಗಿ ಬಳಸಿಕೊಂಡಿಲ್ಲ. ಆದ್ದರಿಂದಾಗಿ ನಾವು ಅಂದಿನಿಂದ ಇಂದಿನವರೆಗೂ ಬರಗಾಲದ ಭಯದಲ್ಲಿ ಮತ್ತು ಮಾನ್ಸೂನ್ ಮಳೆಯ ಆಶ್ರಯದಲ್ಲಿ ಬದುಕುತ್ತಿದ್ದೇವೆ. ಆಹಾರ ಧಾನ್ಯದ ಉತ್ಪಾದನೆಯಲ್ಲಿ ಕುಸಿತವಾಗಿರುವ ಪರಿಸ್ಥಿತಿಯನ್ನು ನಮ್ಮ ರಾಜ್ಯ ಎದುರಿಸುತ್ತಿದೆ. ನಮ್ಮ ರಾಜ್ಯ ಸುಮಾರು ಎರಡು ಲಕ್ಷ ಕಿಲೋಮೀಟರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ನೀರಾವರಿಗೆ ಒಳಪಡತಕ್ಕ ಪ್ರದೇಶ ಐವತ್ತೈದು ಲಕ್ಷ ಎಕರೆಗಳು.

ಆದರೆ ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಇಪ್ಪತ್ತೈದು ಲಕ್ಷ ಎಕರೆಗಳಷ್ಟು ಪ್ರದೇಶವನ್ನೂ ನಾವು ನೀರಾವರಿಗೆ ಉಪಯೋಗ ಮಾಡಿಕೊಂಡಿಲ್ಲ. ನಮ್ಮ ರಾಜ್ಯದ ನೀರಾವರಿ ಪ್ರದೇಶವು ಎರಡು ನದಿಗಳ ಜಲಾನಯನ ಪ್ರದೇಶದಲ್ಲಿ ಹಂಚಿಹೋಗಿದೆ. ಅದರಲ್ಲಿ ಅರವತ್ತು ಪರ್ಸೆಂಟ್ ಪ್ರದೇಶವು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಇಪ್ಪತ್ತು ಪರ್ಸೆಂಟ್ ನೀರಾವರಿ ಪ್ರದೇಶವು ಕಾವೇರಿ ಜಲಾನಯನ ಪ್ರದೇಶದಲ್ಲಿ ಇದೆ. ಸ್ವಾತಂತ್ರ್ಯ ಬಂದನಂತರ ಇಲ್ಲಿಯವರೆಗೆ ಅರವತ್ತು ಪರ್ಸೆಂಟ್ ನೀರಾವರಿ ಪ್ರದೇಶವನ್ನು ಒಳಗೊಂಡಿರುವ ಕೃಷ್ಣಾ ಜಲಾನಯನದ ಯೋಜನೆಗಳಿಗೆ ನಮ್ಮ ಸರ್ಕಾರ ಖರ್ಚು ಮಾಡಿರತಕ್ಕ ಹಣ 2526 ಕೋಟಿ ರೂಪಾಯಿಗಳು. ಆದರೆ ಇಪ್ಪತ್ತು ಪರ್ಸೆಂಟ್ ನೀರಾವರಿ ಪ್ರದೇಶವನ್ನು ಹೊಂದಿರುವ ಕಾವೇರಿ ಯೋಜನೆಗಳಿಗೆ 1600 ಕೋಟಿರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ರಾಜ್ಯದ ಆಡಳಿತವನ್ನು ಯಾರೇ ಮಾಡಿರಬಹುದು, ಇದರಿಂದ ಉತ್ತರ ಕರ್ನಾಟಕ ಭಾಗದ ಜನರಿಗೆ ಅನ್ಯಾಯವಾಗಿದೆಯೆಂಬುದನ್ನು ಸಭೆಯ ಮೂಲಕ ತಿಳಿಯಪಡಿಸುತ್ತಿದ್ದೇನೆ ಎರಡು ಸಾವಿರ ಇಸವಿಯೊಳಗೆ ಬಚಾವತ್ ಆಯೋಗದ ಪ್ರಕಾರ ಕೃಷ್ಣಾ ಕಣಿವೆ ಯೋಜನೆಯಲ್ಲಿ 734 ಟಿ.ಎಂ.ಸಿ. ನೀರನ್ನು ನಾವು ಬಳಕೆ ಮಾಡಿಕೊಳ್ಳಬೇಕಾಗಿದೆ.

ಆದರೆ ಇದುವರೆಗೆ ನಾವು ಉಪಯೋಗ ಮಾಡಿಕೊಂಡಿರತಕ್ಕದ್ದು ಕೇವಲ 300 ಟಿ.ಎಂ.ಸಿ. ನೀರು. ಕೃಷ್ಣ, ಮಲಪ್ರಭಾ, ತುಂಗಭದ್ರಾ, ಘಟಪ್ರಭಾ, ವೇದಾವತಿ, ಇವೆಲ್ಲಾ ಉಪ ನದಿಗಳು ಸೇರಿದಂತೆ ಇರತಕ್ಕ ಅರವತ್ತು ಯೋಜನೆಗಳನ್ನು ಪೂರ್ಣ ಮಾಡಿದರೆ ಮಾತ್ರ ನಮಗೆ ನಿಗದಿಯಾಗಿರುವ 734ಟಿ.ಎಂ.ಸಿ. ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಹಿರಿಯೂರಿನಿಂದ ಪ್ರಾರಂಭವಾಗಿ ಗುಲ್ಬರ್ಗಾವನ್ನು ದಾಟಿ, ಕೃಷ್ಣ ಕಣಿವೆ ಪ್ರದೇಶದಲ್ಲಿ ನೀರಾವರಿ ಯೋಜನೆಗಳು ಪೂರ್ಣಗೊಂಡಾಗ ಮಾತ್ರ ಬರಗಾಲದ ಬವಣೆಯನ್ನು ಅನುಭವಿಸಿರುವಂಥ? ಪ್ರದೇಶವು ನಂದನವನವಾಗುವುದರಲ್ಲಿ ಸಂದೇಹವಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಆ ಭಾಗದ ವಾತಾವರಣವು ತೋಟಗಾರಿಕೆಗೆ ಹೇಳಿ ಮಾಡಿಸಿದಂತಿದೆ. ಶ್ರಮವಹಿಸಿ ದುಡಿಯುವ ಮಾನವ ಶಕ್ತಿ ಇದೆ. ಆದರೆ ನೀರನ್ನು ಅವರಿಗೆ ಒದಗಿಸುವುದೊಂದೇ ಸರ್ಕಾರದ ಕರ್ತವ್ಯವಾಗಿದೆ. ಆ ಭಾಗಕ್ಕೆ ನೀರನ್ನು ಕೊಟ್ಟಿದ್ದೆ ಆದರೆ ಆ ಭಾಗಕ್ಕೆ ಸ್ವರ್ಗವನ್ನು ಕೊಟ್ಟಂತಾಗುತ್ತದೆಂದು ಹೇಳಬಯಸುತ್ತೇನೆ. ನೀರು ಪ್ರಗತಿಯ ಜೀವನಾಡಿ. ನೀರಿದ್ದರೆ ಸಮೃದ್ಧಿ ನಿಶ್ಚಿತ.

ನಮ್ಮಲ್ಲಿ ನೀರಿನ, ಫಲವತ್ತಾದ ಭೂಮಿಯ, ಮಾನವ ಶಕ್ತಿಯ, ಸೌರ ಶಕ್ತಿಯ ಯೋಜನೆಗಳ ಮತ್ತು ಸಂಯೋಜಕರ ಕೊರತೆ ಇಲ್ಲ, ಯೋಜನೆಗಳನ್ನು ಪೂರ್ಣಗೊಳಿಸುವಂಥ ರಾಜಕೀಯ ಪಕ್ಷದ, ನಾಯಕರ, ಇಚ್ಛಾಶಕ್ತಿಯ ಕೊರತೆ ಇದೆಯೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

1948ರಲ್ಲಿ ಪ್ರಾರಂಭವಾದಂಥ ಘಟಪ್ರಭಾ ಯೋಜನೆ ಇಲ್ಲಿಯವರೆಗೂ ಪ್ರಾರಂಭವಾಗಿಲ್ಲ. 201 ಕಿ.ಮೀ. ಉದ್ದ ಕೆನಾಲ್ನಲ್ಲಿ ಇಲ್ಲಿಯವರೆಗೆ ಕೇವಲ 50 ಕಿ.ಮೀ.ನ್ನು ಮಾತ್ರ ಪೂರ್ಣಗೊಳಿಸಿದ್ದೀರಿ. ಮತ್ತು ಜಮಖಂಡಿ ತಾಲ್ಲೂಕಿನ ಹಿಪ್ಪರಗಿ ಬ್ಯಾರೇಜ್ ಏನಿದೆ, ಅದರ ಕೆಲಸವು ಕಳೆದ ಮೂವತ್ತು ವರ್ಷಗಳಿಂದ ಪೂರ್ಣಗೊಂಡಿಲ್ಲ. ಆ ಯೋಜನೆಯ ವೆಚ್ಚವು ಪ್ರಾರಂಭದ ಹಂತದಲ್ಲಿ 5 ಕೋಟಿ ರೂ.ಗಳು ಇತ್ತು. ಆದರೆ ಈಗ ಅದು 200 ಕೋಟಿ ರೂಪಾಯಿಗಳನ್ನು ದಾಟಿದೆ. 1995ರ ವರೆಗೆ ತಾವು ಕೇವಲ 15 ಕೋಟಿ ರೂಪಾಯಿಗಳನ್ನು ಅದಕ್ಕೆ ಖರ್ಚು ಮಾಡಿದ್ದೀರಿ. ಕೃಷ್ಣಾ ಕಣಿವೆಯ ಅಡಿಯಲ್ಲಿ ಬರತಕ್ಕ ಪ್ರತಿಯೊಂದು ಯೋಜನೆ, ಇದೇ ರೀತಿಯಾಗಿದೆಯೆಂದು ಸ್ಪಷ್ಟವಾಗಿ ಹೇಳುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ ಒಂದು, ಹಿಪ್ಪರಗಿ, ಘಟಪ್ರಭಾ, ಘಟ್ಟ ಮೂರು, ಮಲಪ್ರಭಾ, ಬೆಣ್ಣೆತೊರೆ, ತುಂಗಭದ್ರಾ ಬಲ ಮತ್ತು ಎಡದಂತೆ ಮೇಲ್ಮಟ್ಟದ ಕಾಲುವೆ, ಅಮರ್ಜ, ಮುಲ್ಲಾಮಾರಿ, ಹಿರೇಹಳ್ಳ, ಮಸ್ಕಿನಾಲೆ, ದೂದ್ಗಂಗಾ, ಕೃಷ್ಣಾ ಮೇಲ್ದಂಡೆ ಘಟ್ಟ ಎಂದು, ಮಾರ್ಕಂಡ ಯೋಜನೆ, ರಾಮತಾಲ್ ಏತ ನೀರಾವರಿ ಯೋಜನೆ, ಹರಿನಾಲಾ ಯೋಜನೆ, ತುಂಗಭದ್ರಾ ಯೋಜನೆ, ಭೀಮ ಏತ ನೀರಾವರಿ ಯೋಜನೆ, ಗಂದೌಲಿ, ಸಿಂಗಟನೂರು ಏತ ನೀರಾವರಿ ಯೋಜನೆ, ಘಟಪ್ರಭಾ ಏತ ನೀರಾವರಿ ಯೋಜನೆಗಳನ್ನು ಎಲ್ಲಿಯವರೆಗೆ ಸೂಕ್ತ ಸಮಯದಲ್ಲಿ ಪೂರ್ಣ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಭಾಗದ ಜನರಿಗೆ ಅನ್ಯಾಯವಾಗುತ್ತದೆ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಇವತ್ತು ನೀರಾವರಿ ಅಂದರೇ ಕೇವಲ ಬೃಹತ್ ನೀರಾವರಿ ಮಾತ್ರ ಆಗಬಾರದು. ಏತ ನೀರಾವರಿಯನ್ನೂ ಕೂಡ ಒಳಗೊಂಡಿರಬೇಕು, ಅದೂ ಅಲ್ಲದೇ ಕೆರೆ ಕಟ್ಟೆಗಳನ್ನು ಕೂಡ ಇವತ್ತು ತುಂಬಿಸುವಂತಹ ವ್ಯವಸ್ಥೆಯಾಗಬೇಕು. ಏಕೆಂದರೆ ನಮ್ಮ ರಾಜ್ಯದಲ್ಲಿ ಇವತ್ತು ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆ. ನೀರಾವರಿ ಭೂಮಿಯಲ್ಲಿ ಅತೀ ಆಳದಲ್ಲಿ ಸಹಿತ ನೀರು ಸಿಕ್ಕದಿರುವಂಥ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಇದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡು, ಈ ಬಯಲು ಸೀಮೆಯಲ್ಲೂ ಸಹಿತ ಪ್ರತಿ ಎಕರೆಗೆ ಇಂತಿಷ್ಟು ಮರಗಳನ್ನು ಬೆಳೆಸಬೇಕು ಮತ್ತು ಪ್ರತಿ ಗ್ರಾಮಕ್ಕೆ ಒಂದು ಕೆರೆ ಕಟ್ಟೆಯನ್ನು ಮಾಡಿಸುವಂತಹ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲ್ರವರು ಭಾಷಣ ಮಾಡುತ್ತಾ ಮಹಾರಾಷ್ಟ್ರದಲ್ಲಿ ವಿಶೇಷವಾಗಿ ಬಾರಾಮತಿ ಮತ್ತು ರಾಳೆಗಾಂವ್ಸಿದ್ಧಿಯೊಳಗೆ ಮಾಡಿರತಕ್ಕಂಥ ಕಾರ್ಯಕ್ರಮದ ಬಗ್ಗೆ ಹೇಳಿದರು. ಮಹಾರಾಷ್ಟ್ರ ಸರ್ಕಾರ ಇವತ್ತು ರಾಳೆಗಾಂವ್ಸಿದ್ಧಿಯೊಳಗೆ ಏನು ಈ ನೀರಾವರಿ ಬ್ಲಾಕ್ಗಳನ್ನು ಮಾಡಿದ್ದಾರೆ, ಅದೇ ರೀತಿಯ ಮೂರು ನೂರು ಬ್ಲಾಕ್ಗಳ ನಿರ್ಮಾಣ ಕಾರ್ಯವನ್ನು ಮಹಾರಾಷ್ಟ್ರ ಸರ್ಕಾರ ಕೈಗೆತ್ತಿಕೊಂಡಿದೆ.

ಇದೇ ರೀತಿ ನಮ್ಮ ರಾಜ್ಯ ಸರ್ಕಾರ ಕೂಡ ಕಾರ್ಯಕ್ರಮವನ್ನುಕೈಗೊಂಡು ಬಯಲು ಸೀಮೆಯ ಅಭಿವೃದ್ಧಿಯಾಗಿ, ಅದರಿಂದ ರೈತರಿಗೆ ವರದಾನವಾಗಲಿ ಎನ್ನುವಂತಹ ಮಾತನ್ನೂ ಸಸಹಿತ ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ ಇವತ್ತು ಮಹಾರಾಷ್ಟ್ರದಲ್ಲಿ

ಸೋಲ್ಲಾಪುರ ಮತ್ತು ಬಿಜಾಪುರ ಜಿಲ್ಲೆಯ ಬಾರ್ಡರ್ ಏರಿಯಾದಲ್ಲಿ ಈ ನೀರಾವರಿಯಲ್ಲಿ ಪ್ರಯೋಗ ಮಾಡಿದ್ದಾರೆ. ಕೇವಲ ಹತ್ತು ಗುಂಟೆ ಕ್ಷೇತ್ರದಲ್ಲಿ ಇವತ್ತು ಪ್ರತಿ ತಿಂಗಳು ಒಂದು ರೈತ ಕುಟುಂಬ ಐದು ಸಾವಿರ ರೂ.ಗಳ ನಿವ್ವಳ ಆದಾಯವನ್ನು ಗಳಿಸುವಂತಹ ಒಂದು ಪ್ರಯೋಗ ಮಾಡಿದ್ದಾರೆ. ಅಂತಹ ಪ್ರಯೋಗಗಳನ್ನು ಸಹಿತ ಮಾಡಲು ನಮ್ಮ ಸರ್ಕಾರ ರೈತರಿಗೆ ಅವಕಾಶ ಮಾಡಿ ಕೊಡಬೇಕೆಂಬ ಮಾತನ್ನು ನಾನು ಇವತ್ತು ಕೇಳುತ್ತಿದ್ದೇನೆ.

ಇವತ್ತು ನೀರಾವರಿ ಅಂದರೆ ಸಮೃದ್ಧಿ, ನೀರಾವರಿ ಅಂದರೆ ಹಸಿರು ಕ್ರಾಂತಿ, ನೀರಾವರಿ ಅಂದರೆ ಕ್ಷೀರ ಕ್ರಾಂತಿ, ನೀರಾವರಿ ಅಂದರೆ ಕೃಷಿ ಆಧಾರಿತ ಕೈಗಾರಿಕೆಗಳ ಬೆಳವಣಿಗೆ, ಎಲ್ಲದಕ್ಕೂ ಮಿಗಿಲಾಗಿ ನೀರಾವರಿ ಅಂದರೆ ಬಡತನವನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವಂಥಾದ್ದು ಎಂದರೆ ತಪ್ಪಾಗಲಾರದು ಎಂಬ ಮಾತನ್ನು ನಾನು ಹೇಳುತ್ತೇನೆ. ಆ ಭಾಗದ ಜನರಿಗೆ ಇವತ್ತು ನೀವು ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟರೆ ಯಾವ್ಯಾವ ಕ್ಷೇತ್ರದಲ್ಲಿ ಯಾವ್ಯಾವ ಬೆಳೆಯನ್ನು ಬೆಳೆಯುತ್ತಾರೋ, ಅಂತಹ ಘಟಕಗಳು, ಇಂಡಸ್ಟ್ರೀಸ್ಗಳು ಅಲ್ಲಿ ಬರಲಿಕ್ಕೆ ಸಾಧ್ಯವಿದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ನೀರಾವರಿ ಸಲುವಾಗಿ ಅದರಲ್ಲೂ ವಿಶೇಷವಾಗಿ ಈ ಉತ್ತರ ಕರ್ನಾಟಕದ ಜನರಿಗೆ ಅನ್ಯಾಯವಾಗುತ್ತಿದೆ, ಅದನ್ನು ತಾವು ಹೋಗಲಾಡಿಸುತ್ತೀರಿ ಎನ್ನುವಂತಹ ಸ್ಪಷ್ಟವಾದ ಮಾತನ್ನು ಹೇಳುತ್ತೇನೆ. ಮೊನ್ನೆಯ ದಿವಸ ಮಾನ್ಯ ಬಚ್ಚೇಗೌಡರು ತಮ್ಮ ಉತ್ತರದಲ್ಲಿ ಮಾತನಾಡುತ್ತಾ ಹೇಳಿದರು. ಏಷ್ಯನ್ ಅಭಿವೃದ್ಧಿ ಬ್ಯಾಂಕಿನಿಂದ ಈ ಮೈಸೂರು ಭಾಗಕ್ಕೆ 131 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ಕೇವಲ ಮೈಸೂರು, ಬೆಂಗಳೂರು, ರಾಮನಗರ, ಚನ್ನರಾಯಪಟ್ಟಣ, ತುಮಕೂರು ಬಿಟ್ಟರೆ ನಮ್ಮ ದಾವಣಗೆರೆಗೂ ಸಹಿತ ಅದು ದಾಟಲಿಲ್ಲ.

ಏಕೆ ಈ ರೀತಿಯಾಗಿದೆ? ನಾನು ದಯಮಾಡಿ ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇವತ್ತು ಉತ್ತರ ಕರ್ನಾಟಕದಲ್ಲಿ ಈ ನೇಕಾರರು ಶೇಕಡ 90ರಷ್ಟು ಇದ್ದರೂ ಸಹಿತ ಅಲ್ಲಿ ಯಾವುದೇ ಸೌಲಭ್ಯಗಳನ್ನು ತಾವು ಕೊಡುತ್ತಿಲ್ಲ. ಸರ್ಕಾರ ಹುಬ್ಬಳ್ಳಿಗೆ ಉತ್ತರ ಕರ್ನಾಟಕದ ಈ ಕೆ.ಹೆಚ್.ಡಿ.ಬಿ. ಕೇಂದ್ರವನ್ನು ಬೆಂಗಳೂರಿನಿಂದ ವರ್ಗಾಯಿಸಲು ಆದೇಶ ಮಾಡಿದ್ದರೂ ಸಹಿತ, ತಾವು ಇನ್ನೂ ಈ ಬೆಂಗಳೂರಿನಲ್ಲೇ ಆ ಕೇಂದ್ರವನ್ನು ಇಟ್ಟುಕೊಳ್ಳುವಂತಹ ವಿಚಾರ ಮಾಡುತ್ತಿದ್ದೀರಿ. ಹುಬ್ಬಳ್ಳಿಗೆ ಹೈಕೋರ್ಟ್ ಪೀಠ ಬೇಕೆಂಬ ವಿಚಾರ ಎಷ್ಟು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಅದೂ ಅಲ್ಲದೇ ಇವತ್ತು ನೈಋತ್ಯ ರೈಲ್ವೆ ವಲಯ ಸಹಿತ ಹುಬ್ಬಳ್ಳಿಗೆ ಬರುವುದರಿಂದ ನಾವು ವಂಚಿತರಾಗಿದ್ದೇವೆ. ಈ ರೀತಿ ಉತ್ತರ ಕರ್ನಾಟಕಕ್ಕೆ ಅನ್ಯಾಯವನ್ನು ಮಾಡುತ್ತಾ ಹೋದರೆ, ನಾವು ಸ್ಪಷ್ಟವಾಗಿ ಈ ಮಲತಾಯಿ ಧೋರಣೆಯನ್ನು ಖಂಡಿಸಬೇಕಾಗುತ್ತದೆ. ಈ ದಿಸೆಯಲ್ಲಿ ನಮಗೇನು ಅನ್ಯಾಯವಾಗುತ್ತಿದೆ, ಇದನ್ನು ಸರಿಪಡಿಸಲು ಇವತ್ತು ನೀವು ಹೆಚ್ಚಾಗಿ ನೀರಾವರಿಗೆ ಹಣ ಕೊಟ್ಟು, ಒಂದು ನಿಗಧಿತ ಅವಧಿಯಲ್ಲಿ ನಮ್ಮ ಯೋಜನೆಗಳನ್ನು ಪೂರ್ಣಗೊಳಿಸಬೇಕು ಎಂಬ ಮಾತನ್ನು ಹೇಳುತ್ತೇನೆ. ಮುಳುಗಡೆ ಸಮಸ್ಯೆ ಬಗ್ಗೆ ನಾನು ಒಂದೆರಡು ಮಾತನ್ನು ಹೇಳಲೇಬೇಕಾಗುತ್ತದೆ. ಈಗಾಗಲೇ ಒಂದೂವರೆ ವರ್ಷಗಳಿಂದ ಸಾಕಷ್ಟು ಸಮಸ್ಯೆಗಳನ್ನು ಇದರಬಗ್ಗೆ ನಾನು 4-5 ಬಾರಿ ಸದನದಲ್ಲಿ ಪ್ರಸ್ತಾಪಿಸಿದ್ದರೂ ಸಹಿತ, ಇನ್ನೂವರೆಗೂ ಯಾವುದೇ ಕ್ರಮವನ್ನು ಸರ್ಕಾರ ಕೈಗೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಆಶ್ವಾಸನೆ ಕೊಟ್ಟರೂ ಸಹಿತ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಆಶ್ವಾಸನೆ ಕೊಟ್ಟರೂ ಸಹಿತ, ಅದು ಒಂದು ಹೆಜ್ಜೆ ಕೂಡ ಮುಂದೆ ಇಟ್ಟಿಲ್ಲ.

ದಯಮಾಡಿ ಇದು ಆಗಬಾರದು. ಸದನದಲ್ಲಿ ಜವಾಬ್ದಾರಿ ಇರತಕ್ಕಂತಹ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಗಳನ್ನು ನೀಡಿದಾಗ, ಆ ಭರವಸೆಗಳನ್ನು ಈಡೇರಿಸುವಂತಹ ಕ್ರಮ ಕೈಗೊಳ್ಳಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ. ಇವತ್ತು ಈ ಮುಳುಗಡೆ ಭಾಗದ ಜನರಿಗೆ ತಾರತಮ್ಯ ಹೆಚ್ಚಾಗುತ್ತಿದೆ. ನಾವು ಕಳೆದುಕೊಳ್ಳುವಂತಹ ಮನೆ ಮಠಗಳಿಗೆ, ಜಮೀನುಗಳಿಗೆ ಸರಿಯಾದ ಹಣವಂತೂ ಇಲ್ಲಿಯವರೆಗೂ ಸಿಕ್ಕಿಲ್ಲ. ನಾನು ಮೊನ್ನೆಯ ದಿವಸ ವಿಷಯವನ್ನು ಪ್ರಸ್ತಾಪ ಮಾಡಿದೆ.

ಇವತ್ತು ಜಾಗತಿಕ ಬ್ಯಾಂಕಿನವರು ಮುಳುಗಡೆ ಆಗತಕ್ಕಂತಹ ಜನರ ವಸತಿಗಳ ಸಲುವಾಗಿ ಸ್ಪಷ್ಟವಾಗಿ ನಿರ್ದೇಶನ ಕೊಟ್ಟಿದ್ದಾರೆ. ಏನಿದ್ದರೂ ರಿಪ್ಲೇಸ್ಮೆಂಟ್ ವ್ಯಾಲ್ಯೂ ಕೊಡಬೇಕೆಂದು. ಏನು ಸ್ಟ್ರಕ್ಚರ್ ಮುಳುಗಡೆಯಾಗುತ್ತಿದೆ, ಆ ಸ್ಟ್ರಕ್ಚರ್ಗೆ ರಿಪ್ಲೇಸ್ಮೆಂಟ್ ವ್ಯಾಲ್ಯೂ ಕೊಡಬೇಕೆನ್ನುವ ಮಾತನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ರಿಪ್ಲೇಸ್ಮೆಂಟ್ ವ್ಯಾಲ್ಯೂ ಕೊಡಬೇಕೆಂದು ಇವತ್ತು ನಾನು ಕೇಳುತ್ತಿದ್ದೇನೆ. ಸರ್ಕಾರದ ಮುಂದೆ ಯಾವುದೇ ಒಂದು ಬೇಡಿಕೆಯನ್ನು ನಾವು ಇಟ್ಟಾಗ, ಜಾಗತಿಕ ಬ್ಯಾಂಕಿನವರ ಕಂಡೀಷನ್ ಹೀಗಿದೆ ಎನ್ನುವಂತಹ ಕಾರಣ ಮುಂದಿಡುತ್ತೀರಿ. ಆ ಜಾಗತಿಕ ಬ್ಯಾಂಕಿನವರೂ ಸಹಿತ ನಮಗೆ ರಿಪ್ಲೇಸ್ಮೆಂಟ್ ವ್ಯಾಲ್ಯೂ ಕೊಡಲಿಕ್ಕೆ ಹೇಳಿದರೂ ತಾವು ಏಕೆ ಅದನ್ನು ಕೊಡಲಿಕ್ಕೆ ಸಿದ್ಧರಿಲ್ಲ? ಇವತ್ತು ಸವಕಳಿ ಎಂದು ಶೇಕಡಾ 25 ಮುರಿಯುತ್ತಿದ್ದೀರಿ. ಏನು ಸ್ವಾಮಿ, ಇವತ್ತು ಮುಳುಗಡೆ ಭಾಗದ ಜನರು ನಿಮಗೆ ಅವರ ಜಮೀನು ಮತ್ತು ಮನೆಗಳನ್ನು ಮಾರಲಿಕ್ಕೆ ಹೊರಟಿದ್ದಾರಾ? ದಯಮಾಡಿ ಈ ರೀತಿ ಅನ್ಯಾಯ ಆಗಬಾರದು. ತಾವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸವಕಳಿಯನ್ನು ತೆಗೆಯುವಂತಹ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅದೂ ಅಲ್ಲದೇ ಇವತ್ತು ನರ್ಮದಾ ಯೋಜನೆಯಲ್ಲಿ, ಅಲ್ಲಿ ಏನು ಭೂಮಿಯನ್ನು ಕಳೆದುಕೊಂಡಿದ್ದಾರೆ, ಅಲ್ಲಿಯ ಪ್ರತಿಯೊಂದು ಕುಟುಂಬಕ್ಕೂ ಸಹಿತ ಸರ್ಕಾರ ಉದ್ಯೋಗವನ್ನು ಕೊಡುವಂತಹ ಆಜ್ಞೆ ಮಾಡಿದ್ದಾರೆ. ನಮ್ಮ ಕರ್ನಾಟಕ ಸರ್ಕಾರದವರೂ ಸಹಿತ ನಾವು ಏನು ಇವತ್ತು ಭೂಮಿ, ಮನೆಗಳನ್ನು ಕಳೆದುಕೊಂಡು ಯಾರು ನಿರಾಶ್ರಿತರಾಗುತ್ತಾರೆ, ಆ ಪ್ರತಿಯೊಂದು ಕುಟುಂಬಕ್ಕೂ ಸಹಿತ ಸರ್ಕಾರದ ಉದ್ಯೋಗ ಕೊಡಬೇಕು. ಅದೂ ಅಲ್ಲದೆ, ರಾಜ್ಯ ಮಟ್ಟದಲ್ಲಿ ಎಲ್ಲೆಲ್ಲಿ ಸರ್ಕಾರಿ ನೌಕರರನ್ನು ಇವತ್ತು ತುಂಬಿಕೊಳ್ಳುತ್ತಿದ್ದೀರಿ ಅದರಲ್ಲಿ ಕನಿಷ್ಠ ಪಕ್ಷ ಶೇಕಡಾ 10ರಷ್ಟಾದರೂ ವೈಟೇಜ್ ನಮಗೆ ತುಂಬಿಕೊಡುವಂತಹ ವ್ಯವಸ್ಥೆ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಇವೆರಡು ಮಹತ್ವದ ಸಮಸ್ಯೆಗಳಾಗಿವೆ. ಇಲ್ಲಿಯವರೆಗೂ ಕಳೆದ ಎರಡು ವರ್ಷಗಳಿಂದ ಈ ಆಲಮಟ್ಟಿ ಯೋಜನೆಯಾಗಬೇಕು, ನಿಗದಿತ ಸಮಯದಲ್ಲಿ ಆಗಬೇಕೆನ್ನುವ ಒಂದು ಉಚ್ಚ ಭಾವನೆ ಇಟ್ಟುಕೊಂಡು ನಾವು ಸಂಪೂರ್ಣವಾದ ಸಹಕಾರ ಕೊಟ್ಟುಕೊಂಡು ಬರುತ್ತಿದ್ದೇವೆ. ಇದೇ ರೀತಿ ತಮ್ಮ ಸುಳ್ಳು ಭರವಸೆಗಳಿಂದ ನಮ್ಮ ಯಾವುದೇ ಬೇಡಿಕೆಗಳು ಈಡೇರದೇ ಹೋದರೆ, ಜನತೆ • ಸಂಪೂರ್ಣವಾಗಿ ನಿಮ್ಮ ಆಲಮಟ್ಟಿಗೆ ಯೋಜನೆಗೆ ಅಸಹಕಾರ ಕೊಡುವ ಪರಿಸ್ಥಿತಿ ಬಂದೀತು. ನಾವು ನಮ್ಮ ಹಕ್ಕುಗಳಿಗಾಗಿ ಸುಪ್ರೀಂ ಕೋರ್ಟ್ನ ಮೊರೆ ಹೋಗುವಂತಹ ಪರಿಸ್ಥಿತಿ ಬಂದೀತು. ದಯಮಾಡಿ ಇದು ಆಗಬಾರದು. ನಾವು ಸಂಪೂರ್ಣವಾಗಿ ಮುಳುಗಡೆ ಭಾಗದ ಜನರು ನಿಮಗೆ ಸಹಕಾರ ಕೊಟ್ಟು ಎರಡು ಸಾವಿರ ಇಸವಿಯೊಳಗೆ ಏನು ಬಚಾವತ್ ಆಯೋಗದ ಪ್ರಕಾರ ನಮ್ಮ ಪಾಲಿನ ನೀರಿನ ಬಳಿಕೆ ಮಾಡಲು

ಸರ್ಕಾರ ಪ್ರಯತ್ನ ಮಾಡುತ್ತಿದೆ, ಅದರಲ್ಲಿ ಮುಳುಗಡೆ ಜನರೂ ಸಹಿತ ಸಹಕಾರ ಕೊಡುತ್ತಾರೆ. ಆದರೆ ಇವತ್ತು ನಮ್ಮನ್ನು ನಿರಾಶ್ರಿತರನ್ನಾಗಿ, ಗೋಳಿನ ದಂತಕಥೆ ಆಗುವಂತಹ ರೀತಿಯಲ್ಲಿ ನಡೆಸಿಕೊಳ್ಳಬಾರದು. ಮೊನ್ನೆಯ ದಿವಸ ಸನ್ಮಾನ್ಯ ನೀರಾವರಿ ಮಂತ್ರಿಗಳು ಹೇಳುತ್ತಿದ್ದರು, ಎಲ್ಲಾ ಪುನರ್ವಸತಿ ಕೇಂದ್ರದಲ್ಲಿ ಸಂಪೂರ್ಣವಾಗಿ ಸೌಲಭ್ಯಗಳನ್ನು ಕೊಟ್ಟಿದ್ದೇವೆ ಎಂದು. ಇದು ಬಹಳ ದುರ್ದೈವದ ಸಂಗತಿ. ನಾನು ಇದನ್ನು ಸ್ಪಷ್ಟವಾಗಿ ಖಂಡಿಸುತ್ತೇನೆ. ಏಕೆಂದರೆ ನನ್ನ ಬೀಳಗಿ ತಾಲ್ಲೂಕಿನಲ್ಲಿ ಮುಳುಗಡೆಯ ಪ್ರಥಮ ಪುನರ್ವಸತಿ ಕೇಂದ್ರ ಹೊನ್ಯಾಳದಲ್ಲಿದೆ. ಇವತ್ತು ಅಲ್ಲಿಗೆ ಒಂದು ಮೂಲಭೂತವಾದಂತಹ ಕುಡಿಯುವ ನೀರಿನ ಸೌಕರ್ಯ ಕೂಡ ಇಲ್ಲ.

ಇವತ್ತು ವಾಟರ್ ಬ್ಯಾಂಕಿನ ಮುಖಾಂತರ ಅವರು ಅಲ್ಲಿ ನೀರನ್ನು ಕೊಡುತ್ತಿದ್ದಾರೆ. ಮೂರು ಸಾವಿರ ಜನಸಂಖ್ಯೆ ಇರುವಂತಹ ಇಂತಹ ಗ್ರಾಮ ಪುನರ್ವಸತಿಯಾಗಿದೆ. ಅಲ್ಲಿ ಒಂದೇ ಒಂದು ವಾಟರ್ ಟ್ಯಾಂಕಿನ ಮುಖಾಂತರ ನೀರು ಸಪ್ಲೈ ಮಾಡುತ್ತಿದ್ದಾರೆ. ಮುಳುಗಡೆಯಾದ ಮೂರು ದಿವಸದ ನಂತರೂ ಸಹಿತ ವಿದ್ಯುತ್ ಸೌಲಭ್ಯ ಅಲ್ಲಿ ಇರಲಿಲ್ಲ. ಯಾವುದೇ ಔಷಧಿ ಪೂರೈಕೆಯಾಗಲಿ ಅಲ್ಲಿರಲಿಲ್ಲ. ಡಾಕ್ಟರ್ ಕೂಡ ಅಲ್ಲಿಗೆ ವಿಸಿಟ್ ಕೊಟ್ಟಿಲ್ಲ. ಅಲ್ಲಿಯ ಅಧಿಕಾರಿಗಳು ಏನು ಹೇಳುತ್ತಾರೋ, ಆ ತಪ್ಪು ಮಾಹಿತಿಯನ್ನು ತಂದು ಸದನಕ್ಕೆ ಹೇಳಿದರೆ ನಿಮ್ಮ ಜವಾಬ್ದಾರಿ ಮುಗಿಯುವುದಿಲ್ಲ. ಇವತ್ತು ಯಾವುದೇ ಸರ್ಕಾರ ಕೆಲಸಗಳು ಆಗಬೇಕಾದರೆ ಜನತೆಯ ಸಂಪೂರ್ಣ ಸಹಕಾರ ಬೇಕು. ಸರ್ಕಾರಕ್ಕೂ ಸಹಿತ ಒಂದು ಸರಿಯಾದ ಚಿಂತನೆ ಬೇಕು ಎನ್ನುವಂತಹ ಮಾತನ್ನು ನಾನು ಹೇಳುತ್ತಿದ್ದೇನೆ. ನಾವು ಮಾತ್ರ ಸರ್ಕಾರಕ್ಕೆ ಇವತ್ತು ಸದನದ ಮುಖಾಂತರ, ಸನ್ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ, ಇವತ್ತು ಮುಳುಗಡೆ ಭಾಗದ ಸಲುವಾಗಿ ನೀವೇನು ಹೇಳುತ್ತಿದ್ದೀರಿ? ಪ್ರಾಮಾಣಿಕರಾದ ಅಧಿಕಾರಿಗಳನ್ನು ಹಾಕಿದ್ದೀರಿ, ಕೆಲಸ ಆಗಿಲ್ಲವೆಂದು ಹೇಳುವಂತಿಲ್ಲ, ಕೆಲಸ ಆಗಿದೆ. ಆದರೆ ಪುನರ್ವಸತಿ, ಪುನರ್ನಿರ್ಮಾಣದಲ್ಲಿ ಯಾವುದೇ ಕೆಲಸ ಆಗಿಲ್ಲ, ಸಾಕಷ್ಟು ಅವ್ಯವಸ್ಥೆಯಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ.

5.50 ಪಿ.ಎಂ

ಘಟಪ್ರಭ ಮತ್ತು ಬಲದಂಡೆಯಲ್ಲಿ ಸ್ವಲ್ಪ ಪ್ರಗತಿ ಕಂಡಿದ್ದೇವೆ. ಅದು ಒಂದು ಸಂತೋಷದ ಸಂಗತಿ ಎಂದು ಹೇಳುತ್ತಾ, ದಯಮಾಡಿ ಮತ್ತೊಮ್ಮೆ ನಾನು ಅಧ್ಯಕ್ಷರ ಮುಖಾಂತರ ಮುಳುಗಡೆ ಭಾಗಗಳ ಸಮಸ್ಯೆಗಳು ಏನಿವೆ ಅವುಗಳನ್ನು ಸಂಪೂರ್ಣವಾಗಿ ಬಗೆಹರಿಸಬೇಕು. ಆ ಸಮಸ್ಯೆಗಳನ್ನು ಬಗೆಹರಿಸದೇ ಹೋಗದೆ ನಾವು ಸ್ಪಷ್ಟವಾಗಿ ಈ ಯೋಜನೆಗೆ ನಮ್ಮದೇ ಆದ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಅದು ಸರ್ಕಾರಕ್ಕೆ ಬೆದರಿಕೆ ಅಲ್ಲ, ರಾಜ್ಯದ ಜನತೆಗೆ ಬೆದರಿಕೆ ಅಲ್ಲ, ನಮ್ಮ ಹಕ್ಕನ್ನು ನಾವು ಕೇಳುತ್ತಿದ್ದೇವೆ. ನಮ್ಮ ಸರ್ಕಾರ ನಿಗದಿತ ಸಮಯದಲ್ಲಿ ಸ್ಪಂದಿಸದೇ ಹೋದರೆ ನಮ್ಮ ಸಹಕಾರ ನಿಮಗೆ ಸಿಗದೆ ಹೋದೀತು. ತದನಂತರ ನಾವು ನೀವೂ ಕೂಡ ಪರಿತಪ್ಪಿಸುವಂಥಾದ್ದು ಆದೀತು ಎನ್ನುವಂತಹ ಮಾತನ್ನು ಹೇಳುತ್ತಾ, ಸನ್ಮಾನ್ಯ ಅಧ್ಯಕ್ಷರು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನನ್ನ ಧನ್ಯವಾದಗಳನ್ನು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : 41 ಬೇಡಿಕೆಗಳನ್ನು ಮಂಡಿಸಿರತಕ್ಕಂಥದ್ದು, ಇಲ್ಲಿ ಒಂಭತ್ತು ಜನ ಮಂತ್ರಿಗಳು ಮಾತ್ರ ಇರುವುದು. 10 ಜನ ಸದಸ್ಯರು. ನಿನ್ನೆ ತಾನೆ

ಅವರ ಪರಿಸ್ಥಿತಿ ಸ್ವಲ್ಪ ಹೆಚ್ಚು ಕಡಿಮೆ ಆಗಿತ್ತು. ಆದರೂ ನಾವು ರಾತ್ರಿ ಹನ್ನೊಂದು ಗಂಟೆಯಾದರರೂ ಕುಳಿತುಕೊಳ್ಳುವುದಕ್ಕೆ ತಯಾರಾಗಿದ್ದೇವೆ, ಆದರೆ ನೀವು 19 ಜನ ತಯಾರಾಗಿದ್ದರೆ ಆಗುವುದಿಲ್ಲ. 41 ಬೇಡಿಕೆಗಳು ಇಟ್ಟು, ನಿಮ್ಮದು ಒಂಭತ್ತು ಇದೆ, ಒಂಭತ್ತು ಕಳೆಯೋಣ, ಮಿಕ್ಕಿದ್ದು ಎಷ್ಟು ಹೇಳಿ. ನಿನ್ನೆ ತಾನೆ ನಾವು ಮತಗಳ ಎಣಿಕೆಗೆ ಒತ್ತಾಯಿಸಿದ್ದೆವು. ನಿನ್ನೆ ತಾನೆ, ಒಂದು ತಿಂಗಳು ಸಹ ಆಗಿಲ್ಲ. ನಿನ್ನೆ ಮತಗಳ ಎಣಿಕೆ ಕೇಳಿ ಇವತ್ತು ಈ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ನಾವು ಸದನಕ್ಕೆ ಎಷ್ಟು ಸಾರಿ ಹೇಳಬೇಕೋ ನನಗೆ ಅರ್ಥವಾಗುವುದಿಲ್ಲ. ನಮಗೆ ಅನಿಸುತ್ತದೆ ಪ್ರತಿ ಸಾರಿ ನಾವು ಎದ್ದು ಎದ್ದು ಹೇಳುವುದು ನಮಗೆ ಸರಿಯಲ್ಲ ಎಂಬ ಭಾವನೆ ಬರುತ್ತಿದೆ. ಆದ್ದರಿಂದ ಸರ್ಕಾರ ತಾವು ಅರ್ಥ ಮಾಡಿಕೊಳ್ಳಬೇಕು. ನೀವು ಆ ರೀತಿ ಉತ್ತರ ಕೊಟ್ಟರೆ ನನ್ನದೇ ಒಂಭತ್ತು ಇದೆ, ನಾಣಯ್ಯನವರದು ಎಂಟು ಇದೆ, ಇನ್ನೊಬ್ಬರದು ಮೂರು, ಸಾಕು ನೀವು ಯಾರೂ ಇರಬೇಡಿ, ಎಲ್ಲಾ ಎದ್ದು ಹೋಗಲಿ, ಇನ್ನು 9-10 ಜನ ಸದಸ್ಯರಿದ್ದಾರೆ. ಅವರೂ ಹೊರಟಹೋಗಲಿ. ನಾವು ಭಾಷಣ ಮಾಡುವವರು ಕುಳಿತಿರುತ್ತೇವೆ. ಮೂರು ಜನ ನೀವು ಕುಳಿತುಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : 11 ಗಂಟೆಗೆ ನಾವು ಬರುವುದು, ತಾವು ಯಾವಾಗ ಹೌಸ್ ಅಡ್ಜರ್ನ್ ಮಾಡುತ್ತೀರಿ ಆಗ ನಾವು ಹೋಗುತ್ತೇವೆ. ಮಾತನಾಡಬೇಕೆಂಬ ಉದ್ದೇಶದಿಂದ ನಾವು ಬರುತ್ತೇವೆ. ಅವಕಾಶ ಸಿಗುವುದಿಲ್ಲ, ಜೊತೆಗೆ ಬೇಗ ಮುಗಿಸುವುದಿಲ್ಲ ಎಂದರೆ ಹೇಗೆ? ನೀವು ಹತ್ತು ಗಂಟೆಯವರೆಗೆ ಸಭೆ ನಡೆಸೋಣ ಎಂದರೂ ನಾವು ಕುಳಿತುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನಾವು ಕುಳಿತುಕೊಳ್ಳುವುದು ಕಷ್ಟ ಎಂದು ಸಿದ್ದರಾಮಯ್ಯನವರು ಹೇಳುತ್ತಾರೆ. ನಾನು ಇಲ್ಲಿ ಕುಳಿತುಕೊಳ್ಳುತ್ತೇನೆ, ಇಲ್ಲಿ ಕುಳಿತು ನಿದ್ದೆ ಮಾಡುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ ನಿಮಗೆ. ಇಷ್ಟು ಹೊತ್ತು ಹೊರಗಡೆ ಹೋಗಿದ್ದಿರಿ.

ಶ್ರೀ ವಾಟಾಳ್ ನಾಗರಾಜ್ : ನನಗೆ ಯಾವ ಚಟಗಳೂ ಇಲ್ಲ. ಇಷ್ಟು ಹೊತ್ತು ಹೊರಗಡೆ ಹೋಗುವುದಕ್ಕೆ ಅದು ನಿಮಗೂ ಗೊತ್ತಿರಬಹುದು ಎಂದು ಕಾಣುತ್ತದೆ. ಹಠ ಇದೆ. ಅದಕ್ಕೆ ನಾನು ಹೇಳುತ್ತೇನೆ, 9.30ಕ್ಕೆ ಬಂದು ರಾತ್ರಿ 11 ಗಂಟೆಯವರೆಗೆ ಕುಳಿತಿರುತ್ತೇನೆ. ನಾನು ಒರಗಿಕೊಂಡು ಅತ್ತ ಇತ್ತ ಬೇರೆ ಮಂತ್ರಿಗಳ ತರಹ ಮಲಗುವುದಿಲ್ಲ. ಅಧ್ಯಕ್ಷರೆ, ತಮಗೆ ಗೊತ್ತಿರಬಹುದು, ತಾವು ನೋಡುತ್ತಿರುತ್ತೀರಿ.

ಅಧ್ಯಕ್ಷರು : ನನಗೆ ನಿಮ್ಮ ವಿಚಾರಗಳು ಎಲ್ಲಾ ಗೊತ್ತಿವೆ, ನಾನು ಬಹಿರಂಗವಾಗಿ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರು ತೀರಾ ಅಪಾಯವಾದ ಹೇಳಿಕೆ ಕೊಡುತ್ತಿದ್ದಾರೆ. ಇದು ಸರಿಯಾದುದು ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ಸಾರಿ ವಾದ ಮಾಡಬೇಕಾದರೆ ಅದು ಹೇಳಬೇಕಾಗುತ್ತದೆ. ತಮ್ಮ ವಿಶ್ವಾಸ ಗಳಿಸಬೇಕಾದರೆ ಅದೆಲ್ಲಾ ಹೇಳಬೇಕಾಗುತ್ತದೆ ನಾವು. ಯಾವ ತರಹ ತೀರ್ಮಾನ ತೆಗೆದುಕೊಳ್ಳುತ್ತೀರಿ ತೆಗೆದುಕೊಳ್ಳಿ.

ಅಧ್ಯಕ್ಷರು : ನಮಗೆ ಹುಣಸೂರು, ತೀರ್ಥಹಳ್ಳಿ ಎಂದರೆ ಖುಷಿ. ಗೋಪಾಲ ಗೌಡರು ದೇವರಾಜ ಅರಸ್ನವರ ಊರಿನವರು ಮಾತನಾಡುತ್ತಾರೆ ಎಂದು.

+ಶ್ರೀ ಸಿ.ಹೆಚ್. ವಿಜಯಶಂಕರ್ (ಹುಣಸೂರು) : ಸನ್ಮಾನ್ಯ ಅಧ್ಯಕ್ಷರೇ ಬಹುಶಃ ನಾವು ಶಾಸಕರಾದ ಮೇಲೆ ಪ್ರಥಮ ಬಾರಿಗೆ ಮುಕ್ತವಾಗಿ ನಮ್ಮ ವಿಚಾರಗಳನ್ನು ಹಂಚಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ನಿಮಗೆ ನಾನು ಈ ಸಂದರ್ಭದಲ್ಲಿ ಅದರಲ್ಲೂ ಕೂಡ ನಮ್ಮ ಯುವಕ ಶಾಸಕರು ಏನಿದ್ದಾರೆ, ಹೊಸದಾಗಿ ಆಯ್ಕೆಯಾಗಿ ಯಾವುದೇ ಶಾಸಕ ಮಿತ್ರರು ಇರಲಿ, ಯಾವುದೇ ಪಕ್ಷದವರೇ ಇರಲಿ, ಅವರನ್ನು ಮುಕ್ತವಾಗಿ ಬೆಂಬಲಿಸಿ ಎಲ್ಲಾ ರೀತಿಯ ಸಹಕಾರ ಕೊಡುವಂತಹ ಕೆಲಸವನ್ನು ತಾವು ಮಾಡುತ್ತಿದ್ದೀರಿ. ಬಹುಶಃ ಹೊಸದಾಗಿ ಆಯ್ಕೆಯಾಗಿ ಬಂದಂತಹ ಎಲ್ಲಾ ಶಾಸಕ ಮಿತ್ರರ ಪರವಾಗಿ ನಾನು ಹೃತ್ಪೂರ್ವಕವಾದ ಅಭಿನಂದೆಯನ್ನು ಸಲ್ಲಿಸುತ್ತೇನೆ.

ನಾವು ಬಹಳ ದೊಡ್ಡ ಆಸೆಯನ್ನು ಹೊತ್ತು ಆಕಾಂಕ್ಷೆಗಳನ್ನು ಇಟ್ಟುಕೊಂಡು ಈ ಒಂದು ಸದನವನ್ನು ಪ್ರವೇಶ ಮಾಡಿದಂತಹವರು. ಈ ಸದನವನ್ನು ಪ್ರವೇಶ ಮಾಡುವಂತಹ ಸಮಯದಲ್ಲಿ ಏನು ಕೆಂಗಲ್ ಹನುಮಂತಯ್ಯನವರು ಕಟ್ಟಿಸಿದ ದೇವಸ್ಥಾನ ಇದೆ, ಈ ದೇವಸ್ಥಾನದ ಪ್ರತಿ ಮೆಟ್ಟಿಲುಗಳನ್ನೂ ಕೂಡ ನಮಸ್ಕರಿಸಿ ಸದನವನ್ನು ಪ್ರವೇಶ ಮಾಡಿದ್ದೇವೆ. ನಾವು ಅಷ್ಟೊಂದು ಪವಿತ್ರವಾದ ಭಾವನೆಯನ್ನು ಇಟ್ಟುಕೊಂಡು ಆ ವಿಚಾರವನ್ನು ಇಟ್ಟುಕೊಂಡು ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು, ಕಾಳಜಿ ಇಟ್ಟುಕೊಂಡು ನಮ್ಮಿಂದ ಸಮಾಜಕ್ಕೆ ಏನಾದರೂ ಮಾಡುವುದಕ್ಕೆ ಸಾಧ್ಯವಾದರೆ ಮಾಡೋಣ ಎಂಬ ಭಾವನೆ ಇಟ್ಟುಕೊಂಡು ಈ ಸದನವನ್ನು ನಾವು ಪ್ರವೇಶ ಮಾಡಿದ್ದೇವೆ. ಈ ಸಂದರ್ಭದಲ್ಲಿ ನಾನು ಅನೇಕ ಇಲಾಖೆಗಳ ವಿಚಾರವಾಗಿ ಮಾತನಾಡಬೇಕಾದ ಸಂದರ್ಭ ಇದೆ, ಆದರೂ ಕೂಡ ಅರಣ್ಯ ಇಲಾಖೆ ಬಗ್ಗೆ ಬಹಳ ಮುಖ್ಯವಾಗಿ ನಾನು ಪ್ರಸ್ತಾಪ ಮಾಡಬೇಕೆಂದು ವಿಚಾರ ಇಟ್ಟುಕೊಂಡಿದ್ದೇನೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಬೆಳಿಗ್ಗೆಯಿಂದ ಇದ್ದರು, ಈ ಸಮಯದಲ್ಲಿ ಎಲ್ಲೋ ಹೋಗಿದ್ದಾರೆ. ಆದರೂ ಕೂಡ ನಾನು ನನ್ನ ಭಾವನೆಯನ್ನು ವ್ಯಕ್ತ ಮಾಡುವಂಥದ್ದು ಅನಿವಾರ್ಯ ಎನ್ನುವಂಥಾದ್ದನ್ನು ತಿಳಿದು ನಾನು ನನ್ನ ಮಾತುಗಳನ್ನು ಮುಂದುವರೆಸುತ್ತೇನೆ. ಅರಣ್ಯ ಇಲಾಖೆ ವಿಚಾರದಲ್ಲಿ ಕಳೆದ ಸಾರಿ ನಾನು ವಿಷಯ ಸಮಿತಿಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಸಾಮಾನ್ಯವಾಗಿ ಸೂರ್ಯಾಸ್ತಮಾನವಾದ ಮೇಲೆ ಕಾಡು ಸೇರಿಕೊಳ್ಳುತ್ತಾರೆ. ವನ್ಯ ಪ್ರಾಣಿಗಳು ಸುರಷಿತವಾಗಿ ಇದೆಯೋ ಇಲ್ಲವೋ ಎಂದು ಪರೀಕ್ಷಿಸುವ ಸಲುವಾಗಿ

ಶ್ರೀ ಸಿ.ಹೆಚ್. ವಿಜಯ್‌ಶಂಕರ್ : ನಮಗೆ ಅರಣ್ಯ ಇಲಾಖೆ ಶೋಧನ ಏನಿದೆ, ಅದು ನಿಜವಾಗಿಯೂ ಅರಣ್ಯ ರೋಧನ ಆಗಿದೆ. ಆ ನೋವನ್ನು ಹೇಳುವವರು ಕೇಳುವವರು ಯಾರೂ ಇಲ್ಲ ಎನ್ನುವಂತಹ ಭಾವನೆ ಕೂಡ ನಮಗೆ ಬಂದಿದೆ. ಏಕೆ ಈ ಮಾತನ್ನು ಇಷ್ಟೊಂದು ನೋವಿನಿಂದ ಹೇಳುತ್ತೇನೆಂದರೆ, ಕಳೆದ ಒಂದು ವರ್ಷದ ಪೂರ್ಣ ಅವಧಿ ನಾವು ಅರಣ್ಯ ಇಲಾಖೆ ವಿಷಯ ಸಮಿತಿಯಲ್ಲಿ ಕೆಲಸ ಮಾಡಿದ್ದೇವೆ. ಆ ಭಾಗದಿಂದ ಬಂದಂತಹ ಶಾಸಕರಾಗಿ ಅನೇಕ ಸಲಹೆಗಳನ್ನು, ಮಾರ್ಗ ದರ್ಶನಗಳನ್ನು ಇಲಾಖೆಗೆ ನಾವು ನೀಡಿದ್ದರೂ ಕೂಡ, ಯಾವುದೇ ವಿಚಾರದಲ್ಲಿಯೂ ಕೂಡ ಸರ್ಕಾರ ಸೂಕ್ತ ಗಮನ ನೀಡಿ ಬದಲಾವಣೆ ಮಾಡಿದ್ದನ್ನು ನಾವು ನೋಡಿಲ್ಲ. ಅದು ಏಕೆ ಎನ್ನುವಂಥದ್ದು ನಮಗೆ ಅರ್ಥವಾಗುವುದಿಲ್ಲ. ಒಂದು

ಮಾಮೂಲಿಯ ವಾತಾವರಣ ಇರಬೇಕಾದರೆ, ಜೀವ ಜಗತ್ತು ನೆಮ್ಮದಿಯಾಗಿ ಬದುಕಬೇಕಾದರೆ, ತಜ್ಞರ ಅಭಿಪ್ರಾಯದ ಪ್ರಕಾರ 33 ಭಾಗ ಭೂ ಪ್ರದೇಶದಲ್ಲಿ ಅರಣ್ಯ ಇರಬೇಕಾಗುತ್ತದೆ. ಇವತ್ತು ಅಧಿಕಾರಿಗಳು ಕೊಟ್ಟ ವರದಿಯ ಪ್ರಕಾರ ಅದು 20 ಭಾಗಕ್ಕೆ ಬಂದು ನಿಂತಿದೆ. ನಿಜಕ್ಕೂ ಕೂಡ ಇದನ್ನು ಅರಣ್ಯ ಎಂದು ಪರಿಗಣಿಸುತ್ತೀರಾ? ಅದರಲ್ಲಿ ಕೇವಲ 11 ಭಾಗ ಮಾತ್ರ ಅರಣ್ಯ ಪ್ರದೇಶ ಇದೆ. ಉಳಿದದ್ದು ಅರಣ್ಯ ಎಂದು ಕೇವಲ ಶಾಸ್ತ್ರಕ್ಕೆ ಇದ್ದರೂ ಕೂಡ ಅದನ್ನು ಅರಣ್ಯ ಎಂದು ಪರಿಗಣಿಸುವುದಿಲ್ಲ. ಈ ರೀತಿಯ ಅರಣ್ಯ ವ್ಯವಸ್ಥೆಯಲ್ಲಿ ಕೆಲವು ಅರಣ್ಯ ರೋಧನ ವಿಚಾರಗಳು ಇವೆ ಎನ್ನುವಂತಹ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತೇನೆ.

ಅರಣ್ಯ ರೋಧನ ಏನು ಬಹುಶಃ ಈ ಸದನ ಪ್ರಾರಂಭ ಆದ ಮೇಲೆ ನಾಗರೀಕ ಜಗತ್ತು, ನಾಗರೀಕ ಪ್ರಪಂಚ ಬದುಕುವುದಕ್ಕೋಸ್ಕರ ಬೇಕಾದಂತಹ ಅಗತ್ಯ ಸೌಲಭ್ಯಗಳು ಏನಿವೆ, ಕುಡಿಯುವ ನೀರಿನ ವಿಚಾರ ಆಗಬಹುದು, ರಸ್ತೆ ವಿಚಾರ ಆಗಬಹುದು, ಶಾಲೆಗಳ ವಿಚಾರ ಆಗಬಹುದು, ದೀಪದ ವಿಚಾರ ಆಗಬಹುದು ಮತ್ತು ವೈದ್ಯರ ವೈದ್ಯಕೀಯ ಸೌಲಭ್ಯದ ವಿಚಾರ ಇರಬಹುದು., ಅನೇಕ ಸೌಲಭ್ಯಗಳು ವಿಚಾರವಾಗಿ ಮುಕ್ತವಾಗಿ ನಾವು ಇಲ್ಲಿ ಮಾತನಾಡುವಂಥದ್ದು ಆ ಸೌಲಭ್ಯಗಳು ಸಿಗಬೇಕೆಂದು. ಎಲ್ಲೋ ಅಗತ್ಯತೆಯ ಒಂದು ಸ್ವಲ್ಪ ಕೊರತೆ ಇದ್ದಂತಹ ಸಂದರ್ಭದಲ್ಲಿ ಕೂಡ ಈ ಸೌಲಭ್ಯಗಳು ನಾಗರೀಕರಿಗೆ ಬದುಕಿಗೆ ಸಿಗಬೇಕೆಂದು ಎಲ್ಲೀ ರೀತಿಯ ಒತ್ತಾಯವನ್ನು ಸರ್ಕಾರದ ಮೇಲೆ ತಂದಿದ್ದನ್ನು ನಾನು ಕಂಡಿದ್ದನೆ. ಆದರೆ ನಮ್ಮ ಈ ನಾಗರಹೊಳೆ ಅರಣ್ಯ ಏನು ಇದೆ, ಆ ಅರಣ್ಯದಲ್ಲಿ ಬಹುಶಃ ಕಾಡು ಪ್ರಾಣಿಗಳಿಗಿಂತ ಕಡೆಯಾಗಿ, ಆದಿ ಮಾನವನಿಗಿಂತ ಕಡೆಯಾಗಿ, ಈ ನಾಗರೀಕ ಪ್ರಪಂಚದಲ್ಲಿ ಕೂಡ ನಮಗೆ ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಆದರೂ ಕೂಡ ನಾಗರಹೊಳೆ ಅರಣ್ಯದಲ್ಲಿ ಜೇನುಕುರುಬ ಜನಾಂಗಕ್ಕೆ ಸೇರಿದ ಜನ ಗೆಡ್ಡೆ ಗೆಣಸುಗಳನ್ನು ತಿಂದು ಕಾಡು ಪ್ರಾಣಿಗಳಿಗಿಂತ ಕಡೆಯಾಗಿ ಬಟ್ಟೆ ಇಲ್ಲದೆ, ಯಾವುದೇ ನಾಗರೀಕ ಸೌಲಭ್ಯಗಳು ಇಲ್ಲದೆ, ನಾಗರೀಕ ಪ್ರಪಂಚದ ಸಂಪರ್ಕ ಇಲ್ಲದೆ, ಕಾಡು ಪ್ರಾಣಿಗಳಿಗಿಂತ ಕಡೆಯಾಗಿ ಬದುಕುತ್ತಿರುವ ಜನಗಳನ್ನು ನಾವು ಕಣ್ಣಿನಿಂದ ಕಾಣುತ್ತಿದ್ದೇವೆ. ನಾನು ವಿಷಯ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಮತ್ತು ಎಲ್ಲಾ ಅಧಿಕಾರಿಗಳಿಗೆ ಕರೆದುಕೊಂಡು ಹೋಗಿ ತೋರಿಸಿದೆ.

ಅವರ ಅಹವಾಲುಗಳನ್ನು ಕೇಳಿಸಿದೆ. ಅವರ ಭಾವನೆಗಳನ್ನು ವ್ಯಕ್ತಮಾಡಿಸಿದೆ. ನಮಗೆ ಈ ರೀತಿ ನಾಗರೀಕ ಬದುಕು ಬೇಕು. ನಮಗೆ ಈ ನಾಗರೀಕ ಬದುಕು ಕೊಡಿ, ನಮಗೂ ಕೂಡ ಬದುಕುವಂತಹ ಸೌಲಭ್ಯವನ್ನು ಮಾಡಿಕೊಡಿ, ಕಾಡಿನಿಂದ ಆಚೆ ಬರುವಂತಹ ಅವಕಾಶವನ್ನು ಮಾಡಿಕೊಡಿ ಎನ್ನುವಂತಹ ಅವರ ಕಳಕಳಿಯ ಭಾವನೆಯನ್ನು, ಕಣ್ಣೀರಿನ ಕಥೆಯನ್ನು ನಾನು ಎಲ್ಲಾ ವಿಷಯ ಸಮಿತಿಯ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ಕರೆದು ಕೊಂಡು ಹೋಗಿ ತೋರಿಸಿದೆ. ಆ ವಿಚಾರದಲ್ಲಿ ಕಿಂಚಿತ್ತು• ಕಾಳಜಿ ಇತ್ತು, ಕಳಕಳಿ ಇತ್ತು. ಒಂದೇ ಒಂದು ಕಾರ್ಯಕ್ರಮ ರೂಪಿಸಿ ಅವರ ಅನುಷ್ಠಾನಕ್ಕೆ ತಂದು ಅವರಿಗೂ ಕೂಡ ನಾಗರೀಕ ಪ್ರಪಂಚದಲ್ಲಿ ಬದುಕುವಂತೆ ವ್ಯವಸ್ಥೆಯನ್ನು ನಮ್ಮ ಹಾಗೆ ಅವರಿಗೂ ಕೂಡ ಜೀವನ ನಡೆಸುವಂತಹ ವ್ಯವಸ್ಥೆಯನ್ನು ರೂಪಿಸುವಂತಹ ಒಂದೇ ಒಂದು ಕೆಲಸವನ್ನು ಅರಣ್ಯ ಇಲಾಖೆ ಮಾಡಿರುವಂಥದ್ದು ನಾನು ಕಣ್ಣಿನಿಂದ ಕಾಣುತ್ತಿಲ್ಲ. ಏಕೆ ಈ ವ್ಯವಸ್ಥೆ? ಬಲ ಇದ್ದಲ್ಲಿ ಬದುಕಿದೆ ಎನ್ನುವಂತಹ ವ್ಯವಸ್ಥೆಯೇ? ಯಾರಿಗೆ ಬಲ ಇದೆ. ಅವರಿಗೆ ಮಾತ್ರ ಬದುಕೇ?

ಹಾಗಾದರೆ, ಈ ರೀತಿಯ ವ್ಯವಸ್ಥೆಯಲ್ಲಿ ಬದುಕುತ್ತಿರುವ ಜನ, ಜನ ಎಂದು ಗುರುತಿಸುವುದಕ್ಕೆ ನೀವು ತಯಾರಿಲ್ಲ. ಅವರಿಗೆ ಮಾನವೀಯ ಮೌಲ್ಯಗಳಿಂದ ದೂರ ಇಡುತ್ತಿದ್ದೀರಿ,

ಮನವೀಯ ವಿಚಾರಗಳಿಂದ ದೂರ ಇಡುತ್ತಿದ್ದೀರಿ, ಮಾನವೀಯ ಬದುಕಿನಿಂದ ದೂರ ಇಡುತ್ತಿದ್ದೀರಿ, ನೀವು ರೂಪಿಸಿದ ಕಾರ್ಯಕ್ರಮಗಳು ಏನೂ ಅವರಿಗೆ ಬದುಕನ್ನು ಕೊಡಿಸುವುದಕ್ಕೋಸ್ಕರ ಸರ್ಕಾರದಲ್ಲಿ ಯಾವ ರೀತಿ ವಿಚಾರ ಇದೆ, ಅರ್ಧ ಶತಮಾನ ಆದರೂ, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ನಡವಳಿಕೆಯಲ್ಲಿ ಬಂದು ಅರ್ಧ ಶತಮಾನ ಆದರೂ ಕೂಡ ಇವತ್ತಿಗೂ ಕೂಡ ಅವರನ್ನು ಮೂಲ ಬದುಕಿನತ್ತ ತರುವ ವಿಚಾರದಲ್ಲಿ ಅವರಿಗೂ ಕೂಡ ಶೈಕ್ಷಣಿಕ ಜೀವನ, ನಾಗರೀಕ ಜೀವನ ಕೊಡುವಂತಹ ವಿಚಾರದಲ್ಲಿ ಸರ್ಕಾರದ ವಿಚಾರಗಳು ಏನು, ಇವೆ. ಅವುಗಳನ್ನು ಜಾರಿಗೆ ತರದೇ ಅವರುಗಳು ಕಗ್ಗತ್ತಲಿನಲ್ಲಿ, ಬದುಕಿನಲ್ಲಿ ಇರಬೇಕು, ಎನ್ನುವಂತಹ ವಿಚಾರ ಸರ್ಕಾರದಲ್ಲಿ ಇದೆಯೇ ಎನ್ನುವಂಥದ್ದನ್ನು ಸ್ಪಷ್ಟ ಮಾಡಬೇಕು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ : ಅವರ ಪುರೋಭಿವೃದ್ಧಿಗಾಗಿ ತೆಗೆದಿಟ್ಟಂಥಕತ ಹಣದಲ್ಲಿ ಹನ್ನೊಂದು ಕೋಟಿ ರೂಪಾಯಿ ಲ್ಯಾಪ್ಸ್ ಮಾಡಿದ್ದಾರೆ. ಅವರ ಪರಿಸ್ಥಿತಿ ಹೀಗಿರುವಾಗ ಹನ್ನೊಂದು ಕೋಟಿ ಲ್ಯಾಪ್ಸ್ ಮಾಡಬೇಕಾದರೆ ಆಡ್ಮಿನಿಸ್ಟ್ರೇಷನ್ ಇದೆಯೇ ಎಂದು ತಾವು ಅರ್ಥ ಮಾಡಿಕೊಳ್ಳಬೇಕು. ಎನ್ನುವಂಥದ್ದನ್ನು ತಾವು ಗಮನಿಸಬೇಕು. ಪುನಃ ಆ ಹನ್ನೊಂದು ಕೋಟಿ ರೂಪಾಯಿ ಈ ವರ್ಷಕ್ಕೆ ಬರುತ್ತದೆಯೇ? ಲ್ಯಾಪ್ಸ್ ಅಲ್ಲದೇ ಇನ್ನೇನಿದೆ ಅಲ್ಲಿ?

ಶ್ರೀ ಸಿ.ಹೆಚ್. ವಿಜಯಶಂಕರ್ : ಆ ಕಾಡಿನಲ್ಲಿ ಇರುವಂಥ ಜನಗಳಿಗೆ ಮನೆಗಳನ್ನು ಕಟ್ಟಿಸುವಂಥ ಅವಕಾಶ ಇಲ್ಲ, ಅಭಯಾರಣ್ಯದಲ್ಲಿ ಅವರು ಇರುವುದರಿಂದ ಅವರಿಗೆ ಮನೆಗಳನ್ನು ಕಟ್ಟಿಸುವುದಕ್ಕೆ ಅವಕಾಶ ಇಲ್ಲ. ನಾಗರೀಕ ಸೌಲಭ್ಯಗಳನ್ನು ಕೊಡಲಿಕ್ಕೆ ಅವಕಾಶ ಇಲ್ಲ. ನಾಗರೀಕ ಬದುಕನ್ನು ಒದಗಿಸಲಿಕ್ಕೆ ಸರ್ಕಾರಕ್ಕೆ ಅವಕಾಶ ಇಲ್ಲ. ಎಲ್ಲಿಯವರೆಗೆ ರಾಷ್ಟ್ರೀಯ ಅಭಯಾರಣ್ಯದಿಂದ ಅವರಿಗೆ ಆಚೆಗೆ ತರುವಂಥ ಕೆಲಸ ನೀವು ಮಾಡುವುದಿಲ್ಲವೋ ಅಲ್ಲಿಯವರೆಗೆ ಅವರಿಗೆ ಸವಲತ್ತುಗಳನ್ನು, ಸೌಲಭ್ಯಗಳನ್ನು ಸರ್ಕಾರ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. .ಈ ಒಂದು ಸವಲತ್ತನ್ನು, ಸೌಲಭ್ಯವನ್ನು ಅವರಿಗೆ ಕೊಡಬೇಕು, ಅದಕ್ಕೆ ಒಂದು ವಿಶೇಷವಾದಂಥ ಯೋಜನೆಯನ್ನು ತಯಾರು ಮಾಡತಕ್ಕಂಥ ವಿಷಯ ಸಮಿತಿಯ ವರದಿಯ ತಮ್ಮ ಮುಂದೆ ಇದೆ. ಏಕೆ ನೀವು ಕ್ರಮವನ್ನು ತೆಗೆದುಕೊಳ್ಳಲಿಲ್ಲ? ಅದರ ಬಗ್ಗೆ ತೆಗೆದುಕೊಂಡಂಥ ಕ್ರಮಗಳು ಏನು ಎನ್ನುವುದನ್ನು ಅರಣ್ಯ ಇಲಾಖೆಯ ಬೇಡಿಕೆಗಳ ಮೇಲೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಸರ್ಕಾರ ಸ್ಪಷ್ಟವಾದಂಥ ಉತ್ತರವನ್ನು ಕೊಡಬೇಕು ಎನ್ನತಕ್ಕಂಥ ಭಾವನೆಯನ್ನು ಈ ಸಮಯದಲ್ಲಿ ನಾನು ವ್ಯಕ್ತ ಮಾಡುತ್ತೇನೆ.

ಎರಡನೆಯದು ಅವರಿಗೆ ಬೇಕಾದಂಥ ಪುನರ್‌ವಸತಿ ಕಾರ್ಯಕ್ರಮಗಳು ಏನು ಇವೆ, ಆ ಪುನರ್‌ವಸತಿ ಕಾರ್ಯಕ್ರಮಗಳನ್ನು ತಕ್ಷಣ ಜಾರಿಗೆ ತರುವಂಥ ವಿಚಾರದಲ್ಲಿ, ಆ ದಿಕ್ಕಿನಲ್ಲಿ ತಾವೆಲ್ಲರೂ ಕೂಡ ಚಿಂತನೆಯನ್ನು ಮಾಡಬೇಕು. ಅವಗ ಒಂದು ಪುನರ್‌ವಸತಿ ಕಾರ್ಯಕ್ರಮದಲ್ಲಿ ಯಾರ್‍ಯಾರು ಅಡ್ಡಿ ಬರುತ್ತಾರೆ, ಯಾರು ವಿರೋಧಿಸುತ್ತಾರೆ, ಬಹುಶಃ ಅವರೆಲ್ಲರೂ ಕೂಡ ಆ ಒಂದು ಕಾಡಿನಲ್ಲಿ ಇರುವಂಥ ಜನ ನಾಗರೀಕರಾಗಿ ಬದುಕುವುದಕ್ಕೆ ವಿರೋಧ ಇದ್ದಾರೆ ಎನ್ನುವಂಥ ಮಾತನ್ನು ನಾನು ಸ್ಪಷ್ಟಮಾಡುವವನಿದ್ದೇನೆ.

ಈ ಕಾಡಿನಲ್ಲಿರತಕ್ಕಂಥ ಜನಗಳನ್ನು ದುರುಪಯೋಗ ಮಾಡಿಕೊಂಡು ಅವರ ಲಾಭಕ್ಕೋಸ್ಕರ ನಾವು ಇದ್ದೇವೆ ಎನ್ನುವಂಥ ಮಾತನ್ನು ಹೇಳಿಕೊಂಡು ಯಾವುದೇ ಸವಲತ್ತುಗಳನ್ನು ಕೂಡ ಅವರಿಗೆ ಕೊಡದಂಥ ಹೊರ ದೇಶದಿಂದ ಬರುವಂಥ ಕೋಟ್ಯಾಂತರ ರೂಪಾಯಿ ಹಣವನ್ನು ಪಡೆದುಕೊಂಡು ಅಧಿಕಾರಿಗಳಿಗೆ ಖಾಸಗಿ ಸಂಸ್ಥೆಗಳು ಈ ಜನರನ್ನು ಸಂಪೂರ್ಣವಾಗಿ ದುರುಪಯೋಗ ಮಾಡಿದ್ದನ್ನು ನಾನು ಕಣ್ಣಿನಿಂದ ಕಂಡಿದ್ದೇನೆ. ನೀವು ಪುನರ್ ವಸತಿ ಕಾರ್ಯಕ್ರಮ ಹಾಕಿಕೊಳ್ಳಿ. ನಾನು ಸ್ಥಳೀಯ ಶಾಸಕನಾಗಿ ಸರ್ಕಾರಕ್ಕೆ ಬೇಕಾದಂಥ ಎಲ್ಲಾ ಪೂರಕವಾದ ಸಹಾಯವನ್ನು ಕೊಟ್ಟು ಪೂರ್ತಿ ಹೊಣೆಯನ್ನು ಹೊರಲಿಕ್ಕೆ ತಯಾರಿದ್ದೇನೆ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಪುನರ್ ವಸತಿ ಕಾರ್ಯಕ್ರಮವನ್ನು ಆದಷ್ಟು ತೀವ್ರವಾಗಿ ಜಾರಿಗೆ ತರುವಂಥ ಕೆಲಸವನ್ನು ಈ ಸರ್ಕಾರ ಮಾಡಬೇಕೆಂದು ಕಳಕಳಿಯ ಮನವಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಒಂದು ಕಾಡಿನಲ್ಲಿರುವಂಥ ಜನಗಳ ವಿಚಾರ ಇದು. ಕಾಡಿನಿಂದ ಆಚೆಗೆ ಇರುವಂಥ ಜನಗಳ ವಿಚಾರವೇನು? ನನ್ನ ಇಡೀ ಕ್ಷೇತ್ರ ಕಾಡಿನಿಂದ ಸುತ್ತಲೂ ಆವರಿಸಿದಂಥ ಕ್ಷೇತ್ರ.

ಇವೊತ್ತು ನನ್ನ ಕ್ಷೇತ್ರ ಬಹುಭಾಗ ಕಾಡಿನಿಂದ ಆವೃತ್ತವಾಗಿದೆ. ನಾನು ಅನೇಕ ಸಲ ಈ ಸದನದಲ್ಲಿ ಮನವಿಯನ್ನು ಮಾಡಿಕೊಂಡಿದ್ದೇನೆ. ಈ ಕಾಡು ಪ್ರಾಣಿಗಳ ಕಾಟವನ್ನು ತಪ್ಪಿಸಲಿಕ್ಕೆ ನಮ್ಮ ತಾಲ್ಲೂಕಿನ ರೈತಾಪಿ ವರ್ಗ ನಮ್ಮ ತಾಲ್ಲೂಕಿನ ಜನ, ನೆಮ್ಮದಿಯಿಂದ ಜೀವನ ಮಾಡುವಂಥ ಒಂದು ವಾತಾವರಣ ಸೃಷ್ಟಿಮಾಡಿಕೊಡಿ, ಅದಕ್ಕೆ ಬೇಕಾದಂಥ ಕಂದಕಗಳನ್ನು ತೋಡಿಸುವಂಥ ಕೆಲಸ ಮಾಡಿ, ಅದಕ್ಕೆ ಬೇಕಾದಂಥ ಸೋಲಾರ್ ಫಿಟ್ಟಿಂಗ್ಸ್ ಅಳವಡಿಸಿ ಈ ಕಾಡು ಪ್ರಾಣಿಗಳನ್ನು ತಡೆಗಟ್ಟುವುದಕ್ಕೆ ಎಲ್ಲಾ ರೀತಿಯ ಒಂದು ಇಲಾಖಾ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಒಂದು ವ್ಯವಸ್ಥೆಯನ್ನು ಮಾಡಿ ಮುಕ್ತ ವಾತಾವರಣದಲ್ಲಿ ಅವರು ಬದುಕುವಂಥ ವ್ಯವಸ್ಥೆಯನ್ನು ನಿರ್ಮಾಣ ಮಾಡಿ, ನಮ್ಮ ತಾಲ್ಲೂಕಿಗೆ ಅನುಕೂಲ ಮಾಡಲು ಸರ್ಕಾರ ವಿಶೇಷವಾದಂಥ ಗಮನಹರಿಸಬೇಕೆಂದು ನಾನು ಅನೇಕ ಸಾರಿ ಮನವಿಯನ್ನು ಮಾಡಿದ್ದೇನೆ. ಆದರೆ ಈ ಕಾಡು ಪ್ರಾಣಿಗಳ ಕಾಟವನ್ನು ತಡೆಗಟ್ಟಲು ಸರ್ಕಾರ ಯಾವುದೇ ರೀತಿಯ ವ್ಯವಸ್ಥಿತವಾದ ಕಾರ್ಯಕ್ರಮವನ್ನು ಇದುವರೆಗೆ ಹಾಕಿಕೊಂಡಿಲ್ಲ. ಈ ಕಾಟವನ್ನು ತಪ್ಪಿಸುವಂಥ ಕೆಲಸವನ್ನು ಮಾಡಲಿಲ್ಲ, ಬೇಡ, ನಮ್ಮ ಭಾಗದ ಜನಗಳಿಗೆ ಏನು ಈ ಕಾಡು ಪ್ರಾಣಿಗಳ ಕಾಟದಿಂದ ಈ ಹಾವಳಿಯಿಂದ ಏನು ನಾಶವಾಗುತ್ತಿದೆ, ಏನು ತೊಂದರೆಯಾಗುತ್ತಿದೆ, ಅವನ ಬದುಕಿಗೆ ಏನು ಆತಂಕ ಆಗುತ್ತಿದೆ ಆ ಆತಂಕವನ್ನು ದೂರ ಮಾಡಲಿಕ್ಕೆ ಅವನಿಗೆ ಕೊಡುವಂಥ ಪರಿಹಾರ ಏನು ಇದೆ? ಶ್ರೀ ವಿ.ಟಿ. ಈಶ್ವರ್‌ರವರ ಕಾಲದಲ್ಲಿ ಒಂದು ಎಕರೆ ಬೆಳೆ ವೇಸ್ಟ್ ಆದರೆ ಕೊಡುವಂಥ ಪರಿಹಾರ 250 ರೂಪಾಯಿ ಇವೊತ್ತಿಗೂ ಕೂಡ ಇದೆ. ಆ ವ್ಯವಸ್ಥೆ ಅರಣ್ಯ ಇಲಾಖೆಯಲ್ಲಿ ಮುಂದುವರೆದುಕೊಂಡು ಬಂದಿದೆ.

ಈ 250 ರೂಪಾಯಿ ಕೂಡ ಒಂದು ವರ್ಷ, ಎರಡು ವರ್ಷ, ಮೂರು ವರ್ಷ ನಾಲ್ಕು ವರ್ಷಗಳಾದರೂ ಕೂಡ ಕೊಡಲಾರದ ಉದಾಹರಣೆಯನ್ನು ನಾನು ಈ ಸಮಯದಲ್ಲಿ ಕೊಡುತ್ತೇನೆ. ರೈತನಿಗೆ ಕೊಡುವಂಥ 250 ರೂಪಾಯಿ ಕೂಡ ಸರ್ಕಾರದ ಕಛೇರಿಗೆ ಅಲೆದು ಅಲೆದು ಸುಸ್ತಾಗಿ ಕೊನೆಗೆ ರೈತ ಅವರು ಕೊಟ್ಟಾಗ ಕೊಡಲಿ ಎನ್ನುವ ಹತಾಶ ಭಾವನೆಯನ್ನು ತಾಳಿ ರೈತ ಮನೆಗೆ ವಾಪಸ್ಸು ಹೋಗುವಂಥದ್ದು ನನ್ನ ತಾಲ್ಲೂಕಿನಲ್ಲಿ ನಾನು ಕಂಡಿದ್ದೇನೆ. ಒಂದು ಪರಿಹಾರ ಕೂಡ ವ್ಯವಸ್ಥಿತವಾಗಿ ಸರಿಯಾದ ಸಮಯದಲ್ಲಿ ತಲುಪುವುದಿಲ್ಲ. ಈ ಕಾಡು ಪ್ರಾಣಿಗಳನ್ನು

ತಡೆಗಟ್ಟಲು ಸರ್ಕಾರದಲ್ಲಿ ವ್ಯವಸ್ಥಿತವಾದ ಯೋಜನೆಗಳಿಲ್ಲ. ಹಾಗಾದರೆ ಮುಕ್ತವಾದ ಜೀವನವನ್ನು ನಡೆಸುವಂಥ ವಾತಾವರಣವನ್ನು ನಮ್ಮ ತಾಲ್ಲೂಕಿನ ಜನತೆಗೆ ಯಾವತ್ತು ನೀವು ಒದಗಿಸುತ್ತೀರಿ ಎನ್ನುವ ಬಗ್ಗೆ ಒಂದು ಸ್ಪಷ್ಟವಾದ ವಿಚಾರವನ್ನು ಇಲ್ಲಿ ಸರ್ಕಾರದವರು ವ್ಯಕ್ತ ಮಾಡಬೇಕು ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಮೂರನೆಯದಾಗಿ, ಸನ್ಮಾನ್ಯ ಅಧ್ಯಕ್ಷರೇ, ಟೀಕ್‌ಮತ್ತು ಟಿಂಬರ್ ಉತ್ಪನ್ನಗಳಿಗೆ ನಮ್ಮ ಹುಣಸೂರು ತಾಲ್ಲೂಕು ಹೆಸರುವಾಸಿಯಾದ ತಾಲ್ಲೂಕು. ಬಹುಶಃ ಇಡೀ ದೇಶದಲ್ಲೇ ಈ ಒಂದು ವಿಚಾರದಲ್ಲಿ ಇಡೀ ದೇಶದಲ್ಲಿ ತನ್ನದೇ ಆದ ಕೀರ್ತಿಯನ್ನು ಪಡೆದುಕೊಂಡು ಬಂದಿದೆ. ಹೀಗಾಗಿ ಅರಣ್ಯ ಉತ್ಪನ್ನಗಳನ್ನು ಬಹುಶಃ ವ್ಯವಸ್ಥಿತವಾಗಿ ಬೇರೆ ಬೇರೆ ಭಾಗಗಳಿಗೆ ಕೊಯ್ದು ಸರಬರಾಜು ಮಾಡುವಂಥ ಈ ಸಾಮಿಲ್‌ಗಳು ಏನು ಇವೆ, ನಮ್ಮಲ್ಲಿ ತುಂಬಾ ಜಾಸ್ತಿ ಇವೆ. ಇದರ ಮೇಲೆ ಕೂಲೀಕಾರರು ಈ ಮಿಲ್‌ನಲ್ಲಿ ಕೆಲಸ ಮಾಡುವಂಥ ಜನ, ಅನೇಕ ರೀತಿಯಲ್ಲಿ ಇದನ್ನು ಅವಲಂಬಿಸಿರುವ ಜನ ನಮ್ಮ ತಾಲ್ಲೂಕಿನಲ್ಲಿದ್ದಾರೆ. ಆದರೆ ಕಳೆದ ಮೂರು ನಾಲ್ಕು ವರ್ಷಗಳಿಂದ ನಾನು ಪರೀಕ್ಷೆಯನ್ನು ಮಾಡುತ್ತಿದ್ದೇನೆ. ಆ ಅರಣ್ಯ ಉತ್ಪನ್ನಗಳನ್ನು ಎತ್ತುವಂಥ ಕೆಲಸ, ಕಾಡಿನಲ್ಲಿ ಬಿದ್ದು ಹೋದಂಥ ಮರ ನನಗೆ ಗೊತ್ತಿದೆ ಅರಣ್ಯದ ಕಾಡಿನ ವಿಚಾರದಲ್ಲಿ ಆ ಒಂದು ಚೌಕಟ್ಟಿನಲ್ಲಿ ಬಿದ್ದು ಹೋದಂಥ ಈ ಮರಗಳನ್ನು, ಒಣಗಿ ಹೋದಂಥ ಮರಗಳನ್ನು ಮಾತ್ರ ಎತ್ತಲಿಕ್ಕೆ ಅವಕಾಶ ಇದೆ ವಿನಹ, ಬೇರೆ ರೀತಿಯ ಮರಗಳನ್ನು ಎತ್ತಲಿಕ್ಕೆ ಅವಕಾಶ ಇಲ್ಲ ಎಂದು ನನಗೆ ಗೊತ್ತಿದೆ. ಆದರೆ ಒಣಗಿ ಹೋಗುವಂಥ ಮರಗಳನ್ನು ಎತ್ತುವಂಥ ಕೆಲಸ ಇಲಾಖೆಯಲ್ಲಿ ಇದೆ. ಬಿದ್ದು ಹೋಗುವಂತ ಮರಗಳನ್ನು ಎತ್ತಲಿಕ್ಕೆ ಅವಕಾಶ ಇಲಾಖೆಯಲ್ಲಿ ಇದೆ, ಆ ಕೆಲಸವನ್ನೂ ಕೂಡ ಅರಣ್ಯ ಇಲಾಖೆಯವರು ಇದುವರೆಗೆ ವ್ಯವಸ್ಥಿತವಾಗಿ ಮಾಡಲಿಲ್ಲ. ಏಕೆ ಮಾಡಲಿಲ್ಲ? ಬಹುಶಃ ಕೇವಲ ಹುಣಸೂರ್ ಡಿಪೋದಿಂದಲೇ ಸರ್ಕಾರಕ್ಕೆ ಸುಮಾರು ಹತ್ತಾರು ಕೋಟಿ ರೂಪಾಯಿ ಆದಾಯ ಬರುತ್ತಿತ್ತು.

ಇವೊತ್ತು ನೀವು ದಯವಿಟ್ಟು ವರದಿಯನ್ನು ತರಿಸಿ ನೋಡಿ. ಏಕೆಂದರೆ ಈ ಆದಾಯ ಕಡಿಮೆಯಾಗುತ್ತಿದೆ, ಇದಕ್ಕೆ ಕಾರಣವೇನು? ಹಿನ್ನಲೆ ಏನು ಎನ್ನುವಂಥದ್ದು ತರಿಸಿ ನೋಡಬೇಕು. ಇದಕ್ಕೆ ಬಹುಶಃ ಇಲಾಖೆಯವರ ಮಧ್ಯೆ ತಕರಾರು ಏನು ಇದೆ ಅವರವರಲ್ಲೇ ಒಂದು ಭಿನ್ನಾಭಿಪ್ರಾಯ ಇದೆ. ಇದೂ ಒಂದು ಕಾರಣವಾಗಿದೆ. ಇದಲ್ಲದೆ ಬೇರೆ ಅಭಿಪ್ರಾಯವನ್ನು ಕೊಟ್ಟರೆ, ಅದು ಸುಳ್ಳು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ಕಾರಣಗೋಸ್ಕರ ಅದನ್ನು ತಡೆಗಟ್ಟಬೇಕು. ಅರಣ್ಯದಲ್ಲಿ ಏನು ಈ ರೀತಿ ನಾಶವಾಗಿ ಹೋಗುವಂಥ ತನ್ಮೂಲಕ ಅನೇಕ ಜನರಿಗೆ ಉದ್ಯೋಗದ ಭರವಸೆಯನ್ನು ಕೊಡುವಂಥ ಈ ಒಂದು ಡಿಪೋ ಕೆಲಸ ಕಳೆದು ನೂರಾರು ವರ್ಷದಿಂದ ನಡೆದುಕೊಂಡು ಬಂದಿದ್ದು ಕಳೆದ ನಾಲ್ಕೈದು ವರ್ಷದಿಂದ ಇದು ನಿಂತು ಹೋಗುವ ವಾತಾವರಣಕ್ಕೆ ಏನು ಬಂದಿದೆ, ಆ ಒಂದು ವ್ಯವಸ್ಥೆಯನ್ನು ತಡೆಗಟ್ಟಿ ಬಿದ್ದು ಹೋಗುವಂಥ ಮರಗಳನ್ನು ಎತ್ತಿಸುವಂಥ ಕೆಲಸ ಮಾಡಿ, ಜೊತೆಗೆ ಒಣಗಿ ಹೋಗುವಂಥ ಮರಗಳನ್ನು ಎತ್ತಿಸುವಂಥ ಕೆಲಸವನ್ನು ಮಾಡುವುದರ ಮೂಲಕ ಬಹುಶಃ ಇದನ್ನು ನಂಬಿಕೊಂಡು ಜೀವನ ಮಾಡುವಂಥ ವಾತಾವರಣ ಏನು ನಮ್ಮ ತಾಲ್ಲೂಕಿನಲ್ಲಿದೆ ಆ ಜನಗಳಿಗೆ ಮತ್ತೆ ಒಂದು ವಿಶೇಷವಾದಂಥ ಶಕ್ತಿಯನ್ನು ತುಂಬಿ ಕೊಡತಕ್ಕಂಥ ಕೆಲಸ ಮಾಡಬೇಕೆಂದು ನಾನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಜೊತೆಗೆ ಈ ಅರಣ್ಯ ಇಲಾಖೆಗೆ ಏನಾಗಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ನಾವು ಬೆಳೆಸಬೇಕಾದಂಥ ಮರಗಳು ಯಾವುದು ಬಹುಶಃ ನಮ್ಮ ಮೂಲ ಬದುಕಿನೊಂದಿಗೆ, ನಮ್ಮ ಮೂಲ ಸಂಸ್ಕೃತಿಯೊಂದಿಗೆ ನಮ್ಮ ಮೂಲ ವಾತಾವರಣದೊಂದಿಗೆ ಬೆಳೆಯುವಂಥ ಮರಗಳು ಯಾವುದು ಮತ್ತು ಈ ವಾತಾವರಣಕ್ಕೆ ಹೊಂದಿಕೊಳ್ಳುವಂಥ ಮರಗಳು ಯಾವುದು ಎನ್ನುವಂಥ ವಿಚಾರವನ್ನು ನಮ್ಮ ಅರಣ್ಯ ಇಲಾಖೆಗೆ ಮರೆತು ಹೋಗಿದೆಯಲ್ಲಾ. ಇದು ಯಾವ ರೀತಿ ಅರಣ್ಯ ಇಲಾಖೆಯ ವ್ಯವಸ್ಥೆ ಮತ್ತು ಅರಣ್ಯ ಇಲಾಖೆಯ ವ್ಯವಹಾರ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಬಹುಶಃ ಮಾವು, ಬೇವು, ಹೊಂಗೆ, ತುಂಗೆ ಇಂಥ ಎಲ್ಲವೂ ಮರಗಳೆಲ್ಲವೂ ಮರೆತು ಹೋಯಿತು. ಬಹುಶಃ ನಮ್ಮ ಅಧಿಕಾರಿಗಳಿಗೆ ನಮ್ಮ ಮೂಲ ಬದುಕಿನಲ್ಲಿ, ನಮ್ಮ ಮೂಲ ವಾತಾವರಣದಲ್ಲಿ ನಾವು ಏನು ಮರಗಳನ್ನು ಕಾಣುತ್ತಿದ್ದೇವೆ, ಹಾಲ, ಬೇವು, ಮತ್ತೆ, ಹೊಂಗೆ ಎನ್ನುವಂಥದ್ದು ಇಧು ಸಂಪೂರ್ಣ ಮರೆತು ಹೋಗಿದೆ. ಈಗ ಜ್ಞಾಪಕ ಇರುವಂಥದ್ದು ಯಾವುದು ಸ್ವಾಮಿ? ಮಾತು ಎತ್ತಿದರೆ ಬೆಳೆಯುತ್ತಿರುವಂಥದ್ದು ಯಾವುದು ನೀಲಗಿರಿ, ಅಲ್ತಿಸಿಯಾ, ಗುಲ್‌ಮೋರ್ ಇದೇ? ನಮ್ಮ ಬದುಕಿನಲ್ಲಿ ಬೆಳೆಗುವಂಥ ಮರಗಳು ಇದನ್ನು ನೀವು ಕಂಡುಕೊಂಡು ಬಂದಿರುವಂಥದ್ದು ಇದು ನಮ್ಮ ವಾತಾವರಣಕ್ಕೆ ಸರಿ ಹೊಂದುತ್ತದೆಯೇ ಅಥವಾ ನಮ್ಮ ವಾತಾವರಣಕ್ಕೆ ಕಿಂಚಿತ್ತಾದರೂ ಪ್ರಭಾವ ಬೀರುತ್ತದೆಯೇ? ಏಕೆ ಈ ರೀತಿ ಮರಗಳನ್ನು ಎಲ್ಲವನ್ನೂ ಹಚ್ಚಿಕೊಂಡು ಬಂದಿದ್ದೀರಿ? ಇದೇನೂ ಅರ್ಥವಾಗುತ್ತಿಲ್ಲ?

ಈ ರೀತಿಯ ಮರಗಳನ್ನು ಬೆಳೆಸುವುದರಿಂತ ಖಂಡಿತವಾಗಿ ಕಷ್ಟವಾಗುತ್ತದೆ, ನಮ್ಮ ವಾತಾವರಣಕ್ಕೆ ಪ್ರಯೋಜನವಾಗುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಅನೇಕ ಸಾರಿ ವಿಷಯ ಸಮಿತಿಯ ಸದಸ್ಯನಾಗಿ ಹೇಳಿದ್ದೇನೆ. ಯಾವುದೇ ಕಾರಣಕ್ಕೂ ಕೂಡ ನಮ್ಮ ಸರ್ಕಾರಕ್ಕೂ ಕೂಡ ಪ್ರಯೋಜನವಾಗುವುದಿಲ್ಲ, ಇದನ್ನು ನಿಲ್ಲಿಸುವಂಥ ಕೆಲಸವಾಗಬೇಕು. ನಮ್ಮ ಮೂಲ ಬದುಕಿನೊಂದಿಗೆ ಬಂದಂಥ ಮರಗಳು ಯಾವುದು ಇವೆ, ಆ ಮರಗಳನ್ನು ಬೆಳೆಸುವಂಥ ದಿಕ್ಕಿನಲ್ಲಿ ವಿಶೇಷವಾಗಿ, ಪ್ರಾಮಾಣಿಕವಾಗಿ ಕಳಕಳಿಯನ್ನು. ಕಾಳಜಿಯನ್ನು ನೀವು ತೋರಿಸಬೇಕು ಎನ್ನುವಂಥ ಮಾತನ್ನು ಅನೇಕ ಸಾರಿ ನಾನು ವಿಷಯ ಸಮಿತಿಯ ಸದಸ್ಯನಾಗಿ ಕೂಡ ಗಮನಕ್ಕೆ ತಂದಿದ್ದೇನೆ. ಆದರೂ ಕೂಡ ಈ ದಿಕ್ಕಿನಲ್ಲಿ ಈ ಕೆಲಸ ಆಗಲಿಲ್ಲ, ಎನ್ನುವಂಥ ಮಾತನ್ನು ನಾನು ವಿಷಾದದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದರ ಜೊತೆಯಲ್ಲಿ ನಾನು ವಿಷಯ ಸಮಿತಿಯ ಸದಸ್ಯನಾಗಿ ಇನ್ನೊಂದು ವಿಚಾರವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಸರ್ಕಾರಿ ಶಾಲಾ, ಕಾಲೇಜು, ಕಚೇರಿಗಳಲ್ಲಿ ಮರಗಳನ್ನು ನೆಡುವಂಥ ಕೆಲಸ ಆಗಬೇಕು ಹಾಗೂ ಅದನ್ನು ನೆಡುವಂಥ ಜವಾಬ್ದಾರಿಯನ್ನು ಆಯಾ ಇಲಾಖಾ ಅಧಿಕಾರಿಗಳಿಗೆ ವಹಿಸಬೇಕೆಂದು ಹೇಳಿದ್ದೇನೆ. ಆದರೆ ಅದಕ್ಕೆ ಯಾವುದೇ ವ್ಯವಸ್ಥಿತವಾದ ಕೆಲಸವನ್ನು ಇಲಾಖೆ ಹಾಕಿಕೊಳ್ಳಲಿಲ್ಲ, ವ್ಯವಸ್ಥಿತವಾಗಿ ಈ ಯೋಜನೆಯನ್ನು ಜಾರಿಗೆ ತರಲಿಲ್ಲ, ಶಾಲೆಗಳಲ್ಲಿ ಮರಗಳನ್ನು ನೆಡುವಂಥದ್ದು, ಕಾಲೇಜಿನಲ್ಲಿ ಮರಗಳನ್ನು ನೆಡುವಂಥದ್ದು, ಸರ್ಕಾರಿ ಕಚೇರಿಗಳಲ್ಲಿ ಮರಗಳನ್ನು ನೆಡುವಂಥದ್ದು ಈ ರೀತಿ ಯೋಜನೆಗಳನ್ನು ಹಾಕಿಕೊಳ್ಳಬೇಕು. ಅದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಇಲಾಖೆ ತಯಾರು ಮಾಡಬೇಕು. ಆ ರೀತಿಯ ಯೋಜನೆಗಳನ್ನು ಜಾರಿಗೆ ತನ್ನಿ ಎನ್ನುವಂಥ ಮಾತನ್ನು ನಾನು ವಿಷಯ ಸಮಿತಿಯ ಸದಸ್ಯನಾಗಿ ಅಧಿಕಾರಿಗಳಿಗೆ ಬಹಳ ಸ್ಪಷ್ಟವಾಗಿ ಮನವಿಯನ್ನು ಮಾಡಿಕೊಂಡಿದ್ದೇನೆ. ಆದರೆ ಇದಕ್ಕೆ ಬೇಕಾದಂಥ ಯೋಜನೆ ಇವೊತ್ತಿನವರೆಗೆ ತಯಾರು ಆಗಲಿಲ್ಲ, ಒಂದು

ಶಾಲೆಗೆ ಮರವನ್ನು ನೆಡಿ, ಅದಕ್ಕೆ ಬೇಲಿ ಹಾಕಿ ಎಂದು ಅಧಿಕಾರಿಗಳಿಗೆ ನಾವು ಹತ್ತುಸಾರಿ ಕೇಳಬೇಕು. ಆ ರೀತಿಯ ವಾತಾವರಣ, ವ್ಯವಸ್ಥೆಯನ್ನು ನಾವು ನೋಡುತ್ತಿದ್ದೇವೆ. ಆದುದರಿಂದ ಈ ಒಂದು ಸಮಸ್ಯೆಗಳಿಗೆ ಅರಣ್ಯ ಇಲಾಖೆಯ ಬೇಡಿಕೆಗಳಿಗೆ ಉತ್ತರವನ್ನು ಕೊಡುವಂಥ ಸಮಯದಲ್ಲಿ ಸರ್ಕಾರ ಯಾವ ರೀತಿ ವ್ಯವಸ್ಥೆಯನ್ನು ಮಾಡಿಕೊಂಡಿದೆ ಎನ್ನುವಂಥದ್ದು ದಯವಿಟ್ಟು ತಿಳಿಸಬೇಕು ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಬಹಳ ಬೇಜಾರಿನ ಇನ್ನೊಂದು ವಿಚಾರ ಏನೆಂದರೆ, ನಾಗರಹೊಳೆ ಅಭಯಾರಣ್ಯದೊಳಗೆ ರಾತ್ರಿ 6ಗಂಟೆ ಮೇಲೆ ಹೋಗುವುದಕ್ಕೆ ಇಲಾಖೆಯ ಅನುಮತಿ ಇಲ್ಲ. ಯಾವುದೇ ಕಾರಣಕ್ಕೂ ಅನುಮತಿ ಸಿಕ್ಕುವುದಿಲ್ಲ. ಅಂಥ ಮೀಸಲು ಅರಣ್ಯ ಪ್ರದೇಶದಲ್ಲಿ, ಸರ್ಕಾರದ ಯಾವ ನೀತಿಯೋ ಯೋಜನೆಯೋ ನನಗೆ ಅರ್ಥವಾಗುವುದಿಲ್ಲ ಸರ್ಕಾರದವರು ಅಲ್ಲಿ ಏನು ಮಾಡಿದ್ದಾರೆಂದರೆ.

ಕಾಡಿನಲ್ಲಿ ಮಜಾ ಮಾಡಬೇಕೆನ್ನುವ ಜನಗಳಿಗೋಸ್ಕರ ನಾಗರಹೊಳೆಯಲ್ಲಿ 'ತಾಜ್' ಹೋಟೇಲ್‌ನ್ನು ಪ್ರಾರಂಭ ಮಾಡುವುದಕ್ಕೆ ನೀವು ಅವಕಾಶ ಮಾಡಿ ಕೊಟ್ಟಿದ್ದೀರಲ್ಲಾ ಇದರ ಉದ್ದೇಶ, ಹಿನ್ನೆಲೆ ಏನಿದೆಯೋ ನನಗಂತೂ ಅರ್ಥವಾಗುತ್ತಿಲ್ಲ. ಇದೊಂದು ರಾಷ್ಟ್ರೀಯ ಅಭಯಾರಣ್ಯ. ಈ ಹೋಟೆಲನ್ನು ಪ್ರಾರಂಭ ಮಾಡುವ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ವಿಷಯ ಸಮಿತಿಯ ಸದಸ್ಯನಾಗಿ ಸಮಿತಿಯಲ್ಲಿ ವಿರೋಧವನ್ನು ಮಾಡಿದ್ದೇನೆ. ಒಂದು ರಾಷ್ಟ್ರೀಯ ಅಭಯಾರಣ್ಯದಲ್ಲಿ 'ತಾಜ್' ಹೋಟೆಲ್‌ನ್ನು ನಡೆಸಲಿಕ್ಕೆ ಆ ಮೂಲಕ ಕುಡಿಯಲಿಕ್ಕೆ, ತಿನ್ನಲಿಕ್ಕೆ ಮತ್ತು ಬೇಕಾದ ವ್ಯವಹಾರಗಳನ್ನು ಮಾಡಲಿಕ್ಕೆ ಈ ಒಂದು ಕಾಡಿನಲ್ಲಿ ರಾತ್ರೋರಾತ್ರಿ ಬೇಕಾದಂಥ ಸಮಯಗಳಲ್ಲಿ ಪ್ರವೇಶ ಮಾಡುವುದಕ್ಕೆ ಅನುಕೂಲವಾಗುವಂತೆ ಒಬ್ಬ ಖಾಸಗಿ ವ್ಯಕ್ತಿಗೆ ಹೋಟೆಲ್‌ನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡುವಂಥ ವಿಚಾರವನ್ನು ವಿಷಯ ಸಮಿತಿಯ ಸದಸ್ಯನಾಗಿ ನಾನು ಬಹಳ ಸ್ಪಷ್ಟವಾಗಿ ವಿರೋಧವನ್ನು ಮಾಡಿದ್ದೇನೆ. ಈ ರೀತಿಯ ಯೋಚನೆ ಸರ್ಕಾರದಲ್ಲಿ ಬರಬಾರದು. ಏಕೆಂದರೆ ಇದು ಅರಣ್ಯ ನೀತಿಗೆ ವಿರೋಧವಾದಂಥ ವಿಚಾರವಾದ್ದರಿಂದ ಇದನ್ನು ಬಹಳ ಸ್ಪಷ್ಟವಾಗಿ ವಿರೋಧಿಸುತ್ತೇನೆಂದು ನಾನು ಈ ಸಮಯದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಸ್ವತಃ ಅರಣ್ಯ ಸಮಿತಿಯ ಸದಸ್ಯನಾಗಿ ಎಲ್ಲಾ ಸದಸ್ಯರನ್ನೂ ನಾನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಈ ತಾಜ್ ಹೋಟೆಲ್‌ಗೆ ಕೊಟ್ಟಂಥ ಅನುಮತಿ ಏನಿದೆ ಅದನ್ನು ತಕ್ಷಣವೇ ರದ್ದು ಮಾಡಬೇಕು. ರಾಷ್ಟ್ರೀಯ ಅಭಯಾರಣ್ಯಗಳು ಯಾವುದೇ ಇರಲಿ ಅಲ್ಲಿ ಖಾಸಗಿ ವ್ಯಕ್ತಿಗಳು ಹೋಟೆಲನ್ನು ನಡೆಸುವಂಥದ್ದು ಮತ್ತು ಆ ಮೂಲಕ ದಂಧೆ ಮಾಡುವಂಥದ್ದು ಏನಿದೆ ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ವಿಶೇಷವಾದಂಥ ಗಮನವನ್ನು ಕೊಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಯಾವ ಕಾರಣಕ್ಕಾಗಿ ನೀವು ವಿರೋಧ ಮಾಡುತ್ತೀರಿ?

ಶ್ರೀ ಸಿ.ಹೆಚ್. ವಿಜಯಶಂಕರ್ : ಅಧ್ಯಕ್ಷರೇ, ಅಲ್ಲಿ ಹೋಟೆಲ್‌ನ್ನು ನಡೆಸುವುದರಿಂದ ಕಾಡು ಪ್ರಾಣಿಗಳಿಗೆ ತೊಂದರೆಯಾಗುತ್ತದೆ. ಈ ವಿಷಯ ಅವರಿಗೂ ಅರ್ಥವಾಗಿರುತ್ತದೆ. ನನ್ನ ಶ್ರೀಮತಿಯವರೂ ಕೊಡಗಿನವರೇ, ನಾವು ಮುಖ್ಯ ರಸ್ತೆಯಲ್ಲಿ ಇಲ್ಲಿಗೆ ಬರಬೇಕಾದರೆ ಅನೇಕ ರೀತಿಯ ಕಾಡುಪ್ರಾಣಿಗಳು 6 ಗಂಟೆಯ ಮೇಲೆ ನಮಗೆ ನೋಡುವುದಕ್ಕೆ ಕಾಣಸಿಗುತ್ತವೆ. ವಾಹನಗಳ ದಟ್ಟಣೆ ಇರುವಂಥ ಮುಖ್ಯ ರಸ್ತೆಯಲ್ಲೇ ಈ ಕಾಡು ಪ್ರಾಣಿಗಳು ಸಿಗುತ್ತವೆ. ನಮ್ಮ ನಾಣಯ್ಯನವರೂ ಕೂಡ ನೋಡಿರಬಹುದು. ಇಲ್ಲಿ 6 ಗಂಟೆ ಮೇಲೆ ಯಾರೇ ಪ್ರವೇಶ ಮಾಡಿದರೂ, ಯಾವ ಪ್ರಾಣಿಗೆ ಯಾವ

ರೀತಿಯ ತೊಂದರೆ ಆಗುತ್ತದೆ, ಯಾರು ಯಾವ ರೀತಿಯಲ್ಲಿ ತೊಂದರೆ ಮಾಡುತ್ತಾರೆ ಮತ್ತು ಯಾವ ರೀತಿಯ ಸಮಸ್ಯೆಗಳನ್ನು ಅಲ್ಲಿ ನಿರ್ಮಿಸುತ್ತಾರೆ ಎನ್ನುವುದನ್ನು ಹೇಳುವುದಕ್ಕ ಸಾಧ್ಯವಿಲ್ಲ, ಆ ರೀತಿಯಲ್ಲಿ ಪ್ರಾಣಿಗಳಿಗೆ ತೊಂದರೆಗಳಾಗುತ್ತವೆ. ಇವೊತ್ತು ಏನು ಅಳಿದುಳಿದ ಕಾಡುಗಳು ಇವೆ ಅಲ್ಲಿ ನೆಮ್ಮದಿಯಾಗಿ ಕಾಡು ಪ್ರಾಣಿಗಳು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲದೆಯೇ ಕಾಡಾನೆಗಳು ಇಂದು ನಮ್ಮ ನಾಡಿಗೆ ನುಗ್ಗಿ ಬರುತ್ತಿವೆ. ಹುಣಸೂರು ಮತ್ತು ಪಿರಿಯಾಪಟ್ಟಣಗಳ ಮಧ್ಯದಲ್ಲಿಯೇ ಕಾಡಾನೆಗಳು ಬಂದಿದ್ದಂಥ ಉದಾಹರಣೆಗಳು ಇವೆ. ಇವೊತ್ತು ಪಟ್ಟಣಗಳಿಗೆ ಕಾಡಾನೆಗಳು ನುಗ್ಗಿ ಶಾಲಾ ಮಕ್ಕಳನ್ನು ಅಟ್ಟಿಸಿಕೊಂಡು ಹೋಗಿರುವಂಥ ಉದಾಹರಣೆಗಳು ಇವೆ. ಈ ಬಗ್ಗೆ ದಾಖಲೆ ಅಧಿಕಾರಿಗಳ ಬಳಿಯಲ್ಲಿಯೇ ಇದೆ ನೀವು ಬೇಕಾದರೆ ತರಿಸಿ ನೋಡಬಹುದು.

ಅಧ್ಯಕ್ಷರು : ನಿಮ್ಮ ಅಭಿಪ್ರಾಯದಲ್ಲಿ ಹೋಟೆಲ್‌ನ್ ಮಾಡುವುದರಿದ ಕಾಡು ಪ್ರಾಣಿಗಳಿಗೆ ಜೀವನ ಮಾಡುವುದಕ್ಕೆ ತೊಂದರೆಯಾಗುತ್ತದೆ. ಈ ನಿಟ್ಟಿನಲ್ಲಿ ಇವೊತ್ತು ಈ ಪ್ರಾಣಿಗಳಿಗೆ ಕಾಡಿನಲ್ಲಿ ಕೂಡ ಬದುಕುವುದಕ್ಕೆ ಮನುಷ್ಯರು ಬಿಡುತ್ತಿಲ್ಲ ಎನ್ನುವುದೇ ನಿಮ್ಮ ಅಭಿಪ್ರಾಯವಲ್ಲವೇ?

ಶ್ರೀ ಸಿ.ಹೆಚ್. ವಿಜಯಶಂಕರ್ : ಹೌದು, ಇವೊತ್ತು ಅಳಿದುಳಿದ ಕಾಡಿನಲ್ಲಿ ಏನು ಕಾಡುಪ್ರಾಣಿಗಳು ಬದುಕುವುದಕ್ಕೆ ಅವಕಾಶ ಏನಿದೆ ಅದಕ್ಕೂ ಕೂಡ ತೊಂದರೆಯನ್ನು ನೀವು ಕೊಡುವಂಥ ಈ ವಾತಾವರಣ ಏನಿದೆ, ಇದು ಯೋಗ್ಯವಾದ ವಾತಾವರಣವಲ್ಲವೆಂದು ನಾನು ಹೇಳಿ ಇದನ್ನು ದಯವಿಟ್ಟು ತಡೆಗಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳಿ ಎನ್ನುವ ಭಾವನೆಯನ್ನು ನಾನು ವ್ಯಕ್ತಮಾಡಿದ್ದೇನೆ.

ಇನ್ನು ನಮ್ಮ ಅರಣ್ಯ ಇಲಾಖೆಯವರು ನೀಲಗಿರಿ ತೋಪುಗಳನ್ನು ಇಂದು ನೆಡುತ್ತಿದ್ದಾರೆ. ಈ ನೀಲಗಿರಿಯನ್ನು ಎಲ್ಲಿ ನೆಡಬೇಕು ಎಂಬುದಕ್ಕೆ ಸ್ಪಷ್ಟವಾದ ವರದಿ ಇಲಾಖೆಯಲ್ಲಿದೆ. ಎಲ್ಲಿ ಸಿ ಅಂಡ್ ಡಿ ದರ್ಜೆ ಜಮೀನು ಇದೆ ಮತ್ತು ಎಲ್ಲಿ ಬೇರೆ ಬೆಳೆಯನ್ನು ಬೆಳೆಯಲಿಕ್ಕೆ ಆಗುವುದಿಲ್ಲವೋ ಮತ್ತು ಅರಣ್ಯದ ಬೇರೆ ಉತ್ಪನ್ನಗಳನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲವೋ, ಬೇರೆ ರೀತಿಯ ಮರಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಂಥ ಕಡೆಗಳಲ್ಲಿ ನೀಲಗಿರಿ ಮರಗಳನ್ನು ಬೆಳೆಸಬೇಕು ಎನ್ನುವ ವಿಚಾರವಿದೆ. ಇವೊತ್ತು ಕೊಡಗಿನಲ್ಲು ಕೂಡ ನೀಲಗಿರಿ ಮರಗಳನ್ನು ನೆಟ್ಟಿರುವಂಥದ್ದನ್ನು ಹೋಗುತ್ತಾ ಬರುತ್ತಾ ನೀವು ನೋಡಿದ್ದೀರಿ. ಇದೇನು ವಿಚಾರವೋ ನನಗಂತೂ ಅರ್ಥವಾಗುವುದಿಲ್ಲ. ಮತ್ತೊಂದು ವಿಚಾರ ತಮಗೆ ತಿಳಿಸುವುದೇನೆಂದರೆ 1982-83ನೇ ಇಸವಿಯಲ್ಲಿ ನೀಲಗಿರಿ ತೋಪನ್ನು ಬೆಳೆಸಲಿಕ್ಕಾಗಿ 52926 ಎಕರೆ ಜಮೀನನ್ನು ತೆಗೆದುಕೊಳ್ಳುತ್ತಾರೆ.

ಇದರಲ್ಲಿ ಸುಮಾರು $1\frac{1}{2}$ ಲಕ್ಷದಿಂದ 2 ಲಕ್ಷ ಎಕರೆಯಲ್ಲಿ ನೀಲಗಿರಿಯನ್ನು ಬೆಳೆಸಿ 1995-96ರಲ್ಲಿ ಕಟಾವನ್ನು ಮಾಡಿ ಇದರಿಂದ ಗಳಿಸಿದ ಆದಾಯ ಕೇವಲ 6 ಕೋಟಿ 65 ಲಕ್ಷ ರೂ.ಗಳು ಮಾತ್ರ. ಇದೇ 2 ಲಕ್ಷ ಎಕರೆ ಜಮೀನನ್ನು ನಮ್ಮ ರೈತರಿಗೆ ಕೊಟ್ಟಿದ್ದರೆ ಕೇವಲ ಹುರುಳಿ ಬೆಳೆಯನ್ನು ಬೆಳೆದು ಇದರ ಎರಡರಷ್ಟು ಆದಾಯವನ್ನು ತೆಗೆಯುತ್ತಿದ್ದರು. 6 ಕೋಟಿಗೆ ಬದಲಾಗಿ 12 ಕೋಟಿ ರೂ.ಗಳ ಆದಾಯವನ್ನು ನಮ್ಮ ರೈತರು ಕೇವಲ ಹುರುಳಿ ಮತ್ತು ಹುಚ್ಚೆಳ್ಳು ಬೆಳೆಯನ್ನು

ಬೆಳೆದು ತೆಗೆಯುತ್ತಿದ್ದರು. ಆದರೆ ಇಂದಿನ ನಮ್ಮ ಸರ್ಕಾರದ ವಿಚಾರಗಳೇನೋ ನನಗಂತೂ ಅರ್ಥವಾಗುತ್ತಿಲ್ಲ. ಆದ್ದರಿಂದ ದಯವಿಟ್ಟು ಈ ರೀತಿಯ ವಿಚಾರಗಳು ಏನಿವೆ ಅವುಗಳನ್ನು ಬದಲಾವಣೆ ಮಾಡಿಕೊಳ್ಳಬೇಕು ಈ ಸಮಯದಲ್ಲಿ ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಈಗ ಸಿ ಅಂಡ್ ಡಿ ದರ್ಜೆ ಜಮೀನುಗಳೇನಿವೆ ಇದರ ಬಗ್ಗೆ ಅನೇಕ ಸನ್ನಿವೇಶಗಳಲ್ಲಿ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಲ್ಲಿ ಸಂಘರ್ಷಕ್ಕೆ ಕಾರಣವಾಗಿ ಇನ್ನೂ ಈ ಜಮೀನನ್ನು ಅರಣ್ಯ ಇಲಾಖೆಗೆ ಸೇರಿದ ಜಮೀನು ಎಂದು ನೀವು ಸ್ಪಷ್ಟವಾಗಿ ಘೋಷಣೆಯನ್ನು ಇನ್ನೂ ಮಾಡಿರುವುದಿಲ್ಲ. ಈ ಬಗ್ಗೆ ನಾನು ವಿಶೇಷವಾಗಿ ಮನವಿ ಮಾಡಿಕೊಳ್ಳುವುದೇನೆಂದರೆ ನಿಮ್ಮ ಹಿಡಿತದಲ್ಲಿರುವಂಥ ಸಿ ಅಂಡ್ ಡಿ ದರ್ಜೆ ಜಮೀನು ಏನಿವೆ ಅವುಗಳನ್ನು ಕಾಡಿಗೆ ಸಂಬಂಧಪಟ್ಟಂಥ ಅರಣ್ಯ ಇಲಾಖೆಗೆ ಸಂಬಂಧಪಟ್ಟಂಥ ಜಮೀನುಗಳು ಎಂದು ಹೇಳಿ ಘೋಷಣೆಯನ್ನು ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ಕಾರಣ ಈಗಲೂ ಕೂಡ ಕಂದಾಯ ಇಲಾಖೆಯವರು ಪಟ್ಟವನ್ನು ಕೊಡುತ್ತಿದ್ದಾರೆ. ಇದು ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತವೆ ಎನ್ನುವಂಥದ್ದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಕೆಲಸವನ್ನು ಮಾಡುವುದಕ್ಕೆ ನೀವು ವಿಶೇಷ ಅಧಿಕಾರಿಯನ್ನು ನೇಮಕ ಮಾಡಿದಿರಿ, ಆದರೂ ಕೂಡ ಹತ್ತಾರು ವರ್ಷಗಳಿಂದಲೂ ಕೂಡ ಈ ಜಮೀನು ಅರಣ್ಯ ಜಮೀನು ಎಂದು ಘೋಷಣೆ ಮಾಡಿರುವಂಥ ಒಂದು ಉದಾಹರಣೆಯೂ ಇಲ್ಲ. ಆದ್ದರಿಂದ ಇದಕ್ಕೋಸ್ಕರವೇ ವಿಶೇಷ ಅಧಿಕಾರಿಯನ್ನು ನೇಮಕ ಮಾಡಬೇಕು. ಬಹುಶಃ ಸಿ ಅಂಡ್ ಡಿ ದರ್ಜೆ ಜಮೀನುಗಳು ಅರಣ್ಯ ಇಲಾಖೆಯ ಹಿಡಿತದಲ್ಲಿ ಏನಿವೆ ಅರಣ್ಯ ಬೆಳೆಸುವಂಥ ಜಮೀನುಗಳು ಏನಿವೆ, ಅವುಗಳನ್ನು ಅರಣ್ಯ ಇಲಾಖೆ ಜಮೀನು ಎಂದು ಹೇಳಿ ಘೋಷಣೆಯನ್ನು ಮಾಡಬೇಕೆಂದು ಈ ಸಮಯದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ನಾನು ಈಗ ಒಂದು ವಿಷಾದದ ಸಂಗತಿಯನ್ನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ದಿನನಿತ್ಯ ಅರಣ್ಯ ಕಡಿಮೆಯಾಗುತ್ತಿದೆ. ಆದರೆ ಅರಣ್ಯ ಇಲಾಖೆಯಲ್ಲಿರುವ ಮೇಲ್ದರ್ಜೆ ಹುದ್ದೆಗಳು ಮಾತ್ರ ಹೆಚ್ಚಾಗುತ್ತಾ ಹೋಗುತ್ತಿವೆ. ಅದು ಹೇಗೆಂದರೆ ಇದರ ಬಗ್ಗೆ ಒಂದೆರಡು ಉದಾಹರಣೆಗಳನ್ನು ನಾನು ಕೊಡುತ್ತೇನೆ. 1980ರಲ್ಲಿ ಅರಣ್ಯ ಇಲಾಖೆಯಲ್ಲಿದ್ದಂಥ ಹುದ್ದೆಗಳು ಎಷ್ಟೆಂದರೆ ಸಿ.ಸಿ.ಎಫ್. 4 ಇದ್ದದ್ದು, ಇಂದು 20 ಇದೆ, ಸಿ.ಎಫ್, 10 ಇದ್ದದ್ದು 25 ಆಗಿದೆ, ಡಿ.ಸಿ.ಎಫ್ 125 ಇದ್ದದ್ದು 300 ಆಗಿದೆ, ಎ.ಸಿ.ಎಫ್ 150 ಇದ್ದದ್ದು 300 ಆಗಿದೆ, ಈ ರೀತಿಯಲ್ಲಿ ಶೇಕಡ 100ಕ್ಕೆ 100ರಷ್ಟು ಮೇಲ್ದರ್ಜೆ ಹುದ್ದೆಗಳು ಹೆಚ್ಚಾಗಿವೆ. ಈ ರೀತಿಯಲ್ಲಿ ಮೇಲ್ದರ್ಜೆ ಹುದ್ದೆಗಳನ್ನು ಹೆಚ್ಚಿಸಿರುವುದರಿಂದ ಅರಣ್ಯ ಇಲಾಖೆಗೆ ಕಿಂಚಿತ್ತಾದರೂ ಉಪಯೋಗವಾಗಿದೆಯೇ? ಕೆಳ ಹಂತದಲ್ಲಿ ಕೆಲಸ ಮಾಡುವಂಥ ಹುದ್ದೆಗಳಾದ ವಾಚರ್ಸ್, ಗಾರ್ಡ್ಗಳು, ವನಪಾಲಕರು ಎಂದು ಕೆಲಸ ಮಾಡುವವರು ಯಾರಿದ್ದಾರೆ, ಇಂಥ ಹುದ್ದೆಗಳನ್ನೂ ಕೂಡ ಇದೇ ಪ್ರಮಾಣದಲ್ಲಿ ಹೆಚ್ಚಿಗೆ ಮಾಡುರಂಥ ಕೆಲಸವನ್ನೇನಾದರೂ ಮಾಡಿದ್ದೀರಾ? ಮಾಡಿಲ್ಲ, ಇವೊತ್ತಿಗೂ ಕೂಡ ಏನು ಮೊದಲು ಅರಣ್ಯ ಇಲಾಖೆಯಲ್ಲಿ ಈ ಕೆಳಹಂತದ ಹುದ್ದೆಗಳು ಇದ್ದವೋ ಅಷ್ಟೇ ಪ್ರಮಾಣದಲ್ಲಿ ಇಂದಿಗೂ ಇವೆ ಮತ್ತು ಅವೇ ಹುದ್ದೆಗಳನ್ನು ಮುಂದುವರಿಸಿಕೊಂಡು ಹೋಗಿದ್ದೀರಿ. ಅವನ್ನೂ ಕೂಡ ಭರ್ತಿ ಮಾಡುರಂಥ ಕೆಲಸವನ್ನು ಮಾಡಲಿಲ್ಲ. ಅಲ್ಪಸ್ವಲ್ಪ ತುಂಬಿದ್ದರೂ ಕೂಡ ಇನ್ನೂ ಅನೇಕ ಜಾಗಗಳಲ್ಲಿ ಖಾಲಿ ಇರುವಂಥದ್ದನ್ನು ನಾನು ಕಂಡಿದ್ದೇನೆ. ಬಹುಶಃ ರಾಷ್ಟ್ರೀಯ ಅಭಯಾರಣ್ಯ ನಾಗರಹೊಳೆಯಲ್ಲಿ

ಸುಮಾರು 50 ಗಾರ್ಡ್ಗಳ ಹುದ್ದೆಯನ್ನು ತುಂಬುವಂಥ ಕೆಲಸ ಆಗಿಲ್ಲ. ಇನ್ನು ಇಡೀ ಇಲಾಖೆಯಲ್ಲಿ ಎಷ್ಟು ಕೆಳಹಂತದ ಹುದ್ದೆಗಳು ಖಾಲಿ ಇವೆ, ಅವುಗಳನ್ನು ತುಂಬಬೇಕಾಗಿರುವ ಬಗ್ಗೆ ದಯವಿಟ್ಟು ತಾವು ಯೋಚನೆ ಮಾಡಬೇಕಾಗುತ್ತದೆ. ಈ ರೀತಿಯಲ್ಲಿ ಕೆಳಹಂತದ ಹುದ್ದೆಗಳನ್ನು ತುಂಬುವುದಕ್ಕೆ ಕಿಂಚಿತ್ತಾದರೂ ಪ್ರಾಮಾಣಿಕವಾಗಿ ಕಳಕಳಿ ಮತ್ತು ಕಾಳಜಿಯನ್ನು ತೋರಿಸದೇ ಇರುವಂಥ ಸರ್ಕಾರ ಮೇಲ್ಮಟ್ಟದಲ್ಲಿರುವಂಥ ಈ ಅಧಿಕಾರಿಗಳನ್ನು ಹೆಚ್ಚಿಗೆ ಮಾಡಿಕೊಂಡು ಅರಣ್ಯ ಇಲಾಖೆಗೆ ಯಾವ ರೀತಿಯಲ್ಲಿ ಇವರ ಉಪಯೋಗವನ್ನು ಸದುಪಯೋಗವನ್ನು ಮಾಡಿಕೊಂಡಿದ್ದಾರೆ ಎನ್ನುವಂಥದ್ದನ್ನು ದಯವಿಟ್ಟು ಉತ್ತರ ಕೊಡುವ ಸಂದರ್ಭದಲ್ಲಿ ತಾವು ಹೇಳಬೇಕಾಗಿದೆ.

ಇವೊತ್ತು 'ಟೀಕ್' ಮರಕ್ಕೆ ಅತ್ಯಂತ ಹೆಚ್ಚಿನ ಬೇಡಿಕೆ ಇದೆ. ನಮ್ಮ ಭಾಗದಲ್ಲಿ ಬೆಳೆಯುವಂಥ 'ಟೀಕ್'ಗೆ ಇರುವಷ್ಟು ಬೇಡಿಕೆ ದೇಶದ ಯಾವುದೇ ಭಾಗದಲ್ಲಿ ಬೆಳೆಯುವಂಥ 'ಟೀಕ್'ಗೆ ಬಹುಶಃ ಇರಲಾರದು. ಈ ಸಾಗುವಾನಿ ಮರ ಒಂದು ವರ್ಷಕ್ಕೆ ಎಷ್ಟು ಮಾರಾಟವಾಗುತ್ತದೆಂದರೆ ನನಗೆ ತಿಳಿದ ಮಟ್ಟಿಗೆ 3 ಸಾವಿರದಿಂದ 4 ಸಾವಿರ ಘನ ಮೀಟರ್ಗಳಷ್ಟು ಮಾರಾಟವಾಗುತ್ತದೆ. ಇಷ್ಟು ಮರಗಳನ್ನು ಒಂದು ವರ್ಷಕ್ಕೆ ಎಷ್ಟು ಜಮೀನಿನಲ್ಲಿ ಬೆಳೆಸಬಹುದು ಎಂದರೆ 400 ಎಕರೆ ಜಮೀನಿನಲ್ಲಿ ಬೆಳೆಸಬಹುದು. ಈ ಕೆಲಸವನ್ನು ವೈಜ್ಞಾನಿಕವಾಗಿ ಸರ್ಕಾರ ಏನಾದರೂ ಮಾಡುತ್ತಿದೆಯೇ? ಇವೊತ್ತು ಮರಗಳಿಗೆ ಏನು ಬೇಡಿಕೆ ಇದೆ, ಯಾರು ಮನೆಯನ್ನು ಕಟ್ಟುವುದಕ್ಕೆ ಮರವನ್ನು ಕೇಳುತ್ತಾರೆ, ಬೇರೆ ಬೇರೆ ಉಪಯೋಗಕ್ಕಾಗಿ ಮರಗಳನ್ನು ಕೇಳುತ್ತಾರೆ, ಅವರಿಗೆ ಬೇಕಾಗಿರುವಂಥ ಮರಗಳನ್ನು ಒದಗಿಸುವಂಥ ವಿಚಾರದಲ್ಲಿ ಈ ರೀತಿಯಲ್ಲಿ ವ್ಯವಸ್ಥಿತವಾದಂಥ ಕಾರ್ಯಕ್ರಮಗಳನ್ನೇನಾದರೂ ಹಾಕಿಕೊಂಡಿದೆಯೇ? ಅಥವಾ ಬರೀ ನೀಲಗಿರಿ, ಗುಲ್ಮೋರ್, ಅಕೇಷಿಯಾ ಮರಗಳನ್ನೇ ಬೆಳೆಸುವಂಥ ಕೆಲಸವನ್ನು ಸರ್ಕಾರ ಮಾಡುತ್ತಿದೆಯೇ? ಈ ಒಂದು ವಿಚಾರವನ್ನು ಸರ್ಕಾರ ಸ್ಪಷ್ಟವಾಗಿ ತಿಳಿಸಬೇಕು. ಕೊನೇ ಪಕ್ಷ ಒಂದು ವರ್ಷಕ್ಕೆ ಒಂದೊಂದು ಸಾವಿರ ಎಕರೆಯಲ್ಲಾದರೂ ಈ ಟೀಕ್, ಹೊನ್ನೆ, ಮತ್ತಿ ಮರಗಳನ್ನು ಬೆಳೆಸುವುದಕ್ಕೆ ಸರ್ಕಾರೀ ನಿಯಮವನ್ನು ಜಾರಿಗೆ ತರಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ನಾನು ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಈ ಸಮಯದಲ್ಲಿ ಒಂದೇ ಒಂದು ವಿಚಾರವನ್ನು ಹೇಳಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಹೇಳಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಅಧ್ಯಕ್ಷರೇ, ಈಗ ಲಾಗಿಂಗ್ ವ್ಯವಸ್ಥೆ ಏನಿದೆ, ಇದನ್ನು ರಾಜ್ಯದಲ್ಲಿ ಒಂದೇ ರೀತಿಯಾಗಿ ಮಾಡುವ ಬಗ್ಗೆ ಸರ್ಕಾರ ಯೋಜನೆಯನ್ನು ಮಾಡಬೇಕು. ಏಕೆಂದರೆ ಈಗ ಒಂದೊಂದು ಜಿಲ್ಲೆಯಲ್ಲಿ ರೀತಿಯಲ್ಲಿ ಲಾಗಿಂಗ್ ಆಗುತ್ತಿದೆ. ಕೆಲವೊಂದು ಲೇಬರ್ ಸೊಸೈಟೀಸ್ ಎನ್ನುವಂಥ ಹೆಸರಿನಲ್ಲಿ ಇಡೀ ಅರಣ್ಯವನ್ನೇ ಲೂಟಿ ಮಾಡುತ್ತಿದ್ದಾರೆ. ನಾನು ಈ ಹಿಂದೆ ಪ್ರಶ್ನೆಯನ್ನು ಕೂಡ ಕೇಳಿದ್ದೆ. ಇವತ್ತು ಲಾಗಿಂಗ್ ಹೆಸರಿನಲ್ಲಿ ಲೇಬರ್ ಸೊಸೈಟಿಗಳು ದೊಡ್ಡ ಪ್ರಮಾಣದಲ್ಲಿ ಕಾಡುಗಳ್ಳತನವನ್ನು ಮಾಡುತ್ತಿವೆ. ಹಸಿ ಮರಗಳನ್ನು ಕಡಿಯುತ್ತಿದ್ದಾರೆ. ಈ ರೀತಿ ದೊಡ್ಡ ಪ್ರಮಾಣದಲ್ಲಿ ಲಾಗಿಂಗ್ ವ್ಯವಸ್ಥೆಯನ್ನು ಇಡೀ ರಾಜ್ಯದಲ್ಲಿ ಒಂದೇ ರೀತಿಯಾಗಿ ಬರಬೇಕು. ಟೆಂಡರ್ ಮೂಲಕ ಆಗುವುದಕ್ಕೆ ನೀವು ಒಂದು ವಿಶೇಷವಾದಂಥ ಒಂದು ಘೋಷಣೆಯನ್ನು ಮಾಡಬೇಕೆಂದು ಹೇಳುತ್ತೇನೆ. ಈಗ ಓ.ಡಿ.ಎ. ಪ್ರಾಜೆಕ್ಟಳು ಬಂದಿದೆ.

6.20 ಪಿ.ಎಂ

ಅರಣ್ಯ ಇಲಾಖೆಯಲ್ಲಿ ಓಓಡಿ ಯಿಂದ ವಿದೇಶಕ್ಕೆ ಹೋಗಿಬರುವುದಕ್ಕೆ ಅಧಿಕಾರಿಗಳಿಗೆ ಒಂದು ಮಾರ್ಗವಾಗಿದೆ. ಹಾಗಾಗಿ ಅಧಿಕಾರಿಗಳು ಎಷ್ಟು ಜನ ವಿದೇಶಕ್ಕೆ ಹೋಗಿಬಂದರು? ಎಷ್ಟುಜನ ಅಧಿಕಾರಿಗಳು ವಿದೇಶದಿಂದ ಅನುಭವ ಪಡೆದಂತಹವರು ಅದೇ ಕೆಲಸದಲ್ಲಿ ಮುಂದುವರೆದಿದ್ದಾರೆ ಎನ್ನುವುದನ್ನು ಸರ್ಕಾರ ಉತ್ತರ ಕೊಡುವಾಗ ಹೇಳಬೇಕು ಎಂದು ವಿನಂತಿಸುತ್ತೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮಾನ್ಯ ಅಧ್ಯಕ್ಷರೇ, ನಾನು ಆದಷ್ಟು ಬೇಗ ನನ್ನ ಮಾತನ್ನು ಮುಗಿಸಲು ನೀವು ಕೊಟ್ಟಂತಹ ಸಮಯವನ್ನು ಸದುಪಯೋಗ ಮಾಡಿಕೊಳ್ಳಬೇಕು ಎನ್ನುವ ವಿಚಾರ ನನ್ನ ಮನಸ್ಸಿನಲ್ಲಿದೆ. ಈ ಸಮಯದಲ್ಲಿ ಇನ್ನೊಂದು ಬಹಳ ಮುಖ್ಯವಾಗಿ ಸಲಹೆ ಕೊಡುವುದೇನೆಂದರೆ ರೈತ ತನ್ನ ಜಮೀನಿನಲ್ಲಿ ಕೆಲವೊಂದು ಮರಗಳನ್ನು ಬೆಳೆಸುತ್ತಾನೆ. ಅದು ಯಾವುದೇ ರೀತಿಯ ಮರವಾಗಿರಬಹುದು. ಉದಾಹರಣೆಗೆ ಬೇವು, ಆಲದ ಮರ, ಅರಳಿ, ಕರಿಜಾಲಿ ಈ ರೀತಿಯ ಮರಗಳನ್ನು ಜಮೀನಿನಲ್ಲಿ ಬೆಳೆಸುತ್ತಾನೆ. ತನ್ನ ಉಪಯೋಗಕ್ಕೋಸ್ಕರವಾಗಿ ಬೆಳೆದ ಮರಗಳನ್ನು ಬೆಳಸಿಕೊಳ್ಳಬೇಕಾಗುತ್ತದೆ. ಈಗ ಇರುವಂತಹ ಅರಣ್ಯ ಇಲಾಖೆಯ ನಿಯಮದಡಿಯಲ್ಲಿ ತಾಲ್ಲೂಕು ಆಫೀಸ್ನಿಂದ ಸರ್ವೇ ಆಫೀಸ್ಗೆ, ಸರ್ವೇ ಆಫೀಸ್ನಿಂದ ರೆವಿನ್ಯೂ ಆಫೀಸ್ ಹೀಗೆ ಸುತ್ತಿ ಸುತ್ತಿ ಕೊನೆಗೆ ಸುಸ್ತಾಗಿ ಈ ಮರ ಸಿಗದಿದ್ದರೂ ಚಿಂತೆ ಇಲ್ಲ ಯಾವುದಾದರೂ ಆಕ್ಷನ್ನಲ್ಲಿ ಬೇರೆ ಮರವನ್ನು ತೆಗೆದುಕೊಳ್ಳೋಣ ಎನ್ನುವಂತಹ ಸ್ಥಿತಿಗೆ ರೈತ ತಲುಪುತ್ತಾನೆ.

ಆ ಕಾರಣಕ್ಕೆ ಬಹಳ ವಿಶೇಷವಾಗಿ ಮನವಿ ಮಾಡಿಕೊಳ್ಳುವುದೇನೆಂದರೆ, ಇದಕ್ಕೆ ಅಧಿಕಾರವನ್ನು ನಿಮ್ಮ ರೇಂಜ್ ಫಾರೆಸ್ಟ್ ಆಫೀಸರ್‌ಗೆ ಕೊಡಿ, ಅಥವಾ ತಪ್ಪಿದರೆ ಡಿ.ಎಫ್.ಓಗೆ ಕೊಡಿ. ನೇರವಾಗಿ ಇವರು ಯಾರನ್ನಾದರೂ ಕಳುಹಿಸಿ ಮಹಜರು ಮಾಡಿಸಿ, ಇದು ರೈತನ ಜಮೀನಿನಲ್ಲಿ ಬೆಳೆದಂತಹ ಮರ. ಆತನ ಪಹರೆ ಪಟ್ಟಿಯಲ್ಲಿ ಕಂಡುಬಂದಿದೆ. ಆ ಮರವನ್ನು ಅವನು ಉಪಯೋಗಿಸಿಕೊಳ್ಳುವುದಕ್ಕೆ ಅನುಮತಿ ನೀಡಬಹುದು ಎಂದು ಹೇಳುವಂಥ ವ್ಯವಸ್ಥೆಯನ್ನು ಮಾಡಿಕೊಡಿ. ಸ್ಕೆಚ್ ಅಂತೆ, ರೆವಿನ್ಯೂ ಮಹಜರು ಅಂತೆ, ಈ ರೀತಿಯ ವ್ಯವಸ್ಥೆ ಏನಿದೆ ಈ ವ್ಯವಸ್ಥೆಯಿಂದ ನಮ್ಮ ರೈತನನ್ನು ಬಿಡುಗಡೆ ಮಾಡಿಕೊಡಿ ಎಂದು ಹೇಳುತ್ತೇನೆ. ನಾನು ಕೊಟ್ಟಂತಹ ವಿಚಾರಗಳು ಏನಿದೆ ಅವುಗಳನ್ನು ವ್ಯವಸ್ಥಿತವಾಗಿ ಅರಣ್ಯ ಇಲಾಖೆಯಲ್ಲಿ ಅಳವಡಿಸಿ ನಮ್ಮ ಭಾಗದ ಜನತೆಗೆ ಅರಣ್ಯ ಇಲಾಖೆಯಲ್ಲಿ ಬದಲಾವಣೆ ತರುವುದಕ್ಕೆ ವ್ಯವಸ್ಥಿತವಾದ ಚಿಂತನೆಯನ್ನು ಮೂಡಿಸಿ, ನಮಗೆ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು ಎನ್ನುವುದನ್ನು ವ್ಯಕ್ತ ಮಾಡುತ್ತಾ, ಇದರ ಜೊತೆಯಲ್ಲಿ ನನ್ನದೇ ಆದಂತಹ ನಾಲ್ಕೈದು ವಿಚಾರಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಶಾಸಕನಾಗಿ ಬಂದು ಒಂದೂ ಕಾಲು ವರ್ಷಗಳಾಯಿತು. ನನ್ನ ಕ್ಷೇತ್ರದ ವಿಚಾರವಾಗಿ ಹೇಳುವುದಾದರೆ ಸಣ್ಣ ನೀರಾವರಿ ಇಲಾಖೆಯ ಅಚ್ಚುಕಟ್ಟು ವ್ಯವಸ್ಥೆಯಲ್ಲಿ ನನ್ನ ಕ್ಷೇತ್ರದಲ್ಲಿ 40 ಸಾವಿರ ಎಕರೆ ಜಮೀನು ಬರುತ್ತದೆ.

ನಾನು ಬಹಳ ನೋವಿನಿಂದ ಈ ವಿಚಾರವನ್ನು ಹೇಳುತ್ತೇನೆ. ನಾನು ಶಾಸಕನಾದ ಮೇಲೆ 1995-96ರ ಅನುವಾದಕ್ಕೆ ಒಳಪಟ್ಟಂತಹ ಒಂದೇ ಒಂದು ಕೆಲಸ ಕಾರ್ಯಗಳು ಇಲ್ಲಿಯವರೆಗೆ ಆಗಲಿಲ್ಲ. ಸುಮಾರು 17ರಿಂದ 20 ಲಕ್ಷ ರೂಪಾಯಿ ಅಂದಾಜಿನಲ್ಲಿ

ಸಿಲ್ಟ್ ಎತ್ತುವುದಕ್ಕೆ ಹಣ ಬಿಡುಗಡೆ ಮಾಡುವಂತಹ ವ್ಯವಸ್ಥೆ ಏನಿದೆ, ಅದಕ್ಕೆ ಕಳೆದ ವರ್ಷದಿಂದ ಹಣ ಬಿಡುಗಡೆಯಾಗಲಿಲ್ಲ, ಸಣ್ಣ ನೀರಾವರಿ ಇಲಾಖೆಯಲ್ಲಿ 1995-96ರ ಅನುವಾದಕ್ಕೆ ಒಳಪಟ್ಟಂತಹ ಕೆಲಸಗಳು ನಮ್ಮಲ್ಲಿ ಆಗಲಿಲ್ಲ. ಈ ವಿಚಾರವಾಗಿ ಹಿಂದಿನ ಮತ್ತು ಈಗಿರುವಂತಹ ಮಂತ್ರಿಗಳಿಗೆ ನಾನು ಮನವಿಯನ್ನು ಕೊಟ್ಟಿದ್ದೇನೆ. ಸಿಲ್ಟ್ ಎತ್ತುವಂತಹ ಕೆಲಸದಲ್ಲಿ ಕೂಡ 17 ರಿಂದ 20 ಲಕ್ಷ ರೂಪಾಯಿ ಬಾಕಿ ಇದ್ದು ಈ ಸಾರಿ ಎಲ್ಲಾ ಕಂಟ್ರಾಕ್ಟರುಗಳು ಕೂಡ, ನಾನು ಕ್ಷೇತ್ರಕ್ಕೆ 8-10 ದಿವಸದ ಹಿಂದೆ ಹುಣಸೂರಿಗೆ ಹೋದಂತಹ ಸಮಯದಲ್ಲಿ ಒಗ್ಗಟ್ಟಾಗಿ ಈ ಇಲಾಖೆಯನ್ನು ಬಾಯ್ಕಾಟ್ ಮಾಡಿದರು.

ಕಾರಣ ನಾವು ಯಾವುದೇ ಇಲಾಖೆಯ ಕೆಲಸವನ್ನು ಮಾಡುವುದಿಲ್ಲ, ನಮಗೆ ಹಣ ಸಂದಾಯವಾಗುತ್ತಿಲ್ಲ ಎನ್ನುವ ವಿಚಾರವನ್ನು ಇಟ್ಟುಕೊಂಡು. ನಾನು ಮಾನ್ಯ ಮಂತ್ರಿಗಳಿಗೆ ಕೊನೇ ಪಕ್ಷ ಸ್ವಲ್ಪ ಹಣವನ್ನಾದರೂ ಬಿಡುಗಡೆ ಮಾಡಿಕೊಡಿ, ಇಲ್ಲವಾದರೆ ನಾನು ನನ್ನ ಕ್ಷೇತ್ರಕ್ಕೆ ಹೋಗುವುದಕ್ಕೆ ಕಷ್ಟವಾಗುತ್ತದೆ. ರೈತರೆಲ್ಲಾ ಇಲಾಖೆಯ ಮೇಲೆ ಮುತ್ತಿಗೆ ಹಾಕಿ ಗಲಾಟೆ ಮಾಡಿದ್ದಾರೆ, ನನ್ನ ಮೇಲೂ ಕೂಡ ಗಲಾಟೆ ಮಾಡಿದ್ದಾರೆ. ಇಲಾಖೆಯಿಂದ ವರದಿಯನ್ನು ತರಿಸಿಕೊಂಡು ಮಾಡಬೇಕು ಎನ್ನುವಂತಹ ಮಾತನ್ನು ಹೇಳಿದ್ದೇನೆ. ನಮಗೆ ಬಹಳ ಕೆಟ್ಟ ಹೆಸರು ಬರುತ್ತದೆ, ಬಹಳ ನೋವಾಗುತ್ತದೆ, ನಾವು ಬಹಳ ಕಷ್ಟ ಕಾಲದಲ್ಲಿ ಶಾಸಕರಾಗಿದ್ದೇವೆ ಎಂದು ಅನ್ನಿಸುತ್ತದೆ. ಅಥವಾ ಶಾಸಕರಾದರೆ ಈ ರೀತಿ ಪರಿಸ್ಥಿತಿ ಬರುತ್ತಿದೆಯೇ ಎನ್ನುವಂತಹ ನೋವು ಬಂದಿದೆ. ಅನೇಕ ದಿವಸ ನಾನು ನಿದ್ದೆ ಇಲ್ಲದೆ ಇರುವಂತಹ ದಿನಗಳನ್ನು ಶಾಸಕನಾಗಿ ಕಳೆದಿದ್ದೇನೆ. ದಯವಿಟ್ಟು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಈ ವಿಚಾರದಲ್ಲಿ ವಿಶೇಷ ಗಮನವನ್ನು ಹರಿಸಿ ನಮಗೆ ನ್ಯಾಯವನ್ನು ಒದಗಿಸಿಕೊಡಬೇಕು.

40 ಸಾವಿರ ಎಕರೆ ಅಚ್ಚುಕಟ್ಟು ಎಂದರೆ ಒಂದು ಎಕರೆಗೆ ನೀರು ಗಂದಾಯ 60 ರೂಪಾಯಿ ಹಾಕುತ್ತಾರೆ. ಒಂದು ಎಕರೆಗೆ 60 ರೂಪಾಯಿ ಎಂದರೆ ಒಟ್ಟು 24 ರಿಂದ 25 ಲಕ್ಷ ರೂಪಾಯಿ ನಿವ್ವಳ ಆದಾಯ ಇದರಲ್ಲಿ ರೈತರಿಂದ ಸರ್ಕಾರಕ್ಕೆ ಬರುತ್ತದೆ. ಆದರೆ ನೀವು ವಾಪಸ್ಸು ಆ ನನ್ನ ಕ್ಷೇತ್ರಕ್ಕೆ ವಿನಿಯೋಗ ಮಾಡುವಂತಹ ಹಣವೆಷ್ಟು? ಒಂದೇ ಒಂದು ಪೈಸೆ ಕಳೆದ ಎರಡು ವರ್ಷದಿಂದ ಇಲ್ಲ. ಸರ್ಕಾರ ಈ ಒಂದು ವಿಚಾರದಲ್ಲಿ ಸ್ಪಷ್ಟವಾದ ಮಾಹಿತಿಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ನಾನು ಶಾಸಕನಾದ ಮೇಲೆ ಲೋಕೋಪಯೋಗಿ ಇಲಾಖೆಯಲ್ಲಿ 1995-96ರ ಇಲಾಖಾ ಅನುದಾನಕ್ಕೆ ಒಳಪಟ್ಟಂತಹ ಕೆಲಸಗಳು ಆಗಿಲ್ಲ. ಶಾಸಕರ ಅನುದಾನದಲ್ಲಿ ಬಂದಂತಹ 30 ಲಕ್ಷ ರೂಪಾಯಿ 1996-97ರಲ್ಲಿ ಬಂದಂತಹ 20 ಲಕ್ಷ ರೂಪಾಯಿ ಹಣ ಏನಿದೆ, ಒಟ್ಟು 50 ಲಕ್ಷ ರೂಪಾಯಿಗಳನ್ನು ಇಲ್ಲಿಯವರೆಗೆ 5 ಲಕ್ಷ ರೂಪಾಯಿ ಕೂಡ ಹಣ ಖರ್ಚಾಗಿಲ್ಲ. ಒಂದೇ ಒಂದು ರಸ್ತೆಯ ಕೆಲಸ ಇಲ್ಲಿಯವರೆಗೆ ಇಲಾಖೆ ಕೈಗೊಂಡಿಲ್ಲ.

ನಾನು ಶಾಸಕನಾದ ಮೇಲೆ ಒಂದೇ ಒಂದು ರಸ್ತೆಗೆ ಟಾರು ಹಾಕಿದ್ದನ್ನು ಕಾಣಲಿಲ್ಲ. ಏಕೆ ಎನ್ನುವಂಥಾದ್ದು ನನಗೆ ಗೊತ್ತಾಗುತ್ತಿಲ್ಲ. ಈ ಇಲಾಖೆ ಏನು ಕೆಲಸ ಮಾಡಿದೆ, ಅದರ ಬಗ್ಗೆ ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಅನೇಕ ಸಲ ಕೇಳಿದ್ದೇನೆ. ಈ ರೀತಿಯ ಅವ್ಯವಸ್ಥೆ ಇದೆ, ಒಂದೇ ಒಂದು ರಸ್ತೆ ಕೆಲಸ ನಾನು

ಶಾಸಕನಾದ ಮೇಲೆ ಆಗಲಿಲ್ಲ, 30 ಲಕ್ಷ ರೂಪಾಯಿ ಅನುದಾನಕ್ಕೆ ಒಳಪಟ್ಟಂಥ ಕಾರ್ಯಕ್ರಮ ಕೊಟ್ಟಿದ್ದೇನೆ. ಅದು ಟೆಂಡರ್ ಆಗಿದೆ. ಒಂದು ವರ್ಷ ಆಗುತ್ತಾ ಬಂದರೂ ಕೂಡ ಕೆಲಸವಾಗಲಿಲ್ಲ. 1996-97ನೇ ಸಾಲಿಗೆ ಸಂಬಂಧಿಸಿದಂತೆ ಕೂಡ ನಾನು ಈಗಾಗಲೇ ಕಾರ್ಯಕ್ರಮವನ್ನು ಕೊಟ್ಟಿದ್ದೇನೆ. ಇದರ ವಿಚಾರದಲ್ಲಿ ಕೂಡ ಕಿಂಚಿತ್ತು ಕೆಲಸ ನನ್ನ ತಾಲ್ಲೂಕಿನಲ್ಲಿ ಆಗಲಿಲ್ಲ. ನಾನು ನಿಜಕ್ಕೂ ಕೂಡ ತಲೆ ಎತ್ತಿಕೊಂಡು ಸುತ್ತುವುದಕ್ಕೆ ಆಗುತ್ತಿಲ್ಲ. ದಯವಿಟ್ಟು ನೀವು ಗಮನ ಕೊಡಬೇಕು ಎಂದು ಸಂಬಂಧಪಟ್ಟ ಲೋಕೋಪಯೋಗಿ ಮಂತ್ರಿಗಳಿಗೆ ಹೇಳಿದ್ದೇನೆ. ಸಂಬಂಧಪಟ್ಟ ಇಲಾಖೆ ಏಕೆ ಈ ರೀತಿ ಉದಾಸೀನ ಮಾಡುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಈ ಇಲಾಖೆ ಅಧಿಕಾರಿಗಳು ಏನು ಮಾಡುತ್ತಾರೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಆ ಕಾರಣಕ್ಕೋಸ್ಕರ ನಾನು ವಿನಯಪೂರ್ವಕವಾಗಿ ಸರ್ಕಾರಕ್ಕೆ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ಉತ್ತರ ಕೊಡುವಂತಹ ಸಮಯದಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಉತ್ತರವನ್ನು ಕೊಡಬೇಕು ಎಂದು ಕೇಳುತ್ತೇನೆ.

ಸನ್ಮಾನ್ಯ ನಾಗಪ್ಪನವರ ಬಗ್ಗೆ ವಿಶೇಷವಾದಂತಹ ಗೌರವ ಇದೆ. ಎ.ಪಿ.ಎಂ.ಸಿ. ಅಡಿಯಲ್ಲಿ ನೀವು 15 ಲಕ್ಷ ರೂಪಾಯಿ ಹಣವನ್ನು ಕೊಟ್ಟಿರಿ. ಅದಕ್ಕೆ ಕಾರ್ಯಕ್ರಮ ಕೊಟ್ಟು ಆಯಿತು. ಟೆಂಡರ್ ಕರೆದಾಯಿತು. ಆರು ತಿಂಗಳು ಹಿಂದೆ ಸಂಬಂಧಪಟ್ಟ ಗ್ರಾಮಕ್ಕೆ ಹೋಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಇಟ್ಟುಕೊಂಡು ಅಧಿಕೃತವಾಗಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡುವಂತಹ ಕೆಲಸವು ಆಯಿತು. ಇಲ್ಲಿಯವರೆಗೆ 15 ಲಕ್ಷ ರೂಪಾಯಿಗೆ ಒಳಪಟ್ಟಂತಹ ಒಂದೇ ಒಂದು ರಸ್ತೆಯ ದುರಸ್ತಿ ಕೆಲಸವಾಗಲಿಲ್ಲ. ನಾನು ಇದನ್ನು ಸ್ಥಳೀಯ ಅಧಿಕಾರಿಗಳಿಗೆ, ಮೈಸೂರಿನಲ್ಲಿರುವಂತಹ ಜಾಯಿಂಟ್ ಡೈರೆಕ್ಟರ್‌ರವರಿಗೆ, ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಕೂಡ ತಂದಾಯಿತು. ಆದರೆ ಒಂದೇ ಒಂದು ರಸ್ತೆ ಕೆಲಸ ಅಲ್ಲಿ ಆಗಲಿಲ್ಲ. ನಾನು ಶಾಸಕನಾಗಿ ಹೇಗೆ ಇರಬೇಕು, ಹೇಗೆ ಕೆಲಸ ಮಾಡಬೇಕು ಎಂದು ಅರ್ಥವಾಗುತ್ತಾ ಇಲ್ಲ. ದಯವಿಟ್ಟು ಈ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವಂತಹ ಸಮಯದಲ್ಲಿ ಹೇಳಬೇಕು ಎಂದು ಮನವಿಯನ್ನು ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೊಳಚೆ ನಿರ್ಮೂಲನ ಮಂಡಳಿ ಇದೆ ಎಂದು ಕೇಳಿದ್ದೇನೆ ಅಷ್ಟೇ. ಆದರೆ ಅದರ ಕೆಲಸವೇನು ಎಂಬುದು ನನಗೆ ಗೊತ್ತಾಗುತ್ತಿಲ್ಲ. ನಿನ್ನೆ ವಸತಿ ಮಂತ್ರಿಗಳು ಮೀಟಿಂಗ್ ಕರೆದಂತಹ ಸಂದರ್ಭದಲ್ಲಿ ನಾನು ಬಹಳ ಸ್ಪಷ್ಟವಾಗಿ ಈ ವಿಚಾರದಲ್ಲಿ ಹೇಳಿದ್ದೇನೆ. ನಾನು ಶಾಸಕನಾಗಿ ಬಂದಮೇಲೆ ಕೊಳಚೆ ನಿರ್ಮೂಲನಾ ಮಂಡಳಿಯ ಒಂದೇ ಒಂದು ಪೈಸೆಯ ಅನುದಾನದ ಕೆಲಸ ಕಾರ್ಯಗಳು ಆಗಲಿಲ್ಲ. ಏಕೆ ಎಂದು ಗೊತ್ತಾಗುತ್ತಿಲ್ಲ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಕಳೆದ ಸಾಲಿನಲ್ಲಿ 1995-96ನೇ ಸಾಲಿನಲ್ಲಿ ಮಲೆನಾಡು ಸಂಬಂಧಪಟ್ಟ ಕೆಲಸ ಕಾರ್ಯಗಳು ಏನಿವೆ ಅದಕ್ಕೆ 31 ಲಕ್ಷ ರೂಪಾಯಿ ಅನುದಾನಕ್ಕೆ ಒಳಪಟ್ಟಂತೆ ಕಾರ್ಯಕ್ರಮವನ್ನು ರೂಪಿಸಬೇಕು ಎಂದು ಇಟ್ಟರು.

ಅದಕ್ಕೆ ಕಾರ್ಯಕ್ರಮ ರೂಪಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟಾಯಿತು. ಈ ವರ್ಷದ ಕಾರ್ಯಕ್ರಮಗಳು 31 ಲಕ್ಷ ರೂಪಾಯಿಗಳಿದ್ದರೂ 4-5 ಲಕ್ಷ ರೂಪಾಯಿಗಳ ಕೆಲಸ ಇಲ್ಲಿಯವರೆಗೆ ಆಗಲಿಲ್ಲ. 25 ರಿಂದ 26 ಲಕ್ಷ ರೂಪಾಯಿ ಕೆಲಸ ಇವತ್ತಿಗೂ ಕೂಡ ಬಾಕಿ ಇದೆ. ನಿಜಕ್ಕೂ ಕೂಡ ನನಗೆ ಬಹಳ ರೋಸಿ ಹೋಗಿದೆ, ನನ್ನ ಮನಸ್ಸಿಗೆ

ನೋವಾಗಿದೆ. ಇರುವಂತಹ ದಿನಗಳನ್ನು ಕಳೆದು ಕೈ ಮುಗಿಯುವಂತಹ ವಾತಾವರಣ ನನಗೆ ಪ್ರಥಮ ಹಂತದಲ್ಲಿ ಈ ರಾಜಕೀಯ ಜೀವನದಲ್ಲಾಗಿದೆ. ಈ ರಾಜಕಾರಣಕ್ಕೆ ಕೈ ಮುಗಿಯಬೇಕು, ಇದು ಪ್ರಾಮಾಣಿಕರಿಗೆ ಕಾಲ ಅಲ್ಲ, ಸಜ್ಜನರಿಗೆ ಅಲ್ಲ, ಗೌರವಸ್ಥರಿಗೆ ಕಾಲವಲ್ಲ ಎನ್ನುವಂತಹ ವೇದನೆ ನನ್ನ ಮನಸ್ಸಿನಲ್ಲಿ ಪ್ರಾರಂಭವಾಗಿದೆ. ನಾನು ನನ್ನ ನೋವನ್ನು ಹೇಳಿಕೊಳ್ಳುವುದು ಸೂಕ್ತವಲ್ಲ.

ಇದರ ಜೊತೆಯಲ್ಲಿ ನಾನು ಪಾಳು ಬಾವಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಆಗ ನಾನು ಹೇಳಿದ್ದೆ. ರೈತ ಬಾವಿಯನ್ನು ತೋಡಿಸುವಂತಹ ಸಮಯದಲ್ಲಿ ಸಾಲವನ್ನು ತೆಗೆದುಕೊಂಡು, ಅದು ಪಾಳು ಬಾವಿಯಾದರೆ, ಅವನಿಗೆ ಪಾಳು ಬಾವಿಗೆ ಬಿದ್ದಷ್ಟು ಕೆಟ್ಟ ಅನುಭವವಾಗುತ್ತದೆ. ಸರ್ಕಾರ ಇದಕ್ಕೋಸ್ಕರ ಒಂದು ವಿಶೇಷವಾದಂತಹ ಯೋಜನೆಯನ್ನು ಮಾಡಿಕೊಂಡಿದೆ. ಅವರಿಗೆ ಪರಿಹಾರ ಕೊಡುವಂತಹ ಯೋಜನೆ ಈ ಸರ್ಕಾರದಲ್ಲಿದೆ. ಇದರ ಬಗ್ಗೆ ಕಳೆದ 5, 6, 7, 8 ವರ್ಷಗಳಿಂದ ವ್ಯವಸ್ಥೆ ನಿರ್ಮಾಣವಾಗಿದೆ. ಇದರ ಬಗ್ಗೆ ವಿಶೇಷವಾದಂತಹ ಗಮನವನ್ನು ಕೊಟ್ಟು ಕೆಲಸವಾಗುವಂತಹ ವ್ಯವಸ್ಥೆಯಾಗಬೇಕು. ರೈತ, ಸರ್ಕಾರ ಸಾಲವನ್ನು ಕಟ್ಟುತ್ತದೆ ಎನ್ನುವ ದೃಷ್ಟಿಯಿಂದ ಅವನೂ ಸಾಲವನ್ನು ವಾಪಸ್ಸು ಕೊಡಲಿಲ್ಲ. ಇದಕ್ಕೆ ಸರ್ಕಾರ ವ್ಯವಸ್ಥಿತವಾಗಿ ಕಟ್ಟಿಕೊಡುವಂತಹ ಕೆಲಸವನ್ನು ಮಾಡಿಲ್ಲ. ಈ ರೀತಿ ನೂರಾರು ಉದಾಹರಣೆಗಳು ನನ್ನ ತಾಲ್ಲೂಕಿನಲ್ಲಿದೆ. ಇದಕ್ಕೆ ಸರ್ಕಾರ ಗಮನವನ್ನು ನೀಡಿ ಈ ಪಾಳು ಬಾವಿಗಳು ಏನಿದೆ ಇದಕ್ಕೆ ಅಂತಿಮವಾಗಿ ತೆರೆ ಎಳೆಯುವಂತಹ ಕೆಲಸವಾಗಬೇಕು, ಹಾಗೂ ರೈತ ನೆಮ್ಮದಿಯಾಗಿ ಜೀವನ ಮಾಡುವಂತಹ ವಾತಾವರಣ ನಿರ್ಮಾಣವಾಗಬೇಕು.

ಅಧ್ಯಕ್ಷರು : ಈ ಗ್ರಾಮಾಂತರ ಪ್ರದೇಶಗಳಲ್ಲಿ ಕಮರ್ಷಿಯಲ್ ಬ್ಯಾಂಕ್ಗಳಿಂದ ಫೈನಾನ್ಸ್ ಮಾಡಿರತಕ್ಕಂಥವರು ಇದ್ದಾರೆ. ತೋಡಿಸಿದಂತಹ ಬಾವಿಗಳು ಪೂರ್ತಿ ಫೇಲ್ ಆಗಿರುತ್ತವೆ. ಅದರಲ್ಲಿ ಒಂದು ಗ್ಯಾಲನ್ ನೀರೂ ಬಂದಿರುವುದಿಲ್ಲ. ಆದರೆ ಇವರು ಮಾತ್ರ ಚಾರ್ಜ ಮಾಡಿ, ರೈತರ ಆಸ್ತಿಯೆಲ್ಲಾ ಹರಾಜು ಹಾಕಬೇಕು ಎಂದು ಕೋರ್ಟ್ಗೆ ಎಲ್ಲಾ ಪ್ರೊಸೀಡಿಂಗ್ಸ್ ಕಳುಹಿಸಿದರು. They have got the civil court jurisdiction. ಯಾವಾಗ ರೈತ ಸಾಲ ತೆಗೆದುಕೊಂಡಿರುತ್ತಾನೆ, ಬಾವಿಯಲ್ಲಿ ನೀರು ಬಿದ್ದು, ಅವನು ಸಾಲ ಕೊಡದೇ ಹೋದರೆ ಅವನ ಮೇಲೆ ಏನು ಜರುಗಿಸಿದರೂ ನಡೆಯುತ್ತದೆ. ಆದರೆ ಎಲ್ಲಾ ಫೇಲ್ ಆಗಿ ಬೂದಿ ಬರುತ್ತಿದ್ದು, ನಾವು ನಿಮಗೆ ಸಾಲ ಕೊಟ್ಟಿದ್ದೇವೆ, ನಮಗೆ ಏನಾಗಿದೆ ಎನ್ನುವ ಲೆಕ್ಕ ಬೇಡ ನಮಗೆ ಹಣ ಕೊಡಬೇಕು ಎಂದು ಹೇಳಿದರೆ ಹೇಗೆ? ಪಿ.ಎಲ್.ಡಿ. ಬ್ಯಾಂಕ್ನಲ್ಲಿ ವಜಾ ಮಾಡುತ್ತಾರೆ. ಅದು ಬೇರೆ ಪ್ರಶ್ನೆ. ಕಮರ್ಷಿಯಲ್ ಬ್ಯಾಂಕ್ನಲ್ಲಿಯೂ ಕೂಡ it should be made applicable. After all, the whole purpose is ....

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಆರ್ಡರ್ ಕಾಪಿ ಇದೆ. ನನ್ನ ತಾಲ್ಲೂಕಿನಲ್ಲಿ ಕೂಡ ಅದೇ ಪರಿಸ್ಥಿತಿ ಇದೆ. ಸ್ವತಃ ನನ್ನದೂ ಇದೆ. ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಮಾತ್ರ ಎಂದು ಹೇಳಿದರು. ದೊಡ್ಡ ರೈತರಿಗೂ ಕೂಡ ನಿಮ್ಮದೇ ಆದಂತಹ ಆರ್ಡರ್ ಇದೆ. 1988ರಲ್ಲಿ ಸಹಕಾರ ಸಂಘಗಳ ನಿಭಂದಕರ ಕಚೇರಿಯಿಂದ ರಾಜ್ಯದ ಎಲ್ಲಾ ಉಪ ವಿಭಾಗಗಳ ಕಮಿಷನರುಗಳಿಗೆ ಪತ್ರ ಹೋಗಿದೆ. ಈ ಸರ್ಕಾರ ಆದೇಶ ಕ್ರಮ ಸಂಖ್ಯೆ ಆರ್.ಡಿ.ಸಿ. 106

ಸಿ.ಎಲ್.ಎಸ್. 83 ದಿ: 11.3.83ರಲ್ಲಿ ಪ್ರಕಾರ ವಿಫಲ ಬಾವಿ ಸಹಾಯಧನ ಮಂಜೂರಾತಿ ಬಗ್ಗೆ.

ಅಧ್ಯಕ್ಷರು : ಗೊತ್ತಿದೆ, ನನಗೆ ಪರ್ಸನಲ್ ಆಗಿ ಗೊತ್ತಿದೆ.

ಶ್ರೀ ಅರಗ ಜ್ಞಾನೇಂದ್ರ : ಇದ್ದರೂ ಕೊಡುತ್ತಿಲ್ಲ. ಬಡ್ಡಿ ಬೆಳೆಯುತ್ತಾ ಹೋಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲರಿಗೂ ಅನ್ವಯವಾಗುವಂಥ ಜಿ.ಓ. ಇದ್ದರೂ ಅದರ ಅಡಿಯಲ್ಲಿ ಆ ಸವಲತ್ತುಗಳು ಸಿಗುತ್ತಾ ಇಲ್ಲ.

ಶ್ರೀ ಸಿ.ಹೆಚ್. ವಿಜಯಶಂಕರ್ : ಸನ್ಮಾನ್ಯ ಅಧ್ಯಕ್ಷರೆ, ಇನ್ನು ಐದು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸಿಬಿಡುತ್ತೇನೆ, ಅಧ್ಯಕ್ಷರೆ, ನಾನು ಶಾಸಕನಾಗುವುದಕ್ಕಿಂತಲೂ ಮೊದಲು ಇದ್ದಂಥ ಸರ್ಕಾರಿ ವರದಿಯನ್ನು ಹಾಗೂ ಸರ್ಕಾರಿ ದಾಖಲೆಯನ್ನು ತಾವು ದಯವಿಟ್ಟು ಪರಿಶೀಲನೆ ಮಾಡಿ, ಒಂದು ವರ್ಷಕ್ಕೆ ರೈತರ 160 ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡುವಂಥ ವ್ಯವಸ್ಥೆ ಇತ್ತು, ಅದು ಕಳೆದ ಎರಡು ವರ್ಷಗಳಿಂದ ಸಂಪೂರ್ಣವಾಗಿ ನಿಂತುಹೋಗಿದೆ. ಎರಡನೆಯದಾಗಿ, ಈಗ ನಾನು ಅನೇಕ ಅಧಿಕಾರಿಗಳನ್ನು ಕಂಡು ಒತ್ತಾಯ ಮಾಡಿದ ಮೇಲೆ, 25 ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡಬಹುದು ಎಂದು ಕಳುಹಿಸಿದ್ದಾರೆ.

ಏತಕ್ಕೆ ಈ ಒಂದು ವ್ಯವಸ್ಥೆ ಎಂದು ಎಂಬುದು ನನಗೆ ಅರ್ಥವಾಗುವುದಿಲ್ಲ. ನಾನು ಬಹಳ ವಿಶೇಷವಾಗಿ ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುತ್ತೇನೆ. ಹಿಂದೆ ಏನು ರೈತರ ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡುವಂಥ ವ್ಯವಸ್ಥೆ ಇತ್ತು, ಕಳೆದ 7-8 ವರ್ಷಗಳಿಂದ 140-160 ಆವರೇಜ್ ಬಂದಿದೆ. ನಾನು ಶಾಸಕನಾದ ಮೇಲೆ ಇದು ಜೀರೊ ಪರ್ಸೆಂಟೇಜ್ ಆಗಿದೆ. ರೈತರ ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡುವಂಥ ವಿಚಾರದಲ್ಲಿ ಕೆ.ಇ.ಬಿ.ಗೆ ಎಷ್ಟು ಸಾರಿ ನಾನು ಹೋಗಿ ಮನವಿಯನ್ನು ಕೊಟ್ಟಿದ್ದೇನೆ. ಕೊನೆಗೆ ಅನೇಕ ರೀತಿಯ ಒತ್ತಾಯ ಮಾಡಿದಾಗ ಒಟ್ಟು ಅಂತಹ 25 ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡಬಹುದು ಎಂದು ಹೇಳಿ ಕಳುಹಿಸಿದ್ದಾರೆ. ಮೊನ್ನೆ ನನ್ನ ಕಛೇರಿಯ ಮುಂದೆ ರೈತರ ಕುಸ್ತಿ ನಡೆಯಿತು, ಮೊದಲು ನನಗೆ ಸರ್ವೀಸ್ ಕೊಡಬೇಕು ಎಂದು.

ನಾನು ಕೆ.ಇ.ಬಿ.ಯ ಅಧಿಕಾರಿಗಳನ್ನು ಕರೆಸುವುದೇ ಬಿಟ್ಟುಬಿಟ್ಟೆ. ಅಪ್ಪಾ ನಿಮಗೆ ತಿಳಿದವರೆಗೆ ಸರ್ವೀಸ್ ಕೊಟ್ಟುಕೊಳ್ಳಿ ನಿಮ್ಮ ಸಹವಾಸ ಬೇಡ ಎಂದು. ಏಕೆ, ಈ ವ್ಯವಸ್ಥೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಆದುದರಿಂದ ಈ ವ್ಯವಸ್ಥೆಯಲ್ಲಿ ಸ್ಪಷ್ಟವಾಗಿ ಸರ್ಕಾರ ಏಕೆ ಈ ಧೋರಣೆಯನ್ನು ನನ್ನ ಕ್ಷೇತ್ರದ ಬಗ್ಗೆ ತೆಗೆದುಕೊಂಡಿದೆ ಎಂಬುವುದರ ಬಗ್ಗೆ ಮಾಹಿತಿಯನ್ನು ಕೊಡಬೇಕು, ಇದನ್ನು ಸರಿಪಡಿಸಿಕೊಡುವಂಥ ಕೆಲಸ ಮಾಡಬೇಕು, ಏನು ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ನಿಷ್ಕ್ರಿಯಗೊಂಡಿದೆ, ಸ್ಥಗಿತಗೊಂಡ ಈ ವಾತಾವರಣ ಏನು ಇದೆ ನನ್ನ ಕ್ಷೇತ್ರದಲ್ಲಿ ಅದಕ್ಕೆ ಸಂಬಂಧಪಟ್ಟಂಥ ಎಲ್ಲಾ ಅಧಿಕಾರಿಗಳಿಂದ ಸ್ಪಷ್ಟವಾದ ಮಾಹಿತಿಯನ್ನು ಪಡೆದು ಈ ಒಂದು ನ್ಯಾಯವನ್ನು ಒದಗಿಸಿಕೊಡಬೇಕು ಮತ್ತೆ ನಾನು ಅರಣ್ಯ ಇಲಾಖೆಯ ಬಗ್ಗೆ ಕೊಟ್ಟಂಥ ಮಾಹಿತಿಗಳೇನಿದೆ ಆ ಮಾಹಿತಿಗೆ ಸಂಬಂಧಪಟ್ಟಂಥ ವರದಿಯನ್ನು ಬೇಡಿಕೆಗಳ ಮೇಲೆ ಉತ್ತರಿಸುವಂಥ ಸಮಯದಲ್ಲಿ ಸರ್ಕಾರ ಕೊಡಬೇಕು ಎನ್ನುವಂಥ ಮನವಿಯನ್ನು ಈ ಸಂದರ್ಭದಲ್ಲಿ ಮಾಡಿಕೊಂಡು ನಮ್ಮ ಈ ಭಾವನೆಯನ್ನು ವ್ಯಕ್ತಮಾಡಲಿಕ್ಕೆ, ನಮ್ಮ ಈ ನೋವನ್ನು

ಹಂಚಿಕೊಳ್ಳಲಿಕ್ಕೆ ತಾವು ಮುಕ್ತವಾಗಿ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೆ ತಮಗೆ ಈ ಸಮಯದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸಿ ಧನ್ಯವಾದಗಳನ್ನು ಹೇಳಿ, ಸರ್ಕಾರ ಇದಕ್ಕೆಲ್ಲವೂ ಕೂಡ ಸ್ಪಷ್ಟವಾಗಿ ಮಾಹಿತಿಯನ್ನು ಕೊಡುತ್ತದೆ ಎಂಬ ಭರವಸೆಯನ್ನು ಇಟ್ಟುಕೊಂಡು ಮತ್ತೊಮ್ಮೆ ನನ್ನ ಧನ್ಯವಾದಗಳನ್ನರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಸನ್ಮಾನ್ಯ ಅಧ್ಯಕ್ಷರೆ, 1996-97ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ವಿಶ್ವದಲ್ಲೆ ಅತೀ ವಿಳಂಬವಾಗಿರತಕ್ಕ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಸರ್ಕಾರದ ಗಮನವನ್ನು ಸೆಳೆದು ಕೆಲವು ಸಲಹೆ ಸೂಚನೆಗಳನ್ನು ಮತ್ತು ಅಭಿಪ್ರಾಯಗಳನ್ನು ನೀಡಲಿಕ್ಕೆ ಬಯಸುತ್ತೇನೆ. 1963-64ರಲ್ಲಿ ಈ ಕೃಷ್ಣಾ ಮೇಲ್ದಂಡೆ ಯೋಜನೆಯ ಸರ್ವೆ ಕೆಲಸ ಹಾಗೂ ಪ್ರಾಥಮಿಕ ಹಂತದ ಕೆಲಸಗಳನ್ನು ಪ್ರಾರಂಭ ಮಾಡಿದರು. 1964ನೇ ಮೇ ತಿಂಗಳಿನಲ್ಲಿ ಮಾಜಿ ಪ್ರಧಾನಿ ದಿವಂಗತ ಲಾಲ್ಬಹದ್ದೂರ್ ಶಾಸ್ತ್ರಿಯವರು ಈ ಒಂದು ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಡಿಗಲ್ಲನ್ನು ಹಾಕಿದರು.

ಅಂದಿನ ಅಂದಾಜು ವೆಚ್ಚ ಸುಮಾರು 120 ಕೋಟಿ ರೂಪಾಯಿಗಳಷ್ಟಿತ್ತು. ಆದರೆ 1968-69ನೇ ಸಾಲಿನವರೆಗೂ ಸರ್ಕಾರ ಕೆಲಸವನ್ನು ಪ್ರಾರಂಭ ಮಾಡಲಿಲ್ಲ. ಆಗ ಮತ್ತೆ ಈ ಯೋಜನೆಯನ್ನು 1976-77ರಲ್ಲಿ ಪರಿಷ್ಕರಿಸಿ ಸುಮಾರು 283 ಕೋಟಿ ರೂಪಾಯಿಗಳ ಅಂದಾಜು ಪಟ್ಟಿಯನ್ನು ತಯಾರಿಸಿದರು, ಆದರೆ 1976-77 ರಿಂದಲೂ ಕೂಡ ಕೆಲಸ ಯಾವ ಹಂತದಲ್ಲಿ ನಡೆಯಬೇಕಾಗಿತ್ತೋ ನಡೆಯಲಿಲ್ಲ. ಮತ್ತೆ 1986-87ರಲ್ಲಿ ಅಂದಾಜು ಪತ್ರಿಕೆಯನ್ನು ಪರಿಷ್ಕರಿಸಿ ಸುಮಾರು 1214 ಕೋಟಿ ರೂಪಾಯಿಗಳ ಅಂದಾಜು ಪಟ್ಟಿಗೆ ಮಂಜೂರಾತಿ ದೊರೆಯಿತು ಮತ್ತು ಸೆಂಟ್ರಲ್ ವಾಟರ್ ಕಮಿಷನ್ನವರೂ ಕೂಡ ಮೊದಲನೆ ಹಂತ ಹಾಗೂ ಉಳಿದ ಮೂರು ಹಂತಗಳಿಗೂ ಪರವಾನಿಗೆಯನ್ನು ನೀಡಿದರು. 1993-94ರಲ್ಲಿ ಮತ್ತೆ ಅಂದಾಜು ಪತ್ರಿಕೆಯನ್ನು ಪರಿಷ್ಕರಿಸಿ 3427 ಕೋಟಿ ರೂಪಾಯಿಗೆ ಮತ್ತೆ ಮಂಜೂರಾತಿಯನ್ನು ಸರ್ಕಾರ ಕೊಟ್ಟಿತು. 1996-97ನೇ ಸಾಲಿನಲ್ಲಿ ಸರ್ಕಾರ ಏನು ಈ ಯೋಜನೆಗೆ ಒಂದು ಸಾವಿರ ಕೋಟಿ ರೂಪಾಯಿಗಳ ಒದಗಿಸುತ್ತೇವೆ ಎಂದು ಭರವಸೆಯನ್ನು ನೀಡಿದ್ದಾರೆ ಅದರಲ್ಲಿ ಕೇವಲ 356 ಕೋಟಿ ರೂಪಾಯಿಗಳನ್ನು ಮಾತ್ರ ಸರ್ಕಾರ ಒದಗಿಸಿದೆ. ಇನ್ನು 500 ಕೋಟಿ ರೂಪಾಯಿಗಳನ್ನು ಈ ಬಾಂಡ್ಗಳ ಮೂಲಕ ಸಂಗ್ರಹ ಮಾಡಲಿಕ್ಕೆ "ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ" ಸರ್ಕಾರ ಏನು ಅವಕಾಶವನ್ನು ಕೊಟ್ಟಿದ್ದೆ, ಅವೆರಡೂ ಸೇರಿದರೂ ಕೂಡ ಒಂದು ಸಾವಿರ ಕೋಟಿ ಆಗುವುದಿಲ್ಲ.

ಹೀಗೆ ಯೋಜನೆ ಮುಗಿಯಬೇಕಾದರೆ ಸುಮಾರು ಇನ್ನೂ 4000 ಕೋಟಿಗಿಂತಲೂ ಹೆಚ್ಚು ಹಣವನ್ನು ಸರ್ಕಾರ ಕೊಡಬೇಕಾಗುತ್ತದೆ. ಆದರೆ ಈಗ ಸರ್ಕಾರ ಕೊಡುವ ಪ್ರಮಾಣದಲ್ಲಿ ಪ್ರತಿ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇ ಆದರೆ ಈ ಯೋಜನೆಯನ್ನು ಎರಡು ಸಾವಿರ ಇಸವಿಯೊಳಗೆ ಮುಗಿಸಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಲಿಕ್ಕೆ ಬಯಸುತ್ತೇನೆ. ಅದಕ್ಕಾಗಿ ಸರ್ಕಾರ ಪ್ರತಿ ವರ್ಷ ಸುಮಾರು 1500 ಕೋಟಿ ರೂಪಾಯಿಯನ್ನಾದರೂ ಕೊಡಲೇ

ಬೇಕೆಂದು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ. ಅಧ್ಯಕ್ಷರೆ, ಈ ಯೋಜನೆಯಲ್ಲಿ ಇನ್ನೂ ಆಗಬೇಕಾದಂಥ ಮುಖ್ಯ ಕೆಲಸಗಳು ಅಂದರೆ ಬಲದಂಡೆ ಮುಖ್ಯ ಕಾಲುವೆ. ಬಲದಂಡೆ ಮುಖ್ಯ ಕಾಲುವೆ ಮತ್ತು ಶಾಖಾ ಕಾಲುವೆ ಎಲ್ಲಾ ಸೇರಿ ಸುಮಾರು ಒಂದು ಸಾವಿರ ಕಿಲೋಮೀಟರ್ಗಿಂತಲೂ ಹೆಚ್ಚು ಉದ್ದದ ಕಾಲುವೆ ಕೆಲಸ ಇದೆ. ಆದರೆ ಆಲಮಟ್ಟಿ ಎಡದಂಡೆ ಕಾಲುವೆ ಈಗ 105 ಕಿಲೋಮೀಟರ್ನಲ್ಲಿ ಕೇವಲ 10 ಕಿಲೋಮೀಟರ್ನ ಕೆಲಸ ಮಾತ್ರ ಆಗಿದೆ, ಇನ್ನೂ 95 ಕಿಲೋ ಮೀಟರ್ನ ಕೆಲಸ ಆಗಬೇಕಾಗಿದೆ.

ನಾರಾಯಣಪುರ ಬಲದಂಡೆ ಕಾಲುವೆ ಉದ್ದ 157 ಕಿಲೋಮೀಟರ್ನಲ್ಲಿ ಕೇವಲ 40 ಕಿ.ಮೀ. ಮಾತ್ರ ಈಗಾಗಲೇ ಆಗಿದೆ. ಇನ್ನೂ 117 ಕಿ.ಮೀ. ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಆದರೆ ಆಲಮಟ್ಟಿ ಬಲದಂಡೆ ಕಾಲುವೆ ಉದ್ದ 121 ಕಿ.ಮೀ. ಇದ್ದರೆ ಈ ಕೆಲಸ ಇನ್ನೂ ಕೂಡ ಪ್ರಾರಂಭವಾಗಿಲ್ಲ, ಇದರ ಬಗ್ಗೆ ಅಂದಾಜು ಪತ್ರಿಕೆಯೂ ಕೂಡ ತಯಾರಾಗಿಲ್ಲ, ಸರ್ವೆ ಕೆಲಸ ಕೂಡ ಪೂರ್ಣಗೊಳಿಸಿಲ್ಲ. ಈ ಯೋಜನೆ ಕೆಳಗೆ ಬರತಕ್ಕಂಥ ಏತ ನೀರಾವರಿ ಕೆಲಸಗಳನ್ನು ಕೂಡ ಸರ್ಕಾರ ಮಾಡಿಲ್ಲ. ಈ ಏತ ನೀರಾವರಿ ಕೆಲಸ ಮಾಡಬೇಕಾದರೆ ಈ ವರ್ಷ ಅಣೆಕಟ್ಟಿನ ಕೆಲಸ ಭರದಿಂದ ಈಗೇನು ಸಾಗಿದೆ, ಅದರಲ್ಲಿ ಹೆಚ್ಚಿನ ಪ್ರಮಾಣದ ಕೆಲಸ ಆದರೆ, ಮುಂದಿನ ವರ್ಷ ಅಣೆಕಟ್ಟಿನ ಹಿಂಭಾಗದ ನೀರಿನಲ್ಲಿ ಈ ಏತ ನೀರಾವರಿ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

ಈ ಮುಳವಾಡ ಏತ ನೀರಾವರಿಗೆ ಇಂದಿನ ದರಗಳಲ್ಲಿ ಅಂದಾಜು ವೆಚ್ಚ 218 ಕೋಟಿ ರೂಪಾಯಿ ಬೇಕಾಗುತ್ತದೆ. ಸರ್ಕಾರ 1996-97ನೇ ಸಾಲಿನಲ್ಲಿ ಕೇವಲ 3.50 ಕೋಟಿಗಳನ್ನು ಮಾತ್ರ ಒದಗಿಸಿದೆ, ಈ ಪ್ರಮಾಣದಲ್ಲಿ ಹಣವನ್ನು ಒದಗಿಸಿದ್ದೆ ಆದರೆ ಈ ಮುಳವಾಡ ಏತ ನೀರಾವರಿ ಯೋಜನೆ ಏನು ಇದೆ, ಅದು ಆಗಲಿಕ್ಕೆ ಸಾಧ್ಯವಿಲ್ಲ ಎಂದು ತಮ್ಮ ಮುಂದೆ ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ ರಾಮಪುರ ಏತ ನೀರಾವರಿ ಇದೆ, ಇಂಡಿ ಏತ ನೀರಾವರಿ ಇದೆ, ಇವು ಯಾವ ಕೆಲಸವನ್ನೂ ಕೂಡ ಸರ್ಕಾರ ಇನ್ನೂ ಪ್ರಾರಂಭ ಮಾಡಿಲ್ಲ. ಇಂಡಿ ಏತ ನೀರಾವರಿಗೆ ಸುಮಾರು 100 ಕೋಟಿ ರೂಪಾಯಿ - ಬೇಕಾಗುತ್ತದೆ, ಈ ರಾಮಪುರ ಏತ ನೀರಾವರಿಗೆ ಸುಮಾರು 40 ಕೋಟಿ ರೂಪಾಯಿ ಬೇಕಾಗುತ್ತದೆ. ಈ ಯೋಜನೆಗಳಿಗೆ ಕೂಡ ಸರ್ಕಾರ ಬಜೆಟ್ನಲ್ಲಿ ಹಣ ಒದಗಿಸಿಲ್ಲ ಎನ್ನತಕ್ಕಂಥ ಒಂದು ವಿಚಾರವನ್ನು ಸರ್ಕಾರದ ಮುಂದಿಡಲಿಕ್ಕೆ ಬಯಸುತ್ತೇನೆ.

ವಿಶ್ವಬ್ಯಾಂಕ್ನ ಸಲಹೆಯಂತೆ ಏನು ಪುನರ್ ವಸತಿ ಕೆಲಸ ಆಗಬೇಕಾಗಿತ್ತು, ಯಾವ ಪ್ರಮಾಣದಲ್ಲಿ ಆಗಬೇಕಾಗಿತ್ತು. ಆ ಪ್ರಮಾಣದಲ್ಲಿ ಆಗಿಲ್ಲ. ಈಗಾಗಲೇ ಸುಮಾರು 6-7 ಹಳ್ಳಿಗಳು ಮುಳುಗಡೆಯಾಗುತ್ತವೆ, ಮುಳುಗಡೆಯಾಗತಕ್ಕಂಥ ಹಳ್ಳಿಗಳಲ್ಲಿ ಏನು ಮನೆಗಳಿದ್ದಾವೆ ಆ ಮನೆಗಳ ಅಂದಾಜು ಪತ್ರಿಕೆಯನ್ನೂ ಕೂಡ ಪೂರ್ಣಗೊಳಿಸಿಲ್ಲ, ಅದರಿಂದ ರೈತರಿಗೆ ಮತ್ತು ಹಳ್ಳಿಯ ಜನರಿಗೆ ಬಹಳ ತೊಂದರೆಯಾಗಿದೆ, ಅದನ್ನು ಸರ್ಕಾರ ಆದಷ್ಟು ಬೇಗ ಮಾಡಿಸಬೇಕು, ಮತ್ತು ರೈತರಿಗೆ ಹಾಗೂ ಆ ಗ್ರಾಮದಲ್ಲಿ ವಾಸವಾಗಿರತಕ್ಕವರಿಗೆ ಮನೆಗಳಿಗೆ ಯೋಗ್ಯ ಕಿಮ್ಮತ್ತನ್ನು ಗೊತ್ತು ಮಾಡಿ ಸರ್ಕಾರ ಕೊಡಿಸುವಂಥ ಕೆಲಸವನ್ನು ಮಾಡಬೇಕು.

ಬಾಗಲಕೋಟೆ ಸ್ಥಳಾಂತರದ ಕೆಲಸ ಕೂಡ ಇನ್ನೂ ಆಗಿಲ್ಲ. ಕೂಡಲಸಂಗಮ ದೇವಸ್ಥಾನದ ಪುನರ್ ವಸತಿ ಕೆಲಸ ಕೂಡ ಆಗಿಲ್ಲ. ಇದೆಲ್ಲವನ್ನೂ ನೋಡಿದರೆ ಎರಡು ಸಾವಿರ ಇಸವಿಯೊಳಗೆ ಈ ಯೋಜನೆಯನ್ನು ಮುಗಿಸುವುದು ಅಸಾಧ್ಯವೆಂದು ಅನುಮಾನ ಬರುತ್ತಾ ಇದೆ. ಅದಕ್ಕಾಗಿ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಪ್ರತಿ ವರ್ಷ ಕಡಿಮೆ ಎಂದರೂ 1500 ಕೋಟಿ ರೂಪಾಯಿಗಳ ಬಜೆಟ್ ಪ್ರಾವಿಷನ್ ಮಾಡಬೇಕು. ಬರೀ ಬಜೆಟ್ ಪ್ರಾವಿಷನ್ ಮಾಡಿದರೆ ಆಗುವುದಿಲ್ಲ. ಪ್ರತಿ ತಿಂಗಳು ಯಾವ ಯಾವ ಪ್ರಮಾಣದಲ್ಲಿ ಕೆಲಸವಾಗುತ್ತದೆ. ಆ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡಬೇಕು. ಎಲ್.ಓ.ಸಿ. ಯನ್ನು ಕೊಡಬೇಕು, ಎಲ್.ಓ.ಸಿ. ಯನ್ನು ಕೊಡದೆ ಬರೀ ಬಜೆಟ್ ಪ್ರಾವಿಷನ್ ಮಾಡಿದರೆ ಕೆಲಸವನ್ನು ಮಾಡುವುದಕ್ಕೆ ಶಕ್ಯವಾಗುವುದಿಲ್ಲವೆನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರದ ಮುಂದಿಡಲು ಬಯಸುತ್ತೇನೆ. ಬಜೆಟ್ನಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್ಗೆ ಹಣವನ್ನು ಒದಗಿಸಿದ್ದೀರಿ. ಆ ಹಣ ಮುಗಿಯುವವರೆಗೆ ಖರ್ಚು ಮಾಡುವುದಕ್ಕೆ ಯಾವುದೇ ಅಡೆತಡೆಗಳು ಇರಬಾರದು. ಪ್ರತಿ ತಿಂಗಳು ಎಲ್.ಓ.ಸಿ. ಯನ್ನು ತೆಗೆದುಕೊಂಡು ಕೆಲಸವನ್ನು ಮಾಡಬೇಕೆಂಬ ನಿರ್ಬಂಧವನ್ನು ಹಾಕಬಾರದು. ಆ ನಿರ್ಬಂಧವನ್ನು ತೆಗೆಯಬೇಕೆಂದು ನಾನು ಸಲಹೆ ಮಾಡುತ್ತೇನೆ. ಘಟಪ್ರಭಾ ಯೋಜನೆ ಅಣೆಕಟ್ಟಿನ ಕೆಲಸ ಮುಗಿದು ಸುಮಾರು 20 ವರ್ಷಗಳಾದರೂ ಕೂಡ, ಘಟಪ್ರಭಾ ಬಲದಂಡೆ ಕಾಲುವೆ ಕೆಲಸ ಇದುವರೆಗೂ ಆಗಿಲ್ಲ. ಸುಮಾರು 118 ಕಿ.ಮೀ. ಬಲದಂಡೆ ಕಾಲುವೆಯಾಗಬೇಕಾಗಿತ್ತು. ಈ ವರ್ಷ ಕೇವಲ 8 ಕಿ.ಮೀ. ಟೆಂಡರ್ ಆಗಿದೆ. ಎಸ್ಟಿಮೇಟ್ ಮಂಜೂರು ಆಗಿದೆ. ಇನ್ನು 110 ಕಿ.ಮೀ. ಸರ್ಕಾರ ಮಾಡಬೇಕಾಗಿತ್ತು.

ಅದಕ್ಕೆ 384 ಕೋಟಿ ರೂಪಾಯಿಗಳಾಗಬಹುದು. ಈಗ ಸರ್ಕಾರ ಬಲದಂಡೆ ಕಾಲುವೆಗೆ ಕೇವಲ 70 ಲಕ್ಷ ರೂಪಾಯಿಗಳನ್ನು ಅನುದಾನದಲ್ಲಿ ಒದಗಿಸಿದೆ. ಈಗ ಸರ್ಕಾರ ಬಲದಂಡೆ ಕಾಲುವೆಗೆ 70 ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಈ ವರ್ಷ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ 8 ಕಿ.ಮೀ. ವರೆಗೆ ಏನು ಟೆಂಡರ್ ಆಗಿದೆ, ಆ ಕೆಲಸವಾಗುವುದಿಲ್ಲವೆನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದಕ್ಕೆ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಎರಡು ಸಾವಿರ ಇಸವಿಯೊಳಗೆ ಈ ಘಟಪ್ರಭ ಬಲದಂಡೆ ಕಾಲುವೆಯ ಕೆಲಸವನ್ನು ಮುಗಿಸಬೇಕಾದರೆ, ಸರ್ಕಾರ ಪ್ರತಿ ವರ್ಷ ಸುಮಾರು 150 ಕೋಟಿ ರೂಪಾಯಿಗಳನ್ನಾದರೂ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಬರೀ ಬಜೆಟ್ನಲ್ಲಿ ಪ್ರಾವಿಷನ್ ಮಾಡಬಾರದು. ಅದಕ್ಕೂ ಕೂಡ ಎಲ್.ಓ.ಸಿ. ಯ ನಿರ್ಬಂಧವಿದೆ, ಪ್ರತಿ ತಿಂಗಳು ವಿಧಾನಸೌಧಕ್ಕೆ ಬಂದು ತೆಗೆದುಕೊಂಡು ಹೋಗಬೇಕು. ಅವರು ಎಷ್ಟು ಬಜೆಟ್ನಲ್ಲಿ ಹಣವನ್ನು ಒದಗಿಸಿದ್ದಾರೆ ಅಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಸರ್ಕಾರ ಅಧಿಕಾರಿಗಳಿಗೆ ಮುಕ್ತವಾದ ಅವಕಾಶವನ್ನು ಕೊಡಬೇಕು. ಆಗ ಮಾತ್ರ ನಿಗದಿತ ಅವಧಿಯಲ್ಲಿ ಅಂದರೆ ಎರಡು ಸಾವಿರ ಇಸವಿಯಲ್ಲಿ ಮುಗಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅದು ಕೇವಲ ಕನಸಾಗಿಯೆ ಉಳಿಯುತ್ತದೆ. ಈ ಯೋಜನೆಗಳು ಬಂದಾಗ ತಾವು ನೋಡಿದ್ದೀರಿ.

ನಾವು ಕೂಡ ಪತ್ರಿಕೆಯಲ್ಲಿ ಓದಿದ್ದೇವೆ, ಯೋಜನೆಗಳಾಗಬಾರದೆಂದು ಆ ಭಾಗದಲ್ಲಿರುವಂತಹ ಮುಳುಗಡೆ ಪ್ರದೇಶದಲ್ಲಿ ಬರುವಂತಹ ಜನರು ಪ್ರತಿಭಟನೆಯನ್ನು ಮಾಡುವಂಥಾದ್ದನ್ನು ನಾವು ಕಂಡಿದ್ದೇವೆ. ಆದರೆ ನಮ್ಮ ಬಿಜಾಪುರದ ಜನರು ಪ್ರತಿಭಟನೆಯನ್ನು ಮಾಡಲಿಲ್ಲ. ದಿವಂಗತ ಪ್ರಧಾನ ಮಂತ್ರಿಗಳಾದ ಶ್ರೀ ಲಾಲ್

ಬಹದ್ದೂರ್ ಶಾಸ್ತ್ರಿ, ಶ್ರೀಮತಿ ಇಂದಿರಾಗಾಂಧಿಯವರನ್ನು ಕರೆದು ಸ್ವಾಗತ ಮಾಡಿ, ಅವರನ್ನು ಬಂಗಾರದಲ್ಲಿ ತೂಗಿದರು. ನಿಗದಿತ ಅವಧಿಯಲ್ಲಿ ಯೋಜನೆ ಆಗಲಿ, ನಮ್ಮ ಭೂಮಿಯನ್ನು ತೆಗೆದುಕೊಂಡರೂ ಚಿಂತೆ ಇಲ್ಲ, ನಮಗೆ ಅನ್ಯಾಯವಾದರೂ ಚಿಂತೆ ಇಲ್ಲ. ಈ ನಾಡಿಗೆ, ಈ ರಾಷ್ಟ್ರಕ್ಕೆ ಒಂದು ವರದಾನವಾಗುವಂತಹ ಯೋಜನೆ ಮಾಡಲಿ ಎಂದು ಬಯಸಿದರು. ಸುಮಾರು 34 ವರ್ಷಗಳು ಕಳೆದರೂ ಕೂಡ ಈ ಯೋಜನೆ ಕಾರ್ಯಗತವಾಗಿಲ್ಲ. ನನ್ನ ಸ್ಪಷ್ಟ ಅಭಿಪ್ರಾಯವನ್ನು ಹೇಳಬೇಕೆಂದರೆ ಈ ಯೋಜನೆ ಕೇವಲ ಅಣೆಕಟ್ಟನ್ನು ಕಟ್ಟಿ ನೀರನ್ನು ನಿಲ್ಲಿಸುವಂತಹ ಕೆಲಸವನ್ನು ಮಾಡಲು ಪ್ರಯತ್ನ ಮಾಡುತ್ತೇವೆಯೆ ಹೊರತು, ಈ ಬಿಜಾಪುರ ಜಿಲ್ಲೆಗೆ ಬರುವಂತಹ ಏತ ನೀರಾವರಿ ಮತ್ತು ಕಾಲುವೆಗಳು ಏನಿವೆ, ಅವುಗಳನ್ನು ಮುಗಿಸಿ ಅನುಕೂಲ ಮಾಡಿಕೊಡುತ್ತಾರೋ ಅಥವಾ ಇಲ್ಲವೊ ಎಂಬ ಭಯ ನಮ್ಮಲ್ಲಿ ಮತ್ತು ಜನರಲ್ಲಿ ಮೂಡಿದೆ. ಅದಕ್ಕಾಗಿ ನಾನು. ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ಯೋಜನೆಯನ್ನು ಎರಡು ಸಾವಿರ ಇಸವಿಯೊಳಗೆ ಮುಗಿಸಬೇಕಾದರೆ ಪ್ರತಿ ವರ್ಷ 1500 ಕೋಟಿ ರೂಪಾಯಿಗಳನ್ನು ಕೊಡಬೇಕು ಮತ್ತು ಅಷ್ಟು ಹಣವನ್ನು ಖರ್ಚು ಆಗುವ ರೀತಿಯಲ್ಲಿ ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕು. ಹಣವನ್ನು ಖರ್ಚು ಮಾಡಿದೆ.

ಲ್ಯಾಪ್ಸ್ ಆಗಿರುವಂಥ ಆಗಿರುವಂಥ ಎಷ್ಟೋ ಪ್ರಸಂಗಗಳನ್ನು ನಾವು ಈ ಯೋಜನೆಯಲ್ಲಿ ನೋಡಿದ್ದೇವೆ. ಅದಕ್ಕೆ ಸರ್ಕಾರ ಆಸಕ್ತಿ ವಹಿಸಿ ಈ ಸಾರಿಗೆ, ಈ ದೇಶಕ್ಕೆ ಒಂದು ವರದಾನವಾಗಿರುವ ಕೃಷ್ಣ ಮೇಲ್ದಂಡೆ ಯೋಜನೆಯನ್ನು ಮುಗಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಸಣ್ಣ ನೀರಾವರಿಯ ವಿಚಾರದಲ್ಲಿ ರಾಜ್ಯದಲ್ಲಿ ಸುಮಾರು ನಾಲ್ಕು ನೂರು ಕೆರೆಗಳು ಬಂದಾರೆ (ಒಡ್ಡು) ಬ್ಯಾರೇಜ್ಗಳು ಇವೆ, ಇವುಗಳಿಂದ ಸುಮಾರು ಐದು ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿಯಾಗುತ್ತದೆ. ಆದರೆ ಇದು ಕೇವಲ ಕಾಗದದಲ್ಲಿ ಐದು ಲಕ್ಷ ಹೆಕ್ಟೇರ್ಗೆ ನೀರಾವರಿಯಾಗುತ್ತದೆ. ನಿಜವಾಗಿಯೂ ಅಷ್ಟು ಭೂಮಿಗೆ ನೀರು ಸಿಗುತ್ತಾ ಇಲ್ಲ. ನೀರು ಸಿಗದೇ ಇದ್ದರೂ ಸರ್ಕಾರದವರು ಏನು ಮಾಡುತ್ತಾರೆಂದರೆ ವಾಟರ್ ಟ್ಯಾಕ್ಸ್ ಅನ್ನು ರೈತರಿಗೆ ಹಾಕುತ್ತಾರೆ. ಎಲ್ಲಾ ರೈತರು ಕಾನೂನನ್ನು ತಿಳಿದಿರುವವರಲ್ಲ. ಕೊನೆ ಭಾಗದಲ್ಲಿರುವಂತಹ ರೈತರು ನೀರು ಬಂದಿಲ್ಲವೆಂದು ಕರವನ್ನು ತುಂಬದೇ ಇರುವಂತಹ ಎಷ್ಟೋ ನಿದರ್ಶನಗಳಿವೆ. ಹೀಗೆ ಕೆರೆ ತುಂಬಿದೆ. ಇರುವವರ ಜಮೀನನ್ನು ನೀರಾವರಿ ಇಲಾಖೆ ಅಧಿಕಾರಿಗಳು ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಸೇರಿ, ಆ ರೈತರ ಜಮೀನನ್ನು ಸರ್ಕಾರದ್ದೆಂದು ಬರೆದು ಏನಿದೆ, ಅದರ ಅಭಿವೃದ್ಧಿಗಾಗಲೀ ಅಥವಾ ಮತ್ತೆ ಯಾವುದಕ್ಕೂ ಸಾಲ ಸೌಲಭ್ಯ ಸಿಗದ ರೀತಿಯಲ್ಲಿ ರೈತರಿಗೆ ತೊಂದರೆ ಮಾಡುತ್ತಿದ್ದಾರೆ. ಇಂಥ ಪರಿಸ್ಥಿತಿ ತಮ್ಮ ಕಥೆಗಳಲ್ಲಿ ಇದೆಯೋ, ಇಲ್ಲವೋ ಗೊತ್ತಿಲ್ಲ. ನಮ್ಮ ಕಡೆ ಘಟಪ್ರಭಾ ಲೆಫ್ಟ್ ಬ್ಯಾಂಕ್ ಕೆನಾಲ್ನಲ್ಲಿ ಮುಧೋಳ, ಬೀಳಗಿ, ಜಮಖಂಡಿ, ತಾಲ್ಲೂಕಿನ ಕೆಲವು ರೈತರಿಗೆ ಬಹಳ ಅನಾನುಕೂಲವಾಗಿದೆ.

ಸರ್ಕಾರವೆಂದು ಬರೆದಿದ್ದರಿಂದ ರೈತರ ಮಾಲಿಕತ್ವವೇ ಹೋಗಿದೆ ಎನ್ನುವಂತಹ ರೀತಿಯಲ್ಲಿ ರೈತರು ಭಯ ಪಡುವಂತಹ ಪರಿಸ್ಥಿತಿ ಬಂದಿದೆ. ಯಾವ ರೈತರಿಗೆ ನೀರು ಸಿಕ್ಕಿದೆ ಅಂತಹ ರೈತರಿಂದ ಕರವನ್ನು ವಸೂಲಿ ಮಾಡುವಂತಹ ವ್ಯವಸ್ಥೆಯಾಗಬೇಕು. ನಾವು ವಾಟರ್ ಟ್ಯಾಕ್ಸ್‌ನ್ನು ಏನು ಹಾಕುತ್ತೇವೆ, ಅದನ್ನು ಪರಿಷ್ಕರಿಸಬೇಕು. ನಾವು ನಿಜವಾಗಿ ಎಷ್ಟು ನೀರನ್ನು ಉಪಯೋಗಿಸುತ್ತೇವೆ, ಅಷ್ಟಕ್ಕೆ ಮಾತ್ರ ಕರವನ್ನು ಹಾಕಬೇಕು. ಈ ರೀತಿಯಲ್ಲಿ ಕಾನೂನನ್ನು ತಿದ್ದುಪಡಿ ಮಾಡಬೇಕೆಂದು ನಾನು ತಮ್ಮ ಮೂಲಕ

ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಸರ್ಕಾರ ಪ್ರತಿ ಹೆಕ್ಟೇರ್‌ಗೆ 129 ರೂಪಾಯಿಗಳನ್ನು ಮಾತ್ರ ಸಣ್ಣ ನೀರಾವರಿ ಕೆರೆಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ಕೊಡುತ್ತಿದೆ. ಇದರಿಂದ ಆ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಈಗ ಕೆನಾಲ್ ದುರಸ್ತಿ ಆಗಿರಬಹುದು. ಔಟ್ಲೇ ದುರಸ್ತಿಯಾಗಿರಬಹುದು ಅದನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದರಿಂದ ನೀರು ಹರಿದು ಹೋಗುತ್ತದೆ.

ಇದರಿಂದ ರಸ್ತೆಗಳು ಹಾಳಾಗುತ್ತದೆ. ಅಲ್ಲದೆ ಭೂಮಿ ಜೊಳ್ಳಾಗುತ್ತದೆ. ರೈತರಿಗೆ ಉಪಯೋಗವಾಗುವುದಿಲ್ಲ. ಆದುದರಿಂದ ನಾನು ಸರ್ಕಾರದಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ನಿರ್ವಹಣಾ ವೆಚ್ಚ ಪ್ರತಿ ವರ್ಷ 129 ರೂಪಾಯಿಗಳನ್ನು ಏನು ಕೊಡುತ್ತಿದ್ದೀರಿ, ಅದರ ಬದಲಿಗೆ 250 ರೂಪಾಯಿಗಳನ್ನು ಕೊಟ್ಟರೆ ಮಾತ್ರ ಈ ನಿವರ್ಹಣಾ ಮತ್ತು ದುರಸ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ನೀರು ಪೋಲು ಆಗಿ ಅದರಿಂದ ಸದುಪಯೋಗವಾಗುವುದಿಲ್ಲವೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಇನ್ನು ರಸ್ತೆಗಳ ವಿಚಾರದಲ್ಲಿ 1995-96ನೇ ಸಾಲಿನಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳಾದ ಬಿಜಾಪುರ, ಗುಲ್ಬರ್ಗಾ, ಧಾರವಾಡದಲ್ಲಿ ಸರ್ಕಾರಕ್ಕೆ ಎಷ್ಟು ಡಾಂಬರ್ ಬೇಕಾಗಿತ್ತೋ, ಅಷ್ಟನ್ನು ಖರೀದಿ ಮಾಡಲಿಲ್ಲ. ಸುಮಾರು ಮೂರುವರೆಯಿಂದ ನಾಲ್ಕು ಸಾವಿರ ಟನ್ನಷ್ಟು ಪ್ರತಿ ವರ್ಷ ಡಾಂಬರ್ ಬೇಕಾಗುತ್ತದೆ. ಆದರೆ ಕೇವಲ ಮೂನ್ನೂರು ಟನ್ ಡಾಂಬರ್ ಹೋದ ವರ್ಷ ಖರೀದಿ ಮಾಡಿರುವುದರಿಂದ ನಮಗೆ ರಸ್ತೆಗಳ ದುರಸ್ತಿಗೆ ವಿಶೇಷವಾದ ಅನುದಾನ ಏನು ಕೊಟ್ಟಿದ್ದರೋ ಅದರ ಉಪಯೋಗವಾಗಿಲ್ಲವೆಂದು ನಾನು ತಮ್ಮ ಮೂಲಕ ತಿಳಿಸಬಯಸುತ್ತೇನೆ. ಕೇವಲ ಇದನ್ನು ಕಾಗದದಲ್ಲಿ ಉಳಿಯಿತು ಎನ್ನುವಂತಹ ವಿಚಾರವನ್ನು ನಾನು ತಮ್ಮ ಮೂಲಕ ತಿಳಿಸುತ್ತೇನೆ. ರಸ್ತೆಗಳ ನಿರ್ವಹಣಾ ವೆಚ್ಚವನ್ನು ಕೂಡ ರಾಜ್ಯ ಹೆದ್ದಾರಿಗಳಿಗೆ ಕೇವಲ ಪ್ರತಿ ವರ್ಷ 1 ಕಿ.ಮೀ.ಗೆ 8 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ.

ಈ ಎಂಟು ಸಾವಿರ ರೂಪಾಯಿಗಳಲ್ಲಿ ರಸ್ತೆಗಳ ದುರಸ್ತಿಯನ್ನು ಮಾಡುವುದಕ್ಕಾಗುವುದಿಲ್ಲ. ರಸ್ತೆಗಳ ದುರಸ್ತಿಗೆ ಪ್ರತಿ ಕಿ.ಮೀ.ಗೆ ವಾರ್ಷಿಕವಾಗಿ ಸುಮಾರು 14 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಸುಮಾರು 5 ರಿಂದ 6 ಡಾಂಬರ್ ಧಾರಣೆಗಳು ಪ್ರತಿ ಕಿ.ಮೀ. ದುರಸ್ತಿಗೆ ಬೇಕಾಗುತ್ತದೆ. ಆದರೆ ಡಾಂಬರ್ ಕಿಮ್ಮತ್ತೆ ಸುಮಾರು 6-7 ಸಾವಿರ ರೂಪಾಯಿಗಳಾಗುತ್ತದೆ. ಅಷ್ಟರಲ್ಲಿ 8 ಸಾವಿರ ರೂಪಾಯಿಗಳನ್ನು ಕೊಟ್ಟರೆ ದುರಸ್ತಿ ಮಾಡುವುದಕ್ಕೆ ಆಗುವುದಿಲ್ಲ. ಲೇಬರ್ ಛಾರ್ಜ್ ಮತ್ತು ಸಾಗಾಣೆ ವೆಚ್ಚ ಇನ್ನಿತರ ಎಲ್ಲಾ ವೆಚ್ಚಗಳು ಸೇರಿ ಸುಮಾರು 14 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಅದಕ್ಕೆ 8 ಸಾವಿರ ರೂಪಾಯಿಗಳು ಪ್ರತಿ ಕಿ.ಮೀ.ಗೆ ಏನು ಇದೆ ಅದನ್ನು 14 ಸಾವಿರ ರೂಪಾಯಿಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದರೆ ರಾಜ್ಯದಲ್ಲಿ ಈಗಾಗಲೇ ಡಾಂಬರೀಕರಣ ಮಾಡುವಂತಹ ರಸ್ತೆಗಳು ಇದೆ. ಅದನ್ನು ನಾವು ಕಾಪಾಡಿಕೊಂಡು ಹೋಗಬೇಕಾಗುತ್ತದೆ ಮತ್ತು ಉಳಿಸಿಕೊಂಡು ಹೋಗುವುದಕ್ಕಾಗುತ್ತದೆ. ಇಲ್ಲದಿದ್ದರೆ ನಮ್ಮ ಆಸ್ತಿಯಾಗಿರುವಂತಹ ರಸ್ತೆಗಳು ಏನಿವೆ, ರಾಜ್ಯದ ಆಸ್ತಿಯಾಗಿರುವಂತಹ ರಸ್ತೆಗಳು ಹಾಳಾಗಿ ಹೋಗುತ್ತದೆ. ರಸ್ತೆಗಳು ಮುಂದಿನ ದಿವಸಗಳಲ್ಲಿ ನಾವು ಡಾಂಬರ್ ರಸ್ತೆಗಳನ್ನು ನೋಡುವುದು ಕಠಿಣವಾಗುತ್ತದೆ. ಅದಕ್ಕೆ 8 ಸಾವಿರ ರೂಪಾಯಿಗಳ ಬದಲಾಗಿ 14 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ರಾಜ್ಯದಲ್ಲಿ ಎಸ್.ಸಿ. ಎಸ್.ಟಿ., ಜನಾಂಗದವರು

ಸುಮಾರು ಒಂದು ಕೋಟಿ ಇದ್ದಾರೆ, ಅಂದರೆ ಶೇ. 21ರಷ್ಟು ಈ ಜನಾಂಗ ರಾಜ್ಯದಲ್ಲಿದೆ. ಈ ಜನಾಂಗದ ಆಧಾರದ ಮೇಲೆ ಬಜೆಟ್ ಪ್ರಾವಿಜನ್ ಮಾಡಬೇಕಾಗಿತ್ತು. ಆದರೆ ಸರ್ಕಾರ ಕೇವಲ ಶೇ. 11ರಷ್ಟು ಮಾತ್ರ ಮಾಡಿದೆ. ಶೇ. 11ರ ಬದಲಾಗಿ ಮುಂದಿನ ವರ್ಷಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಸುಮಾರು ಶೇ. 20 ಆದರೂ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಂಡು, ದೌರ್ಜನ್ಯದಲ್ಲಿ ನೊಂದವರಿಗೆ ಪರಿಹಾರ ಸಿಗುತ್ತಾ ಇಲ್ಲ. ಸರ್ಕಾರ ದೌರ್ಜನ್ಯದಲ್ಲಿ ನೊಂದವರಿಗೆ ಕೂಡಲೇ ಪರಿಹಾರವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

6.50 ಪಿ.ಎಂ

ಸರ್ಕಾರ, ಈ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಸುಮಾರು 25 ಹಾಸ್ಟೆಲ್ಗಳನ್ನು ಜಿಲ್ಲೆಯಲ್ಲಿ ಪ್ರಾರಂಭ ಮಾಡಿದೆ. ಅಲ್ಲಿ ಹಾಸ್ಟೆಲ್ ಅಧೀಕ್ಷಕರನ್ನಾಗಲಿ, ಅಡಿಗೆಯವರನ್ನಾಗಲಿ, ಆಳುಗಳನ್ನಾಗಲಿ ಕೊಟ್ಟಿಲ್ಲ. ಇದರಿಂದ ಕೇವಲ ಅಲ್ಲಿ ಹಾಸ್ಟೆಲ್ಗಳನ್ನು ಪ್ರಾರಂಭ ಮಾಡಿದ್ದಾಗಿದೆಯೇ ಹೊರತು ಅಲ್ಲಿ ಏನು ವ್ಯವಸ್ಥೆ ಇಲ್ಲ. ಅದಕ್ಕಾಗಿ ಈ ಹಾಸ್ಟೆಲ್ಗಳಿಗೆ ಕೂಡಲೇ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಂಡು ಹಾಸ್ಟೆಲ್ಗಳು ವ್ಯವಸ್ಥಿತ ರೀತಿಯಲ್ಲಿ ನಡೆಯುವ ಹಾಗೆ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ, ಈ ಪೌಷ್ಠಿಕ ಆಹಾರ ಕೊಡುವ ದಿಸೆಯಲ್ಲಿ ಡಯೇಟ್ ಸ್ಕೇಲ್ ಅನ್ನು ಸರ್ಕಾರ ಜಾರಿಗೆ ತರಬೇಕು. ಕೇವಲ ಈ ಹಣವನ್ನು ನಿಗದಿ ಮಾಡುವುದರ ಬದಲಾಗಿ ಈ ರಿಮ್ಯಾಂಡ್ ಹೋಂಗಳಲ್ಲಿ, ಈ ಜೈಲ್ಗಳಲ್ಲಿ ಏನು ಡಯೇಟ್ ಸ್ಕೇಲ್ಗಳನ್ನು ನಿಗದಿ ಮಾಡಿದ್ದಾರೆ. ಆ ರೀತಿ ಡಯೇಟ್ ಸ್ಕೇಲ್ ಅನ್ನು ನಿಗದಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ಹತ್ತು ಲಕ್ಷ ಹೆಕ್ಟೇರ್ ನೀರಾವರಿ ಭೂಮಿಯಿದೆ. ಈ ನೀರಾವರಿಯಿರುವ ಭೂಮಿಯಲ್ಲಿ ಕೇವಲ ಒಂದು ಲಕ್ಷ ಮಾತ್ರ ಎಸ್ಸಿ:ಎಸ್ಟಿ ಯವರ ಭೂಮಿ ನೀರಾವರಿಯಾಗಿದೆ.

ಇನ್ನುಳಿದ ಒಂಬತ್ತು ಲಕ್ಷ ಭೂಮಿಗೆ ನೀರಾವರಿಯಾಗಬೇಕಾಗಿದೆ. ಅದಕ್ಕಾಗಿ, ಈ ಉಳಿದ ಸ್ಕೀಂಗಳನ್ನು ಬಿಟ್ಟು ಈ ಫಾರೆಸ್ಟ್ ಇಲಾಖೆಯಲ್ಲಿ ಎಸ್ಸಿಪಿ ಅಮೌಂಟ್ ಕೊಡುತ್ತಾರೆ, ಮತ್ತೊಂದು ಇಲಾಖೆಯಲ್ಲಿ ಎಸ್ಸಿಪಿ ಅಮೌಂಟ್ ಕೊಡುತ್ತಾರೆ, ಅಂಥದ್ದನ್ನು ಎರಡು ವರ್ಷ ನಿಲ್ಲಿಸಿ, ಅದರ ಬದಲಾಗಿ, ಎಲ್ಲಾ ಹಣವನ್ನು ನೀರಾವರಿಗೆ ಉಪಯೋಗ ಮಾಡಿ ಈ ರಾಜ್ಯದಲ್ಲಿರುವ ಪರಿಶಿಷ್ಟ ಜನಾಂಗದವರ ಭೂಮಿಗೆ ಸಂಪೂರ್ಣವಾಗಿ ನೀರಾವರಿಯನ್ನು ಮಾಡಿಕೊಡಬೇಕು, ಐದು ವರ್ಷಗಳಲ್ಲಿ ಈ ಎಲ್ಲಾ ಭೂಮಿಗಳಿಗೂ ನೀರು ಸಿಗುವಂತಾಗಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ರಾಜ್ಯದಲ್ಲಿ ನಾಲ್ಕು ಲಕ್ಷ ಪರಿಶಿಷ್ಟ ಜಾತಿಯ ಬಡವರಿಗೆ ಮನೆಗಳಿಲ್ಲ, ಅವರಿಗೆ ಪ್ರತಿವರ್ಷ ಒಂದು ಲಕ್ಷ ಮನೆಗಳನ್ನು ಕಟ್ಟಿಸಿ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾ ತಮ್ಮ ಮೂಲಕ ವಿನಂತಿಸಿಕೊಂಡು ನಾನು ಮಾತನಾಡುವುದಕ್ಕೆ ತಾವು ಏನೊಂದು ಅವಕಾಶ ಮಾಡಿಕೊಟ್ಟಿದ್ದೀರಿ ಅದಕ್ಕೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಅಧ್ಯಕ್ಷರು : ಇನ್ನೂ ಇಬ್ಬರಷ್ಟೇ ಮಾತನಾಡುತ್ತಾರೆ, ನಂತರ ಮುಗಿಸೋಣ.

ಶ್ರೀ ವಾಟಾಳ್ ನಾಗರಾಜ್ : ನಾವು ಎಷ್ಟು ಹೊತ್ತು ಬೇಕಾದರೂ ಕುಳಿತುಕೊಳ್ಳುತ್ತೇವೆ. ಇವತ್ತು ಹನ್ನೊಂದು ಗಂಟೆಯಾದರೂ ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು : ಜಾಸ್ತಿ ಹೊತ್ತು ಸದನವನ್ನು ನಡೆಸಬೇಕೆಂದು ಇವರದು ಗಲಾಟೆ ಆಗುವುದಿಲ್ಲ ಬೇಗ ಮುಗಿಸಬೇಕೆಂದು ಹೇಳುತ್ತಿದ್ದೇನೆ. ಇನ್ನೂ ಮಾತನಾಡಲಿ, ಎಲ್ಲರೂ ಮಾತನಾಡಲಿ ಎಂದು ಬೈರೇಗೌಡರು ಒಂದೇ ಸಮನೆ ಗಲಾಟೆ ಆಗುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಬೇಗ ಮುಗಿಸಿ ಎಂದು ಹೇಳಿದವರು ಯ್ಯಾರು?

ಅಧ್ಯಕ್ಷರು : ಬೇಗ ಮುಗಿಸಿ ಎಂದು ಯಾರೂ ಹೇಳುತ್ತಿಲ್ಲ, ಬೈರೇಗೌಡರು ಎಲ್ಲರೂ ಮಾತನಾಡಲಿ ಎಂದು ಚೀಟಿಯನ್ನು ಕಳುಹಿಸುತ್ತಿದ್ದಾರೆ.

+ ಶ್ರೀ ಬಾಳಪ್ಪ ಭೀಮಪ್ಪ ಚಿಮ್ಮನಕಟ್ಟಿ (ಬಾದಾಮಿ) : ಇಂದು ಸುಮಾರು 41 ಬೇಡಿಕೆಗಳನ್ನು ಮಂಡಿಸಲಾಗಿದೆ. ಇವತ್ತು ಈ 41 ಬೇಡಿಕೆಗಳನ್ನು ವಿರೋಧಿಸುತ್ತಾ. ಮುಖ್ಯವಾಗಿ 41 ಬೇಡಿಕೆಗಳ ಮೇಲೂ ಮಾತನಾಡುವುದಕ್ಕೆ ಅವಕಾಶ ಆಗದೆ ಇರುವುದರಿಂದ, ಇವತ್ತು ಮುಖ್ಯವಾಗಿ ಎಲ್ಲಾ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಆಸ್ಪದವಿಲ್ಲದೆ ಇದ್ದರೂ ಕೂಡ, ಸಮಯವನ್ನು ಅರಿತು ಕೇವಲ ನೀರಾವರಿ ಇಲಾಖೆಯ ಮೇಲೆ ಮಾತನಾಡುವುದಕ್ಕೆ ನನ್ನ ಮಾತುಗಳನ್ನು ಸೀಮಿತಗೊಳಿಸುತ್ತೇನೆ. ಇವತ್ತು ಬಹುಶಃ ರಾಜ್ಯದ ಜನ ಇನ್ನು ಹೆಚ್ಚು ಒತ್ತನ್ನು ಕೊಟ್ಟು ನೀರಾವರಿ ಇಲಾಖೆಗೆ ಆಗುವ ಸದುಪಯೋಗ ಬಹಳವಿದೆ. ಬಹುಶಃ ಸ್ವಾತಂತ್ರ್ಯ ಸಿಕ್ಕಿ ಇಷ್ಟು ವರ್ಷಗಳಾದರೂ ಕೂಡ ನಾವು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ, ಆಂಧ್ರ ಪ್ರದೇಶದಲ್ಲಾಗಲಿ, ತಮಿಳುನಾಡಿನಲ್ಲಾಗಲಿ, ಮಹಾರಾಷ್ಟ್ರದಲ್ಲಾಗಲಿ, ಬೇರೆ ರಾಜ್ಯಗಳಲ್ಲಿ ಕೊಟ್ಟಿರುವ ಪ್ರಾಮುಖ್ಯತೆ, ಅವರು ತಮ್ಮ ರಾಜ್ಯದಲ್ಲಿ ಒದಗಿಸಿರುವ ಆಯವ್ಯಯವನ್ನು ಕೂಲಂಕುಷವಾಗಿ ನೋಡಿದಾಗ, ಬಹಳ ಹೆಚ್ಚು ಆದ್ಯತೆಯನ್ನು ಕೊಟ್ಟು ಸುಮಾರು ವರ್ಷಗಳಿಂದ ನಡೆದಿರತಕ್ಕಂಥ ಎಲ್ಲಾ ಯೋಜನೆಗಳನ್ನು ಮುಗಿಸಿ, ಬಹುಶಃ ನಮ್ಮ ಕರ್ನಾಟಕ ರಾಜ್ಯಕ್ಕಿಂತಲೂ ಬಹಳ ಮುಂದಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಬಹುಶಃ ಅಂಥ ರಾಜ್ಯಗಳ ಒಂದು ದೃಷ್ಟಿ ಕೋನವನ್ನು ಇಟ್ಟುಕೊಂಡು, ನಾವು ಇಂದು ನಮ್ಮ ರಾಜ್ಯದ ಸ್ಥಿತಿಗಳನ್ನು ನೋಡಿದಾಗ, ನಾವು ಕೂಡ ಬಹಳ ಹೆಚ್ಚು ಒತ್ತು ಕೊಡಬೇಕಾದದ್ದು ಬಹಳ ಮುಖ್ಯವಾದ ಕೆಲಸ.

ಇವತ್ತು ನಾವು ಅನೇಕ ವಿಚಾರಗಳನ್ನು ಮಾತನ್ನಾಡುತ್ತೇವೆ. ಬಡತನದ ಬಗ್ಗೆ ಮಾತನ್ನಾಡುತ್ತೇವೆ, ರೈತರ ಬಗ್ಗೆ ಕೂಡ ಮಾತನ್ನಾಡುತ್ತೇವೆ. ರಾಜ್ಯದ ಅನೇಕ ಸಮಸ್ಯೆಗಳ ಬಗ್ಗೆ ಮಾತನ್ನಾಡುವ ಈ ಸಂದರ್ಭದಲ್ಲಿ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ಎನ್ನುವುದರಲ್ಲ ಹಿಂದೇಟು ಹಾಕುತ್ತೇವೆ. ಇದಕ್ಕೆ ಹತ್ತು ಹಲವು ಕಾರಣಗಳಿರಬಹುದು, ಒಟ್ಟಾರೆ ನಾನು ಶಾಸಕನಾಗಿ ಕೇವಲ ವಿರೋಧಪಕ್ಷದಲ್ಲಿ ಕುಳಿತು ಸರ್ಕಾರದ ನ್ಯೂನ್ಯತೆಗಳನ್ನು ಹೇಳುವುದರ ಜೊತೆಗೆ, ಇಲಾಖೆಯಲ್ಲಾಗತಕ್ಕಂಥ ನ್ಯೂನ್ಯತೆಗಳನ್ನು ಸುಧಾರಿಸುವಂಥ ಸಲಹೆಗಳನ್ನು ಕೊಟ್ಟಾಗ, ಬಹುಶಃ ಸಮಯದ• ಸದುಪಯೋಗವಾದೀತು ಎಂದು ಭಾವಿಸಿದ್ದೇನೆ. ಇವತ್ತು ನಮ್ಮ ರಾಜ್ಯವನ್ನು ಭೌಗೋಳಿಕವಾಗಿ ನೋಡಿದಾಗ, ಸುಮಾರು 1,91,790 ಚದುರ ಕಿ.ಮೀ. ನಮ್ಮ ಭೌಗೋಳಿಕ ಕ್ಷೇತ್ರ, ರಾಜ್ಯದ ಕ್ಷೇತ್ರ. ಅದರಲ್ಲಿ 1,40,090 ಚದುರ ಕಿ.ಮೀ. ಕೃಷಿಗೆ ಯೋಗ್ಯವಾಗಿರುವ ಭೂಮಿಯನ್ನೊಳಗೊಂಡ ರಾಜ್ಯ ನಮ್ಮ ರಾಜ್ಯವಾಗಿದೆ. ಅದರಲ್ಲಿ, ಸುಮಾರು 14.06 Million hectares is cultivable area; 10.70 Million hectares is net sown area, & 5.5 Million hectares

is irrigable area ಬಹುಶಃ ನಾವು ಪೂರ್ತಿಯಾಗಿ ರಾಜ್ಯದಲ್ಲಿರುವ ಎಲ್ಲಾ ಯೋಜನೆಗಳನ್ನು ಪೂರ್ತಿಗೊಳಿಸಿದಾಗ, ಸುಮಾರು 55 ಲಕ್ಷ ಹೆಕ್ಟೇರ್ ಪ್ರದೇಶವನ್ನು ನಾವು ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ.

ಬಹುಶಃ ಈ ನೀರಾವರಿ ಪ್ರದೇಶದ ಬಗ್ಗೆ ಮಾತನ್ನಾಡತಕ್ಕಂಥ ಸಂದರ್ಭದಲ್ಲಿ ನಮ್ಮ ರಾಜ್ಯಕ್ಕೆ ಬಹುಶಃ ದೈವದತ್ತವಾಗಿ ಕಾಣಿಕೆಯಾಗಿರುವುದು ಕೃಷ್ಣಾ ಕೊಳ್ಳ ಮತ್ತು ಕಾವೇರಿ ಕೊಳ್ಳ, ಸ್ವಲ್ಪ ಮಟ್ಟಿಗೆ ಗೋದಾವರಿ ಕೊಳ್ಳ. ಆ ಎರಡು ಕೊಳ್ಳಗಳ ವ್ಯಾಪ್ತಿ, ಆದರಿಂದ ಬಂದಿರತಕ್ಕಂಥ ನೀರಿನ ಪ್ರಮಾಣ ನಮ್ಮ ರಾಜ್ಯಕ್ಕೆ ಬಹುದೊಡ್ಡ ಕಾಣಿಕೆಯನ್ನು ಕೊಟ್ಟಿದೆ. ಈ ಕೃಷ್ಣಾ ಕೊಳ್ಳದಿಂದ ಸುಮಾರು 1,13,030 ಚದುರ ಕಿ.ಮೀ. ಕಾವೇರಿ ಕೊಳ್ಳದಿಂದ 36,130 ಚದುರ ಕಿ.ಮೀ. ಅಂದಾಗ ಕೃಷ್ಣಾ ಕೊಳ್ಳದಿಂದ ಸುಮಾರು ಶೇಕಡ 58 ರಷ್ಟು ನೀರಾವರಿಯಾಗತಕ್ಕದ್ದು ಹಾಗೂ ಕಾವೇರಿ ಕೊಳ್ಳದಿಂದ ಶೇಕಡ 18 ಕ್ಕಿಂತ ಹೆಚ್ಚಿಗೆ ನಮಗೆ ಲಾಭತರಕ್ಕಂಥದ್ದು. ಈ ಎಲ್ಲಾ ಯೋಜನೆಗಳನ್ನು, ಬಹುಶಃ ನಮ್ಮ ಜಲಸಂಪನ್ಮೂಲಗಳನ್ನು ಲೆಕ್ಕ ಹಾಕಿದಾಗ, ಬಹುಶಃ ಇದನ್ನೂ ಕೂಡ ಪೂರ್ತಿಯಾಗಿ ಉಪಯೋಗಿಸದೇ ಇರುವುದನ್ನು ಕಾಣುತ್ತಿದ್ದೇವೆ. ಉದಾಹರಣೆಗಾಗಿ ನಮ್ಮ ರಾಜ್ಯದ ನದಿಗಳ ವಾರ್ಷಿಕ ಜಲ ಉತ್ಪನ್ನ ಸುಮಾರು 3,477 ಟಿಎಂಸಿ. ಅದರಲ್ಲಿ ನ್ಯಾಯಮಂಡಳಿಯಿಂದ ಬಂದಿರುವುದಾಗಲಿ, ವಿವಿಧ ಕೊಳ್ಳಗಳ ಒಟ್ಟು ಬಳಕೆಯಿಂದ ಬಂದಿರುವುದಾಗಲಿ ನಾವು ಒಟ್ಟಾರೆ ಲೆಕ್ಕಾ ಮಾಡಿ ನೋಡಿದಾಗ, ಸುಮಾರು 1,267.68 ಟಿಎಂಸಿ ನೀರನ್ನು ನಾವು ಬಳಕೆ ಮಾಡಬೇಕಾಗಿದೆ. ಆದರೆ ಇವತ್ತಿನವರೆಗೆ ಒಟ್ಟಾರೆ ಸುಮಾರು 836.62 ಟಿಎಂಸಿ ನೀರನ್ನು ಮಾತ್ರ ನಾವು ಬಳಕೆಮಾಡಿದ್ದೇವೆ. ಅಂದರೆ ಇನ್ನು ಸುಮಾರು 431 ಟಿಎಂಸಿ ನೀರಿಗೆ ಹೊಸ ಯೋಜನೆಗಳನ್ನು ಕೈಗೊಂಡಾಗ ಬಹುಶಃ ನಾವು 55 ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿ ಮಾಡುವುದಕ್ಕೆ ಸಾಧ್ಯವಾಗಬಹುದು.

ಬಹುಶಃ ನಾವು ಈಗಿನ ಸ್ಥಿತಿಗತಿಗಳನ್ನು ನೋಡಿದಾಗ ನಾವು ಇನ್ನೂ ಶೇಕಡ 50 ರಷ್ಟೂ ನೀರನ್ನು ಬಳಕೆ ಮಾಡಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಈ ಕೃಷ್ಣಾ ಬೇಸಿನ್ ಪ್ರಾಜೆಕ್ಟ್‌ಗಳಾಗಲಿ, ಕಾವೇರಿ ಬೇಸಿನ್ ಪ್ರಾಜೆಕ್ಟ್‌ಗಳಾಗಲಿ, ಬಹುಶಃ ಮಾಸ್ಟರ್ ಪ್ಲಾನ್‌ಗೆ ಅನುಗುಣವಾಗಿ ನಾವು ಬಳಕೆ ಮಾಡಿಕೊಂಡಾಗ, ನಮ್ಮ ರಾಜ್ಯ ಬಹಳ ಸಮೃದ್ಧವಾಗುತ್ತದೆಂದು ನಾವು ಬಹಳ ಅಭಿಮಾನದಿಂದ ಹೇಳಬೇಕಾಗುತ್ತದೆ. ಆದರೆ, ನೀರಾವರಿ ಅಭಿವೃದ್ಧಿಯ ಬಗ್ಗೆ ಮಾತನ್ನಾಡುವ ಸಂದರ್ಭದಲ್ಲಿ ನಮ್ಮ ರಾಜ್ಯದ ಸುಮಾರು 50 ಲಕ್ಷ ಹೆಕ್ಟೇರ್‌ಪ್ರದೇಶಗಳು ನೀರಾವರಿಯಾಗಬೇಕಾಗಿತ್ತು. ಅದರಲ್ಲಿ ಈಗಿನ ನಮ್ಮ ಅಂದಾಜಿನ ಪ್ರಕಾರ, ಬಹುಶಃ ಸಣ್ಣ ನೀರಾವರಿಯಾಗಲಿ ಇನ್ನಿತರ ಎಲ್ಲಾ ಮೂಲಗಳಿಂದ ಲೆಕ್ಕಾಹಾಕಿಕೊಂಡಾಗ ಸುಮಾರು 30 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿಯನ್ನಾಗಿ ಮಾಡುವುದಕ್ಕೆ ಸಾಧ್ಯವಾಗಿದೆ.

ಅದರಲ್ಲಿ ನಮ್ಮ ಯೋಜನೆಯ ಗುರಿ ಸುಮಾರು 35 ಲಕ್ಷ ಹೆಕ್ಟೇರು ಭಾರೀ ಮತ್ತು ಮಧ್ಯಮ ನೀರಾವರಿಯಿಂದ ಆಗಬೇಕು, 10ಲಕ್ಷ ಹೆಕ್ಟೇರು ಸಣ್ಣ ನೀರಾವರಿಯಿಂದ ಆಗಬೇಕು, 10 ಲಕ್ಷ ಹೆಕ್ಟೇರು ಭೂಗತ ಜಲ ಬಳಕೆಯಿಂದ ಆಗಬೇಕು. ಒಟ್ಟಾರೆ ಸುಮಾರು 55 ಲಕ್ಷ ಹೆಕ್ಟೇರು ನೀರಾವರಿ ಆಗಬೇಕು ಎಂದು ನಮ್ಮ ಸರ್ಕಾರದ ಯೋಜನೆ ಇದೆ. ಅದರಂತೆ ನಾವು ಮಾರ್ಚ್ 95ಕ್ಕೆ ಪೂರ್ಣಗೊಂಡಿರತಕ್ಕ ನೀರಾವರಿ ಯೋಜನೆಗಳನ್ನು ನೋಡುವುದಾದರೆ, ಸುಮಾರು 4,53,054 ಹೆಕ್ಟೇರು ಪ್ರಗತಿಯಲ್ಲಿರತಕ್ಕಂಥ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಂದ ಮಾಡಿರತಕ್ಕಂಥಾದ್ದು 10,74,873

ಹೆಕ್ಟೇರುಗಳು. ಬಹುಶಃ ಈ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಸುಮಾರು 15 ಲಕ್ಷ ಹೆಕ್ಟೇರು ಮಾಡಬೇಕಾದರೆ ನಾವು 4,431 ಕೋಟಿ ರೂಪಾಯಿಗಳನ್ನು ಇಲ್ಲಿಯವರೆಗೆ ನಾವು ಖರ್ಚು ಮಾಡಿದ್ದೇವೆ. ಸಣ್ಣ ನೀರಾವರಿಯಿಂದ ಸುಮಾರು 40,790 ಕೆರೆಗಳ ಮೂಲಕ 9,18,041 ಹೆಕ್ಟೇರನ್ನು ನೀರಾವರಿ ಮಾಡುವುದಕ್ಕೆ ಸುಮಾರು 583 ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ಖರ್ಚು ಮಾಡಿದ್ದೇವೆ. ಒಟ್ಟಾರೆ, 7,79,424 ಹೆಕ್ಟೇರು ಭೂಗತ ಜಲದಿಂದ ಆದರೆ, ಸುಮಾರು ಹೆಚ್ಚು ಕಡಿಮೆ 32 ಲಕ್ಷ ಹೆಕ್ಟೇರು ನೀರಾವರಿ ಮಾಡಿದ್ದೇವೆ. ಇಷ್ಟು ನೀರಾವರಿಯನ್ನು ಮಾಡುವುದಕ್ಕೆ ಬಹುಶಃ ರಾಜ್ಯದ ಆದಾಯದಲ್ಲಿ ನಾವು ಎಷ್ಟು ಹಣವನ್ನು ತೊಡಗಿಸಿದ್ದೇವೆ ಎಂದರೆ ಸುಮಾರು 5 ಸಾವಿರದ 14 ಕೋಟಿ ರೂಪಾಯಿಗಳ ಬಂಡವಾಳವನ್ನು ತೊಡಗಿಸಿ 32 ಲಕ್ಷ ಹೆಕ್ಟೇರನ್ನು ನಾವು ನೀರಾವರಿ ಮಾಡಿದ್ದೇವೆ.

ಇನ್ನು, ಆನ್ ಗೋಯಿಂಗ್ ಪ್ರಾಜೆಕ್ಟ್‌ಗಳು ಅಂದರೆ ಉಳಿದಿರತಕ್ಕಂಥ ಹೊಸ ಯೋಜನೆಗಳು ಆಗಬೇಕು ಮತ್ತು ಈಗ ಕಟ್ಟಿರತಕ್ಕಂಥ ಡ್ಯಾಂಗಳು ಏನಿವೆ, ಕಾಲುವೆಗಳ ಮುಖಾಂತರ ಭೂಮಿಗೆ ನೀರು ಹರಿಸಬೇಕು ಎಂದರೆ ನಮ್ಮ ರಾಜ್ಯದ ಆಯವ್ಯಯದಲ್ಲಿ ಬಹುಶಃ ವಾಸ್ತವಿಕವಾಗಿ ಹೆಚ್ಚುತ್ತಿರುವ ವೆಚ್ಚವನ್ನು ಪರಿಗಣಿಸಿ, ಸುಮಾರು 11,329 ಕೋಟಿ ರೂಪಾಯಿಗಳನ್ನು ಒದಗಿಸಬೇಕಾಗುತ್ತದೆ. ಈ 11,329 ಕೋಟಿಯನ್ನು ಒದಗಿಸಿದಾಗ ನಮ್ಮ ರಾಜ್ಯದಲ್ಲಿರತಕ್ಕಂಥ ಪ್ರತಿಯೊಂದು ಯೋಜನೆಗಳೂ ಮುಗಿದು, ರೈತರ ಜಮೀನುಗಳಿಗೆ ನೀರನ್ನು ಕೊಡತಕ್ಕಂಥ ಒಂದು ಸಾಹಸವನ್ನು ನಮ್ಮ ರಾಜ್ಯ ಮಾಡಿದ ಹಾಗೆ ಆಗುತ್ತದೆ. ಇವತ್ತು ಈ ಮಾತನ್ನು ಏಕೆ ಹೇಳುತ್ತೇನೆ ಎಂದರೆ, ಇವತ್ತು ಇಷ್ಟೆಲ್ಲಾ ಯೋಜನೆಗಳು ಇವೆ, ಬಹುಶಃ ನಾವು ಈಗಾಗಲೇ ಡ್ಯಾಂಗಳನ್ನು ಕಟ್ಟಿದ್ದೇವೆ, ಘಟಪ್ರಭಾ ಡ್ಯಾಂ ಕಟ್ಟಿದ್ದೇವೆ, ಮಲಪ್ರಭಾ ಡ್ಯಾಂ ಕಟ್ಟಿದ್ದೇವೆ, ನಾರಾಯಣಪುರ ಡ್ಯಾಂ ಕಟ್ಟಿದ್ದೇವೆ, ಹೇಮಾವತಿ ಡ್ಯಾಂ ಕಟ್ಟಿದ್ದೇವೆ, ಹಾರಂಗಿ ಡ್ಯಾಂ ಕಟ್ಟಿದ್ದೇವೆ, ಕಬಿನಿ ಡ್ಯಾಂ ಕಟ್ಟಿದ್ದೇವೆ, ಕೆ.ಆರ್.ಎಸ್. ಡ್ಯಾಂ ಕಟ್ಟಿದ್ದೇವೆ, ತುಂಗಭದ್ರಾ ಡ್ಯಾಂ ಕಟ್ಟಿದ್ದೇವೆ.

ಆದರೆ ಎಲ್ಲಾ ಡ್ಯಾಂಗಳು ಕಟ್ಟಿ ನೀರನ್ನು ನಿಲ್ಲಿಸಲು 10-10 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಇವತ್ತು ಕಾಲುವೆಗಳನ್ನು ತೋಡಿಸಲಾರದೆ ನೀರನ್ನು ಒದಗಿಸಲಾರದಂಥ ದುರ್ಬರ ಪರಿಸ್ಥಿತಿ ನಮ್ಮ ರಾಜ್ಯಕ್ಕೆ ಬಂದಿದೆ. ಆ ದೃಷ್ಟಿಯಿಂದ ಇವತ್ತು ನಾವೆಲ್ಲರೂ ಕೂಡ ಒಕ್ಕೊರೊಲಿನಿಂದ ಬಹಳ ವಿಚಾರ ಮಾಡಬೇಕಾಗಿದೆ, ಇವತ್ತಿನ ಪರಿಸ್ಥಿತಿಯಲ್ಲಿ ಪಕ್ಕದಲ್ಲಿರತಕ್ಕಂಥ ರಾಜ್ಯಗಳು ಯಾವ ಯಾವ ರೀತಿಯಿಂದ ನಮ್ಮ ಜೊತೆ ತಂಟೆ ಮಾಡುತ್ತವೆ ಎಂಬುದನ್ನು ನೋಡುತ್ತೇವೆ ಇವತ್ತು ಕಾವೇರಿ ಮಂಡಳಿ ವಿಚಾರದಲ್ಲಿ ಆಗಿರಬಹುದು, ಕೃಷ್ಣಾ ಬಚಾವತ್ ಆಯೋಗದ ವಿಚಾರದಲ್ಲಿ ಆಗಿರಬಹುದು, ಆಂಧ್ರಪ್ರದೇಶದ ರಾಜ್ಯದ ವಿಚಾರವೇ ಆಗಿರಬಹುದು. ಈಗಿನ ಪರಿಸ್ಥಿತಿಯನ್ನು ನೋಡಿದಾಗ ನಾವು ಬಹಳ ದುಸ್ತರ ವಾಗಿರತಕ್ಕಂಥ ಒಂದು ಪರಿಸ್ಥಿತಿಯಲ್ಲಿದ್ದೇವೆ. ಇಷ್ಟಾದರೂ ಕೂಡ ನಾವು ಜಾಗ್ರತರಾಗಬೇಕು. ಬಹುಶಃ ಈ ಜಾಗ್ರತೆಯನ್ನು ಎಷ್ಟೋ ವರ್ಷಗಳ ಹಿಂದೆ ನಾವು ಹಮ್ಮಿಕೊಂಡಿದ್ದರೆ, ಬಹಳ ವರ್ಷಗಳ ಹಿಂದೆಯೇ ಈ ಯೋಜನೆಗಳನ್ನು ನಾವು ಕಾರ್ಯಗತ ಮಾಡಿದ್ದರೆ, ಈ ಅಪಾಯದಿಂದ ನಾವೆಲ್ಲರೂ ಕೂಡ ಪಾರಾಗುತ್ತಿದ್ದೆವು. ನೀವು ಹೇಳಬಹುದು, ನೀವೂ ಕೂಡ ಸರ್ಕಾರದಲ್ಲಿದ್ದಿರಿ, ನೀವೂ ಕೂಡ ಒಬ್ಬ ಮಂತ್ರಿಗಳಾಗಿದ್ದಿರಿ, ಅದರಲ್ಲಿ ನೀವೂ ಕೂಡ ಭಾಗಿಗಳಾಗಿದ್ದೀರಿ ಎನ್ನುವಂಥ ಮಾತನ್ನು ನಾನೂ ಕೂಡ ಒಪ್ಪುತ್ತೇನೆ. ಒಳ್ಳೆಯ ಕೆಲಸಕ್ಕೂ ನಾನು ಭಾಗಿಯಾಗಿದ್ದೇನೆ, ಕೆಟ್ಟ ಕೆಲಸಕ್ಕೂ ನಾನು ಭಾಗಿಯಾಗಿದ್ದೇನೆ.

ಯಾವುದೇ ಇದ್ದರೂ ಕೂಡ, ಒಟ್ಟಾರೆ ನಾವು ನೀರಾವರಿ ವಿಚಾರದಲ್ಲಿ ಮಾತ್ರ ಬಹಳ ಮುಕ್ತಕಂಠದಿಂದ ಬಹಳ ಮುಕ್ತ ಮನಸ್ಸಿನಿಂದ ಏರ್ಪಾಡು ಮಾಡದೇ ಹೋದರೆ ಬಹುಶಃ ರಾಜ್ಯಕ್ಕೆ ಆಗತಕ್ಕಂಥ ಅನ್ಯಾಯವನ್ನು ಸರಿಪಡಿಸಲಿಕ್ಕೆ ಆಗುವುದಿಲ್ಲ.

ಆ ದೃಷ್ಟಿಯಿಂದ ನಾವು ಮುಂದಾಲೋಚನೆಯನ್ನು ಮಾಡಿ ಈಗ ಆಗಿರತಕ್ಕಂಥ ಹಾನಿಯಿಂದ ನಾವು ಮುಕ್ತಿ ಹೊಂದಬೇಕು ಎಂದರೆ ನಾವು ಮುಖ್ಯವಾಗಿ ಇಲಾಖೆಗೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಈ ಇಲಾಖೆಯಲ್ಲಿ ಅನೇಕ ನ್ಯೂನ್ಯತೆಗಳು ಇವೆ. ಈ ನ್ಯೂನ್ಯತೆಗಳನ್ನು ಸುಧಾರಣೆ ಮಾಡಿದ್ದಾದರೆ ಎರಡು ಸಾವಿರದ ಇಸವಿಯಲ್ಲಿ ಅಥವಾ ನಿಗದಿತ ಅವಧಿಯಲ್ಲಿ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇದಕ್ಕೆ ಒಂದು ರಾಜಕೀಯ ಇಚ್ಛಾಶಕ್ತಿಯೂ ಬೇಕಾಗುತ್ತದೆ. ಅನೇಕ ವಿರೋಧಗಳನ್ನು ಕೂಡ ಕಟ್ಟಿಕೊಳ್ಳಬೇಕಾಗುತ್ತದೆ. ಇಲಾಖೆಯಲ್ಲಿರತಕ್ಕಂಥ ನ್ಯೂನ್ಯತೆಗಳು ಎಂದರೆ, ಮೊದಲನೆಯದಾಗಿ, ಈ ಇಲಾಖೆ ಒಂದು ಸ್ವತಂತ್ರತ ಇಲಾಖೆಯಾಗಬೇಕು. ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂಥ ಒಂದು ವಿಚಾರ ಇದು. ಇದನ್ನು ಏಕೆ ಹೇಳುತ್ತೇನೆ. ಎಂದರೆ ಈಗ ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ ಇದು ಪ್ರತ್ಯೇಕವಾದಂಥ ಇಲಾಖೆಯಾಗಬೇಕು. ಇವತ್ತಿನವರೆಗೆ ಅದನ್ನು ಮಾಡಲು ಆಗಲಿಲ್ಲ. ಇವತ್ತು ನೀರಾವರಿ ಇಲಾಖೆಯಲ್ಲಿರತಕ್ಕಂಥ ಅನೇಕ ತಜ್ಞರನ್ನು ಬೇರೆ ಬೇರೆ ಪಿ.ಹೆಚ್.ಸಿ.ಗೆ. ಹಾಕುವುದು, ಬಹಳ ಜನ ಮುತ್ಸದ್ದಿಗಳಾಗಿರತಕ್ಕಂಥ ನೀರಾವರಿ ಇಲಾಖೆಯಲ್ಲಿ ಪರಿಣಿತರಾಗಿರತಕ್ಕಂಥ ಇಂಜಿನಿಯರುಗಳನ್ನು ಪಿ.ಡಬ್ಲ್ಯೂ.ಡಿ. ಗೆ ಹಾಕುವುದು, ಹೌಸಿಂಗ್ ಬೋರ್ಡ್‌ಗೆ ಹಾಕುವುದು ಮತ್ತು ಅರ್ಬನ್ ವಾಟರ್ ಸಪ್ಲೈಗೆ ಹಾಕುವುದು, ಹೀಗೆ ಬೇರೆ ಬೇರೆ ಇಲಾಖೆಗಳಿಗೆ ಹಾಕುವುದು ನಡೆಯುತ್ತಿದೆ. ಇದರಿಂದ ಏನಾಗುತ್ತದೆ. ಎಂದರೆ, ಅವರ ಅನುಭವ ಆ ಇಲಾಖೆಗೆ ತಪ್ಪಿಹೋಗುತ್ತಿದೆ. ಆ ಅನುಭವದಿಂದ ಅನೇಕ ಯೋಜನೆಗಳು ಕಾರ್ಯಗತ ಆಗುವುದನ್ನು ಕುಂಠಿತಗೊಳಿಸುತ್ತಿದ್ದಾರೆ.

ಆ ದೃಷ್ಟಿಯಿಂದ, ಇವತ್ತು ನೀರಾವರಿ ಇಲಾಖೆ ಒಂದು ಪ್ರತ್ಯೇಕ ಇಲಾಖೆ ಆಗಬೇಕು ಎಂದು ನಾನು ದಯವಿಟ್ಟು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ಇವತ್ತು ಸಿಬ್ಬಂದಿ ಕಾರ್ಯದಕ್ಷತೆಯೂ ಕೂಡ ಹೆಚ್ಚು ಆಗಬೇಕಾಗುತ್ತದೆ. ಇವತ್ತು ಭ್ರಷ್ಟಾಚಾರದ ಬಗ್ಗೆ ನಾವೆಲ್ಲರೂ ಕೂಡ ಒಪ್ಪಿಕೊಳ್ಳುತ್ತೇವೆ. ಈ ಭ್ರಷ್ಟಾಚಾರದ ಬಗ್ಗೆ ಅನೇಕ ಜನ ಹಿರಿಯ ಸದಸ್ಯರುಗಳು ಹೇಳಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಿಲ್ಲ. ನನ್ನ ವಿಚಾರದಲ್ಲಿ ಹೇಳುವುದಾದರೆ ಇವತ್ತು 100ಕ್ಕೆ ಶೇ. 40ರಷ್ಟು ಭ್ರಷ್ಟಾಚಾರವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಅದಕ್ಕೆ ದಕ್ಷತೆ ಬೇಕು, ಅದು ಮಂತ್ರಿಗಳಾಗಿರತಕ್ಕಂಥವರಲ್ಲಿ ಬೇಕು, ಅಧಿಕಾರಿಗಳಾಗಿರತಕ್ಕಂಥವರಲ್ಲಿ ಬೇಕು.

ಆಗ ಮಾತ್ರ ಆ ಒಂದು ಹಾನಿಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಈ ವಿಚಾರದಲ್ಲಿ ಮಂತ್ರಿಗಳಾಗಿರತಕ್ಕಂಥವರೂ ಕೂಡ ಬಹಳ ಪೀರಿಯಾಡಿಕಲ್ ಆಗಿ ಇನ್ಸ್‌ಪೆಕ್ಷನ್ ಕೂಡ ಮಾಡಬೇಕಾಗುತ್ತದೆ. ಪ್ರತಿಯೊಂದು ಕಾಲುವೆಗಳಿಗೆ ಹೋಗಬೇಕಾಗುತ್ತದೆ, ಪ್ರತಿಯೊಂದು ಡ್ಯಾಂಗಳಿಗೆ ಹೋಗಬೇಕಾಗುತ್ತದೆ, ಪ್ರತಿ ತಿಂಗಳು ವೀಕ್ಷಣೆಯನ್ನು ಮಾಡಬೇಕಾಗುತ್ತದೆ. ಈಗ ನಮ್ಮಲ್ಲಿರತಕ್ಕಂಥತ ಪದ್ಧತಿ ಎಂದರೆ, ಇವತ್ತು ಬಹಳ ಜನ ಅಧಿಕಾರಿಗಳು ಯಾರೂ ಕೂಡ ಕಾಮಗಾರಿಗಳನ್ನು ವೀಕ್ಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅವರ ವೇಳೆ ಕೇವಲ ಎಲ್ಲಿಗೆ ಸೀಮಿತವಾಗಿದೆ ಎಂದರೆ, ರಾಜ್ಯದಲ್ಲಿರತಕ್ಕಂಥ ಎಲ್ಲಾ ಇಂಜಿನಿಯರುಗಳನ್ನು ಬೆಂಗಳೂರಿಗೇ ಕರೆದು ಮೀಟಿಂಗ್ ಮಾಡುತ್ತಾರೆ.

ಇದರಿಂದ ನೀರಾವರಿಯಲ್ಲಿರತಕ್ಕಂಥ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿರತಕ್ಕಂಥ ಸ್ಪೆಷಲ್ ಸೆಕ್ರೆಟರಿಗಳಾಗಲೀ ಅಥವಾ ಚೀಫ್ ಇಂಜನಿಯರ್‌ಗಳಾಗಲೀ ತಾವೇ ಸ್ವತಃ ಯಾವ ಯಾವ ಕಾರ್ಯಕ್ಷೇತ್ರ ಇದೆ, ಎಲ್ಲೆಲ್ಲಿ ಕೆನಾಲ್‌ಗಳು ಇರುತ್ತವೆ, ಎಲ್ಲೆಲ್ಲಿ ಮೂಲಭೂತ ಸಮಸ್ಯೆಗಳು ಇರುತ್ತವೆ, ಆ ಕಾರ್ಯಕ್ಷೇತ್ರಕ್ಕೆ ಹೋದಾಗ ಮಾತ್ರ ಆ ಸಮಸ್ಯೆಗಳು ಮನವರಿಕೆಯಾಗುತ್ತವೆ ಮತ್ತು ಮೇಲಾಗಿ ಅಲ್ಲೇ ಯಾವುದಾದರೊಂದು ಚರ್ಚೆ ಮಾಡಿ, ಇತ್ಯರ್ಥಪಡಿಸಿ ಆ ಒಂದು ಜವಾಬ್ದಾರಿಯನ್ನೂ ಕೂಡ ಒಪ್ಪಿಸಿದ ಹಾಗೆ ಆಗುತ್ತದೆ. ಆದರೆ ದುರಾದೃಷ್ಟವಶಾತ್ ಎಲ್ಲಾ ಅಧಿಕಾರಿಗಳೂ ಬೆಂಗಳೂರಿನಲ್ಲೇ ಕುಳಿತು ಕೆಲಸ ಮಾಡುವುದರಿಂದ ಆ ಯೋಜನೆಗಳಿಗೆ ಧಕ್ಕೆ ತಟ್ಟಿದೆ ಎಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ಆ ದೃಷ್ಟಿಯಿಂದ ಇವತ್ತು ಸರ್ಕಾರ ಯೋಜನೆ ಮಾಡಬೇಕು. ಯಾರೇ ಅಧಿಕಾರಿಗಳಿರಲಿ, ಮಂತ್ರಿಗಳಿರಲಿ, ಪ್ರತಿಯೊಂದು ಕೆನಾಲ್‌ಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಿ, ಹೆಚ್ಚು ಅಲ್ಲೇ ಇನ್‌ಕ್ವೈರಿ ಮಾಡತಕ್ಕಂಥ ವ್ಯವಸ್ಥೆಯೂ ಕೂಡ ಸರ್ಕಾರದ ವತಿಯಿಂದ ಆಗಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೇಲಾಗಿ ಈ ಎಲ್ಲಾ ಯೋಜನೆಗಳು ಕಾರ್ಯಗತವಾಗಬೇಕು ಎಂದರೆ, ಅದಕ್ಕೆ ಒಂದು ಟೈಂ ಬಾಂಡ್ ಪ್ರೋಗ್ರಾಂ ಅನ್ನು ಕೂಡ ಹಾಕಬೇಕಾಗುತ್ತದೆ. ಯಾವ ಯಾವ ವೇಳೆಯಲ್ಲಿ ಯಾವ ಯಾವ ವರ್ಷದಲ್ಲಿ ಯಾವಯಾವ ಯೋಜನೆಗಳು ಮುಗಿಯಬೇಕು ಎಂದು. ನಮ್ಮಲ್ಲಿ ಅನೇಕ ಅಧಿಕಾರಿಗಳು ಸರಿಯಾಗಿ ಕಾರ್ಯ ನಿರ್ವಹಿಸದೇ ಇದ್ದರೆ ಅವರ ಮೇಲೆ ಕೂಡ ಶಿಸ್ತಿನ ಕ್ರಮ ಕೈಗೊಳ್ಳಬೇಕಾಗುತ್ತದೆ. ಅನೇಕ ಸಲ ನಾವು ಪ್ರಾಕ್ಟಿಕಲ್‌ಆಗಿ ನೋಡುತ್ತೇವೆ, ಹಣದ ಕೊರತೆಯಿಂದ ಈಗ ಯೋಜನೆಗಳು ಕುಂಠಿತವಾಗಿಲ್ಲ.

ಇವತ್ತು ಅಧಿಕಾರಿಗಳಲ್ಲಿರತಕ್ಕಂಥ ಒಂದು ನಿರ್ಲಕ್ಷ್ಯತನದಿಂದ ಅನೇಕ ಕೆಲಸಗಳು ಕುಂಠಿತವಾಗುತ್ತಿವೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಇವತ್ತು ಸರ್ಕಾರದ ಮೇಲಧಿಕಾರಿಗಳು ಅದರ ಬಗ್ಗೆ ಹೆಚ್ಚು ಒತ್ತು ಕೊಟ್ಟು ಕೆಳಗೆ ನಡೆಯತಕ್ಕಂಥ ಕೆಲಸಗಳ ಬಗ್ಗೆ ಹೆಚ್ಚು ಮುತುವರ್ಜಿ ಸರ್ಕಾರ ವಹಿಸಬೇಕು ಎಂದು ಈ ಮೂಲಕ ನಾನು ಒತ್ತಾಯ ಪಡಿಸುತ್ತೇನೆ. ಇವತ್ತು ಈ ಮಾತುಗಳನ್ನು ಹೇಳತಕ್ಕಂಥ ಈ ಸಂದರ್ಭದಲ್ಲಿ, ಎಲ್ಲಾ ಶಾಸಕರು ಹೇಳತಕ್ಕಂಥ ಒಂದು ವಿಚಾರ ಎಂದರೆ, ನಮಗೆ ಯೋಜನೆಗಳು ಆಗಬೇಕು, ಕೆರೆಗಳು ಆಗಬೇಕು, ಕಟ್ಟೆಗಳು ಆಗಬೇಕು, ಬಂದರುಗಳು ಆಗಬೇಕು ಎಂದು. ಇವತ್ತು ಇಲ್ಲಿ ನಮ್ಮ ಅರ್ಥ ಮಂತ್ರಿಗಳು ಉಪ ಮುಖ್ಯಮಂತ್ರಿಗಳು ಕೂಡ ಇದ್ದಾರೆ. ನಾನು ನಿಮ್ಮನ್ನು ಬಹಳ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ, ಇವತ್ತು ಸರ್ಕಾರದಲ್ಲಿ ತಾವು ಒಳ್ಳೆಯ ಹುದ್ದೆಯಲ್ಲಿದ್ದೀರಿ.

ನಾನು ನಿಮಗೆ ಒಂದು ಸಲಹೆ ಮಾಡುವುದು ಏನೆಂದರೆ, ಇವತ್ತು ನಾವು 10-10 ಸಾವಿರ ಕೋಟಿ ರೂಪಾಯಿಗಳ ಮೂಲಕ ಎಲ್ಲಾ ಯೋಜನೆಗಳನ್ನು ಕಟ್ಟಿದ್ದೇವೆ, ಆದರೆ ಯಾವ ಯೋಜನೆಯಿಂದ ಇಲ್ಲಿಯವರೆಗೆ ನಮಗೆ ಎಷ್ಟೆಷ್ಟು ಪ್ರತಿಫಲ ಬಂದಿದೆ ಎನ್ನುವುದನ್ನು ತಾವು ತರಿಸಿ ನೋಡಿ. ಇವತ್ತು ಅನೇಕ ಯೋಜನೆಗಳು ಮುಗಿದು ಹೋಗಿವೆ. ಕಬಿನಿ ಮುಗಿದಿರಬಹುದು, ಹೇಮಾವತಿ ಮುಗಿದಿರಬಹುದು, ಘಟಪ್ರಭಾ ಯೋಜನೆಯಂಥ ಯೋಜನೆಗಳು ಮುಗಿದಿರಬಹುದು, ಭದ್ರಾ ಯೋಜನೆ ಮುಗಿದಿರಬಹುದು.

ಈ ಎಲ್ಲಾ ಯೋಜನೆಗಳಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ ಮೇಲೆ ಅದರಿಂದ ರಾಜ್ಯಕ್ಕೆ ಬರತಕ್ಕಂಥ ಆದಾಯವನ್ನು ಏನಾದರೂ ನಾವು ವಿಮರ್ಶೆ ಮಾಡಿದ್ದೇವೆಯೇ ಹೇಗೆ ಎಂಬುದನ್ನು ನೋಡಿದಾಗ ಒಂದು

ನಯಾಪೈಸೆಯನ್ನೂ ಕೂಡ ನಮ್ಮ ರಾಜ್ಯಕ್ಕೆ ಆದಾಯ ಇಲ್ಲ. ಹಾಗಾದರೆ ಈ ಯೋಜನೆಗಳಿಗೆ ಹಾಕಿರತಕ್ಕಂಥ ದುಡ್ಡು ನಮ್ಮ ಸರ್ಕಾರಕ್ಕೆ ಆಗಲಿ, ನಮ್ಮ ರಾಜ್ಯಕ್ಕೆ ಆಗಲಿ ಪುನಃ ಮರಳಿ ಬಾರದೇ ಇದ್ದರೆ, ಹೊಸ ಯೋಜನೆಗಳನ್ನು ಕೈಗೊಳ್ಳುವುದಕ್ಕೂ ಕೂಡ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಯಾವ ಯೋಜನೆಗಳ ಮುಖಾಂತರ ರೈತರು ಪ್ರತಿಫಲ ಏನು ಪಡೆದಿದ್ದಾರೆ, ಆ ಪ್ರತಿಫಲ ಪಡೆದಿರತಕ್ಕಂಥ ರೈತರಿಗೆ ತಾವು ನಿರ್ದಾಕ್ಷಿಣ್ಯವಾಗಿ ವಾಟರ್ ರೇಟ್ ಆಗಲಿ, ಬೆಟರ್‌ಮೆಂಟ್ ಲೆವಿ ಆಗಲಿ ವಸೂಲಿ ಮಾಡತಕ್ಕಂಥ ವಿಧಾನವನ್ನು ನೀವು ಮಾಡಲೇ ಬೇಕಾಗುತ್ತದೆ. ಅಂದಾಗ ಸುಮಾರು 10 ಸಾವಿರ ಕೋಟಿ ರೂಪಾಯಿಗಳನ್ನು ಕಂದಾಯದ ರೂಪದಲ್ಲಿ ಮಾಡತಕ್ಕಂಥ ಯೋಜನೆ ಸರ್ಕಾರದ ಮನಸ್ಸಿನೊಳಗೆ ಬಂತು ಎಂದಾದರೆ, ಇವತ್ತು ಕೃಷ್ಣ ಮೇಲ್ದಂಡೆ ಯೋಜನೆಗೆ ಬಂಡವಾಳ ಹೂಡತಕ್ಕಂಥದ್ದು ಆಗಲಿ, ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕಂಥ ಯೋಜನೆಗೆ ಹಣದ ಕೊರತೆ ಆಗಲಿ ಮತ್ತು ಇದರಲ್ಲಿ ಯಾವುದು ಹಿಂದುಳಿದಿರತಕ್ಕ ಪ್ರದೇಶ ಇದೆ, ಮತ್ತು ಯಾವುದು ಬರಪೀಡಿತ ಪ್ರದೇಶ ಇದೆ, ಆ ಪ್ರದೇಶಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಇವತ್ತು ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗಬಹುದು.

ಆದರೆ ದುರಾದೃಷ್ಟ ಎಂದು ಹೇಳಿದರೆ ನಮ್ಮ ರಾಜ್ಯದ ಜನ ಏನು ನಿರೀಕ್ಷೆ ಮಾಡಿದ್ದಾರೆಂದರೆ ಅವರಿಗೆ ಪ್ರತಿಯೊಂದು ಪುಕ್ಕಟೆ ಆಗಬೇಕು.

ಇವತ್ತು ಮನೆ ಪುಕ್ಕಟೆ ಆಗಬೇಕು, ಯಾವ ಮಟ್ಟಕ್ಕೆ ಜನ ಬಂದಿದ್ದಾರೆಂದರೆ ಸರ್ಕಾರದಿಂದ ಯಾವುದೇ ಸಿಗಲಿ ಅದು ಪುಕ್ಕಟೆಯಾಗಿ ಸಿಗಬೇಕು. ಬಹುಶಃ ಈ ಚಟವನ್ನು ನಾವೇನಾದರೂ ಜನರಿಗೆ ಕಲಿಸಿದ್ದೋ ಆದರೆ ಬಹುಶಃ ಎಲ್ಲಾ ರಾಜಕೀಯದಲ್ಲಿರತಕ್ಕಂಥ ನಾವುಗಳು ಮುಂದಿನ ದಿನಗಳನ್ನು ಕಷ್ಟದ ದಿನಗಳೆಂದು ಪರಿಗಣಿಸಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ನಿಮ್ಮಲ್ಲಿ ಬಹಳ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ. ಇವತ್ತು ಬೇಕಾದರೆ ನೀವು ಬೆಟರ್‌ಮೆಂಟ್ ತಿದ್ದುಪಡಿ ಆಕ್ಟ್‌ನ್ನು ತಿದ್ದುಪಡಿ ಮಾಡಿ. ಇವತ್ತು ಏನಾಗಿದೆ ಎಂದರೆ ರೈತರಿಗೆ ಅಥವಾ ಬೇರೆಯವರಿಗೆ ಕೊಟ್ಟ ಸಾಲವನ್ನು ವಸೂಲಿ ಮಾಡತಕ್ಕಂಥ ವಿಧಾನವು ಕೂಡ ಇಲ್ಲ. ಇವತ್ತು ಏನು ವಿಧಾನ ಇದೆಯೆಂದು ಹೇಳಿದರೆ ನೀರಾವರಿ ಇಲಾಖೆಯಲ್ಲಿರತಕ್ಕಂಥ ಇಂಜಿನೀಯರ್‌ಗಳು ವಾಟರ್ ರೇಟ್ ಆಗಲಿ, ಬೆಟರ್‌ಮೆಂಟ್ ಲೆವಿ ಆಗಲಿ ಯಾವುದೇ ಆಗಲಿ ಮಾಡುತ್ತೇವೆಂದು ಹೇಳಿದರೆ ಇಷ್ಟು ಎಕರೆ ನೀರಾವರಿ ಇದೆಯೆಂದು ಹೇಳಿ ಬರೆದು ನಮ್ಮ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಕೊಡುತ್ತಾರೆ, ಆಗ ಕಂದಾಯ ಇಲಾಖೆಯ ಅಧಿಕಾರಿಗಳೂ ಕೂಡ ನಿಮ್ಮ ನೀರಾವರಿ ಇಲಾಖೆಗೆ ಬರತಕ್ಕಂಥ ಕಂದಾಯ ಬಗ್ಗೆ ಯಾರೂ ಕೂಡ ವಿಚಾರ ಮಾಡುವುದಿಲ್ಲ.

ತಮ್ಮ ಕೆಲಸದ ಬಗ್ಗೆ ಗಮನಕೊಟ್ಟು ನೀರಾವರಿಗೆ ಬಂದಿರತಕ್ಕಂಥ ಕೆಲಸ ಕಾಮಗಾರಿಗಳಿಗೆ ಕೂಡ ಮುತುವರ್ಜಿವಹಿಸುವುದಿಲ್ಲ. ಅವರಿಂದ ನಿಭಾಯಿಸುವುದಕ್ಕೆ ಕೂಡ ಆಗುವುದಿಲ್ಲ. ಆ ದೃಷ್ಟಿಯಿಂದ ಇವತ್ತು ಕಂದಾಯ ಇಲಾಖೆಗೆ ಏನು ಅಧಿಕಾರ 'ಕೊಟ್ಟಿದ್ದಾರೆ ಅದನ್ನು ಕಡಿಮೆ ಮಾಡಿ, ತಾವೇ ಒಂದು ತಿದ್ದುಪಡಿಯನ್ನು ತಂದು, ಒಂದು ಆಮೂಲಾಗ್ರವಾದಂಥ ಆಕ್ಟನ್ನು ತಂದು ಸಾವಿರಾರು ಕೋಟಿ ರೂಪಾಯಿಗಳು ಸಂದಾಯ ಆಗತಕ್ಕಂಥದ್ದಕ್ಕೆ ಯಾವಾಗಲೂ ಸರ್ಕಾರ ಮುಂದೆ ಬರಬೇಕು. ಇದರ ಬಗ್ಗೆ ·ವಿಚಾರ ಮಾಡಬೇಕು ಎಂದು ತಮ್ಮ ಮೂಲಕ ಭಿನ್ನವಿಸಿಕೊಳ್ಳುತ್ತೇನೆ. ಇದನ್ನು ಹೇಳುವಾಗ ತಮಗೂ ಕೂಡ ಅನ್ನಿಸಬಹುದು. ನಮ್ಮ ಜಿಲ್ಲೆಯಲ್ಲಿರತಕ್ಕಂಥ ಅನೇಕ ಜನ ರೈತರೂ ಕೂಡ ನೀವು ರೈತರ ವಿರುದ್ಧ

ಮಾತನಾಡಿದ್ದೇರೆಂದು ಹೇಳಬಹುದು. ಆದರೆ ಇವತ್ತು ನಾವು ಮುಂದಿನ ಜನಾಂಗದ ಭವಿಷ್ಯದ ಬಗ್ಗೆ ವಿಚಾರ ಮಾಡಬೇಕಾಗಿದೆ.

ಆ ದೃಷ್ಟಿಯಿಂದ ಇವತ್ತು ಆ ತಿದ್ದುಪಡಿ ಮೂಲಕ ತಂದು ನಿಗಧಿತ ಅವಧಿಯೊಳಗೆ ಎಲ್ಲಾ ಯೋಜನೆಗಳು ಮುಗಿಯಬೇಕು, ಎಲ್ಲಾ ನೀರಾವರಿ ಕೆಲಸ ಕಾರ್ಯಗಳು ಒಳ್ಳೆಯ ರೀತಿಯಲ್ಲಿ ಆಗಬೇಕು ಎನ್ನುವ ದೃಷ್ಟಿಯಿಂದ ಅದಕ್ಕೆ ಸೂಕ್ತ ರೀತಿಯಲ್ಲಿ ಬಂಡವಾಳಗಳ ಹೂಡಿಕೆ ಆಗಬೇಕು ಎನ್ನುವ ದೃಷ್ಟಿಯಿಂದ, ದೂರದೃಷ್ಟಿಯಿಂದ ಈ ವಿಚಾರವನ್ನು ಹೇಳುವುದಕ್ಕೆ ನಿಂತಿದ್ದೇನೆ. ಅದಕ್ಕೋಸ್ಕರ ತಾವು ಈ ತಿದ್ದುಪಡಿ ಮುಖಾಂತರ ತಂದು ಅದಕ್ಕೆ ಆಮೂಲಾಗ್ರವಾದಂಥ ಇರಿಗೇಷನ್ ಆಕ್ಟ್ (ತಿದ್ದುಪಡಿ) ತಂದು ಅವರಿಗೆ ಜ್ಯುಡಿಷಿಯಲ್ ಪವರ್ಸ್ಕೊಡಬೇಕು, ಈಗ ಉದಾಹರಣೆಗೆ ಫಾರೆಸ್ಟ್ ಡಿಪಾರ್ಟ್ಮೆಂಟಿನೊಳಗೆ ನೋಡುತ್ತೇವೆ. ಅರಣ್ಯ ಇಲಾಖೆಯಲ್ಲಿ ಯಾವುದಾದರೂ ಒಂದು ಫಾರೆಸ್ಟ್ ಒಳಗೆ ಏನಾದರೂ ತಪ್ಪು ಮಾಡಿದರೆ ಅವನಿಗೆ ರಶೀದಿ ಹರಿದು ದಂಡ ಹಾಕುತ್ತಾರೆ. ಅದೇ ನೀರಾವರಿಯೊಳಗೆ ಯಾವುದಾದರೂ ಕೆನಾಲ್ ಒಡೆದು ಹೋದರೂ ಕೂಡ ಅಥವಾ ನೀರಾವರಿ ವ್ಯವಸ್ಥೆ, ನೀರು ಕೊಡತಕ್ಕಂಥ ಸಂದರ್ಭದಲ್ಲಿ ರೈತರಿಂದ ಏನಾದರೂ ತಪ್ಪು ಕಂಡುಬಂದಾಗ ರೈತನ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದಕ್ಕೆ ತಮ್ಮ ಕಡೆಯಿಂದ ಯಾವುದೇ ಕ್ರಮ ಕೂಡ ಇಲ್ಲ. ಇವತ್ತು ಮೇಂಟೆನೆನ್ಸ್ ವಿಭಾಗದಲ್ಲಿ ಇರತಕ್ಕಂಥ ಇಂಜಿನೀಯರುಗಳು ಯಾರೂ ಕೂಡ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ದುರಾದೃಷ್ಟ ಏನು ಎಂದು ಹೇಳಿದರೆ ಅಲ್ಲಿ ನೀರು ಸರಬರಾಜು ಮಾಡತಕ್ಕಂಥ ಇಂಜಿನೀಯರುಗಳು ಇರಬಹುದು ಅವರಿಗೆ ನೀರನ್ನು ಕೊಡತಕ್ಕಂಥದ್ದು ಇವತ್ತಿನವರೆಗೆ ಸಾಧ್ಯವಾಗುತ್ತಿಲ್ಲ. ರೈತರೇ ಸ್ವತಃ ಹೋಗಿ ಗೇಟುಗಳನ್ನು ತೆಗೆಯುತ್ತಾರೆ, ಕೆನಾಲ್ಗಳನ್ನು ಒಡೆಯುತ್ತಾರೆ, ನೀರಿನ ವ್ಯವಸ್ಥೆಯಲ್ಲಿ ನೋಡಲಾರದಷ್ಟು ಇವತ್ತಿನ ದಿವಸ ನಡೆದುಬಿಟ್ಟಿದೆ. ಆದ್ದರಿಂದ ಅದನ್ನೆಲ್ಲಾ ಸರಿಪಡಿಸಬೇಕಾದರೆ ಒಂದು ಆಮೂಲಾಗ್ರವಾಗಿರತಕ್ಕಂಥ ಕಾಯ್ದೆ ಕಾನೂನುಗಳನ್ನು ತಂದು ಈ ನೀರನ್ನು ಕೊಡತಕ್ಕಂಥ ಯೋಜನೆಯನ್ನು ತಾವು ಬಹಳ ದೂರದೃಷ್ಟಿಯಿಂದ ಮಾಡುತ್ತೀರೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಈ ಇಲಾಖೆಯಲ್ಲಿ ಮುಖ್ಯವಾಗಿ ಕಾರ್ಯದಕ್ಷತೆಯನ್ನು ಕೂಡ ತಾವು ಹೆಚ್ಚಿಸಬೇಕು. ಪ್ರತಿಯೊಂದು ಇಲಾಖೆಗಳಲ್ಲಿ ಅನೇಕ ತಿದ್ದುಪಡಿಗಳನ್ನು ತಂದಿದ್ದಾರೆ ಮತ್ತು ಅದರಲ್ಲಿ ನಾವೆಲ್ಲ ತಪ್ಪುಗಳನ್ನು ನೋಡುತ್ತೇವೆ.

ಉದಾಹರಣೆಗೆ ನಾರಾಯಣಪುರದ ಎಡದಂಡೆ ಕಾಲುವೆ ಬಗ್ಗೆ, ನಂತರ ಹೇಮಾವತಿ ಕಾಲುವೆ ಒಡೆದಿರುವುದು ಇವುಗಳನ್ನೆಲ್ಲಾ ರಿಪೇರಿ ಮಾಡಿಸುವುದಕ್ಕೆ ಪುನಃ ನೂರಾರು ಕೋಟಿ ರೂಪಾಯಿಗಳನ್ನು ವ್ಯಯ ಮಾಡುತ್ತೇವೆ. ಅದರ ಬದಲಾಗಿ ತಪ್ಪುಗಳು ಆಗದಂತೆ ನೋಡಿಕೊಳ್ಳುವುದು ಬಹಳ ಮುಖ್ಯ ಇದೆ. ನಮ್ಮ ರಾಜ್ಯದಲ್ಲಿ ಬಹಳ ಉತ್ತಮವಾಗಿ ಕೆಲಸ ನಿರ್ವಹಿಸತಕ್ಕಂಥ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇದೆ. ನೀರಾವರಿ ಯೋಜನೆಗಳ ಬಗ್ಗೆ ಆಗತಕ್ಕಂಥ ಸಮೀಕ್ಷೆಯಾಗಲಿ, ಅನ್ವೇಷಣೆಯಾಗಲಿ, ಅಂತರ್ರಾಜ್ಯ ಜಲವಿವಾದವಾಗಲೀ ಮತ್ತು ಜಲ ವಿಜ್ಞಾನದ ಘಟಕಗಳ ಬಗ್ಗೆಯಾಗಲಿ ಇಂತಹ ಎಲ್ಲಾ ಮಾಹಿತಿಗಳನ್ನು ಒಳಗೊಂಡಿರತಕ್ಕ ಸಂಸ್ಥೆ ಈ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಾಗಿದೆ. ಇದರಲ್ಲಿ ಅನೇಕ ಇಂಜಿನೀಯರುಗಳು ಇದ್ದಾರೆ. ನಾವು ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕಾಗಿತ್ತೋ ಅಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ನಾವು ಇದನ್ನು ಬಹಳ ನೆಗ್ಲೆಕ್ಟ್ ಮಾಡಿದ್ದೇವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಬಹುಶಃ ಇದು ನಾನ್ ಎಕ್ಸಿಕ್ಯೂಟೀವ್ ಕೆಲಸ. ಅನೇಕ ಇಂಜಿನೀಯರುಗಳು ಪ್ರತಿಯೊಂದು ಪ್ರಾಜೆಕ್ಟ್ನ್ನು ಬೇಕು. ಅಲ್ಲಿರತಕ್ಕಂಥ ತಪ್ಪುಗಳನ್ನು ತಿದ್ದಿ ನೋಡಬೇಕು, ಅನ್ವೇಷಣೆಗಳನ್ನು

ಮಾಡಬೇಕಾದಂಥ ಸಂದರ್ಭ ಇರುತ್ತದೆ. ಆ ದೃಷ್ಟಿಯಿಂದ ಅವರಿಗೆಲ್ಲಾ ತೊಂದರೆಯಾಗತಕ್ಕಂಥ ಕೆಲಸ ಇದು. ಈ ತೊಂದರೆಯಾಗತಕ್ಕಂಥ ಕೆಲಸಕ್ಕೆ ನಾನ್ ಎಕ್ಸಿಕ್ಯೂಟೀವ್ ಇರತಕ್ಕಂಥ ಹುದ್ದೆಗೆ ಬಹುಶಃ ಯಾವ ಇಂಜಿನೀಯರುಗಳೂ ಕೂಡ ಬರುವುದಿಲ್ಲ. ಆ ದೃಷ್ಟಿಯಿಂದ ಇವತ್ತು ಅನ್ವೇಷಣೆ ಮಾಡತಕ್ಕಂಥ ವಿಚಾರದಲ್ಲಾಗಲಿ, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯನ್ನು ಸ್ಟ್ರೆಂಥನ್ ಮಾಡುವಂಥ ವಿಚಾರದಲ್ಲಾಗಲಿ ನೀವು ಉತ್ತೇಜನ ಕೊಡಬೇಕು. ಆ ಅಧಿಕಾರಿಗಳಿಗೆ ಹೆಚ್ಚಿನ ರೀತಿಯಿಂದ,

ಒಳ್ಳೆಯ ಮನಸ್ಸಿನಿಂದ ಅವರು ಕೆಲಸ ಮಾಡತಕ್ಕಂಥ ವಾತಾವರಣವನ್ನು ನಿರ್ಮಿಸಿದಾಗ ಮುಂದಾಗತಕ್ಕಂಥ ತಪ್ಪುಗಳನ್ನು ಅವರು ಸರಿಪಡಿಸುವುದಕ್ಕೆ ಸಾಧ್ಯವಾಗಬಹುದು. ಇವತ್ತು ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಬಹಳ ಒಳ್ಳೆಯ ರೀತಿಯಿಂದ ಕೆಲಸ ನಿರ್ವಹಿಸುವುದಕ್ಕೆ ಬಹುಶಃ ಈಗ ಕ್ಯಾಪ್ಟನ್ ರಾಜಾರಾಮ್ ರವರು ಬಂದಿದ್ದಾರೆ. ಬಹಳ ಒಳ್ಳೆಯ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಪ್ರೋತ್ಸಾಹವನ್ನು ಕೊಡಬೇಕಾದುದು ಸರ್ಕಾರದ ಆದ್ಯಕರ್ತವ್ಯ. ಮೈಸೂರಿನ ಕೃಷ್ಣರಾಜಸಾಗರದಲ್ಲಿ ಕರ್ನಾಟಕ ಇಂಜಿನೀಯರಿಂಗ್ ಸಂಶೋಧನಾ ಕೇಂದ್ರ ಎಂಬುದು ಇದೆ. ಈ ಸಂಸ್ಥೆಗೆ ಅನೇಕ ಅನುದಾನಗಳನ್ನು ಕೊಡುತ್ತೇವೆ. ಆದರಿಂದಾಗತಕ್ಕಂಥ ಕೆಲಸ ಕಾರ್ಯಗಳನ್ನು ನೋಡಿದಾಗ ನಮಗೆ ಬಹಳ ಕಷ್ಟ ಅನಿಸುತ್ತದೆ. ಇನ್ನೂ ಹೆಚ್ಚು ಆ ಸಂಸ್ಥೆಯಿಂದ ನಿರೀಕ್ಷೆ ಮಾಡಬೇಕಾಗುತ್ತದೆ. ಇವತ್ತು ಅವರಿಗೆ ವೇತನದ ಮೂಲಕ ರಾಜ್ಯದ ಹಣವನ್ನು ಹೆಚ್ಚಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಯಾವ ಯಾವ ಯೋಜನೆಗಳು ಅತಿ ಶೀಘ್ರವಾಗಿ ಮುಗಿಯಬೇಕು ಎನ್ನುವಂಥ ಹಂತದಲ್ಲಿ ಅವರು ಯಾವ ರೀತಿಯಿಂದ ಬಹಳ ತಡ ಮಾಡಲಾರದೆ ಯಾವ ಯಾವ ಪ್ರಪೋಸಲ್ಗಳನ್ನು ಯಾವ ಯಾವ ಸಲಹೆ ಸೂಚನೆಗಳನ್ನು ಕೊಟ್ಟಿರುತ್ತಾರೋ, ಅವು ಕಾರ್ಯಗತ ಆಗದೇ ಹೋದರೆ ಅದರಿಂದ ಅನೇಕ ಹಾನಿಗಳೂ ಕೂಡ ಆಗುತ್ತವೆ.

ಆ ದೃಷ್ಟಿಯಿಂದ ಇವತ್ತು ಸಂಶೋಧನಾ ಕೇಂದ್ರ ಕೂಡ ಒಳ್ಳೆಯ ಮಟ್ಟದ್ದು ಆಗಬೇಕು. ಅನೇಕ ಯೋಜನೆಗಳು ಕುಂಠಿತವಾಗುವುದನ್ನು ಇವತ್ತು ಸರ್ಕಾರದಲ್ಲಿ ನಾವು ನೋಡುತ್ತಿದ್ದೇವೆ. ಅಂತಹ ಯೋಜನೆಗಳು ಕುಂಠಿತವಾಗುವುದಕ್ಕೆ ತಮ್ಮಲ್ಲಿ ಕೂಡ ಒಂದು ದೋಷವಿದೆ. ವರ್ಷದೊಳಗೆ ಇಂತಿಷ್ಟು ಯೋಜನೆಗಳು ಆಗಬೇಕು ಎಂದು ಸೂಚಿಸಿರತಕ್ಕಂಥ ಕಾರ್ಯಕ್ರಮದಂತೆ ಹಣ ಭರವಸೆ ಪತ್ರ ಬಿಡುಗಡೆ ಆಗದೆಯೇ ತಾವು ನಿಗದಿತ ವೇಳೆಯೊಳಗೆ ಎಲ್‌ಓಸಿ ಕೊಡದೇ ಹೋದರೆ, ಆ ಯೋಜನೆಗಳು ಕೂಡ ಕುಂಠಿತಗೊಳ್ಳುತ್ತದೆ. ಯಾವುದಾದರೂ ರಿಪೇರಿ ಕೆಲಸವನ್ನು ತೆಗೆದುಕೊಂಡರೂ ತಾವು ಇನ್ಟೈಮ್ ಕೊಡತಕ್ಕಂಥ ಕೆಲಸವನ್ನು ಮಾಡಲೇ ಬೇಕಾಗುತ್ತದೆ. ಯಾವುದಾದರೂ ಒಂದು ಅದರಲ್ಲಿ ನೀರಾವರಿ ಇಲಾಖೆ ಒಳ್ಳೆಯ ರೀತಿಯಿಂದ ಆಗಬೇಕಾಗಿತ್ತು ಎಂದರೆ ಈ ರೀತಿಯಾಗಿ ಎಲ್‌ಓಸಿಗಳನ್ನು ಪ್ರತಿ ತಿಂಗಳು ಕೊಡತಕ್ಕಂಥ ಯೋಜನೆಯನ್ನು ನೀವು ಮಾಡದೇ ಹೋದರೆ ಬಹುಶಃ ಅದರಲ್ಲೂ ಕೂಡ ಅನೇಕ ಯೋಜನೆಗಳು ಬಹಳ ಕುಂಟಿತವಾಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಅನೇಕ ವಿಚಾರಗಳನ್ನು ಬೇರೆ ಬೇರೆ ಸಮಯದಲ್ಲಿ ಬಹಳ ಹೊತ್ತು ಪ್ರಸ್ತಾಪ ಮಾಡಿದ್ದೇವೆ. ಇದರಲ್ಲಿ ಮುಖ್ಯವಾಗಿ ನಾವು ಈ ಕೃಷ್ಣ ಮೇಲ್ದಂಡೆ ಯೋಜನೆ ನೀರಾವರಿ ಬಗ್ಗೆ ಮಾತನಾಡುವುದಕ್ಕಿಂತ ಮುಂಚೆ ನಾನು ನಿಜವಾಗಲೂ ಮುಳುಗಡೆಯಾಗಿರತಕ್ಕಂಥ ರೈತರ ಬಗ್ಗೆ ಜನರ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಈಗಾಗಲೇ ನಮ್ಮ ಜೆ.ಟಿ. ಪಾಟೀಲರು ಸರ್ಕಾರಕ್ಕೆ ಕೆಲವು

ಸಲಹೆ ಸೂಚನೆಗಳನ್ನು ಇದರ ಬಗ್ಗೆ ಹೇಳಿದ್ದಾರೆ. ನಾರಾಯಣಪುರ ಅಣೆಕಟ್ಟೆನಿಂದಾಗಿ ಸುಮಾರು 43 ಹಳ್ಳಿಗಳು ಮುಳುಗಡೆಯಾಗಿ ಸುಮಾರು 6645 ಕುಟುಂಬಗಳು ಬಾಧಿತವಾಗಿವೆ. 1982ರಲ್ಲಿ ನಾರಾಯಮಪುರ ಡ್ಯಾಮ್ ಪ್ರಾರಂಭವಾದರೂ ಕೂಡ, ರಿಸರ್ವಾಯರ್ ಒಳಗಡೆ ನೀರು ನಿಂತಿದ್ದರೂ ಕೂಡ, ಆ ಜಲಾಶಯದ ಸುತ್ತ 43 ಹಳ್ಳಿಗಳು ಮುಳುಗಡೆಯಾಗಿದ್ದರೂ ಸಹ ಇಲ್ಲಿಯವರೆಗೆ ಅವರಿಗೆ ಪುನರ್ವಸತಿ ಒದಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಅಲ್ಲಿಯ ಜನಗಳು ನಿಜವಾಗಿಯೂ ನಮಗೋಸ್ಕರ ತ್ಯಾಗಮಾಡಿದ್ದಾರೆ. ಆ ತ್ಯಾಗ ಮಾಡಿರತಕ್ಕಂಥ ಜನಕ್ಕೆ ನಾವು ಇನ್ನೂ ಹೆಚ್ಚಿನ ರೀತಿಯಿಂದ ಸವಲತ್ತುಗಳನ್ನು ಕೊಡಬೇಕಾದುದು ಸರ್ಕಾರದ ಅದ್ಯಕರ್ತವ್ಯ. ಅದೇ ರೀತಿಯಾಗಿ ನಾರಾಯಣಪುರದ ಅಣೆಕಟ್ಟೆನಿಂದ ಮುಳುಗಡೆಯಾಗಿರತಕ್ಕಂಥ ರೈತರ ಕುಟುಂಬಗಳಿಗಾಗಲಿ, ಆಲಮಟ್ಟಿ ಜಲಾಶಯದಿಂದ ಮುಳುಗಡೆಯಾಗಿರತಕ್ಕಂಥ ಸುಮಾರು 95 ಹಳ್ಳಿಗಳ ಜನರಿಗೆ ಪುನರ್ವಸತಿಯನ್ನು ಒದಗಿಸುವ ಬಗ್ಗೆಯಾಗಲಿ, ಬಾಗಲಕೋಟೆ ಪಟ್ಟಣದ ಪುನರ್ವಸತಿಗಾಗಲಿ, ತಾವು ಬಹುಶಃ ಹೆಚ್ಚಿನ ಆದ್ಯತೆಯನ್ನು ಕೊಟ್ಟು 2000 ಇಸವಿಯೊಳಗಾಗಿ ಯಾವುದೇ ಅಣೆಕಟ್ಟನ್ನು ಕಟ್ಟಿ ನೀರು ನಿಲ್ಲಿಸಿ ಬಚಾವತ್ ಆಯೋಗದ ಪ್ರಕಾರ ನಾವು ನೀರನ್ನು ಸದುಪಯೋಗ ಪಡೆಯಬೇಕೆಂದು ಹೇಳಿ ನಾವು ಏನು ಉತ್ಸುಕರಾಗಿದ್ದೇವೆ ಅದೇ ರೀತಿಯಿಂದ ಅದೇ ಪ್ರಪ್ಪೋರ್ಷನೇಟ್ ಆಗಿ ಬಾಗಲಕೋಟೆ ಪಟ್ಟಣಕ್ಕೂ ಕೂಡ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

7.20 ಪಿ.ಎಂ.

ಈ ಹಣದ ತೊಂದರೆ ಎಂದು ನಾನು ಹೇಳುವುದಿಲ್ಲ, ಹಣವನ್ನು ತಾವು ಕೊಡುತ್ತೀರಿ, ಅದರ ಜೊತೆಗೆ ಮೂಲಭೂತ ಸೌಕರ್ಯಗಳನ್ನೂ ತಾವು ಕೊಡಬೇಕಾಗುತ್ತದೆ. ಉದಾಹರಣೆಗಾಗಿ ತಮಗೆ ಹೇಳುವುದಾದರೆ, ಈಗ ಬಾಗಲಕೋಟೆ ಸ್ಥಳಾಂತರಗೊಳ್ಳಬೇಕು, ಅದಕ್ಕೆ ಪುನರ್ವಸತಿ ಆಗಬೇಕು, ಪುನರ್ವಸತಿ ಆಗಬೇಕಾಗಿತ್ತು ಅಂದರೆ ಅದಕ್ಕೂ ಕೂಡ ಸಿಬ್ಬಂದಿ ಬೇಕಾಗುತ್ತದೆ, ಬಹಳ ಜನ ಇಂಜಿನಿಯರ್ಗಳು ಬೇಕಾಗುತ್ತದೆ, ಬಹಳ ಜನ ಕಂದಾಯ ಇಲಾಖೆಗೆ ಸಂಬಂಧಪಟ್ಟಿರತಕ್ಕ ಅಧಿಕಾರಿಗಳು ಬೇಕಾಗುತ್ತದೆ. ಆ ದೃಷ್ಟಿಯಿಂದ ಅಲ್ಲಿ ಖಾಲೀ ಇರತಕ್ಕಂಥ ಯಾವುದೇ ಹುದ್ದೆಗಳಾಗಲಿ ಆದಷ್ಟು ಶೀಘ್ರ ತಾವು ಕೊಟ್ಟಿದ್ದೇ ಆದರೆ ಇವೆಲ್ಲಾ ಕಾರ್ಯಕ್ರಮಗಳನ್ನು ಬಹಳ ಸುಸೂತ್ರವಾಗಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಬಹುಶಃ ಈ ಮುಳುಗಡೆ ಪ್ರದೇಶಗಳಿಗೆ ತಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕು, ಅವರು ಮಾಡಿರತಕ್ಕಂಥ ಉಪಕಾರವನ್ನು ಸ್ಮರಿಸುವುದರ ಸಲುವಾಗಿ ಅಲ್ಲಿರತಕ್ಕ ಬಡ ಕುಟುಂಬಗಳಿಗೆ ಬಹುಶಃ ತಾವು ಸರ್ಕಾರಿ ನೌಕರಿಯಲ್ಲಿಯೂ ಕೂಡ ಪ್ರತಿ ಮನೆಗೆ ಒಬ್ಬೊಬ್ಬರನ್ನು ತಾವು ಅದ್ಯತೆ ಮೇಲೆ ನೌಕರಿಗೆ ತೆಗೆದುಕೊಳ್ಳತಕ್ಕಂಥದ್ದರ ಬಗ್ಗೆ ಸರ್ಕಾರ ಇದರ ಬಗ್ಗೆ ಒಂದು ನಿಯಮವನ್ನು ಮಾಡಿದರೆ ಬಹಳ ಹೆಚ್ಚಿನ ಸಹಾಯ ಸಿಕ್ಕಿದಂತಾಗುತ್ತದೆ. ಆ ದೃಷ್ಟಿಯಿಂದ ಇವೊತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಬಹುಶಃ ನಾವೆಲ್ಲರೂ ಕೂಡ ಬಹಳಷ್ಟು ಚರ್ಚೆ ಮಾಡಿದ್ದೇವೆ. ತಾವೂ ಕೂಡ ಈಗ ದುಡ್ಡಿನ ವ್ಯವಸ್ಥೆ ಮಾಡಬೇಕು, ಅದಕ್ಕೋಸ್ಕರ ತಾವು ಈ ವರ್ಷ 1995-96ರಲ್ಲಿ ರಾಜ್ಯಸರ್ಕಾರದಿಂದ 176 ಕೋಟಿ ಕೊಟ್ಟಿದ್ದೀರಿ, ಕೃಷ್ಣಾ ಭಾಗ್ಯ ಜಲ ನಿಗಮದಿಂದ 189 ಕೋಟಿ ಕೊಟ್ಟಿದ್ದೀರಿ, ಒಟ್ಟು ಸುಮಾರು 365 ಕೋಟಿ.

ಇದರಲ್ಲಿ ಎಷ್ಟು ದುಡ್ಡು ಖರ್ಚಾಗಿದೆ ಎಂಬುದನ್ನು ತಾವು ಉತ್ತರದಲ್ಲಿ ತಿಳಿಸಬೇಕು. ಈಗ ಹೆಚ್ಚಿಗೆ ಖರ್ಚುಮಾಡಿದ್ದರೆ ಬಹಳ ಸಂತೋಷ. ಈ ವರ್ಷ 400 ಕೋಟಿ ರೂಪಾಯಿಗಳನ್ನು ರಾಜ್ಯಸರ್ಕಾರದಿಂದ ನಿಗಧಿ ಮಾಡಿದ್ದೀರಿ, ಅದೇ ರೀತಿ ಕೃಷ್ಣಾ ಭಾಗ್ಯ ಜಲ ನಿಗಮದಿಂದ 600 ಕೋಟಿ ರೂಪಾಯಿಗಳನ್ನು ನಿಗಧಿ ಮಾಡಿದ್ದೀರಿ. ಅಂದಾಗ ಸುಮಾರು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಹೇಳಿ ತಾವು ಅಂದಾಜು ಇಟ್ಟುಕೊಂಡಿದ್ದೀರಿ. ಈ ಹಣದ ವ್ಯವಸ್ಥೆ ತಾವು ಮಾಡುತ್ತೀರಿ ಬಹುಶಃ ಆ ದೃಷ್ಟಿಯನ್ನೇನು ಇಟ್ಟುಕೊಂಡಿದ್ದೀರಿ ಅದಕ್ಕೆ ನಿಮಗೆ ಬಹಳ ಅಭಿನಂದಿಸುತ್ತೇನೆ. ಸರ್ಕಾರಕ್ಕೆ ಇವೊತ್ತು ಹಣದ ಅನೇಕ ತೊಂದರೆಗಳು ಇದ್ದರೂ ಕೂಡ ಇವೊತ್ತು ಕೃಷ್ಣಾ ಮೇಲ್ದಂಡೆ ಯೋಜನೆಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೀರಿ, ಬಹಳ ಸಂತೋಷ. ಅದರ ಜೊತೆಗೆ ನಾನು ನಿಮ್ಮಲ್ಲಿ ಬಹಳ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ, ಇವೊತ್ತು ಕೊಟ್ಟಿರತಕ್ಕಂಥ ದುಡ್ಡು ಬಹಳ ಸದುಪಯೋಗ ಆಗಬೇಕು, ಮತ್ತು ಅಷ್ಟೇ ಪ್ರಮಾಣದೊಳಗೆ ಖರ್ಚೂ ಕೂಡ ಆಗಬೇಕಾಗಿದೆ.

ಏನೋ ಬಹಳ ದುಡ್ಡು ಕೊಟ್ಟುಬಿಟ್ಟರೆ ಒಮ್ಮಿಂದೊಮ್ಮೆಲೆ ಅವರು ಏನೇನೋ ಖರ್ಚು ಮಾಡಿಬಿಟ್ಟರೆ ಅದೂ ಕೂಡ ಸಾಧಿಸುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಇವೊತ್ತು ಅದಕ್ಕೆ ಸಾವಿರ ಕೋಟಿ ರೂಪಾಯಿ ವ್ಯವಸ್ಥಿತ ರೀತಿಯಿಂದ ಖರ್ಚಾಗಬೇಕು ಎನ್ನುವಂಥ ದೃಷ್ಟಿಯಿಂದ ನಿಮ್ಮಲ್ಲಿ ನಾನು ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ. ನಿಮ್ಮಲ್ಲಿ ಆ ದೂರದೃಷಿ ಇತ್ತು ಎಂದು ಹೇಳಿದರೆ, ಯಾವ ರೀತಿ ನಾವು ಬಂಡವಾಳವನ್ನು ಹೂಡುತ್ತೇವೆಯೋ ಅದೇ ರೀತಿಯಾಗಿಯೂ ಕೂಡ ಸಿಬ್ಬಂದಿಯನ್ನು ತಾವು ಮಾಡಬೇಕಾಗಿದೆ. ಈಗ ಸಿಬ್ಬಂದಿ ವಿಚಾರದೊಳಗೆ ಇದೇ ಸದನದೊಳಗೆ ನಾನು ಒಂದು ಪ್ರಶ್ನೆಯನ್ನು ಕೇಳಿದಾಗ ಸುಮಾರು 34 ಹುದ್ದೆಗಳು ನಮ್ಮ ಯು.ಕೆ.ಪಿ.ಯದು ಖಾಲೀ ಇವೆ. ನಾವು ನೋಡುತ್ತೇವೆ ಅಲ್ಲಿರತಕ್ಕ ಇಂಜಿನಿಯರ್ಗಳು ಬಹುಶಃ ಅವನು ಆರು ತಿಂಗಳಾಗಿರಬೇಕು ಆಮೇಲೆ ಮತ್ತೆ ಬೇರೆ ಕಡೆ ಮೈಸೂರಿಗೆ ಟ್ರಾನ್ಸ್ಫರ್ ಮಾಡಿಸಿಕೊಂಡು ಹೋಗುತ್ತಾರೆ.

ಆದರೆ ಇವೊತ್ತು ನಿಮಗೆ ಆ ಯೋಜನೆಗೆ ನಿಜವಾಗಲೂ ನಿಮ್ಮಿಂದ ನ್ಯಾಯ ದೊರಕಬೇಕಾಗಿತ್ತು ಎನ್ನುವಂಥ ದೃಷ್ಟಿ, ನಿಮ್ಮ ಕಳಕಳಿ ಇತ್ತು ಎಂದು ಹೇಳಿದರೆ ಇವೊತ್ತು ಸಿಬ್ಬಂದಿ ಕೊರತೆ ಆಗದಂತೆ ನೋಡಿಕೊಳ್ಳಬೇಕಾದುದು ಬಹಳ ಆದ್ಯ ಕರ್ತವ್ಯ. ಇವೊತ್ತು ಸಿಬ್ಬಂದಿ ಕೊರತೆ ಆಯಿತು ಎಂದರೆ ಕೆಲಸವೂ ಕೂಡ ಕುಂಠಿತವಾಗುತ್ತವೆ. ಇವೊತ್ತು ನಿಮ್ಮ ಮನವರಿಕೆಗೆ ತರುವುದಾದರೆ, ಇವೊತ್ತು ಅನೇಕ ಹುದ್ದೆಗಳು, ಆದರಲ್ಲೂ ಅಧೀಕ್ಷಕ ಇಂಜಿನಿಯರ್‌ಎರಡು ಹುದ್ದೆಗಳಿಗೆ ಇನ್ನೂ ಪೋಸ್ಟಿಂಗ್ ಮಾಡಿಲ್ಲ. ಅದೇ ರೀತಿ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗಳಿಗೆ ಸುಮಾರು ನೀವು ಇನ್ನೂ 34 ಜನರನ್ನು ಪೋಸ್ಟಿಂಗ್ ಮಾಡಬೇಕಾಗಿದೆ. ಸಹಾಯಕ ಇಂಜಿನಿಯರ್, ಕಿರಿಯ ಅಭಿಯಂತರರು ಈ ರೀತಿಯಾಗಿ ನೀವು ಸುಮಾರು 74 ಅಧಿಕಾರಿಗಳನ್ನು ವರ್ಗ ಮಾಡದೇ ಇದ್ದರೆ ಅಲ್ಲಿನ ಕೆಲಸಗಳನ್ನು ಕಾರ್ಯನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ನಿಮಲ್ಲಿ ನಾನು ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ, ಯಾವುದೇ ರೀತಿಯಿಂದ ಈ ಸಿಬ್ಬಂದಿಯ ಕೊರತೆ ಆಗದ ರೀತಿಯಲ್ಲಿ ತಾವು ಹೆಚ್ಚಿನ ರೀತಿಯಿಂದ ನೋಡಿಕೊಳ್ಳಬೇಕು, ಮತ್ತು ಸುಮಾರು 1992ರಲ್ಲಿ ಸುಮಾರು 440 ಜನ ಆ ಪ್ರದೇಶಗಳಲ್ಲಿರತಕ್ಕ ಇಂಜಿನಿಯರ್ಗಳನ್ನು ಗುತ್ತಿಗೆ ಅಧಾರದಮೇಲೆ ಸಂದರ್ಶನ ಮಾಡಿ ಅವರನ್ನು ಮೆರಿಟ್ ಲಿಸ್ಟ್ ಮೇಲೆ ಮತ್ತು ರೋಸ್ಟರ್ ಪದ್ಧತಿಮೇಲೆ ನೇಮಕ ಮಾಡಿಕೊಂಡಿದ್ದರು, ಬಹುಶಃ ಅಲ್ಲಿರತಕ್ಕಂಥ

ಇಂಜಿನಿಯರ್ಗೆ ಆಧ್ಯತೆಯನ್ನು ಕೊಡಬೇಕು, ಅಲ್ಲಿರತಕ್ಕ ಪ್ರದೇಶದವರಿಗೆ ಆದ್ಯತೆಯನ್ನು ಕೊಡಬೇಕು ಎನ್ನುವಂಥ ದೃಷ್ಟಿಯಿಂದ ಮತ್ತು ಕೆಲಸ ಕಾರ್ಯಗಳು ಆಗಬೇಕು ಎನ್ನುವಂಥ ದೃಷ್ಟಿಯಿಂದ ಆದ್ಯತೆಯನ್ನು ಕೊಡಬೇಕು. ಆದರೆ ಬಹುಶಃ ಅವರನ್ನು ಇನ್ನೂ ಕೂಡ ರೆಗ್ಯೂಲರೈಸ್ ಮಾಡದೇ ಇರತಕ್ಕಂಥದ್ದು ಇವೊತ್ತಿನದಿವಸ ನಾವು ನೋಡುತ್ತೇವೆ, ಅನೇಕ ಇಂಜಿನಿಯರ್ಗಳು ಕೂಡ ಸರ್ಕಾರಕ್ಕೆ ಅನೇಕ ವಿಧದಲ್ಲಿ ವಿನಂತಿಯನ್ನು ಮಾಡಿಕೊಂಡರೂ ಕೂಡ ಬಹುಶಃ ಅದನ್ನು ಬಹಳ ದೂರದೃಷ್ಟಿಯಿಂದ ಮತ್ತು ನಿರುದ್ಯೋಗಿಗಳ ಒಂದು ಹಿತದೃಷ್ಟಿಯಿಂದ ಅವರನ್ನು ರೆಗ್ಯುಲರೈಸ್ ಮಾಡತಕ್ಕಂಥ ಕೆಲಸವನ್ನು ತಾವು ಮಾಡಬೇಕು.

ಇವೊತ್ತು ಯಾವುದೇ ರೀತಿ ಅವರಿಗೆ ಅನ್ಯಾಯವಾಗದಂಥ ರೀತಿಯೊಳಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಕೊನೆಯದಾಗಿ, ಈಗೇನು ಕೃಷ್ಣಾ ಮೇಲ್ದಂಡೆ ಯೋಜನೆಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ಘಟಪ್ರಭಾ ಯೋಜನೆಗಳಿವೆ, ಮಲಪ್ರಭಾ ಯೋಜನೆಗಳಿವೆ, ಆ ಮಲಪ್ರಭಾ ಯೋಜನೆಗಳನ್ನು ಆದಷ್ಟು ಶೀಘ್ರ ಮುಗಿಸತಕ್ಕಂಥದ್ದಕ್ಕೆ ಇವೊತ್ತು ಹೆಚ್ಚಿನ ಹಣವನ್ನು ಕೊಟ್ಟು, ಎಲ್ಲೆಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ ಅದನ್ನು ಕೊಟ್ಟು ಈ ಯೋಜನೆಯನ್ನು ಮುಗಿಸುವಂಥ ಪ್ರಯತ್ನ ಮಾಡಬೇಕಾಗಿದೆ. ಇವೊತ್ತು ಮಲಪ್ರಭಾ ಎಡದಂಡೆ ಕಾಲುವೆ ಬಗ್ಗೆ ಹೇಳುವುದಾದರೆ, ಸುಮಾರು 126 ಕಿ.ಮೀ. ರವರೆಗೆ ಈ ಎಡದಂಡೆ ಕಾಲುವೆಯನ್ನು ಪೂರ್ಣಗೊಳಿಸಿದ್ದೀರಿ, ಸುಮಾರು 126ನೇ ಕಿ.ಮೀ. ನಿಂದ 168ನೇ ಕಿ.ಮೀ.ವರೆಗೆ ಕೆಲಸ ಇನ್ನೂ ಆಗಬೇಕಾಗಿದೆ. ವಿವಿಧ ರೀತಿಯೊಳಗೆ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿದ್ದೀರಿ, ಕಾರ್ಯ ಪ್ರಗತಿಯಿಂದ ನಡೆದಿದೆ. ಆ ದೃಷ್ಟಿಯಿಂದ ಇವೊತ್ತು ಈ ಒಂದು ಎಡದಂಡೆ ಕಾಲುವೆ ಆದಷ್ಟು ಶೀಘ್ರ ಮುಗಿಯಿತು ಅಂದರೆ ಬರಗಾಲ ಪೀಡಿತ ಪ್ರದೇಶವಾಗಿರತಕ್ಕ ಬದಾಮಿ ತಾಲ್ಲೂಕಿಗೂ ಕೂಡ ನೀರನ್ನು ಒದಗಿಸಿದಂತೆ ಆಗುತ್ತದೆ. ಅದೇ ರೀತಿ ಇವೊತ್ತು ಮಲಪ್ರಭಾ ಬಲದಂಡೆ ಕಾಲುವೆಗೂ ಕೂಡ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ, ಆ ಯೋಜನೆಗಳು ಸುಮಾರು 30 ವರ್ಷಗಳಿಂದ ನಡೆದಿರತಕ್ಕ ಯೋಜನೆಗಳಾಗಿವೆ, ಮತ್ತು ಇವೆಲ್ಲಾ ಪ್ಲಾನ್ಡ್ ಯೋಜನೆಗಳು. ಇವೊತ್ತು ಆ ಎಲ್ಲಾ ಯೋಜನೆಗಳಿಗೆ ಸರ್ಕಾರ ಹೆಚ್ಚಿನ ಅದ್ಯತೆಯನ್ನು ಕೊಡಬೇಕಾದುದು ಬಹಳ ಮುಖ್ಯ ಕೆಲಸ. ಆ ದೃಷ್ಟಿಯಿಂದ ಆ ಯೋಜನೆಗಳು ಆದಷ್ಟು ಶೀಘ್ರ ಮುಗಿಯುವಂಥ ರೀತಿಯೊಳಗೆ ಸರ್ಕಾರ ಹೆಚ್ಚಿನ ಅನುದಾನ ಕೊಟ್ಟು, ಹೆಚ್ಚಿನ ಕಾಳಜಿಯನ್ನು ವಹಿಸುತ್ತಾರೆ ಎಂದು ತಿಳಿದುಕೊಂಡು, ಇವೊತ್ತು ಅದೇ ರೀತಿ ನಮ್ಮ ಮಲಪ್ರಭಾ ಎಡದಂಡೆ, ಬಲದಂಡೆ ಕಾಲುವೆಗಳಿಗೆ, ಆ ಯೋಜನೆ ಹೆಚ್ಚು ಸಾರ್ಥಕ ಆಗಬೇಕಾಗಿತ್ತು ಅಂದರೆ ಆ ಮಹದಾಯಿ ಡೈವರ್ಷನ್ಯೋಜನೆ ಏನಿತ್ತು ಆ ಯೋಜನೆಗೂ ಕೂಡ ತಾವು ಶೀಘ್ರದಲ್ಲಿ ಕಾರ್ಯಕ್ರಮವನ್ನು ಹಮ್ಮಿಕ್ರೊಳ್ಳಬೇಕು. ಇಷ್ಟನ್ನು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಸೋಮವಾರ ಬೆಳಿಗ್ಗೆ 9.30ಕ್ಕೆ ಸೇರುವುದು.

(ಸದನವು ಸಂಜೆ 7.30ಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 12ನೇ ಆಗಸ್ಟ್ 1996ರ ಸೋಮವಾರ ಬೆಳಿಗ್ಗೆ 9.30ಕ್ಕೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)